ಸರ್ವಜ್ಞ ಪ್ರಣೀತ

ಜೈನ ಭೂಗೋಲ

ಲೇಖಕರು :

ಡಾ॥ ಶ್ರೀಮತಿ ಉಜ್ವಲಾ ದಿನೇಶಚಂದ್ರ ಶಹಾ

ಎಮ್.ಬಿ.ಬಿ.ಎಸ್. ಡಿ.ಸಿ.ಎಚ್., ಡಿ.ಜಿ.ಪಿ.

ಕನ್ನಡ ಅನುವಾದಕರು :

ಶ್ರೀಮತಿ ಧವಲಶ್ರೀ ಅಣ್ಣಾಸಾಹೇಬ ಪಾಟೀಲ,

'ಶುದ್ಧಾತ್ಮಸದನ', ಶಹಾಪುರ - ಬೆಳಗಾವಿ.

ಪ್ರಕಾಶಕರು :

ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,

ಬೆಂಗಳೂರು.

ಮೊದಲನೆಯ ಆವೃತ್ತಿ : ಐದುನೂರು ಪ್ರತಿಗಳು, (೫೦೦)
ಫಾಲ್ಗುಣ ಅಷ್ಟಾಹ್ನಿಕ ಪರ್ವ ೨೦೨೧

ಬೆಲೆ : ನೂರು ರೂಪಾಯಿ ೧೦೦/-
(ಮೂಲ ಬೆಲೆ : ೧೮೫ ರೂ.)

ದೊರಕುವ ಸ್ಥಳ :

◆ ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ
೧೪೧, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - ೫೬೦ ೦೫೩.

◆ ''ಶ್ರುತ ಭಂಡಾರ'',
೩೬, ಶುದ್ಧಾತ್ಮ ಸದನ, ಹುಳಬತ್ತಿ ಕಾಲೋನಿ,
ಶಹಾಪುರ-ಬೆಳಗಾವಿ.
ಫೋನ : ೨೪೬೬೯೯೧

◆ ಮುದ್ರಕರು :
ಇಮೇಜ ಪ್ರಿಂಟ್ಸ,
೨೩೯೩, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
ಫೋನ : ೨೪೨೬೧೩೭

ಪ್ರಕಾಶಕೀಯ

ಅಧ್ಯಾತ್ಮ ಗ್ರಂಥಗಳ ಪ್ರಕಾಶನದ ಉದ್ದೇಶದಿಂದ ಆರಂಭವಾದ ನಮ್ಮ ಪ್ರಕಾಶನ ಸಂಸ್ಥೆಯು ಕಳೆದ ಮೂವತ್ತೆಂಟು ವರ್ಷಗಳಿಂದ ಭ. ಕುಂದಕುಂದಾಚಾರ್ಯರ ಪಂಚ ಪರಮಾಗಮಗಳು ಅಲ್ಲದೆ ಅನೇಕ ಆಚಾರ್ಯರುಗಳಿಂದ ಬರೆಯಲ್ಪಟ್ಟ ಅನೇಕ ಕೃತಿಗಳ ಪ್ರಕಾಶನದಿಂದ ತನ್ನಲ್ಲಿ ತಾನು ಸರ್ವೋಚ್ಚತೆಗೆ ಪ್ರಾಪ್ತವಾಗಿದೆ.

ಇಲ್ಲಿಯವರೆಗೆ ಅಧ್ಯಾತ್ಮ, ಆಗಮ, ಸಿದ್ಧಾಂತಗಳ ಪಟ್ಟಿಗೆ ಸೇರುವಂಥ ದ್ರವ್ಯಾನುಯೋಗ, ಚರಣಾನುಯೋಗ ಮತ್ತು ಪ್ರಥಮಾನುಯೋಗದ ಅನೇಕ ಕೃತಿರತ್ನಗಳ ಅನೇಕ ಆವೃತ್ತಿಗಳನ್ನೂ ಹೊರಗೆ ತಂದು ಸಾರ್ಥಕತೆಗೆ ಪ್ರಾಪ್ತವಾಗಿದೆ. ಯಾವುದೇ ಅನುಯೋಗದ ಒಂದು ಗ್ರಂಥವಾದರೂ ಜೀವದ ಕಲ್ಯಾಣಕ್ಕೆ ಪೂರ್ಣ ನಿಮಿತ್ತವಾಗುವ ಶಕ್ತಿಯನ್ನು ಹೊಂದಿರುತ್ತದೆ. ಆದರೆ ಜೀವನಿಗೆ ಭಾಗ್ಯದಿಂದ ಸಮಯಾವಕಾಶ ಮತ್ತು ವಾಚನದ ಅಭಿರುಚಿಯಿದ್ದರೆ ಅವನ ಜೀವನದಲ್ಲಿ ಅನೇಕ ಗ್ರಂಥಗಳ ವಾಚನ, ಅಭ್ಯಾಸ, ಅಧ್ಯಯನವಾಗಿ ಜ್ಞಾನದ ಕ್ರಿಯೆಯಲ್ಲಿ ಸಹಜತೆಯು ಸಂಭವಿಸಿ ವರ್ತಮಾನ ಜೀವನವು ವ್ಯಾಕುಲತೆಯಿಂದ ರಹಿತವಾಗಿ ಸಮ್ಯಗ್ದರ್ಶನಕ್ಕೆ ಮಾರ್ಗವು ಸುಗಮವಾಗುವ ಸಾಧ್ಯತೆಯಿದೆ.

ಅಂಥದರಲ್ಲಿ ಈಗ ಉಳಿದಿರುವ ಒಂದು ಕರಣಾನುಯೋಗ ಸಂಬಂಧಿತ ಶಾಸ್ತ್ರವು ಪ್ರಕಾಶನದಲ್ಲಿ ಬರುತ್ತಿದೆ. ಗೊಮ್ಮಟಸಾರ, ತಿಲೋಯಪಣ್ಣತ್ತಿ, ಲಬ್ಧಿಸಾರ, ಕ್ಷಪಣಾಸಾರದಂಥ ಮಹಾಗ್ರಂಥಗಳ ವಿಷಯವಂತೂ ನಮಗೆ ಪ್ರಾಪ್ತವಿರುವ ಗ್ರಂಥಗಳಲ್ಲಿ ಒಂದಲ್ಲ ಒಂದು ರೀತಿ ಒಂದಿಷ್ಟು ದೊರಕಿಯೇ ದೊರಕಿದೆ. ಆದರೆ ಕೇವಲ ಕರಣಾನುಯೋಗದ ವಿಷಯವೇ ಒಂದು ಕಡೆಗೆ ದೊರಕುವ ಒಂದೂ ಕೃತಿಯು ನಮಗೆ ಸಿಕ್ಕಿರಲಿಕ್ಕಿಲ್ಲ. ಅದೂ ಕೂಡ ಇಂದು ಭಾಗ್ಯದಿಂದ ಸಿಗುವಂತಾಯಿತು.

ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿವಿರಚಿತ 'ತ್ರಿಲೋಕಸಾರ' ಮಹಾಗ್ರಂಥದ ಆಧಾರದಿಂದ ಆಕೃತಿಯಲ್ಲಿ ಎಂದರೆ ಗಾತ್ರದಿಂದ ಚಿಕ್ಕದೂ ಅತ್ಯಂತ ಚೊಕ್ಕದಾದ ಅನೇಕಾನೇಕ ಮೂಲ ಸ್ವರೂಪಗಳನ್ನು ತಿಳಿದುಕೊಳ್ಳುವಲ್ಲಿ ಪರಮ ಸಹಾಯಕವಾಗುವಂಥ ಕೃತಿ 'ಜೈನ ಭೂಗೋಲ'ದ ರಚನೆಯನ್ನು ಶ್ರೀಮತಿ ಉಜ್ವಲಾ ಶಹಾ ಅವರು ಮಾಡಿದ್ದಾರೆ. ಅದರ ಕನ್ನಡ ಅನುವಾದವನ್ನು ಸ್ವ. ಶ್ರೀ ಎಂ. ಬಿ. ಪಾಟೀಲರ ಸುಪುತ್ರಿ ಶ್ರೀಮತಿ ಧವಲಶ್ರೀ ಪಾಟೀಲರು ಮಾಡಿ ಕನ್ನಡ ಭಾಷೆಯ ಸ್ವಾಧ್ಯಾಯ ಪ್ರೇಮಿಗಳಿಗೆ ಅತಿಶಯ ಅನುಕೂಲ ಮಾಡಿದ್ದಾರೆ. ಇಬ್ಬರೂ ಮಾತೆಯರಿಗೆ ಕನ್ನಡದ ಕುಲಪುತ್ರರು ಹಾಗೂ ನಮ್ಮ ಸಂಸ್ಥೆಯು ಚಿರಋಣಿಯಾಗಿದೆ.

ಈ ಗ್ರಂಥದಲ್ಲಿ ಕರಣಾನುಯೋಗದ ವಿಷಯವನ್ನು ಮುಖ್ಯವನ್ನಾಗಿಸಿಕೊಂಡಿದ್ದರೂ, ಸಾಮಾನ್ಯ ಜನರ ಬುದ್ಧಿಗೆ ನಿಲುಕದಂಥ ಗಣಿತ ಮೊದಲಾದವುಗಳ ಕ್ಲಿಷ್ಟತೆಯಿಂದ ಕೂಡಿರದೇ ಎಲ್ಲರಿಗೂ ತಿಳಿದು ಬರುವಂತೆ ಸುಲಭವಾದ ರೀತಿಯಲ್ಲಿ ಮೂರು ಲೋಕಗಳ ಸ್ವರೂಪವನ್ನು ದಿಗ್ದರ್ಶಿಸಲಾಗಿದೆ. ಮೂರು ಲೋಕದ ಅಕೃತ್ರಿಮ ಜಿನಮಂದಿರಗಳ ದರ್ಶನ ಮಾಡಿಸಿ ಸಮಸ್ತ ಶ್ರದ್ಧಾಳುಗಳಿಗೆ ಪರಮ ಸಂತೋಷದ ವಿಷಯ ನೀಡಲಾಗಿದೆ. ಅಧಿಕ ವರ್ಣನೆಯಾದರೂ ಏತಕ್ಕಾಗಿ ? ಒಳಗೆ ಪ್ರವೇಶ ಮಾಡಿ ಪ್ರತ್ಯಕ್ಷ ಅವಲೋಕನೆ ಮಾಡಬೇಕೆಂದು ಸೂಚಿಸುತ್ತೇವೆ.

ಕೊನೆಯದಾಗಿ ಇದನ್ನು ಒಳಗಿನ ಚಿತ್ರಿಸಹಿತ ಸುಂದರವಾಗಿ ಮುದ್ರಿಸಿಕೊಟ್ಟಿರುವ ಬೆಳಗಾವಿಯ ಶ್ರೀ ಅಜಿತ ಪಾಟೀಲ 'ಇಮೇಜ್ ಪ್ರಿಂಟ್ಸ್' ದ ಮಾಲೀಕರು ಧನ್ಯವಾದಕ್ಕೆ ಪಾತ್ರರಾಗಿದ್ದಾರೆ. ಇಂಥ ಒಂದು ಕೃತಿಯ ಪ್ರಕಾಶನದ ಭಾಗ್ಯ, ಮುದ್ರಣದ ಭಾಗ್ಯ ಮತ್ತು ವಾಚನದ ಭಾಗ್ಯವು ಈ ಕಾಲದಲ್ಲಿ ಮಹಾ ದುರ್ಲಭವೇ ಇದೆ. ಆದರೆ ಅದು ಪ್ರಾಪ್ತವಾಗಿರುವ ನಾವೆಲ್ಲರೂ ನಿಜವಾಗಿ ಭಾಗ್ಯಶಾಲಿಗಳಿದ್ದೇವೆ! ಎಲ್ಲರ ಜೀವನವು ಪವಿತ್ರತೆಯ ಕಡೆಗೆ ಸಾಗುವಂತಾಗಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

12-2-2021 ಅಧ್ಯಕ್ಷರು

ಬೆಂಗಳೂರು ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್

ಪ್ರಸ್ತಾವನೆ

ಜೈನ ವಾಙ್ಮಯದ ನಾಲ್ಕೂ ಅನುಯೋಗಗಳು ಒಂದು ವೀತರಾಗತೆಯ ಉತ್ಪಾದಕ, ಪರಿಪೋಷಕ ಹಾಗೂ ಪರಿಪೂರ್ಣತೆಯ ಸಾಧಕವಿದೆ. ಸಂಸಾರದ ಆಧಾರವಿರುವ ರಾಗವು ಯಾವುದೇ ಅನುಯೋಗದ ಅಧ್ಯಯನದಲ್ಲಿ ತಲೆಯೆತ್ತಿ ನಿಲ್ಲುವ ಸಾಧ್ಯತೆಯಿಲ್ಲ. ಜೀವನಿಗೆ ಆಗಮಗಳ ಅಧ್ಯಯನದ ಕುರಿತು ಆಂತರ್ಯದಿಂದ ಅಭಿರುಚಿಯಿರುವುದು ಮಾತ್ರ ಅತ್ಯಂತ ಆವಶ್ಯಕವಿದೆ. ಯಾವ ವಿಷಯದಲ್ಲಿಯಾದರೂ ಅಭಿರುಚಿಯಿಲ್ಲದ ಪ್ರವೃತ್ತಿಯು ಕೇವಲ ಭಾರರೂಪವೆನಿಸುತ್ತದೆ ಅರ್ಥಾತ್ ಅದರಿಂದ ವಿಶೇಷ ಲಾಭವಾಗುವುದಿಲ್ಲ.

ಸರ್ವಜ್ಞ ಭಗವಂತರು ಮೂರು ಲೋಕ ಮೂರು ಕಾಲಗಳನ್ನು ನಿರಾಯಾಸವಾಗಿ ನಿರ್ವಿಕಲ್ಪ ರೂಪದಿಂದ ತಿಳಿಯುತ್ತಾರೆ ಮತ್ತು ಸಹಜ ಜ್ಞಾನದಲ್ಲಿ ಸ್ವಾಭಾವಿಕವಾಗಿ ತಿಳಿದು ಬರುತ್ತಿರುವ ಪದಾರ್ಥಗಳ ಸ್ವರೂಪವನ್ನು ವೀತರಾಗಭಾವದೊಂದಿಗೆ ಸಮಸ್ತ ಜೀವರುಗಳಿಗೆ ಸಮಾನ ರೂಪದಿಂದ ಬೋಧಿಸುತ್ತಾರೆ. ಆರು ದ್ರವ್ಯಗಳ ಸಮೂಹ ರೂಪದ ವಿಶ್ವ - ಅನಂತ ಅಲೋಕಾಕಾಶ, ಅನಾದಿಯಿಂದ ನಡೆದುಕೊಂಡು ಬರುತ್ತಿರುವ ಜೀವ-ಕರ್ಮಗಳ ಸಂಯೋಗ ಸಂಬಂಧ, ಜೀವನು ನಿರಂತರ ಅನುಭವಿಸುತ್ತಿರುವ ದುಃಖದ ಸ್ವರೂಪ, ತ್ರಿಕಾಲಿ ಚೈತನ್ಯಸ್ವರೂಪದ ಜೀವನು ಸಮಯ ಪಡೆದು ವಾಸ್ತವಿಕತೆಯನ್ನು ತಿಳಿದುಕೊಳ್ಳಲು ಬೇಕಾಗುವಂಥ ಯೋಗ್ಯತೆ, ಆ ಸಮಯದಲ್ಲಿ ಅದರ ಅನುರೂಪ ನಿಮಿತ್ತ, ಒಳ್ಳೆಯ ಭವಿತವ್ಯ ಒದಗಿ ಬಂದು ಪ್ರಗಟವಾಗುವಂಥ ಪುರುಷಾರ್ಥ ಮತ್ತು ಪುರುಷಾರ್ಥದಿಂದ ತನ್ನ ತ್ರಿಕಾಲೀ ಚೈತನ್ಯ ಸ್ವಭಾವ, ಸ್ವಾಧೀನಸುಖದ ಉಪಲಬ್ಧಿ ಇವೇ ಮೊದಲಾದ ವಿಷಯಗಳ ಜ್ಞಾನವು ಸರ್ವಜ್ಞ ಭಗವಂತರ ಉಪದೇಶದಿಂದ ಲಭಿಸುತ್ತದೆ.

ಜೀವನು ತನ್ನ ನೈಜತೆಯನ್ನು ಮರೆತು ಕೇವಲ ಒಂದು ದೇಹಾತ್ಮ ಬುದ್ಧಿಯ ಕಾರಣದಿಂದ ಅನಂತ ದುಃಖವನ್ನು ಅನಂತ ಕಾಲದಿಂದ ಏಕಾಕಿಯಾಗಿ ಅನುಭವಿಸುತ್ತ ಸಂಸಾರ ಚಕ್ರವನ್ನು ಸುಭದ್ರವಾಗಿ ರಚಿಸಿಕೊಳ್ಳುತ್ತಿದ್ದಾನೆ. ತನ್ನ ಅನಾದಿ ಸಂಸ್ಕಾರದಿಂದ ಉದಿಸಿ ಬರುತ್ತಿರುವ ಬುದ್ಧಿ ಹಾಗೂ ಇಂದ್ರಿಯ ಜ್ಞಾನದಿಂದ ತಿಳಿದು ಬರುವಂಥ ತನ್ನ ಸಂಯೋಗದಲ್ಲಿರುವ ಜನರು ಮತ್ತು ಪದಾರ್ಥಗಳ ಪರಿಣಮನದಲ್ಲಿ ಸದಾಕಾಲ ತನ್ಮಯನಾಗಿರುತ್ತಾನೆ. ಅಲ್ಲದೆ ತನ್ನ ಕಲ್ಪನೆಯ ಅನುಸಾರ ಭವಿಷ್ಯ ಜೀವನದ ಸುಖ ಅಥವಾ ಅನುಕೂಲತೆಗಳನ್ನು ಹೊಂದಿಸಿಕೊಳ್ಳುವ ಉದ್ಯಮದಲ್ಲಿ ಜೀವನವನ್ನು ಕಳೆದುಕೊಳ್ಳುತ್ತಾನೆ. ಆದರೆ ತನ್ನ ಪ್ರಗಟ ಜ್ಞಾನ ಹಾಗೂ ಇಂದ್ರಿಯಗೋಚರ ಪದಾರ್ಥಗಳ ಸ್ವರೂಪಕ್ಕಿಂತ ಆಚೆಯಕಡೆಗೆ ಕೂಡ ಏನಾದರೂ ಇರಬಹುದಾಗಿದೆ ಮತ್ತು ತನ್ನ ಭವಿಷ್ಯವು ಅನಂತ ಕಾಲದ್ದಿದೆ ಹಾಗೂ ಆ ಕಾಲದೊಳಗೆ ಸುಖಿಯಾಗುವ ಸಲುವಾಗಿ ಪರ ಪದಾರ್ಥಗಳು ಅನುಕೂಲತೆಯನ್ನು ಒದಗಿಸುವ ಸಾಧ್ಯತೆಯಿಲ್ಲವೆಂಬ ಸತ್ಯವನ್ನು ತಿಳಿಯಲಾರದವನಾಗಿದ್ದಾನೆ.

ಕಾಕತಾಲೀಯ ನ್ಯಾಯದಂತೆ ಯಾವನೋ ವಿರಳ ಜೀವನಿಗೆ ಯಾವುದೋ ವಿಶೇಷ ಪುಣ್ಯದ ಉದಯದಿಂದ ಅಂಥ ಸರ್ವಜ್ಞ ಪ್ರಭುಗಳ ಉಪದೇಶದ ನಿಮಿತ್ತವು ದೊರಕಿದರೆ ದೇಹಾತ್ಮ ಬುದ್ಧಿಯ ಹಿಡಿತವು ಶಿಥಿಲವಾಗುವ ಅವನದೇ ಪರ್ಯಾಯದ ಯೋಗ್ಯತೆಯು ಬಂದು ಬಿಟ್ಟರೆ ಅವನ ಜೀವನದ ದಿಕ್ಕು ಬದಲಾಗುತ್ತದೆ. ಅವನ ಬುದ್ಧಿಯು ವಿಶ್ವದ ಪದಾರ್ಥಗಳ ಸ್ವರೂಪವನ್ನು ತಿಳಿಯುವ ಸಲುವಾಗಿ ಆಗಮದ ಅವಲಂಬನೆಯನ್ನು ಬಯಸುತ್ತದೆ ಮತ್ತು ಆ ಬಯಕೆಯು ಉತ್ಕಟವಾದಾಗ ಸಂಸಾರ, ಶರೀರ, ಭೋಗದ ಕಾರ್ಯಗಳಲ್ಲಿ ಕಳೆದು ಹೋಗುತ್ತಿರುವ ಸಂಪೂರ್ಣ ಸಮಯ ಹಾಗೂ ಸಾಮರ್ಥ್ಯವನ್ನು ತನ್ನ ಬಯಕೆಯ ಪೂರ್ತಿಗಾಗಿ ಕೂಡ ಸ್ವಲ್ಪ ಉಳಿಸಿಕೊಳ್ಳುವ

ಹಾಗೂ ಅಧಿಕವಾಗಿ ಬಳಸಿಕೊಳ್ಳುವ ಸಾಧ್ಯತೆಯೂ ಇದೆಯೆಂಬುದನ್ನು ಅರ್ಥ ವಿಸಿಕೊಳ್ಳಬಹುದಾಗಿದೆ. ವಾಸ್ತವದಲ್ಲಿ ತಾನೇ ತನಗೆ ಪ್ರಾಪ್ತವಾದ ಸಮಯ ಹಾಗೂ ತನ್ನ ಪ್ರಗಟ ಸಾಮರ್ಥ್ಯವನ್ನು ತನ್ನ ಅಭಿರುಚಿಯಿಂದ ಪರ ಪದಾರ್ಥಗಳ ಕುರಿತಾಗಿ ಖರ್ಚು ಮಾಡುತ್ತಿದ್ದಾನೆ. ಪರ ಪದಾರ್ಥಗಳಿಗೆ ತನ್ನ ಅವಶ್ಯಕತೆಯಿದೆ ಅಥವಾ ತನ್ನಿಂದ ಪರ ಪದಾರ್ಥಗಳಿಗೆ ಅನುಕೂಲವಾಗುತ್ತದೆ ಎಂಬ ವಿಪರೀತ ಮನ್ನಣೆಯಿಂದ ಸ್ವಯಂ ದುಃಖಿಯಾಗುತ್ತಿದ್ದಾನೆ. ಅಂಥ ತನ್ನ ದುಃಖದ ಕಾರಣವು ಅವನಿಗೆ ತಿಳಿದು ಬರುವುದೇ ಕಠಿಣವಾಗಿದೆ.

ನಿಜವಾಗಿ ಯಾವುದೇ ಪರ ಪದಾರ್ಥದ ಯಾವೊಂದು ಕಾರ್ಯವು ತನ್ನಿಂದ ಅರ್ಥಾತ್ ಈ ಜೀವದಿಂದ ಆಗುವ ಹಾಗೆ ಅದರ ಸ್ವರೂಪದಲ್ಲಿ ನೈಸರ್ಗಿಕವಾಗಿಯೇ ಯಾವ ನ್ಯೂನತೆಯೂ ಇಲ್ಲ. ಈ ಮನುಷ್ಯ ಭವದಲ್ಲಿ ಸ್ವಾಭಾವಿಕವಾಗಿ ಯಾವ ಮಾನ ಕಷಾಯದ ಮುಖ್ಯತೆಯಿದೆ, ಆ ಕಾರಣದಿಂದ ಇವನಿಗೆ ತಾನೇ ಏನೆಲ್ಲವನ್ನು ಮಾಡುತ್ತಿದ್ದೇನೆ ಮತ್ತು ಮಾಡಬಹುದಾಗಿದೆಯೆಂಬ ಮನ್ನಣೆಯಿದೆ, ಅದು ಮನುಷ್ಯ ಪರ್ಯಾಯದ ಪರ್ಯಾಯಗತ ಯೋಗ್ಯತೆಯಿದೆ. ಅಂತೆಯೇ ಇವನಿಗೆ ನಾಲ್ಕೂ ಕಷಾಯಗಳ ಚಕ್ರವನ್ನು ತುಂಡರಿಸಿ ಬಿಡುವ ಅರ್ಥಾತ್ ಅನಾದಿ ಮಿಥ್ಯಾತ್ವದ ನಾಶ ಮಾಡುವ ತನ್ನ ಜ್ಞಾನ ಸಾಮರ್ಥ್ಯದ ವಿಶ್ವಾಸವು ಮೂಡಿ ಬರುತ್ತಿಲ್ಲ. ದೇವಗತಿಯಲ್ಲಿ ಅನಾದಿ ಭೋಗಾಭಿಲಾಷೆಯ ನದಿಯಲ್ಲಿಯೇ ಮುಳುಗುತ್ತ ಉಳಿಯುವುದರಿಂದ ಕಷಾಯಗಳ ಚಕ್ರವನ್ನು ಮುರಿದು ಹಾಕುವಲ್ಲಿ ವಿಫಲನಾದನು. ಸಂಜ್ಞೀ ಪಂಚೇಂದ್ರಿಯತೆ ಹೊಂದಿದರೂ ತಿರ್ಯಂಚ ಗತಿಯಲ್ಲಿ ಕಪಟದಿಂದ ಸುಖಿಯಾಗುವ ಪ್ರಯತ್ನದಲ್ಲಿ ಕಷಾಯಗಳ ಅಖಂಡತೆಯನ್ನು ಭೇದಿಸಲಾಗಲಿಲ್ಲ ಮತ್ತು ನರಕ ಗತಿಯಲ್ಲಿ ಹೋದರೆ ಅಲ್ಲಿ ತನಗೆ ಬರುತ್ತಿರುವ ವಿಪತ್ತುಗಳಿಗೆ ಬಾಹ್ಯದ ಸಂಯೋಗಗಳೇ ಕಾರಣವೆಂದು ನಂಬಿ ಕ್ರೋಧಿತನಾಗಿ ವರ್ತಿಸುವುದರಿಂದ ಕಷಾಯಗಳ ಚಕ್ರವನ್ನು ಮತ್ತಷ್ಟು ಗಟ್ಟಿ ಮಾಡಿಕೊಂಡನು.

ಈ ರೀತಿ ಕಷಾಯ ಚಕ್ರದಲ್ಲಿ ಏಕಪ್ರಕಾರವಾಗಿ ಎಂದರೆ ಗತಿಗಳ ಭೇದವಿಲ್ಲದೆ ಈ ಜೀವನು ಸಿಲುಕಿ ಉಳಿದಿದ್ದಾನೆ. ಈ ಜೀವದ ಅನಂತ ಕಾಲವು ಕಳೆದು ಹೋಯಿತು, ಅನಂತ-ಅನಂತ ಸಂಯೋಗಗಳು ಲಭಿಸಿ ಕರಗಿ ಹೋದವು, ಅನಂತ ಪ್ರಕಾರ ಕರ್ಮಗಳ ಫಲವು ಇವನ ಮೇಲೆ ಅನಿರೀಕ್ಷಿತವಾಗಿ ಬಂದೆರಗಿತು. ಉನ್ನತಿ-ಅವನತಿ, ಪ್ರಬಲತೆ-ದುರ್ಬಲತೆ, ಲಾಭ-ಅಲಾಭ ಹೀಗೆ ನಾನಾ ವಿಧದಿಂದ ನಿತ್ಯ ಪರಿವರ್ತನೆಯು ಪ್ರತ್ಯಕ್ಷವಾಗಿ ಕಂಡುಬಂದರೂ ಜೀವದ ವಿವೇಕವು ಜಾಗೃತವಾಗುತ್ತಿಲ್ಲ.

ಇನ್ನು ಇಂಥ ಮನುಷ್ಯ ಜೀವದ ಮಾನ ಕಷಾಯವು ಸ್ವಯಂ ವಿದ್ಯಮಾನ ಮತ್ತು ಸ್ವಯಂ ಸಂಚಾಲಿತ ಮೂರುಲೋಕಗಳ ಸ್ವರೂಪವನ್ನು ತಿಳಿದುಕೊಳ್ಳುವಂಥ ಕಾರ್ಯವು ನಡೆದರೆ ಅವಶ್ಯವಾಗಿಯೇ ಮಂದವಾಗಬಹುದಾಗಿದೆ. ಅಂಥ ಸನ್ನಿವೇಶದಲ್ಲಿ ಇವನು ತನ್ನ ಸ್ವಭಾವ ಸಾಮರ್ಥ್ಯವನ್ನು ಕೂಡ ಒಪ್ಪಿಕೊಳ್ಳಬಹುದಾಗಿದೆ. ಪ್ರಸ್ತುತ ಕೃತಿ 'ಜೈನ ಭೂಗೋಲ'ವು ಯಾವ ಭಾಗ್ಯಶಾಲೀ ಜೀವದ ಕೈ ಸೇರುತ್ತದೆಯೋ ಆ ಜೀವನು ನಿಶ್ಚಿತವಾಗಿ ತನ್ನ ಅನಾದಿ ವಿದ್ಯಮಾನತೆಯ ವಿಶ್ವಾಸದಿಂದ ಸಪ್ತಭಯಗಳನ್ನು ದೂರ ಮಾಡುತ್ತಾನೆ ಮತ್ತು ತನ್ನ ಜ್ಞಾತಾ ಸ್ವಭಾವದ ಅನುರೂಪ ಪರಿಣಮನ ಮಾಡುತ್ತಾನೆ. ಇದರಲ್ಲಿ ಪ್ರರೂಪಿಸಲ್ಪಟ್ಟ ಜೀವಗಳ ಭೇದ, ಅವುಗಳ ಸಂಖ್ಯೆ , ಅವು ಇರುವಂಥ ಸ್ಥಾನಗಳು, ಆ ಸ್ಥಾನಗಳಲ್ಲಿ ಅವು ಹೇಗೆ ಇರುತ್ತವೆ, ಯಾವ ಯಾವ ಜೀವಗಳು ಎಲ್ಲೆಲ್ಲಿ ಜನ್ಮ ಪಡೆಯುತ್ತವೆ, ಎಲ್ಲಿಂದ ಸತ್ತು ಜೀವಗಳು ಎಲ್ಲಿ ಹುಟ್ಟುತ್ತವೆ, ಯಾರು ನಿರ್ವಾಣದ ಪ್ರಾಪ್ತಿ ಮಾಡಿಕೊಳ್ಳುವ ಸಾಧ್ಯತೆಯಿದೆ? ಎಂಬುದಾಗಿ ಎಲ್ಲದರ ಚರ್ಚೆಯು ಈ ಕೃತಿಯಲ್ಲಿ ಕ್ರಮದಿಂದ ಬರುತ್ತದೆ.

ಲೋಕದ ವಿಸ್ತಾರ, ಎತ್ತರ ಅದರಲ್ಲಿ ಊರ್ಧ್ವಲೋಕ, ಮಧ್ಯಲೋಕ ಮತ್ತು ಅಧೋಲೋಕಗಳ ಸ್ವರೂಪ, ಧನುಷ್ಯ, ಯೋಜನ, ಹರದಾರಿಗಳ ಅಳತೆಯ ಭೇದ, ಅಸಂಖ್ಯಾತದ ಅಸಂಖ್ಯಾತ ಭೇದಗಳು, ತ್ರಸ ಜೀವಗಳು ತ್ರಸನಾಡಿಯಲ್ಲಿಯೇ ಇರುವ ಮಾತು, ಸ್ಥಾವರ ಜೀವಗಳು ಸರ್ವತ್ರ ವಾಸ ಮಾಡುವಂಥ ಸ್ವರೂಪ-ಇವುಗಳ ಚರ್ಚೆಯು ನಿಜವಾಗಿ ವಾಚಕನ ಜಿಜ್ಞಾಸೆಯನ್ನು ಉತ್ತರೋತ್ತರ ಹೆಚ್ಚು ಮಾಡುವಂಥದ್ದಿದೆ. ಈ ಪ್ರಕಾರ ಸರ್ವಜ್ಞೋಪದಿಷ್ಟ ಲೋಕ ಚರ್ಚೆಯು ಕಷಾಯಗಳ ಮಂದತೆಗೆ ಆಧಾರವಾಗುತ್ತದೆ. ಜೀವನು ಅಸಂಖ್ಯಾತ ದ್ವೀಪ-ಸಮುದ್ರಗಳಿಂದ ಕೂಡಿದ ಮಧ್ಯಲೋಕವನ್ನು ತಿಳಿಯುವಾಗ ಆ ದ್ವೀಪ ಸಮುದ್ರಗಳ ಅಸಂಖ್ಯಾತತೆಯನ್ನು ತಿಳಿಸಿಕೊಟ್ಟಿರುವ ರೀತಿಯನ್ನು ಕಂಡು ಆಶ್ಚರ್ಯಚಕಿತನಾಗುತ್ತಾನೆ. ಅದೇ ಪ್ರಕಾರ ಸಮಯದ ಸೂಕ್ಷ್ಮತೆ, ರಾಜೂವಿನ ವಿಶಾಲತೆ, ಪರಮಾಣುಗಳ ಪರಿವರ್ತನೆ, ಸಮುದ್ಘಾತದಲ್ಲಿ ನಡೆಯುವಂಥ ಜೀವದ ಪ್ರದೇಶಗಳ ಕಾರ್ಯ, ನಾಲ್ಕೂ ಗತಿಗಳ ಅಪೇಕ್ಷೆಯಿಂದ ಮನುಷ್ಯ ಕ್ಷೇತ್ರ, ಸಂಖ್ಯೆ, ಆಯು, ಆತನಿಗೆ ನಿರಂತರ ದೊರಕುವ ಮನುಷ್ಯ ಭವಗಳ ಅಲ್ಪತೆ ಹಾಗೂ ಮನುಷ್ಯ ಪರ್ಯಾಯದ ಪ್ರಾಪ್ತಿಯಾಗುವಂಥ ಭಾವಗಳದ್ದೂ ಅತ್ಯಂತ ದುರ್ಲಭತೆಯನ್ನು ತಿಳಿಸಿಕೊಟ್ಟು ಜೀವದ ಪ್ರಮಾದವನ್ನು ಬಿಡಿಸಿದ್ದಾರೆ.

ಇದೇ ಮಧ್ಯಲೋಕದಲ್ಲಿ ಸೂರ್ಯ, ಚಂದ್ರ, ನಕ್ಷತ್ರ, ತಾರೆಗಳ ವಿಮಾನಗಳಿವೆ. ಆ ಜ್ಯೋತಿಷಿ ದೇವಗಳ ಇಂದ್ರನಾದ ಚಂದ್ರನ ಪರಿವಾರ ಹಾಗೂ ಒಟ್ಟು ಎಷ್ಟು ಚಂದ್ರರಿದ್ದಾರೆ, ಅವರ ಸಂಖ್ಯೆಯನ್ನು ಕಂಡು ಹಿಡಿಯುವ ಗಣಿತ ಸೂತ್ರ, ಈ ಜ್ಯೋತಿಷಿ ದೇವಗಳು ಯಾರು, ಎಷ್ಟು ಅಂತರದಲ್ಲಿದ್ದಾರೆ, ಅವರು ವಾಸ ಮಾಡುವಂಥ ವಿಮಾನ ಅರ್ಥಾತ್ ಪೃಥ್ವಿ ಖಂಡಗಳ ರೂಪದಿಂದ ಪರಿಣಮಿಸಿದ ಪುದ್ಗಲ ಸ್ಕಂಧಗಳ ವಿಶೇಷ ಸ್ವರೂಪಾದಿಗಳ ಚರ್ಚೆಯಂತೂ ಅತ್ಯಂತ ರೋಚಕ ವಿಷಯವೇ ಇದೆ. ಅಲ್ಲದೆ ನಂದೀಶ್ವರ ದ್ವೀಪ, ಪಂಚಮೇರುಗಳ, ಭೋಗಭೂಮಿ-ಕರ್ಮಭೂಮಿಗಳ, ಅಂತರ್ದ್ವೀಪಗಳಲ್ಲಿರುವ ಕುಭೋಗ ಭೂಮಿಗಳ, ಕೊನೆಯ ಸ್ವಯಂಭೂರಮಣ ಸಮುದ್ರದಲ್ಲಿರುವ ಜಲಚರ ಸಮ್ಯಗ್ದೃಷ್ಟಿ ಹಾಗೂ ಪಂಚಮ ಗುಣಸ್ಥಾನವರ್ತಿ ಜೀವಗಳ ಸ್ವರೂಪ ಹೀಗೆ ಹಲವಾರು ವಿಷಯಗಳು ಬರುತ್ತವೆ.

ಊರ್ಧ್ವ ಲೋಕದ ಚರ್ಚೆಯಲ್ಲಿ ವೈಮಾನಿಕ ದೇವಗಳ ಸಂಖ್ಯೆ, ಅವರುಗಳ ವಿಮಾನಗಳ ಸಂಖ್ಯೆ-ಅವುಗಳ ವಿಸ್ತಾರ, ದೇವಗಳ ಅಧಿಕಾರ-ವೈಭವ, ವಿಕ್ರಿಯೆಗಳ ಸ್ವರೂಪ, ದೇವ-ದೇವಿಯರ ಉತ್ಪತ್ತಿಯ ಸ್ಥಾನಗಳು, ಯಾವ ದೇವನಿಗೆ ಎಷ್ಟು ಜನ ದೇವಿಯರಿರುತ್ತಾರೆ.? ಮುಖ್ಯ ದೇವಿಯರು, ಪರಿವಾರ ದೇವಿಯರು, ದೇವಗಳ ಆಯು, ಆಹಾರ, ಉಸಿರಾಟಗಳ ಪರಿಮಾಣ, ದೇವಗಳ ಉತ್ಕೃಷ್ಟ ಆಯು ಜಘನ್ಯ ಆಯು, ದೇವಿಯರ ಆಯು, ದೇವಗಳ ಸಭಾಭವನ, ಸಭೆಯಲ್ಲಿ ದೇವಿಯರ ಹಾಗೂ ಇತರ ದೇವಗಳು ವಿರಾಜಮಾನರಾಗುವ ಸ್ಥಳಗಳು ಇತ್ಯಾದಿ ಅನೇಕ ವಿಷಯಗಳ ಚರ್ಚೆಯು ತುಂಬ ಮನೋಜ್ಞವಾಗಿ ಮೂಡಿ ಬಂದಿದೆ. ಮುಂದೆ ಗ್ರೈವೇಯಕ, ಅನುದಿಶೆ, ಅನುತ್ತರಗಳ ಚರ್ಚೆಯು ಗಂಭೀರತೆಯನ್ನುಂಟು ಮಾಡಿ ಧರ್ಮಕ್ಕೆ, ಸಮ್ಯಗ್ದರ್ಶನಕ್ಕೆ ನಾಂದಿಯಾಗುತ್ತದೆ. ಅದರ ಮೇಲಿರುವ ಸಿದ್ಧಶಿಲೆಯ ಮಾತಂತೂ ವಾಚಕನ ಮೋಹವನ್ನು ಕ್ಷಯದ ಅಂಚಿಗೆ ಕರೆದುಕೊಂಡು ಹೋಗುತ್ತದೆ.

ಇನ್ನು ಅಧೋಲೋಕದ ಚರ್ಚೆಯು ಕೂಡ ಸುಂದರವಾಗಿ ಮೂಡಿ ಬಂದಿದೆ. ಅಲ್ಲಿ ಭವನ ವಾಸಿಗಳ ಭವನಗಳು, ಕೆಲವು ವ್ಯಂತರರ ಆವಾಸಗಳು, ನರಕದ ಏಳು ಪೃಥ್ವಿಗಳು, ಅಲ್ಲಿ ಪ್ರತಿಯೊಂದು ನರಕ ಪೃಥ್ವಿಯಲ್ಲಿ ಕಂಡುಬರುವ ಬಿಲಗಳ ಸಂಖ್ಯೆ, ಸ್ವರೂಪ, ಬಿಲಗಳ ಹೆಸರುಗಳು ಹಾಗೂ ನಾರಕಿಗಳು ಉತ್ಪನ್ನವಾಗುವ

ಉಪಪಾದಗಳ ಸ್ವರೂಪ ನಾರಕಿಗಳ ದ್ರವ್ಯ-ಭಾವ ಲೇಶ್ಯೆ , ಆಯು-ಕಾಯಗಳ ಎತ್ತರ, ನಾರಕಿಗಳ ಸಂಖ್ಯೆ, ಯಾವ ನರಕಕ್ಕೆ ಯಾವ ಜೀವಗಳು ಹೋಗುತ್ತಾರೆ, ಯಾವ ನರಕದಿಂದ ಬರುವ ಜೀವಗಳು ಯಾವ ಭವಧಾರಣ ಮಾಡುತ್ತಾರೆ. ಅಲ್ಲಿಂದ ಬರುವ ಸಮ್ಯಗ್ದೃಷ್ಟಿಗಳು ಯಾವ ವಿಶೇಷ ಪದಗಳನ್ನು ಪಡೆಯಬಹುದಾಗಿದೆ? ಎಂಬಿವೇ ಮೊದಲಾದ ಸಮಗ್ರ ವಿಷಯಗಳನ್ನು ಎಲ್ಲರಿಗೂ ಮನವರಿಕೆಯಾಗುವಂತೆ ತಿಳಿಸಿಕೊಡಲಾಗಿದೆ.

ಮೂರು ಲೋಕಗಳಲ್ಲಿ ಇರುವಂಥ ಅನಾದಿ ನಿಧನ ಅಕೃತ್ರಿಮ ಜಿನಮಂದಿರಗಳ ಸ್ವರೂಪ, ಸಂಖ್ಯೆ, ವಿಸ್ತಾರ ಹಾಗೂ ಅಲ್ಲಿ ವಿರಾಜಮಾನವಿರುವ ಜಿನ ಬಿಂಬಗಳ ಸಂಖ್ಯೆ ಸ್ವರೂಪಗಳ ಚರ್ಚೆಯಂತೂ ಅದೆಷ್ಟು ಜೀವಂತಿಕೆಯೊಂದಿಗೆ ಪ್ರರೂಪಿತವಿದೆಯೆಂದರೆ ಪಾಠಕನಿಗೆ ತನ್ನ ಜೀವನವೇ ಧನ್ಯವೆನಿಸಿ ಬಿಡುತ್ತದೆ. ಪ್ರತ್ಯಕ್ಷ ಆ ಬಿಂಬಗಳ ದರ್ಶನವೇ ಆಗುತ್ತಿರುವಂತೆ ಭಾಸವಾಗುತ್ತದೆ. ಆಂತರ್ಯದಿಂದ ಭಕ್ತಿರಸವು ಉಕ್ಕಿ ಹೊರಸೂಸುತ್ತದೆ. ಆಗಂತೂ ಕೃತಿರಚನೆ ಮಾಡಿರುವಂಥ ಜೀವದ ಆಗಮಗಳ ಅಧ್ಯಯನ ಹಾಗೂ ವಿಷಯಗಳ ಗ್ರಹಣದ ಕುರಿತಾಗಿ ಪ್ರಮೋದದ ಭಾವವು ಬಂದಲ್ಲದೆ ಇರಲಾರದು.

ಇನ್ನು ಈ ಕಾಲದ ಅಭ್ಯಾಸು ಜೀವರುಗಳ ಸ್ಥಿತಿಯು ಹೀಗಿರಬೇಕಾದರೆ ತ್ರಿಲೋಕಸಾರ, ತಿಲೋಯಪಣ್ಣತ್ತಿ ಗ್ರಂಥಗಳ ವಿಷಯದ ವಿಸ್ತಾರವು ಎಷ್ಟಿರಬಹುದು? ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಚಕ್ರವರ್ತಿತ್ವದ ವಿಷಯವಾದ ಸಿದ್ಧಾಂತದ ವೈಶಾಲ್ಯತೆ, ಭಾವದ ನಿರ್ಮಲತೆ, ಜ್ಞಾನದ ಸ್ಪಷ್ಟತೆಯ ಅಳತೆಯನ್ನು ಯಾರು ತಾನೇ ಮಾಡಬಹುದಾಗಿದೆ.

ವೀತರಾಗೀ ಸಂತರುಗಳ ಜ್ಞಾನ ಅರ್ಥಾತ್ ಭಾವ ಶ್ರುತಜ್ಞಾನ ಅದು ಕೂಡ ಮೂರು ಕಷಾಯ ಚೌಕಡಿಗಳ ಅಭಾವರೂಪ ವೀತರಾಗ ಭಾವವು ವರ್ತಿಸುವಂಥ ಸಾಧುವಿನ ಅಂತರಂಗದ ಐಶ್ವರ್ಯವೇ ಇಂಥದ್ದಿದೆಯೆಂದ ಮೇಲೆ ಸಮಸ್ತ ಕಷಾಯಗಳ, ನೋಕಷಾಯಗಳ, ಘಾತಿಕರ್ಮಗಳ ಅಭಾವವಾಗಿ ಹೋಗಿರುವ ಸರ್ವಜ್ಞ ಭಗವಂತರ ಈಶ್ವರತೆಯ ಮಹಿಮೆಯೆಷ್ಟು, ಅನಂತ ಚತುಷ್ಟಯದಲ್ಲಿ ಕೇವಲ ಒಂದು ಅನಂತ ಜ್ಞಾನದ ಮಹಿಮೆಯ ಅನುಮಾನವನ್ನಾದರೂ ನಾವು ಮಾಡಬಹುದಾಗಿದೆಯೇನು? ಅವರ ಅನಂತ ಉಪಕಾರದ ಕಲ್ಪನೆಯು ನಮಗೆ ಮೂಡಿ ಬಂದರೆ ನಮ್ಮ ಅಜ್ಞಾನವು ಉಳಿಯಬಹುದಾಗಿದೆಯೇನು? ಎಂದರೆ ನಮಗೆ ಪ್ರಾಪ್ತವಾದ ಮನುಷ್ಯ ಭವಕ್ಕೆ ಸಂಬಂಧಿಸಿದ ಮಾನ ಕಷಾಯಕ್ಕೆ ನಮ್ಮ ಆತ್ಮ ಪ್ರದೇಶದಲ್ಲಿ ನಮ್ಮ ಚೈತನ್ಯಮಯ ಪರಿಣಾಮದಲ್ಲಿ ಉಳಿದುಕೊಳ್ಳಲು ಆಶ್ರಯ ದೊರಕದಂತಾಗಿ ಅದು ನಿಶ್ಚಿತವಾಗಿಯೇ ಕಷಾಯ ಚಕ್ರದ ಅಖಂಡತೆಯ ನಾಶದ ಸಲುವಾಗಿ ಒಂದು ಅದ್ವಿತೀಯ ಅಸ್ತ್ರವಾಗಿ ಬಿಡುತ್ತದೆ.

ಅಂಥ ಅರಹಂತ ಪ್ರಭುಗಳ ಸರ್ವಜ್ಞ ಸ್ವರೂಪದ - ಅನಂತ ಜ್ಞಾನದ ಮಹಿಮೆಯು ನಮಗೆ ತಿಳಿದು ಬರುವಂತಾಗಲಿ! ಈ ಕೃತಿಯ ವಾಚನದಿಂದ ಮೂರು ಲೋಕಗಳ ಹಾಗೂ ಪ್ರತಿಯೊಂದು ಪದಾರ್ಥದ ಸ್ವಯಂಭೂತನವು ತಿಳಿದು ಬರಲಿ!! ನಮ್ಮ ಜೀವನವು ನಮ್ಮ ಅನಂತ ವೈಭವದ ಕಡೆಗೆ ಉದ್ಯಮಶೀಲವಾಗಲೆಂಬ ಮಂಗಲ ಭಾವನೆಯೊಂದಿಗೆ ಈ ವಕ್ತವ್ಯಕ್ಕೆ ವಿರಾಮ ಕೋರುತ್ತೇನೆ!!!

ಧವಲಶ್ರೀ

ನಿರ್ವಾಣ ಕ್ಷೇತ್ರ ಪೂಜೆ

ಪರಮ ಪೂಜ್ಯ ಚವ್ವೀಸ ಜಿನರು ಎಲ್ಲೆಲ್ಲಿಂದ ಮುಕ್ತರಾದರು ।
ಆ ಸಿದ್ಧಭೂಮಿಯ ಸದಾ ಪೂಜಿಪೆ ಮನ ವಚ ತನದಿ ನಾನು ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರಾಣಿ ! ಅತ್ರ ಅವತರತ ಅವತರತ ಸಂವೌಷಟ್।
ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರಾಣಿ ! ಅತ್ರ ತಿಷ್ಠತ ತಿಷ್ಠತ ಠಃ ಠಃ ।
ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರಾಣಿ ! ಅತ್ರ ಮಮ ಸನ್ನಿಹಿತಾನಿ ಭವತ ಭವತ ವಷಟ್ ।

ಶುಚಿ ಕ್ಷೀರ ದಧಿ ಸಮನೀರ ನಿರಮಲ ಕನಕ ಪಾತ್ರದಿ ತುಂಬುವೆ ।
ಸಂಸಾರ ಪಾರವ ತೋರು ಸ್ವಾಮೀ ಕರವ ಮುಗಿದು ಕೇಳುವೆ ॥
ಸಮ್ಮೇದಗಿರಿ ಗಿರನಾರ ಚಂಪಾ, ಪಾವಾಪುರಿ ಕೈಲಾಸವ ।
ಸದಾ ಪೂಜಿಪೆ ಚವ್ವೀಸ ಜಿನ, ನಿರ್ವಾಣ ಭೂಮಿ ನಿವಾಸವ ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಜಲಂ ನಿರ್ವಪಾಮೀತಿ ಸ್ವಾಹಾ।

ಕರ್ಪೂರ ಕೇಶರ ಸುಗಂಧ ಚಂದನ, ಸಲಿಲ ಶೀತಲ ಹರಡುವೆ ।
ಭವ ತಾಪದ ಸಂತಾಪ ಹರಿಸು, ಕರವ ಮುಗಿದು ಕೇಳುವೆ ॥ ಸಮ್ಮೇದ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಚಂದನಂ ನಿರ್ವಪಾಮೀತಿ ಸ್ವಾಹಾ।

ಮುತ್ತಿನಂಥ ಅಖಂಡ ಅಕ್ಷತ, ಅಮಲ ಆನಂದ ಧರಿಪೆನು।
ಅವಗುಣವ ಕೆಡಿಸಿ ಗುಣವ ತುಂಬು, ಕರವ ಮುಗಿದು ಕೇಳ್ವೆನು ॥ಸಮ್ಮೇದ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಅಕ್ಷತಾನ್ ನಿರ್ವಪಾಮೀತಿ ಸ್ವಾಹಾ।

ಶುಭ ಪುಷ್ಪರಾಶಿ ಸುಗಂಧ ತುಂಬಿದ, ಮನದ ಖೇದವ ಕಳೆವೆನು ।
ದುಃಖಧಾಮ ಕಾಮವ ನಷ್ಟಗೊಳಿಸು, ಕರವ ಮುಗಿದು ಕೇಳ್ವೆನು ॥ಸಮ್ಮೇದ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಪುಷ್ಪಂ ನಿರ್ವಪಾಮೀತಿ ಸ್ವಾಹಾ।

ನೈವೇದ್ಯ ವಿವಿಧ ಪ್ರಕಾರ ಹೊಂದಿಸಿ, ಮನದ ಭಯವ ಬಿಡುವೆನು ।
ಈ ಕ್ಷುಧೆಯ ಬಾಧೆಯ ಹರಿಸು ಪ್ರಭುವೇ, ಕರವ ಮುಗಿದು ಕೇಳ್ವೆನು ॥ಸಮ್ಮೇದ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ನೈವೇದ್ಯಂ ನಿರ್ವಪಾಮೀತಿ ಸ್ವಾಹಾ।

ದೀವಿಗೆಯ ಪ್ರಕಾಶ ಪ್ರಭೆಯು ಉಜ್ವಲ, ತಿಮಿರದಿಂ ನಾ ಹೆದರೆನು ।
ಸಂಶಯಾದಿ ತಮತ್ರಯವ ನಶಿಸು, ಕರವ ಮುಗಿದು ಕೇಳ್ವೆನು ॥ಸಮ್ಮೇದ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ದೀಪಂ ನಿರ್ವಪಾಮೀತಿ ಸ್ವಾಹಾ।

ಶುಭ-ಧೂಪ ಪರಮ-ಅನೂಪ ಪಾವನ, ಭಾವ ಪಾವನ ಮಾಳ್ವೆನು ।
ಕರ್ಮ ಪುಂಜವನೆಲ್ಲ ದಹಿಸು, ಕರವ ಮುಗಿದು ಕೇಳ್ವೆನು ॥ಸಮ್ಮೇದ॥

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಧೂಪಂ ನಿರ್ವಪಾಮೀತಿ ಸ್ವಾಹಾ।

ಬಹು ಫಲವ ತರಿಸಿ ಚೆನ್ನಾಗಿ ಅರ್ಪಿಸಿ, ನಾಲ್ಕೂ ಗತಿಗಳ ಕೆಡಿಸುವೆ ।
ಮುಕ್ತಿ ಫಲವನು ನೀಡು ನನಗೆ, ಕರವ ಮುಗಿದು ಕೇಳುವೆ ।।ಸಮ್ಮೇದ।।

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಫಲಂ ನಿರ್ವಪಾಮೀತಿ ಸ್ವಾಹಾ।

ಜಲ ಗಂಧ ಅಕ್ಷತ ಪುಷ್ಪಚರು ಫಲ, ದೀಪ ಧೂಪವ ತಂದಿರುವೆನು ।
ಈಗ ಮಾಡು ಜಗದಿ ನಿರ್ಭಯ, ಕರವ ಮುಗಿದು ಕೇಳ್ವೆನು ।।ಸಮ್ಮೇದ।।

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಅರ್ಘ್ಯಂ ನಿರ್ವಪಾಮಿತಿ ಸ್ವಾಹಾ।

ಜಯಮಾಲೆ

ಶ್ರೀ ಚವ್ವೀಸ ಜಿನರ, ಕೈಲಾಸಾದಿ ಗಿರಿಗೆ ನಮಿಸುವೆ ।
ತೀರ್ಥವದು ಮಹಾಪ್ರದೇಶ, ಮಹಾಪುರುಷರ ನಿರ್ವಾಣದಿ ಆಗಿದೆ ।।

ನಮಿಸುವೆ ಋಷಭರ ಕೈಲಾಸಗಿರಿಯನು, ನೇಮಿನಾಥರ ಗಿರನಾರವ ನೋಡುವೆ ।
ವಾಸುಪೂಜ್ಯರ ಚಂಪಾಪುರಿಗೆ ನಮಿಪೆನು, ಸನ್ಮತಿಯ ಪಾವಾಪುರವಭಿನಂದಿಸುವೆ ।।

ವಂದಿಪೆ ಅಜಿತ ಅಜಿತ ಪದವೀವರು, ವಂದಿಪೆ ಸಂಭವ ಭವದುಃಖ ಹರಿಪರು ।
ವಂದಿಪೆ ಅಭಿನಂದನ ಗಣನಾಯಕರು, ವಂದಿಪೆ ಸುಮತಿ ಸುಮತಿ ದಾಯಕರು ।।

ವಂದಿಪೆ ಪದ್ಮ ಮುಕ್ತಿಯ ಪದ್ಮಾಕರ, ವಂದಿಪೆ ಸುಪಾರ್ಶ್ವ ಆಶಾ ಪಾಶವ ಹರಿವರು ।
ವಂದಿಪೆ ಚಂದ್ರಪ್ರಭ ಪ್ರಭು ಚಂದಿರ, ವಂದಿಪೆ ಸುವಿಧಿ ಸುವಿಧಿ ನಿಧಿ ಕಂದರು ।।

ವಂದಿಪೆ ಶೀತಲ ಅಘತಪ ಶೀತಲರು, ವಂದಿಪೆ ಶ್ರೇಯಾಂಶ ಶ್ರೇಯಾಂಸ ಮಹೀತಲ ।
ವಂದಿಪೆ ವಿಮಲ ವಿಮಲ ಉಪಯೋಗರು, ವಂದಿಪೆ ಅನಂತ ಸುಖಭೋಗಿ ಅನಂತ ।।

ವಂದಿಪೆ ಧರ್ಮ ಧರ್ಮ ವಿಸ್ತಾರಕ, ವಂದಿಪೆ ಶಾಂತಿ ಮನದಲಿ ಶಾಂತಿಯ ಧರಸಿ ।
ವಂದಿಪೆ ಕುಂಥು ಕುಂಥು ರಕ್ಷಿಪರು, ವಂದಿಪೆ ಅರ ಅರಿ ಹರ ಗುಣಮೂಲಂ ।।

ವಂದಿಪೆ ಮಲ್ಲಿ ಕಾಮ ಮಲನಾಶಕ, ವಂದಿಪೆ ಮುನಿಸೂವ್ರತ ವ್ರತಪೂರಣ ।
ವಂದಿಪೆ ನಮಿ ಜಿನ ನಮಿತ ಸುರಾಸರ, ವಂದಿಪೆ ಪಾರ್ಶ್ವಪಾಶ ಭ್ರಮ ಜಗಹರ ।।

ಸಿದ್ಧಭೂಮಿ ದಶದ್ವಯವನು ತಲುಪಿ, ಶಿಖರ ಸಮ್ಮೇದ ಮಹಾಗಿರಿ ಭೂಮಿಯನೇರಿ ।
ಒಂದು ಬಾರಿ ವಂದಿಪರು ಯಾರು, ಪಡೆಯರು ಪಶುಗತಿ ನರಕವನವರು ।।

ನರಪತಿ ನೃಪಸುರ ಚಕ್ರಗಳೆನಿಪರು, ಮೂಜಗ ಭೋಗವನುಂಡು ಶಿವರಾಗುವರು ।
ವಿಘ್ನವಿನಾಶನ ಮಂಗಲಕಾರಿ, ಗುಣ ವಿಲಾಸ ವಂದಿಪೆ ಭವತಾರಿ ।।

ಓಂ ಹ್ರೀಂ ಶ್ರೀ ಚತುರ್ವಿಂಶತಿ ತೀರ್ಥಂಕರ ನಿರ್ವಾಣ ಕ್ಷೇತ್ರೇಭ್ಯೋ ಅನರ್ಘ್ಯ ಪದ ಪ್ರಾಪ್ತಯೇ ಜಯಮಾಲಾ ಪೂರ್ಣಾರ್ಘ್ಯಂ ನಿರ್ವಪಾಮೀತಿ ಸ್ವಾಹಾ ।

ಯಾರು ತೀರ್ಥಕೆ ಪೋಪರು, ಪಾಪವ ಕಳೆವರು, ಧ್ಯಾನಿಸಿ ನುತಿಪರು ಭಕ್ತಿಯ ಮಾಳ್ಪರು।
ಅವರು ಕೀರ್ತಿ ಪಡೆವರು, ಸಂಪದ ಪಡೆವರು, ಗಿರಿಯಂಥ ಗುಣ-ಬೋಧವಗಳಿಪರು ।।

(ಪುಷ್ಪಾಂಜಲಿಂ ಕ್ಷಿಪೇತ್)

ಅನುಕ್ರಮಣಿಕೆ

೧.	ಮೂರು ಲೋಕಗಳ ರಚನೆ - ಜೈನ ಭೂಗೋಳ	೧
೨.	ಎಂಟು ಪೃಥ್ವಿಗಳು, ವಾತವಲಯ	೧೪
೩.	ಅಧೋಲೋಕ - ನರಕಗಳು	೨೬
೪.	ನಾರಕಿಗಳಲ್ಲಿ ಗತಿ-ಆಗತಿ	೪೧
೫.	ಶಲಾಕಾ ಪುರುಷರು, ಅನ್ಯ ಸಂದೇಹ-ಸಮಾಧಾನ	೫೫
೬.	ಅಧೋಲೋಕದ ದೇವ-ಭವನವಾಸಿಗಳು	೭೦
೭.	ಅಧೋಲೋಕದ ವ್ಯಂತರ ದೇವಗಳು	೮೦
೮.	ಊರ್ಧ್ವಲೋಕ-ಸ್ವರ್ಗಗಳ ವಿಮಾನಗಳು	೯೧
೯.	ವೈಮಾನಿಕ ಇಂದ್ರರು	೧೦೪
೧೦.	ದೇವಗಳಲ್ಲಿ ಗತಿ-ಆಗತಿ, ಮಧ್ಯಲೋಕ	೧೧೬
೧೧.	ಮಧ್ಯಲೋಕ ಃ ದ್ವೀಪ-ಸಮುದ್ರ	೧೨೭
೧೨.	ಜಂಬೂದ್ವೀಪ	೧೩೪
೧೩.	ಭರತ ಕ್ಷೇತ್ರ	೧೪೫
೧೪.	ಭೋಗಭೂಮಿ, ವಿದೇಹ ಕ್ಷೇತ್ರ	೧೫೧
೧೫.	ವಿದ್ಯಾಧರರು, ಕುಭೋಗಭೂಮಿ	೧೬೧
೧೬.	ಲವಣ ಸಮುದ್ರದ ಪಾತಾಳ	೧೭೧
೧೭.	ಜ್ಯೋತಿಷ್ಕ ವಿಮಾನಗಳು	೧೮೦
೧೮.	ಪಂಚಮೇರು	೧೯೦
೧೯.	ನಂದೀಶ್ವರ ದ್ವೀಪ	೧೯೮
೨೦.	ಅಕೃತ್ರಿಮ ಜಿನಚೈತ್ಯಾಲಯಗಳ ವರ್ಣನೆ	೨೦೫
೨೧.	ತ್ರಿಲೋಕ ಭೂಷಣ ಸಂಗತಿ	೨೧೮
೨೨.	ಪ್ರಸ್ತುತ ಗ್ರಂಥ ಪ್ರಕಾಶನದಲ್ಲಿ ಪ್ರಾಪ್ತ ದಾನರಾಶಿ	೨೨೨

ಲೋಕಾಕಾಶ


ಈಷತ್ ಪ್ರಾಗ್ಭಾರ
೮ ಯೋಜನ
ಅನುತ್ತರ
ಅನುದಿಶ
೯ ಗ್ರೈವೇಯಕ
೧೫-೧೬
೧೩-೧೪
೧೧-೧೨
೯-೧೦
೭-೮
೫-೬
೩-೪
೩-೪
೧-೨
ಸ್ವರ್ಗದ ೬೩ ಪಟಲ
ತ್ರಸನಾಳಿ
ಬಿಲಗಳ ಸಂಖ್ಯೆ
೩೦ ಲಕ್ಷ
೧ ರತ್ನಪ್ರಭಾ (ಧರ್ಮಾ) ೧೩ ಪಟಲ
೨೫ ಲಕ್ಷ
೨ ಶರ್ಕರಾಪ್ರಭಾ (ವಂಶಾ) ೧೧ ಪಟಲ
೧೫ ಲಕ್ಷ
೩ ವಾಲುಕಾಪ್ರಭಾ (ಮೇಘಾ) ೯ ಪಟಲ
೧೦ ಲಕ್ಷ
೪ ಪಂಕಪ್ರಭಾ (ಅಂಜನಾ) ೭ ಪಟಲ
೩ ಲಕ್ಷ
೫ ಧೂಮಪ್ರಭಾ (ಅರಿಷ್ಟಾ) ೫ ಪಟಲ
೯೯೯೫
೬ ತಮಃಪ್ರಭಾ (ಮಘವಿ) ೩ ಪಟಲ
೫
೭ ಮಹಾತಮಃಪ್ರಭಾ (ಮಾಘವಿ) ೧ ಪಟಲ
ನರಕದ ೪೯ ಪಟಲ - ೮೪ ಲಕ್ಷ ಬಿಲಗಳು
ಯೋಜನಗಳಲ್ಲಿ ದಪ್ಪತೆ
೧೮೦೦೦೦
೧೬೦೦೦
೮೪೦೦೦
೮೦೦೦೦
೧ ರಾಜೂ
೧೩/೨ ರಾಜೂ
೩೨೦೦೦
೧೯/೨ ರಾಜೂ
೨೮೦೦೦
೨೫/೨ ರಾಜೂ
೨೪೦೦೦
೩೧/೨ ರಾಜೂ
೨೦೦೦೦
೩೭/೨ ರಾಜೂ
೧೬೦೦೦
೪೩/೨ ರಾಜೂ
೮೦೦೦
೭ ರಾಜೂ

ವಾತವಲಯ


೨
ಸಿದ್ಧಶಿಲೆ
ಅನುದಿಶ
ಅನುತ್ತರ
೯ ಗ್ರೈವೇಯಕ
ಶುದ್ಧ ಆಕಾಶ
೧೫-೧೬
ಶುದ್ಧ ಆಕಾಶ
೧೩-೧೪
ಶುದ್ಧ ಆಕಾಶ
೧೧-೧೨
ಜಲಪವನಾಧಾರ
೯-೧೦
ಜಲಪವನಾಧಾರ
೭-೮
ಜಲಪವನಾಧಾರ
೫-೬
ಜಲಪವನಾಧಾರ
೩-೪
ಪವನಾಧಾರ
೧-೨
ಜಲಾಧಾರ
೧೫೬೫ ಧನುಷ್ಯ ತನುವಾತವಲಯ
೧ ಹರಿದಾರಿ ಘನವಾತವಲಯ
೨ ಹರಿದಾರಿ ಘನೋದಧಿವಾತವಲಯ
ಸಿದ್ಧಶಿಲೆ
ನಿಗೋದ
೨೦೦೦೦ ಘನೋದಧಿವಾತ
೨೦೦೦೦ ಘನವಾತ
೨೦೦೦೦ ತನುವಾತ

ತಿರ್ಯಕ್‌ಲೋಕ



ಅಸಂಖ್ಯಾತ ದ್ವೀಪ ಮತ್ತು ಸಮುದ್ರ = ೨೫ ಕೋಟಾಕೋಟಿ ಉದ್ಧಾರಪಲ್ಯ

ಎರಡೂವರೆ ದ್ವೀಪ

೫

೫ ಮೇರುಸಂಬಂಧದ ೩೦ ಭೋಗಭೂಮಿ

೫ ಮೇರುಸಂಬಂಧದ ೧೫ ಕರ್ಮಭೂಮಿ

- ೫ ವಿದೇಹ X ೩೨
- ೫ ಭರತ
- ೫ ಐರಾವತ



ಜಂಬೂದ್ವೀಪ


ಪರ್ವತ (ಹ್ರದ)
ಕ್ಷೇತ್ರ (ನದಿಗಳು)
ಶಿಖರೀ (ಪುಂಡರೀಕ)
ಐರಾವತ (ರಕ್ತಾ-ರಕ್ತೋದಾ)
ರುಕ್ಮೀ (ಮಹಾಪುಂಡರೀಕ)
ಹೈರಣ್ಯವತ (ಸುವರ್ಣಕೂಲಾ-ರೂಪ್ಯಕೂಲಾ)
ರಮ್ಯಕ್ (ನಾರಿ-ನರಕಾಂತಾ)
ನೀಲ (ಕೇಸರಿ)
ಜಂಬೂವೃಕ್ಷ
ಉತ್ತರ ರುಕು
ಪೂರ್ವ ವಿದೇಹ, ಉತ್ತರಕುರು (ಸೀತಾ)
ವಕ್ಷಾರ ಪರ್ವತ
ಗಜದಂತ
ಭದ್ರಶಾಲವನ
ಭೂತಾರಣ್ಯ
ಸುಮೇರು
ದೇವಾರಣ್ಯ
ಶಾಲ್ಮಲಿವೃಕ್ಷ
ದೇವಕುರು
ನಿಷಧ (ತಿಗಿಂಛ)
ಪಶ್ಚಿಮ ವಿದೇಹ, ದೇವಕುರು (ಸೀತೋದಾ)
ಹರಿ (ಹರಿತ್-ಹರಿಕಾಂತಾ)
ಮಹಾಹಿಮವಾನ (ಮಹಾಪದ್ಮ)
ಹೈಮವತ (ರೋಹಿತ-ರೋಹಿತಾಸ್ಯಾ)
ಹಿಮವಾನ (ಪದ್ಮ)
ಭರತ (ಗಂಗಾ-ಸಿಂಧು)
ಲವಣಸಮುದ್ರ


ಭರತಕ್ಷೇತ್ರ
೬
ಹಿಮವಾನ ಪರ್ವತ
ಪದ್ಮದ್ರಹ
ಮ್ಲೇಚ್ಛಖಂಡ
ಮ್ಲೇಚ್ಛಖಂಡ
ವೃಷಭಗಿರಿ
ಮ್ಲೇಚ್ಛಖಂಡ
ಸಿಂಧು
ಗಂಗಾ
ವಿಜಯಾರ್ಧ ಪರ್ವತ
ಮ್ಲೇಚ್ಛಖಂಡ
ಮ್ಲೇಚ್ಛಖಂಡ
ಆರ್ಯಖಂಡ

ಲವಣಸಮುದ್ರದ ಪಾತಾಳ



ಲವಣಸಮುದ್ರದ ಪಾತಾಳ



ಪಾತಾಳ – ಯೋಜನಗಳಲ್ಲಿ

ಪಾತಾಳ	ಎತ್ತರ	ಮಧ್ಯದ ವ್ಯಾಸ	ಮುಖದ ವ್ಯಾಸ ತಳದ ವ್ಯಾಸ	ಗೋಡೆಯ ದಪ್ಪ
ಜ್ಯೇಷ್ಠ ಪಾತಾಳ	೧೦೦೦೦೦	೧೦೦೦೦೦	೧೦೦೦೦	೫೦೦
ಮಧ್ಯಮ ಪಾತಾಳ	೧೦೦೦೦	೧೦೦೦೦	೧೦೦೦	೫೦
ಜಘನ್ಯ ಪಾತಾಳ	೧೦೦೦	೧೦೦೦	೧೦೦	೫



ಜ್ಯೇಷ್ಠ ಪಾತಾಳ

ಮಧ್ಯಮ ಪಾತಾಳ

ಜಘನ್ಯ ಪಾತಾಳ

ಜ್ಯೇಷ್ಠ ಪಾತಾಳ	-	೪
ಮಧ್ಯಮ ಪಾತಾಳ	-	೪
ಜಘನ್ಯ ಪಾತಾಳ	-	೧೦೦೦
ಒಟ್ಟು ಪಾತಾಳ	-	೧೦೦೮

ಕುಮನುಷ್ಯದ್ವೀಪ


ಧಾತಕಿಖಂಡ
ಜಂಬೂದ್ವೀಪ
ಶಿಖರಿ ಪರ್ವತ
ಹಿಮವಾನ ಪರ್ವತ
ಏಕೋರುಕ
ಆಭಾಷಕರ್ಣ
ಲಾಂಗುಲಿಕರ್ಣ
ಶ್ವಕರ್ಣ
ಹಯಕರ್ಣ
ಮಾರ್ಜಾರಮುಖ
ಗೋಕರ್ಣ
ಉಷ್ಟ್ರಕರ್ಣ
ಕರ್ಣಪ್ರಾವರಣ
ಶೂಕರಕರ್ಣ
ಶ್ವಾನಕರ್ಣ
ಸಿಂಹಕರ್ಣ
ಗಜಮುಖ
ಪಕ್ಷಿಮುಖ
ವತ್ಸ್ಯಮುಖ
ಶಾರ್ದೂಲಮುಖ
ಘೂಕಮುಖ
ವರಾಹಮುಖ
ವಾನರಮುಖ
ಹಸ್ತಿಮುಖ
ದರ್ಪಣಮುಖ
ವಿದ್ಯುನ್ಮುಖ
ಮೇಘಮುಖ
ಕಾಲಮುಖ
ಮತ್ಸ್ಯಮುಖ
ಗೋಮುಖ
ಮೇಷಮುಖ
ಮಹಿಷಮುಖ
ಸಿಂಹಮುಖ
ಶ್ವಾನಮುಖ
ಅಶ್ವಮುಖ
ಭೃಂಗಾರಮುಖ
ಶೃಗಾಲಮುಖ
ವ್ಯಾಘ್ರಮುಖ
ಮಕರಮುಖ
ದ್ವಿಪಿಕಮುಖ
ಅಕ್ಷಮುಖ
ವೃಕಮುಖ
ಶಿಶುಮಾರಮುಖ

ಸುಮೇರು ಪರ್ವತ

೪ ಯೋಜನ
ಚೂಲಿಕೆ
೪೦ ಯೋಜನ
೧೨ ಯೋಜನ


ಪಾಂಡುಕವನ
೩೬೦೦೦
ಸೌಮನಸವನ
೭೨೫೦೦
ನಂದನವನ
೫೦೦
ಭದ್ರಶಾಲವನ
೧೦೦೦೦
ಮೂಲ


ಪಾಂಡುಕವನ
ರಕ್ತಕಂಬಲಾ
(ಪೂರ್ವ ವಿದೇಹ)
ಪಾಂಡುಕಶಿಲೆ
(ಭರತ)
(ಕುಬೇರ)
(ವರುಣ)
ಹಾರಿದ್ರ ಭವನ
ಲೋಹಿತ ಭವನ
(ಸೋಮ)
(ಯಮ)
ರಕ್ತಶಿಲಾ
(ಐರಾವತ)
ಪಾಂಡುಕಂಬಲಾ
(ಪಶ್ಚಿಮ ವಿದೇಹ)

ಪಾಂಡುಕಶಿಲೆ
(ಬಾಲ ತೀರ್ಥಂಕರರ ಜನ್ಮಾಭಿಷೇಕ ಸ್ಥಾನ)
ಸಿಂಹಾಸನ
ಭದ್ರಾಸನ
(ಈಶಾನ ಇಂದ್ರ)
ಭದ್ರಾಸನ
(ಸೌಧರ್ಮ ಇಂದ್ರ)

ನಂದೀಶ್ವರ ದ್ವೀಪ

೭ನೇ ದ್ವೀಪ
೭ನೇ ಸಮುದ್ರ
೧೬೩೪೪೦೦೦೦


ದಧಿಮುಖ ಪರ್ವತ
ರತಿಕರ ಪರ್ವತ
ಆಮ್ರವನ
ಚೈತ್ಯವೃಕ್ಷವನ
ಚೈತ್ಯವೃಕ್ಷವನ
ವಾಪಿ
ಸಪ್ತಪರ್ಣವನ
೧೦೦೦೦
೧೦೦೦೦
೧೦೦೦
೧೦೦೦
೧೦೦೦
೨೫೦
ದಧಿಮುಖ
ರತಿಕರ
ಅಂಜನಗಿರಿ
೮೪೦೦೦ ಯೋಜನ
ಅಡಿಪಾಯ ೧೦೦೦ ಯೋಜನ
೮೪೦೦೦ ಯೋಜನ

ಪೂರ್ವ ವಿದೇಹ


೧೨.೧
ಪೂರ್ವ ಸಮುದ್ರ
ಭೂತಾರಣ್ಯ
(ದೇವಾರಣ್ಯ)
ಸೀತಾ ನದಿ
ದೇವಾರಣ್ಯ
ಭದ್ರಶಾಲವನ
ರಕ್ತಾ
ರಕ್ತೋದಾ
ನೀಲ ಪರ್ವತ
ನಿಷಧ ಪರ್ವತ

೧೨.೨ ಪಶ್ಚಿಮ ವಿದೇಹ

ನೀಲ ಪರ್ವತ
ನಿಷಧ ಪರ್ವತ
ಸೀತೋದಾ ನದಿ
ಭದ್ರಶಾಲವನ
ದೇವಾರಣ್ಯ
ಭೂತಾರಣ್ಯ
(ದೈವಾರಣ್ಯ)
ಲವಣ ಸಮುದ್ರ
ಪದ್ಮ
ಸುಪದ್ಮ
ಮಹಾಪದ್ಮ
ಪದ್ಮಕಾವತಿ
ಶಂಖ
ನಲಿನ
ಕುಮುದ
ತಿಲಕ
ಸ್ವರ್ಣಪದ್ಮ
ಸ್ವರ್ಣಶಂಖ
ಸ್ವರ್ಣಕುಮುದ
ಸ್ವರ್ಣತಿಲಕ
ಸ್ವರ್ಣಭದ್ರ
ಸ್ವರ್ಣಮಾಲಿನಿ
ಸ್ವರ್ಣಗಂಧಾ
ಸ್ವರ್ಣಲತಾ
ಸ್ವರ್ಣಪ್ರಭಾ
ಸ್ವರ್ಣಪ್ರಕಾಶ
ಸ್ವರ್ಣಪ್ರಭಾ
ಸ್ವರ್ಣಮಾಲಿ
ಸ್ವರ್ಣಗಂಧಾ
ಸ್ವರ್ಣಲತಾ
ಸ್ವರ್ಣಪ್ರಭಾ
ಸ್ವರ್ಣಪ್ರಕಾಶ
ಸ್ವರ್ಣಪ್ರಭಾ
ಸ್ವರ್ಣಮಾಲಿ
ಸ್ವರ್ಣಗಂಧಾ
ಸ್ವರ್ಣಲತಾ
ಸ್ವರ್ಣಪ್ರಭಾ

ನರಕ ಬಿಲಗಳು

೧೩



ಇಂದ್ರಕ ಶ್ರೇಣಿಬದ್ಧ ಪ್ರಕೀರ್ಣಕ



ಸಪ್ತಮ ನರಕ

ಪ್ರಥಮ ನರಕದ ಪ್ರಥಮ ಪಟಲ

ಸೀಮಂತರ ಇಂದ್ರಕ - ೪೫ ಲಕ್ಷ ಯೋಜನವಿಸ್ತಾರ

ಶ್ರೇಣಿಬದ್ಧ ಬಿಲ - ಅಸಂಖ್ಯಾತ ಯೋಜನ ವಿಸ್ತಾರ

ದಿಕ್ಕುಗಳಲ್ಲಿ ೪೯, ವಿದಿಕ್ಕುಗಳಲ್ಲಿ ೪೮

ಪ್ರಕೀರ್ಣಕ - ಸಂಖ್ಯಾತ, ಅಸಂಖ್ಯಾತ ಯೋಜನ ವಿಸ್ತಾರ

ಪ್ರಥಮ ನರಕದ ೧೩ ಪಟಲುಗಳ ಬಿಲ ೩೦ ಲಕ್ಷ

ಇಂದ್ರಕ		೧೩
ಶ್ರೇಣಿಬದ್ಧ	+	೪೪೨೦
ಪ್ರಕರ್ಣಿಕ	+	೨೯೯೫೫೬೭
ಒಟ್ಟು		೩೦೦೦೦೦೦

ವೈಮಾನಿಕ ದೇವರುಗಳ ವಿಮಾನ

ಅನುತ್ತರ ವಿಮಾನ

ಸರ್ವಾರ್ಥಸಿದ್ಧಿ ಇಂದ್ರಕ - ೧ ಲಕ್ಷ ಯೋಜನ

	ಪಟಲ	ವಿಮಾನಗಳ ಸಂಖ್ಯೆ
ಅನುತ್ತರ	೧	೫
ಅನುದಿಶೆ	೧	೯
ಊರ್ಧ್ವ ಗ್ರೈವೇಯಕ	೩	೯೧
ಮಧ್ಯ ಗ್ರೈವೇಯಕ	೩	೧೦೭
ಅಧೋ ಗ್ರೈವೇಯಕ	೩	೧೧೧
ಆನತಾದಿ ೪	೬	೭೦೦
ಶತಾರ ಯುಗಲ	೧	೬೦೦೦
ಶುಕ್ರ ಯುಗಲ	೧	೪೦೦೦೦
ಲಾಂತವ ಯುಗಲ	೨	೫೦೦೦೦
ಬ್ರಹ್ಮ ಯುಗಲ	೪	೪೦೦೦೦೦
ಸಾನತ್‌ಕುಮಾರ ಮಾಹೇಂದ್ರ	೭	೧೨೦೦೦೦೦ + ೮೦೦೦೦೦
ಸೌಧರ್ಮ ಈಶಾನ	೩೧	೩೨೦೦೦೦೦ + ೨೮೦೦೦೦೦
ಒಟ್ಟು	೬೩	೮೪೯೭೦೨೩



ಮೂರು ಲೋಕಗಳ ರಚನೆ - ಜೈನ ಭೂಗೋಳ

ಓಂ ನಮಃ ಸಿದ್ಧೇಭ್ಯಃ ಓಂ ನಮಃ ಸಿದ್ಧೇಭ್ಯಃ ಓಂ ನಮಃ ಸಿದ್ಧೇಭ್ಯಃ
ಓಂ ಶುದ್ಧಾತ್ಮನೇ ನಮಃ

॥ ಮಂಗಲಾಚರಣೆ ॥

ಮೂರುಲೋಕಸಾರ ಅಪಾರಗುಣ ಜ್ಞಾಯಕರಿಹ ನಾಯಕ ಸಂತರಿಗೆ ।
ನಮಿಸುವೆ ಶ್ರೀ ಅರಹಂತರಿಗೆ ಹಿತಕಾರರಿಹರು ಮೂಲೋಕಕೆ ॥

ಮೂರುಲೋಕದ ಮುಕುಟ ಮಣಿಗಳು ಗುಣ ಅನಂತಮಯ ಶುದ್ಧರು ।
ನಮಿಸುವೆ ಸಿದ್ಧ ಪರಮಾತ್ಮರಿಗೆ ವೀತರಾಗರು ಅವಿರುದ್ಧರಿಹರು ॥

ಮೂರುಲೋಕದ ಸ್ಥಿತಿಯನು ತಿಳಿದು ತಾವು ತಮ್ಮೊಳು ರಮಿಸಿದರು ।
ನಮಿಸುವೆ ಮಹಾಮುನಿಗಳಿಗೆ ಪರದಿಂದಾದರು ಅತಿ ವಿರಕ್ತರು ॥

ಮೂಲೋಕವೆಂಬ ಮನೆಯೊಳಗಿಹ ಪದಾರ್ಥ ಪ್ರಕಾಶನ ಮಾಡಿಪುದು ।
ನಮಿಸುವೆ ಜಿನವಚನ ದೀವಿಗೆಗೆ ಜ್ಞಾನ ಮಾಡಿಸುವ ಗುಣ ಹೊಂದಿಹುದು॥

ಮೂಲೋಕದ ಶೋಭೆಯಾಗಿರುವ ಚೈತ್ಯ-ಚೈತ್ಯಾಲಯಗಳನು ।
ನಮಿಸುವೆ ಭಾವಸಹಿತವಾಗಿ ಶುಭವಹುದು ಸುಖಕರವಹುದು ॥

ಹೀಗೆ ಮಂಗಲರೂಪವಿರುವ ಪದ-ಪದಾರ್ಥಗಳ ನೆನೆಯುತ ।
ಈಗ ಪೇಳ್ವೆನು ರಚನೆಯನಲ್ಪ ಬಹುವಿಧ ಸುಖವಿಹುದದರಿಂದ ॥

೧. ಮೂರುಲೋಕಗಳ - ಸಾಮಾನ್ಯ ಸ್ವರೂಪ

ಸರ್ವಜ್ಞ ಭಗವಂತರ ವಾಣಿಯ ಅನುಸಾರ ಸಮಸ್ತ ದ್ವಾದಶಾಂಗದ ರಚನೆಯಾಗಿದೆ ಮತ್ತು ಆ ಆಗಮ ಪರಂಪರೆಯಲ್ಲಿ ಆಚಾರ್ಯ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ತ್ರಿಲೋಕಸಾರವೆಂಬ ಹೆಸರಿನ ಗ್ರಂಥದ ರಚನೆ ಮಾಡಿದ್ದಾರೆ, ಆ ಗ್ರಂಥದ ಸಂಸ್ಕೃತ ಟೀಕೆಯ ಆಧಾರದಿಂದ ಪಂ. ಟೋಡರಮಲ್ಲರು ತ್ರಿಲೋಕಸಾರ ಗ್ರಂಥದ ಭಾಷಾ ಟೀಕೆಯನ್ನು ಢೂಂಢಾರಿ ಭಾಷೆಯಲ್ಲಿ ಬರೆದಿದ್ದಾರೆ. ೧೯೧೮ ರಲ್ಲಿ ಪ್ರಕಾಶಿತವಾದ ಆ ಗ್ರಂಥದ ಆಧಾರದಿಂದ ಮತ್ತು ತ್ರಿಲೋಕಸಾರವೆಂಬ ಮತ್ತೊಂದು ಉಪಲಬ್ಧ ಟೀಕೆಯ ಆಧಾರದಿಂದ ಹಾಗೂ ಸ್ವಾಮೀ ಕಾರ್ತಿಕೇಯರಿಂದ ರಚಿಸಲ್ಪಟ್ಟ ಕಾರ್ತಿಕೇಯಾನುಪ್ರೇಕ್ಷೆ ಗ್ರಂಥದಲ್ಲಿ ಬರುವ ಲೋಕಭಾವನೆ ಅಧಿಕಾರದ ವಿಸ್ತೃತ ವರ್ಣನೆಯ ಆಧಾರ ಪಡೆದು ಇಲ್ಲಿ ನಾವು ವಿಶ್ವದ ಸ್ವರೂಪ - ಮೂರು ಲೋಕಗಳ ಸ್ವರೂಪದ ಅವಲೋಕನೆ ಮಾಡಲು ಹೊರಟಿದ್ದೇವೆ.

ಮಂಗಲಾಚರಣೆಯಲ್ಲಿ ಮೂರು ಲೋಕದ ಸಮಸ್ತ ಚೈತ್ಯ-ಚೈತ್ಯಾಲಯಗಳಿಗೆ ಭಾವ ಸಹಿತವಾಗಿ ನಮಸ್ಕಾರ ಮಾಡಿ ನಾವು ವಿಶ್ವದ ಸ್ವರೂಪವನ್ನು-ಮೂರುಲೋಕದ ರಚನೆಯನ್ನು ನೋಡಲು ಹೊರಟಿದ್ದೇವೆ. ಮೂರುಲೋಕಗಳ ವಾಸ್ತವಿಕ ಸ್ವರೂಪವನ್ನು ತಿಳಿದುಕೊಳ್ಳುವುದಿದ್ದರೆ ಅಲೋಕಾಕಾಶ ಸಹಿತವಾಗಿ ಸಂಪೂರ್ಣ ಲೋಕವನ್ನು ಪ್ರತ್ಯಕ್ಷವಾಗಿ ತಿಳಿಯುವಂಥ ಸರ್ವಜ್ಞ ಭಗವಂತರು ಏನನ್ನು ಹೇಳಿದ್ದಾರೆ, ಅದನ್ನೇ ತಿಳಿಯಬೇಕಾಗುವುದು, ತಿಳಿಯೋಣ; ಏಕೆಂದರೆ ಅದುವೇ ಪರಮ ಸತ್ಯವಿದೆ, ಪ್ರಮಾಣವಿದೆ. ರತ್ನಕರಂಡ ಶ್ರಾವಕಾಚಾರದಲ್ಲಿ ಸ್ವಾಮೀ ಸಮಂತಭದ್ರಾಚಾರ್ಯರು ಪ್ರಾರಂಭದ ಮಂಗಲಾಚರಣೆಯಲ್ಲಿ ಹೇಳುತ್ತಾರೆ,-

ನಮಃ ಶ್ರೀ ವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ ।
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ ॥

ಯಾರ ಕೇವಲಜ್ಞಾನದಲ್ಲಿ ಅಲೋಕ ಸಹಿತ ಮೂರು ಲೋಕಗಳು ಹೊಳೆಯುತ್ತವೆ. ಪ್ರತಿಫಲಿತವಾಗುತ್ತವೆ ಅರ್ಥಾತ್ ಸರ್ವಜ್ಞ ಭಗವಂತರು ಈ ಮೂರು ಲೋಕಗಳನ್ನು ಹಾಗೂ ಇವುಗಳಿಂದ ಅನಂತ ಗುಣಿತವಿರುವಂಥ ಅಲೋಕಾಕಾಶವನ್ನು ಪ್ರತ್ಯಕ್ಷ ಸ್ಪಷ್ಟವಾಗಿ ತಿಳಿಯುತ್ತಾರೆ. ಅವರು ಯಾವ ಯಾವುದನ್ನು ತಿಳಿದಿದ್ದಾರೆ ಅದು ಅವರ ವಾಣಿಯಲ್ಲಿ - ದಿವ್ಯಧ್ವನಿಯಲ್ಲಿ ಬಂದಿದೆ. ಅವರ ವಾಣಿಯ ಅನುಸಾರ ಗಣಧರರು ಹನ್ನೆರಡು ಅಂಗ ಮತ್ತು ಹದಿನಾಲ್ಕು ಪ್ರಕೀರ್ಣಕ (ಅಂಗಬಾಹ್ಯ)ಗಳ ರಚನೆ ಮಾಡಿದ್ದಾರೆ. ಸತ್ಯಮಹಾವ್ರತಧಾರೀ ಆಚಾರ್ಯರ ಪರಂಪರೆಯಿಂದ ಈ ಮಾತುಗಳು ನಡೆಯುತ್ತ ಬಂದವು ಮತ್ತು ಕಾಲಾಂತರದಿಂದ ಅವು ಗ್ರಂಥದಲ್ಲಿ ಲಿಪಿಬದ್ಧವಾದವು. ಅವೇ ಜಿನಾಗಮಗಳ ಆಧಾರದಿಂದ ಈಗ ನಾವು ಆ ಮೂರು ಲೋಕಗಳು ಏನಿವೆ ? ಎಲ್ಲಿವೆ? ಅವುಗಳಲ್ಲಿ ಯಾವ-ಯಾವ ಜೀವಗಳು ವಾಸ ಮಾಡಿಕೊಂಡಿವೆ ? ನಾವು ಎಲ್ಲಿ ವಾಸ ಮಾಡುತ್ತಿದ್ದೇವೆ ? ಸಿದ್ಧಭಗವಂತರು ಎಲ್ಲಿ ವಿರಾಜಮಾನರಿದ್ದಾರೆ ? ಅರಹಂತ ಪರಮಾತ್ಮರು ಎಲ್ಲಿದ್ದಾರೆ ? ನಾವು ಅನಾದಿಯಿಂದ ಎಲ್ಲೆಲ್ಲಿ ಜನ್ಮ-ಮರಣ ಮಾಡುತ್ತ ಬಂದಿದ್ದೇವೆ ? ಎಲ್ಲೆಲ್ಲಿ ಸುತ್ತಿ ಬಂದಿದ್ದೇವೆ ? - ಎಂಬುದನ್ನು ಒಂದು ಸಲ ನೋಡುವ ಪ್ರಯತ್ನವನ್ನು ಇಲ್ಲಿ ಈಗ ಮಾಡೋಣ !

ಯಾರಿಗಾದರೂ ಅಮೇರಿಕಾ, ಯುರೋಪ ಅಥವಾ ಕಾಶ್ಮೀರಕ್ಕೆ ಹೋಗುವುದಿದ್ದರೆ, ಅವರು ಮೊದಲು ಅಲ್ಲಿಯ ಬಗ್ಗೆ ತಿಳಿವಳಿಕೆ ಮಾಡಿಕೊಳ್ಳುತ್ತಾರೆ ಮತ್ತು ಅಲ್ಲಿಂದ ಮರಳಿ ಬಂದ ನಂತರವೂ ಕೂಡ ಅಲ್ಲಿಯ ಛಾಯಾ ಚಿತ್ರಗಳನ್ನು ನೋಡಿ-ನೋಡಿ ಕಳೆದ ಘಟನೆಗಳನ್ನು ನೆನಪಿಗೆ ತಂದುಕೊಳ್ಳುತ್ತಾರೆ. ಅದರಂತೆ ನಾವು ಕೂಡ ಎಲ್ಲೆಲ್ಲಿ ಹೋಗಿ ಇಲ್ಲಿಗೆ ಬಂದಿದ್ದೇವೆ ? - ಎಂಬುದನ್ನು ನೋಡೋಣ.

ಇನ್ನು ನಾವು ಶಾಲೆಯಲ್ಲಿ ಯಾವ ಭೂಗೋಲವನ್ನು ಕಲಿತುಕೊಂಡಿದ್ದೇವೆ, ಲೌಕಿಕದಲ್ಲಿ ಯಾವುದನ್ನು ವೈಜ್ಞಾನಿಕರು ಹೇಳಿದ್ದಾರೆ ಅದರ ಜೊತೆಗೆ ಇದರ ಹೊಂದಾಣಿಕೆ ಮಾಡುವಂಥ ಪ್ರಯತ್ನವನ್ನು ಸ್ವಲ್ಪವೂ ಕೂಡ ಮಾಡಬಾರದು. ಏಕೆಂದರೆ ನಾವಂತೂ ಅಲ್ಪಜ್ಞಾನಿಗಳಿದ್ದೇವೆ-ಕ್ಷಯೋಪಶಮ ಜ್ಞಾನಿಗಳಿದ್ದೇವೆ. ವೈಜ್ಞಾನಿಕರು ಅಲ್ಪ ಸ್ವಲ್ಪ ವಿಷಯಗಳ ಸಂಶೋಧನೆ ಮಾಡಿದ್ದಾರೆ ಅವೇ ಮಾತುಗಳನ್ನು ಸತ್ಯವೆಂದು ಮನ್ನಿಸಿ, ನಾವು ಸರ್ವಜ್ಞರು ಹೇಳಿರುವಂಥ ಮಾತುಗಳ ಪರೀಕ್ಷೆ - ಅವುಗಳ ಸತ್ಯತೆ ಅಸತ್ಯತೆಯ ನಿರ್ಣಯ ಮಾಡಲು ಹೋಗುತ್ತೇವೆ. ವೈಜ್ಞಾನಿಕರೆಂದರೆ ಯಾರು ? ನನ್ನ ಅಭಿಪ್ರಾಯದ ಅನುಸಾರ ಹೇಳಿದರೆ, ಯಾರ ಸಂಶೋಧನೆಯು ಎಂದೂ

ಪೂರ್ಣವಾಗುವುದಿಲ್ಲ ಯಾವಾಗಲೂ ಒಂದಲ್ಲ ಒಂದರ ಸಂಶೋಧನೆ ಮಾಡುತ್ತಲೇ ಇರುತ್ತಾರೆ, ಹೊಸದೇನನ್ನೂ ನಿರ್ಮಿಸುವುದಿಲ್ಲ ಅವರನ್ನೇ ವೈಜ್ಞಾನಿಕರೆನ್ನಲಾಗುವುದು. ಇತರರಿಗಿಂತ ಸ್ವಲ್ಪ ಅಧಿಕ ತಿಳಿಯುತ್ತಾರೆ ಆದರೆ ಎಲ್ಲವನ್ನೂ ತಿಳಿಯುವುದಿಲ್ಲ ಮತ್ತು ಯಾವುದನ್ನು ತಿಳಿಯುತ್ತಾರೆ ಅದರಲ್ಲಿಯೂ ಬಹಳಷ್ಟು ಪರಾಧೀನತೆಯಿರುತ್ತದೆ.

ಇನ್ನು ಯಾರು ಎಲ್ಲವನ್ನೂ ತಿಳಿಯುತ್ತಾರೆ ಎಂದರೆ ಅಲೋಕ ಸಹಿತವಾಗಿ ಲೋಕದ ಸಮಸ್ತ ದ್ರವ್ಯಗಳನ್ನು, ಅವೆಲ್ಲವುಗಳ ಮೂರೂ ಕಾಲದ ಅವಸ್ಥೆಗಳನ್ನು ತಮ್ಮ ಜ್ಞಾನದಲ್ಲಿ ಪ್ರತ್ಯಕ್ಷ-ಸ್ಪಷ್ಟವಾಗಿ ಒಟ್ಟಿಗೆ ಒಂದು ಸಮಯದಲ್ಲಿ ತಿಳಿಯುತ್ತಾರೆ, ಅವರನ್ನು ಸರ್ವಜ್ಞರೆಂದು ಹೇಳುತ್ತಾರೆ. ಅವರ ಜ್ಞಾನಕ್ಕೆ ನಿಲುಕದಂಥ ಯಾವ ವಸ್ತುವೂ ವಿಶ್ವದಲ್ಲಿ ಇಲ್ಲ; ಆದುದರಿಂದ ನಮಗೆ ಸರ್ವಜ್ಞರ ಕಥನದ ಅನುಸಾರ ಮೂರು ಲೋಕದ ಸ್ವರೂಪವನ್ನು ತಿಳಿಯುವುದಿದೆ. ಅದು ಪರಮ ಸತ್ಯವಿದೆ, ಅದನ್ನು ನಮ್ಮ ಲೌಕಿಕ ಜ್ಞಾನದ ಆಧಾರದಿಂದ ಸಿದ್ಧ ಮಾಡುವ ಅವಶ್ಯಕತೆಯಿರುವುದಿಲ್ಲ. ಸರ್ವಜ್ಞರ ಸ್ವರೂಪ ತಿಳಿಯುವುದು ಹಾಗೂ ಸರ್ವಜ್ಞರ ಸಿದ್ಧಿ ಮಾಡುವುದು ನಮ್ಮ ವರ್ತಮಾನ ವಿಷಯವಲ್ಲ ಅದನ್ನು ಇತರ ಗ್ರಂಥಗಳಿಂದ ಹಾಗೂ ಕಾರಣಕಾರ್ಯರಹಸ್ಯವೆಂಬ ಹೆಸರಿನ ಪುಸ್ತಿಕೆಯಲ್ಲಿ ಅದರ ವಿಶೇಷ ಚರ್ಚೆಯನ್ನು ನಾವು ಕೂಡ ಮಾಡಲಾಗಿದ್ದು ಅಲ್ಲಿಂದ ತಿಳಿದುಕೊಳ್ಳಬಹುದಾಗಿದೆ. ಕೇವಲ ಸರ್ವಜ್ಞ ಭಗವಂತರ ಪೂಜೆ ಮಾಡುವುದು, ಅಷ್ಟ ದ್ರವ್ಯಗಳನ್ನು ಅರ್ಪಿಸುವುದು, ಅವರ ಭಕ್ತಿ ಮಾಡುವುದು ಅದು ಅವರ ನಿಜವಾದ ಶ್ರದ್ಧೆಯೆನಿಸಿಕೊಳ್ಳುವುದಿಲ್ಲ. ಆದರೆ ಅವರ ವಾಣಿಯ ಅವರ ವಚನಗಳ ಶ್ರದ್ಧೆ ಮಾಡುವುದು ವಿಶ್ವಾಸವಿಡುವುದು-ವಿಚಾರ ಮಾಡುವುದು ಅವರ ನಿಜವಾದ ಶ್ರದ್ಧೆಯಿದೆ.

ತ್ರಿಲೋಕಸಾರ ಮೊದಲಾದ ಗ್ರಂಥಗಳನ್ನು ನೋಡಿದರೆ ಗಣಿತದ ಜ್ಞಾನ ಹಾಗೂ ಕಥನವಿಲ್ಲದೆ ಈ ರಚನೆಯನ್ನು ಹೇಳುವ ಸಾಧ್ಯತೆಯಿಲ್ಲ. ಆದರೆ ನಾವು ಗಣಿತವಿಲ್ಲದೆ ಇದನ್ನು ತಿಳಿಸಿಕೊಡುವ ನಿರ್ಣಯ ಮಾಡಿದ್ದೇವೆ. ಇದಂತೂ ಮೌನವಿದ್ದು ಪಾಠ ಕಲಿಸಲು ಹೊರಟಂಥ ನ್ಯಾಯವಿದೆ. ಯಾರಿಗೆ ಗಣಿತದ ಕುರಿತಾಗಿ ಅರುಚಿಯಿದೆ ಅಥವಾ ಏನು ತಿಳಿದು ಬರುವುದಿಲ್ಲ, ಅಂಥವರು ಬೇಸರ ಪಟ್ಟುಕೊಂಡು ಇದನ್ನು ಓದುವುದನ್ನೇ ಬಿಟ್ಟು ಬಿಡುತ್ತಾರೆ. ಆದರೆ ನಾವು ಇಲ್ಲಿ ಒಮ್ಮೆಲೇ ಸ್ಥೂಲವಿರುವ (ಎಲ್ಲರಿಗೂ ತಿಳಿದು ಬರುವಂಥ) ಆದರೂ ಮಹತ್ವದ ಮಾತುಗಳನ್ನು ತಿಳಿಸುತ್ತೇವೆ. ಸೂಕ್ಷ್ಮ ಚರ್ಚೆ ಮಾಡುವುದಿಲ್ಲ.

ಇನ್ನು ಅದೆಷ್ಟೋ ಸ್ವಾಧ್ಯಾಯ ಪ್ರೇಮಿಗಳು ದ್ರವ್ಯಾನುಯೋಗವನ್ನು ಚೆನ್ನಾಗಿ ತಿಳಿದುಕೊಂಡಿರುವಂಥವ-ರಿದ್ದಾರೆ, ಅವರುಗಳ ಮನಸ್ಸಿನಲ್ಲಿ ಒಂದು ಪ್ರಶ್ನೆಯು ಉತ್ಪನ್ನವಾಗುತ್ತದೆ, ಅದೆಷ್ಟೋ ಜನರು ನೇರವಾಗಿಯೂ ವಿಚಾರಿಸುವುದೇನೆಂದರೆ - ಈ ಭೂಗೋಲವನ್ನು ತಿಳಿಯುವುದರಿಂದ ನಮ್ಮ ಆತ್ಮನ ಕಲ್ಯಾಣವು ಹೇಗೆ ಆಗುವುದು? ನಾವು ತ್ರಿಕಾಲಿ ಧ್ರುವ ಭಗವಾನ ಆತ್ಮರಿದ್ದೇವೆ. ತ್ರಿಕಾಲೀ ಆತ್ಮನನ್ನು ತಿಳಿಯುವುದರಿಂದಲೇ ಮುಕ್ತಿಯ ಪ್ರಾಪ್ತಿಯಾಗುತ್ತದೆ ಎಂಬುದೂ ನಮಗೆ ತಿಳಿದಿರುವುದರಿಂದ ನಮಗಂತೂ ಆತ್ಮನನ್ನೇ ತಿಳಿಯುವುದಿದೆ ಅನ್ಯ ಮಾತುಗಳಿಂದ ಯಾವ ಪ್ರಯೋಜನವಿದೆ ?

ಸರಿ, ಆತ್ಮನು ಎಲ್ಲವನ್ನೂ ತಿಳಿಯುವಂಥ ದ್ರವ್ಯವಿದ್ದಾನೆ, ಅವನು ಏನನ್ನು ತಿಳಿಯುತ್ತಾನೆಂಬುದು ತಮಗೆ ಗೊತ್ತಿದೆಯೇನು ? ಆತ್ಮನು ಸ್ವದ್ರವ್ಯ ಮತ್ತು ಪರದ್ರವ್ಯಗಳನ್ನೂ, ಸ್ವಕ್ಷೇತ್ರ ಮತ್ತು ಪರಕ್ಷೇತ್ರವನ್ನೂ, ಸ್ವಕಾಲ ಮತ್ತು ಪರಕಾಲವನ್ನೂ, ಸ್ವಭಾವ ಮತ್ತು ಪರಭಾವವನ್ನೂ ತಿಳಿಯುತ್ತಾನೆ. ಎಲ್ಲವನ್ನೂ ತಿಳಿಯುವುದು ಅವನ

ಸ್ವಭಾವವಿದೆಯೆಂದ ಮೇಲೆ ಸರಿಯಾದುದನ್ನು-ಸತ್ಯವನ್ನು ತಿಳಿಯುವ ಸ್ವಭಾವವಿದೆಯೋ ಅಥವಾ ವಿಪರೀತವಾಗಿ-ಹೇಗಿಲ್ಲವೋ ಹಾಗೆ ತಿಳಿಯುವುದು ಸ್ವಭಾವವಿದೆ ಅಥವಾ ತಿಳಿಯದೇ ಇರುವ ಸ್ವಭಾವವಿದೆ ? ಎಂಬುದರ ನಿರ್ಣಯವನ್ನು ಮಾಡುವುದು ಆವಶ್ಯಕವಿದೆ.

ಮೂರು ಲೋಕದ ಅಸ್ತಿತ್ವದ ಸಂಬಂಧದಲ್ಲಿ, ಅದರ ರಚನೆಯ ಕುರಿತಾಗಿ ತಾವು ನಿಃಶಂಕರಿರುವಿರೇನು? ಜನರು ಹೇಳುತ್ತಾರೆಯೂ ಕೂಡ, 'ಸ್ವರ್ಗ-ನರಕಗಳೆಂಬ ಮಾತುಗಳೆಲ್ಲವೂ ಅಸತ್ಯವಿವೆ-ಕೇವಲ ಕಾಲ್ಪನಿಕವಾಗಿವೆ, ಜನರನ್ನು ಪಾಪದಿಂದ ಬಿಡಿಸಿ ಪುಣ್ಯದಲ್ಲಿ ತೊಡಗಿಸುವ ಸಲುವಾಗಿ ಆಚಾರ್ಯರು ಗ್ರಂಥಗಳನ್ನು ಬರೆದಿದ್ದಾರೆ, ಯಾವನಾದರೂ ಸತ್ತು ಹೋದ ಮನುಷ್ಯನು ಸ್ವರ್ಗದಿಂದ ಅಥವಾ ನರಕದಿಂದ ಪತ್ರ ಬರೆದಿದ್ದಾನೇನು ? - ದೂರವಾಣಿಯ ಮೂಲಕ ಮಾತನಾಡಿದ್ದಾನೇನು ?'

ಯಾರಿಗೆ ಆಸ್ತಿಕ್ಯವಿರುವುದಿಲ್ಲ, ಯಾರಿಗೆ ನಿಃಶಂಕಿತ ಅಂಗವಿಲ್ಲ ಅವರೆಂಥ ಸಮ್ಯಗ್ದೃಷ್ಟಿಗಳು ?

ಪಂ. ಟೋಡರಮಲ್ಲರು ಕೂಡ ತ್ರಿಲೋಕಸಾರದ ಭಾಷಾ ಟೀಕೆಯ ಭೂಮಿಕೆಯಲ್ಲಿ ಹೇಳಿರುವುದೇನೆಂದರೆ - ''ಯಾವನೋ ವಿಚಾರಿಸುತ್ತಾನೆ - 'ಭೂಗೋಲದ ಜ್ಞಾನದಿಂದ ನಮ್ಮ ಕಲ್ಯಾಣವು ಹೇಗೆ ಆಗುವುದು ? ಇದರಲ್ಲಿ ನಿಶ್ಚಯ ಧರ್ಮದ ಅಥವಾ ವ್ಯವಹಾರ ಧರ್ಮದ ಯಾವ ಮಾತೇ ಬರುವುದಿಲ್ಲ ಮತ್ತು ಕಲ್ಯಾಣವಂತೂ ಧರ್ಮದ ಸಾಧನೆ ಮಾಡುವುದರಿಂದ ಆಗುತ್ತದೆ. ಈ ಗ್ರಂಥದಲ್ಲಂತೂ ಕ್ಷೇತ್ರಾದಿಗಳ ಪ್ರಮಾಣ, ಸ್ಥಾನಗಳ ಆಕಾರ, ನರಕಾದಿ ಜೀವಗಳ ಆಯು, ಕಾಯ ಇತ್ಯಾದಿಗಳ ನಿರೂಪಣೆಯಿದೆ; ಎಂದ ಮೇಲೆ ಅದರಿಂದ ಧರ್ಮ ಸಾಧನೆಯು ಹೇಗೆ ತಾನೆ ಆಗುವ ಸಾಧ್ಯತೆಯಿದೆ ?'

ಉತ್ತರ :- ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವೆಂಬ ಧರ್ಮಗಳು ಮೋಕ್ಷದ ಕಾರಣವಿವೆ. ಅಲ್ಲಿ ಸಮ್ಯಕ್ತ್ವವು ಪ್ರಥಮ ಧರ್ಮವಿದೆ. ಸಮ್ಯಕ್ತ್ವದ ಪ್ರಾಪ್ತಿಯು ಸಂಶಯ ದೂರವಾದ ಮೇಲೆ ಆಗುತ್ತದೆ. ಲೋಕದ ಕುರಿತಾಗಿ ಅನ್ಯಮತಿಗಳ ಅನೇಕ ಭ್ರಾಮಕ ಕಲ್ಪನೆಗಳಿವೆ. ಜಿನಮತದಲ್ಲಿ ಹೇಳಿರುವ ವಿಶ್ವದ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳುವುದರಿಂದ ಆಸ್ರವ ಬಂಧಗಳ ಫಲವು ಸ್ವರ್ಗ-ನರಕಾದಿಗಳಿರುವುದು ಮತ್ತು ಅವುಗಳ ವಿಶೇಷಗಳನ್ನು ತಿಳಿಯುವುದಾಗುತ್ತದೆ, ಆಸ್ರವ-ಬಂಧಗಳ ಅಭಾವದಿಂದ ಸಂವರ-ನಿರ್ಜರೆಗಳಾಗುತ್ತವೆ ಹಾಗೂ ಅದರ ಫಲವು ಮೋಕ್ಷವಿದೆಯೆಂಬುದರ ಪರಿಚಯವಾಗುತ್ತದೆ. ಆ ಸಿದ್ಧರುಗಳ ಸ್ಥಾನಾದಿ ವಿಶೇಷಗಳನ್ನು ತಿಳಿದುಕೊಂಡರೆ ತತ್ತ್ವಗಳ ಶ್ರದ್ಧೆಯಲ್ಲಿ ಸಂಶಯವು ಉಳಿಯುವುದಿಲ್ಲ, ಶ್ರದ್ಧೆಯು ದೃಢವಾಗುತ್ತದೆ.

ಸಮ್ಯಗ್ಜ್ಞಾನವು ಎರಡನೆಯ ಧರ್ಮವಿದೆ. ಈ ಶಾಸ್ತ್ರದ ಅಭ್ಯಾಸ ಮಾಡುವುದರಿಂದ ಮಿಥ್ಯಾತ್ವ, ಕಷಾಯ, ಹಿಂಸಾದಿ ಪಾಪ ಕಾರ್ಯಗಳ ವೃದ್ಧಿಯಾಗುವುದಿಲ್ಲ, ಹಾನಿಯೇ ಆಗುತ್ತದೆ. ಆದುದರಿಂದ ಇದರ ಅಭ್ಯಾಸವು ಸ್ವಯಂ ತಾನಾಗಿಯೇ ಸಮ್ಯಗ್ಜ್ಞಾನರೂಪವಿದೆ.

ಮೂರನೆಯದು ಸಮ್ಯಕ್ಚಾರಿತ್ರಧರ್ಮವಿದೆ. ಅದು ಸರಾಗ ಮತ್ತು ವೀತರಾಗ ಭೇದ ಸಹಿತವಿದೆ. ಅಶುಭ ಪ್ರವೃತ್ತಿಯು ಬಿಟ್ಟುಹೋಗಿ ಶುಭ ಪ್ರವೃತ್ತಿಯಾದ ಮೇಲೆ ಸರಾಗ ಚಾರಿತ್ರವಾಗುತ್ತದೆ, ಯಾರು ಈ ಶಾಸ್ತ್ರದಿಂದ ಅಶುಭದ ಫಲವು ನರಕಾದಿಗಳಿವೆ ಮತ್ತು ಶುಭದ ಫಲವು ಸ್ವರ್ಗಾದಿಗಳಿರುವುದನ್ನು ತಿಳಿಯುತ್ತಾರೆ, ಆಗ ಅವರು ಹಿಂಸಾದಿ ಪಾಪಗಳನ್ನು ತೊರೆದು ವ್ರತಾದಿ ಶುಭದಲ್ಲಿ ಪ್ರವರ್ತಿಸಬಹುದಾಗಿದೆ. ಹಾಗೂ ರಾಗ-ದ್ವೇಷಗಳನ್ನು

ಉತ್ಪನ್ನ ಮಾಡುವಂಥ ವಿಚಾರಗಳು ದೂರವಾದ ಮೇಲೆ ವೀತರಾಗ ಚಾರಿತ್ರವಾಗುತ್ತದೆ. ಲೋಕಸ್ವರೂಪದ ವಿಚಾರ ಮಾಡುವುದರಿಂದ ಈ ಪರ್ಯಾಯದ ಕುರಿತಾಗಿ ಯಾವುದೇ ಪ್ರಯೋಜನವು ಸಿದ್ಧವಾಗುವುದಿಲ್ಲವೆಂಬುದು ತಿಳಿದು ಬರುತ್ತದೆ ಮತ್ತು ಪ್ರಯೋಜನದ ವಿನಹ (ಲಾಭ-ಹಾನಿಗಳಿಲ್ಲದೆ ಇರುವಾಗ) ರಾಗ-ದ್ವೇಷಗಳು ಏತಕ್ಕಾಗಿ ಉತ್ಪನ್ನವಾಗುತ್ತವೆ ? ಆದುದರಿಂದ ಸಹಜವಾಗಿಯೇ ವೀತರಾಗ ಭಾವವಾಗುತ್ತದೆ.

'ಇಷ್ಟೊಂದು ವಿಕಲ್ಪಗಳಾದ ಮೇಲೆ ವೀತರಾಗತೆಯು ಹೇಗೆ ಉಳಿಯುವ ಸಾಧ್ಯತೆಯಿದೆ ?' - ಎಂದು ಯಾರಾದರೂ ಕೇಳಿದರೆ ಅದರ 'ಉತ್ತರ- ಜಡವಾಗಿ ಹೋದಮೇಲೆ ವಿಕಲ್ಪಗಳು ದೂರವಾಗುವವು. ಜ್ಞಾನದ ಸ್ವರೂಪವಂತೂ ಸವಿಕಲ್ಪವೇ ಇದೆ. ಯಾವುದಾದರೂ ಜ್ಞೇಯವನ್ನು ಅದು ತಿಳಿದೇ ತಿಳಿಯುವುದು. ಆದುದರಿಂದ ಜ್ಞೇಯವನ್ನು ತಿಳಿಯುವ ರೂಪದ ವಿಕಲ್ಪಗಳಿಂದ ವೀತರಾಗತೆಯ ಅಭಾವವಾಗುವುದಿಲ್ಲ. ಯಾವುದರಿಂದ ರಾಗ-ದ್ವೇಷಗಳು ಉತ್ಪನ್ನವಾಗುತ್ತವೆ ಅಂಥ ವಿಕಲ್ಪಗಳಿಂದ ವೀತರಾಗತೆಯ ಅಭಾವವಾಗುತ್ತದೆ.

ಈ ಶಾಸ್ತ್ರದ ಅಭ್ಯಾಸವನ್ನು ಕಾರ್ಯಕಾರಿಯೆಂದು ತಿಳಿದುಕೊಂಡು ಇದನ್ನು ಓದುವ, ಕಲಿಯುವ, ಆಲಿಸುವ ಮೊದಲಾದ ರೂಪದ ಅಭ್ಯಾಸದಲ್ಲಿ ತತ್ಪರರಾಗಿರುವುದು ಯೋಗ್ಯವಿದೆ.'

ಪಂ. ಟೋಡರಮಲ್ಲರು ಮುಂದೆ ಹೇಳುವುದೇನೆಂದರೆ ''ಈಗ ಈ ಶಾಸ್ತ್ರದ ವಕ್ತಾರ ಮತ್ತು ಶ್ರೋತಾರರು ಎಂಥವರಿರಬೇಕೆಂಬುದನ್ನು ಹೇಳುತ್ತಾರೆ. ಮೊದಲಂತೂ ಅವರು ಜಿನವಚನದಲ್ಲಿ ಶ್ರದ್ಧೆಯುಳ್ಳವರಾಗಿರಬೇಕು. ಒಂದು ವೇಳೆ ಶ್ರದ್ಧೆಯುಳ್ಳವರಿಲ್ಲದಿದ್ದರೆ ಪ್ರತ್ಯಕ್ಷ ಮತ್ತು ಅನುಮಾನದಿಂದ ಅಗೋಚರವಿರುವಂಥ ಮೂರು ಲೋಕದ ಸ್ವರೂಪವನ್ನು ಅವರು ಸತ್ಯವೆಂದು ಹೇಗೆ ತಿಳಿಯಬಲ್ಲರು ? ಅವರದು ಧರ್ಮಬುದ್ಧಿಯಿರಬೇಕಾಗುವುದು. ಧರ್ಮಬುದ್ಧಿಯು ಇಲ್ಲದೇ ಹೋದರೆ ಇದರಲ್ಲಿ ಬೇರೆ ಯಾವ ಶಾರೀರಿಕ ಪ್ರಯೋಜನವಂತೂ ಇಲ್ಲವೆಂದ ಮೇಲೆ ಇದರಲ್ಲಿ ಏತಕ್ಕಾಗಿ ತೊಡಗುವರು ? ಒಂದು ವೇಳೆ ಪಾಂಡಿತ್ಯವನ್ನು ಪ್ರಕಟಪಡಿಸುವ ಸಲುವಾಗಿ ತೊಡಗಿದರೆ ಕಷಾಯ ಭಾವದಿಂದ ಪುನಃ ಕೆಡಕೇ ಆಗುವುದಿದೆ. ಗಣಿತ ಮೊದಲಾದವುಗಳ ಜ್ಞಾನವು ಇರಬೇಕಾಗುವುದು, ಇಲ್ಲದಿದ್ದರೆ ಗ್ರಂಥದ ಅರ್ಥವು ಭಾಸಿತವಾಗಲಾರದು. ಕಥನಗಳ ನಿರ್ಣಯ ಮಾಡಿ ತತ್ತ್ವಜ್ಞಾನವನ್ನು ದೃಢ ಪಡಿಸಿಕೊಳ್ಳುವ ಅಭಿಪ್ರಾಯವು ಅವರದಾಗಿರಬೇಕು. ವಾದ-ವಿವಾದದ ಅಭಿಪ್ರಾಯವು ಇರಬಾರದು. ಒಂದು ವೇಳೆ ಹೀಗೆ ಇರದಿದ್ದರೆ ಗ್ರಂಥದ ಅಭ್ಯಾಸದ ಯಾವ ಫಲವು ತಮ್ಮ ಉಪಯೋಗವನ್ನು ನಿರ್ಮಲ ಮಾಡಿಕೊಳ್ಳುವುದಿದೆ, ಅದರ ಪ್ರಾಪ್ತಿಯು ಅವರಿಗೆ ಆಗಲಾರದು. ಕ್ಷಮೆ, ಸಂತೋಷ ಹಾಗೂ ನ್ಯಾಯ ಪ್ರವೃತ್ತಿಯುಳ್ಳವರಾಗಿರಬೇಕು. ಇಲ್ಲದೇ ಹೋದರೆ ಶೋಭೆಯು ಪ್ರಾಪ್ತವಾಗಲಾರದು.''

ಪಂಡಿತ ಪ್ರವರರು ಇನ್ನೂ ಮುಂದೆ ಹೇಳುತ್ತಾರೆ - ''ಇದು ಜೈನ ಮತದ ಆಗಮವಿದೆ. ಜಿನೇಂದ್ರ ಪ್ರಭುಗಳಿಂದ ಹೇಳಿರುವಂಥದ್ದಿದೆ. ಆದುದರಿಂದ ಪ್ರಮಾಣವಿದೆ. ಇದನ್ನು ಸಿದ್ಧ ಮಾಡುವ ಸಲುವಾಗಿ ಅನ್ಯ ಪ್ರಮಾಣದ ಅವಶ್ಯಕತೆ ಇರುವುದಿಲ್ಲ. ಇದರ ಶ್ರದ್ಧೆ ಮಾಡಿ ಇದರ ಅಭ್ಯಾಸದ ಮೂಲಕ ತತ್ತ್ವಶ್ರದ್ಧೆಯುಳ್ಳವರಾಗಿ ತತ್ತ್ವಜ್ಞಾನವನ್ನು ಹೆಚ್ಚಿಸುತ್ತ ರಾಗಾದಿಗಳನ್ನು ಕಡಿಮೆ ಮಾಡಿಕೊಂಡು ಮೋಕ್ಷಮಾರ್ಗಿಗಳಾಗಬೇಕು ಮತ್ತು ಸಿದ್ಧ ಅವಸ್ಥೆಯನ್ನು ಪ್ರಾಪ್ತ ಮಾಡಿಕೊಳ್ಳಬೇಕು.''

ಧರ್ಮಧ್ಯಾನದ ನಾಲ್ಕು ಭೇದಗಳಲ್ಲಿ ಸಂಸ್ಥಾನ ವಿಚಯ ಧರ್ಮಧ್ಯಾನದಲ್ಲಿಯೂ ಕೂಡ ತ್ರಿಲೋಕ ರಚನೆಯ-ಲೋಕ ಸ್ವರೂಪದ ಚಿಂತನೆಯಿರುತ್ತದೆ. ಕಾರ್ತಿಕೇಯಾನುಪ್ರೇಕ್ಷೆ ಗ್ರಂಥದಲ್ಲಿ ಹನ್ನೆರಡು ಭಾವನೆಗಳ ಅರ್ಥಾತ್ ಅನುಪ್ರೇಕ್ಷೆಗಳ ವರ್ಣನೆಯಿದೆ. ಅದರಲ್ಲಿ ಲೋಕಭಾವನೆ ಅರ್ಥಾತ್ ಲೋಕಾನುಪ್ರೇಕ್ಷೆಯ ವಿಸ್ತೃತ ವರ್ಣನೆಯಿದೆ. ಈ ಭಾವನೆಗಳ ಚಿಂತನೆಯನ್ನು ಮುಖ್ಯರೂಪದಿಂದ ಮುನಿರಾಜರು ಮಾಡುತ್ತಾರೆ, ಸಮ್ಯಗ್ದೃಷ್ಟಿಗಳು ಮಾಡುತ್ತಾರೆ. ಇವುಗಳ ಚಿಂತನೆಯಂತೂ ವೈರಾಗ್ಯವನ್ನು ಉತ್ಪನ್ನ ಮಾಡುವಂಥದ್ದಿದೆ, ಆನಂದವನ್ನು ಉಣ್ಣಿಸುವಂಥದ್ದಿದೆ. ಆರು ಗುರಾಣಿಗಳಲ್ಲಿಯೂ ಹೇಳಿದ್ದಾರೆ, ''ಮೇಲೆ ತಮ್ಮಲಿ ವೀತರಾಗವು, ಢಾಳಿಸಲು ಜನನಿಯ ಸಮಾನದಿ ಮೇಳಿಸಿದ ಅನುಪ್ರೇಕ್ಷೆಗಳ ಚಿಂತನವ ಮಾಡುವರು'' ಒಂದು ವೇಳೆ ಮೂರು ಲೋಕಗಳ ಸ್ವರೂಪದ ಚಿಂತನವು ನಿರರ್ಥಕವಾಗಿರುತ್ತಿದ್ದರೆ, ಮುನಿರಾಜರು ಇದರ ಚಿಂತನವನ್ನು ಏತಕ್ಕಾಗಿ ಮಾಡುತ್ತಾರೆ? ಅವರಿಗೆ ಸಮಯ ಕಳೆಯುವುದು ಕಷ್ಟವಾಗಿತ್ತು ಅದಕ್ಕಾಗಿ ಅವರು ಇಂಥ ದೊಡ್ಡ ಗ್ರಂಥವನ್ನು ಬರೆದಿದ್ದಾರೆ ಎಂಬುದಾಗಿದೆಯೇನು ?

ವಿಕಲ್ಪದ ಹೆಸರು ಹೇಳಿ ತಾವು ಇವುಗಳನ್ನು ತಿಳಿಯಬಯಸುತ್ತಿಲ್ಲ. ಜನರು ಯಾವುದರಿಂದ ಭಯಪಡುತ್ತಿದ್ದಾರೆ ? ವಿಕಲ್ಪಗಳಿಂದ-ಶಾಸ್ತ್ರಗಳ ವಿಕಲ್ಪಗಳಿಂದ ಭಯಪಡುತ್ತಿದ್ದಾರೆ ? ಮನೆ-ಕುಟುಂಬದ ವಿಕಲ್ಪಗಳಿಂದ ಇಲ್ಲ ! ಗಣಿತವನ್ನು, ಕರಣಾನುಯೋಗದ ಅಭ್ಯಾಸವನ್ನು ವಿಕಲ್ಪವೆಂದು ಹೇಳಿ ಬಿಟ್ಟುಕೊಡಲು ಬಯಸುತ್ತಿದ್ದಾರೆ. ಇದು ಅಭಿಪ್ರಾಯದ ದೊಡ್ಡ ದೋಷವಿದೆ. ಒಂದು ವೇಳೆ ಜಡ-ಅಚೇತನವಾಗಿ ಹೋದರೆ ವಿಕಲ್ಪಗಳು ದೂರವಾಗಬಹುದಾಗಿದೆ. ನಾವು ವಿಕಲ್ಪದ ಹೆಸರಿನಿಂದ ಜಡವಾಗಲು ಬಯಸುತ್ತಿದ್ದೇವೆ. ನಮಗೆ ಎಂಥ ಜ್ಞಾನವು ಬೇಕಾಗಿದೆ ? ಜ್ಞೇಯವಿಲ್ಲದ ಜ್ಞಾನವೇನು ? ಪ್ರತಿಬಿಂಬವು ಹೊಳೆಯದಂಥ ಕನ್ನಡಿಯು ಇರುತ್ತದೆಯೇನು ? ಅಯ್ಯಾ ! ಅದನ್ನು ಕನ್ನಡಿಯೆಂದು ಹೇಳುವ ಸಾಧ್ಯತೆಯೇ ಇಲ್ಲ ! ಕನ್ನಡಿಯ ಸ್ವಭಾವವು ಪ್ರತಿಬಿಂಬಿತ ಮಾಡುವುದೇ ಇದೆ, ಅದೇ ರೀತಿ ಜ್ಞಾನದ ಸ್ವಭಾವವು ತಿಳಿಯುವುದಿದೆ. ಅದು ಸಮಸ್ತ ಜ್ಞೇಯಗಳನ್ನು ತಿಳಿದೇ ತಿಳಿಯುತ್ತದೆ.

ಜ್ಞೇಯಗಳನ್ನು ತಿಳಿಯುವುದರಿಂದಂತೂ ಜ್ಞಾನದ್ದೇ ಸಿದ್ಧಿ ಎಂದರೆ ಪ್ರಸಿದ್ಧಿಯಾಗುತ್ತದೆ. ಜ್ಞಾನಿಗಳಿಗಂತೂ ಎಲ್ಲ ಕಡೆಯಲ್ಲೂ ಒಂದು ಜ್ಞಾನವೇ ಜ್ಞಾನವು ಕಂಡು ಬರುತ್ತದೆ, ಏಕೆಂದರೆ ಜ್ಞೇಯಗಳನ್ನು ತಿಳಿಯುವ ರೂಪದ ಪರಿಣತಿಯು ಜ್ಞಾನದ್ದೇ ನಡೆಯುತ್ತಲಿದೆ. ಯಾವುದೇ ವಸ್ತುವನ್ನು ತಿಳಿದರೆ - ಜಡವನ್ನು ತಿಳಿದರೆ, ಶಾಸ್ತ್ರವನ್ನು ತಿಳಿದರೆ, ಅರಹಂತರನ್ನು ತಿಳಿದರೆ, ತಿಳಿಯುವುದರಲ್ಲಂತೂ ಆತ್ಮನೇ ಪ್ರತಿಭಾಸಿತನಾಗುತ್ತಾನೆ. ಯಾವುದೇ ಜ್ಞೇಯವನ್ನು ತಿಳಿಯುವುದರಿಂದ ವೀತರಾಗತೆಯ ಅಭಾವವಾಗುವುದಿಲ್ಲ; ಆದರೆ ಅಲ್ಲಿ ಒಂದು ವೇಳೆ ರಾಗ-ದ್ವೇಷಗಳು ಉತ್ಪನ್ನವಾಗುತ್ತಿದ್ದರೆ ಅಂಥ ವಿಕಲ್ಪಗಳಿಂದ ವೀತರಾಗತೆಯ ಅಭಾವವಾಗುತ್ತದೆ, ನಮಗೆ ಹಾನಿಯಾಗುತ್ತದೆ.

ಲೋಕಾನುಪ್ರೇಕ್ಷೆಯಲ್ಲಿ ಕೇವಲ ಭೂಗೋಲದ-ಭೌಗೋಲಿಕ ಪರಿಸ್ಥಿತಿಗಳ ವರ್ಣನೆಯಿರುವುದಿಲ್ಲ. ಅದರಲ್ಲಿಯೂ ಜೀವಗಳ ಭೇದ, ಅವುಗಳ ಸಂಖ್ಯೆ, ಅವು ಎಲ್ಲಿ ಇರುತ್ತವೆ, ಹೇಗೆ ಇರುತ್ತವೆ, ಯಾವ-ಯಾವ ಜೀವಗಳು ಎಲ್ಲೆಲ್ಲಿ ಜನ್ಮ ಪಡೆಯುತ್ತವೆ, ಮರಣ ಹೊಂದಿ ಯಾರು ಎಲ್ಲಿಗೆ ಹೋಗುತ್ತಾರೆ. ಯಾರು ನಿರ್ವಾಣ ಪಡೆಯುವ ಸಾಧ್ಯತೆಯಿದೆ ? ಮೊದಲಾದ ಬಹಳಷ್ಟು ವಿಷಯಗಳು ಬರುತ್ತವೆ; ಇಲ್ಲಿ ನಾವು ಅವುಗಳನ್ನು

ಕ್ರಮದಿಂದ ನೋಡುತ್ತ ಹೋಗುವುದಿದೆ. ಎಲ್ಲಕ್ಕಿಂತ ಮೊದಲು ಈ ಲೋಕವು ಎಲ್ಲಿದೆಯೆಂಬುದನ್ನು ನೋಡೋಣ. ತ್ರಿಲೋಕಸಾರದ ಮೂರನೆಯ ಗಾಥೆಯು ಈ ಪ್ರಕಾರವಿದೆ,-

ಸವ್ವಾಗಾಸಮಣಂತಂ ತಸ್ಸ ಯ ಬಹುಮಜ್ಝದೇಸಭಾಗಮ್ಹಿ ।
ಲೋಗೋಸಂಖಪದೇಸೋ ಜಗಸೇಢಿಘಣಪ್ಪಮಾಣೋ ಹು ॥

ಕಾರ್ತಿಕೇಯಾನುಪ್ರೇಕ್ಷೆಯ ಗಾಥೆ ೧೧೫ ರಲ್ಲಿ ಹೀಗೆ ಹೇಳಿದ್ದಾರೆ,-

ಸವ್ವಾಗಾಸಮಣಂತಂ ತಸ್ಸ ಯ ಬಹುಮಜ್ಝಸಂಠಿಓ ಲೋಓ ।
ಸೋ ಕೇಣ ವಿ ಣೇಯ ಕಓ, ಣ ಯ ಧರಿಓ ಹರಿಹರಾದೀಹಿಂ ।

ಸರ್ವ ಆಕಾಶವು ಅನಂತ ಪ್ರದೇಶಿಯಿದೆ, ಅದರ ಅತ್ಯಂತ ಮಧ್ಯಭಾಗದಲ್ಲಿ ಲೋಕವಿದೆ. ಈ ಲೋಕವು ಅಸಂಖ್ಯ ಪ್ರದೇಶಿಯಿದೆ-ಘನಸ್ವರೂಪವಿದೆ ಎಂದರೆ ಉದ್ದ-ಅಗಲ-ದಪ್ಪರೂಪದಿಂದ ಘನವಿದೆ. ಅದರ ಪ್ರಮಾಣವು ಜಗತ್ ಶ್ರೇಣಿಯ ಘನ ಪ್ರಮಾಣವಿದೆ - ಅದರ ಚರ್ಚೆಯನ್ನು ಮುಂದೆ ಮಾಡಲಾಗುವುದು.

ಲೋಗೋ ಅಕಿಟ್ಟಿಮೋ ಖಲು ಅಣಾಇಣಿಹಣೋ ಸಹಾವಣಿವ್ವತ್ತೋ।
ಜೀವಾ ಜೀವೇಹಿಂ ಪುಢೋ ಸವ್ವಾಗಾಸವಯವೋ ಣಿಚ್ಚೋ ॥

ಜೈನಾಚಾರ್ಯರುಗಳ ವಿಶೇಷತೆಯು ಎಂಥದ್ದಿದೆಯೆಂದರೆ ಜಿನಮತದ ಕಥನ ಮಾಡುತ್ತ ಅದೇ ಕಥನದ ಮೂಲಕ ಅವರು ಪರಮತಗಳ-ಅನ್ಯಮತೀಯರ ಭ್ರಾಮಕ ಕಲ್ಪನೆಗಳ ಖಂಡನೆ-ನಿರಾಕರಣೆ ಮಾಡುತ್ತಾರೆ. ಲೋಕವು ಇದೆಯೆಂದು ಹೇಳುವುದರಿಂದ ಅದರ ಅಸ್ತಿತ್ವದ ಸಿದ್ಧಿಯಾಗುತ್ತದೆ ಮತ್ತು ಶೂನ್ಯವಾದಿಗಳ ನಿರಾಕರಣೆ ಯಾಗುತ್ತದೆ. ಒಬ್ಬ ಬ್ರಹ್ಮನೇ ಇದ್ದಾನೆ, ಬೇರೆ ಏನೂ ಇಲ್ಲವೆಂದು ಹೇಳುವಂಥವರ ಮತದ ಖಂಡನೆಯಾಗಿ ಹೋಗುತ್ತದೆ. ಅಕೃತ್ರಿಮವಿದೆ ಯಾರೂ ಅದನ್ನು ಮಾಡಿಲ್ಲವೆಂದು ಹೇಳುವುದರಿಂದ ಈಶ್ವರ ಕರ್ತಾವಾದದ ನಿರಾಕರಣೆಯಾಗುತ್ತದೆ. ಯಾರೂ ಧಾರಣ ಮಾಡಿಲ್ಲವೆಂದು ಹೇಳುವುದರಿಂದ ಈ ವಿಶ್ವವನ್ನು ಶೇಷನಾಗವು ಧಾರಣ ಮಾಡಿದೆಯೆನ್ನುವಂಥ ಮತದ ಖಂಡನೆಯಾಗುತ್ತದೆ. ಅನಾದಿ ನಿಧನವಿದೆ ಎಂದು ಹೇಳುವುದರಿಂದ ಈ ಸೃಷ್ಟಿಯ ಸಂಹಾರವಾಗುವುದೆಂಬ ಮನ್ನಣೆಯ ನಿರಾಕರಣೆಯಾಗುತ್ತದೆ. ಜೀವ ಮತ್ತು ಅಜೀವ ದ್ರವ್ಯಗಳಿಂದ ಈ ಲೋಕವು ತುಂಬಿಕೊಂಡಿದೆಯೆಂದು ಹೇಳುವುದರಿಂದ ಎಲ್ಲ ಆರು ದ್ರವ್ಯಗಳ ಅಸ್ತಿತ್ವದ ಸಿದ್ಧಿಯಾಗುತ್ತದೆ, ಲೋಕವನ್ನು ಮಾಯಾಮಯವೆಂದು ಹೇಳುವಂಥವರ ನಿರಾಕರಣೆಯಾಗುತ್ತದೆ. ಎಲ್ಲವನ್ನೂ ಆಕಾಶದ ಅವಯವವೆಂದು ಹೇಳುವುದರಿಂದ ಅಲೋಕಾಕಾಶದ ಸಿದ್ಧಿಯಾಗುತ್ತದೆ. ನಿತ್ಯ ಶಾಶ್ವತವೆಂದು ಹೇಳುವುದರಿಂದ ಕ್ಷಣಿಕವಾದದ ಖಂಡನೆಯಾಗುತ್ತದೆ. ಆಕಾಶದ ಎಷ್ಟು ಕ್ಷೇತ್ರದಲ್ಲಿ ಧರ್ಮದ್ರವ್ಯ , ಅಧರ್ಮದ್ರವ್ಯಗಳು ವ್ಯಾಪ್ತವಿವೆ, ಎಲ್ಲಿ ಜೀವ ಮತ್ತು ಪುದ್ಗಲ ಹಾಗೂ ಕಾಲಾಣುಗಳು ಕಂಡು ಬರುತ್ತವೆ ಅಷ್ಟು ಕ್ಷೇತ್ರವನ್ನು ಲೋಕವೆಂದು ಹೇಳುತ್ತಾರೆ, ಏಕೆಂದರೆ ಲೋಕದಲ್ಲಿ ಈ ಆರು ದ್ರವ್ಯಗಳು ಲೋಕ್ಯತೇ ಎಂದರೆ ಅವಲೋಕನೆಯಲ್ಲಿ ಬರುತ್ತವೆ, ಕಂಡು ಬರುತ್ತವೆ.

ಲೋಕಾಕಾಶದ ಯಾವ ಚಿತ್ರವನ್ನು ನಾವು ನೋಡುತ್ತೇವೆ ಅಂಥದು ಇದು ಕಾಗದದಂತೆ ಚಪ್ಪಟೆಯಾಗಿಲ್ಲ.

ನಾವಂತೂ ಅದರಲ್ಲಿ ಒಂದು ಆಶೀರ್ವಾದ ಕೊಡುತ್ತಿರುವಂಥ ಹಸ್ತ ಹಾಗೂ ಕೆಳಗೆ 'ಪರಸ್ಪರೋಪಗ್ರಹೋ ಜೀವಾನಾಮ್' ಬರೆದಿರುವಂಥದನ್ನು ಕಾಣುತ್ತೇವೆ. ಹಾಗಾದರೆ ಲೋಕಾಕಾಶವು ಹೀಗಿದೆಯೇನು ?

ಲೋಕವಂತೂ ಘನಸ್ವರೂಪವಿದೆ-ಮೂರು ಭುಜಗಳುಳ್ಳದ್ದಿದೆ. ಅದರ ಎತ್ತರವು ೧೪ ರಾಜೂ, ಅಗಲವು ದಕ್ಷಿಣೋತ್ತರದಲ್ಲಿ ಸರ್ವತ್ರ ೭ ರಾಜೂ ಮತ್ತು ಪೂರ್ವ-ಪಶ್ಚಿಮ ದಿಶೆಗಳಲ್ಲಿ ಹೀನಾಧಿಕವಿದೆ. ಕೆಳಗೆ ೭ ರಾಜೂ, ಮಧ್ಯದಲ್ಲಿ ೧ ರಾಜೂ, ಮೇಲೆ ೩ $\frac{೧}{೨}$ (ಮೂರೂವರೆ) ರಾಜೂ ಹೋದ ಮೇಲೆ ಅಗಲ ೫ ರಾಜೂ ಮತ್ತು ಕೊನೆಯಲ್ಲಿ ಪುನಃ ೧ ರಾಜೂ ಆಗಿ ಬಿಡುತ್ತದೆ. ಪೂರ್ವ - ಪಶ್ಚಿಮ ಈ ನಾಲ್ಕೂ ಸ್ಥಾನಗಳ ಸರಾಸರಿಯು (೭+೧+೫+೧) ೪= $\frac{೧೪}{೪}$ = $\frac{೭}{೨}$ ರಾಜೂ. ಈಗ ಆ ಮೂರು ಭುಜಗಳ ಉದ್ದ, ಅಗಲ, ಹಾಗೂ ದಪ್ಪಗಳ ಗುಣಾಕಾರ ಮಾಡುವುದರಿಂದ ನಮಗೆ ಲೋಕಾಕಾಶದ ಘನಫಲವು ದೊರಕುತ್ತದೆ. ೧೪ ರಾಜೂ X ೭ ರಾಜೂ X $\frac{೧೪}{೪}$ ರಾಜೂ ಅರ್ಥಾತ್ ೭ ರಾಜೂ X ೭ ರಾಜೂ X ೭ ರಾಜೂ = ೩೪೩ ಘನರಾಜೂ.

೭ ರಾಜುವನ್ನು ಜಗತ್ ಶ್ರೇಣಿಯೆಂದು ಹೇಳುತ್ತಾರೆ ಮತ್ತು ಲೋಕವನ್ನು ಜಗತ್ ಘನವೆಂದು ಹೇಳುತ್ತಾರೆ.

ಇಲ್ಲಿ ಆ ರಾಜೂ ಎಂದರೆ ಎಷ್ಟು ಅಳತೆಯೆಂಬ ಪ್ರಶ್ನೆಯುಂಟಾಗುವುದು. ಇದರ ಅಳತೆಯ ಪ್ರಮಾಣವಂತೂ ತುಂಬ ದೊಡ್ಡದಿದೆ. ಒಂದು ರಾಜೂವಿನಲ್ಲಿ ಅಸಂಖ್ಯಾತ ಯೋಜನಗಳಿರುತ್ತವೆ. ಒಂದು ಯೋಜನವು ನಾಲ್ಕು ಹರದಾರಿಯದಿರುತ್ತದೆ, ಆದರೆ ಇಲ್ಲಿ ಮಹಾಯೋಜನದಿಂದ ಗಣಿಸುವುದಿದೆ ಅದು ಐನೂರು ಪಟ್ಟು ದೊಡ್ಡದಿರುತ್ತದೆ ಅರ್ಥಾತ್ ೨೦೦೦ ಹರದಾರಿ ಅಥವಾ ೪೦೦೦ ಮೈಲಿಗಳದ್ದು ಒಂದು ಯೋಜನವಾಗುತ್ತದೆ.

ವರ್ತಮಾನದಲ್ಲಿ ಯಾವ ನಮ್ಮ ಅವಕಾಶಯಾನಗಳು ಹೊರಟಿವೆ ಅವುಗಳ ವೇಗವು ಅಥವಾ ಸೂರ್ಯನ ದೂರವನ್ನು (ಅಂತರವನ್ನು)ನಾವು ಪ್ರಕಾಶ ವೃಷ್ಟಿಗಳಲ್ಲಿ ಅಳೆಯುತ್ತೇವೆ. ಯಾವ ಪ್ರಕಾರ ಸೂರ್ಯನು ಎಂಟು ಪ್ರಕಾಶ ನಿಮಿಷ ದೂರದಲ್ಲಿದ್ದಾನೆ ಎನ್ನಲಾಗುವುದು ಆದರೆ ತ್ರಿಲೋಕಸಾರದಲ್ಲಂತೂ ಅವನ ಅಂತರವನ್ನು ೮೦೦೦ ಯೋಜನವೆಂದು ಹೇಳಿದ್ದಾರೆ. ಒಂದು ರಾಜೂ ಅದು ಜಗತ್ ಶ್ರೇಣಿಯ ಏಳನೆಯ ಒಂದು ಭಾಗವಿದೆ ಏಕೆಂದರೆ ೭ ರಾಜೂವನ್ನು ಜಗತ್ ಶ್ರೇಣಿಯೆಂದು ಹೇಳುತ್ತಾರೆ. ಯಾರಿಗೆ ಗಣಿತದಲ್ಲಿ ಅಭಿರುಚಿಯಿದೆ ಅವರ ಸಲುವಾಗಿ ಇದರ ಅಳತೆಯು ಈ ಕೆಳಗಿನಂತಿದೆ-

ಅದ್ಧಾಪಲ್ಯದ ಅರ್ಧಚ್ಛೇದಗಳ ಅಸಂಖ್ಯಾತದ ಒಂದು ಭಾಗವನ್ನು ಮಾಡಿ ಅಷ್ಟು ಬಾರಿ ಘನಾಂಗುಲದೊಂದಿಗೆ ಗುಣಾಕಾರ ಮಾಡಿದರೆ ಜಗತ್‌ಶ್ರೇಣಿಯ ಪ್ರಮಾಣವು ಬರುತ್ತದೆ. ಯಾವುದೋ ಸಂಖ್ಯೆಯನ್ನು ಎಷ್ಟು ಬಾರಿ ಎರಡರಿಂದ ಭಾಗಿಸಬಹುದಾಗಿದೆಯೋ ಅದನ್ನು ಆ ಸಂಖ್ಯೆಯ ಅರ್ಧಚ್ಛೇದವೆಂದು ಹೇಳುತ್ತಾರೆ. ಹೇಗೆಂದರೆ ೧೬ ಸಂಖ್ಯೆಯ ಅರ್ಧಚ್ಛೇದವು ೪ ಇದೆ. ಇಲ್ಲಿ ಅಂಕಸಂದೃಷ್ಟಿ ಎಂದರೆ ಕಾಲ್ಪನಿಕ ಸಂಖ್ಯೆಯನ್ನು ಮನ್ನಿಸಿಕೊಂಡು ತಿಳಿಸಿಕೊಡುತ್ತಾರೆ. ಒಂದು ವೇಳೆ ನಾವು ಪಲ್ಯವನ್ನು ೧೬ ಎಂದು ಮನ್ನಿಸಿದರೆ ಅದರ ಅರ್ಧಚ್ಛೇದ ಬಾರಿ ಅರ್ಥಾತ್ ನಾಲ್ಕು ಬಾರಿ ಪಲ್ಯವನ್ನು ಬರೆದು ಪರಸ್ಪರ ಗುಣಿಸುವುದರಿಂದ

ಸೂಚ್ಯಂಗುಲ ಅಥವಾ ಅಂಗುಲವು ಬರುತ್ತದೆ ೧೬ X ೧೬ X ೧೬ X ೧೬ = ೬೫೫೩೬ ಇದನ್ನೇ ಪಣ್ಣಿಭೆಯೆಂದು ಹೇಳುತ್ತಾರೆ. ಅಂಗುಲದ ಘನವು ಘನಾಂಗುಲವಿದೆ ಆದುದರಿಂದ ಪಣ್ಣಿಭೆಯ ಘನವು ಘನಾಂಗುಲವೆಂದು ಮನ್ನಿಸಲಾಗಿದೆ. ಪಲ್ಯ (೧೬)ರ ಅರ್ಧಚ್ಛೇದ (೪)ಗಳ ಅಸಂಖ್ಯಾತದ ಒಂದು ಭಾಗವನ್ನು ಎರಡೆಂದು ಮನ್ನಿಸೋಣ. ಇಷ್ಟು ಬಾರಿ ಪಣ್ಣಿಭೆಯ ಘನ ಬರೆದು ಪರಸ್ಪರ ಗುಣಿಸುವುದರಿಂದ ಪಣ್ಣಿಭೆಯ ಘನ X ಪಣ್ಣಿಭೆಯ ಘನವು ಬರುವುದು ನಾವು ೧೬ರನ್ನು ಪಲ್ಯವೆಂದು ಮನ್ನಿಸಿದರೆ ಆಗ ಈ ಜಗತ್ ಶ್ರೇಣಿಯ ಪ್ರಮಾಣವು ಬರುತ್ತದೆ. ಯಥಾರ್ಥದಲ್ಲಂತೂ ಪಲ್ಯವು ಮಧ್ಯಮ ಅಸಂಖ್ಯಾತಾಸಂಖ್ಯಾತದ ಒಂದು ಭೇದವಿದೆ. ಜಗತ್ ಶ್ರೇಣಿ ಅರ್ಥಾತ್ ಏಳು ರಾಜೂ ಇದನ್ನು ಏಳು ಭಾಗ ಮಾಡಿದ ಮೇಲೆ ಒಂದು ರಾಜುವಿನ ಪ್ರಮಾಣವು ಬರುತ್ತದೆ. ಯಥಾರ್ಥದಲ್ಲಿ ಈ ಪ್ರಮಾಣವು ಎಷ್ಟು ದೊಡ್ಡದಿರಬಹುದು - ಸ್ವಲ್ಪ ಯೋಚಿಸಬೇಕು.

ವಾಸ್ತವದಲ್ಲಿ ಪಲ್ಯ X ಪಲ್ಯ X ಪಲ್ಯ ..... (ಪಲ್ಯದ ಅರ್ಧಚ್ಛೇದ ಬಾರಿ) = ಸೂಚ್ಯಂಗುಲ.

ಸೂಚ್ಯಂಗುಲ X ಸೂಚ್ಯಂಗುಲ X ಸೂಚ್ಯಂಗುಲ = ಘನಾಂಗುಲ

ಘನಾಂಗುಲ X ಘನಾಂಗುಲ X ಘನಾಂಗುಲ....(ಪಲ್ಯದ ಅರ್ಧಚ್ಛೇದಗಳ ಅಸಂಖ್ಯಾತದ ಒಂದು ಭಾಗ ಬಾರಿ) = ಜಗತ್ ಶ್ರೇಣಿ.

ಜಗತ್‌ಶ್ರೇಣಿ ೭ = ೧ ರಾಜೂ

ಈ ಲೋಕದ ಮೂರು ಭಾಗಗಳಿವೆ ಅವುಗಳನ್ನು ನಾವು ಮೂರು ಲೋಕ-ತ್ರಿಭುವನ-ಮೂಲೋಕವೆಂಬ ಹೆಸರಿನಿಂದ ತಿಳಿಯುತ್ತೇವೆ, ಅವುವೇ ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕಗಳಿವೆ. ಪೂರ್ವ-ಪಶ್ಚಿಮ ಮಧ್ಯದೊಳಗೆ ಎಲ್ಲಿ ಒಂದು ರಾಜೂ ಅಗಲವಿದೆ ಅಲ್ಲಿಂದ ಕೆಳಗೆ ೭ ರಾಜೂ ಅಧೋಲೋಕವಿದೆ, ಮೇಲೆ ಏಳು ರಾಜೂ ಊರ್ಧ್ವಲೋಕವಿದೆ, ಮಧ್ಯದಲ್ಲಿ ಪೂರ್ವ-ಪಶ್ಚಿಮ ಒಂದು ರಾಜೂ ಮತ್ತು ದಕ್ಷಿಣೋತ್ತರ ಏಳು ರಾಜೂ ಮಧ್ಯಲೋಕವಿದೆ. ಅದರ ಎತ್ತರವು ಒಂದು ಲಕ್ಷ ಮತ್ತು ನಲವತ್ತು ಯೋಜನವಿದೆ ಅದುವೇ ಸುದರ್ಶನ ಮೇರುವಿನ ಎತ್ತರವಿದೆ - ಭೂಮಿಯ ಒಳಗೆ ಒಂದು ಸಾವಿರ ಯೋಜನ ಮತ್ತು ಮೇಲೆ ೯೯೦೦೦ ಯೋಜನ ಹಾಗೂ ನಲವತ್ತು ಯೋಜನದ್ದು ಅದರ ಚೂಲಿಕೆಯಿದೆ.

ಮೇರುತಲದಿಂದ ಏಳು ರಾಜೂ ಎತ್ತರ ಊರ್ಧ್ವಲೋಕವಿದೆ ಮತ್ತು ಏಳು ರಾಜೂ ಕೆಳಗೆ ಅಧೋಲೋಕವಿದೆ.

೩೪೩ ಘನರಾಜೂ ಪ್ರಮಾಣದ ಲೋಕಾಕಾಶದಲ್ಲಿ ಅಸಂಖ್ಯಾತ ಪ್ರದೇಶಗಳಿದ್ದು ಅವನ್ನು ಲೋಕ ಪ್ರಮಾಣ ಅಸಂಖ್ಯಾತವೆಂದು ಹೇಳುತ್ತಾರೆ. ಅಸಂಖ್ಯಾತದ ಪ್ರಕಾರಗಳು ಕೂಡ ಅಸಂಖ್ಯಾತ ಇವೆ. ಆವಲೀ, ಪಲ್ಯ, ಅಂಗುಲ, ಜಗತ್‌ಶ್ರೇಣಿ ಮೊದಲಾದವು ಅಸಂಖ್ಯಾತದ ಭೇದಗಳೇ ಇವೆ. ಹೇಗೆ ಲಕ್ಷಾಧೀಶ್ವರರ ಭೇದಗಳು ಲಕ್ಷಾಂತರವಿವೆ ಹಾಗೆಂದು ತಿಳಿಯುವುದು. ಒಂದು ಲಕ್ಷ ರೂಪಾಯಿಗಳು ಯಾರ ಹತ್ತಿರವಿವೆ ಅವರು ಲಕ್ಷಾಧೀಶರಿದ್ದಾರೆ. ಇನ್ನು ಅದರಲ್ಲಿ ಒಂದೊಂದು ಪೈಸೆಯನ್ನು ಅಧಿಕ ಮಾಡುತ್ತ ಹೋದರೆ ಅವರು ಕೂಡ ಲಕ್ಷಾಧೀಶರೆಂದು ಕರೆಸಿಕೊಳ್ಳುತ್ತಾರೆ. ತೊಂಭತ್ತೊಂಭತ್ತು ಲಕ್ಷ, ತೊಂಭತ್ತೊಂಭತ್ತು ಸಾವಿರದಾ ಒಂಭೈನೂರಾ ತೊಂಭತ್ತೊಂಭತ್ತು ರೂಪಾಯಿ ಮತ್ತು ತೊಂಭತ್ತೊಂಭತ್ತು ಪೈಸೆಯವರೆಗೆ ಎಲ್ಲ ಭೇದಗಳು ಲಕ್ಷಾಧೀಶನ

ಭೇದಗಳಿವೆ ಅಥವಾ ಲಕ್ಷಾಂತರ ಶಬ್ದದ ಭೇದಗಳಿವೆ. ಹಾಗೆ ಅಸಂಖ್ಯಾತದೊಳಗಿಂದ ಲೋಕಾಕಾಶವುಳ್ಳ ಅಸಂಖ್ಯಾತವನ್ನು ತಿಳಿಯುವುದು.

ಒಂದು ಜೀವ ದ್ರವ್ಯದ ಪ್ರದೇಶಗಳು ಕೂಡ ಅಸಂಖ್ಯಾತವಿರುತ್ತವೆ. ಎಷ್ಟು ಅಸಂಖ್ಯಾತವೆಂದರೆ ಒಂದು ಲೋಕಪ್ರಮಾಣ ಅಸಂಖ್ಯಾತವಿರುತ್ತವೆ. ಪ್ರತಿಯೊಂದು ಜೀವದ ಪ್ರದೇಶಗಳು ಲೋಕಾಕಾಶ ಪ್ರಮಾಣ ಅಸಂಖ್ಯಾತವಿರುತ್ತವೆ, ಅಂಥ ಅನಂತ ಜೀವಗಳು ಲೋಕಾಕಾಶದಲ್ಲಿ ಇರುತ್ತವೆ. ಅವೆಲ್ಲವುಗಳಲ್ಲಿ ಸಂಕೋಚ-ವಿಸ್ತಾರ ಶಕ್ತಿಯಿರುವ ಕಾರಣ ಹಾಗೂ ಪರಸ್ಪರ ಏಕಕ್ಷೇತ್ರಾವಗಾಹರೂಪದಿಂದ ಇರುವಂಥವುಗಳಿರುವುದರಿಂದ ಅನಂತ ಜೀವಗಳು ಇದೇ ಒಂದು ಲೋಕದಲ್ಲಿ ವಾಸಮಾಡಿಕೊಂಡಿವೆ.

೩೪೩ ಘನರಾಜೂ ವ್ಯಾಪಿಸುವಂಥದು ಯಾವುದಾದರೂ ಜೀವವಿರುತ್ತದೆಯೇನು ?

ಅಹುದು, ಕೇವಲೀ ಸಮುದ್ಘಾತದಲ್ಲಿ ಯಾವಾಗ ಲೋಕಪೂರಣ ಸಮುದ್ಘಾತ ಅವಸ್ಥೆಯಾಗುತ್ತದೆ, ಆಗ ಆ ಜೀವದ ಸರ್ವಪ್ರದೇಶಗಳು ಇಡೀ ಲೋಕಾಕಾಶದಲ್ಲಿ ಹರಡಿ ನಿಲ್ಲುತ್ತವೆ - ೩೪೩ ಘನರಾಜೂ ಪ್ರಮಾಣವಾಗಿ ಬಿಡುತ್ತವೆ.

ಹಾಗಾದರೆ ಜೀವಗಳ ಹೊರತಾಗಿಯೂ ಈ ಲೋಕದಲ್ಲಿ ಬೇರೆ ಏನಾದರೂ ಇದೆಯೇನು ? ಏಕಿಲ್ಲ ಅನಂತಾನಂತ ಪುದ್ಗಲಗಳು ಕೂಡ ಇವೆ. ಎಷ್ಟು ಜೀವಗಳಿವೆ ಅವುಗಳಿಂದ ಅನಂತಾನಂತಗುಣಿತ ಪುದ್ಗಲ ದ್ರವ್ಯಗಳು ಈ ಲೋಕದಲ್ಲಿ ಇರುತ್ತವೆ, ಲೋಕದ ಹೊರಗೆ ಅಲ್ಲ. ಪುದ್ಗಲಗಳ ಪರಮಾಣುಗಳು ಅನಂತವಿವೆ, ಎರಡು ಪರಮಾಣುಗಳ ಸ್ಕಂಧಗಳು ಅನಂತವಿವೆ, ಮೂರು ಪರಮಾಣುಗಳ ಸ್ಕಂಧಗಳು ಅನಂತವಿವೆ, ಕ್ರಮದಿಂದ ಹೆಚ್ಚುತ್ತ ಸಂಖ್ಯಾತ, ಅಸಂಖ್ಯಾತ ಮತ್ತು ಅನಂತ ಪರಮಾಣುಗಳ ಸ್ಕಂಧಗಳು ಲೋಕದಲ್ಲಿ ಅನಂತಾನಂತ ಕಂಡು ಬರುತ್ತವೆ. ಲೋಕಾಕಾಶದ ಒಂದೊಂದು ಪ್ರದೇಶದಲ್ಲಿ ಇಂಥ ಅನಂತ ಸ್ಕಂಧಗಳು ಏಕಕ್ಷೇತ್ರಾವಗಾಹ ರೂಪದಿಂದ ಕಂಡು ಬರುತ್ತವೆ. ಇಡೀ ಲೋಕಾಕಾಶ ಪ್ರಮಾಣ ಆಕಾರವುಳ್ಳ ಸಂಪೂರ್ಣ ಲೋಕಾಕಾಶದಲ್ಲಿ ಯಾವುದು ವ್ಯಾಪ್ತವಿದೆ ಮತ್ತು ಯಾವುದು ಅನಂತಾನಂತ ಪರಮಾಣುಗಳ ಸ್ಕಂಧವಿದೆ, ಅದರ ಹೆಸರು ಮಹಾಸ್ಕಂಧವಿದೆ. ಈ ಮಹಾಸ್ಕಂಧದಲ್ಲಿ ಎಲ್ಲ ಜೀವಗಳು ವಾಸ ಮಾಡಿಕೊಂಡಿವೆ - ಎಲ್ಲ ಪರಮಾಣು, ಎಲ್ಲ ಸ್ಕಂಧಗಳು ಕೂಡ ಕಂಡು ಬರುತ್ತವೆ. ಆರೂ ದ್ರವ್ಯಗಳು ಒಂದು ಇನ್ನೊಂದಕ್ಕೆ ಅವಗಾಹನ ನೀಡುತ್ತವೆ; ಆದಾಗ್ಯೂ ಪ್ರತಿಯೊಂದು ದ್ರವ್ಯವು ತನ್ನ ತನ್ನ ಸತ್ತಾದಲ್ಲಿ (ತನ್ನ ಸ್ವಚತುಷ್ಟಯದಲ್ಲಿ) ಇರುತ್ತದೆ.

ಇದೇ ಲೋಕಾಕಾಶ ಪ್ರಮಾಣ ಪೂರ್ಣವಾಗಿ ಒಂದು ಧರ್ಮದ್ರವ್ಯ ಮತ್ತು ಒಂದು ಅಧರ್ಮದ್ರವ್ಯವಿದೆ. ಲೋಕಾಕಾಶದ ಪ್ರದೇಶಗಳಂತೂ ಇದ್ದೇ ಇವೆ. ಇದರಿಂದ ಹೊರಗೆ ಎಲ್ಲ (ಹತ್ತೂ) ದಿಕ್ಕುಗಳಲ್ಲಿ ಅನಂತಾನಂತವಾಗಿ ಹರಡಿರುವಂಥ ಆಕಾಶವಿದೆ ಅದನ್ನು ನಾವು ಅಲೋಕಾಕಾಶವೆಂದು ಹೇಳುತ್ತೇವೆ. ಅಲ್ಲಿ ಅನ್ಯ ಯಾವ ದ್ರವ್ಯವೂ ಕಂಡೂ ಬರುವುದಿಲ್ಲ. ಲೋಕಾಕಾಶದ ಒಂದೊಂದು ಪ್ರದೇಶದ ಮೇಲೆ ಒಂದೊಂದು ಕಾಲದ್ರವ್ಯವು ಸ್ಥಿತವಿದೆ. ಒಂದೊಂದು ಪ್ರದೇಶಿಯಾದ ಅಸಂಖ್ಯ ಕಾಲದ್ರವ್ಯಗಳಿವೆ. ಎಷ್ಟು ಲೋಕದ ಪ್ರದೇಶಗಳಿವೆ ಅಷ್ಟೇ ಕಾಲದ್ರವ್ಯಗಳಿವೆ. ಆದುದರಿಂದ ಕಾಲದ್ರವ್ಯಗಳ ಸಂಖ್ಯೆಯು ಲೋಕಪ್ರಮಾಣ ಅಸಂಖ್ಯಾತವಿದೆ.

ಪ್ರಶ್ನೆ :- ಲೋಕದ ಆಕಾರವು ಬದಲಾಗುತ್ತಿರಬಹುದಲ್ಲ ?

ಉತ್ತರ :- ಇಲ್ಲ, ಅನಾದಿಯಿಂದ ಲೋಕದ ಆಕಾರವು ಹೇಗಿದೆಯೋ ಹಾಗೇ ಇದೆ.

ಪ್ರಶ್ನೆ :- ಹಾಗಾದರೆ ಲೋಕಾಕಾಶದಲ್ಲಿ ಪರಿವರ್ತನೆಯಾಗುವುದಿಲ್ಲವೇನು ?

ಉತ್ತರ :- ಆಗುತ್ತದೆ, ಏಕೆಂದರೆ ಆರು ದ್ರವ್ಯಗಳ ಸಮೂಹದಿಂದ ಲೋಕವಾಗಿದೆ. ಯಾವ ಪ್ರಕಾರ ದ್ರವ್ಯಗಳು ನಿತ್ಯವಿವೆ, ಆ ಪ್ರಕಾರ ಲೋಕವು ಕೂಡ ನಿತ್ಯವಿದೆ ಮತ್ತು ದ್ರವ್ಯಗಳು ಹೇಗೆ ಪರಿಣಮನಶೀಲವಿವೆ ಹಾಗೆ ಲೋಕವು ಕೂಡ ಪರಿಣಮನಶೀಲವಿದೆ. ಅದರಿಂದ ಲೋಕವೆಂದು ಹೇಳುವುದರಿಂದ ಆರು ದ್ರವ್ಯಗಳೆಂದು ತಿಳಿದುಕೊಳ್ಳಬೇಕಾಗುವುದು. ಆದಾಗ್ಯೂ ಇಲ್ಲಿ ಭೌಗೋಲಿಕ ರಚನೆಯ ಮುಖ್ಯತೆಯಿಂದ ಈಗ ಚರ್ಚೆ ಮಾಡಲಾಗುವುದು.

ಇಲ್ಲಿ ಲೋಕದ ಮೂರು ವಿಭಾಗಗಳಿವೆ - ಅವುಗಳನ್ನು ಊರ್ಧ್ವಲೋಕ, ಮಧ್ಯಲೋಕ ಮತ್ತು ಅಧೋಲೋಕವೆಂದು ಹೇಳುತ್ತಾರೆ. ತಾವು ತ್ರಸನಾಳಿಯೆಂಬ ಶಬ್ದವನ್ನು ಆಲಿಸಿರಬಹುದು. ಅದನ್ನು ತ್ರಸನಾಡಿಯೆಂದು ಕೂಡ ಹೇಳುತ್ತಾರೆ. ಹಾಗಾದರೆ ತ್ರಸನಾಳಿ ಎಂದರೇನು ? - ಎಲ್ಲಿ ತ್ರಸ ಜೀವಗಳು ಇರುತ್ತವೆ - ಕಂಡು ಬರುತ್ತವೆ ಅದು ತ್ರಸನಾಳಿಯಿದೆ. ಅನಂತ ಜೀವಗಳು ಲೋಕದಲ್ಲಿ ಸರ್ವತ್ರ ಇರುತ್ತವೆ; ಆದರೆ ತ್ರಸ ಜೀವಗಳು ಅರ್ಥಾತ್ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಅಸಂಜ್ಞಿ ಮತ್ತು ಸಂಜ್ಞಿ ಪಂಚೇಂದ್ರಿಯ ಜೀವಗಳು ಎಲ್ಲಿ ಕಂಡು ಬರುತ್ತವೆ ಅದನ್ನು ತ್ರಸನಾಳಿಯೆಂದು ಹೇಳುತ್ತಾರೆ. ಯಾವುದನ್ನು ತ್ರಸವೆಂದು ಹೇಳುವುದು ? ಹಲನ-ಚಲನೆ ಮಾಡುವಂಥವುಗಳನ್ನೇನು ? - ಇಲ್ಲ, ತ್ರಸನಾಮ ಕರ್ಮದ ಉದಯವು ಯಾವ ಜೀವಗಳಿಗೆ ಇರುತ್ತದೆ ಅವುಗಳನ್ನು ತ್ರಸ ಜೀವಗಳೆನ್ನುತ್ತಾರೆ.

ಸ್ಥಾವರ ಅರ್ಥಾತ್ ಐದೂ ಪ್ರಕಾರದ ಏಕೇಂದ್ರಿಯ ಜೀವಗಳು ಎಂದರೇನೆ ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ ಮತ್ತು ವನಸ್ಪತಿಕಾಯಿಕ ಜೀವಗಳನ್ನು ಸ್ಥಾವರವೆಂದು ಹೇಳಲಾಗುತ್ತದೆ. ಇವೆಲ್ಲವೂ ಏಕೇಂದ್ರಿಯವಿವೆ. ಸ್ಥಾವರ ಅರ್ಥಾತ್ ಎಲ್ಲ ಏಕೇಂದ್ರಿಯ ಜೀವಗಳು ಸಂಪೂರ್ಣ ಲೋಕದಲ್ಲಿ - ೩೪೩ ಘನರಾಜೂ ಕ್ಷೇತ್ರದಲ್ಲಿ ಇರುತ್ತವೆ - ಅದರಲ್ಲಿ ಒತ್ತೊತ್ತಾಗಿ ತುಂಬಿಕೊಂಡಿವೆ ಮತ್ತು ತ್ರಸ ಜೀವಗಳು ಕೇವಲ ತ್ರಸನಾಳಿಯಲ್ಲಿಯೇ ಇರುತ್ತವೆ. ಈಗ ತ್ರಸನಾಳಿಯು ಎಲ್ಲಿದೆ ಮತ್ತು ಹೇಗಿದೆಯೆಂಬುದನ್ನು ನೋಡೋಣ.

ತ್ರಸನಾಳಿಯು ಹದಿನಾಲ್ಕು ರಾಜೂ ಎತ್ತರವುಳ್ಳ ಲೋಕಾಕಾಶದ ಸರಿಯಾಗಿ ಮಧ್ಯಭಾಗದಲ್ಲಿ ಮೇಲಿನಿಂದ ಕೆಳಗಿನವರೆಗೆ ಅಷ್ಟೇ-ಹದಿನಾಲ್ಕು ರಾಜೂ ಎತ್ತರವುಳ್ಳದ್ದಿದೆ. ಲೋಕಾಕಾಶದ ಮೇಲಿನ ಭಾಗದಿಂದ ನೋಡಿದರೆ ಅದು ಮಧ್ಯದಲ್ಲಿದೆ. - ಪೂರ್ವ ಪಶ್ಚಿಮ ಒಂದು ರಾಜೂ, ದಕ್ಷಿಣೋತ್ತರ ಒಂದು ರಾಜೂ ಹೀಗೆ ಚೌಕಾಕಾರ ರೂಪವಿದೆ. ಇದರಲ್ಲಿಯೇ ತ್ರಸ ಜೀವಗಳು ಅರ್ಥಾತ್ ದ್ವೀಂದ್ರಿಯಾದಿ ಜೀವಗಳು ವಾಸಿಸುತ್ತವೆ. ಇಲ್ಲಿ ಏಕೇಂದ್ರಿಯ ಜೀವಗಳೂ ಇರುತ್ತವೆ. ಅವಂತೂ ಸಂಪೂರ್ಣ ಲೋಕದಲ್ಲಿ ಇರುತ್ತವೆ. ಇಡೀ ಲೋಕದಲ್ಲಿ ಅವುಗಳದೇ ರಾಜ್ಯವಿದೆ.

ಪ್ರಶ್ನೆ :- ದೇವಗಳು ಎಲ್ಲಿ ಇರುತ್ತಾರೆ ? ಊರ್ಧ್ವಲೋಕದಲ್ಲಿ ಇರುತ್ತಾರೇನು - ಎಂದರೆ ಕೇವಲ ಊರ್ಧ್ವಲೋಕದಲ್ಲಿಯೇ ದೇವಗಳಿರುತ್ತಾರೆಂದು ತಿಳಿಯಬೇಕಲ್ಲವೇನು ?

ಉತ್ತರ :- ದೇವಗಳಂತೂ ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕ ಮೂರೂ ಸ್ಥಾನಗಳಲ್ಲಿ ಇರುತ್ತಾರೆ. ಅಧೋಲೋಕದಲ್ಲಿ ಭವನವಾಸಿಗಳು, ವ್ಯಂತರರು ಇರುತ್ತಾರೆ. ಮಧ್ಯಲೋಕದಲ್ಲಿ ದ್ವೀಪ ಸಮುದ್ರಗಳ

ಮೇಲೆ ವ್ಯಂತರರ ಆವಾಸಗಳಿವೆ. ಜ್ಯೋತಿಷಿಗಳ ವಿಮಾನಗಳಂತೂ ಮಧ್ಯಲೋಕದಲ್ಲಿಯೇ ಇವೆ. ಊರ್ಧ್ವಲೋಕದಲ್ಲಿಯಂತೂ ಅನ್ಯ ವೈಮಾನಿಕ ದೇವಗಳು ಇದ್ದೇ ಇರುತ್ತಾರೆ. ಆದುದರಿಂದ ದೇವಗಳು ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕದಲ್ಲಿ ಇರುತ್ತಾರೆಂದು ತಿಳಿಯುವುದು.

ನಾರಕಿಗಳು ಎಲ್ಲಿರುತ್ತಾರೆ ?- ನಾರಕಿಗಳು ಅಧೋಲೋಕದಲ್ಲಿ ಇರುತ್ತಾರೆ. ದೇವಗಳಿರಲಿ ಅಥವಾ ನಾರಕಿಗಳಿರಲಿ, ಯಾರೂ ತ್ರಸನಾಳಿಯ ಹೊರಗೆ ಇರುವುದೇ ಇಲ್ಲ.

ತಿರ್ಯಂಚಗಳು ಎಲ್ಲಿರುತ್ತವೆ ? - ತಿರ್ಯಂಚಗಳು ಸಂಪೂರ್ಣ ಲೋಕದಲ್ಲಿ ಇರುತ್ತವೆ. ಏಕೆಂದರೆ ಏಕೇಂದ್ರಿಯ ಜೀವಗಳು ಕೂಡ ತಿರ್ಯಂಚವೇ ಇವೆ. ಆದರೆ ವಿಕಲೇಂದ್ರಿಯಗಳು ಎಲ್ಲಿರುತ್ತವೆಯೆಂದು ಯಾರಾದರೂ ಕೇಳಿದರೆ, ಅವು ಕೇವಲ ಕರ್ಮಭೂಮಿಯಲ್ಲಿಯೇ ಇರುತ್ತವೆ. ಎರಡೂವರೆ ದ್ವೀಪದಲ್ಲಿ ಎಲ್ಲಿ ಕರ್ಮಭೂಮಿಗಳಿವೆ ಅಲ್ಲಿ ವಿಕಲೇಂದ್ರಿಯಗಳಿರುತ್ತವೆ ಹಾಗೂ ಅಂತಿಮ ಸ್ವಯಂಭೂರಮಣ ಸಮುದ್ರದಲ್ಲಿ ಮತ್ತು ಸ್ವಯಂಭೂರಮಣ ದ್ವೀಪದ ಪರಭಾಗದಲ್ಲಿ ಕೂಡ ಆ ಜೀವಗಳು ಇರುತ್ತವೆ. ಇದೆಲ್ಲದರ ಚರ್ಚೆಯು ವಿಸ್ತಾರದಿಂದ ಮುಂದೆ ಬರುವುದಿದೆ. ಈಗ ನಮ್ಮ ಕ್ಷೇತ್ರವು ಎಲ್ಲಿದೆಯೆಂಬುದನ್ನು ನೋಡುವುದಿದೆ. ಮನುಷ್ಯರು ಎರಡೂವರೆ ದ್ವೀಪದಲ್ಲಿ ಇರುತ್ತಾರೆ. ನಲವತ್ತೈದು ಲಕ್ಷ ಯೋಜನ ವ್ಯಾಸವುಳ್ಳ ಯಾವ ಗೋಲಾಕಾರದ ಕ್ಷೇತ್ರವಿದೆ - ಮಧ್ಯಲೋಕದ ತೀರ ಮಧ್ಯಭಾಗದಲ್ಲಿದೆ ಅಲ್ಲಿ ಮನುಷ್ಯರ ವಾಸವಿದೆ.

ನಾಲ್ಕೂ ಗತಿಗಳ ಅಪೇಕ್ಷೆಯಿಂದ ಮನುಷ್ಯರ ಕ್ಷೇತ್ರವೇ ಅತ್ಯಂತ ಚಿಕ್ಕದಿದೆ. ಮನುಷ್ಯರ ಸಲುವಾಗಿ ಎಲ್ಲವೂ ಪರಿಮಿತವಿದೆ- ಅಲ್ಪವಿದೆ. ಮನುಷ್ಯರ ಸಂಖ್ಯೆ , ಅವರ ಆಯು, ಅವರು ಇರುವಂಥ ಕ್ಷೇತ್ರ , ನಿರಂತರ ಮನುಷ್ಯಭವ ದೊರಕುವ ಕಾಲ ಇವೆಲ್ಲವೂ ತೀರ ಕಡಿಮೆಯಿವೆ. ಮನುಷ್ಯಭವದ ಪ್ರಾಪ್ತಿಯಾಗುವಂಥ ಭಾವಗಳ ಆಗುವಿಕೆಯೂ ಅತ್ಯಂತ ದುರ್ಲಭವಿದೆ. ಪಂ. ಟೋಡರಮಲ್ಲರು ಹೇಳುತ್ತಾರೆ - ಮನುಷ್ಯ ಭವವಂತೂ ದ್ರವ್ಯ , ಕ್ಷೇತ್ರ , ಕಾಲ, ಭಾವದಿಂದ ಅತ್ಯಂತ ದುರ್ಲಭವಿದೆ. ಹಾಗಾದರೆ ಇಂಥ ಮನುಷ್ಯಭವದ ಪ್ರಾಪ್ತಿ ಮಾಡಿಕೊಳ್ಳುವ ಸಲುವಾಗಿ ಈಗ ನಾವು ಏನು ಮಾಡಬೇಕಾಗುವುದು ?

ಅಯ್ಯಾ ಸೋದರನೇ ! ಈಗ ನಾವು ಮನುಷ್ಯರಿದ್ದೇವೆ, ಇದರ ಸಲುವಾಗಿ ಏನನ್ನೂ ಮಾಡಬೇಕಾಗಿಲ್ಲ. ದುರ್ಲಭವಿರುವಂಥ ಮನುಷ್ಯಭವವು ನಮಗೆ ದೊರಕಿದೆ ಅದರ ಸದುಪಯೋಗವನ್ನು ಹೆಚ್ಚು ಹೆಚ್ಚಾಗಿ ಮಾಡಿಕೊಳ್ಳಬೇಕು-ಲಾಭಾನ್ವಿತರಾಗಬೇಕು. ಶಾಸ್ತ್ರಾಭ್ಯಾಸದ ಮುಖ್ಯತೆಯಂತೂ ಇಲ್ಲಿಯೇ ಇದೆ.

ಮುಂದೆ ಉತ್ಸರ್ಪಿಣಿ, ಅವಸರ್ಪಿಣಿಯ ಮಾತು ಬರುವುದು. ಅಸಂಖ್ಯಾತ ಅವಸರ್ಪಿಣಿ-ಉತ್ಸರ್ಪಿಣಿ ಕಾಲಗಳು ಕಳೆದ ಮೇಲೆ ಒಂದು ಹುಂಡಾವಸರ್ಪಿಣಿ ಕಾಲವು ಬರುತ್ತದೆ ಅದು ನಿಕೃಷ್ಟಕಾಲವಿದೆ. ಅದರಲ್ಲಿಯೂ ಕೂಡ ಇದು ಪಂಚಮ ಕಾಲವಿದೆ. ಇಂಥ ನಿಕೃಷ್ಟದಿಂದ ನಿಕೃಷ್ಟಕಾಲದಲ್ಲಿ ನಮಗೆ ಅತ್ಯಂತ ಉತ್ಕೃಷ್ಟವಿರುವಂಥ ಜಿನವಾಣಿಯು ದೊರಕಿದೆ ಆದುದರಿಂದ ನಾವು ಮಹಾಭಾಗ್ಯಶಾಲಿಗಳಿದ್ದೇವೆ. ಆದರೆ ನಾವು ಯಾವಾಗ ಲಾಭಾನ್ವಿತರಾಗುವೆವು ಆಗಲೇ ಭಾಗ್ಯಶಾಲಿಗಳೆನಿಸಿಕೊಳ್ಳುತ್ತೇವೆ. ಜಿನವಾಣಿಯ ಅಭ್ಯಾಸದಿಂದ ನಮ್ಮ ಕಲ್ಯಾಣಮಾಡಿಕೊಂಡರೆ, ನಮ್ಮ ಮನುಷ್ಯ ಭವವನ್ನು ಸಫಲ ಮಾಡಿಕೊಂಡರೆ ಮಾತ್ರ ಭಾಗ್ಯಶಾಲಿಗಳೆನಿಸುತ್ತೇವೆ.

ಇನ್ನು ಹೇಗೆ ಎರಡೂವರೆ ದ್ವೀಪದ ಹೊರಗೆ ಯಾವ ಮನುಷ್ಯರು ಹೋಗುವ ಸಾಧ್ಯತೆಯಿಲ್ಲ ಹಾಗೆಯೇ ತ್ರಸನಾಳಿಯ ಹೊರಗೆ ಯಾವುದಾದರೂ ತ್ರಸ ಜೀವವು ಹೋಗುವ ಸಾಧ್ಯತೆಯಿದೆಯೋ ಅಥವಾ ಹೋಗುವ ಸಾಧ್ಯತೆಯಿಲ್ಲವೆಂಬುದನ್ನು ನೋಡೋಣ.

ಕೇವಲೀ ಭಗವಂತರು ಸಮುದ್ಘಾತ ಮಾಡಿದರೆ ಆಗ ಅವರ ಆತ್ಮಪ್ರದೇಶಗಳು ಸಂಪೂರ್ಣ ಲೋಕಾಕಾಶದಲ್ಲಿ ಹರಡುತ್ತವೆಯೆಂಬುದು ಸರಿಯಿದೆ. ಅವರನ್ನು ಹೊರತು ಪಡಿಸಿ ಬೇರೆ ಯಾವುದಾದರೂ ತ್ರಸ ಜೀವವು ತ್ರಸನಾಳಿಯ ಹೊರಗೆ ಹೋಗುತ್ತದೆಯೆಂದು ಹೇಳುವುದಾದರೆ ಅದು ಈ ಪ್ರಕಾರವಿದೆ –

ತ್ರಸನಾಳಿಯ ಹೊರಗೆ ಮಾರಣಾಂತಿಕ ಸಮುದ್ಘಾತ ಮಾಡುವಂಥ ತ್ರಸ ಜೀವದ ಪ್ರದೇಶಗಳು ಅಲ್ಲಿಯವರೆಗೆ ಹರಡುತ್ತವೆ. ಮರಣದ ಸನ್ಮುಖವಾಗಿರುವ ಯಾವುದೋ ತ್ರಸ ಜೀವವು ಎಂದರೆ ಅದು ಸತ್ತು ತ್ರಸನಾಳಿಯ ಹೊರಗೆ ಏಕೇಂದ್ರಿಯದಲ್ಲಿ ಉತ್ಪನ್ನವಾಗುವಂಥದಿದ್ದರೆ ಅದರ ಆತ್ಮ ಪ್ರದೇಶಗಳು ಮೂಲ ಶರೀರವನ್ನು ಬಿಡದೇ ತಾನು ಉತ್ಪನ್ನವಾಗುವ ಸ್ಥಾನದವರೆಗೆ ಅಂತರ್ಮುಹೂರ್ತ ಪರ್ಯಂತಕಾಲ ಹರಡಿಕೊಂಡು ಉಳಿಯುತ್ತವೆ. ಆ ಸಮಯದಲ್ಲಿ ಇನ್ನೂ ತ್ರಸದ ಆಯುವು ನಡೆದಿರುತ್ತದೆ. ಆದುದರಿಂದ ಅದು ತ್ರಸನಾಳಿಯ ಹೊರಗೆ ಕಂಡು ಬರುತ್ತದೆಯೆಂದು ಹೇಳಬಹುದಾಗಿದೆ.

ಅಲ್ಲದೆ ತ್ರಸನಾಳಿಯ ಹೊರಗಿನ ಯಾವುದೋ ಏಕೇಂದ್ರಿಯ ಜೀವವು ಸತ್ತು ತ್ರಸವಾದರೆ ಅದು ಎಲ್ಲಿಯವರೆಗೆ ವಿಗ್ರಹಗತಿಯಲ್ಲಿ ತ್ರಸನಾಳಿಯ ಹೊರಗೆ ಇರುತ್ತದೆ ಆಗ ಅದನ್ನು ತ್ರಸಜೀವವೆಂದೇ ಹೇಳಬೇಕಾಗುವುದು. ಏಕೆಂದರೆ ವಿಗ್ರಹಗತಿಯ ಮೊದಲನೆಯ ಸಮಯದಿಂದಲೇ ಅದರ ತ್ರಸ ಪರ್ಯಾಯವು ಆರಂಭವಾಗಿ ಹೋಗುತ್ತದೆ.

ಹದಿನಾಲ್ಕು ರಾಜೂ ಪ್ರಮಾಣ ಲೋಕದ ಮಧ್ಯದಲ್ಲಿ ತ್ರಸನಾಳಿಯ ಶಿಖರದ ಮೇಲೆ ಎಂದರೆ ಮೇಲ್ಭಾಗದಲ್ಲಿ ನಲವತ್ತೈದು ಲಕ್ಷ ಯೋಜನ ವ್ಯಾಸವುಳ್ಳ ಸಿದ್ಧಶಿಲೆಯಿದೆ. ಅಲ್ಲಿ ಸಿದ್ಧ ಭಗವಂತರು ವಿರಾಜಮಾನರಿದ್ದಾರೆ. ಅದು ಎಷ್ಟು ಉದ್ದಗಲವಿದೆ, ಸಿದ್ಧ ಭಗವಂತರು ಎಲ್ಲಿದ್ದಾರೆ, ಸಿದ್ಧಶಿಲೆಯ ಒಳಗೆ ಇದ್ದಾರೋ ಅಥವಾ ಹೊರಗೆ ಇದ್ದಾರೆಯೆಂಬುದರ ಚರ್ಚೆಯನ್ನು ಮುಂದೆ ಮಾಡಲಾಗುವುದು.

ಈ ಪ್ರಕಾರ ನಾವು ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕವೆಂಬ ಮೂರು ಲೋಕಗಳ ಹಾಗೂ ಯಾವುದನ್ನು ತ್ರಸನಾಳಿ ಎನ್ನುತ್ತಾರೆ ಎಂಬುದರ ಕುರಿತಾಗಿ ತಿಳಿದುಕೊಂಡೆವು. ಈಗ ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಪ್ರಥಮ ತೀರ್ಥಂಕರರಿಗೆ ವಂದನೆ ಸಲ್ಲಿಸೋಣ.

ಶ್ರೀ ಸೀಮಂಧರ ಭಗವಂತರಿಗೆ ಜಯವಾಗಲಿ

★★★★★

೨. ಎಂಟು ಪೃಥ್ವಿಗಳು, ವಾತವಲಯ

ಪ್ರಾರಂಭದ ಮಂಗಲಾಚರಣೆಯಲ್ಲಿ ಮೂಲೋಕದ ಮುಕುಟಮಣಿ ಎಂದು ಹೇಳಲಾಗಿದೆ. ಮುಕುಟಮಣಿ ಯೆಂದು ಹೇಳಿರುವುದು ಸಿದ್ಧರ ಸಲುವಾಗಿ ಇದೆ. ಸಿದ್ಧರನ್ನು ಮುಕುಟ ಮಣಿಯೆಂದೇಕೆ ಹೇಳಿದ್ದಾರೆ? ಸಿದ್ಧಭಗವಂತರು ಮೂರು ಲೋಕಗಳ ಮಸ್ತಕಮಣಿಯಿದ್ದಾರೆ ಅರ್ಥಾತ್ ಲೋಕದ ಎಲ್ಲಕ್ಕಿಂತ ಮೇಲ್ಭಾಗದಲ್ಲಿ ವಿರಾಜಮಾನರಿದ್ದಾರೆ.

ಲೋಕದ ಮೂರು ವಿಭಾಗ - ಲೋಕದ ಸ್ವರೂಪವನ್ನು ತಿಳಿಯುವ ಸಲುವಾಗಿ ಅದರಲ್ಲಿ ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕವೆಂದು ಮೂರು ವಿಭಾಗ ಮಾಡಲಾಗುತ್ತದೆ. ಹೇಗೆ ಆಕಾಶ ದ್ರವ್ಯದಲ್ಲಿ ಎರಡು ಭಾಗಗಳಿಲ್ಲ, ಆಕಾಶವು ಅಖಂಡವಾಗಿ ಒಂದೇ ಇದೆ. ಆದರೆ ನಮಗೆ ತಿಳಿಯುವ ಸಲುವಾಗಿ ಎಲ್ಲಿ ಕೇವಲ ಆಕಾಶದ್ರವ್ಯವೇ ಕಂಡು ಬರುತ್ತದೆ, ಅದು ಅಲೋಕಾಕಾಶ ಮತ್ತು ಆಕಾಶದ ಎಷ್ಟು ಭಾಗದಲ್ಲಿ ಬೇರೆ ಐದು ದ್ರವ್ಯಗಳೂ ಕಂಡು ಬರುತ್ತವೆ ಅಂಥ, ಆಕಾಶದ ಮಧ್ಯದಲ್ಲಿ ಅದರ ಅನಂತದ ಒಂದು ಭಾಗ ಪ್ರಮಾಣವನ್ನು ಲೋಕಾಕಾಶವೆಂದು ಎರಡು ವಿಭಾಗಗಳನ್ನು ಹೇಳಲಾಗುತ್ತದೆ. ಲೋಕವೆಂದು ಹೇಳಿದರೆ ಅಲ್ಲಿ ಆರೂ ದ್ರವ್ಯಗಳ ಸಮಾವೇಶವಿದೆ ಮತ್ತು ಲೋಕಾಕಾಶವಂತೂ ಕೇವಲ ಆಕಾಶದ್ರವ್ಯದ ಭಾಗವಿದೆ. ಇಲ್ಲಿ ನಾವು ಲೋಕದ ಚರ್ಚೆ ಮಾಡುತ್ತಿದ್ದೇವೆ.

ಹಿಂದಿನ ಪಾಠದಲ್ಲಿ ನಾವು ಕಲಿತುಕೊಂಡಿರುವ ವಿಷಯದಲ್ಲಿ ಉದ್ಭವವಾಗುವ ಒಂದು ಪ್ರಶ್ನೆಯೆಂದರೆ ಲೋಕದ ಮಧ್ಯದಲ್ಲಿ ಎಂಟು ಪ್ರದೇಶಗಳಿವೆಯೆಂದು ಹೇಳುತ್ತಾರೆ, ಹಾಗೆಂದರೇನು ?

ನೋಡಿರಿ, ಲೋಕಾಕಾಶವು ಆಕಾಶದ್ರವ್ಯದ ತೀರ ಮಧ್ಯಭಾಗದಲ್ಲಿದೆ ಎಂದರೆ ಸಂಪೂರ್ಣ ಆಕಾಶ ದ್ರವ್ಯದ ಮಧ್ಯದಲ್ಲಿರುವುದೇ ಲೋಕಾಕಾಶದ ಮಧ್ಯವಿದೆ. ಆದರೆ ಈ ಮಧ್ಯಭಾಗವು ಒಂದು ಬಿಂದು - ಒಂದು ಪ್ರದೇಶವಿಲ್ಲ ಆದರೆ ಇಲ್ಲಿ ಮಧ್ಯದಲ್ಲಿ ಎಂಟು ಪ್ರದೇಶಗಳು ಬರುತ್ತವೆ. ಯಾವುದಾದರೂ ಸಮಸಂಖ್ಯೆಯ ಮಧ್ಯವನ್ನು ನೋಡಹೋದರೆ ಅದು ಒಂದು ಸಂಖ್ಯೆ (೧) ಇರುವುದಿಲ್ಲ, ಪೂರ್ಣಾಂಕಗಳಲ್ಲಿ ಹೇಳುವುದಾದರೆ ಎರಡು ಸಂಖ್ಯೆಯು (೨) ಮಧ್ಯದಲ್ಲಿ ಬರುವುದು. ಒಂದು ಕೈಯ ಐದು ಬೆರಳುಗಳಲ್ಲಿ ಮಧ್ಯದ್ದು ಯಾವುದೆಂದು ಕೇಳಿದರೆ ಮಧ್ಯದ ಬೆರಳೆಂದು ಹೇಳಬಹುದಾಗಿದೆ. ಆದರೆ ಎರಡೂ ಕೈಗಳನ್ನು ಕೂಡಿಸಿದಾಗ ಹತ್ತು ಬೆರಳುಗಳಲ್ಲಿನ ಮಧ್ಯದ ಬೆರಳು ಯಾವುದೆಂದು ಕೇಳಿದರೆ-ಎರಡೂ ಅಂಗೈಗಳನ್ನು ಪರಸನ್ಮುಖಮಾಡಿ ಕೇಳಿದರೆ ಆಗ ಎರಡೂ ಕೈಗಳ ಎರಡು ಹೆಬ್ಬೆರಳುಗಳು ಮಧ್ಯದಲ್ಲಿವೆ, ಏಕೆಂದರೆ ಇಲ್ಲಿ ಸಮಸಂಖ್ಯೆಯಿದೆ. ಒಂದು ವೇಳೆ ಚೌಕಾಕಾರದ ಕಾಗದದ ಮೇಲಿನ ಮಧ್ಯವನ್ನು ಹೇಳಹೋದರೆ ಎರಡೂ ಕಡೆಗೆ ಸಮಸಂಖ್ಯೆಯಿದ್ದ ಮೇಲೆ ಮಧ್ಯದಲ್ಲಿ ನಾಲ್ಕು ಬಿಂದುಗಳು ಬರುತ್ತವೆ ಮತ್ತು ಒಂದು ವೇಳೆ ಘನವಾಗಿದ್ದರೆ ಅದರ ಮಧ್ಯದಲ್ಲಿ ಎಂಟು ಬಿಂದುಗಳು ಬರುತ್ತವೆ.

ಲೋಕವು ಮೂರು ಭುಜಗಳುಳ್ಳದ್ದಿದೆ - ಘನವಿದೆ ಮತ್ತು ಅದರ ಮೂರೂ ಭುಜಗಳು ಸಮಸಂಖ್ಯೆಯಲ್ಲಿರುತ್ತವೆ. ಎತ್ತರವು ೧೪ ರಾಜೂ ಇದೆ. ಇದು ಸಮಸಂಖ್ಯೆಯಿದೆ. ಏಳು ರಾಜೂದಲ್ಲಿ ೭ ಅಂಕಿಯನ್ನು ನೋಡಬಾರದು, ಅದು ಒಂದು ಜಗತ್ ಶ್ರೇಣಿಯಿದೆ. ಅದು ಕೂಡ ಸಮ ಸಂಖ್ಯೆಯಿದೆ ಎಂದರೆ

ವರ್ಗರೂಪದ ಸಂಖ್ಯೆಯಿದೆ. ವರ್ಗಧಾರೆಗಳು ಸಮಸಂಖ್ಯೆಯಿವೆ. ಆದುದರಿಂದ ಮೂರು ಕಡೆಗಳಿಂದ ಎರಡು-ಎರಡು-ಎರಡು ೨ X ೨ X ೨ ಒಟ್ಟು ಎಂಟು ಪ್ರದೇಶಗಳಾಗುತ್ತವೆ. 

ಮಧ್ಯದ ಇವು ಎಂಟು ಪ್ರದೇಶಗಳು ಸುಮೇರು ಪರ್ವತದ ಕೆಳಭಾಗದಲ್ಲಿ ಕಂಡು ಬರುತ್ತವೆ. ತ್ರಸನಾಳಿಯ ಮಧ್ಯಭಾಗ ಅಥವಾ ಮಧ್ಯಲೋಕದ ಜಂಬೂದ್ವೀಪದ ಮಧ್ಯದಲ್ಲಿ ಸುಮೇರು ಪರ್ವತವು ೧ ಲಕ್ಷ ೪೦ ಯೋಜನ ಉತ್ಸೇಧವುಳ್ಳದ್ದಿದೆ. ಭೂಮಿಯ ಒಳಗೆ ಒಂದು ಸಾವಿರ ಯೋಜನದ್ದು ಇದಕ್ಕೆ ತಳಹದಿಯಿದೆ ಮತ್ತು ಅಲ್ಲಿಯ ಯಾವ ಮಧ್ಯಭಾಗವಿದೆ ಅದು ಲೋಕದ ಮಧ್ಯವಿದೆ. ಕೇವಲೀ ಸಮುದ್ಘಾತದ ಸಮಯದಲ್ಲಿ ಆ ಜೀವದ ಮಧ್ಯಪ್ರದೇಶಗಳು ಕೂಡ ಲೋಕದ ಇವೇ ಮಧ್ಯಪ್ರದೇಶಗಳಲ್ಲಿ ಬಂದು ಬಿಡುತ್ತವೆ. ಆ ಕೇವಲಿಗಳು ಎಲ್ಲಿ ಬೇಕಾದರೂ ವಿರಾಜಮಾನರಿರಲಿ-ಭರತ ಕ್ಷೇತ್ರದ ಸಮ್ಮೇದಗಿರಿಯ ಮೇಲೆ ಸ್ಥಿತರಿರಲಿ ಅಥವಾ ವಿದೇಹ ಕ್ಷೇತ್ರದಲ್ಲಿರಲಿ ಅಥವಾ ಐರಾವತ ಕ್ಷೇತ್ರದಲ್ಲಿರಲಿ ಆದರೆ ಒಂದು ವೇಳೆ ಆ ಜೀವನು ಸಮುದ್ಘಾತ ಮಾಡಿದನೆಂದರೆ ಸಂಪೂರ್ಣ ಲೋಕದಲ್ಲಿ ಅವನ ಪ್ರದೇಶಗಳು ಹರಡಿಕೊಳ್ಳುತ್ತವೆ. ಲೋಕಾಕಾಶದ ಒಂದೊಂದು ಪ್ರದೇಶದ ಮೇಲೆ ಆ ಜೀವದ ಒಂದೊಂದು ಪ್ರದೇಶಗಳು ಸ್ಥಿತವಾಗುತ್ತವೆ. ಇದೇ ಕಾರಣದಿಂದ ಆ ಜೀವದ ಮಧ್ಯದ ಪ್ರದೇಶಗಳು ಲೋಕಾಕಾಶದ ಮಧ್ಯದ ಮೇಲೆಯೇ ಬರುತ್ತವೆ. ಇದುವೇ ವಾಸ್ತವಿಕತೆಯಿದೆ ಮತ್ತು ಉದ್ಭವಿತ ಪ್ರಶ್ನೆಯ ಉತ್ತರವಿದೆ.

ಶಾಸ್ತ್ರದಲ್ಲಿ ಸಂಖ್ಯೆಯನ್ನು ತಿಳಿಸಿಕೊಡುವ ಸಲುವಾಗಿ ಬರುವಂಥ ಬಹಳಷ್ಟು ಶಬ್ದಗಳಿವೆ. ಅವನ್ನು ಉಪಮಾನವೆಂದು ಹೇಳುತ್ತಾರೆ. ಉಪಮೆಯನ್ನು ಕೊಟ್ಟು ಅಲ್ಲಿ ಅಳತೆಯನ್ನು ತಿಳಿಸಿಕೊಡಲಾಗುತ್ತದೆ ಅಂತೆಯೇ ಅದು ಉಪಮಾನವಿದೆ. ಹೇಗೆಂದರೆ - ಆವಲಿ, ಪಲ್ಯ, ಸಾಗರ, ಅಂಗುಲ, ಘನಾಂಗುಲ, ಜಗತ್ ಶ್ರೇಣಿ, ಜಗತ್ ಪ್ರತರ, ಜಗತ್ ಘನ. ಪಲ್ಯವೆಂದರೇನು ? ಹೊಂಡದ ಉಪಮೆಯನ್ನಿತ್ತು ಅಸಂಖ್ಯಾತವನ್ನು ತಿಳಿಸಿದ್ದಾರೆ. ಒಂದು ಯೋಜನ ಅಗಲ (ವ್ಯಾಸವುಳ್ಳ) ಮತ್ತು ಒಂದು ಯೋಜನ ಆಳವಾದ ಒಂದು ತಗ್ಗು-ಹೊಂಡವನ್ನು ತೋಡುವುದು. ಅದನ್ನು ಉತ್ತಮ ಭೋಗಭೂಮಿಯಲ್ಲಿ ಜನಿಸಿದ ಏಳು ದಿನದವರೆಗಿನ ಮೇಕೆಗಳ ಕೂದಲುಗಳ ಅಗ್ರಭಾಗಗಳಿಂದ ಅಗ್ರ ಎಂದರೆ ಅದರಲ್ಲಿ ಪುನಃ ವಿಭಾಗವಾಗುವ ಸಾಧ್ಯತೆಯಿರದಂಥ ಅಂತಿಮ ಭಾಗದಷ್ಟು ಚಿಕ್ಕ ಚಿಕ್ಕ ರೋಮ ಖಂಡಗಳಿಂದ ಒತ್ತೊತ್ತಾಗಿ ತುಂಬಿ ನೆಲಸಮಗೊಳಿಸುವುದು. ಅದಕ್ಕೆ ಈ ಭರತಕ್ಷೇತ್ರದ ಮೇಕೆಗಳ ಕೂದಲು ನಡೆಯುವುದಿಲ್ಲ - ಉಪಯೋಗಕ್ಕೆ ಬರುವುದಿಲ್ಲ ಏಕೆಂದರೆ ಉತ್ತಮ ಭೋಗಭೂಮಿಯ ಮೇಕೆಗಳ ಕೂದಲಿಗಿಂತ ಇಲ್ಲಿಯ ಮೇಕೆಯ ಕೂದಲು ಐದು ನೂರಾ ಹನ್ನೆರಡು ಪಟ್ಟು ದಪ್ಪಗಿರುತ್ತದೆ. ನೂರು ವರ್ಷಗಳ ನಂತರ ಒಂದರಂತೆ ಆ ರೋಮಖಂಡಗಳನ್ನು ತೆಗೆಯುತ್ತ ಹೋಗಬೇಕು. ಯಾವಾಗ ಆ ಹೊಂಡವು ಬರಿದಾಗುತ್ತದೆ, ಅದರ ಅಷ್ಟು ಸಮಯ (ಕಾಲ)ವನ್ನು ಒಂದು ವ್ಯವಹಾರ ಪಲ್ಯವೆಂದು ಹೇಳುತ್ತಾರೆ. ಅದನ್ನು ಅಸಂಖ್ಯಾತ ಕೋಟಿ ವರ್ಷಗಳ ಸಮಯಗಳಿಂದ ಗುಣಿಸಿದ ಮೇಲೆ ಒಂದು ಉದ್ಧಾರ ಪಲ್ಯವಾಗುತ್ತದೆ. ಅದರಿಂದ ದ್ವೀಪ ಸಮುದ್ರಗಳ ಸಂಖ್ಯೆಯ ಅಳತೆ ಮಾಡುತ್ತಾರೆ ಮತ್ತು ಅದನ್ನು ಕೂಡ ಅಸಂಖ್ಯಾತ ವರ್ಷಗಳ ಸಮಯಗಳಿಂದ ಗುಣಾಕಾರ ಮಾಡಿದ ಮೇಲೆ ಒಂದು ಅದ್ಧಾಪಲ್ಯವಾಗುತ್ತದೆ. ಅದರ ಮೂಲಕ ಕರ್ಮಗಳ ಸ್ಥಿತಿ, ದೇವ-ನಾರಕಿಗಳ ಆಯು ಮೊದಲಾದವುಗಳ ಅಳತೆ ಮಾಡುತ್ತಾರೆ. ಇಂಥ ಹತ್ತು ಕೋಟಾ-ಕೋಟಿ ಅದ್ಧಾ ಪಲ್ಯಗಳದ್ದು ಒಂದು

ಸಾಗರವಾಗುತ್ತದೆ. ಅಂಥ ಹತ್ತು ಕೋಟಾಕೋಟಿ ಸಾಗರಗಳದ್ದು ಒಂದು ಅವಸರ್ಪಿಣಿ ಕಾಲವಿರುತ್ತದೆ, ಅಷ್ಟೇ ಉತ್ಸರ್ಪಿಣಿ ಕಾಲದ ಸಮಯವಿರುತ್ತದೆ. ಎರಡೂ ಸೇರಿ ಒಂದು ಕಲ್ಪಕಾಲವೆನಿಸಿಕೊಳ್ಳುತ್ತದೆ ಎಂದರೆ ಇಪ್ಪತ್ತು ಕೋಟಾಕೋಟಿ ಸಾಗರದ್ದು ಒಂದು ಕಲ್ಪಕಾಲವಿರುತ್ತದೆ.

ಇಡೀ ಲೋಕದ ಕ್ಷೇತ್ರಫಲ-ಘನಕ್ಷೇತ್ರ ಫಲವನ್ನು ನಾವು ನೋಡಿ ಬಂದಿದ್ದೇವೆ. ಮೂರು ಭುಜಗಳನ್ನು ಗುಣಿಸಿದ ಮೇಲೆ ಅದು ಬರುತ್ತದೆ. ಹೇಗೆ ನಾವು ಯಾರಿಗಾದರೂ ತಮ್ಮ ಮನೆಯು ಎಷ್ಟು ದೊಡ್ಡದಿದೆಯೆಂದು ಕೇಳಿದರೆ ಅವರು ಚದರ ಅಡಿ (ಸ್ಕ್ವೇಅರ ಫೂಟ)ಯಲ್ಲಿ ಹೇಳುತ್ತಾರೆ. ಅಲ್ಲಿ ಎರಡು ಭುಜಗಳ ಗುಣಾಕಾರವಾಗುತ್ತದೆ. ಇಲ್ಲಿ ಎತ್ತರದ್ದೂ ಕೂಡ ಗುಣಾಕಾರ ಮಾಡಿ ಘನಫಲವನ್ನು ತೆಗೆಯುತ್ತಾರೆ.

ಈಗ ನಾವು ಅದರ ಮೂರು ವಿಭಾಗಗಳ ಮೂರು ಭುವನಗಳ ಘನಫಲವನ್ನು ಬೇರೆ-ಬೇರೆಯಾಗಿ ತಗೆಯೋಣ. ಊರ್ಧ್ವಲೋಕದ ಎತ್ತರವು ೭ ರಾಜೂ ಮತ್ತು ದಕ್ಷಿಣೋತ್ತರ ಅಗಲವು ಕೂಡ ಸರ್ವತ್ರ ೭ ರಾಜೂವಿವೆ. ಆದರೆ ಪೂರ್ವ-ಪಶ್ಚಿಮ ಅಗಲವು ಅಸಮಾನವಿದೆ. ಕೆಳಗೆ ೧ ರಾಜೂ, ೩ $\frac{೧}{೨}$ (ಮೂರೂವರೆ) ರಾಜೂ ಎತ್ತರದ ಮೇಲೆ ೫ ರಾಜೂ ಮತ್ತು ಅಲ್ಲಿಂದ ಮೇಲೆ ಕಡಿಮೆ-ಕಡಿಮೆಯಾಗುತ್ತ ಕೊನೆಯಲ್ಲಿ ಪುನಃ ೧ ರಾಜೂವಿದೆ.

ಇಲ್ಲಿ ೫ + ೧=೬; ೬ ೨=೩ ರಾಜೂ ಏವರೇಜ ಅಗಲವಿದೆ. ಎತ್ತರವಂತೂ ೭ ರಾಜೂ ಇದೆ. ದಕ್ಷಿಣೋತ್ತರವೂ 7 ರಾಜೂ ಇದೆ. ಘನಕ್ಷೇತ್ರಫಲವು = ೩ X ೭ X ೭ = ೧೪೭ ಘನರಾಜೂವಿದೆ.

ಅಥವಾ ಬೇರೆ ರೀತಿಯಿಂದ ಮಾಡುವುದಾದರೆ ಇದರ ಒಂದು ಎತ್ತರದ ಮತ್ತು ಒಂದು ಅಡ್ಡದ ರೇಖೆಯನ್ನು ಮಧ್ಯದಲ್ಲಿ ಎಳೆದರೆ ಇದರಲ್ಲಿ ನಾಲ್ಕು ತುಂಡುಗಳಾಗುವವು



ಇಂಥ ಎರಡು ತುಂಡುಗಳನ್ನು ವಿರುದ್ಧವಾಗಿ ಜೋಡಿಸಿದ ಮೇಲೆ



ಇವುಗಳನ್ನು ಕೂಡಿಸಿದ ಮೇಲೆ ೩ $\frac{೧}{೨}$ X ೩ ಆಯಿತು ಇದೇ ರೀತಿ ಮೇಲೆ ಕೆಳಗಿನದನ್ನು ಕೂಡಿಸಿದಾಗ ೭ X ೩ ಆಯಿತು. ದಕ್ಷಿಣೋತ್ತರ ೭ ರಿಂದ ಗುಣಿಸಿದ ಮೇಲೆ ಊರ್ಧ್ವಲೋಕದ ಘನ ಫಲವು ೩ X ೭ X ೭ ಘನರಾಜೂ ಬರುತ್ತದೆ = ೧೪೭ ಘನರಾಜೂ.

ಈಗ ಅಧೋಲೋಕದ ಘನಫಲವನ್ನು ತಗೆಯಲಾಗುವುದು. ಕೆಳಗೆ ಏಳೂ ರಾಜೂ ಮತ್ತು ಮೇಲೆ ೧ ರಾಜೂ ಅವ್ವರೇಜ ೭ + ೧ = ೮, ೮ ೨ = ೪ ರಾಜೂ ಅಗಲವಿದೆ. ದಕ್ಷಿಣೋತ್ತರ ೭ ರಾಜೂ ಇದೆ ಆದುದರಿಂದ ಅಧೋಲೋಕದ ಘನಫಲವು ೪ X ೭ X ೭ = ೧೯೬ ಘನರಾಜೂವಿದೆ.

ಇಡೀ ಲೋಕದ ಘನಫಲವು ೧೪೭ X ೧೯೬ = ೩೪೩ ಘನರಾಜೂವಾಗುತ್ತದೆ.

ಮಧ್ಯಲೋಕದ ಘನಫಲವು ೧ ರಾಜೂ X ೭ ರಾಜೂ X ೧ ಲಕ್ಷ ೪೦ ಯೋಜನವಿದೆ. ಇದರ ಎತ್ತರವು ಮೇರುವಿನ ತಲ(ಕೆಳಭಾಗ)ದಿಂದ ಹಿಡಿದು ಮೇರುವಿನ ಶಿಖರದವರೆಗೆಯಿದೆ. ಇದು ಊರ್ಧ್ವಲೋಕದ್ದೇ ಎಲ್ಲಕ್ಕಿಂತ ಕೆಳಗಿನ ಭಾಗವಿದೆ.

ಈಗ ನಾವು ಚಾರ್ಟ ನಂ. ೧ ರ ಆಧಾರದಿಂದ ಲೋಕದಲ್ಲಿರುವ ಎಂಟು ಪೃಥ್ವಿಗಳನ್ನು ನೋಡೋಣ. ಏಳು ಪೃಥ್ವಿಗಳು ಅಧೋಲೋಕದಲ್ಲಿ ಮತ್ತು ಒಂದು ಪೃಥ್ವಿಯು ಊರ್ಧ್ವಲೋಕದಲ್ಲಿದೆ. ಪೃಥ್ವಿಯೆಂದು ಹೇಳುತ್ತಿರುವಂತೆ ನಮ್ಮ ಮನಸ್ಸಿನಲ್ಲಿ ಲೌಕಿಕ ಭೋಗೋಲದಲ್ಲಿ ಕಲಿತಿರುವಂಥ ಪೃಥ್ವಿಯ ಗೋಳವು ಸ್ಮರಣೆಗೆ ಬರುತ್ತದೆ.

ಎಲ್ಲಕ್ಕಿಂತ ಮೊದಲು ಯಾವುದನ್ನು ಪೃಥ್ವಿಯೆಂದು ಹೇಳುತ್ತಾರೆ ? ಅದರ ಪರಿಭಾಷೆಯು ಏನಿದೆ ? ಎಂಬುದನ್ನು ನೋಡೋಣ. ಯಾವುದು ಲೋಕಾಕಾಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಅರ್ಥಾತ್ ಒಂದು ಕಡೆಯಿಂದ ಇನ್ನೊಂದು ಕಡೆ ಕೊನೆಯವರೆಗೆ ವಿಸ್ತರಿಸಿದೆ ಅದು ಪೃಥ್ವಿಯಿದೆ. ಪೂರ್ವದಿಂದ ಪಶ್ಚಿಮದವರೆಗೆ ಮತ್ತು ದಕ್ಷಿಣದಿಂದ ಉತ್ತರದವರೆಗೆ ವಾತವಲಯಗಳನ್ನು ಹೊರತುಪಡಿಸಿ ಲೋಕಾಕಾಶದ ಕೊನೆಯವರೆಗೆ ಅಡ್ಡ ಚೌಕೋಣ ವಿಸ್ತರಿಸಿರುವುದನ್ನು ಪೃಥ್ವಿಯೆಂದು ಹೇಳುತ್ತಾರೆ. ನಾವು ಎಲ್ಲಿ ವಾಸಿಸುತ್ತಿದ್ದೇವೆ - ಯಾವ ಪೃಥ್ವಿಯ ಮೇಲೆ ನಾವು ಇದ್ದೇವೆ ಅದು ಪೂರ್ವ-ಪಶ್ಚಿಮ ಒಂದು ರಾಜೂ ಅಗಲ ಮತ್ತು ದಕ್ಷಿಣೋತ್ತರ ಏಳು ರಾಜೂ ಇದೆ, ಅದು ಲೋಕಾಕಾಶದ ಎಲ್ಲ ಕೊನೆಗಳನ್ನು ಸ್ಪರ್ಶಿಸುತ್ತಿದೆ. ಇದರ ಸ್ಥೂಲತೆ (ದಪ್ಪತನ)ಯಲ್ಲಿ ಭವನವಾಸಿಗಳೂ, ವ್ಯಂತರರು ಇರುತ್ತಾರೆ. ನಾರಕಿಗಳ ಬಿಲಗಳು ಕೂಡ ಇದರಲ್ಲಿ ಕಂಡು ಬರುತ್ತವೆ.

ಇದೇ ಪ್ರಕಾರ ಒಂದೊಂದು ರಾಜೂ ಅಂತರದಿಂದ ಏಳು ಪೃಥ್ವಿಗಳು ಅಧೋಲೋಕದಲ್ಲಿ ಇವೆ. ಎಂಟನೆಯ ಪೃಥ್ವಿಯ ಹೆಸರು ಈಷತ್ ಪ್ರಾಗ್ಭಾರವಿದ್ದು ಅದು ಲೋಕದ ಮೇಲ್ಭಾಗದಲ್ಲಿ ಸ್ಥಿತವಿದೆ. ಈ ಎಂಟನೆಯ ಪೃಥ್ವಿಯ ತೀರ ಮಧ್ಯದಲ್ಲಿ ಸಿದ್ಧಶಿಲೆಯಿದೆ ಮತ್ತು ಅದು ಕೂಡ ಪೃಥ್ವಿಯದೇ ಒಂದು ಭಾಗವಿದೆ. ಈ ಸಿದ್ಧಶಿಲೆಯು ನಲವತ್ತೈದು ಲಕ್ಷ ಯೋಜನ ಪ್ರಮಾಣ - ಮನುಷ್ಯ ಕ್ಷೇತ್ರದಷ್ಟು ಚಿಕ್ಕದಿದೆ.

ಚಾರ್ಟ ನಂ. ೧ ರೊಳಗೆ ನೋಡುವುದು - ಅದರಲ್ಲಿ ಪೂರ್ವ-ಪಶ್ಚಿಮದ ಅಗಲವು ಕೆಳಗಿನ ಪೃಥ್ವಿಗಳಲ್ಲಿ ಹೆಚ್ಚುತ್ತ ಹೋಗುತ್ತದೆ, ದಕ್ಷಿಣೋತ್ತರದ ಅಗಲವಂತೂ ಸರ್ವತ್ರ ೭ ರಾಜೂ ಪ್ರಮಾಣ ಸಮಾನವೇ ಇದೆ. ಆದರೆ ಇದರ ಸ್ಥೂಲತೆಯು ಕೆಳಗೆ ಕ್ರಮದಿಂದ ಕಡಿಮೆಯಾಗುತ್ತ ಹೋಗುತ್ತದೆ. ಇವುಗಳ ಹೆಸರು ಹಾಗೂ ಸ್ಥೂಲತೆಯು (ದಪ್ಪವು) ಕ್ರಮದಿಂದ ಈ ಪ್ರಕಾರವಿದೆ.

೧)	ರತ್ನಪ್ರಭಾ ಪೃಥ್ವಿ	-	೧ ಲಕ್ಷ ೮೦ ಸಾವಿರ ಯೋಜನ.
೨)	ಶರ್ಕರಾಪ್ರಭಾ ಪೃಥ್ವಿ	-	೩೨ ಸಾವಿರ ಯೋಜನ
೩)	ವಾಲುಕಾಪ್ರಭಾ ಪೃಥ್ವಿ	-	೨೮ ಸಾವಿರ ಯೋಜನ
೪)	ಪಂಕಪ್ರಭಾ ಪೃಥ್ವಿ	-	೨೪ ಸಾವಿರ ಯೋಜನ
೫)	ಧೂಮಪ್ರಭಾ ಪೃಥ್ವಿ	-	೨೦ ಸಾವಿರ ಯೋಜನ
೬)	ತಮಪ್ರಭಾ ಪೃಥ್ವಿ	-	೧೬ ಸಾವಿರ ಯೋಜನ
೭)	ಮಹಾತಮಪ್ರಭಾ ಪೃಥ್ವಿ	-	೮ ಸಾವಿರ ಯೋಜನ
೮)	ಈಷತ್ ಪ್ರಾಗ್ಭಾರ ಪೃಥ್ವಿ	-	೮ ಯೋಜನ

ಎಂಟನೆಯ ಪೃಥ್ವಿ - ಈಷತ್ ಪ್ರಾಗ್ಭಾರ ಪೃಥ್ವಿಯು ಲೋಕದ ಶಿಖರದ ಮೇಲಿದೆ. ಅದರ ಸ್ಥೂಲವು ಎಂಟು ಯೋಜನವಿದೆ. ಅದು ಪೂರ್ವ-ಪಶ್ಚಿಮ ೧ ರಾಜೂ ಮತ್ತು ದಕ್ಷಿಣೋತ್ತರ ೭ ರಾಜೂ ಅಗಲವಿದೆ. ಇದರ ಅತ್ಯಂತ ಮಧ್ಯಭಾಗದಲ್ಲಿ ಸಿದ್ಧಶಿಲೆಯಿದೆ. ಅದು ೮ ಯೋಜನ ಸ್ಥೂಲವಿದೆ, ೪೫ ಲಕ್ಷ ಯೋಜನ ವ್ಯಾಸವುಳ್ಳದ್ದಿದೆ. ಕೊನೆಯಲ್ಲಿ ನೊಣದ ರೆಕ್ಕೆಯ ಸಮಾನ ತೆಳುವಾಗಿ ಹೋಗಿರುತ್ತವೆ. ನಾವು ಅದನ್ನು ಚಂದಿರನ ಹಾಗೆಂದು ತಿಳಿದಿದ್ದೇವೆ. ಸ್ವಲ್ಪ ಯೋಚನೆ ಮಾಡುವುದು, ೧ ಯೋಜನದ ಸಲುವಾಗಿ ೧ ಮಿಲಿಮೀಟರವೆಂದು ತಿಳಿದುಕೊಳ್ಳೋಣ. ಆಗ ೪೫ ಲಕ್ಷ ಯೋಜನಗಳದ್ದು ೪೫೦೦೦೦೦ ಮಿಲಿ ಮೀಟರ ಅರ್ಥಾತ್ ೪.೫ ಕಿಲೋಮೀಟರದಲ್ಲಿರುವ ಅದರ ಗೋಲಾಕಾರವಂತೂ ಇಲ್ಲವೆನ್ನುವಷ್ಟು ಚಿಕ್ಕದಾಯಿತು.

ಪ್ರಶ್ನೆ :- ಆ ಸಿದ್ಧಶಿಲೆಯಲ್ಲಿ ಎಷ್ಟು ಸಿದ್ಧ ಜೀವರುಗಳು ಕಂಡು ಬರುತ್ತಾರೆ ? ಅನಂತವೆಂದು ಹೇಳಿದ್ದಾರಲ್ಲವೇ ? ಹಾಗಾದರೆ ಅವರು ಸಿದ್ಧಶಿಲೆಯ ಒಳಗೆ ಇರುತ್ತಾರೆಯೋ ಅಥವಾ ಹೊರಗೆ, ಎಲ್ಲಿರುತ್ತಾರೆ?

ಉತ್ತರ :- ಆಲಿಸಿ, ಸಿದ್ಧಶಿಲೆಯ ಮೇಲೆ ಯಾವ ಸಿದ್ಧ ಜೀವರುಗಳಿರುವುದಿಲ್ಲ, ಅದಂತೂ ಪೃಥ್ವಿಯ ರಚನೆಯಿದೆ. ಸಿದ್ಧಶಿಲೆಯ ಮೇಲೆ ಮೂರು ವಾತವಲಯಗಳಿರುತ್ತವೆ ಮತ್ತು ಅಂತಿಮ ವಾತವಲಯದಲ್ಲಿ ಸಿದ್ಧಭಗವಂತರು ವಿರಾಜಮಾನರಿದ್ದಾರೆ. ಒಂದು ವೇಳೆ ಸಿದ್ಧಶಿಲೆಯಲ್ಲಿ ಹೋಗಲು ಬಯಸುತ್ತಿದ್ದರೆ ಪೃಥ್ವಿಕಾಯಿಕವಾಗಿ ಹೋಗಬೇಕಾಗುವುದು ಅಲ್ಲಿಯಂತೂ ಐದೂ ಪ್ರಕಾರದ ಏಕೇಂದ್ರಿಯ ಜೀವಗಳಿರುತ್ತವೆ. ಹಾಗಂತೂ ನಾವು ಬಹಳಷ್ಟು ಬಾರಿ ಸಿದ್ಧಶಿಲೆಗೆ ಹೋಗಿ ಬಂದಿದ್ದೇವೆ. ಸಿದ್ಧಶಿಲೆಯ ವರ್ಣನೆಯನ್ನು ತ್ರಿಲೋಕಸಾರದ ಗಾಥೆ ೫೫೭-೫೫೮ ರಲ್ಲಿ ಮಾಡಿದ್ದಾರೆ. ಇದು ಶ್ವೇತ ಶಿಲೆಯಿದೆ. ಇದರ ಮೇಲ್ಭಾಗವಂತೂ ಸಮಾನವಿದೆ, ಕೆಳಗೆ ಛತ್ರಾಕಾರವಿದೆ - ಬಟ್ಟಲಿನ ಹಾಗಿದೆ. ಇದರ ಮೇಲೆ ಮತ್ತು ಕೆಳಗೆ ಯಾವ ವಾತವಲಯಗಳಿವೆ ಅವುಗಳ ಚರ್ಚೆಯನ್ನು ಮುಂದೆ ಮಾಡಲಾಗುವುದು.

ಅಧೋಲೋಕವನ್ನು ನೋಡಿದರೆ ಒಂದು ರಾಜೂವಿನಿಂದ ಪ್ರಾರಂಭವಾಗಿ ಕೆಳಗೆ ಏಳು ರಾಜೂವಿನವರೆಗೆ ಅದರ ಅಗಲವು ಕ್ರಮದಿಂದ ಹೆಚ್ಚುತ್ತ ಹೋಗಿದೆ. ಇದರಲ್ಲಿ ಒಂದೊಂದು ರಾಜೂವಿನ ಅಂತರದಿಂದ ಏಳು ಪೃಥ್ವಿಗಳಿವೆ. ಮೊದಲನೆಯ ಪೃಥ್ವಿಯಿಂದ ಒಂದು ರಾಜೂ ಕೆಳಗೆ ಹೋಗಿ ಎರಡನೆಯ ಪೃಥ್ವಿ. ಎರಡು ರಾಜೂ

ಕೆಳಗೆ ಹೋಗಿ ಮೂರನೆಯ ಪೃಥ್ವಿ; ಈ ಕ್ರಮದಿಂದ ಆರು ರಾಜೂ ಕೆಳಗೆ ಹೋದ ಮೇಲೆ ಏಳನೆಯ ಪೃಥ್ವಿಯು ಸ್ಥಿತವಿದೆ. ಎಲ್ಲ ಪೃಥ್ವಿಗಳು ದಕ್ಷಿಣೋತ್ತರ ಏಳು ರಾಜೂ ಅಗಲವಿವೆ ಆದಾಗ್ಯೂ ಅವುಗಳ ಪೂರ್ವ ಪಶ್ಚಿಮ ವಿಸ್ತಾರವು ಕೆಳ-ಕೆಳಗೆ ಹೆಚ್ಚುತ್ತ ಹೋಗುತ್ತದೆ. ಮೊದಲನೆಯ ಪೃಥ್ವಿಯ ವಿಸ್ತಾರವು ಒಂದು ರಾಜೂವಿದೆ ಅರ್ಥಾತ್ ಅದು ಆರು ರಾಜೂ ಹೆಚ್ಚಿದೆ ಎಂದರೆ ಪ್ರತಿಯೊಂದು ರಾಜೂವಿನ ಮೇಲೆ $\frac{೬}{೭}$ ಎಂದರೇನೆ ಆರು ಏಳಾಂಶ ರಾಜೂ ಹೆಚ್ಚುತ್ತ - ಹೆಚ್ಚುತ್ತ ಏಳು ಬಾರಿ ಹೆಚ್ಚಾಗಿ $\frac{೬}{೭}$ X ೭ = ೬ ರಾಜೂ ಹೆಚ್ಚುತ್ತದೆ. ಪೃಥ್ವಿಗಳೂ ಕೂಡ ಒಂದೊಂದು ರಾಜೂವಿನ ಮೇಲೆ ಅರ್ಥಾತ್ ಪ್ರತಿಯೊಂದು ಪೃಥ್ವಿಯು $\frac{೬}{೭}$ ರಾಜೂ ಹೆಚ್ಚಾಗುತ್ತ ಏಳು ಪೃಥ್ವಿಗಳು ಆರು ರಾಜೂವಿನವರೆಗೆ ಕಂಡು ಬರುತ್ತವೆ.

ಪ್ರತಿಯೊಂದು ಪೃಥ್ವಿಯು ಎಷ್ಟು ಕೆಳಗಿದೆ ಮತ್ತು ಅದರ ಪೂರ್ವ-ಪಶ್ಚಿಮದ ವಿಸ್ತಾರವು ಎಷ್ಟಿದೆ ಅದನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ.

ಮೊದಲನೆಯ ಪೃಥ್ವಿಯ ವಿಸ್ತಾರವು ೧ ರಾಜೂವಿದೆ.

ಎರಡನೆಯ ಪೃಥ್ವಿಯು ೧ ರಾಜೂ ಕೆಳಗೆ ಇದೆ. ಅದರ ವಿಸ್ತಾರವು $\frac{೧೩}{೭}$ ರಾಜೂ = ೧ $\frac{೬}{೭}$ ರಾಜೂ.

ಮೂರನೆಯ ಪೃಥ್ವಿಯು ೨ ರಾಜೂ ಇದೆ. ಅದರ ವಿಸ್ತಾರವು $\frac{೧೯}{೭}$ ರಾಜೂ = ೨ $\frac{೫}{೭}$ ರಾಜೂ.

ನಾಲ್ಕನೆಯ ಪೃಥ್ವಿಯು ೩ ರಾಜೂ ಕೆಳಗೆ ಇದೆ. ಅದರ ವಿಸ್ತಾರವು $\frac{೨೫}{೭}$ ರಾಜೂ = ೩ $\frac{೪}{೭}$ ರಾಜೂ.

ಐದನೆಯ ಪೃಥ್ವಿಯು ೪ ರಾಜೂ ಕೆಳಗೆ ಇದೆ. ಅದರ ವಿಸ್ತಾರವು $\frac{೩೧}{೭}$ ರಾಜೂ = ೪ $\frac{೩}{೭}$ ರಾಜೂ.

ಆರನೆಯ ಪೃಥ್ವಿಯು ೫ ರಾಜೂ ಕೆಳಗೆ ಇದೆ. ಅದರ ವಿಸ್ತಾರವು $\frac{೩೭}{೭}$ ರಾಜೂ = ೫ $\frac{೨}{೭}$ ರಾಜೂ.

ಏಳನೆಯ ಪೃಥ್ವಿಯು ೬ ರಾಜೂ ಕೆಳಗೆ ಇದೆ. ಅದರ ವಿಸ್ತಾರವು $\frac{೪೩}{೭}$ ರಾಜೂ = ೬ $\frac{೧}{೭}$ ರಾಜೂ.

ಒಂದನೆಯ ನಂಬರಿನ ಚಾರ್ಟದಲ್ಲಿ ತಾವು ನೋಡುವುದು. ಪ್ರತಿ ಸಲ $\frac{೬}{೭}$ ಸೇರಿಸಿ ಅದರ ಪ್ರಮಾಣವನ್ನು ಸ್ಪಷ್ಟ ಪಡಿಸಲಾಗಿದೆ. ಈ ಪ್ರಕಾರ ಪೂರ್ವ-ಪಶ್ಚಿಮದ ವಿಸ್ತಾರದಲ್ಲಂತೂ ಕ್ರಮದಿಂದ ಹೆಚ್ಚುತ್ತ ಹೋಗುತ್ತದೆ ಆದರೆ ಸ್ಥೂಲತೆಯಲ್ಲಿ ಕಡಿಮೆಯಾಗುತ್ತ ಹೋಗುತ್ತವೆ. ಮೇಲಿನ ಪೃಥ್ವಿಯು ಅಧಿಕ ದಪ್ಪ-ಸ್ಥೂಲವಿದೆ ಕೆಳ-ಕೆಳಗಿನ ಪೃಥ್ವಿಗಳು ತೆಳ್ಳಗಿವೆ. ಅವುಗಳ ಸ್ಥೂಲತೆಯ ಕುರಿತಾಗಿ ಈ ಮೊದಲು ಚರ್ಚೆ ಮಾಡಲಾಗಿದೆ. ಪುನಃ ಚಾರ್ಟದಲ್ಲಿ ನೋಡಬಹುದಾಗಿದೆ. ಈ ಪೃಥ್ವಿಗಳ ಹೆಸರನ್ನು ಮೊದಲು ಹೇಳಲಾಗಿದೆ. ಇವುಗಳ ಅನ್ಯ ಹೆಸರುಗಳು - ೧) ಧರ್ಮಾ, ೨) ವಂಶಾ, ೩) ಮೇಘಾ, ೪) ಅಂಜನಾ, ೫) ಅರಿಷ್ಟಾ, ೬) ಮಘವಿ, ೭) ಮಾಘವಿ - ಎಂಬುದಾಗಿ ಇವೆ.

ಈಗ ಮೊದಲನೆಯ ಪೃಥ್ವಿಯಲ್ಲಿ ಏನಿದೆಯೆಂಬುದನ್ನು ನೋಡೋಣ. ನಾವಂತೂ ಪೃಥ್ವಿಯ ಮೇಲೆ ಇದ್ದೇವೆ. ಅಸಂಖ್ಯಾತ ದ್ವೀಪ-ಸಮುದ್ರಗಳೂ ಕೂಡ ಪೃಥ್ವಿಯ ಮೇಲೆ ಇವೆ. ನಾವು ಮೊದಲನೆಯ ಪೃಥ್ವಿಯ

ದಪ್ಪವು ಒಂದು ಲಕ್ಷ ಎಂಭತ್ತು ಸಾವಿರ ಯೋಜನವಿದೆಯೆಂಬುದನ್ನು ತಿಳಿದುಕೊಂಡಿದ್ದೇವೆ. ಅದರಲ್ಲಿ ಮೂರು ವಿಭಾಗಗಳಿವೆ. ೧) ಮೇಲಿನ ಖರಭಾಗವು ಹದಿನಾರು ಸಾವಿರ ಯೋಜನ ದಪ್ಪವುಳ್ಳದ್ದಿದೆ. ೨) ಮಧ್ಯದ ಪಂಕಭಾಗವು ಎಂಭತ್ನಾಲ್ಕು ಸಾವಿರ ಯೋಜನ ದಪ್ಪ ಮತ್ತು ೩) ಎಲ್ಲಕ್ಕಿಂತ ಕೆಳಗಿನ ಅಬ್ಬಹುಲಭಾಗವು ಎಂಭತ್ತು ಸಾವಿರ ಯೋಜನ ದಪ್ಪವನ್ನು ಹೊಂದಿದೆ.

ಈ ಪ್ರಕಾರ ಏಳು ಪೃಥ್ವಿಗಳು ಕೆಳಗೆ ಮತ್ತು ಎಂಟನೆಯ ಈಷತ್ಪ್ರಾಗ್ಭಾರ ಪೃಥ್ವಿಯು ಇಡೀ ಲೋಕಾಕಾಶದ ಮೇಲಿನ ಭಾಗದಲ್ಲಿ ಒಂದು ರಾಜೂ X ಏಳು ರಾಜೂ ಅಗಲ ಮತ್ತು ಎಂಟು ಯೋಜನ ದಪ್ಪವಾಗಿ ಹರಡಿ ಕೊಂಡಿದೆ. ಅದರ ಮಧ್ಯದಲ್ಲಿ ನಲವತ್ತೈದು ಲಕ್ಷ ಯೋಜನ ಪ್ರಮಾಣದ ಸಿದ್ಧಶಿಲೆಯಿದೆ.

ಹೀಗೆ ಇದು ಪೃಥ್ವಿಗಳ ಅಲ್ಪ ಪರಿಚಯವಾಯಿತು. ಎಲ್ಲಿ ಅಧೋಲೋಕದ ಮತ್ತು ನರಕಗಳ ಮಾತು ಬರುವುದು ಅಲ್ಲಿ ಅವುಗಳ ಚರ್ಚೆಯನ್ನು ವಿಸ್ತಾರದಿಂದ ಮಾಡಲಾಗುವುದು.

ಇನ್ನು ಇಲ್ಲಿ ತಲೆದೋರುವ ಪ್ರಶ್ನೆಯೆಂದರೆ ಇಡೀ ಲೋಕಕ್ಕೆ ಹಾಗೂ ಲೋಕಾಕಾಶಕ್ಕೆ ಯಾವುದರ ಆಧಾರವಿದೆ ? ಯಾವುದೇ ವಸ್ತುವು ಆಧಾರವಿಲ್ಲದೆ ಇರುವ ಸಾಧ್ಯತೆಯಿದೆಯೇನು ? ಆಧಾರವು ಆವಶ್ಯಕವಿದೆಯೋ ಅಥವಾ ಇಲ್ಲ ?

ಉತ್ತರ ಸ್ವರೂಪವಾಗಿ ಹೇಳುವುದೇನೆಂದರೆ – ವಿಶ್ವದ ಪ್ರತಿಯೊಂದು ವಸ್ತುವು ಸ್ವಯಂ ತನ್ನ ಆಧಾರದಿಂದ ಇದೆ ಆದರೆ ವ್ಯವಹಾರದಲ್ಲಿ ಉಪಚಾರದಿಂದ ನಾವು ವಸ್ತುವನ್ನು ಯಾವುದರದೋ ಆಧಾರದಿಂದ ಸ್ಥಿತವಿದೆಯೆಂದು ಹೇಳುತ್ತೇವೆ. ಇದು ವ್ಯವಹಾರ ಕಥನವಿದೆ. ವಸ್ತುವು ತನ್ನಿಂದ – ತನ್ನ ಆಧಾರದಿಂದ ಇರುತ್ತದೆಯೆಂಬುದು ನಿಶ್ಚಯ ಕಥನವಿದೆ – ವಾಸ್ತವಿಕತೆಯಿದೆ.

ಈ ಎಲ್ಲ ಪೃಥ್ವಿಗಳು ಮತ್ತು ಲೋಕಾಕಾಶವು ಕೂಡ ಯಾವುದೇ ಆಧಾರವಿಲ್ಲದೇ ಇವೆ. ಲೋಕಾಕಾಶವು ಎಲ್ಲ ಕಡೆಗಳಿಂದಲೂ ವಾತವಲಯಗಳಿಂದ ವೇಷ್ಟಿತವಿದೆ. ಲೋಕಾಕಾಶದ ಆಕಾರವು ಅನಾದಿಯಿಂದ ಹೇಗಿದೆಯೋ ಹಾಗೇ ಇದೆ. ಇಡೀ ಲೋಕದಲ್ಲಿ ವಾಪ್ತವಿರುವಂಥ ಒಂದು ಮಹಾಸ್ಕಂಧವು ಕಂಡು ಬರುತ್ತದೆ. ಲೋಕಾಕಾಶದಷ್ಟೇ ಮತ್ತು ಅದೇ ಆಕಾರವುಳ್ಳ ಒಂದು ಮಹಾಸ್ಕಂಧವು ಎಂಟು ಪೃಥ್ವಿಗಳು ಹಾಗೂ ಇವುಗಳ ಅಂತರಾಳದಲ್ಲಿ ಸೂಕ್ಷ್ಮ ಪೃಥ್ವಿಕಾಯಿಕಗಳ ಶರೀರಗಳಿಂದ ಕೂಡಿದ ಒಂದು ಅಖಂಡ ಸ್ಕಂಧವಿದೆ. ಅದರಲ್ಲಿ ಎಂಟು ಪೃಥ್ವಿಗಳಂತೂ ಕಂಡು ಬರುತ್ತವೆ-ಅವು ಸ್ಥೂಲವಿವೆ ಆದರೆ ಅವುಗಳ ಅಂತರಾಳದಲ್ಲಿ ಯಾವ ಸೂಕ್ಷ್ಮ ಪೃಥ್ವಿಯಿದೆ ಅದು ಕಂಡು ಬರುವುದಿಲ್ಲ. ಎಂದರೇನೆ ನಾವು ಆ ಪೃಥ್ವಿಯ ಮೇಲೆ ವಾಸ ಮಾಡಿಕೊಂಡಿದ್ದೇವೆ-ಎಂಬ ಅರ್ಥವಿದೆ.

ಇಡೀ ಲೋಕವನ್ನು ನಾಲ್ಕೂ ಕಡೆಗಳಿಂದ ಅರ್ಥಾತ್ ಹತ್ತೂ ದಿಕ್ಕುಗಳಿಂದ ಸುತ್ತುವರೆದಿರುವಂಥ ಮೂರು ವಾತವಲಯಗಳಿವೆ. ಸುತ್ತುವರೆದಿರುವುದರಿಂದ ವಲಯವೆಂದೂ ಮತ್ತು ವಾಯುವಿನವು ಇರುವುದರಿಂದ ವಾತವೆಂದು ಹೇಳಿದ್ದಾರೆ. ಲೋಕದ ಕೆಳಗೆ ಅದರ ತಳವು ೭ ರಾಜೂ X ೭ ರಾಜೂವಿದೆ. ಅಲ್ಲಿ ೨೦೦೦೦-೨೦೦೦೦-೨೦೦೦೦ ಯೋಜನಗಳ ಮೂರು ವಾತವಲಯಗಳಿವೆ. ಅದೇ ಪ್ರಕಾರ ಕೆಳಗಿನ ಒಂದು ರಾಜೂ ಪ್ರಮಾಣ ಪಾರ್ಶ್ವ ಭಾಗದಲ್ಲಿಯೂ ಇಪ್ಪತ್ತು-ಇಪ್ಪತ್ತು ಸಾವಿರ ಯೋಜನಗಳ ಮೂರು ವಾತವಲಯಗಳಿವೆ. ಘನೋದಧಿ ವಾತವಲಯವು ಒಳಭಾಗದಲ್ಲಿದೆ, ಘನವಾತವಲಯವು ಮಧ್ಯದಲ್ಲಿದೆ ಮತ್ತು ತನುವಾತವಲಯವು ಹೊರಭಾಗದಲ್ಲಿದೆ.

ಏಳನೆಯ ಪೃಥ್ವಿಯ ಹತ್ತಿರ ಪಾರ್ಶ್ವ ಭಾಗದಲ್ಲಿ ನಾಲ್ಕೂ ಕಡೆಗಳಿಂದ ಸುತ್ತುವರೆದಿರುವ ಈ ವಾತವಲಯಗಳ ವಿಸ್ತಾರವು ಕ್ರಮದಿಂದ ೭, ೫ ಮತ್ತು ೪ ಯೋಜನವಿದ್ದು ಒಟ್ಟು ಹದಿನಾರು ಯೋಜನವಿರುತ್ತದೆ. ಮಧ್ಯಲೋಕದ ಹತ್ತಿರ ಪಾರ್ಶ್ವಭಾಗದಲ್ಲಿ ನಾಲ್ಕೂ ಕಡೆಗಳಲ್ಲಿ ಇದರ ವಿಸ್ತಾರವು ಕ್ರಮದಿಂದ ೫, ೪, ೩ ಯೋಜನವಿರುತ್ತದೆ. ಬ್ರಹ್ಮಸ್ವರ್ಗದ ಪಾರ್ಶ್ವಭಾಗದಲ್ಲಿ ಇದು ವೃದ್ಧಿಸುತ್ತ ಕ್ರಮದಿಂದ ೭, ೫, ೪ ಯೋಜನವಾಗುತ್ತದೆ ಮತ್ತು ನಂತರ ಕ್ರಮದಿಂದ ಕಡಿಮೆಯಾಗುತ್ತ ಲೋಕ ಶಿಖರದ ಪಾರ್ಶ್ವ ಭಾಗದಲ್ಲಿ ಇದು ಕ್ರಮದಿಂದ ೫, ೪, ೩ ಯೋಜನವಾಗಿ ಹೋಗುತ್ತದೆ. ಲೋಕಶಿಖರದ ಮೇಲೆ ಎಂಟನೆಯ ಪೃಥ್ವಿಯ ಮೇಲ್ಭಾಗದಲ್ಲಿ ಇವುಗಳ ವಿಸ್ತಾರವು ಕ್ರಮದಿಂದ ಘನೋದಧಿ ವಾತವಲಯ ೨ ಹರದಾರಿ, ಘನವಾತವಾಲಯದ್ದು ೧ ಹರದಾರಿ ಮತ್ತು ತನುವಾತ ವಲಯದ್ದು ೧೫೭೫ ಧನುಷ್ಯ ಅರ್ಥಾತ್ ೧ ಹರಿದಾರಿಯೊಳಗಿಂದ ೪೨೫ ಬಿಲ್ಲು ಕಡಿಮೆಯದಿದೆ.

ಎಂಟೂ ಪೃಥ್ವಿಗಳ ಕೆಳಗೆ-ಪ್ರತಿಯೊಂದರ ಕೆಳಗೆ ಇಪ್ಪತ್ತು-ಇಪ್ಪತ್ತು ಸಾವಿರ ಯೋಜನವುಳ್ಳ ಮೂರು ಮೂರು ವಾತವಲಯಗಳಿವೆ. ಆದರೆ ಕೇವಲ ಎಂಟನೆಯ ಪೃಥ್ವಿಯ ಮೇಲೆಯೂ ಕೂಡ ಮೂರು ವಾತವಲಯಗಳಿವೆ. ಚಾರ್ಟ ನಂ. ೨ ನೋಡುವುದು. ಅದರಲ್ಲಿ ಪೃಥ್ವಿಗಳನ್ನು ಕಪ್ಪು ವರ್ಣದೊಳಗೆ ತೋರಿಸಲಾಗಿದೆ ಮತ್ತು ವಾತವಲಯಗಳನ್ನು ನೀಲಿ, ಹಳದಿ, ಕೆಂಪು ವರ್ಣದ ರೇಖೆಗಳಿಂದ ತಿಳಿಸಿಕೊಡಲಾಗಿದೆ. ಪೃಥ್ವಿಯ ಕೆಳಗೆ ಮೊದಲು ಘನೋದಧಿ ವಾತವಲಯವಿದೆ ಮತ್ತು ಅದರ ಕೆಳಗೆ ಘನವಾತವಲಯವಿದೆ ಮತ್ತು ಅದರ ಕೆಳಗೆ ತನುವಾತವಲಯವಿದೆ. ಇದರ ಮತ್ತು ಇದರ ಕೆಳಗಿನ ಪೃಥ್ವಿಯ ಮಧ್ಯದಲ್ಲಿ ಅಸಂಖ್ಯಾತ ಯೋಜನಗಳ ಅಂತರವಿದೆ.

ಲೋಕಾಕಾಶದ ತಳದಲ್ಲಿ ೭ ರಾಜೂ X ೭ ರಾಜೂ X ೬೦,೦೦೦ ಯೋಜನ ವಾತವಲಯಗಳ ಘನಫಲವಿದೆ. ಈ ವಾತವಲಯಗಳಲ್ಲಿ ಎಲ್ಲ ಪೃಥ್ವಿಗಳ ಭಾರವನ್ನು ಸಹಿಸುವ ಸಾಮರ್ಥ್ಯವಿದೆ. ಎಲ್ಲ ಪೃಥ್ವಿಗಳು ಎಲ್ಲಿವೆಯೋ ಅಲ್ಲಿ ಸ್ಥಿತವಿವೆ. ಅತ್ತ-ಇತ್ತ ಆಗಿ ಹೋಗುವುದಿಲ್ಲ. ಇಡೀ ಲೋಕಾಕಾಶದ ಭಾರ, ಪೃಥ್ವಿಗಳ ಭಾರವು ಈ ವಾತವಲಯಗಳ ಮೇಲೆ ನಿಂತುಕೊಂಡಿದೆ. ಮೊದಲನೆಯ ಪೃಥ್ವಿಯಲ್ಲಿ ಮೊದಲನೆಯ ನರಕ, ಎರಡನೆಯದರಲ್ಲಿ ಎರಡನೆಯ ನರಕ ಈ ಪ್ರಕಾರ ಆರು ರಾಜೂ ಕೆಳಗೆ ಸ್ಥಿತವಿರುವ ಏಳನೆಯ ಪೃಥ್ವಿಯಲ್ಲಿ ಏಳನೆಯ ನರಕವಿದೆ. ಅದರ ಕೆಳಗೆ ಒಂದು ರಾಜೂ ಪ್ರಮಾಣ ನಿಗೋದವಿದೆ, ಅದನ್ನು ನಿಗೋದದ ಕಲಕಲ ಭೂಮಿಯೆಂದು ಹೇಳುತ್ತಾರೆ. ಅಲ್ಲಿ ನಿಗೋದ ಜೀವಗಳು ಒತ್ತೊತ್ತಾಗಿ ತುಂಬಿಕೊಂಡಿವೆ. ಆ ಒಂದು ರಾಜೂ ಪ್ರಮಾಣ ಕ್ಷೇತ್ರವನ್ನು ಕೂಡ ಪಾರ್ಶ್ವಭಾಗದಲ್ಲಿ ಅರ್ಥಾತ್ ನಾಲ್ಕೂ ಕಡೆಗಳಲ್ಲಿ ಇಪ್ಪತ್ತು ಇಪ್ಪತ್ತು ಸಾವಿರ ಎಂದರೆ ಒಟ್ಟು ಅರವತ್ತು ಸಾವಿರ ಯೋಜನ ಪ್ರಮಾಣ ವಾತವಲಯಗಳು ಸುತ್ತುವರೆದಿವೆ.

ಎಂಟನೆಯ ಪೃಥ್ವಿಯ ಮೇಲೆ ಪೃಥ್ವಿಗೆ ಹೊಂದಿಕೊಂಡಿರುವ ಘನೋದಧಿವಾತವಲಯವು ೨ ಹರದಾರಿ ವಿಸ್ತಾರ(ಅಗಲ)ವುಳ್ಳದ್ದು, ಮಧ್ಯದಲ್ಲಿ ಘನವಾತವಲಯವು ೧ ಹರದಾರಿ ವಿಸ್ತಾರವುಳ್ಳದ್ದು ಮತ್ತು ಕೊನೆಯಲ್ಲಿ ಹೊರಗಿನ ಮಗ್ಗುಲಿಗೆ ತನುವಾತವಲಯವು ೧೫೭೫ ಧನುಷ್ಯ (ಬಿಲ್ಲು ಪ್ರಮಾಣ) ವಿಸ್ತಾರವುಳ್ಳದ್ದಿದೆಯೆಂಬುದನ್ನು ಈ ಮೊದಲು ಹೇಳಲಾಗಿದೆ. ಈ ಎಲ್ಲ ಅಳತೆಗಳು ಮಹಾಧನುಷ್ಯ ಮಹಾ ಹರದಾರಿ ಮತ್ತು ಮಹಾಯೋಜನಗಳದ್ದಿರುತ್ತವೆ. ಎಂದರೆ ಅವು ಸಾಮಾನ್ಯ ಧನುಷ್ಯ, ಹರದಾರಿ ಮತ್ತು ಯೋಜನಗಳಿಂದ ಐನೂರು ಪಟ್ಟು ದೊಡ್ಡವಿರುತ್ತವೆ. ಸಾಮಾನ್ಯ ಯೋಜನವು ನಾಲ್ಕು ಹರದಾರಿಯದಿರುತ್ತದೆ, ಈ

ಮಹಾಯೋಜನವು ೨೦೦೦ ಹರದಾರಿಯದಿರುತ್ತದೆ. ಎರಡು ಸಾವಿರ ಧನುಷ್ಯದ್ದು ಒಂದು ಹರದಾರಿಯಿರುತ್ತದೆ. ಇಲ್ಲಿ ೧೫೭೫ ಧನುಷ್ಯವೆಂದು ಹೇಳಿದ್ದಾರೆ, ಇದು ಮಹಾಧನುಷ್ಯವಿದೆ ಮತ್ತು ಇದು ಸಾಮಾನ್ಯ ಧನುಷ್ಯದ ಐನೂರು ಪಟ್ಟು ಇರುವುದರಿಂದ ಈ ತನುವಾತವಲಯದ ವಿಸ್ತಾರವು ೧೫೭೫ X ೫೦೦ = ೭೮೭೫೦೦ ಧನುಷ್ಯವಿದೆ. ಇಲ್ಲಿ ಸಿದ್ಧಭಗವಂತರು ವಿರಾಜಮಾನರಿದ್ದಾರೆ. ಎಲ್ಲ ಸಿದ್ಧಭಗವಂತರ ಆತ್ಮ ಪ್ರದೇಶಗಳು ಮೇಲಿನಿಂದ ಸಮಾನವಿವೆ. ಆದರೆ ಅವಗಾಹನ-ಉದ್ದ-ಅಗಲದ ವಿಸ್ತಾರವು ಮತ್ತು ಖಡ್ಗಾಸನ, ಪದ್ಮಾಸನ ಮೊದಲಾದ ಆಕಾರಗಳು ಬೇರೆ-ಬೇರೆಯಾಗಿವೆ. ಕೆಲವರು ಪೂರ್ವಾಭಿಮುಖರಿದ್ದರೆ ಕೆಲವರು ಉತ್ತರಾಭಿಮುಖರಿದ್ದಾರೆ. ಸಿದ್ಧರ ಅವಗಾಹನವು ಹೆಚ್ಚು ಹೆಚ್ಚೆಂದರೆ ೫೨೫ ಧನುಷ್ಯವಿರುತ್ತದೆ. ಈ ಧನುಷ್ಯವು ಸಾಮಾನ್ಯ ಧನುಷ್ಯವಿದೆ, ಮಹಾಧನುಷ್ಯವಲ್ಲ.

ತನುವಾತವಲಯದ ಬಾಹುಳ್ಯದ (ದಪ್ಪತೆಯ)ಲ್ಲಿ ಹದಿನೈದು ನೂರು ಖಂಡಗಳನ್ನಾಗಿ ಮಾಡಿದರೆ ಒಂದು ಖಂಡ ಪ್ರಮಾಣದ ಭಾಗದಲ್ಲಿ ಸಿದ್ಧರ ಉತ್ಕೃಷ್ಟ ಅವಗಾಹನೆಯೆಂದು ತಿಳಿಯುವುದು ೭೮೭೫೦೦ ೧೫೦೦ = ೫೨೫ ಧನುಷ್ಯ ಹಾಗೂ ಆ ದಪ್ಪತೆಯ ಒಂಭತ್ತು ಲಕ್ಷ ಖಂಡ ಮಾಡಿದರೆ ಒಂದು ಖಂಡ ಪ್ರಮಾಣವನ್ನು ಸಿದ್ಧರ ಜಘನ್ಯ ಅವಗಾಹನೆಯ ಪ್ರಮಾಣವೆಂದು ತಿಳಿಯುವುದು ೭೮೭೫೦೦ ೯೦೦೦೦೦ = $\frac{೭}{೮}$ ಎಂದರೆ ಏಳು ಎಂಟಾಂಶ ಧನುಷ್ಯ ಪ್ರಮಾಣ ಅರ್ಥಾತ್ ಮೂರುವರೆ ಮೊಳವಾಗುತ್ತದೆ.

ಇನ್ನು ಈ ಧನುಷ್ಯ, ಮೊಳ, ಅಂಗುಲ ಮೊದಲಾದವುಗಳ ಸ್ವರೂಪವನ್ನು ಮೊದಲು ನೋಡೋಣ. ಅನಂತಾನಂತ ಪರಮಾಣುಗಳ ಸ್ಕಂಧವು ಅವಸನ್ನಾಸನ್ನವೆಂಬ ನಾಮಧಾರಕವಿದೆ. ಅದರಿಂದ ಎಂಟೆಂಟು ಪಟ್ಟುಗಳಷ್ಟು ದೊಡ್ಡವಿರುವಂಥ ಸನ್ನಾಸನ್ನಾ, ತ್ರುಟರೇಣು, ತ್ರಸರೇಣು, ಸ್ಥರೇಣು, ಉತ್ತಮ ಭೋಗ ಭೂಮಿಜರ ಕೇಶದ (ಕೂದಲಿನ) ಅಗ್ರಭಾಗ, ಮಧ್ಯಮ ಭೋಗ ಭೂಮಿಜರ ಕೇಶದ ಅಗ್ರಭಾಗ, ಜಘನ್ಯ ಭೋಗಭೂಮಿಜರ ಕೇಶದ ಅಗ್ರಭಾಗ, ಕರ್ಮಭೂಮಿಜರ ಕೇಶದ ಅಗ್ರಭಾಗ, ಲೀಖ(ಸೀರು), ಸಾಸಿವೆ, ಜವೆಗೋದಿ ಮತ್ತು ಅಂಗುಲ-ಇವು ಹನ್ನೆರಡು ವಸ್ತುಗಳಾಗುತ್ತವೆ. ಈ ಅಂಗುಲವನ್ನು ಉತ್ಸೇಧಾಂಗುಲವೆಂದು ಹೇಳುತ್ತಾರೆ. ಇದರ ಮೂಲಕ ನಾರಕಿ, ಮನುಷ್ಯ, ದೇವ ಮೊದಲಾದವರ ಶರೀರ, ದೇವಗಳ ನಗರ, ಮಂದಿರ ಇತ್ಯಾದಿಗಳ ಪ್ರಮಾಣದ ವರ್ಣನೆಯಿದೆ. ಈ ಉತ್ಸೇಧಾಂಗುಲದಿಂದ ಐನೂರು ಪಟ್ಟು ಪ್ರಮಾಣಾಂಗುಲವಿರುತ್ತದೆ. ಎಂದರೆ ಅದು ಭರತಕ್ಷೇತ್ರದಲ್ಲಿ ಅವಸರ್ಪಿಣಿಯ ಪ್ರಥಮ ಚಕ್ರವರ್ತಿಯ ಅಂಗುಲ-ತೋರುಬೆರಳಿನ ಅಗಲ(ವಿಸ್ತಾರ) ದಷ್ಟಿರುತ್ತದೆ. ಇದರ ಮೂಲಕ ದ್ವೀಪ, ಸಮುದ್ರ, ಪರ್ವತ, ನದಿ ಮೊದಲಾದವುಗಳ ಪ್ರಮಾಣದ ವರ್ಣನೆ ಮಾಡುತ್ತಾರೆ. ಭರತ, ಐರಾವತ ಕ್ಷೇತ್ರಗಳಲ್ಲಿ ಬೇರೆ ಬೇರೆ ಕಾಲಗಳು ವರ್ತಿಸುತ್ತವೆ. ಅಲ್ಲಿಯ ಮನುಷ್ಯರದು ತಮ್ಮ ತಮ್ಮ ವರ್ತಮಾನ ಕಾಲದಲ್ಲಿ ಯಾವ ಅಂಗುಲದ ಪ್ರಮಾಣವಿರುತ್ತದೆ ಅದನ್ನು ಆತ್ಮಾಂಗುಲವೆಂದು ಹೇಳುತ್ತಾರೆ. ಇದರ ಮೂಲಕ ಮನುಷ್ಯರ ಮಂದಿರ, ನಗರ, ಕಲಶ, ಗಿಂಡಿ ಮೊದಲಾದವುಗಳ ಪ್ರಮಾಣವನ್ನು ತಿಳಿಸಿಕೊಡಲಾಗುತ್ತದೆ.

೬ ಅಂಗುಲಗಳದ್ದು ೧ ಪಾದ, ೨ ಪಾದಗಳ್ದು ೧ ವಿಲಸ್ತಿ, ೨ ವಿಲಸ್ತಿಗಳದ್ದು ೧ ಮೊಳ, ಎರಡು ಮೊಳದ್ದು ೧ ಬೀಖ, ೨ ಬೀಖಗಳದ್ದು ೧ ಧನುಷ್ಯ, ೨೦೦೦ ಧನುಷ್ಯಗಳದ್ದು ೧ ಹರದಾರಿ ಮತ್ತು ೪ ಹರದಾರಿಗಳದ್ದು ೧ ಯೋಜನವಾಗುತ್ತದೆ. ಇವೆಲ್ಲವನ್ನು ಉತ್ಸೇಧಾಂಗುಲದ ಪ್ರಮಾಣದಲ್ಲಿ ತಗೆದುಕೊಂಡರೆ ಸಾಮಾನ್ಯ ಧನುಷ್ಯ

ಹರದಾರಿ, ಯೋಜನಗಳಾಗುವವು ಮತ್ತು ಒಂದು ವೇಳೆ ಮೂಲದಲ್ಲಿಯೇ ಪ್ರಮಾಣಾಂಗುಲದ ಪ್ರಮಾಣದಲ್ಲಿ ತಂದುಕೊಂಡರೆ ಅದು ಮಹಾಧನುಷ್ಯ, ಮಹಾಹರದಾರಿ, ಮಹಾಯೋಜನಗಳ ಪ್ರಮಾಣವಾಗುವುದು.

ಆತ್ಮಾಂಗುಲದ ಪ್ರಮಾಣವಂತೂ ತಮ್ಮ-ತಮ್ಮ ಅವಗಾಹನೆಯ ಪ್ರಮಾಣದಲ್ಲಿ ಕಂಡು ಬರುತ್ತದೆ. ಆದಿನಾಥ ತೀರ್ಥಂಕರರ ಅವಗಾಹನವು ೫೦೦ ಧನುಷ್ಯ ಮತ್ತು ಮಹಾವೀರರ ಅವಗಾಹವು ೭ ಮೊಳ(೧ಧನುಷ್ಯ ಮತ್ತು ೩ ಮೊಳ)ದ್ದಿದ್ದರೆ ಸರ್ವಾರ್ಥಸಿದ್ಧಿಯ ದೇವಗಳ ಎತ್ತರವು ೧ ಮೊಳದಷ್ಟಿರುತ್ತದೆ. ಅದರ ಅನುಸಾರವಾಗಿ ಅವರುಗಳ ಆತ್ಮಾಂಗುಲದ ಪ್ರಮಾಣವಾಗುವುದು. ಬಾಲಕರದು, ಯುವಕರದು ಅವರವರ ಆತ್ಮಾಂಗುಲದ ಪ್ರಮಾಣವು ಬೇರೆ-ಬೇರೆಯಾಗಿರುವುದು.

ಈಗ ವಾತವಲಯದ ಮಾತು ನಡೆಯುತ್ತಿದೆಯೆಂದ ಮೇಲೆ ಸ್ವಲ್ಪ ಕೇವಲೀ ಸಮುದ್ಘಾತದ ವಿಷಯವನ್ನು ತಿಳಿದುಕೊಳ್ಳೋಣ. ಮೂಲ ಶರೀರವನ್ನು ಬಿಟ್ಟುಕೊಡದೇ ಆತ್ಮಪ್ರದೇಶಗಳು ಹೊರಗೆ ಬರುವುದನ್ನು ಸಮುದ್ಘಾತವೆನ್ನುತ್ತಾರೆ. ಹದಿಮೂರನೆಯ ಗುಣಸ್ಥಾನದ ಕೊನೆಯ ಅಂತರ್ಮುಹೂರ್ತದಲ್ಲಿ ಆಯುಕರ್ಮಕ್ಕಿಂತ ಅಧಿಕ ಸ್ಥಿತಿಯು ಉಳಿದ ಮೂರು ಅಘಾತಿ ಕರ್ಮಗಳದ್ದಿದ್ದರೆ ಎಲ್ಲವುಗಳ ಸ್ಥಿತಿಯು ಸಮಾನವಾಗುವ ಸಲುವಾಗಿ ಕೇವಲೀ ಸಮುದ್ಘಾತವಾಗುತ್ತದೆ. ಆ ಸಮುದ್ಘಾತದ ಮೊದಲನೆಯ ಸಮಯದಲ್ಲಿ ಕೇವಲಿ ಭಗವಂತರ ಆತ್ಮ ಪ್ರದೇಶಗಳು ಲೋಕಾಕಾಶದ ಮೇಲಿನ ಮತ್ತು ಕೆಳಗಿನ ವಾತವಲಯಗಳನ್ನು ಹೊರತು ಪಡಿಸಿ-ಕೆಳಗೆ ೬೦೦೦೦ ಯೋಜನ ಮತ್ತು ಮೇಲೆ ಮೂರು ಹರದಾರಿ ಹಾಗೂ ೧೫೭೫ ಧನುಷ್ಯವನ್ನು ಬಿಟ್ಟು ಸ್ವಲ್ಪ ಕಡಿಮೆ ೧೪ ರಾಜೂ ಎತ್ತರವುಳ್ಳ, ಶರೀರ ಪ್ರಮಾಣ ವ್ಯಾಸವುಳ್ಳ ದಂಡಾಕಾರವಾಗಿ ಹರಡುತ್ತವೆ, ಇದನ್ನು ದಂಡ ಸಮುದ್ಘಾತವೆಂದು ಹೇಳುತ್ತಾರೆ. ಎರಡನೆಯ ಸಮಯದಲ್ಲಿ ಕಪಾಟ ಸಮುದ್ಘಾತವೆನ್ನುತ್ತಾರೆ ಇದರ ದಪ್ಪತನವಂತೂ ಶರೀರ ಪ್ರಮಾಣವಿರುತ್ತದೆ, ಆದರೆ ಅಡ್ಡಲಾಗಿ ಲೋಕಾಕಾಶದ ಕೊನೆಯವರೆಗೆ - ಪಾರ್ಶ್ವಭಾಗದ ವಾತವಲಯಗಳನ್ನು ಹೊರತುಪಡಿಸಿ - ಅಲ್ಲಿಯವರೆಗೆ ಹರಡುತ್ತವೆ. ಪೂರ್ವದ ಕಡೆಗೆ ಮುಖವಿದ್ದರೆ ದಕ್ಷಿಣೋತ್ತರ ಹರಡುತ್ತವೆ ಮತ್ತು ಉತ್ತರದ ಕಡೆಗೆ ಮುಖವಿದ್ದರೆ ಪೂರ್ವ-ಪಶ್ಚಿಮ ಹರಡುತ್ತವೆ. ಮೂರನೆಯ ಸಮಯದಲ್ಲಿ ಮುಂಭಾಗ ಮತ್ತು ಹಿಂಭಾಗದಲ್ಲಿಯೂ ಕೂಡ ಸರ್ವತ್ರ ವಾತವಲಯಗಳನ್ನು ಹೊರತು ಪಡಿಸಿ ಲೋಕದ ಕೊನೆಯವರೆಗೆ ಹರಡುತ್ತವೆ ಇದನ್ನು ಪ್ರತರ ಸಮುದ್ಘಾತವೆಂದು ಹೇಳುತ್ತಾರೆ. ನಾಲ್ಕನೆಯ ಸಮಯದಲ್ಲಿ ವಾತವಲಯ ಸಹಿತ ಲೋಕದ ಕೊನೆಯವರೆಗೆ ಸರ್ವತ್ರ ಹರಡಿ ಬಿಡುತ್ತವೆ, ಇದನ್ನು ಲೋಕಪೂರಣ ಸಮುದ್ಘಾತವೆಂದು ಹೇಳುತ್ತಾರೆ. ಐದನೆಯ ಸಮಯದಲ್ಲಿ ಪುನಃ ಪ್ರತರ, ಆರನೆಯ ಸಮಯದಲ್ಲಿ ಕಪಾಟ, ಏಳನೆಯ ಸಮಯದಲ್ಲಿ ದಂಡ ಮತ್ತು ಎಂಟನೆಯ ಸಮಯದಲ್ಲಿ ಮೂಲ ಶರೀರದೊಳಗೆ ಪ್ರವೇಶ ಮಾಡುತ್ತವೆ. ಎಲ್ಲ ಕೇವಲಿಗಳಿಗೆ ಇಂಥ ಸಮುದ್ಘಾತವಾಗುವುದಿಲ್ಲ.

ಈ ಪ್ರಕಾರ ನಾವು ವಾತವಲಯಗಳನ್ನು ತಿಳಿದುಕೊಂಡಾಯಿತು. ಘನೋದಧಿ ವಾತವು ಗೋಮೂತ್ರದ ಸಮಾನ ವರ್ಣವುಳ್ಳದ್ದಿದೆ, ಘನವಾತವು ಹೆಸರು ಕಾಳಿನ ಸಮಾನ ವರ್ಣವುಳ್ಳದ್ದಿದೆ ಮತ್ತು ತನುವಾತವು ಅನೇಕ ವರ್ಣವುಳ್ಳದ್ದಿದೆ. ಸಂಪೂರ್ಣ ಲೋಕವು ವಾತವಲಯಗಳ ಆಧಾರದಿಂದ ಸ್ಥಿತವಿದೆ. ಶಾಸ್ತ್ರಗಳಲ್ಲಿಯೂ ಕೂಡ ಘನೋದಧಿವಾತವಲಯವು ಘನವಾತವಲಯದ ಆಧಾರದಿಂದ ಇದೆ ಮತ್ತು ಘನವಾತವಲಯವು

ತನುವಾತವಲಯದ ಆಧಾರದಿಂದ ಇದೆ ಹಾಗೂ ತನುವಾತವಲಯವು ಆಕಾಶದ ಆಧಾರದಿಂದ ಇದೆಯೆಂದು ಬರುತ್ತದೆ. ಇದು ಕೇವಲ ಸಾಪೇಕ್ಷ ಕಥನವಿದೆ. ವಸ್ತುಸ್ಥಿತಿಯಂತೂ ಅಧಿಕರಣ ಗುಣವಿರುವುದರಿಂದ ಎಲ್ಲವೂ ತಮ್ಮ-ತಮ್ಮ ಆಧಾರದಿಂದ ಇರುತ್ತವೆ ಎಂಬುದಾಗಿದೆ. ಸಿದ್ಧರ ಸಲುವಾಗಿಯೂ ಕೂಡ ಅವರು ಸಿದ್ಧಕ್ಷೇತ್ರದಲ್ಲಿ ಇರುತ್ತಾರೆ, ಜೀವನು ಮೋಕ್ಷದೊಳಗೆ ಹೋದನೆಂದು ಹೇಳುತ್ತೇವೆ; ಆದರೆ ಮೋಕ್ಷವೆಂಬ ಹೆಸರಿನ ಯಾವ ಸ್ಥಾನವಿರುವುದಿಲ್ಲ ಅದಂತೂ ಜೀವದ ಅವಸ್ಥೆಯಿದೆ. ನಮಗೆಲ್ಲರಿಗೂ ಅದೇ ನಮ್ಮ ಅವಸ್ಥೆಯನ್ನೇ ಪ್ರಾಪ್ತ ಮಾಡಿಕೊಳ್ಳುವುದಿದೆ.

ಪ್ರಶ್ನೆ :- ಈ ಮೊದಲನೆಯ ನಂಬರಿನ ಚಿತ್ರದಲ್ಲಿ ತ್ರಸನಾಳಿಯು ಕೆಳಗಿನವರೆಗೆ ಏಕೆ ಹೋಗಿಲ್ಲ, ಅದು ಮಧ್ಯದಲ್ಲಿಯೇ ಏಕೆ ನೇತಾಡುತ್ತಿದೆ ?

ಉತ್ತರ :- ತ್ರಸನಾಡಿಯ ಎತ್ತರವು ಹದಿನಾಲ್ಕು ರಾಜೂ ಇದೆ. ನಾವು ಒಂದುವೇಳೆ ಕೇವಲ ಎದುರಿಗೇ ನೋಡಿದರೆ ಎಂದರೆ ಹೇಗೆ ಎರಡನೆಯ ನಂಬರಿನ ಚಾರ್ಟದೊಳಗೆ ತೋರಿಸಲಾಗಿದೆ. ಅದು ಮೇಲಿನಿಂದ ಕೆಳಗಿನವರೆಗೆ ತೋರಿಸುತ್ತದೆ. ಇಲ್ಲಿ ದಕ್ಷಿಣೋತ್ತರ ಏಳು ರಾಜೂವಿನ ಮಧ್ಯದೊಳಗೆ ಸ್ಥಿತವಿರುವ ಇದು ೧ ರಾಜೂ X ೧ ರಾಜೂ ಪ್ರಮಾಣದ ತ್ರಸನಾಳಿಯು ಮೇಲಿನಿಂದ ಲೋಕದ ತಳದವರೆಗೆ ವಿಸ್ತರಿಸಿಕೊಂಡಿದೆ. ತಾವು ನೋಡುತ್ತಿರುವ ಚಾರ್ಟದಲ್ಲಿ ಅದು ಲೋಕದ ತಳ (ಬೇಸ)ವಿದೆ. ತ್ರಿಭುಜವುಳ್ಳದ್ದಿರುವುದರಿಂದ ಹಾಗೆನಿಸುತ್ತದೆ. ಮೇಲಿನಿಂದ ಕೆಳಗಿನವರೆಗೆ ಅಳತೆ ಮಾಡಿದರೆ ದೊಡ್ಡ ಚಾರ್ಟದಲ್ಲಿ (ಕಲಿಸುವ ಸಮಯದಲ್ಲಿ ಕಪ್ಪು ಹಲಗೆಯ ಮೇಲೆ ಲಗತ್ತಿಸಲಾದ ಚಾರ್ಟದಲ್ಲಿ) - ೧ ರಾಜೂವಿನ ಸಲುವಾಗಿ ೪ ಸೆಂ.ಮೀ. ಅಳತೆಯಂತೆ ಗಣಿಸಿ ಎಲ್ಲ ಚಾರ್ಟಗಳನ್ನು ಸಿದ್ಧ ಪಡಿಸಲಾಗಿದೆ. ಪುಸ್ತಕದಲ್ಲಿರುವ ಚಾರ್ಟಗಳು ಚಿಕ್ಕವಿವೆ.

ಪ್ರಶ್ನೆ :- ಈ ಪಲ್ಯ, ರಾಜೂ ಮೊದಲಾದವುಗಳ ಎಂದರೆ ದೊಡ್ಡ ದೊಡ್ಡ ಪ್ರಮಾಣಗಳ ಕಲ್ಪನೆ ಮಾಡಲಾಗುವುದಿಲ್ಲ, ಹಾಗಿದ್ದ ಮೇಲೆ ಇವುಗಳ ಸಿದ್ಧಿಯು ಹೇಗೆ ಆಗುವ ಸಾಧ್ಯತೆಯಿದೆ ?

ಉತ್ತರ :- ಈ ಮಾತಿನ ಸ್ಪಷ್ಟೀಕರಣವನ್ನು ಮೊದಲೇ ವಿಸ್ತಾರದಿಂದ ಮಾಡಲಾಗಿದೆ. ಇವೆಲ್ಲ ಮಾತುಗಳನ್ನು ಸರ್ವಜ್ಞ ಭಗವಂತರು ಪ್ರತ್ಯಕ್ಷವಾಗಿ ತಿಳಿದುಕೊಂಡು ಹೇಳಿರುವಂಥವಿವೆ. ನಾವುಗಳು ಅಲ್ಪಜ್ಞಾನಿಗಳಿದ್ದೇವೆ, ಅವರುಗಳ ಕಥನದ ಅನುಸಾರ ರಚಿಸಲ್ಪಟ್ಟಿರುವ ಜಿನಾಗಮದಿಂದ ಈ ಮಾತುಗಳನ್ನು ತಿಳಿಯುವ ಸಾಧ್ಯತೆಯಿದೆ. ಜಿನಾಗಮವು ಪ್ರಮಾಣವಿದೆ. ನಾವು ನಮ್ಮ ಅಲ್ಪಜ್ಞಾನದಿಂದ ಅವುಗಳ ಸಿದ್ಧಿ ಮಾಡಲಾಗುವುದಿಲ್ಲ. ಯಾವನೋ ಬಾಲಕನು ಸಾಗರದ ಜಲವನ್ನು ಚಿಕ್ಕದಾದ ಬಟ್ಟಲಿನಿಂದ ಅಳೆಯಲಿಚ್ಛಿಸಿದರೆ, ಅದು ಹೇಗೆ ಸಂಭವವಿದೆ ? ಆದರೆ ಈ ಮಾತುಗಳನ್ನು ತಿಳಿಯುವುದರಿಂದ ಸರ್ವಜ್ಞರ ಕೇವಲಜ್ಞಾನದ ಮಹಿಮೆಯಾದರೂ ಬರಬಹುದಾಗಿದೆ !

ನಮಗೆ ಯಾವ ಮಾತುಗಳು ಗೊತ್ತಿಲ್ಲ ಅಥವಾ ತಿಳಿದಿಲ್ಲ ಅವು ಇಲ್ಲವೇ ಇಲ್ಲ, ಸರ್ವಜ್ಞರು ಯಾರೂ ಇರುವುದೇ ಇಲ್ಲವೆಂದು ಹೇಳುವುದು ಅದು ಕೂಡ ಮಂಡೂಕದ ನ್ಯಾಯವಿದೆ. ಆ ಕಥೆಯಂತೂ ಎಲ್ಲರಿಗೂ ಪರಿಚಿತವಿದೆ. ಬಾವಿಯಲ್ಲಿ ವಾಸ ಮಾಡುವಂಥ ಕಪ್ಪೆಯೊಂದು ಒಂದು ಸಲ ಹೊರಗೆ ಬಂದು ಬಿಡುತ್ತದೆ, ಹಾಗೇ ಹೋಗುತ್ತ ಹೋಗುತ್ತ ಅದು ಸಮುದ್ರದ ದಡವನ್ನು ತಲುಪುತ್ತದೆ. ಅಲ್ಲಿ ಸಮುದ್ರದ ಅಪಾರ ಜಲರಾಶಿಯನ್ನು ಕಂಡು ಆಶ್ಚರ್ಯಚಕಿತವಾಗಿ ಹೋಗುತ್ತದೆ. ಮರಳಿ ಬಂದು ಅದು ತನ್ನ ಜತೆಗಾರರಿಗೆ ಎಂದರೆ ಆ ಬಾವಿಯಲ್ಲಿ

ವಾಸಿಸುತ್ತಿರುವ ಕಪ್ಪೆಗಳಿಗೆ ಸಮುದ್ರದ ವಿಶಾಲತೆ - ಅಪಾರ ಜಲದ ವರ್ಣನೆ ಮಾಡಿದರೆ ಅದರ ವಿಶ್ವಾಸವನ್ನೇ ಅವು ಮಾಡಲಿಲ್ಲವೆಂಬಂತಾಗಿದೆ. ನಾವು ಕೂಡ ಇದನ್ನು ಶಾಂತಿಯಿಂದ ಆಲಿಸಬೇಕು ಮತ್ತು ತಿಳಿದುಕೊಳ್ಳಬೇಕಾಗುವುದು. ಈಗ ವರ್ತಮಾನದಲ್ಲಿ ಮೋಬಾಈಲ ಹಾಗೂ ಕಂಪ್ಯೂಟರ್ ಸಾಯನ್ಸ್‌ಗಳಿಂದ ಯಾವ ಸಂಶೋಧನೆಗಳಾಗಿವೆ ಅವುಗಳ ಕಲ್ಪನೆಯನ್ನಾದರೂ ೫೦-೬೦ ವರ್ಷಗಳ ಮೊದಲು ನಾವೇ ಮಾಡಬಹುದಾಗಿತ್ತೇನು ?

ಇಲ್ಲಿಯಂತೂ ಬಹಳಷ್ಟು ಸ್ಥೂಲವಾದ ಕಥನವಿದೆ. ಇವುಗಳ ಗಣಿತವನ್ನು ಅದೆಷ್ಟು ಸೂಕ್ಷ್ಮದಿಂದ ತಿಳಿಸಿಕೊಟ್ಟಿದ್ದಾರೆಂದರೆ ನಮ್ಮಗಳ ಜ್ಞಾನವು ಸೋತು ಹೋಗುತ್ತದೆ. ಹೇಗೆ ವೃತ್ತ-ಚೌಕೋಣ, ತ್ರಿಕೋಣಗಳ ಕ್ಷೇತ್ರ ಫಲವನ್ನು ತಗೆಯುವುದಿದ್ದರೆ ಅದರಲ್ಲಿಯಂತೂ ಇಂದಿನ ವಿಜ್ಞಾನದ ಮೂಲಕ ಬೇರಾವುದೋ ಉತ್ತರವು ಬರುವ ಹಾಗೆಯಂತೂ ಇಲ್ಲ. ಇದರ ಗಣಿತಗಳು ಹಾಗೂ ಅವರುಗಳ ಪದ್ಧತಿಯನ್ನು ನೋಡ ಹೋದರೆ ಇಂದಿನ ಆಧುನಿಕ ಗಣಿತಗಳು ಇದರ ಎದುರಿಗೆ ಏನೂ ಇಲ್ಲವೆಂಬುದು ತಿಳಿದು ಬರುತ್ತದೆ. ಅಧಿಕ ರುಚಿಯುಳ್ಳವರು ಮತ್ತು ಸಮಯಾವಕಾಶವಿರುವಂಥ ಭಾಗ್ಯಶಾಲಿಗಳು ಮೂಲ ಗ್ರಂಥಗಳ ಅಭ್ಯಾಸ ಮಾಡಿ ತಿಳಿದುಕೊಳ್ಳಬೇಕೆಂದು ಸೂಚಿಸುತ್ತ ಈ ಪಾಠವನ್ನು ಇಲ್ಲಿಗೆ ನಿಲ್ಲಿಸುತ್ತೇವೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನ ಎರಡನೆಯ ತೀರ್ಥಂಕರ ಭಗವಂತರಾದ
ಶ್ರೀ ಯುಗಮಂಧರ ಸ್ವಾಮಿಗೆ ಜಯವಾಗಲಿ.

★★★★★

ಕೇವಲ ರಾಗ ಭಾವವೆಂದು ಹೇಳಿದರೆ ಒಂದು ಕಷಾಯ ಭಾವವಿದೆಯೆಂಬ ಅರ್ಥವಿದೆ, ಈ ಕಷಾಯ ಶಬ್ದದಲ್ಲಿ ಮಿಥ್ಯಾತ್ವ ಮತ್ತು ರಾಗವೆಲ್ಲ ಬಂದು ಬಿಡುತ್ತದೆ. ಮಿಥ್ಯಾತ್ವವು ಕೂಡ ರಾಗವಿದೆ. ಆತ್ಮನು ಸಪ್ತ ತತ್ತ್ವಗಳನ್ನು ಹೇಗೆ ಸಿದ್ಧಮಾಡುತ್ತಾನೆ ? ಸಪ್ತ ತತ್ತ್ವಗಳ ಶ್ರದ್ಧೆಯೆಂದರೇನು ? - ಆತ್ಮನು ಜ್ಞಾಯಕ ಸ್ವರೂಪನಿದ್ದಾನೆ-ಅವನನ್ನು ಆ ಪ್ರಕಾರದಿಂದ, ರಾಗವು ರಾಗರೂಪವಿದೆ - ಅದನ್ನು ಆ ಪ್ರಕಾರದಿಂದ, ಅಜೀವವು ಅಜೀವರೂಪವಿದೆ-ಅದನ್ನು ಆ ಪ್ರಕಾರದಿಂದ ಅರ್ಥಾತ್ ಅಜೀವದಿಂದ ರಾಗವಿಲ್ಲ, ರಾಗದಿಂದ ಆತ್ಮನಿಲ್ಲ; ಆತ್ಮನಿಂದ ರಾಗವಿಲ್ಲ ಮತ್ತು ಆತ್ಮನಿಂದ ಅಜೀವವಿಲ್ಲ ಕರ್ಮಾದಿಗಳು ಅಜೀವವಿವೆ, ಅವುಗಳಿಂದ ರಾಗವಿಲ್ಲ. ರಾಗವು ಆಸ್ರವ ತತ್ತ್ವವಿದೆ. ಅಜೀವದಿಂದ ಆಸ್ರವವಿಲ್ಲ ಮತ್ತು ಆತ್ಮನಿಂದ ಆಸ್ರವವಿಲ್ಲ. ಆತ್ಮನು ಜ್ಞಾನಾನಂದ ಸ್ವಭಾವಿಯಿದ್ದಾನೆ. ಅಧರ ಪರ್ಯಾಯದೊಳಗಿಂದ - ಒಳಗಿನ ಮಿಥ್ಯಾ ಬುದ್ಧಿಯಿಂದ ಉತ್ಪನ್ನವಾಗುವ ರಾಗವು ಆಸ್ರವ ತತ್ತ್ವವಿದೆ. ಅದು ಜೀವದ ಸ್ವಭಾವದಲ್ಲಿ ಇಲ್ಲ ಮತ್ತು ತ್ರಿಕಾಲೀ ಗುಣಗಳಲ್ಲಿ ಇಲ್ಲ ಅದನ್ನು ತನ್ನದೆಂದು ಮನ್ನಿಸುವುದು ಅದು ಮಿಥ್ಯಾದೃಷ್ಟಿ ಎಂದರೆ ದೃಷ್ಟಿಯ ವಿಪರೀತತೆಯಿದೆ. ಅದನ್ನು ಕಂಡು ಕೊಳ್ಳುವುದು - ಖಚಿತವಾಗಿ ನಂಬುವುದು ಮತ್ತು ಅಕಷಾಯ ಭಾವದ ಆತ್ಮನು ದೃಷ್ಟಿಯಲ್ಲಿ ಬಂದು ಬಿಡುವುದು ಅದುವೇ ಗ್ರಂಥಗಳ ಅಧ್ಯಯನದ ಪ್ರಯೋಜನವಿದೆ.

೩. ಅಧೋಲೋಕ - ನರಕಗಳು

ತ್ರಿಲೋಕಸಾರ ಮಹಾಗ್ರಂಥದ ಆಧಾರದಿಂದ ಇಲ್ಲಿ ನಾವು ಮೂಲೋಕಗಳ ರಚನೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಎರಡು ಪಾಠಗಳಲ್ಲಿ ನಾವು ಊರ್ಧ್ವ, ಮಧ್ಯ, ಅಧೋಲೋಕಗಳ ಸ್ವರೂಪವನ್ನು ತಿಳಿಯುವ ಅಲ್ಪದಾದ ಪ್ರಯತ್ನ ಮಾಡಿದ್ದೇವೆ. ಇದಂತೂ ತುಂಬಾ ಕಠಿಣವೆನಿಸುತ್ತಿದೆ. ನೇರವಾಗಿ ಸಿದ್ಧಶಿಲೆಗೆ ಸಾಗುವುದನ್ನು ತಿಳಿದುಕೊಂಡರೆ ಸಾಕು - ಎಂಬ ಅಭಿಪ್ರಾಯವೂ ಮೂಡಿ ಬರುತ್ತಲಿದೆ. ಆದರೆ ಈಗ ನಾವು ನರಕವನ್ನು ತಲುಪುವುದು ಸುಲಭವಿದೆ ಆದುದರಿಂದ ಮೊದಲು ಅನೇಕ ಬಾರಿ ಹೋಗಿ ಬಂದಿರುವಂಥ ಆ ನರಕಗಳ ಚರ್ಚೆಯನ್ನು ತಿಳಿದುಕೊಳ್ಳುವುದು ಸುಲಭವಿದೆ. ನಮಗಂತೂ ಮೂರು ಲೋಕಗಳನ್ನು ತಿಳಿಯುವುದಿದೆ. ಈಗ ಯಾವ-ಯಾವ ವಿಷಯಗಳನ್ನು ಚರ್ಚಿಸಿದ್ದೇವೆ ? - ಎಂಬುದರ ಒಂದು ಕಿರುನೋಟ ಅಥವಾ ಪುನಃ ಸ್ಮರಣೆ ಮಾಡೋಣ.

ಆಕಾಶದ್ರವ್ಯವು ಅನಂತ-ಅನಂತ-ಅನಂತ-ಅನಂತ ಪ್ರದೇಶಿಯಿದೆಯೆಂಬುದನ್ನು ತಿಳಿದೆವು. ಅನಂತ ಅರ್ಥಾತ್ ಎಷ್ಟು ಅನಂತ ? ಅನೇಕ ವರ್ಷಗಳಿಂದ ಶಾಸ್ತ್ರಾಭ್ಯಾಸದಲ್ಲಿ ಅಭಿರುಚಿಯನ್ನು ಹೊಂದಿರುವ ನಾವು ಅದೆಷ್ಟೋ ಧಾರ್ಮಿಕ ಶಿಕ್ಷಣ ಶಿಬಿರಗಳಲ್ಲಿ ಪಾಲ್ಗೊಂಡು ಜೈನ ಸಿದ್ಧಾಂತ ಪ್ರವೇಶಿಕೆಯನ್ನು ಕಲಿತುಕೊಂಡಿದ್ದೇವೆ. ಅಲ್ಲಿಯ ಪರಿಭಾಷೆಗಳು ಕಂಠಸ್ಥವಾಗಿ ಹೋಗಿವೆ, - ಜೀವ ದ್ರವ್ಯಗಳು ಅನಂತವಿವೆ, ಅವುಗಳಿಂದ ಅನಂತ ಗುಣಿತ ಪುದ್ಗಲ ದ್ರವ್ಯಗಳಿವೆ, ಅವುಗಳಿಂದ ಅನಂತ ಗುಣಿತ ಮೂರು ಕಾಲದ ಸಮಯಗಳಿವೆ, ಅವುಗಳಿಂದ ಅನಂತ ಗುಣಿತ ಆಕಾಶದ್ರವ್ಯದ ಪ್ರದೇಶಗಳಿವೆ ಮತ್ತು ಅವುಗಳಿಂದಲೂ ಅನಂತ ಗುಣಿತ ಜೀವದ್ರವ್ಯದ-ಪುದ್ಗಲದ್ರವ್ಯದ- ಪ್ರತಿಯೊಂದು ದ್ರವ್ಯದ ಎಂದರೆ ಸಮಸ್ತ ದ್ರವ್ಯಗಳ ಗುಣಗಳಿವೆ.

ಇಲ್ಲಿ ಯಾವ ಅನಂತ ಪ್ರದೇಶಿಯಾದ ಆಕಾಶದ್ರವ್ಯವಿದೆ ಅದರ ಮಧ್ಯಭಾಗದಲ್ಲಿ -ಆಕಾಶದ್ರವ್ಯದ ಅನಂತದ ಒಂದು ಭಾಗ ಪ್ರಮಾಣ ಕ್ಷೇತ್ರದಲ್ಲಿ ಅನ್ಯ ಐದು ದ್ರವ್ಯಗಳು ಕಂಡು ಬರುತ್ತವೆ, ಅದನ್ನು ಲೋಕಾಕಾಶವೆಂದು ಹೇಳುತ್ತಾರೆ ಮತ್ತು ಅದು ಅಸಂಖ್ಯಾತ ಪ್ರದೇಶಿಯಿದೆ. ಲೋಕಾಕಾಶದಲ್ಲಿ ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲ ದ್ರವ್ಯಗಳು ಕಂಡು ಬರುತ್ತವೆ ಮತ್ತು ಆಕಾಶ ದ್ರವ್ಯವಂತೂ ಸ್ವಯಂ ಇದ್ದೇ ಇದೆ. ಈ ಆರು ದ್ರವ್ಯಗಳ ಸಮೂಹವನ್ನು ಲೋಕವೆಂದು ಹೇಳುತ್ತಾರೆ. ಲೋಕದ ಹೊರಗೆ ಅನಂತಪ್ರದೇಶಿ ಆಕಾಶದ್ರವ್ಯವಿದ್ದು ಅದನ್ನು ಅಲೋಕಾಕಾಶವೆಂದು ಹೇಳುತ್ತಾರೆ.

ಲೋಕಾಕಾಶದಲ್ಲಿ ಕಾಣಿಸುವಂಥ ದ್ರವ್ಯವು-ರೂಪೀ ದ್ರವ್ಯವಂತೂ ಒಂದೇ ಇದೆ ಅದು ಪುದ್ಗಲದ್ರವ್ಯವಿದೆ. ಆದರೆ ಸರ್ವಜ್ಞ ಭಗವಂತರಂತೂ ಎಲ್ಲ-ಆರೂ ದ್ರವ್ಯಗಳನ್ನು ನೋಡುತ್ತಾರೆ - ತಿಳಿಯುತ್ತಾರೆ. ಆ ಲೋಕದ ರಚನೆಯು ಎಂಥದ್ದಿದೆಯೆಂಬುದನ್ನು ನಾವು ಸರ್ವಜ್ಞ ಭಗವಂತರ ವಾಣಿಯ ಅನುಸಾರ ತಿಳಿಯುತ್ತಿದ್ದೇವೆ. ಇದು ಪ್ರಮಾಣವಿದೆ - ಇದನ್ನು ಅನ್ಯ ಪ್ರಮಾಣದಿಂದ ಸಿದ್ಧ ಮಾಡಬೇಕಾದ ಅವಶ್ಯಕತೆಯಿಲ್ಲ. ಯಾವ ರೀತಿ ನಮ್ಮ ನಮ್ಮ ಗ್ರಾಮಗಳಲ್ಲಿ ಯಾವ ಸೂರ್ಯನ ಉದಯವಾಗುತ್ತದೆ ಅವನನ್ನು ನಾವು ಯಾವ ದೀವಿಗೆಯಿಂದ ಯಾವುದರ ಪ್ರಕಾಶದೊಂದಿಗೆ ಅವನು ಉದಿಸಿದ್ದಾನೋ ಅಥವಾ ಇಲ್ಲವೆಂಬುದನ್ನು ನೋಡುತ್ತೇವೆ ? ಯಾವನು ಎಲ್ಲವನ್ನೂ ಪ್ರಕಾಶಿತ ಮಾಡುತ್ತಾನೆ ಅಂಥ ಆ ದೈದೀಪ್ಯಮಾನ ಸೂರ್ಯನನ್ನು ನೋಡುವ ಸಲುವಾಗಿ ಬೇರೆ ಯಾವುದಾದರೂ ದೀವಿಗೆ ಅಥವಾ ಪ್ರಕಾಶದ ಅವಶ್ಯಕತೆಯೇನಿದೆ ?

ಈ ಲೋಕವು ಅಸಂಖ್ಯಾತ ಪ್ರದೇಶಿಯಿದೆ. ಮೇಲಿನಿಂದ ಕೆಳಗಿನವರೆಗೆ ಅದರ ಎತ್ತರವು ಹದಿನಾಲ್ಕು ರಾಜೂ, ದಕ್ಷಿಣೋತ್ತರ ಅಗಲವು ಸರ್ವತ್ರ ಏಳೂ ರಾಜೂ, ಪೂರ್ವ-ಪಶ್ಚಿಮದಲ್ಲಿನ ಅಗಲವು ಕೆಳಗೆ ಏಳು ರಾಜೂ, ಮಧ್ಯಲೋಕದ ಹತ್ತಿರ ಒಂದು ರಾಜೂ, ಅಲ್ಲಿಂದ ಮೂರೂವರೆ ರಾಜೂ ಮೇಲೆ ಹೋಗಿ ಬ್ರಹ್ಮಸ್ವರ್ಗದ ಹತ್ತಿರ ಐದು ರಾಜೂ ಮತ್ತು ಎಲ್ಲಕ್ಕಿಂತ ಮೇಲೆ ಲೋಕಾಗ್ರದಲ್ಲಿ ಒಂದು ರಾಜೂವಿದೆ.

ಈ ಲೋಕಾಕಾಶವು ಹತ್ತೂ ದಿಕ್ಕುಗಳಲ್ಲಿ ವಾತವಲಯಗಳಿಂದ ಸುತ್ತುವರೆಯಲ್ಪಟ್ಟಿದೆ. ಆ ವಾತವಲಯಗಳು ಎಲ್ಲಕ್ಕಿಂತ ಕೆಳಗೆ ಇಪ್ಪತ್ತು-ಇಪ್ಪತ್ತು-ಇಪ್ಪತ್ತು ಸಾವಿರ ಯೋಜನ ದಪ್ಪ (ಸ್ಥೂಲ)ವಿವೆ. ಏಳನೇ ಪೃಥ್ವಿಯ ಪಾರ್ಶ್ವಭಾಗದಲ್ಲಿ ಏಳು, ಐದು, ನಾಲ್ಕು ಯೋಜನವಿವೆ. ಮಧ್ಯಲೋಕದ ಪಾರ್ಶ್ವ ಭಾಗದಲ್ಲಿ ಸ್ವಲ್ಪ ಕಡಿಮೆ-ಐದು, ನಾಲ್ಕು, ಮೂರು ಯೋಜನವಿವೆ ಪುನಃ ಮೇಲೆ ಹೆಚ್ಚುತ್ತವೆ ಮತ್ತು ಪುನಃ ಕಡಿಮೆಯಾಗುತ್ತ ಹೋಗುತ್ತವೆ. ಎಂಟೂ ಪೃಥ್ವಿಗಳ - ಪ್ರತಿಯೊಂದರ ಕೆಳಗೆಯೂ ಇಪ್ಪತ್ತು ಸಾವಿರ ಯೋಜನ ದಪ್ಪದ ಮೂರು-ಮೂರು ವಾತವಲಯಗಳಿವೆ. ಲೋಕಾಗ್ರದಲ್ಲಿ ಎಂಟನೆಯ ಪೃಥ್ವಿಯು ಒಂದು ರಾಜೂ ಮತ್ತು ಏಳು ರಾಜೂ ಅಗಲವುಳ್ಳದ್ದಿದೆ. ಇದರ ಮೇಲೆಯೂ ಕೂಡ ವಾತವಲಯಗಳಿವೆ. ಮೊದಲನೆಯ ಘನೋದಧಿವಾತವಲಯವು ಎರಡು ಹರದಾರಿ, ಘನವಾತವಲಯವು ಒಂದು ಹರದಾರಿ ಮತ್ತು ತನುವಾತವಲಯವು ಹದಿನೈದು ನೂರಾ ಎಪ್ಪತ್ತೈದು ಧನುಷ್ಯವಿದೆ. ಎರಡು ಸಾವಿರ ಧನುಷ್ಯಗಳದ್ದು ಒಂದು ಹರದಾರಿಯಾಗುತ್ತದೆ. ಇದೆಲ್ಲ ಮಹಾಧನುಷ್ಯ ಮಹಾಹರದಾರಿ, ಮಹಾಯೋಜನಗಳ ಮಾತು ಇದೆ. ಅದರಲ್ಲಿ ಐನೂರಾ ಇಪ್ಪತ್ತೈದು ಧನುಷ್ಯ ಪ್ರಮಾಣ ಸಿದ್ಧರ ಉತ್ಕೃಷ್ಟ ಅವಗಾಹನವಿದೆ. ಅದು ಸಾಮಾನ್ಯ ಧನುಷ್ಯವಿದೆ, ಮಹಾಧನುಷ್ಯವಲ್ಲ. ಎಲ್ಲ ಸಿದ್ಧರು ತನುವಾತವಲಯದ ಅಂತಿಮ ಭಾಗದಲ್ಲಿ ಸ್ಥಿತರಿದ್ದಾರೆ.

ಯಾವುದನ್ನು ಸಿದ್ಧಶಿಲೆಯೆಂದು ಹೇಳುತ್ತಾರೆ ? ಏತಕ್ಕಾಗಿ ಹಾಗೆ ಹೇಳುತ್ತಾರೆ ? ಅದರ ಮೇಲೆ ಸಿದ್ಧ ಜೀವರುಗಳಿರುವುದಿಲ್ಲ, ಅದರ ಒಳಗೆ ಕೂಡ ಇರುವುದಿಲ್ಲವೆಂದ ಮೇಲೆ ಅದನ್ನು ಸಿದ್ಧಶಿಲೆ ಅಥವಾ ಸಿದ್ಧ ಕ್ಷೇತ್ರವೆಂದೇಕೆ ಹೇಳುತ್ತಾರೆ. ಅಲ್ಲದೇ ಸಿದ್ಧಶಿಲೆಯು ನಲವತ್ತೈದು ಲಕ್ಷಯೋಜನ ವಿಸ್ತಾರವುಳ್ಳದ್ದಿದೆ - ವ್ಯಾಸವುಳ್ಳದ್ದಿದೆ. ಇಷ್ಟು ನಲವತ್ತೈದು ಲಕ್ಷ ಯೋಜನವುಳ್ಳದ್ದು ಮತ್ತೆ ಏನಿದೆ ? - ಅಹುದು ಮನುಷ್ಯ ಲೋಕವಿದೆ ಎರಡೂವರೆ ದ್ವೀಪವಿದೆ - ಅಲ್ಲಿ ಮನುಷ್ಯರು ವಾಸ ಮಾಡುತ್ತಾರೆ.

ನಾಲ್ಕು ಗತಿಗಳೊಳಗಿಂದ ಯಾವ ಗತಿಯಿಂದ ಜೀವರುಗಳು ಸಿದ್ಧ ಪದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ? ನಾರಕಿಗಳು, ತಿರ್ಯಂಚಗಳು, ದೇವಗಳು ಅದೇ ಗತಿಯಿಂದ ಮೋಕ್ಷಕ್ಕೆ ಹೋಗಬಹುದಾಗಿದೆಯೇನು ? ದೇವಗಳಿಗಂತೂ ಸಿದ್ಧಶಿಲೆಯು ತೀರ ಹತ್ತಿರದಲ್ಲಿದೆ, ಹಾಗಿದ್ದರೆ ಅವರಿಗೆ ಅಲ್ಲಿಂದ ಮೋಕ್ಷವಾಗುವ ಸಾಧ್ಯತೆಯಿದೆಯೇನು ? ಸರ್ವಾರ್ಥಸಿದ್ಧಿಯೆಂಬ ಹೆಸರಿನ ದೇವಗಳ ವಿಮಾನದಿಂದಂತೂ ಸಿದ್ಧಶಿಲೆಯು ಹನ್ನೆರಡು ಯೋಜನ ಮೇಲಿದೆ, ಅವರಿಗಂತೂ ಅದೆಷ್ಟು ಹತ್ತಿರದಲ್ಲಿದೆ, ಆದಾಗ್ಯೂ ದೇವಗಳು ಅಲ್ಲಿ ಹೋಗುವ ಸಾಧ್ಯತೆಯಿಲ್ಲ. ಸರ್ವಾರ್ಥಸಿದ್ಧಿಯಿಂದ ಸಿದ್ಧಶಿಲೆಯ ಅಂತರವು ಒಂದು ಕೂದಲೆಳೆಯಷ್ಟಿದೆಯೆಂದು ಅದೆಷ್ಟೋ ಗ್ರಂಥಗಳಲ್ಲಿ ಬರುತ್ತದೆ - ಕೆಲವರು ಹಾಗೆ ಹೇಳುತ್ತಾರೆಯೂ ಕೂಡ ಆದರೆ ಆ ಮಾತು ಅಕ್ಷರಶಃ ಸತ್ಯವಿಲ್ಲ ಅದಂತೂ ಮನುಷ್ಯ ಮತ್ತು ದೇವಗಳ ಗತಿಯೋಗ್ಯ ಪಾತ್ರತೆ, ಪವಿತ್ರತೆ ಹಾಗೂ ಪುರುಷಾರ್ಥಗಳ ನಿರೂಪಣೆ

ಮಾಡುವಾಗ ಸಾಪೇಕ್ಷ ಕಥನ ಮಾಡಿರುವಂಥದ್ದಿದೆ. ಮೇರು ಪರ್ವತದ ಮೇಲ್ಭಾಗದಲ್ಲಿರುವ ಮೊದಲನೆಯ ಸ್ವರ್ಗದ ಅಂತರವು ಒಂದು ಕೂದಲೆಳೆಯಷ್ಟು ಇದೆಯೆಂಬ ಮಾತು ನಿಯಮದಿಂದ ಸತ್ಯವಿದೆ. ಮೊದಲನೆಯ ಸ್ವರ್ಗದ ಮೊದಲನೆಯ ಪಟಲವು ಸುಮೇರು ಪರ್ವತ ಚೂಲಿಕೆಯಿಂದ ಕೇವಲ ಒಂದು ಕೂದಲೆಳೆಯಷ್ಟು ಅಂತರದ ಮೇಲೆ ಸ್ಥಿತವಿದೆ. ಆದರೆ ಸರ್ವಾರ್ಥ ಸಿದ್ಧಿಯಿಂದ ಹನ್ನೆರಡು ಯೋಜನ ಸರಿಯಾದ ಅಂತರದಿಂದ ಮೇಲೆ ಸಿದ್ಧಶಿಲೆಯಿದೆ, ಕೂದಲೆಳೆಯಷ್ಟು ಅಲ್ಲವೆಂಬುದನ್ನು ತಿಳಿದುಕೊಳ್ಳುವುದು.

ಬೇರೆ ಯಾವುದೇ ಗತಿಯಿಂದ ಜೀವನು ಮೋಕ್ಷಕ್ಕೆ ಹೋಗುವ ಸಾಧ್ಯತೆಯಿಲ್ಲ ಮತ್ತು ಮುನಿಯಾಗುವ ಸಾಧ್ಯತೆಯೂ ಇಲ್ಲ. ತಿರ್ಯಂಚಗಳು ಐದನೆಯ ಗುಣಸ್ಥಾನದವರೆಗೆ ಹೋಗುವ ಸಾಧ್ಯತೆಯಿದೆ. ದೇವ ಮತ್ತು ನಾರಕಿಗಳು ನಾಲ್ಕನೆಯ ಗುಣಸ್ಥಾನದವರೆಗೆ ಮಾತ್ರ ಹೋಗುವ ಸಾಧ್ಯತೆಯಿದೆ. ಮನುಷ್ಯರು ಹದಿನಾಲ್ಕನೆಯ ಗುಣಸ್ಥಾನದವರೆಗೆ ಹೋಗಿ ನಂತರ ಸಿದ್ಧಭಗವಂತರಾಗುವ ಸಾಧ್ಯತೆಯಿದೆ. ಮನುಷ್ಯಲೋಕವು ನಲವತ್ತೈದು ಲಕ್ಷ ಯೋಜನ ವಿಸ್ತಾರವುಳ್ಳದ್ದಿದೆ ಮತ್ತು ಅದರಲ್ಲಿ ಎಲ್ಲಿಂದ ಬೇಕಾದರೂ ಜೀವನು ಮೋಕ್ಷಕ್ಕೆ ಹೋಗುವ ಸಾಧ್ಯತೆಯಿದೆ.

ಇನ್ನು ತಮಗೆಲ್ಲ ಸಂದೇಹವು ಬರಬಹುದಾಗಿದೆ – ಅದೇನೆಂದರೆ ಭೋಗಭೂಮಿಯಲ್ಲಂತೂ ಯಾವುದೇ ಜೀವವು ಸಿದ್ಧವಾಗುವಂಥದ್ದಿರುವುದಿಲ್ಲ. ಅಲ್ಲಿ ಯಾರೂ ಮುನಿರಾಜರು ಇರುವುದಿಲ್ಲ. ಅಲ್ಲಿಯಂತೂ ಕೇವಲ ನಾಲ್ಕನೆಯ ಗುಣಸ್ಥಾನದವರೆಗಿನ ಜೀವಗಳೇ ಇರಬಹುದಾಗಿದೆ. ಅಲ್ಲದೇ ಭೋಗಭೂಮಿಯ ಎಲ್ಲ ಜೀವಗಳು ಅಲ್ಲಿಂದ ಮರಣಹೊಂದಿ ದೇವಗತಿಯೊಳಗೇ ಜನ್ಮ ಪಡೆಯುತ್ತವೆ. ಹೀಗಿದ್ದ ಮೇಲೆ ನಲವತ್ತೈದು ಲಕ್ಷ ಯೋಜನ ಮನುಷ್ಯ ಕ್ಷೇತ್ರದಿಂದ ಜೀವಗಳು ಎಲ್ಲಿಂದ ಬೇಕಾದರೂ ಮೋಕ್ಷಕ್ಕೆ ಹೋಗುವ ಮಾತು ಹೇಗೆ ಸಾಧ್ಯವಿದೆ.

ಅದರ ಸಮಾಧಾನವು ಈ ಪ್ರಕಾರವಿದೆ – ಯಾರೋ ಮುನಿರಾಜರು ಯಾವಾಗ ಧ್ಯಾನದಲ್ಲಿ ಲೀನರಾಗಿ ಹೋಗಿರುತ್ತಾರೆ ಆಗ ಪೂರ್ವಭವದ ಯಾವನೋ ವೈರಿ ದೇವನು ಅವರನ್ನು ಎತ್ತಿ ಒಯ್ದು ಮನುಷ್ಯ ಲೋಕದಲ್ಲಿ ಎಲ್ಲಿಯಾದರೂ ಎಸೆದು ಬಿಡುತ್ತಾನೆ. ಸಮುದ್ರದಲ್ಲಿ, ಪರ್ವತಗಳ ಮೇಲೆ, ಭೋಗಭೂಮಿ ಮೊದಲಾಗಿ ಎಲ್ಲಿ ಬೇಕಾದರೂ ಹಾಕಿ ಬಿಡಬಹುದಾಗಿದೆ. ಅಲ್ಲಿ ಆ ಮುನಿರಾಜರು ಕ್ಷಪಕ ಶ್ರೇಣಿಯನ್ನು ಮಂಡಿಸಿ ಅರಹಂತ ಅವಸ್ಥೆಯನ್ನು ಪ್ರಾಪ್ತ ಮಾಡಿಕೊಂಡು ಸಿದ್ಧ ಅವಸ್ಥೆಯನ್ನು ಪ್ರಕಟಪಡಿಸಿಕೊಳ್ಳುತ್ತಾರೆ ಮತ್ತು ಆಕಾಶದ ಅದೇ ಶ್ರೇಣಿಯಿಂದ ಊರ್ಧ್ವಗಮನ ಮಾಡಿ ಸಿದ್ಧಾಲಯದಲ್ಲಿ ವಿರಾಜಮಾನರಾಗುತ್ತಾರೆ. ಆ ಜೀವರುಗಳ ಅಪೇಕ್ಷೆಯಿಂದ ನಲವತ್ತೈದು ಲಕ್ಷ ಯೋಜನ ಮನುಷ್ಯ ಕ್ಷೇತ್ರದಲ್ಲಿ ಜೀವನು ಮೋಕ್ಷಕ್ಕೆ ಹೋಗಿರದಂಥ ಯಾವುದೇ ಸ್ಥಾನವು ಶೇಷವಿಲ್ಲ. ಎಲ್ಲ ಸ್ಥಾನಗಳಿಂದ ಜೀವರುಗಳು ಮೋಕ್ಷಕ್ಕೆ ಹೋಗಿದ್ದಾರೆ. ಇಲ್ಲಿಂದಲೂ ಕೂಡ ಹೋಗಿದ್ದಾರೆ.

ಹಾಗಾದರೆ ನಾವು ತೀರ್ಥಕ್ಷೇತ್ರಗಳ ಸಿದ್ಧಕ್ಷೇತ್ರಗಳ ವಂದನೆಯನ್ನು ಏತಕ್ಕಾಗಿ ಮಾಡುತ್ತೇವೆ ? ಅಲ್ಲಿಗೆ ಏತಕ್ಕಾಗಿ ಹೋಗುತ್ತೇವೆ ? – ಏಕೆಂದರೆ ಅಲ್ಲಿಂದ ನಮಗೆ ವಿಶೇಷವಾಗಿ ಸಿದ್ಧರ ಸ್ಮರಣೆಯಾಗುತ್ತದೆ. ಇಲ್ಲಿಂದ ಇಂಥ ಮಹಾಪುರುಷರು ಸಂಸಾರದ ತ್ಯಾಗ ಮಾಡಿ ಸ್ವಭಾವಸಾಧನೆ ಮಾಡುತ್ತ ಸಾಕ್ಷಾತ್ ಸಿದ್ಧ ಪದವನ್ನು ಪಡೆದುಕೊಂಡಿದ್ದಾರೆ – ಎಂಬ ವಿಚಾರ ಚಿಂತನೆಗಳೊಂದಿಗೆ ನಮ್ಮ ಅಂತರಂಗ ಪರಿವರ್ತನೆಯಾಗುವ ಸಾಧ್ಯತೆಯಿದೆ. ಆದರೆ ಎರಡೂವರೆ ದ್ವೀಪದಲ್ಲಿ ಜೀವನು ಮೋಕ್ಷಕ್ಕೆ ಹೋಗಿರದಂಥದು ಯಾವ ಸ್ಥಾನವೂ ಇಲ್ಲ. ಕರ್ಮಭೂಮಿಯಲ್ಲಿ ಮತ್ತು ಚತುರ್ಥಕಾಲದೊಳಗೆ ಜನ್ಮತಾಳಿದ ಜೀವನೇ ಮೋಕ್ಷಕ್ಕೆ ಹೋಗುತ್ತಾನೆ. ಈ ಪ್ರಕಾರ

ನಲವತ್ತೈದು ಲಕ್ಷ ಯೋಜನ ವ್ಯಾಸವುಳ್ಳ ಮನುಷ್ಯಲೋಕವು ವೃತ್ತಾಕಾರವಿದೆ ಮತ್ತು ಇಷ್ಟೇ ವ್ಯಾಸವುಳ್ಳದ್ದು - ಆಕಾರವುಳ್ಳದ್ದು ಸಿದ್ಧಶಿಲೆಯಿದೆ. ಎರಡೂವರೆ ದ್ವೀಪದ ಸಮಾನ ವೃತ್ತಾಕಾರವಿರುವ ಅದರ ಮೇಲೆ ಇರುವಂಥ ವಾತವಲಯದಲ್ಲಿ ಸಿದ್ಧಜೀವರುಗಳು ಸ್ಥಿತರಿದ್ದಾರೆ; ಅದರಿಂದ ಅದನ್ನು ಸಿದ್ಧಶಿಲೆಯೆಂದು ಹೇಳುತ್ತಾರೆ.

ಸಿದ್ಧಶಿಲೆಯಂತೂ ಪೃಥ್ವಿಕಾಯಿಕ ರಚನೆಯಿದೆ - ಪೃಥ್ವಿಯಿದೆ - ಪಾಷಾಣವಿದೆ - ಶಿಲೆಯಿದೆ. ಅದನ್ನು ಧವಲ, ಶುಭ್ರ , ಶ್ವೇತವೆನ್ನಬಹುದಾಗಿದೆ, ಅಮೃತಶಿಲೆ ಅಥವಾ ಸ್ಫಟಿಕವೆಂದು ಹೇಳಿದರೂ, ಎಲ್ಲವೂ ಪಾಷಾಣಗಳೇ ಇವೆ. ನಮಗೆ ಸಿದ್ಧಶಿಲೆಯ ಮಹಿಮೆಯು ಬರುತ್ತದೆ. ಅಲ್ಲಿಯಂತೂ ಐದೂ ಪ್ರಕಾರದ ಸ್ಥಾವರ ಜೀವಗಳಿರುತ್ತವೆ. ಸೂಕ್ಷ್ಮ ಜೀವಗಳು ಕೂಡ ಇರುತ್ತವೆ. ಅಲ್ಲಿ ಯಾವ ಜೀವಗಳು ಜನ್ಮ ಧಾರಣ ಮಾಡುತ್ತವೆ ಅವು ಪೃಥ್ವಿಕಾಯಿಕ ಅಥವಾ ಅನ್ಯ ಕಾಯಿಕ ಸ್ಥಾವರ ಜೀವಗಳೇ ಇರುತ್ತವೆ ಅನಂತ ಸಿದ್ಧ ಭಗವಂತರು ತನುವಾತವಲಯದಲ್ಲಿ ಸ್ಥಿತರಿದ್ದಾರೆ, ಎಲ್ಲಿ ಅವರುಗಳ ಆತ್ಮಪ್ರದೇಶಗಳಿವೆ ಅಲ್ಲಿ ಆ ಪ್ರದೇಶಗಳಲ್ಲಿಯೂ ಕೂಡ ಐದೂ ಪ್ರಕಾರದ ಸ್ಥಾವರ ಜೀವಗಳು ವಿದ್ಯಮಾನವಿವೆ.

ಹಾಗಾದರೆ ಆ ಜೀವಗಳು ತುಂಬ ಭಾಗ್ಯಶಾಲಿಗಳಿರಬಹುದಲ್ಲ ? ಸಿದ್ಧರುಗಳ ಅನಂತ ಸುಖದೊಳಗಿಂದ ಆ ಜೀವಗಳಿಗೂ ಸ್ವಲ್ಪ ಸುಖವು ದೊರಕುತ್ತಿರಬಹುದು, ಅಲ್ಲಿಯ ಪರಮಾಣು, ಯಾವುದೋ ಕಾರಣದಿಂದ (ಸಿದ್ಧರುಗಳ ಆತ್ಮಪ್ರದೇಶಗಳಲ್ಲಿ ಆಗುವಂಥ ಸಂವೇದನ ಕಾರಣ) ಆ ಜೀವಗಳಿಗೆ ಬೇಗನೆ ಮೋಕ್ಷವಾಗಬಹುದಾಗಿದೆ ಅಲ್ಲವೇನು ?

ಪ್ರತಿಯೊಂದು ಜೀವವು ತಮ್ಮ-ತಮ್ಮ ಆತ್ಮಪ್ರದೇಶಗಳಲ್ಲಿ ತಮ್ಮ ಸ್ವಕ್ಷೇತ್ರದಲ್ಲಿ - ತಮ್ಮ ಸ್ವಚತುಷ್ಟಯದಲ್ಲಿ ಅರ್ಥಾತ್ ತಮ್ಮ-ತಮ್ಮ ದ್ರವ್ಯ , ಕ್ಷೇತ್ರ , ಕಾಲ, ಭಾವದಲ್ಲಿ ಇರುತ್ತದೆ. ಒಂದೇ ಕ್ಷೇತ್ರದಲ್ಲಿ ನಿವಾಸ ಮಾಡುತ್ತಿದ್ದರೂ ಒಂದು ದ್ರವ್ಯವು ಇನ್ನೊಂದು ದ್ರವ್ಯದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಒಂದರದು ಇನ್ನೊಂದರ ಮೇಲೆ ಯಾವುದೇ ಪ್ರಭಾವ ಬೀಳುವುದಿಲ್ಲ, ಯಾವ ಸಹಾಯ ಅಥವಾ ಯಾವ ರೀತಿಯ ಬದಲಾವಣೆ ಮಾಡುವ ಸಾಧ್ಯತೆಯಿಲ್ಲ. ಸಿದ್ಧಕ್ಷೇತ್ರದಲ್ಲಿರುವಂಥ ಅನಂತ ಸಿದ್ಧ ಜೀವರುಗಳು ಅನಂತ ಸುಖಿಯಿದ್ದಾರೆ ಆದರೆ ಅದೇ ಕ್ಷೇತ್ರದಲ್ಲಿರುವ ಸ್ಥಾವರ ಜೀವಗಳು ಅನಂತ ದುಃಖಿಯಾಗಿವೆ.

ನಾವುಗಳು ಈಗ ಅರಹಂತರ ಹತ್ತಿರ ಹೋಗುವ ಸಾಧ್ಯತೆಯಿಲ್ಲ ಆದರೆ ಅರಹಂತರಂತೂ ನಮ್ಮ ಹತ್ತಿರ ಬರುವ ಸಾಧ್ಯತೆಯಿದೆಯೋ ಅಥವಾ ಇಲ್ಲ ?

ಉತ್ತರ :- ಅಹುದು, ಅವರು ಇಲ್ಲಿಯವರೆಗೆ ಬರಬಹುದಾಗಿದೆ. ಯಾವಾಗ ಕೇವಲೀ ಸಮುದ್ಘಾತವಾಗುತ್ತದೆ ಆಗ ಅವರ ಆತ್ಮಪ್ರದೇಶಗಳು ಇಡೀ ಲೋಕಾಕಾಶದಲ್ಲಿ ವಿಸ್ತರಿಸುತ್ತವೆಯೆಂಬುದನ್ನು ನಾವು ಮೊದಲು ತಿಳಿದುಕೊಂಡಿದ್ದೇವೆ. ನಾವು ಎಲ್ಲಿ ಕುಳಿತುಕೊಂಡಿದ್ದೇವೆ ಅಲ್ಲಿಯೂ ಅವರ ಪ್ರದೇಶಗಳು ಪಸರಿಸುತ್ತವೆ. ಒಂದು ಸಮಯದಲ್ಲಿ ಅಧಿಕ-ಅಧಿಕವೆಂದರೆ ನಲವತ್ತು ಜೀವಗಳು ಕೇವಲೀ ಸಮುದ್ಘಾತ ಮಾಡಬಹುದಾಗಿದೆ; ಆದರೆ ಅವರು ಇಲ್ಲಿ ಬರುವುದರಿಂದ ನಮ್ಮಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ನಾವಂತೂ ನಮ್ಮ ರಾಗ-ದ್ವೇಷಗಳಲ್ಲಿ ಮುಳುಗಿ ಹೋಗಿದ್ದೇವೆ, ಅದರ ಕಾರಣವಾಗಿ ದುಃಖಿಯಾಗುತ್ತಿದ್ದೇವೆ. ನಮ್ಮ ಹಾಗೂ ಅವರ ಆತ್ಮಪ್ರದೇಶಗಳು ಒಂದೇ ಕ್ಷೇತ್ರದಲ್ಲಿ ಬಂದು ಬಿಡುವುದರಿಂದ ಯಾವ ಬದಲಾವಣೆಯೂ ಆಗುವುದಿಲ್ಲ.

ಇಲ್ಲಿಯವರೆಗೆ ಅನೇಕ ಪ್ರಶ್ನೆಗಳಿಗೆ ಉತ್ತರ ಕಂಡು ಕೊಳ್ಳುವ ರೂಪದಿಂದ ಚರ್ಚೆಯಾಯಿತು. ಈಗ ನಾವು ಸ್ವಲ್ಪ ಅಧೋಲೋಕದ ವರ್ಣನೆಯನ್ನು ನೋಡೋಣ. ಅಧೋಲೋಕದಲ್ಲಿ ಯಾವ ಏಳು ಪೃಥ್ವಿಗಳಿವೆ ಅವುಗಳ ಹೆಸರು, ವಿಸ್ತಾರ ಮತ್ತು ದಪ್ಪವ(ಸ್ಥೂಲತೆಯ)ನ್ನು ನಾವು ತಿಳಿದುಕೊಂಡಾಗಿದೆ. ಇಲ್ಲಿ ನಾವು ಪೃಥ್ವಿಯೆಂದು ಹೇಳುತ್ತಿದ್ದೇವೆ, ನರಕಗಳೆಂದು ಹೇಳುತ್ತಿಲ್ಲ. ಈ ಎಲ್ಲ ಪೃಥ್ವಿಗಳು ಲೋಕಾಕಾಶದ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ - ಪಾರ್ಶ್ವಭಾಗದ(ಎರಡೂ ಮಗ್ಗುಲಿನ)ವರೆಗೆ ಹರಡಿಕೊಂಡಿವೆ. ಅವುಗಳಲ್ಲಿ ಇರುವಂಥ ಬಾದರ ಪೃಥ್ವಿಕಾಯಿಕಗಳ ಮಾತು ಬೇರೆಯಿದೆ. ಇಲ್ಲಿ ನಾವು ಈಗ ಆ ಪೃಥ್ವಿಗಳ ಒಳಗೆ ಏನೇನು ಇದೆ ? ಎಂಥೆಂಥ ರಚನೆಯಿದೆ ? ಮೊದಲಾದ ಮಾತುಗಳನ್ನು ನೋಡೋಣ.

ಮೊದಲನೆಯ ಪೃಥ್ವಿಯ ಹೆಸರು ರತ್ನಪ್ರಭಾ ಪೃಥ್ವಿಯಿದೆ. ಒಂದನೇ ನಂಬರಿನ ಚಾರ್ಟದಲ್ಲಿ ಇವೆಲ್ಲ ಪೃಥ್ವಿಗಳ ಹೆಸರು, ದಪ್ಪ, ವಿಸ್ತಾರ, ನರಕಗಳ ಪಟಲಗಳು ಹಾಗೂ ಬಿಲಗಳ ಸಂಖ್ಯೆ, ಈ ಪೃಥ್ವಿಗಳ ಅನ್ಯನಾಮಗಳನ್ನು ಬರೆಯಲಾಗಿದೆ. ಈ ಮೊದಲನೆಯ ಪೃಥ್ವಿಯ ದಪ್ಪವು ಒಂದು ಲಕ್ಷ ಎಂಭತ್ತು ಸಾವಿರ ಯೋಜನವಿದೆ. ಇದರಲ್ಲಿ ಮೂರು ಭಾಗಗಳಿವೆ. ಇದರ ಮೊದಲನೆಯ ಅರ್ಥಾತ್ ಮೇಲಿನ ಭಾಗವು ಖರಭಾಗವಿದೆ, ಅದು ಹದಿನಾರು ಸಾವಿರ ಯೋಜನ ದಪ್ಪವನ್ನು ಹೊಂದಿದೆ. ಎರಡನೆಯದು ಪಂಕಭಾಗವಿದ್ದು ಅದು ಎಂಭತ್ತಾ ಲ್ಕು ಸಾವಿರ ಯೋಜನದ್ದಿದೆ ಮತ್ತು ಮೂರನೆಯದಾದ ಅಬ್ಬಹುಲಭಾಗವು ಎಂಭತ್ತು ಸಾವಿರ ಯೋಜನದ್ದಿದೆ. ಮೊದಲನೆಯ ಖರಭಾಗದಲ್ಲಿ ಹದಿನಾರು ಪೃಥ್ವಿಗಳಿವೆ. ಒಂದೊಂದು ಪೃಥ್ವಿಯು ಸಾವಿರ-ಸಾವಿರ ಯೋಜನ ಪ್ರಮಾಣ ದೊಡ್ಡದಿದೆ (ದಪ್ಪವಿದೆ) ಅವು ಲೋಕದ ಕೊನೆಯವರೆಗೆ ಹರಡಿಕೊಂಡಿವೆ ಹಾಗೂ ಇವುಗಳ ಮಧ್ಯದಲ್ಲಿ ಯಾವ ಅಂತರವಿರುವುದಿಲ್ಲ. ಇವುಗಳ ಹೆಸರು ಮೇಲಿನಿಂದ ಕೆಳಗಿನವರೆಗೆ ಈ ಪ್ರಕಾರವಿವೆ - ೧) ಚಿತ್ರಾ , ೨) ವಜ್ರಾ , ೩) ವೈಡೂರ್ಯಾ, ೪) ಲೋಹಿತಾ, ೫) ಕಾಮಸಾರಕಲ್ಪಾ, ೬) ಗೋಮೇದಾ, ೭) ಪ್ರವಾಲಾ, ೮) ಜ್ಯೋತಿರಸಾ, ೯) ಅಂಜನಾ, ೧೦) ಅಂಜನ ಮೂಲಿಕಾ, ೧೧) ಅಂಕಾ, ೧೨) ಸ್ಫಟಿಕಾ, ೧೩) ಚಂದನಾ, ೧೪) ಸರ್ವಾರ್ಥಕಾ, ೧೫) ಬಕುಲಾ, ೧೬) ಶೈಲಾ.

ಖರಭಾಗ ಮತ್ತು ಪಂಕಭಾಗದಲ್ಲಿ ಭವನಗಳು ಕಂಡು ಬರುತ್ತವೆ, ಅಲ್ಲಿ ಭವನವಾಸಿಗಳು ಮತ್ತು ವ್ಯಂತರರು ಇರುತ್ತಾರೆ. ಅಸುರ ಕುಮಾರರನ್ನು ಹೊರತು ಪಡಿಸಿ ಉಳಿದ ಒಂಭತ್ತು ಪ್ರಕಾರದ ಭವನವಾಸೀ ದೇವಗಳು ಮೇಲಿನ ಖರಭಾಗದಲ್ಲಿ ಇರುತ್ತಾರೆ, ಅಲ್ಲಿ ವ್ಯಂತರರ ಭವನಗಳೂ ಇವೆ. ಮಧ್ಯದ ಪಂಕಭಾಗದಲ್ಲಿ ಅಸುರಕುಮಾರ ಜಾತಿಯ ಭವನ ವಾಸಿಗಳು ಹಾಗೂ ರಾಕ್ಷಸ ಜಾತಿಯ ವ್ಯಂತರರು ಇರುತ್ತಾರೆ. ಭವನವಾಸಿಗಳು ಹಾಗೂ ವ್ಯಂತರರ ಪ್ರಕರಣದಲ್ಲಿ ಅವರ ಚರ್ಚೆಯನ್ನು ವಿಸ್ತಾರಪೂರ್ವಕ ಮಾಡಲಾಗುವುದು.

ನಾವು ಅಧೋಲೋಕದ ಅಕೃತ್ರಿಮ ಚೈತ್ಯಾಲಯಗಳ ಪೂಜೆ ಮಾಡುತ್ತೇವೆ-ವಂದನೆ ಮಾಡುತ್ತೇವೆ ಅವು ಭವನವಾಸಿಗಳ ಭವನಗಳಲ್ಲಿವೆ. ಹಾಗಾದರೆ ಈ ಭವನಗಳು ಎಲ್ಲಿವೆ ?

ಮಧ್ಯಲೋಕದಲ್ಲಿ ಒಂದು ರಾಜೂ X ಒಂದು ರಾಜೂವಿನ ಯಾವ ತ್ರಸನಾಡಿಯಿದೆ ಅದರಲ್ಲಿ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳಿವೆ. ಇವುಗಳೊಳಗಿನ ಮಧ್ಯದ ಎರಡೂವರೆ ದ್ವೀಪ ಮತ್ತು ಎರಡು ಸಮುದ್ರಗಳಿವೆ ಅವುಗಳನ್ನು ಬಿಟ್ಟು ಅರ್ಥಾತ್ ಮನುಷ್ಯ ಲೋಕವನ್ನು ಹೊರತುಪಡಿಸಿ ಅದರ ಹೊರಗೆ ಯಾವ

ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳಿವೆ, ಅವುಗಳ ಕೆಳಗೆ ಭವನಗಳು ಕಂಡು ಬರುತ್ತವೆ. ಮನುಷ್ಯ ಲೋಕದ ಕೆಳಗೆ ಯಾವುದೇ ಭವನವಿಲ್ಲ.

ಮೊದಲನೆಯ ಪೃಥ್ವಿಯ ಕೆಳಗಿನ ಭಾಗ ಎಂದರೆ ಎಂಭತ್ತು ಸಾವಿರ ಯೋಜನದ ಅಬ್ಬಹುಲವೆಂಬ ಹೆಸರಿನ ಯಾವ ಭಾಗವಿದೆ, ಅದರಲ್ಲಿ ಮೊದಲನೆಯ ನರಕದ ಪಟಲಗಳು ಕಂಡು ಬರುತ್ತವೆ. ಪಟಲ ಅರ್ಥಾತ್ ಪ್ರಸ್ತರ–ಪದರು, ಹೇಗೆ ನಮ್ಮ ಮಹಡಿ ಮನೆಗಳಿರುತ್ತವೆ ಹಾಗೆ; ಆದರೆ ನರಕಗಳ ಪಟಲುಗಳ ಎಣಿಕೆಯನ್ನು ಮೇಲಿನಿಂದ ಕೆಳಗಿನ ಕಡೆಗೆ ಮಾಡುತ್ತಾರೆ. ಇವುಗಳಲ್ಲಿ ನರಕದ ಬಿಲಗಳು ಕಂಡು ಬರುತ್ತವೆ. ನೋಡಿರಿ, ಪೃಥ್ವಿಗಳ ಒಳಗೆ ಭವನವಾಸಿಗಳ ಭವನಗಳು ಮತ್ತು ನರಕಗಳ ಬಿಲಗಳು ಕಂಡು ಬರುತ್ತವೆ. ಹಾಗಂತೂ ಅವೆರಡೂ ಪೃಥ್ವಿಯ ಒಳಗೆ ಇರುತ್ತವೆ ಹೊರಗಿನ ಕಡೆಗೆ ಯಾವ ಸಂಪರ್ಕ–ಸುಳಿವು ಇರುವುದಿಲ್ಲ. ಮೆಟ್ಟಿಲುಗಳಾಗಲಿ ಕಿಟಕಿಗಳಾಗಲಿ ಇರುವುದಿಲ್ಲ. ಹೀಗೆ ಇವುಗಳಲ್ಲಿ ಸಮಾನತೆಯು ಇರುತ್ತಿದ್ದರೂ ಭವನವಾಸಿಗಳ ನಿವಾಸಗಳನ್ನು ಭವನವೆಂದು ಹೇಳುತ್ತಾರೆ ಮತ್ತು ನಾರಕಿಗಳು ವಾಸಿಸುವಂಥವನ್ನು ಬಿಲವೆಂದು ಹೇಳುತ್ತಾರೆ. ಇಂಥ ಭೇದಭಾವವೇಕೆ ಅರ್ಥಾತ್ ಒಬ್ಬರ ನಿವಾಸವನ್ನು ಮಹಲೆಂದು ಮತ್ತು ಇನ್ನೊಬ್ಬರದನ್ನು ಗುಡಿಸಲೆಂದೇಕೆ ? – ಎಂದು ಕೇಳಿದರೆ,–

ಇದರ ಉತ್ತರ ಸ್ವರೂಪವಾಗಿ – ನಾರಕೀ ಜೀವಗಳು ಪಾಪೀ ಇರುತ್ತಾರೆ ಮತ್ತು ಪಾಪದ ಕಾರಣದಿಂದ ಅದರ ಫಲ ಭೋಗಿಸಲು ಹೋಗುತ್ತಾರೆ. ಅಲ್ಲಿಯ ಭೂಮಿ, ವಾತಾವರಣ, ಗುಹೆಗಳು, ವೃಕ್ಷ, ನದಿ, ಶಾರೀರಿಕ ಪೀಡೆ ನೀಡುವಂಥ ಅನೇಕ ಯಂತ್ರಾದಿ ಸಾಮಗ್ರಿಗಳು ಎಲ್ಲಿ ಇರುತ್ತವೆಯೋ ಅವನ್ನು ಬಿಲವೆಂದು ಹೇಳುತ್ತಾರೆ. ಹೇಗೆ ಇಲಿಯು ವಾಸ ಮಾಡುತ್ತದೆ ಅದನ್ನು ಬಿಲವೆಂದು ಹೇಳುತ್ತಾರೆ, ಮನೆಯೆಂದು ಹೇಳುವುದಿಲ್ಲ– ಹಾಗೆ.

ಈ ಎಂಭತ್ತುಸಾವಿರ ಯೋಜನವುಳ್ಳ ಅಬ್ಬಹುಲ ಭಾಗದಲ್ಲಿ ಮೊದಲನೆಯ ನರಕವಿದ್ದು ಅದರ ಅನೇಕ ಪಟಲುಗಳಿವೆ. ಒಂದರ ಕೆಳಗೆ ಒಂದು ಹೀಗೆ ಮೊದಲನೆಯ, ಎರಡನೆಯ, ಮೂರನೆಯ ಮೊದಲಾದ ಪಟಲಗಳಿವೆ ಮತ್ತು ಒಂದೊಂದು ಪಟಲದಲ್ಲಿ ಲಕ್ಷಾಂತರ ಬಿಲಗಳಿರುತ್ತವೆ. ಈ ಎಂಭತ್ತು ಸಾವಿರ ಯೋಜನದ ದಪ್ಪದೊಳಗಿಂದ ಮೇಲಿನ ಒಂದು ಸಾವಿರ ಯೋಜನವನ್ನು ಬಿಟ್ಟು ಬಿಡುವುದು ಮತ್ತು ಕೆಳಗಿನ ಒಂದು ಸಾವಿರ ಯೋಜನವನ್ನೂ ಬಿಟ್ಟು ಬಿಡುವುದು. ಇದರ ಮಧ್ಯದಲ್ಲಿ ಮೊದಲಿನ ನರಕದ ಹದಿಮೂರು ಪಟಲಗಳಿವೆ. ಇದು ಕೇವಲ ಮೊದಲನೇ ನರಕದ ಮಾತು ಇದೆ. ಎರಡು ಪಟಲುಗಳ ಮಧ್ಯದಲ್ಲಿ ಭೂಮಿಯಿದೆ. ಹಾಗಂತೂ ಒಂದೊಂದು ನರಕ ಬಿಲವು ಸಂಖ್ಯಾತ–ಅಸಂಖ್ಯಾತ ಯೋಜನಗಳದ್ದಿರುತ್ತದೆ. ಈ ಹದಿಮೂರು ಪಟಲಗಳಲ್ಲಿ ಮೂವತ್ತು ಲಕ್ಷ ಬಿಲಗಳು ಕಂಡು ಬರುತ್ತವೆ. ಮೊದಲನೆಯ ನರಕದಲ್ಲಿ ಒಟ್ಟು ಮೂವತ್ತು ಲಕ್ಷ ಬಿಲಗಳಿವೆ ಹಾಗೂ ಅಲ್ಲಿಯ ಜೀವಗಳ ಸಂಖ್ಯೆಯು ಕೂಡ ಎಲ್ಲಕ್ಕಿಂತ ಅಧಿಕವಿದೆ. ಏಳನೆಯ ನರಕದಿಂದ ಹಿಡಿದು ಕ್ರಮದಿಂದ ಎರಡನೆಯ ನರಕದವರೆಗಿನ ನಾರಕಿಗಳ ಸಂಖ್ಯೆಯು ಅಸಂಖ್ಯಾತ–ಅಸಂಖ್ಯಾತ ಗುಣಿತವಿದೆ – ಪ್ರತಿಯೊಂದರಲ್ಲಿ ಅಸಂಖ್ಯಾತವಿದೆ ಮತ್ತು ಅವೆಲ್ಲ ಅಸಂಖ್ಯಾತಗಳನ್ನು ಸೇರಿಸಿದಾಗ ಎಷ್ಟು ಸಂಖ್ಯೆಯಾಗುತ್ತದೆ ಅದರಿಂದ ಅಸಂಖ್ಯಾತಗುಣಿತ ನಾರಕಿಗಳು ಮೊದಲಿನ ನರಕದಲ್ಲಿದ್ದಾರೆ.

ಅದರಲ್ಲಿಯೂ ಕೂಡ ಪ್ರತಿಯೊಂದು ನರಕದಲ್ಲಿ ಅಸಂಖ್ಯಾತ ಸಮ್ಯಗ್ದೃಷ್ಟಿಗಳಿದ್ದಾರೆ. ಮೊದಲಿನ

ನರಕದಲ್ಲಿಯಂತೂ ಕ್ಷಾಯಿಕ ಸಮ್ಯಗ್ದೃಷ್ಟಿ ಮನುಷ್ಯರು ಮರಣಹೊಂದಿ ಸಮ್ಯಕ್ತ್ವ ಸಹಿತ ಜನ್ಮ ಪಡೆಯುತ್ತಾರೆ. ಆದರೆ ಉಳಿದವರೆಲ್ಲರೂ ಮಿಥ್ಯಾತ್ವದೊಂದಿಗೆ ಜನ್ಮ ಪಡೆದು ಅಲ್ಲಿ ಹೋದ ನಂತರ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಅಲ್ಲಿ ಎಷ್ಟೊಂದು ಪ್ರತಿಕೂಲತೆಗಳಿದ್ದ ಮೇಲೆಯೂ ಕೂಡ ಸಮ್ಯಕ್ತ್ವದ ಪ್ರಾಪ್ತಿಯಾಗುತ್ತದೆ. ಸಮ್ಯಕ್ತ್ವವು ಕೇವಲ ಮನುಷ್ಯರಿಗಷ್ಟೇ ಸೀಮಿತವಿಲ್ಲ. ನಾಲ್ಕೂ ಗತಿಯ ಜೀವಗಳು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳಬಹುದಾಗಿದೆ.

ನಾವಂತೂ ಮೊದಲು ಸಂಯೋಗಗಳನ್ನು ಸರಿಪಡಿಸುವಲ್ಲಿ ಒಂದಾಗಿ ಹೋಗುತ್ತೇವೆ - ನಮ್ಮನ್ನು ನಾವು ತೊಡಗಿಸಿಕೊಳ್ಳುತ್ತೇವೆ. ಸ್ವಾಧ್ಯಾಯ ಮಾಡುವ ಮಾತು ಬಂದು ಬಿಟ್ಟರೆ ನಾವು ಕೂಡ ನಿಮ್ಮ ಹಾಗೆ ವೃದ್ಧರಾದ ಮೇಲೆ ಸ್ವಾಧ್ಯಾಯ ಮಾಡುತ್ತೇವೆಂದು ಹೇಳುತ್ತೇವೆ. ಈಗಂತೂ ನಾವು ಧನ ಸಂಪಾದನೆ ಮಾಡುವ ದಿನಗಳಿವೆ, ನಂತರ-ಕೊನೆಯ ಕಾಲದಲ್ಲಿ ನಿಶ್ಚಿಂತತೆಯಿಂದ ಸ್ವಾಧ್ಯಾಯ ಮಾಡುತ್ತೇವೆ. ಯಾವೊಬ್ಬ ನವಯುವಕನೂ ಈಗ ಸಂಪಾದನೆ ಮಾಡುವ ದಿನಗಳಿವೆ ನಾನು ವೃದ್ಧನಾದ ಮೇಲೆ ಮದುವೆಯಾಗುವೆನೆಂದು ಹೇಳುತ್ತಿರುವುದು ನಮಗಂತೂ ಕೇಳಿ ಬಂದಿಲ್ಲ. ಅಯ್ಯಾ ! ಅವನು ಧನ ಸಂಪಾದನೆಯನ್ನೂ ಮಾಡುತ್ತಾನೆ, ಮದುವೆಯನ್ನೂ ಮಾಡಿಕೊಳ್ಳುತ್ತಾನೆ, ಮಕ್ಕಳೂ ಆಗುತ್ತವೆ, ಅವರ ಪಾಲನೆ-ಪೋಷಣೆಯನ್ನೂ ಮಾಡುತ್ತಾನೆ, ಅಲ್ಲಿ ಯಾವ ತೊಂದರೆಯೂ ಅವನಿಗೆ ಕಂಡು ಬರುವುದಿಲ್ಲ ಆದರೆ ಸ್ವಾಧ್ಯಾಯ ಮಾಡದಿರುವ ಸಲುವಾಗಿ ನೆಪ ಹೇಳುತ್ತಾನೆ.

ಈಗ ಆ ಹದಿಮೂರು ಪಟಲಗಳಲ್ಲಿ ಮೂವತ್ತು ಲಕ್ಷ ಬಿಲಗಳು ಹೇಗಿರುತ್ತವೆಯೆಂಬುದನ್ನು ನೋಡೋಣ. ಅದರ ಸಲುವಾಗಿ ಹದಿಮೂರನೇ ನಂಬರಿನ ಚಾರ್ಟ ನೋಡುವುದು.

ಪ್ರತಿಯೊಂದು ನರಕದ ಪ್ರತಿಯೊಂದು ಪಟಲದಲ್ಲಿ ಅನೇಕ ಬಿಲಗಳಿರುತ್ತವೆ. ಅವುಗಳೊಳಗಿಂದ ಮಧ್ಯದಲ್ಲಿ ಯಾವ ಬಿಲವಿದೆ ಅದನ್ನು ಇಂದ್ರಕ ಬಿಲವೆಂದು ಹೇಳುತ್ತಾರೆ. ಒಂದೊಂದು ಪಟಲದಲ್ಲಿಯೂ ಅದರದೇ ಆದಂಥ ಇಂದ್ರಕ ಬಿಲವಿರುತ್ತದೆ. ಅವು ಪ್ರತಿಯೊಂದರ ಹೆಸರುಗಳು ಬೇರೆ-ಬೇರೆಯಾಗಿವೆ. ಶಾಸ್ತ್ರಗಳಲ್ಲಿ ಆ ಹೆಸರುಗಳ ಉಲ್ಲೇಖವಿದೆ. ನಾವು ಇಲ್ಲಿ ಅವುಗಳ ಚರ್ಚೆ ಮಾಡುವುದಿಲ್ಲ; ಆದರೆ ಈಗ ಯಾವುದನ್ನು ಇಂದ್ರಕವೆನ್ನುವುದು, ಯಾವುದನ್ನು ಶ್ರೇಣಿಬದ್ಧವೆನ್ನುವುದು, ಪ್ರಕೀರ್ಣಕವೆಂದು ಯಾವುದಕ್ಕೆ ಹೇಳುತ್ತಾರೆ- ಎಂಬುದರ ಚರ್ಚೆ ಮಾಡೋಣ.

ಯಾವುದು ಎಲ್ಲಕ್ಕಿಂತ ಮಧ್ಯದಲ್ಲಿ ಇದೆ, ಅದನ್ನು ಇಂದ್ರಕ ಬಿಲವೆಂದು ಹೇಳುತ್ತಾರೆ. ಚಾರ್ಟದೊಳಗೆ ಇದನ್ನು ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ. ಅದರ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ದಿಶೆಗಳಲ್ಲಿ ಹಾಗೂ ಆಗ್ನೇಯ, ನೈಋತ್ಯ, ವಾಯವ್ಯ, ಈಶಾನ್ಯ-ಈ ವಿದಿಶೆಗಳಲ್ಲಿ ಪಂಕ್ತಿಬದ್ಧ (ಸಾಲಾಗಿ) ಬಿಲಗಳಿರುತ್ತವೆ, ಅವುಗಳನ್ನು ಶ್ರೇಣಿಬದ್ಧ ಬಿಲಗಳೆಂದು ಹೇಳುತ್ತಾರೆ. ಶ್ರೇಣಿ ಅರ್ಥಾತ್ ಪಂಕ್ತಿ-ಸಾಲು, ವಿದಿಶೆಗಳ ಪರಿಚಯವಿದೆಯಲ್ಲವೇನು ? ಆಗ್ನೇಯ ಎಂದರೆ ದಕ್ಷಿಣ ಪೂರ್ವ, ನೈಋತ್ಯ ಎಂದರೆ ದಕ್ಷಿಣ ಪಶ್ಚಿಮ, ವಾಯವ್ಯ ಎಂದರೆ ಉತ್ತರ ಪಶ್ಚಿಮ ಮತ್ತು ಈಶಾನ್ಯವೆಂದರೆ ಉತ್ತರ ಪೂರ್ವ. ಇನ್ನು ದಿಶೆಗಳನ್ನು ಕೂಡ ಕ್ರಮದಿಂದ ಹೇಳುವುದಿದ್ದರೆ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರವೆಂದು ಹೇಳಬೇಕಾಗುವುದು. ಇವನ್ನು ಗಡಿಯಾರದ ಮುಳ್ಳು ಯಾವ ದಿಕ್ಕಿನಲ್ಲಿ ಸುತ್ತುತ್ತದೆ ಹಾಗೆ ಹೇಳಬೇಕಾಗುವುದು.

ಯಾವವು ಬೇಕಾದ ಹಾಗೆ ಅತ್ತ-ಇತ್ತ ಹರಡಿಕೊಂಡಿವೆ, ಕೆಲವು ಚಿಕ್ಕವಿವೆ ಕೆಲವು ದೊಡ್ಡವಿವೆ, ದುಂಡಗೆ, ತ್ರಿಕೋಣಾಕಾರ, ಚೌಕಾಕಾರ ಮೊದಲಾದ ಬೇರೆ-ಬೇರೆ ಅನೇಕ ಆಕಾರವುಳ್ಳ ಬಿಲಗಳಿವೆ, ಪುಷ್ಪದ ಸಮಾನ ಹರಡಿಕೊಂಡಿವೆ ಅವೆಲ್ಲವೂ ಪ್ರಕೀರ್ಣಕ ಬಿಲವೆನಿಸಿಕೊಳ್ಳುತ್ತವೆ.

ಪ್ರತಿಯೊಂದು ಪಟಲದಲ್ಲಿ ಒಂದು ಇಂದ್ರಕ ಅರ್ಥಾತ್ ಮಧ್ಯದ ಒಂದು ಬಿಲವಿರುತ್ತದೆ. ಎಂಟೂ ದಿಕ್ಕುಗಳಲ್ಲಿ ಶ್ರೇಣಿಬದ್ಧ ಬಿಲಗಳಿರುತ್ತವೆ ಮತ್ತು ಅಲ್ಲಿ-ಇಲ್ಲಿ ಎಲ್ಲಿ ಬೇಕಾದಲ್ಲಿ ಮಧ್ಯ-ಮಧ್ಯದಲ್ಲಿ ಹರಡಿಕೊಂಡಿರುವಂಥವು ಅವೆಲ್ಲವೂ ಪ್ರಕೀರ್ಣಕ ಬಿಲಗಳಿವೆ. ಇಲ್ಲಿ ನಾವು ಮೊದಲನೆಯ ನರಕದ ಮೊದಲನೇ ಪಟಲದ ಚರ್ಚೆ ಮಾಡುತ್ತಿದ್ದೇವೆ. ಯಾವಾಗ ಎರಡನೆಯ, ಮೂರನೆಯ ಮೊದಲಾದವುಗಳ ಚರ್ಚೆ ಮಾಡಲಾಗುವುದು ಆಗ ಮೇಲಿನಿಂದ ಕೆಳಗೆ ಕ್ರಮದಿಂದ ಎಣಿಸುವುದಿದೆ. ಮೊದಲನೆಯ ನರಕದ ಮೊದಲ ಪಟಲದಲ್ಲಿ ಪೂರ್ವ-ದಕ್ಷಿಣ-ಪಶ್ಚಿಮ-ಉತ್ತರದೊಳಗೆ ೪೯-೪೯-೪೯-೪೯ ಶ್ರೇಣಿಬದ್ಧ ಬಿಲಗಳಿವೆ. ಇಲ್ಲಿರುವಂಥ ಇಂದ್ರಕ ಬಿಲದ ಹೆಸರು ಸೀಮಂತಕ ಬಿಲ ಅರ್ಥಾತ್ ಸೀಮಂತಕ ಇಂದ್ರಕ ಬಿಲವಿದೆ. ಅದು ಎಷ್ಟು ದೊಡ್ಡದಿದೆ ಗೊತ್ತಿದೆಯೇನು ? - ನಲವತ್ತೈದು ಲಕ್ಷ ಯೋಜನ ವ್ಯಾಸವುಳ್ಳದ್ದಿದೆ.

ಇಲ್ಲಿಯವರೆಗೆ ನಾವು ಮನುಷ್ಯಲೋಕವು ನಲವತ್ತೈದು ಲಕ್ಷ ಯೋಜನ ಮತ್ತು ಸಿದ್ಧ ಶಿಲೆಯು ನಲವತ್ತೈದು ಲಕ್ಷ ಯೋಜನವಿರುವುದನ್ನು ತಿಳಿದುಕೊಂಡಿದ್ದೆವು. ಈಗ ಮೊದಲನೆಯ ನರಕದ ಮೊದಲನೇ ಪಟಲದ ಇಂದ್ರಕ ಬಿಲವು ಕೂಡ ನಲವತ್ತೈದು ಲಕ್ಷ ಯೋಜನವಿರುವುದನ್ನು ತಿಳಿದೆವು. ಯಾವಾಗ ನಾವು ಸ್ವರ್ಗದೊಳಗೆ ಹೋಗುವೆವು ಎಂದರೆ ಅವುಗಳ ಚರ್ಚೆ ಮಾಡುವೆವು ಆಗ ಮೊದಲನೆಯ ಸ್ವರ್ಗದ ಮೊದಲನೇ ಪಟಲದ ಇಂದ್ರಕ ವಿಮಾನವು ಕೂಡ ನಲವತ್ತೈದು ಲಕ್ಷ ಯೋಜನದ್ದಿದೆ - ಎಂಬುದನ್ನು ತಿಳಿಯಬಹುದಾಗಿದೆ. ಇಲ್ಲಿ ಕೆಳಗೆ ಇಂದ್ರಕ ಬಿಲವಿದೆ ಮತ್ತು ಮೇಲೆ ಸ್ವರ್ಗದಲ್ಲಿ ಇಂದ್ರಕ ವಿಮಾನವಿದೆ.

ನಮ್ಮ ದ್ವಾದಶಾಂಗದೊಳಗೆ ಯಾವುದರಲ್ಲಿ ಸಮಾನ ಕ್ಷೇತ್ರ, ಸಮಾನ ಸಂಖ್ಯೆ ಮೊದಲಾದವುಗಳನ್ನು ಹೇಳಿದ್ದಾರೆ, ಅದನ್ನು ಸಮವಾಯಾಂಗವೆಂದು ಹೇಳುತ್ತಾರೆ.

ಇನ್ನೂ ಇಲ್ಲಿ ಮೊದಲನೆಯ ನರಕದ ಚರ್ಚೆಯು ನಡೆಯುತ್ತಿದೆ. ಇಲ್ಲಿಂದ ಕೆಳ-ಕೆಳಗೆ ಏಳನೆಯ ನರಕದ ಯಾವ ಇಂದ್ರಕ ಬಿಲವಿದೆ, ಅಲ್ಲಿಯಂತೂ ಒಂದೇ ಪಟಲವಿದೆ ಮತ್ತು ಅದರ ಹೆಸರು ಅವಧಿಸ್ಥಾನ ಇಂದ್ರಕವಿದೆ. ಅದು ಒಂದು ಲಕ್ಷ ಯೋಜನ ವ್ಯಾಸವುಳ್ಳದ್ದಿದೆ, ಮೇಲಿನ - ಮೊದಲನೆಯ ಇಂದ್ರಕ ಬಿಲವು ನಲವತ್ತೈದು ಲಕ್ಷ ಯೋಜನ ಅರ್ಥಾತ್ ಎರಡೂವರೆ ದ್ವೀಪದಷ್ಟಿದೆ ಮತ್ತು ಅಂತಿಮ ಇಂದ್ರಕ ಬಿಲವು ಒಂದು ಲಕ್ಷ ಯೋಜನ ಅರ್ಥಾತ್ ಜಂಬೂದ್ವೀಪದಷ್ಟಿದೆ. ಈ ಪ್ರಕಾರ ಇಂದ್ರಕ ಬಿಲಗಳ ವಿಸ್ತಾರವು ಕೆಳ-ಕೆಳಗೆ ಕಡಿಮೆಯಾಗುತ್ತ ಹೋಗಿದೆ.

ಈಗ ಶ್ರೇಣಿಬದ್ಧ ಮತ್ತು ಪ್ರಕೀರ್ಣಕ ಬಿಲಗಳಲ್ಲಿ ಏನಿದೆಯೆಂಬುದನ್ನು ನೋಡೋಣ. ಮೊದಲನೆಯ ನರಕದ ಮೊದಲನೇ ಪಟಲದಲ್ಲಿ ನಾಲ್ಕೂ ದಿಕ್ಕುಗಳಲ್ಲಿ ೪೯-೪೯-೪೯-೪೯ ಶ್ರೇಣಿಬದ್ಧ ಬಿಲಗಳಿರುತ್ತವೆ ಹಾಗೂ ವಿದಿಶೆಗಳಲ್ಲಿ ಒಂದೊಂದು ಕಡಿಮೆ ಎಂದರೆ ೪೮-೪೮-೪೮-೪೮ ಶ್ರೇಣಿಬದ್ಧ ಬಿಲಗಳಿರುತ್ತವೆ.

ಮೊದಲನೆಯ ನರಕದ ಎರಡನೇ ಪಟಲದಲ್ಲಿ ಮಧ್ಯದೊಳಗೆ ಒಂದು ಇಂದ್ರಕ ಬಿಲವಿದೆ. ನಾಲ್ಕೂ

ದಿಶೆಗಳಲ್ಲಿ ೪೮-೪೮-೪೮-೪೮ ಶ್ರೇಣಿಬದ್ಧ ಬಿಲಗಳಿವೆ ಮತ್ತು ವಿದಿಶೆಗಳಲ್ಲಿ ೪೭-೪೭-೪೭-೪೭ ಬಿಲಗಳಿವೆ. ಮೂರನೆಯ, ನಾಲ್ಕನೆಯ ಪಟಲಗಳಲ್ಲಿ ಕಡಿಮೆ-ಕಡಿಮೆಯಾಗುತ್ತ ಹೋಗುತ್ತವೆ.

ಈಗ ಒಂದನೆಯ ನಂಬರಿನ ಚಾರ್ಟದಲ್ಲಿ ನೋಡುವುದು. ಮೊದಲನೆಯ ನರಕದಲ್ಲಿ ೧೩ ಪಟಲಗಳು ಎರಡನೆಯ ನರಕದಲ್ಲಿ ೧೧ ಪಟಲಗಳು, ಮೂರನೆಯ ನರಕದಲ್ಲಿ ೯ ಪಟಲಗಳು, ನಾಲ್ಕನೆಯ ನರಕದಲ್ಲಿ ೭ ಪಟಲಗಳು, ಐದನೆಯ ನರಕದಲ್ಲಿ ೫ ಪಟಲಗಳು, ಆರನೆಯ ನರಕದಲ್ಲಿ ೩ ಪಟಲಗಳು ಮತ್ತು ಏಳನೆಯ ನರಕದಲ್ಲಿ ಒಂದು ಪಟಲವಿದೆ - ಈ ಪ್ರಕಾರ ಒಟ್ಟು ಪಟಲಗಳ ಸಂಖ್ಯೆಯು ೪೯ ಆಗುತ್ತದೆ. ಪ್ರತಿಯೊಂದು ಪಟಲದಲ್ಲಿ ಒಂದೊಂದು ಕಡಿಮೆಯಾಯಿತು. ಹಾಗಾದರೆ ಎಷ್ಟು ಬಾರಿ ಕಡಿಮೆಯಾಯಿತು ? ೪೮ ಬಾರಿ ಕಡಿಮೆಯಾಯಿತು. ಪ್ರಾರಂಭದ ಪಟಲದೊಳಗೆ ದಿಶೆಗಳಲ್ಲಿ ೪೯-೪೯ ಶ್ರೇಣಿಬದ್ಧ ಬಿಲಗಳಿದ್ದವು. ಅಲ್ಲಿಂದ ಪ್ರತಿಯೊಂದು ಪಟಲದೊಳಗೆ ಕಡಿಮೆಯಾಗುತ್ತ ಕಡಿಮೆಯಾಗುತ್ತ ೪೮-೪೭-೪೬ ಆಗುತ್ತ ೪೯ರೊಳಗಿಂದ ೪೮ ಕಡಿಮೆಯಾಗಿ ಹೋದ ಮೇಲೆ ದಿಶೆಗಳಲ್ಲಿ ಒಂದೊಂದೇ ಶ್ರೇಣಿಬದ್ಧ ಬಿಲಗಳು ಉಳಿದವು. ವಿದಿಶೆಗಳಲ್ಲಿ ಪ್ರಾರಂಭದೊಳಗೆ ೪೮-೪೮ ಇದ್ದವು ೪೮ ಬಾರಿ ಒಂದೊಂದು ಕಡಿಮೆಯಾಗುತ್ತ ಕೊನೆಗೆ ಒಂದೂ ಉಳಿಯಲಿಲ್ಲ. ಈ ಪ್ರಕಾರ ಏಳನೆಯ ನರಕದಲ್ಲಿ ಒಂದು ಇಂದ್ರಕ ಬಿಲ ಮತ್ತು ನಾಲ್ಕು ದಿಶೆಗಳಲ್ಲಿ ಒಂದೊಂದು ಬಿಲದಂತೆ ೪ ಬಿಲ, ಹೀಗೆ ಒಟ್ಟು ಐದೇ ಬಿಲಗಳಿವೆ.

ಮೊದಲನೆಯ ನರಕದ ಹದಿಮೂರು ಪಟಲಗಳಲ್ಲಿ ಒಟ್ಟು ಮೂವತ್ತು ಲಕ್ಷ ಬಿಲಗಳಿವೆ. ಇಲ್ಲಿ ಮೊದಲನೆಯ ಪಟಲದ ನಾಲ್ಕೂ ದಿಶೆಗಳಲ್ಲಿ ೪೯-೪೯-೪೯-೪೯ ಬಿಲಗಳಿವೆ ಮತ್ತು ವಿದಿಶೆಗಳಲ್ಲಿ ೪೮-೪೮-೪೮-೪೮ ಬಿಲಗಳಿವೆ. ಅವು ಪ್ರತಿಯೊಂದು ಪಟಲದ ದಿಶೆ ಹಾಗೂ ವಿದಿಶೆಗಳಲ್ಲಿ ೧-೧ ಕಡಿಮೆಯಾಗಿ ಅರ್ಥಾತ್ ಪ್ರತಿ ಪಟಲ ೮ ಶ್ರೇಣಿಬದ್ಧ ಕಡಿಮೆಯಾಗಿ ಹದಿಮೂರು ಪಟಲಗಳ ಒಟ್ಟು ಶ್ರೇಣಿಬದ್ಧ ಬಿಲಗಳು ೪೪೨೦ ಆಗುತ್ತವೆ. ಅದರಲ್ಲಿ ಪ್ರತಿಯೊಂದು ಪಟಲದ ೧-೧- ಇಂದ್ರಕ ಬಿಲ ಹೀಗೆ ೧೩ ಇಂದ್ರಕ ಬಿಲಗಳು ಸೇರಿ ೪೪೩೩ ಆಗುತ್ತವೆ. ಉಳಿದವು ಎಲ್ಲವೂ ಪ್ರಕೀರ್ಣಕ ಬಿಲಗಳಿವೆ ಎಂದರೆ ೩೦ ಲಕ್ಷದೊಳಗಿಂದ ೪೪೩೩ ಕಡಿಮೆಯಾದ ಮೇಲೆ ೨೯೯೫೫೬೭ ಪ್ರಕೀರ್ಣಕ ಬಿಲಗಳು ಹರಡಿಕೊಂಡಿರುವ ಪುಷ್ಪಗಳ ಸಮಾನ ಕಂಡು ಬರುತ್ತವೆ.

ಮೊದಲನೆಯ ನರಕದ ಇಂದ್ರಕ ಬಿಲವು ೪೫ ಲಕ್ಷ ಯೋಜನದ್ದು ಎಂದರೆ ಸಂಖ್ಯಾತ ಯೋಜನದ್ದಿದೆ. ಶ್ರೇಣಿಬದ್ಧ ಬಿಲಗಳು ಅಸಂಖ್ಯಾತ ಯೋಜನ ವಿಸ್ತಾರವುಳ್ಳವಿವೆ ಮತ್ತು ಪ್ರಕೀರ್ಣಕ ಬಿಲಗಳು ಕೆಲವು ಸಂಖ್ಯಾತ ಯೋಜನ ವಿಸ್ತಾರವುಳ್ಳವಿದ್ದರೆ ಕೆಲವು ಅಸಂಖ್ಯಾತ ಯೋಜನವಿವೆ. $\frac{೧}{೫}$ ಪ್ರಕೀರ್ಣಕಗಳು ಸಂಖ್ಯಾತ ಯೋಜನವುಳ್ಳವಿವೆ ಹಾಗೂ $\frac{೪}{೫}$ ಪ್ರಕೀರ್ಣಕಗಳು ಅಸಂಖ್ಯಾತ ಯೋಜನವುಳ್ಳವಿವೆ.

ಶ್ರೇಣಿಬದ್ಧ ಹಾಗೂ ಪ್ರಕೀರ್ಣಕಗಳ ಒಟ್ಟು ಸಂಖ್ಯೆಯನ್ನು ಹೇಗೆ ಕಂಡು ಹಿಡಿಯುವುದು ? ಎಂಬುದರ ಕುರಿತಾಗಿ ತ್ರಿಲೋಕಸಾರದಲ್ಲಿ ಸೂತ್ರ ಹೇಳಿದ್ದಾರೆ, ಅದರ ಆಧಾರದಿಂದ ಕೂಡಲೇ ಅದರ ಉತ್ತರವು ದೊರಕಿ ಬಿಡುತ್ತದೆ. ಆದರೆ ಇಲ್ಲಿ ಅದರ ಚರ್ಚೆಯನ್ನು ನಾವು ಮಾಡುತ್ತಿಲ್ಲ.

ಮೊದಲನೆಯ ನರಕದಲ್ಲಿ ಹದಿಮೂರು ಪಟಲಗಳು ಮತ್ತು ಒಟ್ಟು ಮೂವತ್ತು ಲಕ್ಷ ಬಿಲಗಳಿವೆ. ಎರಡನೆಯ ನರಕದಲ್ಲಿ ೧೧ ಪಟಲಗಳು ಮತ್ತು ಒಟ್ಟು ೨೫ ಲಕ್ಷ ಬಿಲಗಳಿವೆ, ಮೂರನೆಯ ನರಕದಲ್ಲಿ ೯ ಪಟಲಗಳು ಮತ್ತು ಒಟ್ಟು ೧೫ ಲಕ್ಷ ಬಿಲಗಳಿವೆ. ನಾಲ್ಕನೆಯ ನರಕದಲ್ಲಿ ೭ ಪಟಲಗಳು ಮತ್ತು ಒಟ್ಟು ೧೦ ಲಕ್ಷ ಬಿಲಗಳಿವೆ, ಐದನೆಯ ನರಕದಲ್ಲಿ ೫ ಪಟಲಗಳು ಮತ್ತು ಒಟ್ಟು ೩ ಲಕ್ಷ ಬಿಲಗಳಿವೆ, ಆರನೆಯ ನರಕದಲ್ಲಿ ೩ ಪಟಲಗಳು ಮತ್ತು ಒಟ್ಟು ೯೯೯೫ ಅರ್ಥಾತ್ ೫ ಕಡಿಮೆ ೧ ಲಕ್ಷ ಬಿಲಗಳಿವೆ ಮತ್ತು ಏಳನೆಯ ನರಕದಲ್ಲಿ ೧ ದೇ ಪಟಲವಿದೆ ಮತ್ತು ಅದರಲ್ಲಿ ಕೇವಲ ೫ ಬಿಲಗಳಿವೆ. ಇದೆಲ್ಲವೂ ನರಕದ ಬಿಲಗಳ ಸಂಖ್ಯೆಯಿದೆ.

ಎರಡನೆಯ ನರಕದಲ್ಲಿ ೨೬೮೪ ಶ್ರೇಣಿಬದ್ಧ ಬಿಲಗಳು + ೧೧ ಇಂದ್ರಕಗಳು, ಮೂರನೆಯ ನರಕದಲ್ಲಿ ೧೪೭೬ ಶ್ರೇಣಿಬದ್ಧ + ೯ ಇಂದ್ರಕ, ನಾಲ್ಕನೆಯ ನರಕದಲ್ಲಿ ೭೦೦ ಶ್ರೇಣಿಬದ್ಧ + ೭ ಇಂದ್ರಕ, ಐದನೆಯ ನರಕದಲ್ಲಿ ೨೬೦ ಶ್ರೇಣಿಬದ್ಧ + ೫ ಇಂದ್ರಕ, ಆರನೆಯ ನರಕದಲ್ಲಿ ೬೦ ಶ್ರೇಣಿಬದ್ಧ + ೩ ಇಂದ್ರಕ ಹಾಗೂ ಏಳನೆಯ ನರಕದಲ್ಲಿ ೪ ಶ್ರೇಣಿಬದ್ಧ + ೧ ಇಂದ್ರಕ ಬಿಲಗಳಿವೆ. ಒಟ್ಟು ಬಿಲಗಳೊಳಗಿಂದ ಇವುಗಳನ್ನು ಕಡಿಮೆ ಮಾಡಿದ ಮೇಲೆ ಆಯಾ ನರಕದ ತಮ್ಮ - ತಮ್ಮ ಪ್ರಕೀರ್ಣಕಗಳ ಸಂಖ್ಯೆಯು ಬಂದು ಬಿಡುತ್ತದೆ.

ಇಂದ್ರಕ ಬಿಲಗಳ ವ್ಯಾಸ-ವಿಸ್ತಾರವು ಕೆಳ-ಕೆಳಗೆ ಕ್ರಮದಿಂದ ಕಡಿಮೆಯಾಗುತ್ತ ಹೋಗಿದೆ, ಅನ್ಯ ಬಿಲಗಳ ಸಂಖ್ಯೆ ಹಾಗೂ ವಿಸ್ತಾರ ಎಂದರೆ ಆಕಾರ ಎರಡೂ ಕೆಳ-ಕೆಳಗೆ ಕಡಿಮೆಯಾಗುತ್ತ ಹೋಗುತ್ತವೆ.

ಆದರೆ ಮೇಲಿನ ನರಕಗಳಲ್ಲಿ-ಪಟಲಗಳಲ್ಲಿ ಆಯುವು ಕಡಿಮೆಯಿದೆ, ಕೆಳಗಿನ ನರಕಗಳಲ್ಲಿ ಆಯುವು ಅಧಿಕವಿದೆ. ನರಕಗಳಲ್ಲಿ ಅತ್ಯಂತ ಕಡಿಮೆಯೆಂದರೆ ಆಯುವು ೧೦ ಸಾವಿರ ವರ್ಷದ್ದಿರುತ್ತದೆ ಮತ್ತು ಅತಿ ಅಧಿಕವೆಂದರೆ ಆಯುವು ೩೩ ಸಾಗರದ್ದಿರುತ್ತದೆ. ನಾರಕಿಗಳ ಶರೀರದ ಎತ್ತರವು ಮೇಲೆ ಕಡಿಮೆಯಿರುತ್ತದೆ, ಕೆಳ-ಕೆಳಗೆ ಅಧಿಕವಿರುತ್ತದೆ ಎಂದರೆ ಪ್ರಥಮ ನರಕದ ಪ್ರಥಮ ಪಟಲದಲ್ಲಿ ಮೂರು ಮೊಳದಿಂದ ಪ್ರಾರಂಭವಾಗಿ ಏಳನೆಯ ನರಕದಲ್ಲಿ ಐನೂರು ಧನುಷ್ಯ(ಬಿಲ್ಲು ಪ್ರಮಾಣ) ಎತ್ತರವಿರುತ್ತದೆ.

ಮೇಲಿನ ಪಟಲಗಳ ಉತ್ಕೃಷ್ಟ ಆಯುವಿನಲ್ಲಿ ಒಂದು ಸಮಯ ಅಧಿಕಗೊಳಿಸಿದ ಮೇಲೆ ಕೆಳಗಿನ ಪಟಲದ ಜಘನ್ಯ ಆಯುವಾಗುತ್ತದೆ. ಶರೀರದ ಎತ್ತರವು ಕೂಡ ಪ್ರತಿಯೊಂದು ಪಟಲದಲ್ಲಿ ಹೆಚ್ಚುತ್ತ ಹೋಗುತ್ತದೆ. ಹೇಗೆಂದರೆ - ಮೊದಲನೆಯ ನರಕದ ಮೊದಲನೇ ಪಟಲದಲ್ಲಿ ಜಘನ್ಯ ಆಯುವು ೧೦೦೦೦ ವರ್ಷದ್ದಿದೆ ಮತ್ತು ಉತ್ಕೃಷ್ಟ ಆಯುವು ೯೦೦೦೦ ವರ್ಷದ್ದಿದೆ. ಎರಡನೆಯ ಪಟಲದಲ್ಲಿ ಜಘನ್ಯ ಆಯುವು ೯೦೦೦೦ ವರ್ಷ ಮತ್ತು ಒಂದು ಸಮಯ ಅಧಿಕ ಹಾಗೂ ಉತ್ಕೃಷ್ಟ ಆಯುವು ೯೦೦೦೦೦೦ ವರ್ಷದ್ದಿದೆ. ಮೂರನೆಯ ಪಟಲದಲ್ಲಿ ಉತ್ಕೃಷ್ಟ ಆಯುವು ಅಸಂಖ್ಯಾತ ಪೂರ್ವ ಕೋಟಿ, ಅದರಿಂದ ಮುಂದೆ $\frac{೧}{೧೦}$ ಸಾಗರ ಈ ರೀತಿ ಹೆಚ್ಚುತ್ತ ಹೆಚ್ಚುತ್ತ ಹದಿಮೂರನೇ ಪಟಲದಲ್ಲಿ ಉತ್ಕೃಷ್ಟ ೧ ಸಾಗರದ್ದಿದೆ. ಶರೀರದ ಎತ್ತರವು ಕೂಡ ೩ ಮೊಳದಿಂದ ಆರಂಭವಾಗಿ ಹೆಚ್ಚುತ್ತ-ಹೆಚ್ಚುತ್ತ ಹದಿಮೂರನೆಯ ಪಟಲದಲ್ಲಿ ೭ ಧನುಷ್ಯ ೩ ಮೊಳ ೬ ಅಂಗುಲವಿದೆ ಮತ್ತು ಕೆಳಗಿನ ನರಕಗಳ ಅಂತಿಮ ಪಟಲಗಳಲ್ಲಿ ದ್ವಿಗುಣ-ದ್ವಿಗುಣವಾಗುತ್ತ ಹೋಗುತ್ತದೆ. ನಾವು ಕೆಳಗಿನ ಕೋಷ್ಟಕದಲ್ಲಿ ಕೇವಲ ಪ್ರತಿಯೊಂದು ನರಕದ ಅಂತಿಮ ಪಟಲಗಳಲ್ಲಿನ ಉತ್ಕೃಷ್ಟ ಆಯು ಮತ್ತು ಶರೀರದ ಎತ್ತರವನ್ನು ನೋಡೋಣ.

	ಶರೀರದ ಎತ್ತರ	ಉತ್ಕೃಷ್ಟ ಆಯು
೧ನೇ ಪೃಥ್ವಿ	೭ ಧನುಷ್ಯ ೩ ಮೊಳ ೬ ಅಂಗುಲ	೧ ಸಾಗರ
೨ನೇ ಪೃಥ್ವಿ	೧೫ ಧನುಷ್ಯ ೨ ಮೊಳ ೧೨ ಅಂಗುಲ	೩ ಸಾಗರ
೩ನೇ ಪೃಥ್ವಿ	೩೧ ಧನುಷ್ಯ ೧ ಮೊಳ	೭ ಸಾಗರ
೪ನೇ ಪೃಥ್ವಿ	೬೨ ಧನುಷ್ಯ ೨ ಮೊಳ	೧೦ ಸಾಗರ
೫ನೇ ಪೃಥ್ವಿ	೧೨೫ ಧನುಷ್ಯ	೧೭ ಸಾಗರ
೬ನೇ ಪೃಥ್ವಿ	೨೫೦ ಧನುಷ್ಯ	೨೨ ಸಾಗರ
೭ನೇ ಪೃಥ್ವಿ	೫೦೦ ಧನುಷ್ಯ	೩೩ ಸಾಗರ

ಇಲ್ಲಿ ನರಕಕ್ಕೇನೆ ಪೃಥ್ವಿಯೆನ್ನಲಾಗಿದೆ. ಆದರೆ ನರಕಗಳಂತೂ ಕೇವಲ ತ್ರಸನಾಳಿಯಲ್ಲಿಯೇ ಇವೆ. ಮತ್ತು ಪೃಥ್ವಿಗಳು ಲೋಕದ ಕೊನೆಯವರೆಗೆ ಹರಡಿಕೊಂಡಿವೆ. ಬಿಲಗಳ ವಿಸ್ತಾರವು ಅಡ್ಡಲಾಗಿ ಅಧಿಕವಿದೆ - ಸಂಖ್ಯಾತ, ಅಸಂಖ್ಯಾತ ಯೋಜನದವಿರುತ್ತವೆ, ಬಿಲಗಳ ಎತ್ತರವು ಸಂಖ್ಯಾತ ಯೋಜನದ್ದಿದೆ. ಏಳು ನರಕಗಳ ಒಟ್ಟು ಬಿಲಗಳು ೮೪ ಲಕ್ಷವಿವೆ. ಈ ನರಕದ ಬಿಲಗಳು ದುಂಡಗೆ, ತ್ರಿಕೋಣ, ಚೌಕಾಕಾರ ಮೊದಲಾಗಿ ಅನೇಕ ಆಕಾರವುಳ್ಳವಿವೆ ಹಾಗೂ ದುಃಖವೀಯುವ ಅನೇಕ ಸಾಮಗ್ರಿಗಳಿಂದ ತುಂಬಿಕೊಂಡಿವೆ. ಅಲ್ಲಿ ಅತ್ಯಂತ ದುರ್ಗಂಧವು ವ್ಯಾಪ್ತವಿದೆ ಅಲ್ಲದೇ ಗಾಢ ಅಂಧಕಾರವೇ ಯಾವಾಗಲೂ ತುಂಬಿಕೊಂಡಿರುತ್ತದೆ. ಈ ಬಿಲಗಳ ಮೇಲ್ಭಾವಣಿಯಲ್ಲಿ ಜೇನುಗೂಡಿನ ಸಮಾನ ಆ ನಾರಕಿಗಳು ಉತ್ಪನ್ನವಾಗುವಂಥ ಉಪಪಾದ ಸ್ಥಾನಗಳು ನೇತಾಡುತ್ತವೆ. ಅವು ಒಂಟೆ ಮೊದಲಾದ ಪ್ರಾಣಿಗಳ ಮುಖದ ಆಕಾರವುಳ್ಳವಿವೆ, ಮೇಲೆ ಒಳಭಾಗದಲ್ಲಿ ಪೊಳ್ಳಗಿದ್ದು ಅಗಲವಿವೆ, ಅವುಗಳ ಮುಖವು ಸರಪಳಿಯಂತಿರುತ್ತದೆ. ಅದರಲ್ಲಿ ಅಂತರ್ಮುಹೂರ್ತದೊಳಗೆ ನಾರಕಿಗಳ ಶರೀರದ ರಚನೆಯಾಗುತ್ತದೆ ಮತ್ತು ತೀಕ್ಷ್ಣವಾದ ಶಸ್ತ್ರಗಳಿಂದ ತುಂಡಾಗುತ್ತ ನಾರಕೀ ಜೀವಗಳು ಆ ಉಪಪಾದ ಸ್ಥಾನಗಳಿಂದ ಚ್ಯುತವಾಗಿ ನರಕ ಭೂಮಿಯ ಮೇಲೆ ಅಪ್ಪಳಿಸುತ್ತವೆ, ಕೂಡಲೇ ಮೇಲಕ್ಕೆ ಹಾರಿ ಪುನಃ ಅಲ್ಲಿಯೇ ಬೀಳುತ್ತವೆ. ಮೊದಲನೆಯ ನರಕದಲ್ಲಿ $\frac{೧೨೫}{೧೬}$ = ೭ $\frac{೧೩}{೧೬}$ ಯೋಜನ ಮೇಲೆ ಹಾರುತ್ತವೆ. ಮುಂದಿನ ನರಕಗಳಲ್ಲಿ ದ್ವಿಗುಣ-ದ್ವಿಗುಣ ಎತ್ತರ ಹಾರುತ್ತವೆ. (ಒಮ್ಮೆಲೇ ಬಿಸಿ ಪಾತ್ರೆಗೆ ಕೈ ತಾಗಿದರೆ ನಾವು ಎಷ್ಟು ವೇಗವಾಗಿ ಅಲ್ಲಿಂದ ಕೈ ತಗೆಯುತ್ತೇವೆ ಹಾಗೆ ನರಕ ಭೂಮಿಯ ಸ್ಪರ್ಶವಾಗುತ್ತಿದ್ದಂತೆಯೇ ಅಸಹ್ಯ ವೇದನೆಯಿಂದ ತಕ್ಷಣ ಆ ನಾರಕಿಗಳು ಮೇಲೆ ಹಾರುತ್ತಾರೆ.) ಏಳನೆಯ ನರಕದಲ್ಲಿ ೫೦೦ ಯೋಜನ ಮೇಲೆ ಹಾರುತ್ತವೆ, ಪುನಃ ಕೆಳಗೆ ಬಿದ್ದು ತುಂಡಾಗಿ ಹೋಗುತ್ತಿರುತ್ತವೆ.

ಅಲ್ಲಿರುವಂಥ ಮೊದಲಿನ (ಹಳೆಯ) ನಾರಕಿಗಳು ಧಾವಿಸಿ ಬಂದು ಕಠೋರ ಶಬ್ದಗಳನ್ನು ಉಚ್ಚರಿಸುತ್ತ ಅವರಿಗೆ (ಹೊಸದಾಗಿ ಬಂದಿರುವ ನಾರಕಿಗಳಿಗೆ) ಹೊಡೆಯುತ್ತಾರೆ. ಗಾಯಗಳ ಮೇಲೆ ಉಪ್ಪು ನೀರನ್ನು ಎರಚುತ್ತಾರೆ. ಹೊಸ ನಾರಕಿಗಳೂ ಅವಧಿಜ್ಞಾನದ ಮೂಲಕ ಪೂರ್ವದ ವೈರವನ್ನು ತಿಳಿದುಕೊಂಡು ಅವರಿಗೆ ಹೊಡೆಯಲಾರಂಭಿಸುತ್ತಾರೆ ಮತ್ತು ತಾವೂ ಹೊಡೆಸಿಕೊಳ್ಳುತ್ತಾರೆ.

ನಾರಕಿಗಳು ವಿಕ್ರಿಯೆಯಿಂದ ತಮ್ಮ ಶರೀರವನ್ನು ತೋಳ, ವ್ಯಾಘ್ರ, ಸರ್ಪ, ಚೇಳು, ಗೃದ್ಧ, ನಾಯಿ ಮೊದಲಾದವುಗಳ ರೂಪ ಹಾಗೂ ಶಸ್ತ್ರ, ಅಗ್ನಿ ಮೊದಲಾದವುಗಳ ರೂಪವನ್ನಾಗಿ ಮಾಡಿಕೊಳ್ಳುತ್ತಾರೆ. ನರಕಗಳಲ್ಲಿ

ದೊಡ್ಡ ದೊಡ್ಡ ಭೀಮಕಾಯದ ಪರ್ವತ, ಪೀಡೆಯನ್ನುಂಟು ಮಾಡುವ ನೂರಾರು ಯಂತ್ರಗಳಿಂದ ತುಂಬಿಕೊಂಡಿರುವ ಗುಹೆಗಳು, ಅಗ್ನಿಯಿಂದ ವ್ಯಾಪ್ತವಿರುವ ಲೋಹಮಯ ಪುತ್ಥಳಿಗಳಿವೆ. ಶಸ್ತ್ರದ ಸಮಾನ ಎಲೆಗಳಿಂದ ಯುಕ್ತವಿರುವಂಥ ಅಸಿಪತ್ರವನಗಳಿವೆ. ಮಿಥ್ಯಾ ಶಾಲ್ಮಲಿ (ಸೇಮಲ) ವೃಕ್ಷಗಳಿವೆ, ವೈತರಣಿಯೆಂಬ ಹೆಸರಿನ ನದಿಯಿದ್ದು ಅದರ ನೀರು ಕ್ಷಾರಮಯವಿದೆ ಹಾಗೂ ದುರ್ಗಂಧಿತ ರಕ್ತ, ಕೀವುಗಳಿಂದ ಯುಕ್ತವಿದೆ ಅದರಲ್ಲಿ ಕೋಟ್ಯಂತರ ಕ್ರಿಮಿಗಳು ತುಂಬಿಕೊಂಡಿವೆ. ಅಲ್ಲಿ ಯಾವ ದ್ವೀಂದ್ರಿಯಾದಿಗಳಿರುವುದಿಲ್ಲ ನಾರಕಿಗಳೇ ವಿಕ್ರಿಯೆಯಿಂದ ಅಂಥ ರೂಪು ಧಾರಣ ಮಾಡುತ್ತವೆ. ಅಲ್ಲಿ ಭಯಂಕರವಾದ ಉಷ್ಣತೆಯಿರುತ್ತದೆ. ಅದರ ಭಯದಿಂದ ನಾರಕಿಗಳು ನದಿಯಲ್ಲಿ ಧುಮುಕುತ್ತವೆ ಆಗ ಆ ಜಲದಿಂದ ಸರ್ವಾಂಗಗಳಲ್ಲಿ ದಾಹವುಂಟಾಗುತ್ತದೆ, ನೆರಳನ್ನು ಬಯಸಿ ಅಸಿಪತ್ರ ವನದೊಳಗೆ ಹೋಗುತ್ತವೆ ಆಗ ಶಸ್ತ್ರದ ಸಮಾನವಿರುವ ಭಾರವಾದ ಎಲೆಗಳು ಬೀಳುವುದರಿಂದ ನಾರಕಿಗಳ ಶರೀರವು ತುಂಡಾಗಿ ಹೋಗುತ್ತದೆ. ಭಟ್ಟಿಯೊಳಗೆ ಹಾಕಿ ನಾರಕಿಗಳು ಒಬ್ಬರನ್ನೊಬ್ಬರು ಸುಡುತ್ತಾರೆ. ದೊಡ್ಡ-ದೊಡ್ಡ ಬಾಣಲೆಗಳಲ್ಲಿ ಕುದಿಯುತ್ತಿರುವ ಎಣ್ಣೆಯೊಳಗೆ ಎಸೆಯುತ್ತಾರೆ. ಅಲ್ಲಿಯ ಭೂಮಿಯ ಸ್ಪರ್ಶ ಮಾತ್ರದಿಂದ ಸಾವಿರಾರು ಚೇಳುಗಳು ಒಮ್ಮೆಲೆ ಕಚ್ಚಿದಂಥ ವೇದನೆಯಾಗುತ್ತದೆ. ಮೊದಲನೆಯ ನರಕದಿಂದ ಐದನೆಯ ನರಕದ $\frac{3}{4}$ ಭಾಗದವರೆಗೆ ಅತಿಯಾದ ಉಷ್ಣತೆಯಿದೆ, ಅದರ ಅಳತೆಯನ್ನು ಇಲ್ಲಿರುವ ಅಗ್ನಿ ಮೊದಲಾದ ಯಾವುದೇ ವಸ್ತುವಿಗೆ ಹೋಲಿಸಲಾಗುವುದಿಲ್ಲ. ಅದರ ಕೆಳಗೆ ಏಳನೆಯ ನರಕದವರೆಗೆ ಅತಿಯಾದ-ಹೇಳಲಸಾಧ್ಯವಾದ ಶೀತ ವಾತಾವರಣವಿದೆ.

ನಾರಕಿಗಳ ಶರೀರವು ಅನೇಕ ರೋಗಗಳಿಂದ ಗ್ರಸ್ತವಾಗಿರುತ್ತದೆ. ಅಲ್ಲಿ ಹಸಿವು, ಬಾಯಾರಿಕೆ, ಭಯ ಮೊದಲಾದವುಗಳ ತೀವ್ರ ಬಾಧೆಯನ್ನು ಸಹಿಸಬೇಕಾಗುತ್ತದೆ. ನಾರಕಿಗಳು ಅಲ್ಲಿರುವ ಅತ್ಯಂತ ದುರ್ಗಂಧಮಯ ಮಣ್ಣನ್ನು ತಿನ್ನುತ್ತವೆ ಆದರೆ ಹಸಿವೆಯು ದೂರವಾಗುವುದಿಲ್ಲ. ಮೊದಲನೆಯ ನರಕದ ಮೊದಲನೇ ಪಟಲದ ಒಂದು ಚಿಟಿಕೆ ಮಣ್ಣನ್ನು ಮನುಷ್ಯ ಕ್ಷೇತ್ರದಲ್ಲಿ ತಂದು ಹಾಕಿದರೆ ಅದರ ದುರ್ಗಂಧದಿಂದ ಅರ್ಧ ಹರದಾರಿಯವರೆಗಿನ ಮನುಷ್ಯರು ಸತ್ತು ಹೋಗುವರು. ವಿಶ್ವಾಸವಾಗುವುದಿಲ್ಲವೇನು ? ಭೂಪಾಲ ನಗರದ ಗ್ಯಾಸ್‌ಕಾಂಡದಲ್ಲಿ ಏನೇನಾಗಿತ್ತು ಕೇಳಿಲ್ಲವೇನು ? ಪ್ರತ್ಯಕ್ಷ ನೋಡಿಲ್ಲವೇನು ?

ನಾರಕಿಗಳ ಶರೀರವು ತುಂಡು-ತುಂಡಾಗಿ ಹೋದ ಮೇಲೆಯೂ ಪುನಃ ಪಾದರಸ (ಪಾರಜ)ದ ಹಾಗೆ ಕೂಡಿಕೊಳ್ಳುತ್ತದೆ. ಅಲ್ಲಿ ಆಯುವು ಪೂರ್ಣವಾದಲ್ಲದೆ ಸಾಯುವುದೇ ಇಲ್ಲ. ಮನುಷ್ಯರಂತೂ ಕಷಾಯವಶದಿಂದ ಅಥವಾ ಸಂಯೋಗಗಳಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ; ಆದರೆ ನರಕಗಳಲ್ಲಿ ಅಂಥ ಯಾವ ವ್ಯವಸ್ಥೆಯು ಇರುವುದಿಲ್ಲ. ಈ ಮನುಷ್ಯನಂತೂ ತಾನು ಸತ್ತು ಹೋದರೆ ದುಃಖಗಳಿಂದ ಬಿಡುಗಡೆಯಾಗುವೆನೆಂದು ಯೋಚಿಸುತ್ತಾನೆ. ಆದರೆ ಇಂಥ ಪರಿಣಾಮಗಳಿಂದ ಸತ್ತು ನರಕಗಳಲ್ಲಿ ಸಾಗರ-ಸಾಗರಾವಧಿ ವರ್ಷಗಳವರೆಗೆ ಇಂಥ ಕಷ್ಟಗಳಿಂದ ಬಿಡುಗಡೆಯಿಲ್ಲ - ವೇದನೆಯನ್ನು ಅನುಭವಿಸಬೇಕಾಗುತ್ತದೆಯೆಂಬುದು ಅವನಿಗೆ ಗೊತ್ತಿಲ್ಲ. ಇವೆಲ್ಲವೂ ಕ್ಷೇತ್ರ ಸಂಬಂಧದ ದುಃಖಗಳಿವೆ. ಅಲ್ಲಿ ಆಗುವಂಥ ಸಂಕ್ಲೇಶ ಪರಿಣಾಮಗಳ ಕಾರಣದಿಂದ ಯಾವ ಆರ್ತ-ರೌದ್ರ ಧ್ಯಾನಗಳಾಗುತ್ತಿರುತ್ತವೆ ಅದು ಮಾನಸಿಕ ದುಃಖವಿದೆ. ರೋಗಾದಿಗಳಿಂದ ಉತ್ಪನ್ನವಾಗುವಂಥ ವೇದನೆಯು ಶಾರೀರಿಕ ದುಃಖವಿದೆ. ಅಸುರಕುಮಾರ ಜಾತಿಯ ಭವನವಾಸೀ ದೇವಗಳು ಮೂರನೆಯ

ನರಕದವರೆಗೆ ಹೋಗಿ ಅಲ್ಲಿಯ ನಾರಕಿಗಳಿಗೆ ಒಬ್ಬರದು ಇನ್ನೊಬ್ಬರಿಗೆ ಪೂರ್ವಭವದ ವೈರವನ್ನು ನೆನಪಿಸಿಕೊಟ್ಟು ಅವರನ್ನು ಪರಸ್ಪರರೊಳಗೆ ಹೊಡೆದಾಡಿಸುತ್ತಾರೆ.

ಪ್ರಶ್ನೆ :- ಅಲ್ಲಿ ಹೋಗುವಂಥ ದೇವಗಳಿಗೆ ಇಂಥ ಸನ್ನಿವೇಶಗಳಿಂದ ದುಃಖವಾಗುವುದಿಲ್ಲವೇನು ?

ಉತ್ತರ :- ವಾಸ್ತವದಲ್ಲಿ ಸಂಯೋಗಗಳಿಂದ ಸುಖ-ದುಃಖಗಳಾಗುವುದಿಲ್ಲ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ದುಃಖವಾಗುತ್ತದೆ. ವೈದ್ಯರಿಗೆ ಆಗುತ್ತದೆಯೇನು ? ಜೈಲಿನಲ್ಲಿ ಕೈದಿಗಳಿಗೆ ದುಃಖವಾಗುತ್ತದೆ, ಜೈಲಿನ ಅಧಿಕಾರಿಗಳಿಗೆ ದುಃಖವಾಗುತ್ತದೆಯೇನು ? ನಾವು ದುಃಖಿಗಳಾಗುವುದು ಅದಂತೂ ನಮ್ಮ ಮೋಹ, ರಾಗ, ದ್ವೇಷಗಳಿಂದ ದುಃಖಿಯಾಗುತ್ತೇವೆ. ಶರೀರದಲ್ಲಿನ ಏಕತ್ವ ಬುದ್ಧಿಯ ಕಾರಣ ಸಂಯೋಗಗಳಿಂದ ಸುಖ ಅಥವಾ ದುಃಖ ಮನ್ನಿಸುವುದು ಅದು ಮಿಥ್ಯಾ ಮನ್ನಣೆಯರೂಪ ಭ್ರಾಂತಿಯ ದುಃಖವಿದೆ.

ಪ್ರತಿಯೊಂದು ನರಕದಲ್ಲಿ ಅಸಂಖ್ಯಾತ ನಾರಕಿಗಳು ಸಮ್ಯಗ್ದೃಷ್ಟಿಗಳಿದ್ದಾರೆ. ನರಕದ ತೀವ್ರ ವೇದನೆ ಹಾಗೂ ಅತ್ಯಂತ ಪ್ರತಿಕೂಲತೆಗಳ ಮಧ್ಯದಲ್ಲಿ ಇರುತ್ತಿದ್ದರೂ ಅಲ್ಲಿ ಅಸಂಖ್ಯಾತ ಜೀವರುಗಳು ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಇಲ್ಲಿ ಉಪದೇಶ ಕೇಳಿದರೂ ಕೇಳದವರ ಹಾಗೆ ಜೀವನ ಕಳೆಯುತ್ತಾರೆ, ಭೋಗಗಳ ತೀವ್ರ ಅಭಿರುಚಿ, ಪರಿಗ್ರಹಗಳ ಅತಿಯಾದ ಲಾಲಸೆಯಲ್ಲಿ ನರಕಾಯುವನ್ನು ಕಟ್ಟಿಕೊಂಡು ಅಲ್ಲಿ ಜನ್ಮ ಪಡೆಯುತ್ತಾರೆ. ಅಲ್ಲಿ ಯಾವನೋ ನಾರಕಿಯು ನಾನು ಯಾರಿದ್ದೇನೆ ? ಎಂಬುದರ ವಿಚಾರ ಮಾಡುತ್ತಾನೆ, ತತ್ತ್ವಗಳ ಭಾವಭಾಸನದೊಂದಿಗೆ ತತ್ತ್ವ ಚಿಂತನದಲ್ಲಿ ದೃಢ ಶ್ರದ್ಧೆ ಮಾಡುತ್ತ ಅಲ್ಲಿಯೂ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆ. ಮೇಲಿನ ಸ್ವರ್ಗದ ದೇವಗಳು ಕೂಡ ಕೆಳಗೆ ಮೂರನೆಯ ನರಕದವರೆಗೆ ಹೋಗುತ್ತಾರೆ ಆದರೆ ನಾರಕಿಗಳಿಗೆ ಬಾಧೆಯನ್ನುಂಟು ಮಾಡುವ ಸಲುವಾಗಿ ಅಲ್ಲ; ಪ್ರತಿಯಾಗಿ ಅವರಿಗೆ ಉಪದೇಶ ಕೊಡುವ ಸಲುವಾಗಿ ಹೋಗುತ್ತಾರೆ. ಸೀತೆಯ ಜೀವವು ದೇವನಾಗಿ ಸ್ವರ್ಗದಲ್ಲಿರುವುದನ್ನು ಹಾಗೂ ನರಕದಲ್ಲಿರುವ ರಾವಣನ ಜೀವನಿಗೆ ಉಪದೇಶ ಕೊಡುವ ಸಲುವಾಗಿ ಅಲ್ಲಿಗೆ ಹೋಗುತ್ತಾನೆಂಬುದನ್ನು ನಾವೆಲ್ಲರೂ ಪ್ರಥಮಾನುಯೋಗದಲ್ಲಿ ಓದಿದ್ದೇವೆ, ಅಲ್ಲವೇನು ? ಆದರೂ ಇಲ್ಲಿ ನಾವು ರಾವಣನಿಗೆ ಬೈಯುತ್ತಿರುವುದು ಎಂಥ ವಿಪರೀತತೆಯಿದೆ - ಜನರು ಅವನ ಪ್ರತಿರೂಪ(ಪುತ್ಥಳಿ)ವನ್ನು ಸುಟ್ಟು ಹಾಕುತ್ತಾರೆ.

ನರಕಗಳಲ್ಲಿ ಇಷ್ಟೊಂದು ದುಃಖವಿರುವಾಗ ಜೀವಗಳು ಅಲ್ಲಿ ಹೋಗುತ್ತಾರೆಯಾದರೂ ಏಕೆ ? ಅಲ್ಲಿ ಜನ್ಮ ಪಡೆಯುತ್ತಾರೆಯೇ ಏಕೆ ? - ಜೀವಗಳು ಪಾಪಭಾವ ಮಾಡಿ, ಅತ್ಯಂತ ಸಂಕ್ಲೇಶ ಪರಿಣಾಮ ಮಾಡುವುದರಿಂದ ನರಕಕ್ಕೆ ಹೋಗುತ್ತಾರೆ. ತೀವ್ರ ಕಷಾಯ, ಅತಿಯಾದ ಆರಂಭ ಮತ್ತು ಬಹಳಷ್ಟು ಪರಿಗ್ರಹದ ಸಂಗ್ರಹಣೆ ಮಾಡಿ ಅಥವಾ ಮಾಡುವ ಭಾವದಿಂದ ಅಲ್ಲಿ ಹೋಗಬೇಕಾಗುತ್ತದೆ. ಜೀವನು ಇಲ್ಲಿ ಧನದ ಲೋಭದಿಂದ ಪಾಪ ಮಾಡುತ್ತಿರುತ್ತಾನೆ, ಆ ಧನವನ್ನು ಭೋಗಿಸುತ್ತಾನೋ ಅಥವಾ ಭೋಗಿಸುವ ಸಾಧ್ಯತೆಯಿದೆಯೋ ಅಥವಾ ಇಲ್ಲವೆಂಬುದರ ಪರಿಚಯವಿಲ್ಲ, ಆದರೆ ಆ ಪಾಪಗಳನ್ನು ನಿಯಮದಿಂದ ಭೋಗಿಸುವನು ಭೋಗಿಸಬೇಕಾಗುತ್ತದೆ. ಇಲ್ಲಿಯ ಧನ ಸಂಪತ್ತು, ಮನೆ, ಆಸ್ತಿಯನ್ನೆಲ್ಲ ಇಲ್ಲಿಯೇ ಬಿಟ್ಟು ತಾನು ಪರಭವಕ್ಕೆ ಹೋಗುತ್ತಾನೆ. ಜೊತೆಯಲ್ಲಿ ಏನನ್ನೂ ತಗೆದುಕೊಂಡು ಹೋಗುವ ಸಾಧ್ಯತೆಯಿಲ್ಲ; ಆದರೆ ಅದರ ಸಲುವಾಗಿ ಮಾಡಲಾದ ಪಾಪ ಪರಿಣಾಮಗಳ ಕಾರಣದಿಂದ ಕಟ್ಟಿಕೊಂಡ ಕರ್ಮವನ್ನು ನಿಶ್ಚಿತವಾಗಿ ಜತೆಯಲ್ಲಿ ತಗೆದುಕೊಂಡು ಹೋಗುತ್ತಾನೆ. ತಾನು ತನ್ನ ಪತ್ನಿ-ಪುತ್ರರ ಸಲುವಾಗಿ ಹಗಲಿರುಳೂ ಕಷ್ಟ ಪಡುತ್ತಿದ್ದೇನೆಂದು ಹೇಳುತ್ತಾನೆ - ತನ್ನನ್ನು ಮಹಾಉದಾರಿಯೆಂದು ನಿರ್ದೋಷನೆಂದು ಪ್ರಸ್ತುತ ಪಡಿಸುತ್ತಾನೆ. ವಿಚಾರ ಮಾಡಿದರೆ

ಇಲ್ಲಿಯ ಸಂಪಾದನೆಯನ್ನು ಒಂದು ವೇಳೆ ಪರಭವಕ್ಕೆ ತಗೆದುಕೊಂಡು ಹೋಗುವ ವ್ಯವಸ್ಥೆಯೇನಾದರೂ ಇರುತ್ತಿದ್ದರೆ ಈ ಲೋಭೀ ಜೀವನು ಯಾವ ಪತ್ನಿ-ಪುತ್ರರಿಗೆ ಏನನ್ನು ಬಿಟ್ಟು ಹೋಗಬಹುದಾಗಿದೆ ? ಇಲ್ಲ; ಏನನ್ನೂ ಬಿಟ್ಟು ಹೋಗುವ ಸಾಧ್ಯತೆಯಿಲ್ಲವೆಂಬ ನಿಷ್ಕರ್ಷ ಹೊರಡುತ್ತದೆ !

ಈಗ ಯಾವ ಜೀವಗಳು ಸತ್ತು ಯಾವ ನರಕದವರೆಗೆ ಹೋಗಬಹುದಾಗಿದೆ ? ಎಂಬುದನ್ನು ನೋಡೋಣ. ಅಸಂಜ್ಞೀ ಪಂಚೇಂದ್ರಿಯ ತಿರ್ಯಂಚವು ಮೊದಲನೆಯ ನರಕದವರೆಗೆ ಹೋಗಬಹುದಾಗಿದೆ, ಕೆಳಗಿನ ನರಕಗಳಲ್ಲಿ ಹೋಗುವ ಸಾಧ್ಯತೆಯಿಲ್ಲ. ಸರೀಸೃಪ ಹೊಟ್ಟೆ ಹೊಸೆಯುತ್ತ ಗಮನ ಮಾಡುವಂಥ (ಹಲ್ಲಿ) ಮೊದಲಾದ ಜೀವಗಳು ಎರಡನೆಯ ನರಕದವರೆಗೆ ಹೋಗಬಹುದಾಗಿದೆ.

ಪ್ರಶ್ನೆ :- ಅಸಂಜ್ಞೀ ತಿರ್ಯಂಚಗಳ ಹಾಗೆ ಅಸಂಜ್ಞೀ ಮನುಷ್ಯರು ಕೂಡ ಅಲ್ಲಿಯವರೆಗೆ ಹೋಗುತ್ತಾರೇನು?

ಉತ್ತರ :- ಮನುಷ್ಯರು ಅಸಂಜ್ಞಿಗಳಿರುವುದೇ ಇಲ್ಲ. ಎಲ್ಲ ಮನುಷ್ಯರು ಬೇಕಾದರೆ ಅವರು ಪರ್ಯಾಪ್ತರಿರಲಿ ಅಥವಾ ಅಪರ್ಯಾಪ್ತರಿರಲಿ ಸಂಜ್ಞೀ ಪಂಚೇಂದ್ರಿಯರೇ ಇರುತ್ತಾರೆ.

ಪ್ರಶ್ನೆ :- ಸಮ್ಮೂರ್ಚ್ಛನ ಲಬ್ಧಿ ಅಪರ್ಯಾಪ್ತ ಮನುಷ್ಯನು ನರಕದಲ್ಲಿ ಹೋಗುವನೋ ಅಥವಾ ಇಲ್ಲ?

ಉತ್ತರ :- ಲಬ್ಧಿ ಅಪರ್ಯಾಪ್ತಕ ಜೀವನು ಅವನು ಬೇಕಾದರೆ ತಿರ್ಯಂಚವಿರಲಿ ಅಥವಾ ಮನುಷ್ಯನಿರಲಿ, ತಿರ್ಯಂಚದಲ್ಲಿಯೂ ಕೂಡ ಏಕೇಂದ್ರಿಯದಿಂದ ಹಿಡಿದು ಸಂಜ್ಞೀ ಪಂಚೇಂದ್ರಿಯದವರೆಗಿನ ಲಬ್ಧಿ ಅಪರ್ಯಾಪ್ತ ಜೀವವು ನರಕಗತಿಯ ಬಂಧವನ್ನೂ ಮಾಡಿಕೊಳ್ಳುವ ಸಾಧ್ಯತೆಯಿಲ್ಲ ಮತ್ತು ದೇವಗತಿಯ ಬಂಧವನ್ನೂ ಮಾಡಿಕೊಳ್ಳುವ ಸಾಧ್ಯತೆಯಿಲ್ಲ; ಆದುದರಿಂದ ಅವು ಅಲ್ಲಿ ಹೋಗುವ ಸಾಧ್ಯತೆಯಿಲ್ಲ. ಅವು ತಿರ್ಯಂಚ ಗತಿ ಅಥವಾ ಮನುಷ್ಯಗತಿಯಲ್ಲಿ ಹೋಗುತ್ತವೆ. ಸಮ್ಮೂರ್ಚ್ಛನ ಪಂಚೇಂದ್ರಿಯ ಪರ್ಯಾಪ್ತ ಜೀವಗಳು ಸತ್ತು ನರಕದಲ್ಲಿ ಹೋಗಬಹುದಾಗಿದೆ.

ಮೂರನೆಯ ನರಕದವರೆಗೆ ಪಕ್ಷಿ ಮೊದಲಾದವು, ನಾಲ್ಕನೆಯ ನರಕದವರೆಗೆ ಸರ್ಪ ಮೊದಲಾದವು, ಐದನೆಯ ನರಕದವರೆಗೆ ಸಿಂಹ ಮೊದಲಾದವು, ಆರನೆಯ ನರಕದವರೆಗೆ ಸ್ತ್ರೀ ಮತ್ತು ಏಳನೆಯ ನರಕದವರೆಗೆ ಮನುಷ್ಯರು ಮತ್ತು ಮತ್ಸ್ಯಗಳು ಹೋಗುವ ಸಾಧ್ಯತೆಯಿದೆ. ಯಾವ ಜೀವಗಳಿಗೆ ವಜ್ರವೃಷಭನಾರಾಚ ಸಂಹನನ ವಿರುತ್ತದೆ ಅಂಥ ಮನುಷ್ಯ ಮತ್ತು ಮತ್ಸ್ಯಗಳೇ ಏಳನೆಯ ನರಕದೊಳಗೆ ಹೋಗುವ ಸಾಧ್ಯತೆಯಿದೆ. ಯಾವ ಪ್ರಕಾರ ಮೋಕ್ಷದೊಳಗೆ ಹೋಗುವ ಸಲುವಾಗಿ ವಜ್ರವೃಷಭನಾರಾಚ ಸಂಹನನದ ನಿಯಮವಿದೆ, ಅದೇ ಪ್ರಕಾರ ಏಳನೆಯ ನರಕದೊಳಗೆ ಹೋಗುವ ಸಲುವಾಗಿಯೂ ಕೂಡ ಈ ನಿಯಮವಿದೆ.

ಪ್ರಶ್ನೆ :- ತಂದುಲ ಮತ್ಸ್ಯವು ಏಳನೆಯ ನರಕದಲ್ಲಿ ಹೋಗುವ ಮಾತನ್ನು ನಾವು ಆಲಿಸಿದ್ದೇವೆ, ಅದಂತೂ ಎಷ್ಟೊಂದು ಚಿಕ್ಕದು (ಅಕ್ಕಿ ಕಾಳಿನಷ್ಟು) ಇರುತ್ತದೆ ಅದಕ್ಕೆ ವಜ್ರವೃಷಭನಾರಾಚ ಸಂಹನನವು ಹೇಗಿರುತ್ತದೆ. ?

ಉತ್ತರ :- ಚಿಕ್ಕದು ಅಥವಾ ದೊಡ್ಡ ಆಕಾರದ ಕಾರಣ ಸಂಹನನವಿರುವುದಿಲ್ಲ. ವಜ್ರವೃಷಭ ನಾರಾಚ ಸಂಹನನವು ತಿರ್ಯಂಚಗಳಲ್ಲಿ ಕೇವಲ ಮತ್ಸ್ಯಕ್ಕೇನೇ ಇರುವ ಸಾಧ್ಯತೆಯಿದೆ, ಸಿಂಹ-ವ್ಯಾಘ್ರ ಮೊದಲಾದವುಗಳಿಗೆ ಇರುವುದಿಲ್ಲ; ಅವಂತೂ ಸತ್ತು ಕೇವಲ ಐದನೆಯ ನರಕದವರೆಗೇ ಹೋಗುವ ಸಾಧ್ಯತೆಯಿದೆ. ಏಳನೆಯ ನರಕದ ನಾರಕಿಯು ಸತ್ತು ನಿಯಮದಿಂದ ಸಿಂಹ ಮೊದಲಾದ ಹಿಂಸ್ರ ಪಶುವೇ ಆಗುತ್ತಾನೆ ಆ ಜೀವನಿಗೆ ಏಳನೆಯ ನರಕದಲ್ಲಿ ಜನ್ಮ ಪಡೆಯುವುದಿದ್ದರೆ ಮಧ್ಯದೊಳಗೆ ಮತ್ಸ್ಯವಾಗಿ ಅಲ್ಲಿ ಹೋಗಬಹುದಾಗಿದೆ. ಏಳನೆಯ

ನರಕದಿಂದ ಸತ್ತು ಯಾರೂ ಮತ್ಸ್ಯವಾಗುವ ಸಾಧ್ಯತೆಯಿಲ್ಲ ಏಕೆಂದರೆ ಮತ್ಸ್ಯವು ಸಮ್ಮೂರ್ಚ್ಛನ ಜೀವವಿದೆ ಮತ್ತು ಎಲ್ಲ ನಾರಕಿಗಳು ಸತ್ತು ಸಂಜ್ಞೀ ಪಂಚೇಂದ್ರಿಯ ಗರ್ಭಜ ತಿರ್ಯಂಚ ಅಥವಾ ಮನುಷ್ಯರಾಗುತ್ತಾರೆ, ಸಮ್ಮೂರ್ಚ್ಛನದಲ್ಲಿ ಜನ್ಮ ಪಡೆಯುವುದಿಲ್ಲ.

ಯಾವ ಚಕ್ರವರ್ತಿಯು ಚಕ್ರವರ್ತಿ ಪದದಲ್ಲಿ ಭೋಗ ಭೋಗಿಸುತ್ತ-ರಾಜ್ಯಭಾರ ನಡೆಸುತ್ತ ಮಿಥ್ಯಾತ್ವದಲ್ಲಿ ಮರಣ ಹೊಂದುತ್ತಾನೆ ಅವನು ನಿಯಮದಿಂದ ಏಳನೆಯ ನರಕದಲ್ಲಿ ಜನ್ಮಧಾರಣ ಮಾಡುತ್ತಾನೆ. ಸಮ್ಯಗ್ದೃಷ್ಟಿ ಚಕ್ರವರ್ತಿಗಳಂತೂ ಮುನಿದೀಕ್ಷೆಯ ಅಂಗೀಕಾರ ಮಾಡುತ್ತಾರೆ. ಅವರಲ್ಲಿ ಕೆಲವರು ಸ್ವರ್ಗಕ್ಕೆ ಹೋದರೆ ಕೆಲವರು ಅದೇ ಭವದಿಂದ ಮೋಕ್ಷ ಪ್ರಾಪ್ತ ಮಾಡಿಕೊಳ್ಳುತ್ತಾರೆ.

ನಾವು ತಂದುಲ ಮತ್ಸ್ಯದ ವಿಷಯದಲ್ಲಿ ಚರ್ಚಿಸುತ್ತಿದ್ದೆವು. ದೊಡ್ಡದಾದ ರಾಘವಮತ್ಸ್ಯ (ಮಹಾಮತ್ಸ್ಯ) ದ ಶರೀರದ ಆಧಾರದಿಂದ ತಂದುಲ ಮತ್ಸ್ಯವಿರುತ್ತದೆ. ಅದು ಮಹಾಮತ್ಸ್ಯವು ಬಾಯ್ತೆರದು ಕೊಂಡು ಮಲಗಿರುವುದನ್ನು ಮತ್ತು ಅದರ ಬಾಯೊಳಗೆ ನೂರಾರು ಮೀನುಗಳು ಹೋಗಿ ಪುನಃ ಹೊರಗೆ ಬರುತ್ತಿರುವುದನ್ನು ನೋಡುತ್ತದೆ ಜತೆಯಲ್ಲಿ ವಿಚಾರ ಮಾಡುತ್ತದೆ, ''ಅರೆರೆ... ಇದೇನಿದು ? ನಾನು ಇದರ ಸ್ಥಾನದಲ್ಲಿರುತ್ತಿದ್ದರೆ ಬಾಯೊಳಗೆ ಬಂದಿರುವ ಒಂದೂ ಮೀನವನ್ನು ಹೊರಗೆ ಬಿಡದೇ ಎಲ್ಲವನ್ನೂ ನುಂಗಿ ಬಿಡುತ್ತಿದ್ದೆನು.' ಅದು ಮೀನುಗಳನ್ನು ನುಂಗಲಿಲ್ಲ, ಒಂದೂ ಮೀನನ್ನು ತಿನ್ನದಿದ್ದರೂ ಏಳನೆಯ ನರಕಕ್ಕೆ ಹೋಯಿತು. ಅದರ ಮಾತನ್ನು ಬಿಟ್ಟು ಬಿಡಿ, ನಾವಾದರೂ ಏನು ತಾನೆ ಮಾಡುತ್ತಿದ್ದೇವೆ ? ಇತರರ ಧನ-ಸಂಪತ್ತು, ವೈಭವ-ಬಂಗಲೆಗಳನ್ನು ಕಂಡು ಯೋಚಿಸುತ್ತಿರುವುದೇನು ? ದೂರದರ್ಶನ (ಟಿ.ವ್ಹಿ.) ನೋಡುತ್ತಿರುವಾಗ ಕುಳಿತಲ್ಲಿಯೇ ಆ ಧಾರಾವಾಹಿಗಳ ಪಾತ್ರಗಳಿಗೆ ಏನೇನು ಬುದ್ಧಿವಾದ ಹೇಳುತ್ತೇವೆ, ಅನುಮೋದನೆ ನೀಡುತ್ತೇವೆ ! ಅವೆಲ್ಲ ಭಾವಗಳಿಂದ ಯಾವ ಕರ್ಮದ ಬಂಧವಾಗುತ್ತದೆ, ಅದರ ಫಲ ಭೋಗಿಸುವ ಸಲುವಾಗಿ ಈ ನರಕಾದಿ ಸ್ಥಾನಗಳಲ್ಲಿ ಜೀವನಿಗೆ ನಿಶ್ಚಿತವಾಗಿಯೇ ಹೋಗಬೇಕಾಗುತ್ತದೆ.

ಏಳನೆಯ ನರಕದ ನಾರಕಿಯು ಅಲ್ಲಿ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳುವ ಸಾಧ್ಯತೆಯಿದೆ. ಯಾವನೋ ಜೀವನು ಆ ಏಳನೆಯ ನರಕದಲ್ಲಿ ಹೋಗಿ ಹುಟ್ಟುತ್ತಲೆ ಅಂತರ್ಮುಹೂರ್ತದ ನಂತರ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಂಡು ಮೂವತ್ಮೂರು ಸಾಗರದವರೆಗೆ ಸಮ್ಯಗ್ದೃಷ್ಟಿಯಾಗಿ ಉಳಿಯುತ್ತಾನೆ. ಆದಾಗ್ಯೂ ಮರಣದ ಮೊದಲು ಅವನು ನಿಯಮದಿಂದ ಮಿಥ್ಯಾತ್ವದಲ್ಲಿ ಬಂದು ತಿರ್ಯಂಚ ಆಯುವಿನ ಬಂಧ ಮಾಡಿಕೊಳ್ಳುತ್ತಾನೆ ಮತ್ತು ಮಿಥ್ಯಾತ್ವದಲ್ಲಿಯೇ ಮರಣ ಹೊಂದುತ್ತಾನೆ, ಸಾಸಾದನದಲ್ಲಿಯೂ ಬರುವುದಿಲ್ಲ. ಅಷ್ಟೇ ಅಲ್ಲ, ಅವನು ಯಾವ ಹಿಂಸ್ರ ಪಶುವಿನ ಪರ್ಯಾಯದಲ್ಲಿ ಜನ್ಮ ಪಡೆಯುತ್ತಾನೆ ಆ ಭವದಲ್ಲಿ ಅವನಿಗೆ ಸಮ್ಯಕ್ತ್ವವಾಗುವುದಿಲ್ಲ.

ಪ್ರಶ್ನೆ :- ಹಾಗಾದರೆ ಮಹಾವೀರ ಜೀವನಿಗೆ ಸಿಂಹ ಪರ್ಯಾಯದಲ್ಲಿ ಹೇಗೆ ಸಮ್ಯಕ್ತ್ವವಾಯಿತು ?

ಉತ್ತರ :- ಸಿಂಹಕ್ಕೆ ಸಮ್ಯಗ್ದರ್ಶನವಾಗುವುದಿಲ್ಲವೆಂಬ ಮಾತನ್ನು ಹೇಳಲಿಲ್ಲ; ಆದರೆ ಏಳನೆಯ ನರಕದಿಂದ ಸತ್ತು ಯಾವುದು ಸಿಂಹ ಮೊದಲಾದವುಗಳಲ್ಲಿ ಹುಟ್ಟುತ್ತದೆ, ಆ ವಿವಕ್ಷಿತ ಭವದ ಮಾತು ಇದೆ.

ಯಾವ ನರಕದಿಂದ ಹೊರಗೆ ಬಂದ ಜೀವವು ಎಡಬಿಡದೇ ಎಷ್ಟು ಬಾರಿ ಅಲ್ಲಿ ಹೋಗುವ ಸಾಧ್ಯತೆಯಿದೆ, ಎಂಬಿತ್ಯಾದಿಗಳದ್ದೂ ನಿಯಮವಿದೆ. ಅವುಗಳ ಚರ್ಚೆಯನ್ನು ಮುಂದಿನ ಪಾಠದಲ್ಲಿ ಮಾಡಲಾಗುವುದು. ಅಲ್ಲದೇ ಮತ್ತೆ ಉದ್ಭವವಾಗುವಂಥ ಪ್ರಶ್ನೆಗಳ ವಿಷಯವಾಗಿಯೂ ಚರ್ಚೆ ಮಾಡಬಹುದಾಗಿದೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಮೂರನೆಯ ತೀರ್ಥಂಕರ
ಭಗವಂತರಾದ ಬಾಹುಸ್ವಾಮಿಗೆ ಜಯವಾಗಲಿ.

೪. ನಾರಕಿಗಳಲ್ಲಿ ಗತಿ-ಆಗತಿ

ಮೂರು ಲೋಕದ ರಚನೆಯನ್ನು ತ್ರಿಲೋಕಸಾರದ ಆಧಾರದಿಂದ ಅರ್ಥಾತ್ ಸರ್ವಜ್ಞ ಭಗವಂತರ ವಚನಗಳ ಆಧಾರದಿಂದ ಇಲ್ಲಿ ನಾವು ನೋಡುವ ಪ್ರಯತ್ನ ಮಾಡುತ್ತಿದ್ದೇವೆ. ಇವು ಯಾರ ಮತಿಕಲ್ಪನೆಯ ಮಾತುಗಳಲ್ಲ. ಆದರೆ ಸರ್ವ ಸತ್ಯ ಮಾತುಗಳಿವೆ. ನಾಲ್ಕು ಗತಿಗಳಲ್ಲಿರುವ ಜೀವಗಳ ಚರ್ಚೆ ಮಾಡುತ್ತ ಈ ಮನುಷ್ಯ ಭವವು ದ್ರವ್ಯ , ಕ್ಷೇತ್ರ , ಕಾಲ, ಭಾವಗಳಿಂದ ಎಷ್ಟು ದುರ್ಲಭವಿದೆ ಎಂಬುದರ ಚರ್ಚೆ ಮಾಡಲಾಗಿತ್ತು .

ಪ್ರಶ್ನೆ :- ಮನುಷ್ಯ ಭವವು ಅತ್ಯಂತ ದುರ್ಲಭವಿದೆ ಮತ್ತು ಮನುಷ್ಯನೇ ಮೋಕ್ಷದ ಪುರುಷಾರ್ಥ ಮಾಡುತ್ತಾನೆ ಆದರೆ ಮೋಕ್ಷವಂತೂ ಮುಂದಿನ ಮಾತು ಇದೆ. ಆದುದರಿಂದ ಈಗ ನಾವು ಮನುಷ್ಯ ಭವದ ಸಲುವಾಗಿ ಪುರುಷಾರ್ಥ ಮಾಡಬೇಕು ಮತ್ತು ನಂತರ ಮೋಕ್ಷದ ಪುರುಷಾರ್ಥ ಮಾಡುವುದಿದೆ ಅಲ್ಲವೇನು?

ಉತ್ತರ :- ಪುರುಷಾರ್ಥವನ್ನಂತೂ ಭವದ ಅಭಾವದ ಸಲುವಾಗಿ ಮಾಡುವುದಿರುತ್ತದೆ. ಭವದ ಸಲುವಾಗಿ ಪುರುಷಾರ್ಥ ಮಾಡಬಯಸುವುದು ಅದಂತೂ ಮಿಥ್ಯಾ ಮನ್ನಣೆಯಿದೆ, ಕುಪುರುಷಾರ್ಥವಿದೆ. ಯಾರ ಮನ್ನಣೆಯೊಳಗೆ ಒಂದು ಭವದ್ದು ಕೂಡ ಬಯಕೆಯು ಶೇಷವಿದೆ, ಆ ಜೀವನು ಬೇಕಾದರೆ ಮಹಾವಿದೇಹ ಕ್ಷೇತ್ರದ ಮನುಷ್ಯನಾಗಬಯಸುತ್ತಿದ್ದರೂ ಅವನ ಆ ಒಂದು ಭವದ ಅಭಿಲಾಷೆಯಲ್ಲಿ ಅನಂತ ಭವಗಳ ಅಭಿಲಾಷೆಯು ಬಿದ್ದುಕೊಂಡಿದೆ. ನಮಗಂತೂ ಭವದ ಅಭಾವ ಮಾಡುವ ಪುರುಷಾರ್ಥ ಮಾಡುವುದಿದೆ. ಪುರುಷಾರ್ಥ ಮಾಡುವುದೆಂದರೆ ತಮ್ಮ ಸ್ವಭಾವದ ಪರಿಚಯ ಮಾಡಿಕೊಳ್ಳುವುದಿದೆ ಮತ್ತು ಅದು ಅತ್ಯಂತ ಸುಲಭವಾದ ಮಾತು ಇದೆ. ಅಯ್ಯಾ ! ಇಲ್ಲಿಯಂತೂ ನಮಗೆ ಯಾವುದು ಅತ್ಯಂತ ದುರ್ಲಭವಿದೆ ಅಂಥ ಮನುಷ್ಯಭವವು ಪ್ರಾಪ್ತವಾಗಿದೆ ಅದನ್ನು ನಾವು ಕಳೆದುಕೊಳ್ಳಲಿಚ್ಛಿಸುತ್ತಿದ್ದೇವೆ ಮತ್ತು ಯಾವುದು ಇಲ್ಲ ಅದರ ಹಿಂದೆ ಧಾವಿಸಬಯಸುತ್ತಿದ್ದೇವೆ. ಯಾವುದರಲ್ಲಿ ತನ್ನ ಇಚ್ಛೆಯ ಅನುಸಾರ ಯಾವ ಕಾರ್ಯವೂ ಸಂಭವವಿಲ್ಲ ಅದರ ಪ್ರಯತ್ನ ಮಾಡುತ್ತ ಇರುವುದಕ್ಕೆ ನಾವು ಪುರುಷಾರ್ಥವೆಂದು ಮನ್ನಿಸಿದ್ದೇವೆ. ಏಕೆಂದರೆ ನಾವು ಪುರುಷಾರ್ಥವನ್ನೇ ಸರಿಯಾಗಿ ತಿಳಿದುಕೊಂಡಿಲ್ಲ.

ಮನುಷ್ಯ ಭವದ ಪ್ರಾಪ್ತಿಯ ಸಲುವಾಗಿ ಪ್ರಯತ್ನ ಮಾಡುವಿರಾದರೆ ಈ ಮನುಷ್ಯ ಭವದ್ದೇನಾಗುವುದು? ಮನುಷ್ಯರಂತೂ ನಾವು ಇದ್ದೇ ಇದ್ದೇವೆ, ಈಗ ಈ ಮನುಷ್ಯ ಭವವನ್ನು ಸಾರ್ಥಕ ಮಾಡುವುದಿದೆ. ಅನೇಕ ಜನರು ಪುರುಷಾರ್ಥದ ನಿಜವಾದ ಅರ್ಥವನ್ನು ತಿಳಿಯದೇ ತಮ್ಮ-ತಮ್ಮ ಮತಿಕಲ್ಪನೆಯ ಅನುಸಾರ ಬೇರೆ-ಬೇರೆಯಾಗಿ ವಿಪರೀತರೂಪದಿಂದ ಬೇಕಾದ ಹಾಗೆ ಮನ್ನಿಸುತ್ತಾರೆ, ಧರ್ಮದ ಸ್ವರೂಪವನ್ನು ವಿಪರೀತ ರೂಪವಾಗಿ ವಿಚಾರ ಮಾಡುತ್ತಾರೆ. ದೇಶ-ವಿದೇಶಗಳಲ್ಲಿ ಎಷ್ಟೋ ಕಡೆಗೆ ಜನರು ಸ್ವಾಧ್ಯಾಯದ ಸಲುವಾಗಿ ಏಕತ್ರಿತವಾಗುತ್ತಾರೆ. ಅದರಲ್ಲಿ ಶಾಸ್ತ್ರದ ಕೆಲ ಅಂಶವನ್ನು ಓದಿ ಪುನಃ ಚರ್ಚೆ ಮಾಡುತ್ತಾರೆ. ಪ್ರತಿಯೊಬ್ಬರು ತಮ್ಮ-ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ 'ನನ್ನ ವಿಚಾರವು ಹೀಗಿದೆ, ನನ್ನ ಮನ್ನಣೆಯು ಈ ಪ್ರಕಾರವಿದೆ'-ಎಂಬಿತ್ಯಾದಿ ಮಾತುಗಳು ನಡೆಯುತ್ತವೆ. ಎಲ್ಲಿ ಇಬ್ಬರು, ಮೂವರು, ನಾಲ್ವರು, ಅನೇಕ ಜನರು ಸೇರುತ್ತಾರೆ ಅಲ್ಲಿ ಮತಿಭಿನ್ನತೆಯಂತೂ ಇದ್ದೇ ಇರುತ್ತದೆ. ಆದರೆ ಎಲ್ಲ ಜ್ಞಾನಿಗಳ ಮತವು ಒಂದೇ ಇರುತ್ತದೆ. ನಮಗಂತೂ ಸ್ವಾಧ್ಯಾಯ ಮಾಡುವ ಸಮಯದಲ್ಲಿ ಯಾವುದನ್ನು ಪರಮಾಗಮದಲ್ಲಿ ಬರೆಯಲಾಗಿದೆ, ಆಚಾರ್ಯ

ಭಗವಂತರು-ಜ್ಞಾನಿ ಮಹಾತ್ಮರುಗಳು ತಿಳಿಸಿಕೊಟ್ಟಿದ್ದಾರೆ ಅದನ್ನು ಎಂದರೆ ಅವರ ಆ ಅಪೇಕ್ಷೆಗಳನ್ನು ತಿಳಿದುಕೊಂಡು ಯಥಾರ್ಥ ತತ್ತ್ವನಿರ್ಣಯ ಮಾಡಿ ಸ್ವಯಂ ನಮ್ಮ ಅಸ್ತಿತ್ವ, ಸ್ವಭಾವ ಮತ್ತು ಮಾಡಬೇಕಾದ ಕರ್ತವ್ಯಗಳ ನಿರ್ಣಯ ಮಾಡುವುದಿದೆ. ದ್ರವ್ಯಾನುಯೋಗದ ಜತೆ ಜತೆಯಲ್ಲಿ ಕರಣಾನುಯೋಗ ಮೊದಲಾದ ಬೇರೆ ಅನುಯೋಗಗಳ ಅಭ್ಯಾಸವನ್ನು ಕೂಡ ಮಾಡುವುದಿದೆ - ಮಾಡಬೇಕಾಗುವುದು. ದ್ರವ್ಯಾನುಯೋಗಕ್ಕೆ ಬದಲಾಗಿ ಇದರ ಅಭ್ಯಾಸ ಮಾಡಬೇಕು ಎಂಬುದಾಗಿಲ್ಲ ಅಲ್ಲದೆ ಯಾವುದೇ ಅನುಯೋಗವು ನಿರರ್ಥಕವಿದೆ ಎಂಬುದಾಗಿಯೂ ಇಲ್ಲ. ಸರ್ವಜ್ಞ ಪ್ರಭುಗಳ ದಿವ್ಯಧ್ವನಿಯ ಅನುಸಾರ ಗಣಧರ ಭಗವಂತರಿಂದ ರಚನೆಗೊಂಡಿರುವ ಮತ್ತು ಆತ್ಮಸಾಧಕ ಸಂತ ಆಚಾರ್ಯರುಗಳಿಂದ ಪ್ರತಿಪಾದಿತ - ಬರೆಯಲ್ಪಟ್ಟ ನಾಲ್ಕೂ ಅನುಯೋಗಗಳ ಸಾರವು ಒಂದು ವೀತರಾಗತೆಯಿದೆ. ಆ ವೀತರಾಗತೆಯನ್ನು ಹೇಗೆ ಹೊರ ತಗೆಯುವುದು ಯಾವ ರೀತಿಯಿಂದ ಪ್ರಕಟಪಡಿಸಿಕೊಳ್ಳಬೇಕೆಂಬುದನ್ನು ತಿಳಿಯುವುದು ಅದು ನಮ್ಮ ಹೊಣೆಗಾರಿಕೆಯಿದೆ.

ಎಲ್ಲ ಜೀವಗಳ ಸಂಖ್ಯೆಯು ಎಷ್ಟಿದೆ ? ಅವು ಎಲ್ಲೆಲ್ಲಿ ಕಂಡು ಬರುತ್ತವೆ - ಎಂಬುದನ್ನು ನೋಡಿದರೆ ತಿಳಿದುಕೊಂಡರೆ ನಮಗೆ ಸಂಸಾರದ ಭಯವೆನಿಸುತ್ತದೆ. ಸಂಸಾರದ ಭಯವೆನಿಸುವುದಂತೂ ಒಳ್ಳೆಯ ಮಾತೇ ಇದೆ. ಪಂಚ ಪರಾವರ್ತನರೂಪ ಸಂಸಾರದ ಸ್ವರೂಪವು ವಾಸ್ತವದಲ್ಲಿ ತಿಳಿಯಬೇಕಾಗಿರುವಂಥದ್ದಿದೆ - ನಾವು ಅನಾದಿಯಿಂದ ಇದ್ದೇವೆಯೆಂದ ಮೇಲೆ ಯಾವ ಪ್ರಕಾರ ಆ ಅನಂತ ಕಾಲವನ್ನು ಕಳೆದಿದ್ದೇವೆ ಎಂಬುದರ ಪರಿಚಯವಾದರೂ ಆಗಬಹುದಾಗಿದೆ. ನಾವಂತೂ ಧನ ಸಂಪಾದನೆ ಮಾಡುತ್ತೇವೆ ಮತ್ತು ಖರ್ಚು ಮಾಡುತ್ತೇವೆ, ಹೀಗೆ ಮಾಡುತ್ತ - ಮಾಡುತ್ತ ಅನೇಕ ವರ್ಷಗಳು ಕಳೆದು ಹೋಗುತ್ತವೆ ಮತ್ತು ಭವದ ಕೊನೆಯು ಸಮೀಪಿಸುತ್ತದೆ ಆಗ ನಾವು ಏನು ಮಾಡಿದೆವು - ಯಾವುದನ್ನು ಪ್ರಾಪ್ತ ಮಾಡಿಕೊಂಡೆವು ? ಯಾವುದನ್ನು ಕಳೆದು ಕೊಂಡೆವು ? ಎಂಬ ವಿಚಾರಗಳು ಬರಲಾರಂಭಿಸುತ್ತವೆ. ಈ ಮನುಷ್ಯಭವದ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳದಿದ್ದರೆ -ನಮ್ಮ ಸ್ವರೂಪವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡದಿದ್ದರೆ ಈ ಭವದ ಪ್ರಾಪ್ತಿಯಾದರೂ ಕೂಡ ಆಗದ ಹಾಗೆಯೇ ಇದೆ.

ಪುರುಷಾರ್ಥವಂತೂ ಮೋಕ್ಷದ್ದಾಗುತ್ತದೆ, ರಾಗ-ದ್ವೇಷಗಳದ್ದಲ್ಲ. ನಾವು ವಿಚಾರ ಮಾಡಿ ರಾಗ-ದ್ವೇಷಗಳನ್ನು ಅಥವಾ ಶುಭಾಶುಭ ಪರಿಣಾಮಗಳನ್ನು ಮಾಡುವ ಸಾಧ್ಯತೆಯಿಲ್ಲ, ನಾವು ಆ ಪರಿಣಾಮಗಳ ಸ್ವಾಮಿ-ಅಧಿಪತಿಗಳಲ್ಲ. ರಾಗ-ದ್ವೇಷಗಳಲ್ಲಿ ನಾನು ಬೇಕಾದ ಹಾಗೆ ಪರಿವರ್ತನೆ ಮಾಡಬಹುದಾಗಿದೆ, ಎಂಬ ಮನ್ನಣೆಯೇ ಮಿಥ್ಯೆಯಿದೆ. ಒಂದು ವೇಳೆ ನಾವು ರಾಗ-ದ್ವೇಷಗಳನ್ನು ಕಡಿಮೆ ಮಾಡುವ ಸಾಧ್ಯತೆಯಿದ್ದರೆ ರಾಗ-ದ್ವೇಷಗಳನ್ನು ಮಾಡದಿರುವುದೇ ಒಳ್ಳೆಯದಿದೆಯಲ್ಲವೇನು, ಪೂರ್ಣ ವೀತರಾಗಿಗಳಾಗಿ ಬಿಡೋಣ. ಆದರೆ ಅದಾವುದನ್ನೂ ಮಾಡಲಾಗುವುದಿಲ್ಲ. ಇಲ್ಲಿಯಂತೂ ಜೀವನು ಭೇದವಿಜ್ಞಾನ ಮಾಡುವ ಪುರುಷಾರ್ಥವನ್ನು ಮಾಡುತ್ತಾನೆ ಅದರಿಂದಲೇ ಸಮ್ಯಗ್ದರ್ಶನವಾಗುತ್ತದೆ ಮತ್ತು ಅದರಿಂದಲೇ ಮೋಕ್ಷ ಮಾರ್ಗದ ಮೇಲೆ ಮುನ್ನಡೆಯುತ್ತ ಕೇವಲಜ್ಞಾನದ ಪ್ರಾಪ್ತಿಯಾಗುತ್ತದೆ. ನಾನಂತೂ ಜ್ಞಾನ ಮಾತ್ರನಿದ್ದೇನೆ. ಶರೀರದಿಂದ ಹಾಗೂ ನನ್ನಲ್ಲಿ ಉತ್ಪನ್ನವಾಗುವಂಥ ರಾಗ-ದ್ವೇಷಗಳಿಂದ ಭಿನ್ನನಿದ್ದೇನೆಂದು ತಿಳಿದುಕೊಂಡು ತನ್ನನ್ನೇ ತಿಳಿಯುತ್ತ ಉಳಿಯುವುದು ಅದೊಂದೇ ಮಾಡಲು ಯೋಗ್ಯವಾದ ಕಾರ್ಯವಿದೆ ಮತ್ತು ಇದುವೇ ಸರಳವಾದ ಕಾರ್ಯವಿದ್ದು ಸಹಜವಾಗಿಯೇ ಆಗುವಂಥದ್ದಿದೆ; ಆದರೆ ವಿಪರೀತ ಮನ್ನಣೆಯ ಕಾರಣ ನಮಗೆ ಅದರ ಮರ್ಮವೇ ಲಕ್ಷ್ಯದೊಳಗೆ ಬರುವುದಿಲ್ಲ-ಬರುತ್ತಿಲ್ಲ.

ಈಗ ನಾವು ತಿಳಿದುಕೊಂಡಿರುವಂತೆ ೪೫ ಲಕ್ಷ ಯೋಜನ ವ್ಯಾಸವುಳ್ಳ ಕ್ಷೇತ್ರದಲ್ಲಿ ಅನಂತ ಸಿದ್ಧ ಭಗವಂತರು ವಿರಾಜಮಾನರಿದ್ದಾರೆ; ಏಕೆಂದರೆ ಪ್ರತಿ ಆರು ತಿಂಗಳು ಮತ್ತು ಎಂಟು ಸಮಯದ ಅವಧಿಯಲ್ಲಿ ಆರು ನೂರಾ ಎಂಟು ಜೀವರುಗಳು ನಿಯಮದಿಂದ ಮೋಕ್ಷ ಪ್ರಾಪ್ತ ಮಾಡಿಕೊಳ್ಳುತ್ತಾರೆ, ಹೀಗೆ ಅನಾದಿಯಿಂದ ನಡೆಯುತ್ತ ಬರುತ್ತಿದೆ. ಅನಾದಿಯಿಂದ ಇಂಥ ಆರು ತಿಂಗಳು ಮತ್ತು ಎಂಟು ಸಮಯಗಳು ಅನಂತಾನಂತ ಕಳೆದು ಹೋಗಿವೆ. ಎಂದರೆ ಇಲ್ಲಿಯವರೆಗೆ ಅನಂತಾನಂತ ಜೀವರುಗಳು ಸಿದ್ಧ ಅವಸ್ಥೆಯನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ. ಯಾವುದನ್ನು ಅನಂತಾನಂತ ಜೀವರುಗಳು ಪ್ರಾಪ್ತ ಮಾಡಿಕೊಂಡಿದ್ದಾರೆ ಅದು (ಆ ಮಾತು ಅಥವಾ ಆ ಕಾರ್ಯವು) ನಿಶ್ಚಿತವಾಗಿಯೇ ಅತ್ಯಂತ ಸುಗಮ ಮತ್ತು ಸುಲಭವಾಗಿರಬೇಕು ಅಲ್ಲವೇನು ?

ವರ್ತಮಾನದಲ್ಲಿ ಅಸಂಖ್ಯಾತ ಜೀವರುಗಳು ಸಮ್ಯಗ್ದೃಷ್ಟಿಯಿದ್ದಾರೆ. ಅವರಲ್ಲಿ ದೇವಗಳು ಅಸಂಖ್ಯಾತ, ನಾರಕಿಗಳು ಅಸಂಖ್ಯಾತ ಮತ್ತು ತಿರ್ಯಂಚಗಳು ಅಸಂಖ್ಯಾತವಿವೆ ಹಾಗೂ ಮನುಷ್ಯರು ಕೋಟ್ಯಂತರರಿದ್ದಾರೆ. ಈ ಮಾತು ಒಂದು ವೇಳೆ ಅಸಂಭವವಿರುತ್ತಿದ್ದರೆ ಅವರೆಲ್ಲರೂ ಸಮ್ಯಕ್ತ್ವವನ್ನು ಹೇಗೆ ಪ್ರಾಪ್ತ ಮಾಡಿಕೊಂಡರು ? ಆದುದರಿಂದ ಈ ಪುರುಷಾರ್ಥ ಹಾಗೂ ಅದರ ಫಲಸ್ವರೂಪವಿರುವಂಥ ಸಮ್ಯಕ್ತ್ವದ ಪ್ರಾಪ್ತಿಯು ದುರ್ಲಭವಾಗಿಲ್ಲ, ಕೇವಲ ಅದರಲ್ಲಿ ರುಚಿಯಾಗುವುದು ದುರ್ಲಭವಿದೆ. ಈ ಮನುಷ್ಯ ಭವದ ದುರ್ಲಭತೆಯು ಲಕ್ಷ್ಯದೊಳಗೆ ಬಂದು ಬಿಟ್ಟರೆ ಜೀವನು ನಿಶ್ಚಿತವಾಗಿಯೇ ಪುರುಷಾರ್ಥದ ಕುರಿತಾಗಿ ಯೋಚಿಸಬಹುದಾಗಿದೆ.

ಇಲ್ಲಿ ನರಕದ ಮಾತು ನಡೆಯುತ್ತಿತ್ತು. ನರಕದಲ್ಲಿ ಯಾರು ಹೋಗುತ್ತಾರೆ ? ಅಲ್ಲಿಂದ ಹೊರ ಬಂದು ಯಾರು ಎಲ್ಲಿ ಜನ್ಮ ಪಡೆಯುತ್ತಾರೆ, ಎಲ್ಲಿ ಎಷ್ಟು ಬಾರಿ ಜನ್ಮ ಪಡೆಯುತ್ತಾರೆ - ಇವುಗಳ ಕುರಿತಾಗಿ ಕರಣಾನುಯೋಗದ ಕೆಲವು ನಿಯಮಗಳಿರುತ್ತವೆ. ಆ ನಿಯಮಗಳನ್ನು ಯಾರೂ ಮಾಡಿರುವುದಿಲ್ಲ. ಇದೆಲ್ಲವೂ ಸಹಜವಾದ ವ್ಯವಸ್ಥೆಯಿದೆ, ಅರಹಂತ ಭಗವಂತರು ಇದನ್ನು ಕೇವಲ ಹೇಳಿದ್ದಾರೆ. ಹೀಗೇಕೆ ? ಎಂಬ ಪ್ರಶ್ನೆಗೆ ಇಲ್ಲಿ ಯಾವ ಆಸ್ಪದವೇ ಇರುವುದಿಲ್ಲ. ಅಂಥ ಪ್ರಶ್ನೆಗಳು ವ್ಯರ್ಥವಿವೆ. 'ಧವಲಾ' ಎಂಬ ಹೆಸರಿನ ಗ್ರಂಥದಲ್ಲಿ ಶ್ರೀ ವೀರಸೇನ ಆಚಾರ್ಯರು ಶಿಷ್ಯನ ಸಂದೇಹದ ರೂಪದಲ್ಲಿ ಸ್ವಯಂ ಪ್ರಶ್ನೆಯನ್ನು ಉತ್ಪನ್ನ ಮಾಡುತ್ತಾರೆ ಮತ್ತು ಉತ್ತರ ಸ್ವರೂಪವಾಗಿ 'ಹೀಗೆಯೇ ಸ್ವಭಾವವಿದೆ, ತಮ್ಮ ಪ್ರಶ್ನೆಯ ಉತ್ತರ ನೀಡುವ ಸಲುವಾಗಿ ವಸ್ತುವಿನ ಸ್ವಭಾವವು ಅರ್ಥಾತ್ ವಸ್ತುವ್ಯವಸ್ಥೆಯು ಬಾಧ್ಯವಿಲ್ಲ ಎಂದರೆ ವಿವಶವಿಲ್ಲ.'ವೆಂದು ಹೇಳಿದ್ದಾರೆ.

ಈಗ ನರಕದಲ್ಲಿ ಹೋಗುವಂಥ ಜೀವಗಳ ಕುರಿತಾದ ಕೆಲವು ವಿಶೇಷತೆಗಳನ್ನು ನೋಡೋಣ.

ಯಾವ ಜೀವನು ಸಮ್ಯಕ್ತ್ವದ ಜೊತೆ ನರಕದಲ್ಲಿ ಜನ್ಮ ಪಡೆಯುವನು ಅವನು ಮೊದಲನೆಯ ನರಕದಲ್ಲಿಯೇ ಹೋಗುವನು. ಏಕೆಂದರೆ ಯಾವುದೇ ಜೀವನು ಸಮ್ಯಕ್ತ್ವದ ಜೊತೆ ಎರಡರಿಂದ ಹಿಡಿದು ಏಳನೆಯ ನರಕದವರೆಗೆ ಜನ್ಮ ಪಡೆಯುವ ಸಾಧ್ಯತೆಯಿಲ್ಲ. ಸಮ್ಯಕ್ತ್ವದ ಜೊತೆ ನರಕದಲ್ಲಿ ಹೋಗುವಂಥ ಜೀವನು ಸಮ್ಯಕ್ತ್ವವಾಗುವ ಮೊದಲು ಮಿಥ್ಯಾತ್ವ ಅವಸ್ಥೆಯಲ್ಲಿ ನರಕಾಯುವಿನ ಬಂಧ ಮಾಡಿಕೊಂಡು ನಂತರ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ, ಏಕೆಂದರೆ ಸಮ್ಯಕ್ತ್ವವಾದ ನಂತರ ಯಾವುದೇ ಮನುಷ್ಯ-ತಿರ್ಯಂಚಕ್ಕೆ ಆಯುವಿನ ಬಂಧವಾಗುತ್ತಿದ್ದರೆ ನಿಯಮದಿಂದ ದೇವಾಯುವಿನ ಬಂಧವೇ ಆಗುತ್ತದೆ.

ಇಲ್ಲಿ ನರಕಾಯುವಿನ ಮಾತು ಇದೆ, ನರಕ ಗತಿಯ ಮಾತು ಇಲ್ಲ. ಒಂದು ಬಾರಿ ಯಾವ ಆಯುವಿನ ಬಂಧವಾಗುತ್ತದೆ ಅದರಲ್ಲಿ ಪುನಃ ಯಾವುದೇ ಪರಿವರ್ತನೆ - ಬದಲಾವಣೆಯಾಗುವುದಿಲ್ಲ.

ಹೇಗೆಂದರೆ, ಶ್ರೇಣಿಕ ದೊರೆಯು ಯಶೋಧರ ಮುನಿರಾಜರ ಕೊರಳಲ್ಲಿ ಸತ್ತು ಹೋದ ಸರ್ಪವನ್ನು

ಹಾಕಿ ಮಿಥ್ಯಾತ್ವ ಅವಸ್ಥೆಯಲ್ಲಿ ಏಳನೆಯ ನರಕದ ೩೩ ಸಾಗರ ಆಯುವಿನ ಬಂಧ ಮಾಡಿಕೊಂಡಿದ್ದನು ನಂತರ ಅವನು ಸಮ್ಯಗ್ದೃಷ್ಟಿಯಾದನು, ಕ್ಷಾಯಿಕ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಂಡನು ಮತ್ತು ಅವನಿಗೆ ತೀರ್ಥಂಕರ ಪ್ರಕೃತಿಯ ಬಂಧವು ಕೂಡ ಆರಂಭವಾಯಿತು. ಆಗ ನರಕಾಯುವಿನ ಸ್ಥಿತಿಯು ಕಡಿಮೆಯಾಗಿ ಎಂಭತ್ತಾ ಲ್ಕು ಸಾವಿರ ವರ್ಷ ಉಳಿಯಿತು. ಈಗ ಅವನು ಮೊದಲನೆಯ ನರಕದಲ್ಲಿ ಇದ್ದಾನೆ. ತೀರ್ಥಂಕರ ಪ್ರಕೃತಿಯ ಬಂಧವು ಕೂಡ ಪ್ರತಿಸಮಯ ಆಗುತ್ತಲಿದೆ ಮತ್ತು ಅಲ್ಲಿಂದ ಬಂದು ಈ ಭರತಕ್ಷೇತ್ರದಲ್ಲಿ ಬರುವ ಉತ್ಸರ್ಪಿಣಿಕಾಲದೊಳಗೆ ಪ್ರಥಮ ತೀರ್ಥಂಕರನಾಗುವನು.

ಯಾವನೋ ಜೀವನು ಮಿಥ್ಯಾತ್ವದಲ್ಲಿ ಎರಡನೆಯ ಅಥವಾ ಮೂರನೆಯ ನರಕದ ಆಯುವಿನ ಬಂಧ ಮಾಡಿಕೊಂಡಿದ್ದರೆ, ನಂತರ ಅವನು ಸಮ್ಯಕ್ತ್ವವನ್ನು ಪ್ರಾಪ್ತಮಾಡಿಕೊಂಡರೆ ಮತ್ತು ತೀರ್ಥಂಕರ ಪ್ರಕೃತಿಯ ಬಂಧವು ಪ್ರಾರಂಭವಾದರೂ ಕೂಡ ಅಂಥ ಜೀವನು ಸಮ್ಯಕ್ತ್ವದ ಜೊತೆಗೆ ನರಕದಲ್ಲಿ ಹೋಗುವುದಿಲ್ಲ. ಇಲ್ಲಿ ಮರಣದ ಒಂದು ಅಂತರ್ಮುಹೂರ್ತ ಮೊದಲು ಮಿಥ್ಯಾತ್ವದಲ್ಲಿ ಹೋಗಿ ಮಿಥ್ಯಾತ್ವದಲ್ಲಿ ಮರಣಹೊಂದಿ ನರಕದೊಳಗೆ ಉತ್ಪನ್ನವಾಗುತ್ತಾನೆ ಮತ್ತು ಒಂದು ಅಂತರ್ಮುಹೂರ್ತದಲ್ಲಿ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಂಡು ತೀರ್ಥಂಕರ ಪ್ರಕೃತಿಯ ಬಂಧವನ್ನು ಆರಂಭ ಮಾಡಿಕೊಳ್ಳುತ್ತಾನೆ, ಅಲ್ಲಿಂದ ಹೊರಗೆ ಬಂದು ತೀರ್ಥಂಕರನಾಗುತ್ತಾನೆ. ಆಗ ಪುನಃ ಆ ಜೀವಗಳ ಸಮ್ಯಕ್ತ್ವವು ಬಿಟ್ಟು ಹೋಗುವುದಿಲ್ಲ. ಅಲ್ಲಿಯಂತೂ ಅವನು (ಅಂಥ ಜೀವಗಳು) ಕ್ಷಯೋಪಶಮ ಸಮ್ಯಕ್ತ್ವದ ಜತೆಯಲ್ಲಿ ಸ್ಥಿತವಿರುತ್ತಾನೆ. ಮನುಷ್ಯನಾಗಿ ಹುಟ್ಟಿದ ಮೇಲೆ ಅವನಿಗೆ ಕ್ಷಾಯಿಕ ಸಮ್ಯಕ್ತ್ವದ ಪ್ರಾಪ್ತಿಯಾಗುತ್ತದೆ.

ಕ್ಷಾಯಿಕ ಸಮ್ಯಗ್ದೃಷ್ಟಿಯ ಸಮ್ಯಕ್ತ್ವವು ಬಿಟ್ಟು ಹೋಗುವುದಿಲ್ಲ, ಎಂದರೆ ಸಮ್ಯಕ್ತ್ವ ಸಹಿತ ನರಕದಲ್ಲಿ ಹೋಗುವಂಥ ಜೀವನು ಕ್ಷಾಯಿಕ ಸಮ್ಯಗ್ದೃಷ್ಟಿಯೇ ಇರಬೇಕಾಗುತ್ತದೆ ಅಥವಾ ಯಾರು ಇಲ್ಲಿ ಕ್ಷಾಯಿಕದ ಆರಂಭ ಮಾಡಿದ್ದಾರೆ ಮತ್ತು ಯಾರು ಅಂತರ್ಮುಹೂರ್ತದಲ್ಲಿ ಕ್ಷಾಯಿಕರಾಗುವಂಥರಿದ್ದಾರೆ ಅಂಥ ಕೃತಕೃತ್ಯವೇದಕ ಸಮ್ಯಕ್ತ್ವದ ಜತೆಯಲ್ಲಿ ಕೂಡ ಯಾವನೋ ಜೀವನು ಮೊದಲನೆಯ ನರಕದಲ್ಲಿ ಉತ್ಪನ್ನವಾಗುವ ಸಾಧ್ಯತೆಯಿದೆ. ನರಕದ ಮಾತನ್ನು ಬಿಟ್ಟು ಬಿಡಿರಿ, ಯಾರು ಮೊದಲು ತಿರ್ಯಂಚ ಆಯುವಿನ ಬಂಧ ಮಾಡಿಕೊಂಡಿದ್ದಾರೆ ಮತ್ತು ನಂತರ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಂಡಿದ್ದರೆ, ಆ ಜೀವಗಳು ಸಮ್ಯಕ್ತ್ವದ ಜೊತೆಗೆ ಸತ್ತು ಭೋಗಭೂಮಿಯ ತಿರ್ಯಂಚರಾಗುತ್ತಾರೆ. ಅವರ ಸಲುವಾಗಿಯೂ ಕೂಡ ಷರತ್ತು ಹಾಗೇ ಇದೆ, ಎಂದರೆ ಅವರು ಕ್ಷಾಯಿಕ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಂಡೇ ಸಮ್ಯಕ್ತ್ವದ ಜೊತೆ ಅಲ್ಲಿ ಜನ್ಮ ಪಡೆಯುತ್ತಾರೆ.

ಈಗ ಇಲ್ಲಿ ಪಂಚಮ ಕಾಲವು ವರ್ತಿಸುತ್ತಿದೆ ಯಾರೂ ಕ್ಷಾಯಿಕ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿಲ್ಲ ಅದರಿಂದ ಭೋಗಭೂಮಿಯ ತಿರ್ಯಂಚವು ಕೂಡ ಆಗುವುದಿಲ್ಲ. ತಿರ್ಯಂಚದ ಮಾತನ್ನು ಬಿಟ್ಟುಕೊಟ್ಟು ಒಂದು ವೇಳೆ ಸಮ್ಯಕ್ತ್ವದ ಜೊತೆಗೆ ಮರಣಹೊಂದಿ ಭೋಗಭೂಮಿಯ ಮನುಷ್ಯನಾಗುವುದಿದ್ದರೂ ಕೂಡ ಆ ಜೀವನಿಗೂ ಕ್ಷಾಯಿಕ ಸಮ್ಯಕ್ತ್ವವಾಗುವುದು ಆವಶ್ಯಕವಿದೆ. ಆದರೆ ವೇದಕ ಸಮ್ಯಕ್ತ್ವದ ಜೊತೆಗೆ ಮರಣ ಹೊಂದಿ ದೇವನಾಗಬಹುದಾಗಿದೆ. ಕೆಲವರು ಭೋಗಭೂಮಿಯಲ್ಲಿ ಜನ್ಮ ಪಡೆಯಲಿಚ್ಛಿಸುತ್ತಿದ್ದರೆ ಕೆಲವರು ವಿದೇಹ ಕ್ಷೇತ್ರದಲ್ಲಿ ಜನ್ಮ ಪಡೆಯಲಿಚ್ಛಿಸುತ್ತಾರೆ - ವಿಚಾರ ಮಾಡಬೇಕಾಗಿರುವುದೇನೆಂದರೆ, ಇಲ್ಲಿಂದ ಈ ಪಂಚಮ ಕಾಲದಲ್ಲಿ ಮರಣಹೊಂದಿ ಅಲ್ಲಿ ಜನ್ಮ ಪಡೆಯುವಂಥ ಜೀವನು ಮಿಥ್ಯಾತ್ವದ ಜತೆಯಲ್ಲಿಯೇ ಅಲ್ಲಿಗೆ

ಹೋಗುವನು. ದೇವ ಮತ್ತು ನಾರಕೀ ಸಮ್ಯಗ್ದೃಷ್ಟಿಗಳು ಮರಣಹೊಂದಿ ಕರ್ಮಭೂಮಿಯ ಮನುಷ್ಯರಲ್ಲಿ ಎಲ್ಲಿ ಚತುರ್ಥಕಾಲವಿದೆ ಅಲ್ಲಿ ಉತ್ಪನ್ನರಾಗುವರು. ಈ ಭರತ ಕ್ಷೇತ್ರದಲ್ಲಿ ಈ ಪಂಚಮಕಾಲದಲ್ಲಿ ಯಾವ ಮನುಷ್ಯರೂ ಸಮ್ಯಕ್ತ್ವ ಸಹಿತವಾಗಿ ಜನ್ಮಧಾರಣ ಮಾಡುವ ಸಾಧ್ಯತೆಯಿಲ್ಲ.

ಕ್ಷಾಯಿಕ ಸಮ್ಯಕ್ತ್ವ ಪ್ರಾಪ್ತ ಮಾಡಿಕೊಳ್ಳುವಂಥ ಜೀವನು ಕರ್ಮಭೂಮಿಯ ಮನುಷ್ಯನೇ ಆಗಿರಬೇಕಾಗುವುದು ಮತ್ತು ಅವನು ನಾಲ್ಕನೆಯ, ಐದನೆಯ, ಆರನೆಯ ಅಥವಾ ಏಳನೆಯ ಗುಣಸ್ಥಾನವರ್ತಿ ವೇದಕ ಸಮ್ಯಗ್ದೃಷ್ಟಿಯಾಗಿದ್ದು ತೀರ್ಥಂಕರ, ಕೇವಲಿ ಅಥವಾ ಶ್ರುತಕೇವಲಿಗಳ ಪಾದ ಮೂಲದಲ್ಲಿಯೇ ಕ್ಷಾಯಿಕ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳುತ್ತಾನೆ. ಆದುದರಿಂದ ಮೊದಲು ಸಮ್ಯಗ್ದೃಷ್ಟಿಯಿದ್ದವನೇ ಕ್ಷಾಯಿಕನಾಗುತ್ತಾನೆ. ಮಿಥ್ಯಾತ್ವದೊಳಗಿಂದ ಯಾವುದೇ ಜೀವನು ನೇರವಾಗಿ ಕ್ಷಾಯಿಕ ಸಮ್ಯಗ್ದೃಷ್ಟಿಯಾಗುವ ಸಾಧ್ಯತೆಯಿಲ್ಲ. ಉಪಶಮ ಸಮ್ಯಕ್ತ್ವದೊಳಗಿಂದಲೂ ಕೂಡ ಯಾವುದೇ ಜೀವನು ನೇರವಾಗಿ ಕ್ಷಾಯಿಕ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳುವ ಸಾಧ್ಯತೆಯಿಲ್ಲ. ಕ್ಷಾಯಿಕ ಸಮ್ಯಕ್ತ್ವ ಪ್ರಾಪ್ತ ಮಾಡಿಕೊಳ್ಳುತ್ತಾನೆ - ಎಂಬುದರ ಅರ್ಥವು ಅನಂತಾನುಬಂಧಿಯ ನಾಲ್ಕು ಮತ್ತು ದರ್ಶನ ಮೋಹನೀಯದ ಮೂರು ಪ್ರಕೃತಿಗಳನ್ನು ಸತ್ತಾದೊಳಗಿಂದ ನಾಶ ಮಾಡಿ ಬಿಡುತ್ತಾನೆ - ಕ್ಷಯ ಮಾಡುತ್ತಾನೆ.

ಮೊದಲು ಅನಂತಾನುಬಂಧಿಯ ಪರಮಾಣುಗಳು ಚಾರಿತ್ರ ಮೋಹನೀಯದ ಶೇಷ ಪ್ರಕೃತಿಗಳಲ್ಲಿ ಸಂಕ್ರಮಿತವಾಗಿ ನಷ್ಟವಾಗುತ್ತವೆ, ಇದನ್ನು ಅನಂತಾನುಬಂಧಿಯ ವಿಸಂಯೋಜನೆಯೆಂದು ಹೇಳುತ್ತಾರೆ ಈ ಕಾರ್ಯವಂತೂ ನಾಲ್ಕೂ ಗತಿಗಳಲ್ಲಿ ಆಗುವ ಸಾಧ್ಯತೆಯಿದೆ. ಆದರೆ ಮನುಷ್ಯನೇ ದರ್ಶನ ಮೋಹನೀಯದ ಕ್ಷಪಣ ಮಾಡುತ್ತಾನೆ ಅರ್ಥಾತ್ ಕ್ರಮದಿಂದ ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವಗಳ ಕ್ಷಯ ಮಾಡುತ್ತಾನೆ. ಈ ಕಾರ್ಯ ಮಾಡುವ ಸಮಯದಲ್ಲಿ ಮರಣವಾಗುವುದಿಲ್ಲ. ಈಗ ಒಂದು ಸಮ್ಯಕ್ತ್ವ ಪ್ರಕೃತಿಯು ಶೇಷ ಉಳಿದಿರುತ್ತದೆ. ಅದರದೂ ಕ್ಷಯ ಮಾಡುತ್ತಾನೆ, ಆದರೆ ಆ ಅಂತರ್ಮುಹೂರ್ತಕಾಲದಲ್ಲಿ ಮರಣವಾಗುವ ಸಾಧ್ಯತೆಯಿದೆ ಮತ್ತು ಯಾವ ಆಯುವಿನ ಬಂಧವು ಮೊದಲು ಆಗಿರುತ್ತದೆ, ಆ ಗತಿಯೊಳಗೆ ಆ ಜೀವನು ಎಂದರೆ ಸತ್ತು ಆ ಜೀವನು ನಾಲ್ಕೂ ಗತಿಗಳಲ್ಲಿ ಜನ್ಮ ಪಡೆಯಬಹುದಾಗಿದೆ. ಈ ಅವಸ್ಥೆಯನ್ನು ಕೃತಕೃತ್ಯವೇದಕ ಸಮ್ಯಕ್ತ್ವವೆಂದು ಹೇಳುತ್ತಾರೆ. ಅಲ್ಲಿ ತಲುಪಿದ ಮೇಲೆ ಸಮ್ಯಕ್ತ್ವ ಪ್ರಕೃತಿಯದೂ ಕ್ಷಯವಾಗಿ ಜೀವನು ಕ್ಷಾಯಿಕ ಸಮ್ಯಗ್ದೃಷ್ಟಿಯಾಗುತ್ತಾನೆ.

ಈ ರೀತಿಯಾಗಿ ದರ್ಶನ ಮೋಹನೀಯದ ಕ್ಷಪಣದ ಪ್ರಾರಂಭವನ್ನು ಕೇವಲ ಕರ್ಮಭೂಮಿಯ ಮನುಷ್ಯನೇ ಮಾಡುತ್ತಾನೆಂಬುದನ್ನು, ಅನ್ಯ ಯಾವುದೇ ಗತಿಗಳ ಜೀವನು ಪ್ರಾರಂಭಮಾಡುವ ಸಾಧ್ಯತೆಯಿಲ್ಲ-ಭೋಗಭೂಮಿಯ ಮನುಷ್ಯನು ಕೂಡ ಮಾಡುವುದಿಲ್ಲವೆಂಬ ಮಾತನ್ನು ತಿಳಿದುಕೊಂಡೆವು. ಆದರೆ ಕೃತಕೃತ್ಯ ವೇದಕ ಅಥವಾ ಕ್ಷಾಯಿಕನಾಗಿ ಜೀವನು ನಾಲ್ಕೂ ಗತಿಗಳಲ್ಲಿ ಹೋಗುವ ಸಾಧ್ಯತೆಯಿದೆ ಎಂದರೆ ಮೊದಲು ಯಾವ ಆಯುವಿನ ಬಂಧ ಮಾಡಿಕೊಂಡಿದ್ದನೋ ಅಲ್ಲಿಗೆ ಹೋಗುವನು ಅಥವಾ ನಂತರ ಆಯುವಿನ ಬಂಧ ಮಾಡಿಕೊಂಡು ದೇವಗತಿಯಲ್ಲಿ ಹೋಗುವನು ಅಥವಾ ಕ್ಷಾಯಿಕ ಸಮ್ಯಕ್ತ್ವ ಪ್ರಾಪ್ತ ಮಾಡಿಕೊಂಡು ಅದೇ ಭವದಲ್ಲಿಂದ ಆ ಜೀವನು ಮುಕ್ತಾವಸ್ಥೆಯನ್ನು ಪ್ರಕಟಪಡಿಸಿಕೊಳ್ಳಲೂಬಹುದಾಗಿದೆ.

ತೀರ್ಥಂಕರ ಪ್ರಕೃತಿಯ ಬಂಧದ ಪ್ರಾರಂಭವು ಕೂಡ ಕರ್ಮಭೂಮಿಯ ಮನುಷ್ಯನಿಗೇನೇ ತೀರ್ಥಂಕರ

ಅಥವಾ ಕೇವಲಿಗಳ ಪಾದಮೂಲದಲ್ಲಿ ಆಗುತ್ತದೆ. ಈ ಬಂಧವು ಸಮ್ಯಗ್ದೃಷ್ಟಿಗೇ ಆಗುತ್ತದೆ. ಔಪಶಮಿಕ, ವೇದಕ ಅಥವಾ ಕ್ಷಾಯಿಕ ಮೂರೂ ಪ್ರಕಾರದ ಸಮ್ಯಗ್ದೃಷ್ಟಿಗಳು ಈ ಬಂಧದ ಪ್ರಾರಂಭ ಮಾಡಬಹುದಾಗಿದೆ. ಒಂದು ಬಾರಿ ತೀರ್ಥಂಕರ ಪ್ರಕೃತಿಯ ಬಂಧವು ಆರಂಭವಾದರೆ ಅದು ನಿರಂತರ ಪ್ರತಿ ಸಮಯ ಬಂಧಿಸುತ್ತಲೇ ಇರುತ್ತದೆ, ಎಂಟನೆಯ ಗುಣಸ್ಥಾನದವರೆಗೆ ಬಂಧಿಸುತ್ತಿರುತ್ತದೆ. ತೀರ್ಥಂಕರ ಪ್ರಕೃತಿಯ ಬಂಧವು ಆರಂಭವಾಗಿರುವಂಥ ಮನುಷ್ಯನು ಮರಣಹೊಂದಿ ದೇವನಾಗುತ್ತಾನೆ ಅಥವಾ ಮೊದಲು ನರಕಾಯುವಿನ ಬಂಧವಾಗಿ ಹೋಗಿದ್ದರೆ ಮೂರನೆಯ ನರಕದವರೆಗೆ ಹೋಗುವ ಸಾಧ್ಯತೆಯಿದೆ, ಆದರೆ ಭೋಗ ಭೂಮಿಯ ತಿರ್ಯಂಚ ಅಥವಾ ಮನುಷ್ಯನಾಗುವುದಿಲ್ಲ. ದೇವ ಅಥವಾ ನರಕಗತಿಯಲ್ಲಿ ಹೋಗಿ ಅಲ್ಲಿಯೂ ಕೂಡ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುತ್ತಿರುತ್ತಾನೆ ಮತ್ತು ಅಲ್ಲಿಂದ ಬಂದು ಮನುಷ್ಯನಾಗಿ ಕೇವಲಜ್ಞಾನದ ಪ್ರಾಪ್ತಿಯಾದ ಮೇಲೆ ತೀರ್ಥಂಕರ ಪದವನ್ನು ಪಡೆಯುತ್ತಾನೆ. (ತೀರ್ಥಂಕರ ಪ್ರಕೃತಿಯ ಉದಯವಾಗುತ್ತದೆ.)

ಈ ಪ್ರಕಾರ ಮೂರನೆಯ ನರಕದವರೆಗಿನ ಜೀವರು ಎಂದರೆ ಯಾರು ಅಲ್ಲಿಯೂ ಕೂಡ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುತ್ತಿದ್ದಾರೆ, ಎಂಬುದನ್ನು ತಿಳಿದೆವು. ಅವರು ಅಲ್ಲಿಂದ ಬಂದು ತೀರ್ಥಂಕರರಾಗುವ ಸಾಧ್ಯತೆಯಿದೆ. ನಾಲ್ಕನೆಯ ನರಕದಿಂದ ಹೊರಗೆ ಬಂದು ಯಾವ ಜೀವನೂ ತೀರ್ಥಂಕರನಾಗುವ ಸಾಧ್ಯತೆಯಿಲ್ಲ. ಆದರೆ ಅದೇ ಭವದಿಂದ ಮೋಕ್ಷಕ್ಕೆ ಹೋಗುವ ಸಾಧ್ಯತೆಯಿದೆ ಅರ್ಥಾತ್ ಸಾಮಾನ್ಯ ಕೇವಲಿಗಳಾಗಬಹುದಾಗಿದೆ. ಐದನೆಯ ನರಕದಿಂದ ಹೊರಗೆ ಬಂದು ಯಾವನೋ ಜೀವನು ಮನುಷ್ಯನಾಗಿ ಮುನಿ ಅವಸ್ಥೆಯವರೆಗೆ ಹೋಗಬಹುದಾಗಿದೆ. ಆರನೆಯ ನರಕದಿಂದ ಹೊರಗೆ ಬಂದಿರುವ ಜೀವನು ಸಕಲ ಸಂಯಮಿಯಾಗುವ ಸಾಧ್ಯತೆಯಿಲ್ಲ. ಆದರೆ ಐದನೆಯ ಗುಣಸ್ಥಾನದವರೆಗೆ ಹೋಗುವ ಸಾಧ್ಯತೆಯಿದೆ. ಏಳನೆಯ ನರಕದಿಂದ ಹೊರಗೆ ಬರುವ ಜೀವನು ಆ ಭವದಲ್ಲಿ ಮೂರನೆಯ, ನಾಲ್ಕನೆಯ ಅಥವಾ ಐದನೆಯ ಗುಣಸ್ಥಾನಗಳ ಪ್ರಾಪ್ತಿಯನ್ನೂ ಮಾಡಿಕೊಳ್ಳಲಾರನು - ಅವನು ಸಮ್ಯಕ್ತ್ವದ ಪ್ರಾಪ್ತಿಯನ್ನೇ ಮಾಡಿಕೊಳ್ಳುವ ಸಾಧ್ಯತೆಯಿಲ್ಲದಿರುವಾಗ ಉರುಳಿ ಸಾಸಾದನದಲ್ಲಿಯೂ ಕೂಡ ಬರುವ ಸಾಧ್ಯತೆಯಿಲ್ಲ; ಕೇವಲ ಮಿಥ್ಯಾತ್ವ ಗುಣಸ್ಥಾನದಲ್ಲಿಯೇ ಉಳಿಯುತ್ತಾನೆ. ಏಳನೆಯ ನರಕದಿಂದ ಹೊರಗೆ ಬಂದು ಜೀವನು ಹಿಂಸ್ರಪಶು-ಸಂಜ್ಞೀ ಪಂಚೇಂದ್ರಿಯ ಗರ್ಭಜ ತಿರ್ಯಂಚವೇ ಆಗುತ್ತಾನೆ, ಮೊದಲಿನ ನರಕದಿಂದ ಹಿಡಿದು ಆರನೆಯ ನರಕದವರೆಗಿನ ನಾರಕಿಗಳು ಅಲ್ಲಿಂದ ಸತ್ತು ಸಂಜ್ಞೀ ಪಂಚೇಂದ್ರಿಯ ಗರ್ಭಜ ತಿರ್ಯಂಚ ಅಥವಾ ಪರ್ಯಾಪ್ತ ಮನುಷ್ಯರಲ್ಲಿಯೇ ಹುಟ್ಟುತ್ತಾರೆ. ಸಮ್ಮೂರ್ಚ್ಛನ ತಿರ್ಯಂಚಗಳಲ್ಲಿಯೂ ಕೂಡ ಜನ್ಮ ಧರಿಸುವುದಿಲ್ಲ.

ಪ್ರಶ್ನೆ :- ತೀರ್ಥಂಕರ ಪ್ರಕೃತಿಯ ಬಂಧದ ಪ್ರಾರಂಭವು ತೀರ್ಥಂಕರ ಅಥವಾ ಕೇವಲಿಗಳ ಪಾದಮೂಲದಲ್ಲಿ ಆಗುತ್ತದೆ, ಅನ್ಯ ಭವಗಳಲ್ಲಿ ಹೋಗುವಂಥವರ ಮರಣವು ತೀರ್ಥಂಕರರ ಎದುರಿಗೆ ಆಗುತ್ತದೆಯೇನು ?

ಉತ್ತರ :- ತೀರ್ಥಂಕರ ಪ್ರಕೃತಿಯ ಬಂಧದ ಪ್ರಾರಂಭವು ತೀರ್ಥಂಕರ ಅಥವಾ ಕೇವಲಿಗಳ ಸಾನ್ನಿಧ್ಯದಲ್ಲಿ ಅವರ ಪಾದಮೂಲದಲ್ಲಿ ಆಗುತ್ತದೆ. ಆದರೆ ಒಂದು ಬಾರಿ ಬಂಧದ ಆರಂಭವಾಗಿ ಹೋದರೆ ಆ ಬಂಧವು ಯಾವಾಗಲೂ ನಡದೇ ಇರುತ್ತದೆ. ನಂತರದಲ್ಲಿ ತೀರ್ಥಂಕರರ ಉಪಸ್ಥಿತಿಯ ಅವಶ್ಯಕತೆಯು ಇರುವುದಿಲ್ಲ. ಜೀವನ ಪೂರ್ತಿ ಮತ್ತು ಮರಣದ ನಂತರ ಅನ್ಯ ಭವದಲ್ಲಿಯೂ ಕೂಡ ತೀರ್ಥಂಕರ ಪ್ರಕೃತಿಯು ಪ್ರತಿ ಸಮಯ

ಬಂಧಿಸುತ್ತಲೇ ಇರುತ್ತದೆ. ಅವನು ಬೇಕಾದಲ್ಲಿ ಹೋಗಿ ಮರಣ ಹೊಂದಲಿ, ತೀರ್ಥಂಕರರ ಎದುರಿಗೆ ಮರಣವಾಗಬೇಕು ಎಂಬುದಾಗಿಲ್ಲ. ಹೇಗೆ ಶ್ರೀಕೃಷ್ಣನ ಮರಣವು ಸಂಕ್ಲೇಶ ಪರಿಣಾಮಗಳಲ್ಲಿ ಕಾನನ ಪ್ರದೇಶದೊಳಗೆ ಆಯಿತು, ಮರಣಹೊಂದಿ ಮೂರನೆಯ ನರಕಕ್ಕೆ ಹೋದನು. ಮರಣದ ಸಮಯದೊಳಗೆ ಮಿಥ್ಯಾತ್ವದಲ್ಲಿ ಹೋಗಿ ಮರಣವಾಯಿತು. ಅಲ್ಲಿ ಜನ್ಮ ಪಡೆದು ಅಂತರ್ಮುಹೂರ್ತದಲ್ಲಿ ವೇದಕ ಸಮ್ಯಕ್ತ್ವವನ್ನು ಪ್ರಕಟ ಪಡಿಸಿಕೊಂಡು ತೀರ್ಥಂಕರ ಪ್ರಕೃತಿಯ ಬಂಧದ ಆರಂಭ ಮಾಡಿಕೊಂಡನು. ಇನ್ನು ಅಂಥ ಜೀವನು ಪುನಃ ಮಿಥ್ಯಾತ್ವದೊಳಗೆ ಬರುವುದಿಲ್ಲ. ಎಲ್ಲಿಯವರೆಗೆ ಮಿಥ್ಯಾತ್ವದಲ್ಲಿರುತ್ತಾರೆ, ಅಷ್ಟು ಎಂದರೆ ಆ ಅಂತರ್ಮುಹೂರ್ತಕಾಲದಲ್ಲಿ ತೀರ್ಥಂಕರ ಪ್ರಕೃತಿಯ ಬಂಧವಾಗುವುದಿಲ್ಲ. ಎರಡನೆಯ ಅಥವಾ ಮೂರನೆಯ ನರಕದೊಳಗೆ ಹೋಗುವಂಥ ಜೀವನು ಒಂದು ವೇಳೆ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುತ್ತಿದ್ದರೆ ಅವರ ಸಲುವಾಗಿ ಮಾತ್ರ ಈ ನಿಯಮವಿದೆ.

ನರಕದೊಳಗಿಂದ ಹೊರಗೆ ಬಂದು ಜೀವನು ಏನು ಆಗುವ ಸಾಧ್ಯತೆಯಿದೆ ? ಎಂಬುದನ್ನು ನಾವು ತಿಳಿದುಕೊಂಡೆವು. ಅವನು ಏನು ಆಗುವುದಿಲ್ಲ ? ಎಂಬುದನ್ನು ಈಗ ನೋಡೋಣ. ಅಲ್ಲಿಂದ ಬಂದಿರುವ ಜೀವನು ನಾರಾಯಣನಾಗುವ ಸಾಧ್ಯತೆಯಿಲ್ಲ. ನಾರಾಯಣನೆಂದರೆ ಯಾರು ಎಂಬುದರ ಪರಿಚಯವಿದೆಯೇನು?

ನೋಡಿರಿ, ೬೩ ಶಲಾಕಾ ಪುರುಷರಿರುತ್ತಾರೆ. ಅವರಲ್ಲಿ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ನಾರಾಯಣ, ೯ ಪ್ರತಿನಾರಾಯಣ, ೯ ಬಲಭದ್ರರಿರುತ್ತಾರೆ. ಇದು ಕರ್ಮಭೂಮಿಯ ಆರ್ಯಖಂಡದ ಅವಸರ್ಪಿಣಿ ಮತ್ತು ಉತ್ಸರ್ಪಿಣಿಯ ಚತುರ್ಥಕಾಲದ - ದುಷಮಾ ಸುಷಮಾ ಕಾಲದ ಮಾತು ಇದೆ. ಇದರಲ್ಲಿ ನರಕದಿಂದ ಬಂದಿರುವ ಜೀವನು ನಾರಾಯಣನಾಗುವುದಿಲ್ಲ, ಬಲಭದ್ರನಾಗುವುದಿಲ್ಲ, ಪ್ರತಿನಾರಾಯಣ-ನಾಗುವುದಿಲ್ಲ ಮತ್ತು ಚಕ್ರವರ್ತಿಯೂ ಕೂಡ ಆಗುವುದಿಲ್ಲ; ತೀರ್ಥಂಕರರಾಗುವ ಸಾಧ್ಯತೆಯಿದೆ. ಮೂರನೆಯ ನರಕದವರೆಗಿನಿಂದ ಬರುವಂಥ ಜೀವನು ತೀರ್ಥಂಕರನಾಗುವ ಸಾಧ್ಯತೆಯಿದೆ.

ಕರಣಾನುಯೋಗವಂತೂ ಇಂಥ ನಿಯಮಗಳಿಂದ ತುಂಬಿಕೊಂಡಿದೆ. ಇನ್ನು ಒಂದು ಬಾರಿ ನರಕದಿಂದ ಹೊರಗೆ ಬಂದಿರುವ ಜೀವನು ಪುನಃ ಹೆಚ್ಚು ಹೆಚ್ಚೆಂದರೆ ಎಷ್ಟು ಬಾರಿ ಅಲ್ಲಿ ಹೋಗುವ ಸಾಧ್ಯತೆಯಿದೆ ? ಏಕೆಂದರೆ ನಾವುಗಳು ಎಲ್ಲಿಯಾದರೂ ಪ್ರವಾಸಕ್ಕೆ ಅಥವಾ ಯಾತ್ರೆಗೆ ಹೋಗಿ ಬರುತ್ತೇವೆ, ಯಾವುದಾದರೂ ಸ್ಥಾನವು ನಮಗೆ ಒಳ್ಳೆಯದೆನಿಸಿದರೆ ಮತ್ತೆ ಮತ್ತೆ ಅಲ್ಲಿಗೆ ಹೋಗಬಯಸುತ್ತೇವೆ. ಹಾಗೆ ನರಕದೊಳಗೆ ಎಷ್ಟು ಬಾರಿ ಹೋಗಬಹುದಾಗಿದೆ.?

ಅಸಂಜ್ಞೀ ಪಂಚೇಂದ್ರಿಯ ತಿರ್ಯಂಚವು ಸತ್ತು ಮೊದಲನೆಯ ನರಕದಲ್ಲಿ ಹೋಗುತ್ತದೆ ಆದರೆ ಅಲ್ಲಿಂದ ಹೊರಗೆ ಬಂದು ಪುನಃ ಅಸಂಜ್ಞಿಯಂತೂ ಆಗುವ ಸಾಧ್ಯತೆಯಿಲ್ಲ, ಸಂಜ್ಞೀ ಪಂಚೇಂದ್ರಿಯ ಗರ್ಭಜವೇ ಆಗುತ್ತದೆ. ಗರ್ಭಜ ಅರ್ಥಾತ್ ಮಾತಾ-ಪಿತರ ನಿಮಿತ್ತದಿಂದ ಜನ್ಮಧಾರಣ ಮಾಡುವುದು.

ಇನ್ನು ಗರ್ಭಜದ ನಂತರ ಸಮ್ಮೂರ್ಚ್ಛನ ಎಂದರೇನು ? ನೋಡೋಣ.

ಸಮ್ಮೂರ್ಚ್ಛನ ಅರ್ಥಾತ್ ಮಾತಾ-ಪಿತರ ನಿಮಿತ್ತವಿಲ್ಲದೆ ವಾತಾವರಣದೊಳಗಿಂದ ಶರೀರಯೋಗ್ಯ ಪರಮಾಣುಗಳ ಗ್ರಹಣ ಮಾಡಿ ಅಂತರ್ಮುಹೂರ್ತದಲ್ಲಿ ಶರೀರದ ರಚನೆಯಾಗುತ್ತದೆ. ಏಕೇಂದ್ರಿಯದಿಂದ

ಚತುರಿಂದ್ರಿಯದವರೆಗಿನ ಜೀವಗಳಂತೂ ನಿಯಮದಿಂದ ಸಮ್ಮೂರ್ಚ್ಛನವೇ ಇರುತ್ತವೆ. ಎಲ್ಲ ಲಬ್ಧಿ ಅಪರ್ಯಾಪ್ತ ತಿರ್ಯಂಚಗಳು ಮತ್ತು ಮನುಷ್ಯರು ಕೂಡ ಸಮ್ಮೂರ್ಚ್ಛನರಿರುತ್ತಾರೆ. ಪರ್ಯಾಪ್ತ ಪಂಚೇಂದ್ರಿಯ ತಿರ್ಯಂಚಗಳು – ಸಂಜ್ಞೀ ಮತ್ತು ಅಸಂಜ್ಞೀ ಗರ್ಭಜಗಳೂ ಇರುವ ಸಾಧ್ಯತೆಯಿದೆ ಮತ್ತು ಸಮ್ಮೂರ್ಚ್ಛನ ಕೂಡ ಇರಬಹುದಾಗಿದೆ. ಮೀನು, ಮೊಸಳೆ ಮೊದಲಾದವು ಸಮ್ಮೂರ್ಚ್ಛನ ಜೀವಗಳಿವೆ. ಸ್ವಯಂಭೂರಮಣ ಸಮುದ್ರದಲ್ಲಿ ಅಸಂಖ್ಯಾತ ಸಮ್ಮೂರ್ಚ್ಛನ ಮಹಾಮತ್ಸ್ಯಗಳು ಪಂಚಮ ಗುಣಸ್ಥಾನವರ್ತಿಯಿವೆ. ಜನ್ಮವಾದ ನಂತರ ಒಂದು ಅಂತರ್ಮುಹೂರ್ತದಲ್ಲಿ ಅವು ಸಮ್ಯಗ್ದರ್ಶನದ ಪ್ರಾಪ್ತಿ ಮಾಡಿಕೊಳ್ಳುವ ಸಾಧ್ಯತೆಯಿದೆ.

ಅಸಂಜ್ಞೀ ಪಂಚೇಂದ್ರಿಯದ ಮಾತು ನಡೆಯುತ್ತಿತ್ತು. ಅದು ಸತ್ತು ಮೊದಲನೆಯ ನರಕದಲ್ಲಿ ಹೋಗುತ್ತದೆ, ಅಲ್ಲಿಂದ ಹೊರಗೆ ಬಂದು ಸಂಜ್ಞೀ ಪಂಚೇಂದ್ರಿಯ (ತಿರ್ಯಂಚ ಅಥವಾ ಮನುಷ್ಯ)ವಾಗುತ್ತದೆ. ಪುನಃ ಅಸಂಜ್ಞೀಯಾಗಿ ಮತ್ತೆ ನರಕದಲ್ಲಿ ಹೋಗುತ್ತದೆ. ಅಲ್ಲಿಂದ ಹೊರಗೆ ಬಂದು ಸಂಜ್ಞಿಯ ಜನ್ಮಧಾರಣ ಮಾಡಿ ನಂತರ ಅಸಂಜ್ಞಿಯಾಗುತ್ತದೆ ಮತ್ತು ಮೊದಲಿನ ನರಕದೊಳಗೆ ಹೋಗುತ್ತದೆ; ಹೀಗೆ ಹೆಚ್ಚು ಹೆಚ್ಚೆಂದರೆ ಎಂಟು ಬಾರಿ ಆಗುವ ಸಾಧ್ಯತೆಯಿದೆ. ಇದು ನಿರಂತರದ ಮಾತು ಇಲ್ಲ ಏಕೆಂದರೆ ಮಧ್ಯದಲ್ಲಿ ಒಂದು ಸಂಜ್ಞಿಯ ಭವವಾಗುತ್ತದೆ.

ಎರಡನೆಯ ನರಕದವರೆಗೆ ಹೋಗುವಂಥ ಸರೀಸೃಪ ಮೊದಲಾದವು ಅದಕ್ಕಿಂತ ಕೆಳಗೆ ಹೋಗುವ ಸಾಧ್ಯತೆಯಿಲ್ಲ. ಎರಡನೆಯ ನರಕದಿಂದ ಹೊರಗೆ ಬಂದು ಸಂಜ್ಞೀಯಾಗಿ ಪುನಃ ಎರಡನೆಯ ನರಕದಲ್ಲಿ ಹೋಗುತ್ತವೆ. ಮತ್ತೆ ಸಂಜ್ಞಿಯಲ್ಲಿ ಜನ್ಮಧಾರಣ ಮಾಡಿ ಪುನಃ ಸತ್ತು ಎರಡನೆಯ ನರಕದಲ್ಲಿ ಹೋಗುತ್ತವೆ. ಹೀಗೆ ಏಳು ಬಾರಿ ಹೋಗುವ ಸಾಧ್ಯತೆಯಿದೆ.

ದೇವಗತಿಯೊಳಗಿಂದ – ಭವನತ್ರಿಕ, ಸೌಧರ್ಮ, ಈಶಾನ ಮೊದಲಾದವುಗಳಲ್ಲಿನ ದೇವಗಳು ಮರಣ ಹೊಂದಿ ಏಕೇಂದ್ರಿಯದಲ್ಲಿಯೇ ಹೋಗುವ ಸಾಧ್ಯತೆಯಿದೆ. ಆದರೆ ನರಕದಿಂದ ಸತ್ತು ಜೀವನು ಏಕೇಂದ್ರಿಯನಾಗುವುದಿಲ್ಲ, ಅವನು ಸಂಜ್ಞೀ ಪಂಚೇಂದ್ರಿಯವೇ ಆಗುತ್ತಾನೆ.

ಪ್ರಶ್ನೆ :- ನರಕದೊಳಗೆ ಜೀವನು ಸಂಜ್ಞೀ ಪಂಚೇಂದ್ರಿಯನೇ ಆಗುವಂಥ ಯಾವ ಪುಣ್ಯದ ಬಂಧ ಮಾಡಿಕೊಳ್ಳುತ್ತಿರುತ್ತಾನೆ ?

ಉತ್ತರ :- ಅಯ್ಯಾ ! ಬಾದರ ನಿಗೋದದ ಜೀವನು ಸತ್ತು ಮನುಷ್ಯನಾಗಿ ಅದೇ ಭವದಿಂದ ಮೋಕ್ಷಕ್ಕೆ ಹೋಗಬಹುದಾಗಿದೆ, ಹಾಗಾದರೆ ಆ ಜೀವನು ಅಲ್ಲಿ ಅಂಥ ಯಾವ ಪುಣ್ಯ ಮಾಡುತ್ತಾನೆ ? ಅದು ಕೂಡ ಮನುಷ್ಯಗತಿ, ಮನುಷ್ಯಾಯು, ವಜ್ರವೃಷಭನಾರಾಚ ಸಂಹನನ ಮೊದಲಾದವನ್ನು ಕಟ್ಟಿಕೊಂಡು ಬರುತ್ತಾನೆ. ನಾವುಗಳಂತೂ ಕ್ರಿಯೆಗಳಲ್ಲಿಯೇ ಪುಣ್ಯವನ್ನು ಹುಡುಕುತ್ತಿದ್ದೇವೆ, ಆದರೆ ಇಲ್ಲಿ ಪರಿಣಾಮಗಳ ಮಾತು ನಡೆಯುತ್ತಿದೆ. ನರಕಗಳಲ್ಲಿ ಬೇಕಾದರೆ ಅಶುಭ ಲೇಶ್ಯೆಯೇ ಇರುತ್ತಿದ್ದರೂ ಆ ಜೀವರುಗಳ ಪರಿಣಾಮದಲ್ಲಿ ಮಂದತೆಯು ಬರುತ್ತದೆ – ವಿಶುದ್ಧಿಯಾಗುತ್ತದೆ, ಅದರಿಂದ ಪುಣ್ಯದ ಬಂಧವೂ ಕೂಡ ಆಗುತ್ತದೆ. ಅಲ್ಲಿ ಸಮ್ಯಕ್ತ್ವದ ಪ್ರಾಪ್ತಿಯಾಗುವ ಸಾಧ್ಯತೆಯಿದೆ, ಎಂದ ಮೇಲೆ ಸಂಜ್ಞೀ ಪರ್ಯಾಯದ ಪ್ರಾಪ್ತಿಯಲ್ಲಿ ಯಾವ ವಿಶೇಷತೆಯಿದೆ? ಆಯಾಯಾ ನರಕದ ಲೇಶ್ಯೆಗಳು ಬೇರೆ-ಬೇರೆಯಾಗಿರುತ್ತವೆ. ಮೊದಲನೆಯ ನರಕದಲ್ಲಿ ಕಪೋತ ಲೇಶ್ಯೆ, ಮಧ್ಯದ ನರಕಗಳಲ್ಲಿ ನೀಲಲೇಶ್ಯೆ ಮತ್ತು ಎಲ್ಲಕ್ಕಿಂತ ಕೆಳಗೆ ಕೃಷ್ಣ ಲೇಶ್ಯೆಯಿರುತ್ತದೆ.

ಪ್ರಶ್ನೆ :- ಇದು ದ್ರವ್ಯ ಲೇಶ್ಯೆಯ ಮಾತು ಇದೆಯೋ ಅಥವಾ ಭಾವಲೇಶ್ಯೆಯ ಮಾತು ಇದೆ ?

ಉತ್ತರ :- ಇದು ಭಾವಲೇಶ್ಯೆಯ ಮಾತು ಇದೆ - ಜೀವರುಗಳ ಪರಿಣಾಮದ ಮಾತು ಇದೆ. ಎಲ್ಲ ನಾರಕಿಗಳ ದ್ರವ್ಯಲೇಶ್ಯೆ ಅರ್ಥಾತ್ ಶರೀರದ ವರ್ಣವು ಕೃಷ್ಣವೇ ಇರುತ್ತದೆ. ಅತಿಶಯ ಕಪ್ಪು ವರ್ಣವಿರುತ್ತದೆ. ಮೂರನೆಯ ನರಕದಲ್ಲಿ ಈ ಜೀವನು ಆರು ಬಾರಿ ಹೋಗುವ ಸಾಧ್ಯತೆಯಿದೆ. ನಾಲ್ಕನೆಯ ನರಕದಲ್ಲಿ ಐದು ಬಾರಿ, ಐದನೆಯ ನರಕದಲ್ಲಿ ನಾಲ್ಕು ಬಾರಿ, ಆರನೆಯ ನರಕದಲ್ಲಿ ಮೂರು ಬಾರಿ, ಏಳನೆಯ ನರಕದಿಂದ ಹೊರಗೆ ಬಂದು ಯಾರೂ ಮನುಷ್ಯರಾಗುವುದಿಲ್ಲ, ಸಂಜ್ಞೀ ಪರ್ಯಾಪ್ತ ಗರ್ಭಜ ತಿರ್ಯಂಚವೇ ಆಗುತ್ತಾನೆ. ನಂತರ ಮತ್ಸ್ಯನಾಗಿ ಪುನಃ ಏಳನೆಯ ನರಕದಲ್ಲಿ ಹೋದರೆ ಎರಡು ಬಾರಿ ಹೋಗುವ ಸಾಧ್ಯತೆಯಿದೆ.

ಪ್ರಶ್ನೆ :- ಕ್ಲೋನ (ಅಬೀಜ ಸಂತಾನ) ..... ದಲ್ಲಿ ಜೀವವಿರುತ್ತದೆಯೇನು ?

ಉತ್ತರ :- ಇದು ನಮ್ಮ ವಿಷಯವಲ್ಲ, ಆದಾಗ್ಯೂ ಸ್ವಲ್ಪ ನೋಡೋಣ. ವೈಜ್ಞಾನಿಕರು ಜೀವವನ್ನು ಉತ್ಪನ್ನ ಮಾಡಿದ್ದಾರೋ ಅಥವಾ ಪುದ್ಗಲವನ್ನು ? ಅವರು ತಮ್ಮ ಇಚ್ಛೆಯ ಅನುಸಾರ ಬೇಕಾದಂಥ ಆಕಾರ, ವರ್ಣದ ಶರೀರವನ್ನು ನಿರ್ಮಿಸಿದ್ದಾರೆ ಅಲ್ಲವೇನು ? - ಎಂದು ತಾವು ಹೇಳಬಹುದಾಗಿದೆ. ವಿಶಿಷ್ಟ ನಾಮಕರ್ಮದ ಉದಯವುಳ್ಳ ಜೀವಗಳು ಅಂಥಲ್ಲಿ ಉತ್ಪನ್ನವಾಗುತ್ತವೆ. ಶರೀರದ ರಚನೆಯಂತೂ ಆ ಜೀವದ ಪರ್ಯಾಪ್ತಿಗಳಿಂದ ಆಗುತ್ತದೆ.

ಪ್ರಶ್ನೆ :- ಕ್ಲೋನ....ದ ಜೀವವು ಗರ್ಭಜವಿದೆಯೋ ಅಥವಾ ಎಂಥದ್ದಿದೆ ?

ಉತ್ತರ :- ಅಲ್ಲಿಯಂತೂ ಅನೇಕ ಗರ್ಭ-'ಫರ್ಟಿಲಾಇಜ್ಡ ಎಗ್ಜ'ಗಳನ್ನು ನಿರ್ಮಿಸಲಾಗುತ್ತದೆ. ಸ್ತ್ರೀ ಬೀಜ ಹಾಗೂ ಪುರುಷ ಬೀಜಗಳ ಸಂಯೋಗವನ್ನು ಕೃತ್ರಿಮ ರೀತಿಯಿಂದ ಪ್ರಯೋಗ ಶಾಲೆಗಳಲ್ಲಿ ಮಾಡಿ ಅನೇಕ ಗರ್ಭಗಳನ್ನು ತಯಾರಿಸುತ್ತಾರೆ. ಅವುಗಳ ಮೇಲೆ ಅನೇಕ ಪ್ರಯೋಗಗಳನ್ನು ಮಾಡಲಾಗುತ್ತದೆ. ಅವುಗಳೊಳಗಿಂದ ಯಾವುದೋ ಒಂದು ಗರ್ಭವನ್ನು ಮತ್ತೊಮ್ಮೆ ಮಾತೆಯ ಉದರದಲ್ಲಿ ಇರಿಸಲಾಗುತ್ತದೆ, ಅಲ್ಲಿ ಅದು ಸಾಮಾನ್ಯ ಗರ್ಭದ ಸಮಾನ ಬೆಳೆಯುತ್ತದೆ. ಅವೆಲ್ಲ ಕೃತ್ರಿಮ ಗರ್ಭಗಳು ಕೂಡ ಪರ್ಯಾಪ್ತ ಗರ್ಭಜ ಮನುಷ್ಯ ಭವಗಳೇ ಇವೆ. ಅವುಗಳ ಸಲುವಾಗಿ ಲಕ್ಷಾಂತರ ಧನವನ್ನು ಖರ್ಚು ಮಾಡುತ್ತಾರೆ. ಅಲ್ಲಿ ಯಾವ ಪ್ರಯೋಗ ಶಾಲೆಯಲ್ಲಿ ಅನೇಕ ಗರ್ಭಗಳನ್ನು ನಿರ್ಮಿಸಲಾಗಿತ್ತು, ಅವನ್ನು ನಷ್ಟಮಾಡಲಾಗುತ್ತದೆ - ಅಷ್ಟೊಂದು ಪರ್ಯಾಪ್ತ ಮನುಷ್ಯ ಭವಗಳು ಅಲ್ಲಿಯೇ ನಷ್ಟವಾಗುತ್ತವೆ. ಆ ದುರ್ಲಭ ಮನುಷ್ಯ ಭವಗಳ ಲಾಭವೇನಾಯಿತು ?

ಜೀವನು ಒಮ್ಮೊಮ್ಮೆ ಒಂದು ಕೋಟಿ ಪೂರ್ವದ ಆಯುವನ್ನು ಕಟ್ಟಿಕೊಂಡು ಮನುಷ್ಯರಲ್ಲಿ ಜನ್ಮಧಾರಣ ಮಾಡುತ್ತಾನೆ, ಅಲ್ಲಿಯೂ ಕೂಡ ಪರ್ಯಾಪ್ತಿಗಳು ಪೂರ್ಣವಾದ ಮೇಲೆ ಒಂದು ಅಂತರ್ಮುಹೂರ್ತದಲ್ಲಿ ಕದಲೀಘಾತದಿಂದ ಮರಣವಾಗುವ ಸಾಧ್ಯತೆಯಿದೆ. ಇಂಥ ಅದೆಷ್ಟೋ ಮಾತುಗಳ ಕುರಿತಾಗಿ ನಾವು ವಿಚಾರವನ್ನೇ ಮಾಡುವುದಿಲ್ಲ. ನಾವು ಕೇವಲ ವಿಚಾರ ಮಾಡುವುದೇನೆಂದರೆ ಈಗಂತೂ ನಾವು ಧನ ಸಂಪಾದನೆ ಮಾಡೋಣ, ಮೋಜು ಮಾಡೋಣ, ಉಳಿದುದೆಲ್ಲವನ್ನು ವೃದ್ಧರಾದ ಮೇಲೆ ಮಾಡಬಹುದಾಗಿದೆ. ಯಾರದೂ ಆಯುವಿನದಂತೂ ಭರವಸೆಯಿಲ್ಲ, ಯಾರು ಎಷ್ಟು ಆಯುವನ್ನು ತಗೆದುಕೊಂಡು ಬಂದಿದ್ದಾರೆ ಮತ್ತು ತಮ್ಮ ಆಯುವು ಇನ್ನು ಎಷ್ಟು ಉಳಿದುಕೊಂಡಿದೆ ಎಂಬುದರ ಪರಿಚಯವೂ ಇಲ್ಲ. ಆದುದರಿಂದ ಯಾವುದೆಲ್ಲವನ್ನು ಮಾಡುವುದಿದೆ ಎಂದರೆ ಸ್ವಾಧ್ಯಾಯ, ಭೇದವಿಜ್ಞಾನ ಮೊದಲಾದುವನ್ನು ಕೂಡಲೇ ಮಾಡುವಂತಿದೆ, ಭವಿಷ್ಯದ ಭರವಸೆಯನ್ನು ಇಟ್ಟುಕೊಳ್ಳುವಂತಿಲ್ಲ.

ಈಗ ನಾವು ನರಕದ ಚರ್ಚೆಯನ್ನು ಮುಂದುವರೆಸೋಣ.

ಪ್ರಶ್ನೆ :- ಪೃಥ್ವಿಗಳ ಹೆಸರು ರತ್ನಪ್ರಭಾದಿ ಇವೆ. ಅಲ್ಲಿ ಅವುಗಳಂಥ ಪ್ರಭೆಯಿರುತ್ತದೆಯೇನು ? ಅದರ ಅನುಸಾರವಾಗಿ ಅವುಗಳ ಹೆಸರು ಹೇಳಲಾಗಿದೆಯೇನು ?

ಉತ್ತರ :- ಎಲ್ಲ ಪೃಥ್ವಿಗಳು ಸ್ಫಟಿಕದ ಸಮಾನವಿರುತ್ತವೆ ಕೇವಲ ಮೇಲಿನ ಪ್ರಭೆಯು ಬೇರೆ-ಬೇರೆಯಿರುತ್ತದೆ.

ಪ್ರಶ್ನೆ :- ರತ್ನಪ್ರಭಾಯೆಂಬ ಹೆಸರಿನ ಪೃಥ್ವಿಯ ಖರಭಾಗದಲ್ಲಿ ರತ್ನಗಳ ಸಮಾನ ಪ್ರಭೆಯು ಇರುತ್ತದೆ. ಇದರಲ್ಲಿ ಹದಿನಾರು ಭೂಮಿಗಳಿವೆ - ಪದರುಗಳಿವೆ. ಅವು ಒಂದೊಂದು ಸಾವಿರ ಯೋಜನ ವಿಸ್ತಾರವಿವೆ, ಎರಡು ಭೂಮಿಗಳ ಮಧ್ಯದಲ್ಲಿ ಯಾವ ಅಂತರಾಳವಿರುವುದಿಲ್ಲ. ಇವುಗಳ ಹೆಸರನ್ನು ನಾವು ಮೊದಲು ತಿಳಿದುಕೊಂಡಿದ್ದೇವೆ. ಇವೆಲ್ಲವುಗಳ ಉದ್ದ, ಅಗಲಗಳು ಪ್ರಥಮ ಪೃಥ್ವಿಯ ಸಮಾನ ಲೋಕದ ಕೊನೆಯವರೆಗೆ ಇವೆ. ಇವುಗಳಲ್ಲಿ ಭವನ ವಾಸಿಗಳ ಭವನವಿವೆ, ಅಲ್ಲಿ ಅಕೃತ್ರಿಮ ಚೈತ್ಯಾಲಯಗಳಿವೆ, ಅಲ್ಲಿ ಜಿನಬಿಂಬಗಳಿವೆ. ಚೈತ್ಯವೃಕ್ಷ ಮೊದಲಾದವು ಎಂಥವಿವೆಯೆಂಬುದರ ವಿಸ್ತೃತವಾದ ಚರ್ಚೆಯನ್ನು ನಾವು ಭವನವಾಸಿಗಳ ಪ್ರಕರಣದಲ್ಲಿ ಮಾಡೋಣ ಅದಕ್ಕಿಂತ ಮೊದಲು ನರಕಗಳಿಂದಾದರೂ ಹೊರಗೆ ಬರೋಣ.

ರತ್ನಪ್ರಭಾ ಪೃಥ್ವಿಯ ಪಂಕಭಾಗದಲ್ಲಿ ಕೆಸರಿನ ಸಮಾನ ಪ್ರಭೆಯಿರುತ್ತದೆ. ಕೆಳಗಿನ ಅಬ್ಬಹುಲ ಭಾಗದಲ್ಲಿ ಜಲದ ಅಧಿಕತೆಯಿರುತ್ತದೆ. ಅದರಲ್ಲಿ ನರಕದ ಬಿಲಗಳು ಕಂಡು ಬರುತ್ತವೆ. ಭೂಮಿಯಲ್ಲಿ ಮೃದಂಗ ಅಥವಾ ಮಡಿಕೆಯನ್ನು ಹೂಳಿಟ್ಟಿರುವಂತೆ ಈ ಭೂಮಿಯಲ್ಲಿ ಮಧ್ಯದೊಳಗೆ ಪೊಳ್ಳಾದ ಸ್ಥಾನದಲ್ಲಿ ನರಕದ ಬಿಲಗಳಿವೆ ಮತ್ತು ಎಲ್ಲ ಕಡೆಗಳಿಂದಲೂ ಭೂಮಿಯಿರುತ್ತದೆ. ಎರಡು ನರಕಗಳ ಮಧ್ಯದಲ್ಲಿ ಭೂಮಿಯಿದೆ. ನರಕದ ಬಿಲಗಳೂ ಕೂಡ ಅಸಂಖ್ಯಾತ-ಅಸಂಖ್ಯಾತ ಯೋಜನದವಿರುತ್ತವೆ. ಹೇಗೆ ಇಲಿಯ ಬಿಲಗಳು ಭೂಮಿಯ ಒಳಗೆ ಇರುತ್ತವೆ ಹಾಗೆ ನರಕದ ಬಿಲಗಳೂ ಕೂಡ ಭೂಮಿಯ ಒಳಗಿರುತ್ತವೆ. ಆದರೆ ಇಲಿಗಳು ಮೇಲೆ ಬರುತ್ತವೆ ಹಾಗೆ ನರಕದ ಬಿಲಗಳು ಬೇರೆ ಯಾವುದರೊಂದಿಗೆ ಅಥವಾ ಒಂದಕ್ಕೊಂದು ಹೊಂದಿಕೊಂಡಿರುವುದಿಲ್ಲ ಹೊರಗೆ ಯಾವುದರ ಜತೆಯಲ್ಲೂ ಸಂಪರ್ಕವಾಗಲಿ ಅಥವಾ ಇಂಥಲ್ಲಿವೆಯೆಂಬುದರ ಸುಳಿವಾಗಲಿ ಇರುವುದಿಲ್ಲ. ಯಾವ ಪ್ರಕಾರ ನಮಗೆ ಸೂರ್ಯ, ಚಂದ್ರರ ಪ್ರಕಾಶವು ದೊರಕುತ್ತದೆ, ಭೋಗಭೂಮಿಗಳಲ್ಲಿ ಮತ್ತು ಸ್ವರ್ಗಗಳಲ್ಲಿ ಕಲ್ಪವೃಕ್ಷಗಳ ಪ್ರಕಾಶವಿರುತ್ತದೆ ಆ ಪ್ರಕಾರ ನರಕಗಳಲ್ಲಿ ಪ್ರಕಾಶವಿರುವುದಿಲ್ಲ, ಅಲ್ಲಿಯ ಭೂಮಿಯು ಶೀತ ಅಥವಾ ಉಷ್ಣವಿರುತ್ತದೆ ಆದರೆ ಅಲ್ಲಿ ಅಂಧಕಾರವೇ ತುಂಬಿಕೊಂಡಿರುತ್ತದೆ. ನಾವು ಎಲ್ಲಿ ವಾಸಿಸುತ್ತಿದ್ದೇವೆ ಅದು ಪೃಥ್ವಿಯ ಮೇಲಿನ ಭಾಗವಿದೆ ಮತ್ತು ನರಕಗಳು ಈ ಪೃಥ್ವಿಗಳ ಒಳಗೆ ಇರುತ್ತವೆ.

ಪ್ರಶ್ನೆ :- ಭೂಮಿಯನ್ನು ಎಷ್ಟು ಯೋಜನ ಅಗೆದ ಮೇಲೆ ನರಕವು ದೊರಕುವುದು ?

ಉತ್ತರ :- ನರಕದಲ್ಲಿ ಹೋಗುವ ಸಲುವಾಗಿ ಒಂದು ಲಕ್ಷ ಯೋಜನವಂತೂ ಅಗೆಯಲೇಬೇಕಾಗುವುದು ಒಂದು ಯೋಜನವು ಕೂಡ ತುಂಬ ದೊಡ್ಡದಿರುತ್ತದೆ. ಆದರೆ ಅಗೆಯುತ್ತ ಅಗೆಯುತ್ತ ನರಕದಲ್ಲಿ ಹೋಗುವ ಅವಶ್ಯಕತೆಯಾದರೂ ಏನಿದೆ ? ನಮ್ಮ ಪರಿಣಾಮಗಳಿಂದಲೇ ನಾವು ಅನಂತ ಬಾರಿ ನರಕದಲ್ಲಿ ಹೋಗಿ ಬಂದಿದ್ದೇವೆ.

ರತ್ನಪ್ರಭಾಯೆಂಬ ಹೆಸರಿನ ಮೊದಲನೆಯ ಪೃಥ್ವಿಯ ಪ್ರಥಮ ಚಿತ್ರಾಭೂಮಿ-ಚಿತ್ರಾಪೃಥ್ವಿಯ ಮೇಲೆ ನಾವು ಇದ್ದೇವೆ. ಅದು ಸ್ಫಟಿಕದ ರತ್ನಗಳಿಂದ ನಿರ್ಮಿತವಿದೆ, ಆದರೆ ಈಗ ಅದರ ಮೇಲೆ ಧೂಳು-ಮಣ್ಣು ಬೆಳೆದು ಬಿಟ್ಟಿದೆ. ಎಲ್ಲಿ ಸಮ್ಮೇದ ಶಿಖರವಿದೆ ಅಲ್ಲಿ ಆ ಚಿತ್ರಾ ಪೃಥ್ವಿಯಲ್ಲಿ ಸ್ವಸ್ತಿಕವು ರಚಿತವಿದೆ. ಯಾವಾಗ ಆರನೇ ಕಾಲದ ಕೊನೆಯಲ್ಲಿ ಪ್ರಲಯವಾಗುತ್ತದೆ ಆಗ ಸಮಸ್ತ ಧೂಳು-ಮಣ್ಣು ಹಾರಿಹೋಗಿ ಪೃಥ್ವಿಯು ರತ್ನಗಳ ಹಾಗೆ ಸ್ವಚ್ಛವಾಗಿ ಬಿಡುತ್ತದೆ.

ಪ್ರಶ್ನೆ :- ನರಕಗಳಲ್ಲಿ ಅಂಧಕಾರವಿದೆಯೆಂದ ಮೇಲೆ ನಾರಕಿಗಳು ಹೇಗೆ ನೋಡುತ್ತಾರೆ ?

ಉತ್ತರ :- ಹೇಗೆ ಬೆಕ್ಕು, ಹುಲಿ, ಸಿಂಹ ಮೊದಲಾದ ಪ್ರಾಣಿಗಳು ಅಂಧಕಾರದಲ್ಲಿ ನೋಡುವ ಸಾಧ್ಯತೆಯಿದೆ ಹಾಗೆಯೇ ನಾರಕಿಗಳು ಕೂಡ ಅಂಧಕಾರದೊಳಗೆ ನೋಡಬಹುದಾಗಿದೆ.

ಪ್ರಶ್ನೆ :- ಅಲ್ಲಿ ಯಾವ ಕಾಲವು ನಡೆಯುತ್ತದೆ ?

ಉತ್ತರ :- ಯಾವ ಪ್ರಕಾರ ವಿದೇಹ ಕ್ಷೇತ್ರದಲ್ಲಿ ಯಾವಾಗಲೂ ಚತುರ್ಥಕಾಲವು ನಡೆಯುತ್ತದೆ, ಸ್ವರ್ಗಗಳಲ್ಲಿ ಮೊದಲನೇ ಕಾಲವು ನಡೆಯುತ್ತದೆ ಅದೇ ಪ್ರಕಾರ ನರಕಗಳಲ್ಲಿ ಯಾವಾಗಲೂ ಆರನೇ ಕಾಲವು ನಡೆಯುತ್ತದೆ. ಇಲ್ಲಿ ಭರತ ಮತ್ತು ಐರಾವತ ಕ್ಷೇತ್ರಗಳ ಆರ್ಯ ಖಂಡಗಳಲ್ಲಿ ಆರೂ ಕಾಲಗಳು ನಡೆಯುತ್ತವೆ. ಭೋಗಭೂಮಿಯಲ್ಲಿ ಕೆಲವು ಕಡೆಗೆ ಮೊದಲನೆಯ, ಕೆಲವು ಕಡೆಗೆ ಎರಡನೆಯ, ಕೆಲವು ಕಡೆಗೆ ಮೂರನೆಯ ಕಾಲವಿರುತ್ತದೆ. ಏಕೆಂದರೆ ಉತ್ತಮ, ಮಧ್ಯಮ, ಜಘನ್ಯ ಭೋಗ ಭೂಮಿಗಳಲ್ಲಿ ಅವು ಕ್ರಮದಿಂದ ಕಂಡು ಬರುತ್ತವೆ. ನರಕಗಳಲ್ಲಿ ಕೇವಲ ದುಃಖರೂಪ ಸಂಯೋಗಗಳ ಅಪೇಕ್ಷೆಯಿಂದ ಆರನೆಯ ಕಾಲವೆನ್ನಲಾಗಿದೆ, ಆಯು ಅಥವಾ ಶರೀರದ ಅಪೇಕ್ಷೆಯಿಂದ ಹೇಳಲಾಗಿಲ್ಲ.

ಭರತಕ್ಷೇತ್ರದ ಆರ್ಯಖಂಡದಲ್ಲಿ ಅವಸರ್ಪಿಣಿಯ ಆರು ಮತ್ತು ಉತ್ಸರ್ಪಿಣಿಯ ಆರು ಕಾಲಗಳಿರುತ್ತವೆ. ಅವಸರ್ಪಿಣಿಯ ಮೊದಲನೆಯ ಕಾಲವಾದ ಉತ್ತಮ ಭೋಗ ಭೂಮಿಯು ೪ ಕೋಟಾಕೋಟಿ ಸಾಗರದ್ದಿದೆ. ಇದನ್ನು ಸುಷಮಾ ಸುಷಮಾ ಅಥವಾ ಸುಖಮಾ ಸುಖಮಾ ಎಂದು ಹೇಳುತ್ತಾರೆ. ಎರಡನೆಯ ಕಾಲವಾದ ಮಧ್ಯಮ ಭೋಗಭೂಮಿಯು ೩ ಕೋಟಾಕೋಟಿ ಸಾಗರದ್ದಿದೆ, ಇದನ್ನು ಸುಷಮಾ ಎಂದು ಹೇಳುತ್ತಾರೆ. ಮೂರನೆಯ ಕಾಲವಾದ ಜಘನ್ಯ ಭೋಗಭೂಮಿಯು ೨ ಕೋಟಾಕೋಟಿ ಸಾಗರದ್ದಿದೆ, ಇದನ್ನು ಸುಷಮಾ ದುಷಮಾ ಎಂದು ಹೇಳುತ್ತಾರೆ. ಅದರ ನಂತರ ಇಲ್ಲಿ ಕರ್ಮಭೂಮಿಯು ಪ್ರಾರಂಭವಾಗುತ್ತದೆ. ಈ ನಾಲ್ಕನೆಯ ಕಾಲವನ್ನು ದುಷಮಾ ಸುಷಮಾ ಎಂದು ಹೇಳುತ್ತಾರೆ. ಮೋಕ್ಷಕ್ಕೆ ಹೋಗುವ-ಶ್ರೇಣಿಯ ಆರೋಹಣೆಯ ಪುರುಷಾರ್ಥವು ಇದೇ ಕಾಲದಲ್ಲಿ ಆಗುವ ಸಾಧ್ಯತೆಯಿದೆ. ನರಕದ ದ್ವಾರವು ಇಲ್ಲಿ ತೆರೆಯಲ್ಪಡುತ್ತದೆ, ಏಕೆಂದರೆ ಭೋಗಭೂಮಿಯ ಜೀವಗಳೆಲ್ಲರೂ ಮರಣಹೊಂದಿ ದೇವಗಳಲ್ಲಿಯೇ ಉತ್ಪನ್ನರಾಗುತ್ತಾರೆ. ಈ ನಾಲ್ಕನೆಯ ಕಾಲವು ೪೨೦೦೦ ವರ್ಷ ಕಡಿಮೆ ಒಂದು ಕೋಟಾಕೋಟಿ ಸಾಗರದ್ದಿದೆ. ಐದನೆಯ ಕಾಲವು ೨೧೦೦೦ ವರ್ಷ ಮತ್ತು ಆರನೆಯ ಕಾಲವು ಕೂಡ ೨೧೦೦೦ ವರ್ಷಗಳದ್ದಿರುತ್ತದೆ. ಇವುಗಳ ಹೆಸರು ಕ್ರಮದಿಂದ ದುಷಮಾ ಹಾಗೂ ದುಷಮಾ ದುಷಮಾ ಇದೆ. ಇದನ್ನು ವಿರುದ್ಧವಾಗಿ ಎಣಿಸಿದರೆ ಉತ್ಸರ್ಪಿಣಿಯ ಆರು ಕಾಲಗಳಾಗುತ್ತವೆ. ಎಲ್ಲ ಸೇರಿ ಅವಸರ್ಪಿಣಿಯ ಕಾಲವು ೧೦ ಕೋಟಾಕೋಟಿ ಸಾಗರ ಮತ್ತು ಉತ್ಸರ್ಪಿಣಿಯ ಕಾಲವು ಕೂಡ ೧೦ ಕೋಟಾಕೋಟಿ ಸಾಗರದ್ದಿರುತ್ತದೆ. ಇವೆರಡೂ ಸೇರಿ ಒಂದು ಕಲ್ಪಕಾಲವಾಗುತ್ತದೆ ಎಂದರೆ ೨೦ ಕೋಟಾಕೋಟಿ ಸಾಗರದ್ದು ೧ ಕಲ್ಪಕಾಲವಾಗುತ್ತದೆ.

ಉತ್ಸರ್ಪಿಣಿಯ ಅಂತಿಮ ತೀರ್ಥಂಕರರು ನಿರ್ವಾಣಕ್ಕೆ ಪ್ರಾಪ್ತರಾದ ಮೇಲೆ ಅವಸರ್ಪಿಣಿಯ ಪ್ರಥಮ ತೀರ್ಥಂಕರರು ಎಷ್ಟು ಕಾಲದ ನಂತರ ಆಗುತ್ತಾರೆಂಬುದು ಗೊತ್ತಿದೆಯೇನು ? ಇಲ್ಲಿ ನಮ್ಮ ಮೊದಲನೆಯ ತೀರ್ಥಂಕರ ಆದಿನಾಥ ಭಗವಂತರು ಎಷ್ಟು ಕಾಲವು ಕಳೆದು ಹೋದ ಮೇಲೆ ಆಗಿದ್ದಾರೆ ?

- ಇಲ್ಲಿ ಉತ್ಸರ್ಪಿಣಿಯ ಮೂರು ಮತ್ತು ಅವಸರ್ಪಿಣಿಯ ಮೂರು ಭೋಗಭೂಮಿಗಳ ಕಾಲವು ಎಂದರೆ ೧೮ ಕೋಟಾಕೋಟಿ ಸಾಗರದ ಸುದೀರ್ಘ ಕಾಲದ ನಂತರ ಋಷಭದೇವ ತೀರ್ಥಂಕರರಾದರು. ಅವರಿಗಿಂತ ಮೊದಲು ಇಷ್ಟು ಕಾಲದವರೆಗೆ ಭರತಕ್ಷೇತ್ರದಿಂದ ಯಾರೂ ಮೋಕ್ಷಕ್ಕೆ ಹೋಗಿರಲಿಲ್ಲ. ಮುನಿ ಅಥವಾ ಪಂಚಮ ಗುಣಸ್ಥಾನವರ್ತಿಗಳೂ ಆಗಿರಲಿಲ್ಲ. ಆದಿನಾಥ ಭಗವಂತರ ಕಾಲದಲ್ಲಿ ಮೋಕ್ಷಗಮನವು ಪ್ರಾರಂಭವಾಯಿತು. ಆದುದರಿಂದ ಅವರನ್ನು ಆದಿಪುರುಷರೆಂದು ಹೇಳುತ್ತಾರೆ. ಭಗವಾನ ಮಹಾವೀರರ ಕಾಲದಲ್ಲಿ ಶ್ರೇಣಿಕ ದೊರೆಯಿದ್ದನು. ಅವನು ೮೪೦೦೦ ವರ್ಷದ ನರಕಾಯುವನ್ನು ಭೋಗಿಸಿ ಉತ್ಸರ್ಪಿಣಿಯ ಪ್ರಥಮ ತೀರ್ಥಂಕರನಾಗುವನು ಅರ್ಥಾತ್ ಅವಸರ್ಪಿಣಿಯ ಐದನೆಯ, ಆರನೆಯ ಮತ್ತು ಉತ್ಸರ್ಪಿಣಿಯ ಆರನೆಯ, ಐದನೆಯ ಕಾಲವು ಕಳೆದುಹೋದ ಮೇಲೆ ಅವನು ಇದೇ ಭರತಕ್ಷೇತ್ರದ ನಾಲ್ಕನೆಯ ಕಾಲದಲ್ಲಿ ಜನ್ಮ ಪಡೆದು ಉತ್ಸರ್ಪಿಣಿ ಕಾಲದ ಪ್ರಥಮ ತೀರ್ಥಂಕರನಾಗುವನು. ಎಲ್ಲ ಗಣಿತವಂತೂ ಸರಿಯಾಗಿ ಹೋಯಿತೆಂದು ತಮಗೆನಿಸಬಹುದಾಗಿದೆ. ಇದೆಲ್ಲವೂ ಹೀಗೆಯೇ ಸಹಜವಿದೆ. ನಾವು ಯಾವುದನ್ನೂ ವಿಚಾರ ಮಾಡಿ ತಿಳಿದುಕೊಂಡು ಇದರಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಮಾಡಬೇಕಾದ ಅವಶ್ಯಕತೆಯಿಲ್ಲ. ಯಾವಾಗ, ಏಲ್ಲಿ, ಏನಾಗಬೇಕಾಗಿದೆಯೋ ಆವಾಗ, ಅಲ್ಲಿ ಅದುವೇ ಆಗುತ್ತದೆ. ಒಂದು ವೇಳೆ ನಮ್ಮ ಹತ್ತು ಭವಗಳು ಶೇಷವಿದ್ದರೆ, ಆ ಹತ್ತು ಭವಗಳನ್ನು ಧಾರಣ ಮಾಡಿದ ನಂತರವೇ ನಮ್ಮ ಮೋಕ್ಷವಾಗುವುದು. ಯಾವುದೋ ಜೀವವು ಈಗ ಇನ್ನೂ ಏಕೇಂದ್ರಿಯ ಪರ್ಯಾಯದಲ್ಲಿ ಎಲ್ಲೋ ಬಿದ್ದುಕೊಂಡಿದ್ದರೂ ಅದು ಒಂದು ಭವ ಧಾರಣ ಮಾಡಿ ಅಲ್ಪ ಕಾಲದಲ್ಲಿ ಮೋಕ್ಷಕ್ಕೆ ಹೋಗುವಂಥದ್ದಿದ್ದರೆ ನಿಶ್ಚಿತವಾಗಿಯೇ ಆ ಜೀವಕ್ಕೆ ಅಂಥ ಪರಿಣಾಮಗಳಾಗುವವು ಮತ್ತು ಮನುಷ್ಯಾಯು ಮೊದಲಾದ ಯಥಾಯೋಗ್ಯ ಪ್ರಕೃತಿಗಳ ಬಂಧ ಮಾಡಿಕೊಂಡು ಆ ಜೀವನು ಮನುಷ್ಯನಾಗಿ ಯಥಾ ಸಮಯದಲ್ಲಿ ಮೋಕ್ಷವನ್ನು ಪ್ರಾಪ್ತ ಮಾಡಿಕೊಂಡೇ ತೀರುತ್ತಾನೆ.

ನಮಗಂತೂ ನಾನು ಸತ್ತು ಹೋದರೆ ? ಎಂಬ ಭಯವು ಕಾಡುತ್ತಿದೆ. ಮುಖದಿಂದಂತೂ ನಮಗೆ ಮೋಕ್ಷಕ್ಕೆ ಹೋಗುವುದಿದೆಯೆಂದು ಹೇಳುತ್ತೇವೆ ಮತ್ತು ಈ ಭವದ ಕೊನೆಯಾಗುವುದರ ಭಯದಿಂದ ಯಾವಾಗಲೂ ಭಯಭೀತರಿದ್ದೇವೆ ! ಮೋಕ್ಷಕ್ಕೆ ಹೋಗುವುದರ ಪೂರ್ವದ ಭವಗಳೊಳಗಿನ ಒಂದು ಭವವು ಕಡಿಮೆಯಾಗಿ ಹೋಗುತ್ತದೆಯಲ್ಲ, ಇದರಲ್ಲಿ ದುಃಖವಾದರೂ ಏನಿದೆ ?

ಭವಗಳು ಬೇಕಾದರೆ ಎಷ್ಟಿವೆಯೋ ಅಷ್ಟೇ ಇರಲಿ, ಆದರೆ ಈ ಭವದ ಆಯುವನ್ನು ಹೆಚ್ಚಿಸಬಹುದಾಗಿಯೋ ಅಥವಾ ಇಲ್ಲ ? ವಿದೇಶದಲ್ಲಿ ಚಿಕಿತ್ಸೆ ಪಡೆದು ಮರಣವನ್ನು ಮುಂದಕ್ಕೆ ಹಾಕಬಹುದಾಗಿದೆ, ಅಲ್ಲವೇನು ?

ಈ ಮನ್ನಣೆಯು ಎಂಥದ್ದಿದೆ ಗೊತ್ತೇನು ? ನಾವು ಅನ್ಯಕರ್ಮಗಳನ್ನಂತೂ ನಾಶ ಮಾಡಲು ಬಯಸುತ್ತೇವೆ; ಆದರೆ ಆಯು ಕರ್ಮವನ್ನು ಇರಿಸಿಕೊಳ್ಳಲು-ಉಳಿಸಿಕೊಳ್ಳಲು ಬಯಸುತ್ತೇವೆ. ಶಾಸ್ತ್ರದಲ್ಲಿ ಆಯುಕರ್ಮಕ್ಕೆ ಕಾರಾಗೃಹ ಹಾಗೂ ಸಂಕೋಲೆಯ ಉಪಮೆ ಕೊಟ್ಟಿದ್ದಾರೆ. ಇದು ನಮ್ಮನ್ನು ಆ ವಿವಕ್ಷಿತ ಪರ್ಯಾಯದಿಂದ ಬಿಡುಗಡೆಯಾಗಗೊಡುವುದಿಲ್ಲ. ಒಂದು ವೇಳೆ ಕಾರಾಗೃಹದ (ಸೆರೆಮನೆಯ) ಗೋಡೆಯು ಕುಸಿದರೆ ಕೈದಿಯು ಓಡಿ ಹೋಗುತ್ತಾನೆಂಬ ಲೌಕಿಕ ಮಾತು ನಮಗೆ ತಿಳಿದಿದೆ ಆದರೆ ಇಲ್ಲಿ ನಾವು ಅದೆಂಥ ಬುದ್ಧಿವಂತರಿದ್ದೇವೆಂದರೆ

ಈ ಕಾರಾಗೃಹವನ್ನು-ಶರೀರವನ್ನು ಅಲಂಕರಿಸುವ-ಪುಷ್ಟವಾಗಿ (ಗಟ್ಟಿಮುಟ್ಟಾಗಿ) ಇಟ್ಟುಕೊಳ್ಳುವ ಪ್ರಯತ್ನದಲ್ಲಿ ಇಡೀ ಜೀವನವನ್ನೇ ಮುಡುಪಾಗಿ ಇಟ್ಟಿದ್ದೇವೆ, ಮತ್ತು ಒಂದು ವೇಳೆ ಈ ಸೆರೆಮನೆಯ ವಾಸವು ಬಿಟ್ಟು ಹೋಗುವಂಥ ಸನ್ನಿವೇಶವು ಬಂದು ಬಿಟ್ಟರೆ ವೈದ್ಯರ ಹತ್ತಿರ ಹೋಗಿ ಇದರ ದುರಸ್ತಿ (ರಿಪೇರಿ) ಮಾಡುತ್ತೇವೆ. ಅಲ್ಲದೆ ಈ ಶರೀರವು ಉಳಿದುಕೊಂಡರೆ ನಾವು ಮೋಕ್ಷದ ಪುರುಷಾರ್ಥ ಮಾಡಬಹುದಾಗಿದೆ, ಈ ಶರೀರವು ನಮಗೆ ಮೋಕ್ಷದ ಪ್ರಾಪ್ತಿ ಮಾಡಿಸಿಕೊಡುವಂಥದ್ದಿದೆ-ಎಂಬ ಮಾತುಗಳ ವಿನಿಮಯವನ್ನು ಪರಸ್ಪರರಲ್ಲಿ ಮಾಡುತ್ತೇವೆ. ಅಯ್ಯಾ ಚೇತನನೇ ! ಜ್ಞಾನ ಸ್ವಭಾವದ ಜೀವನೇ ! ಈ ಜಡ ಅಚೇತನ ಶರೀರವು ನಿನಗೆ ಮೋಕ್ಷವನ್ನು ಎಲ್ಲಿಂದ ಮತ್ತು ಹೇಗೆ ಕೊಡುವ ಸಾಧ್ಯತೆಯಿದೆ ?

ಪ್ರಶ್ನೆ :- ವರ್ತಮಾನ ಕಾಲದ ೨೪ ತೀರ್ಥಂಕರರೆಲ್ಲರೂ ಸ್ವರ್ಗದಿಂದ ಬಂದಿದ್ದಾರೆ ಮತ್ತು ಭವಿಷ್ಯಕಾಲದ ತೀರ್ಥಂಕರರು ನರಕದಿಂದಲೂ ಬರುವವರಿದ್ದಾರೆ ಹೀಗೇಕೆ ?

ಉತ್ತರ :- ಅದರಲ್ಲಿ ಯಾವ ವಿಶೇಷತೆಯೂ ಇರುವುದಿಲ್ಲ. ಸ್ವರ್ಗದಿಂದ ಬರಲಿ ಅಥವಾ ನರಕದಿಂದ ಬರಲಿ; ತೀರ್ಥಂಕರರಂತೂ ತೀರ್ಥಂಕರರೇ ಇರುತ್ತಾರೆ. ಸ್ವರ್ಗದಿಂದ ಬಂದಿರುವುದರಿಂದ ದೊಡ್ಡವರು - ಮಹಾನ ಮತ್ತು ನರಕದಿಂದ ಬರುವ ಕಾರಣ ಚಿಕ್ಕವರು - ಹೀನರಿರಬೇಕು ಹೀಗೇನು ಇರುವುದಿಲ್ಲ.

ಪ್ರಶ್ನೆ :- ಕ್ಷಾಯಿಕ ಸಮ್ಯಗ್ದೃಷ್ಟಿಯು ಪ್ರಥಮ ನರಕದಲ್ಲಿ ಹೋಗುತ್ತಾನೆ, ಅಲ್ಲಿ ಅವನ ವ್ಯವಹಾರವು ಎಂಥದ್ದಿರುತ್ತದೆ ? ಇಲ್ಲಿಯೂ ಸಮ್ಯಗ್ದೃಷ್ಟಿಯ ವ್ಯವಹಾರವು ಎಂಥದ್ದಿರುತ್ತದೆ.

ಉತ್ತರ :- ನಾವು ಬಾಹ್ಯ ಕ್ರಿಯೆಗಳ ಆಧಾರದಿಂದ ಸಮ್ಯಗ್ದೃಷ್ಟಿಯನ್ನು ಗುರುತಿಸಲು ಬಯಸುತ್ತಿರುವುದು ಸರಿಯಿಲ್ಲ. ನಾಲ್ಕನೆಯ ಗುಣಸ್ಥಾನವುಳ್ಳ ಅವಿರತ ಸಮ್ಯಗ್ದೃಷ್ಟಿಯು ಅಸಂಯಮಿಯಿರುತ್ತಾನೆ. ಅಲ್ಲಿಯೂ ರಾಗ-ದ್ವೇಷದ ಪರಿಣಾಮಗಳಾಗುತ್ತವೆ. ಆದರೆ ಅವನು ಸ್ವಯಂ ತನ್ನನ್ನು ರಾಗ-ದ್ವೇಷಗಳಿಂದ ಭಿನ್ನನಾಗಿ ತಿಳಿಯುತ್ತಾನೆ, ಅನುಭವ ಮಾಡುತ್ತಾನೆ, ಅಂಥದೇ ಪ್ರತೀತಿಯು ಉಳಿದುಕೊಂಡಿರುತ್ತದೆ. ತನ್ನಲ್ಲಿ ಆಗುತ್ತಿರುವಂಥ ರಾಗ-ದ್ವೇಷಗಳ ಸ್ವಾಮಿತ್ವವು ಅವನಿಗೆ ಇರುವುದಿಲ್ಲ. ಅವನಿಗೆ ಬೇಕಾದರೆ ಕ್ರೋಧವು ಬರುತ್ತಿರುತ್ತದೆ, ಆದರೆ ಬಾಹ್ಯ-ವ್ಯವಹಾರದಿಂದ ಯಾರ ಪರಿಚಯವೂ ಆಗುವ ಸಾಧ್ಯತೆಯಿಲ್ಲ, ಏಕೆಂದರೆ ಅಭಿಪ್ರಾಯದ ಅನುಸಾರ ಬಾಹ್ಯದ ವ್ಯವಹಾರವು ಬದಲಾಗಲೇಬೇಕು - ಎಂಬ ನಿಯಮವಿಲ್ಲ. ಯಾವಾಗ ಅಂತರಂಗದಲ್ಲಿ ಸ್ಥಿರತೆಯು ಹೆಚ್ಚುತ್ತದೆ, ಅಂಥ ಮೇಲಿನ ಗುಣಸ್ಥಾನಗಳಲ್ಲಿ ಬಾಹ್ಯ ದಶೆಯ ಪರಿವರ್ತನೆಯು ಕೂಡ ಆಗುತ್ತದೆ. ನಮ್ಮ ದೃಷ್ಟಿಯು ಬಾಹ್ಯದ ಮೇಲೆಯೇ ನಿಂತುಕೊಂಡಿದೆ. ನಾವು ದಿಶೆಯ ಪರಿವರ್ತನೆಯನ್ನು ಬಯಸುವುದಿಲ್ಲ ಕೇವಲ ದಶೆಯನ್ನು ಬದಲಿಸಲಿಚ್ಛಿಸುತ್ತೇವೆ. ಅಭಿಪ್ರಾಯದಲ್ಲಿಯಂತೂ ಆ ಸಮ್ಯಗ್ದೃಷ್ಟಿ ನಾರಕಿ ಜೀವನಿಗೆ ಕೂಡ ನಾನು ಜೀವನಿದ್ದೇನೆ, ಜ್ಞಾಯಕನಿದ್ದೇನೆಂಬ ಪ್ರತೀತಿ ಹಾಗೂ ಅನುಭವವು ನಡೆದಿರುತ್ತದೆ, ಆದರೆ ಅಧಿಕ ಪ್ರಮಾಣದಲ್ಲಿ ಸ್ಥಿರತೆಯಿರುವುದಿಲ್ಲ. ಅವರಿಗೆ ಅನಂತಾನುಬಂಧಿಯ ಸದ್ಭಾವವು ಇಲ್ಲವೇ ಇಲ್ಲ ಆದರೆ ಮೂರು ಕಷಾಯ ಚೌಕಡಿಗಳು ಇನ್ನೂ ವಿದ್ಯಮಾನವಿವೆ ಮತ್ತು ಆ ಉದಿಸಿ ಬರುವಂಥ ರಾಗಾದಿಗಳ ಸ್ವಾಮಿಯೂ ಅವನು ಇರುವುದಿಲ್ಲ. ಮುನಿರಾಜರುಗಳಿಗೆ ಸ್ಥಿರತೆಯು ಅಧಿಕವಿರುತ್ತದೆ ಮತ್ತು ಮೂರು ಕಷಾಯ ಚೌಕಡಿರೂಪದ ರಾಗವು ಅವರಲ್ಲಿ ಉತ್ಪನ್ನವಾಗುವುದೇ ಇಲ್ಲ. ಕೇವಲ ಒಂದು ಸಂಜ್ವಲನದ ಉದಯರೂಪ ರಾಗವು ಅವರಲ್ಲಿ ಕಂಡು ಬರುತ್ತದೆ.

ಪ್ರಶ್ನೆ :- ನಾರಕೀ ಜೀವಗಳ ಅವಧಿಜ್ಞಾನವು ಕುಅವಧಿ ಇರುತ್ತದೆಯಲ್ಲವೇನು ?

ಉತ್ತರ :- ಸಮ್ಯಗ್ದೃಷ್ಟಿ ನಾರಕಿಗಳಿಗೆ ಸುಅವಧಿಜ್ಞಾನವಿರುತ್ತದೆ ಮತ್ತು ಮೊದಲನೇ ಹಾಗೂ ಎರಡನೇ ಗುಣಸ್ಥಾನವುಳ್ಳವರಿಗೆ ಕುಅವಧಿ ಅರ್ಥಾತ್ ವಿಭಂಗಜ್ಞಾನವಿರುತ್ತದೆ. ದೇವ ಮತ್ತು ನಾರಕಿಗಳಿಗೆ ಆ ಭವದಲ್ಲಿ ಅವಧಿಜ್ಞಾನವು ಇದ್ದೇ ಇರುತ್ತದೆ ಆದುದರಿಂದ ಅದನ್ನು ಭವಪ್ರತ್ಯಯ ಅವಧಿಜ್ಞಾನವೆಂದು ಹೇಳುತ್ತಾರೆ.

ಇನ್ನು ಈ ಅವಧಿಜ್ಞಾನದ ಕ್ಷೇತ್ರವು ಎಷ್ಟಿರುತ್ತದೆಯೆಂಬುದನ್ನು ನೋಡೋಣ.

ಮೊದಲನೆಯ ಪೃಥ್ವಿಯ ನಾರಕಿಗಳಲ್ಲಿ ಅವಧಿಜ್ಞಾನದ ಕ್ಷೇತ್ರವು ನಾಲ್ಕು ಹರದಾರಿಯಿರುತ್ತದೆ. ಅದು ಕ್ರಮದಿಂದ ಪ್ರತಿಯೊಂದು ಪೃಥ್ವಿಯಲ್ಲಿ ಅರ್ಧ-ಅರ್ಧ ಹರದಾರಿ ಕಡಿಮೆ-ಕಡಿಮೆಯಾಗುತ್ತ ಹೋಗುತ್ತದೆ ಅರ್ಥಾತ್ ದ್ವಿತೀಯ ಮೊದಲಾದ ಪೃಥ್ವಿಗಳಲ್ಲಿ ಕ್ರಮದಿಂದ ಮೂರೂವರೆ, ಮೂರು, ಎರಡೂವರೆ, ಎರಡು, ಒಂದೂವರೆ ಮತ್ತು ಒಂದು ಹರದಾರಿ ಅವಧಿಕ್ಷೇತ್ರವಾಗುತ್ತದೆ. ಏಳನೇ ನರಕದ ನಾರಕಿಗಳಲ್ಲಿ ಅವಧಿಕ್ಷೇತ್ರದ ಮರ್ಯಾದೆಯು ಒಂದು ಹರದಾರಿಯಿದೆ.

ಪ್ರಶ್ನೆ :- ಐದನೆಯ ಮತ್ತು ಆರನೆಯ ಕಾಲದಲ್ಲಿ ಧರ್ಮದ ಲೋಪವಾಗಿ ಹೋಗುವುದೇನು ?

ಉತ್ತರ :- ಈಗ ನಾವು ಅವಸರ್ಪಿಣಿಯ ಐದನೇ-ದುಖಮಾ ಕಾಲದಲ್ಲಿ ಇದ್ದೇವೆ. ಈ ಐದನೆಯ ಕಾಲದ ಕೊನೆಯವರೆಗೆ ಧರ್ಮವು ಉಳಿಯುವುದು. ಕೊನೆಯಲ್ಲಿ ವೀರಾಂಗದ ಮುನಿ, ಸರ್ವಶ್ರೀಯೆಂಬ ಹೆಸರಿನ ಆರ್ಯಿಕೆ, ಅಗ್ನಿಲನೆಂಬ ಹೆಸರಿನ ಶ್ರಾವಕ ಮತ್ತು ಪಂಗುಸೇನೆಯೆಂಬ ಹೆಸರಿನ ಶ್ರಾವಕಿಯರಾಗುವರು. ಪಂಚಮಕಾಲದ ಕೊನೆಯಲ್ಲಿ ಅವರು ಸಂನ್ಯಾಸ ಮರಣದಿಂದ ಸತ್ತು ಸೌಧರ್ಮ ಸ್ವರ್ಗದಲ್ಲಿ ಉತ್ಪನ್ನರಾಗುವರು. ಅದರ ನಂತರ ಧರ್ಮದ ಲೋಪವಾಗುವುದು. ಆರನೆಯ ಕಾಲದ ಕೊನೆಯಲ್ಲಿ ಪ್ರಲಯವಾಗುವುದು. ನಂತರ ಉತ್ಸರ್ಪಿಣಿಯ ಮೊದಲನೆಯ ಕಾಲವು (ನಮ್ಮ ಆರನೆಯ ಕಾಲದ) ಸಮಾನ ಮತ್ತು ಎರಡನೆಯ ಕಾಲವು (ನಮ್ಮ ಪಂಚಮ ಕಾಲದ ಸಮಾನ) ಆಗುವುದು, ಆ ದುಖಮಾ ಕಾಲದ ಕೊನೆಯ ೧೦೦೦ ವರ್ಷಗಳು ಶೇಷ ಉಳಿದ ಮೇಲೆ ಕ್ರಮದಿಂದ ಹದಿನಾಲ್ಕು ಕುಲಂಕರರ ಉತ್ಪತ್ತಿಯಾಗುವುದು, ಅವರು ಜೀವರುಗಳಿಗೆ ಹೇಗೆ ಇರಬೇಕು, ಎಂಥ ಆಚರಣೆ ಮಾಡಬೇಕು ಪರಸ್ಪರರಲ್ಲಿ ಯಾವ ರೀತಿ ವ್ಯವಹರಿಸಬೇಕು ಎಂಬಿವೇ ಮೊದಲಾದವುಗಳ ಕುರಿತಾಗಿ ಕಲಿಸಿ ಕೊಡುತ್ತಾರೆ.

ಪ್ರಶ್ನೆ :- ಅಲೋಕಾಕಾಶದಲ್ಲಿ ಅಂಧಕಾರವಿರುತ್ತದೆಯೋ ಅಥವಾ ಪ್ರಕಾಶವಿರುತ್ತದೆ ?

ಉತ್ತರ :- ಅಂಧಕಾರ, ಪ್ರಕಾಶವಂತೂ ಪುದ್ಗಲವಿದೆ. ಅಲೋಕಾಕಾಶದಲ್ಲಿಯಂತೂ ಕೇವಲ ಆಕಾಶ ದ್ರವ್ಯವೇ ಇರುತ್ತದೆ. ಅಲ್ಲಿ ಪುದ್ಗಲ ದ್ರವ್ಯವೇ ಇರುವುದಿಲ್ಲ. ಅಲ್ಲಿ ಅಂಧಕಾರವೂ ಇರುವುದಿಲ್ಲ ಮತ್ತು ಪ್ರಕಾಶವೂ ಇರುವುದಿಲ್ಲ. ಉಳಿದ ಪ್ರಶ್ನೆಗಳ ಉತ್ತರವನ್ನು ಯಥಾ ಸಮಯ ನೋಡಲಾಗುವುದು.

ವಿದೇಹಕ್ಷೇತ್ರದಲ್ಲಿ ವಿರಾಜಮಾನರಿರುವ ನಾಲ್ಕನೆಯ ತೀರ್ಥಂಕರ
ಭಗವಂತ ಶ್ರೀ ಸುಬಾಹು ಸ್ವಾಮಿಗೆ ಜಯವಾಗಲಿ

★★★★★

೫. ಶಲಾಕಾ ಪುರುಷರು, ಅನ್ಯ ಸಂದೇಹ-ಸಮಾಧಾನ

ಇಲ್ಲಿ ತ್ರಿಲೋಕಸಾರದ ಆಧಾರದಿಂದ ಮೂರು ಲೋಕಗಳ ಸ್ವರೂಪವನ್ನು ನೋಡುತ್ತಿದ್ದೇವೆ-ತಿಳಿಯುತ್ತಿದ್ದೇವೆ. ತ್ರಿಲೋಕವೆನ್ನಿರಿ ಅಥವಾ ಮೂಲೋಕವೆನ್ನಿರಿ ಎಲ್ಲವೂ ಒಂದೇ ಇದೆ. ಆರು ಗುರಾಣಿಗಳ ಮಂಗಲಾಚರಣೆಯಲ್ಲಿ ಅದನ್ನೇ ಹೇಳಿದ್ದಾರೆ,-

ಮೂರುಲೋಕದಿ ವೀತರಾಗವು ಸಾರವಿದೆ ವಿಜ್ಞಾನತೆಯು ಮೇಣ್
ತೋರುವೊಡೆ ಶಿವಕಾರ ಶಿವಸ್ವರೂಪವಾಗಿಹುದು
ಸಾರಿ ಅರಹಂತಾದಿ ಸಿದ್ಧರು ಭೂರಿ ವೈಭವದಿಂದ ಮರೆವರು
ಮೂರು ಯೋಗಗಳಿಂದ ನಮಿಸುವೆ ನಾನು ಅದಕೀಗ

ಮೂರು ಲೋಕದಿ-ಈ ಲೋಕದಲ್ಲಿ ಆರು ದ್ರವ್ಯಗಳು ಕಂಡು ಬರುತ್ತವೆ. ಜೀವಗಳು ಅನಂತವಿವೆ, ಪುದ್ಗಲಗಳು ಅನಂತಾನಂತವಿವೆ, ಧರ್ಮ-ಅಧರ್ಮ-ಆಕಾಶಗಳು ಒಂದೊಂದು ಇವೆ, ಕಾಲದ್ರವ್ಯಗಳು ಅಸಂಖ್ಯಾತವಿವೆ. ಆಕಾಶ ದ್ರವ್ಯವಂತೂ ಲೋಕ-ಅಲೋಕಗಳಲ್ಲಿ ಇದೆ. ಇವೆಲ್ಲವುಗಳಲ್ಲಿ ವೀತರಾಗ ವಿಜ್ಞಾನತೆಯು ಸಾರಭೂತವಿದೆ. ನಾವೆಲ್ಲರೂ ವೀತರಾಗ-ವಿಜ್ಞಾನ ಸ್ವರೂಪರಿದ್ದೇವೆ ಮತ್ತು ನಮ್ಮ ಆಶ್ರಯ ನಾವು ಮಾಡುವುದರಿಂದ ಪರ್ಯಾಯದಲ್ಲಿಯೂ ವೀತರಾಗ ವಿಜ್ಞಾನತೆಯು ಪ್ರಕಟವಾಗುತ್ತದೆ. ಯಾರು ಇಂಥ ವೀತರಾಗ ವಿಜ್ಞಾನತೆಯನ್ನು ಪ್ರಕಟ ಪಡಿಸಿಕೊಂಡಿದ್ದಾರೆ ಅಂಥ ಆ ಅರಹಂತ ಮತ್ತು ಸಿದ್ಧರಿಗೆ ಕೂಡ ನಾವು ಅವರ ಹಾಗೆ ಆಗುವ ಸಲುವಾಗಿ ನಮಸ್ಕಾರ ಮಾಡುತ್ತೇವೆ.

ಇಲ್ಲಿ ತ್ರಿಲೋಕಸಾರದ ಮಂಗಲಾಚರಣೆಯಲ್ಲಿ ಮೂರನೆಯ ಪದ್ಯದೊಳಗೆ 'ಮೂಲೋಕಗಳ ಸ್ಥಿತಿಯನ್ನು ತಿಳಿದು ತಾವು ತಮ್ಮೊಳು ರಮಿಸಿದರು' ಮೂರು ಲೋಕದ ಸ್ಥಿತಿ ಅರ್ಥಾತ್ ಸ್ವರೂಪವನ್ನು ತಿಳಿದುಕೊಂಡು, ಇಡೀ ವಿಶ್ವದ ಸ್ವರೂಪವನ್ನು ತಿಳಿದುಕೊಂಡು -ಎಂದು ಹೇಳಿದ್ದಾರೆ, ಹಾಗಾದರೆ ಅದನ್ನು ಏತಕ್ಕಾಗಿ ತಿಳಿಯುವುದು? ಅಯ್ಯಾ ! ತಿಳಿಯುವುದಂತೂ ನಮ್ಮ ಸ್ವಭಾವವಿದೆ. ತಿಳಿಯುವ ಸ್ವಭಾವದ ಜೀವನು ತನ್ನನ್ನೂ ತಿಳಿಯುತ್ತಾನೆ ಮತ್ತು ಪರವನ್ನೂ ತಿಳಿಯುತ್ತಾನೆ. ಯಾರಾದರೂ ಕೇವಲ ನಾನೇ ನಾನು ಇದ್ದೇನೆ, ಬೇರೆ ಯಾವುದೂ ಇಲ್ಲ, ಎಲ್ಲವೂ ಮಾಯೆಯಿದೆಯೆಂದು ಹೇಳುತ್ತಿದ್ದರೆ ಮತ್ತು ಅಂಥ ಭ್ರಾಮಕ ಕಲ್ಪನೆಯೊಂದಿಗೆ ತಮ್ಮ ಅನುಭವ ಮಾಡಬಯಸಿದರೆ ಅದು ಮೂರು ಕಾಲದಲ್ಲಿಯೂ ಆಗುವ ಸಾಧ್ಯತೆಯಿಲ್ಲ. ಯಾವವು ಇವೆ, ಯಾವವುಗಳ ಅಸ್ತಿತ್ವವಿದೆ ಹಾಗೂ ಯಾವ ವಸ್ತುಗಳು ಎಂಥವಿವೆ ಅವುಗಳ ಅಂಥ ಅಸ್ತಿತ್ವದ ಸ್ವೀಕಾರವು ಜ್ಞಾನದಲ್ಲಿ ಆಗಬೇಕಾಗುವುದು.

ಕರಣಾನುಯೋಗದ ವಿಷಯದಲ್ಲಿ ಯಾವ ಗಣಿತಗಳಿವೆ ಅವುಗಳದಂತೂ ಪರೀಕ್ಷೆ ಮಾಡಬಹುದಾಗಿದೆ. ಹೇಗೆಂದರೆ ದ್ವೀಪಗಳು-ಸಮುದ್ರಗಳ ಕ್ಷೇತ್ರಫಲ (ವಿಸ್ತೀರ್ಣ)ವನ್ನು ಕಂಡುಹಿಡಿಯುವುದಿದ್ದರೆ, ದುಂಡಗೆ, ಚಾಕಾಕಾರ, ತ್ರಿಕೋಣಾಕಾರ, ಶಂಖಾಕೃತಿಯ ವಿಸ್ತೀರ್ಣ ಕಂಡು ಹಿಡಿಯುವುದಿದ್ದರೆ ನಾವು ಕಂಡು ಹಿಡಿಯಬಹುದಾಗಿದೆ, ಅದರ ಸತ್ಯತೆಯ ಪರೀಕ್ಷೆ ಮಾಡುವ ಸಾಧ್ಯತೆಯಿದೆ. ಆದರೆ ಮೇರು ಪರ್ವತದ ಎತ್ತರವು ಎಷ್ಟಿದೆ, ನರಕದಲ್ಲಿ ಬಿಲಗಳು ಎಷ್ಟಿವೆ - ಎಂಬಿತ್ಯಾದಿಗಳ ಅಳತೆಯನ್ನು ನಾವು ಮಾಡುವ ಸಾಧ್ಯತೆಯಿಲ್ಲ.

ಇವುಗಳನ್ನು ಕೇವಲಿ ಪ್ರಭುವಿನ ವಾಣಿಯ ಅನುಸಾರವೇ ತಿಳಿದುಕೊಳ್ಳಬೇಕಾಗುವುದು - ಅದನ್ನು ಆಗಮ ಪ್ರಮಾಣವೆನ್ನುತ್ತಾರೆ. ಕೇವಲೀ ಭಗವಂತರು ಇವೆಲ್ಲ ವಸ್ತುಗಳನ್ನು ಪ್ರತ್ಯಕ್ಷ ತಿಳಿದುಕೊಂಡು ಹೇಳಿದ್ದಾರೆ ಮತ್ತು ಒಂದು ವೇಳೆ ಯಾರಿಗಾದರೂ ಅವರ ವಾಣಿಯ ವಿಶ್ವಾಸವಿಲ್ಲದಿದ್ದರೆ ಅವರಿಗೆ ಭಗವಂತರ ಸ್ವರೂಪದ್ದೂ ಕೂಡ ಶ್ರದ್ಧೆಯಿಲ್ಲವೆಂಬ ಮಾತು ನಿಶ್ಚಿತವಾಗುತ್ತದೆ.

ನಾವು ಶರೀರದ ಯಾವುದೋ ರೋಗ ಬಾಧೆಯಿಂದ ವ್ಯಾಕುಲರಾಗಿ ತಜ್ಞ ಡಾಕ್ಟರರ ಹತ್ತಿರ ತಪಾಸಣೆಗೆಂದು ಹೋದರೆ ಅವರು ರಕ್ತ ಪರೀಕ್ಷೆ ಮಾಡಿ ನಮಗೆ ರಕ್ತದಲ್ಲಿ ಸಕ್ಕರೆ ಪ್ರಮಾಣವು ಇಂತಿಷ್ಟು ಇದೆಯೆಂದು ಮೊದಲಾಗಿ ವರದಿ (ರಿಪೋರ್ಟ್) ಬರೆದು ಕೊಡುತ್ತಾರೆ. ಅದರ ಮೇಲೆ ಎಷ್ಟು ಅಂಶ ವಿಶ್ವಾಸ ಮಾಡುತ್ತೇವೆ ? ನೂರಕ್ಕೆ ನೂರು ಅಂಶ ಅಲ್ಲವೇನು ! ಆ ವರದಿ ಬರೆಯುವಂಥ ವ್ಯಕ್ತಿಯು ಬರೆಯುವಾಗ ಅಥವಾ ಟೈಪ ಮಾಡುವಾಗ ತಪ್ಪಿದ್ದರೂ ಕಣ್ಣು ಮುಚ್ಚಿ ಅದರ ಮೇಲೆ ವಿಶ್ವಾಸವಿಡುತ್ತೇವೆ ಮತ್ತು ತಜ್ಞರ ಹೇಳಿಕೆಯ ಅನುಸಾರ ಅವರು ಹೇಗೆ ಹೇಳುತ್ತಾರೆ ಹಾಗೆಯೇ ಎಲ್ಲ ಮಾತುಗಳ ಪಾಲನೆ ಮಾಡುತ್ತೇವೆ. ಅವರು ಯಾವುದನ್ನು ತಿನ್ನೆಂದು ಹೇಳುತ್ತಾರೆ ಎಷ್ಟು ತಿನ್ನೆಂದು ಹೇಳುತ್ತಾರೆ ಅದನ್ನೇ ಮತ್ತು ಅಷ್ಟೇ ತಿನ್ನುತ್ತೇವೆ. ಬೇಡವೆಂದುದನ್ನು ಎಷ್ಟೇ ಇಷ್ಟವಾಗಿದ್ದರೂ ಬಿಟ್ಟು ಬಿಡುತ್ತೇವೆ; ಸ್ವಲ್ಪವೂ ಸಂದೇಹ ಪಡುವುದಿಲ್ಲ ಮತ್ತು ಅದನ್ನು ಯಾರು ಕಂಡಿದ್ದಾರೆ ? ಎಂಬ ಪ್ರಶ್ನೆಯೂ ಕೂಡ ನಮಗೆ ಉದ್ಭವಿಸುವುದಿಲ್ಲ. ಎಂದರೆ 'ನಾನು ಶರೀರವಿದ್ದೇನೆ'ಂಬ ಮನ್ನಣೆಯು ಅನಾದಿಯಿಂದ ಈ ಜೀವನಿಗೆ ದೃಢವಾಗಿರುವುದೊಂದೇ ಇದರ ಕಾರಣವಿದೆ. ಅದನ್ನು ಯಾರೂ ಅಲ್ಲಾಡಿಸುವ ಸಾಧ್ಯತೆಯಿಲ್ಲ - ಅನಂತವೀರ್ಯ (ಬಲ)ಶಾಲಿ ಅರಹಂತ ಭಗವಂತರು ಕೂಡ ಇಲ್ಲ.

ಪ್ರತಿಯೊಂದು ದ್ರವ್ಯವು ಅನಾದಿ ನಿಧನವಿದೆ, ಅನಂತಗುಣಸ್ವರೂಪವಿದೆ, ಅದು ತನ್ನಿಂದಲೇ ಮತ್ತು ತನ್ನಲ್ಲಿಯೇ ಪರಿಣಮನ ಮಾಡುತ್ತಿರುತ್ತದೆ, ಅದರ ಪರ್ಯಾಯವು ಸ್ವಯಂ ತನ್ನಿಂದಲೇ ಆಗುತ್ತದೆ. ಬೇರೆ ಯಾರೂ ಅದಕ್ಕೆ ಸಹಾಯ ಮಾಡುವ, ಅದನ್ನು ಪ್ರಭಾವಿತಗೊಳಿಸುವ ಅಥವಾ ದಬ್ಬಿ ಪ್ರಾರಂಭಿತಗೊಳಿಸ-ಬಹುದಾಗಿದೆ, - ಎಂಬ ಮಾತು ಇಲ್ಲವೇ ಇಲ್ಲ. ನಿಮಿತ್ತದಿಂದ ಯಾವ ಕಾರ್ಯವೂ ಆಗುವುದಿಲ್ಲ. ಆರು ದ್ರವ್ಯಗಳ ಸಮೂಹ ರೂಪದ ಈ ಲೋಕವು ಕೂಡ ಅನಾದಿನಿಧನವಿದೆ - ಅನಾದಿಯಿಂದ ಇದೆ ಮತ್ತು ಅನಂತಕಾಲದವರೆಗೆ ಇರುವಂಥದ್ದಿದೆ, ಅದರ ರಕ್ಷಣೆ ಮಾಡುವಂಥವರು, ಧಾರಣ ಮಾಡುವಂಥವರು, ಸಂಹಾರ ಮಾಡುವಂಥವರು ಯಾರೂ ಇಲ್ಲ. ಯಾವುದೇ ನವೀನ ಜೀವವು ಉತ್ಪನ್ನವಾಗುವುದಿಲ್ಲ. ಯಾವುದೇ ನವೀನ ಪುದ್ಗಲವು ಉತ್ಪನ್ನವಾಗುವುದಿಲ್ಲ. ಸಂಸಾರದಲ್ಲಿ ಈ ಯಾವ ಅನಂತ ಜೀವಗಳು ಪರಿಭ್ರಮಣ ಮಾಡುತ್ತಿವೆ. ಬೇರೆ ರೀತಿಯಿಂದ ಹೇಳಿದರೆ ಜನ್ಮ-ಮರಣಮಾಡುತ್ತಿವೆ ಅವು ಎಲ್ಲಿಂದಲೋ ಸತ್ತು ಬೇರೆ ಎಲ್ಲಿಯೋ ಹುಟ್ಟುತ್ತವೆ - ಅವುಗಳ ಸಂಖ್ಯೆ ಹೆಚ್ಚುವುದೂ ಇಲ್ಲ ಮತ್ತು ಕಡಿಮೆಯಾಗುವುದೂ ಇಲ್ಲ.

ಒಂದೇ ಕುಟುಂಬದ ಅನೇಕ ಸದಸ್ಯರು ಇಲ್ಲಿ - ಮನುಷ್ಯ ಪರ್ಯಾಯದಲ್ಲಿ ಸೇರಿಕೊಂಡಿದ್ದಾರೆ, ಯಾವನೋ ನರಕದಿಂದ ಬಂದಿರಬಹುದು, ಒಬ್ಬನು ಸ್ವರ್ಗದಿಂದ ಬಂದಿರಬಹುದು, ಇನ್ನೊಬ್ಬನು ತಿರ್ಯಂಚದೊಳಗಿಂದ ಮತ್ತೊಬ್ಬನು ಮನುಷ್ಯದೊಳಗಿಂದ ಬಂದಿರಬಹುದು. ಮೋಕ್ಷದಿಂದಲೂ ಕೂಡ ಯಾರಾದರೂ ಬಂದಿರಬಹುದೇನು ?.... ಇಲ್ಲ, ಅದಂತೂ ಅಸಾಧ್ಯವಿದೆ (ಒನ್ ವೇ ಟ್ರಾಫಿಕ್ ಇದೆ) ಒಂದು ಬಾರಿ ನಿರ್ವಾಣವಾಗಿ ಹೋದರೆ ಆ ಜೀವನು ಎಂದೂ ಮತ್ತೊಮ್ಮೆ ಜನ್ಮಧಾರಣ ಮಾಡುವುದಿಲ್ಲ. ಭಗವಂತರು ಅವತಾರ ತೆಗೆದುಕೊಳ್ಳುತ್ತಾರೆಂದು ಹೇಳುವ ಅನ್ಯಮತಿಯರ ಮಾತು ಅಸತ್ಯವಿದೆ.

ಪ್ರಶ್ನೆ :- ಅರವತ್ತೂರು ಶಲಾಕಾ ಪುರುಷರ ಮಾತನ್ನು ಸ್ಪಷ್ಟಪಡಿಸಬೇಕು, ಶಲಾಕಾ ಎಂದರೇನು ?

ಉತ್ತರ :- ಈ ಮೊದಲು ಯಾವ ಅರವತ್ತೂರು ಶಲಾಕಾ ಪುರುಷರ ಮಾತು ಹೇಳಲಾಗಿತ್ತು ಅವರು ಶ್ರೇಷ್ಠ ಪುರುಷರು ಎಂದರೆ ಮಹಾಪುರುಷರಿರುತ್ತಾರೆ. ನಾವಂತೂ ಇಲ್ಲಿಯ-ಭರತ ಕ್ಷೇತ್ರದ ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಆರ್ಯಖಂಡದೊಳಗೆ ಆರು ಕಾಲಗಳ ಭೇದವನ್ನು ಹೇಳಲಾಗಿತ್ತು - ಅವಸರ್ಪಿಣಿಯ ಆರು ಮತ್ತು ಉತ್ಸರ್ಪಿಣಿಯ ಆರು ಎಂಬುದಾಗಿ ಭೇದ ತಿಳಿಸಲಾಗಿತ್ತು. ಈಗ ಇಲ್ಲಿ ಅವಸರ್ಪಿಣಿಯ ಪಂಚಮ ಕಾಲವು ನಡೆಯುತ್ತಿದೆ. ಯಾವಾಗ ಇಲ್ಲಿ ಚತುರ್ಥಕಾಲವು ಪ್ರಾರಂಭವಾಗುತ್ತದೆ ಆಗ ಕ್ರಮದಿಂದ ಇಪ್ಪತ್ನಾಲ್ವರು ತೀರ್ಥಂಕರರಾಗುತ್ತಾರೆ. ಅವರುಗಳ ಹೆಸರಂತೂ ಎಲ್ಲರಿಗೂ ತಿಳಿದಿವೆ. ಋಷಭದೇವ ಅರ್ಥಾತ್ ಆದಿನಾಥರಿಂದ ಹಿಡಿದು ಮಹಾವೀರರವರೆಗೆ ಒಬ್ಬರ ನಂತರ ಒಬ್ಬರಂತೆ ಒಟ್ಟು ಇಪ್ಪತ್ತಾನ್ಲುಕ್ಕು ತೀರ್ಥಂಕರರಾಗಿದ್ದಾರೆ. ಮೊದಲು ಮೊದಲು ಇಬ್ಬರು ತೀರ್ಥಂಕರರ ಮಧ್ಯದೊಳಗಿನ ಕಾಲದ ಅಂತರವು ಬಹಳ ದೊಡ್ಡದಿರುತ್ತದೆ. ಮೊದಲನೆಯ ಆದಿನಾಥ ತೀರ್ಥಂಕರರು ಮತ್ತು ಎರಡನೆಯ ಅಜಿತನಾಥ ತೀರ್ಥಂಕರರ ಮಧ್ಯದಲ್ಲಿ ೫೦ ಲಕ್ಷ ಕೋಟಿ ಸಾಗರದ ಅಂತರವಿತ್ತು. ಒಂದು ಸಾಗರ ಕಾಲವನ್ನು ಗಣನೆ ಮಾಡುತ್ತ ಮಾಡುತ್ತ, ಅಥವಾ ಆಲಿಸುತ್ತ-ಆಲಿಸುತ್ತ ಕೂಡ ನಮಗೆ ಸಾಕಾಗಿ ಹೋಗುತ್ತದೆ.

ನಾಲ್ಕನೆಯ ಕಾಲವಂತೂ ಒಂದು ಕೋಟಾಕೋಟಿ ಸಾಗರದ್ದಿರುತ್ತದೆ. ಕೋಟಾಕೋಟಿಯ ಅರ್ಥವು ೧ ಕೋಟಿ X ೧ ಕೋಟಿ. ಮೊದ-ಮೊದಲು ಆಯುವು ಕೂಡ ದೊಡ್ಡದಿರುತ್ತಿತ್ತು. ಆದಿನಾಥ ಭಗವಂತರ ಆಯುವು ಎಷ್ಟಿತ್ತು ಗೊತ್ತಿದೆಯೇನು ? ಅಹುದು, ಎಂಭತ್ನಾಲ್ಕು ಲಕ್ಷ ಪೂರ್ವದ್ದಿತ್ತು. ಎಂಭತ್ತೂರು ಲಕ್ಷ ಪೂರ್ವದವರೆಗೆಯಂತೂ ಅವರು ರಾಜಪದದಲ್ಲಿದ್ದರು. ಈ ಪೂರ್ವವೆಂದರೇನು ಎಂಬುದನ್ನು ನೋಡೋಣ. ಎಂಭತ್ತಾನ್ಲುಕ್ಕು ಲಕ್ಷ ಪೂರ್ವಾಂಗಗಳದ್ದು ಒಂದು ಪೂರ್ವವಾಗುತ್ತದೆ ಮತ್ತು ಎಂಭತ್ತಾನ್ಲುಕ್ಕು ಲಕ್ಷ ವರ್ಷಗಳದ್ದು ಒಂದು ಪೂರ್ವಾಂಗವಿರುತ್ತದೆ. ಅಥವಾ ಬೇರೆ ರೀತಿಯಿಂದ ಹೇಳಿದರೆ ೮೪ ಲಕ್ಷ ವರ್ಷ X ೮೪ ಲಕ್ಷ ವರ್ಷ = ೧ ಪೂರ್ವ = ೭೦ ಲಕ್ಷ ೫೬ ಸಾವಿರ ಕೋಟಿ ವರ್ಷ, ಇಂಥ ಒಂದು ಪೂರ್ವ, ಎರಡು ಪೂರ್ವ, ಸಾವಿರ ಪೂರ್ವ, ಲಕ್ಷ ಪೂರ್ವ, ೮೪ ಲಕ್ಷ ಪೂರ್ವ ವರ್ಷಗಳ ಆಯುವು ಭಗವಾನ ಆದಿದೇವರದಿತ್ತು. ಕರ್ಮಭೂಮಿಯ ಮನುಷ್ಯ, ತಿರ್ಯಂಚಗಳ ಉತ್ಕೃಷ್ಟ ಆಯುವಂತೂ ಒಂದು ಕೋಟಿ ಪೂರ್ವ ವರ್ಷಗಳದ್ದಿರುತ್ತದೆ. ಭೋಗಭೂಮಿಯ ಆಯುವು ಪಲ್ಯಗಳದ್ದಿರುತ್ತದೆ. ಕರ್ಮಭೂಮಿ, ಭೋಗಭೂಮಿ ಮೊದಲಾದವುಗಳ ಚರ್ಚೆಯನ್ನು ಮುಂದೆ ಮಾಡಲಾಗುವುದು. ಕೆಲವು ಮಾತುಗಳು ಎಂಥವಿರುತ್ತವೆಯೆಂದರೆ ಮೊದಲು ಆಲಿಸುವುದು ಮತ್ತು ನಂತರ ತಿಳಿಯುವುದಿರುತ್ತದೆ ಅಲ್ಲದೆ ಕೆಲವು ಮಾತುಗಳು ಮೊದಲು ವಿಸ್ತಾರದಿಂದ ತಿಳಿದುಕೊಳ್ಳುವುದು ಮತ್ತು ನಂತರ ಅವುಗಳ ವಿವೇಚನೆಯಾಗುವಂಥವು ಇರುತ್ತವೆ.

ಕರ್ಮಪ್ರಕೃತಿಗಳಲ್ಲಿಯೂ ಕೂಡ ಹೀಗೆ ಆಗುತ್ತದೆ. ಕೆಲವು ಪ್ರಕೃತಿಗಳು ಮೊದಲು ಕಟ್ಟುತ್ತವೆ ಮತ್ತು ನಂತರ ಉದಯದಲ್ಲಿ ಬರುತ್ತವೆ. ಇದರಲ್ಲಿ ಯಾವ ಆಶ್ಚರ್ಯವಿದೆ ? ಮೊದಲು ಕಟ್ಟುತ್ತವೆ, ಮತ್ತು ನಂತರವೇ ಉದಯದೊಳಗೆ ಬರುತ್ತವೆಯೆಂದು ತಾವು ಹೇಳಬಹುದಾಗಿದೆ. ಆದರೆ ಶಾಂತಿಯಿಂದ ಆಲಿಸುವುದು ಕೆಲವು ಪ್ರಕೃತಿಗಳು ಎಂಥವಿವೆಯೆಂದರೆ ನಂತರ ಕಟ್ಟುತ್ತವೆ ಮತ್ತು ಮೊದಲು ಉದಯದಲ್ಲಿ ಬರುತ್ತವೆ★ಯೆಂಬುದು

★ ಗುಣಸ್ಥಾನದ ಅಪೇಕ್ಷೆಯಿಂದ ಕಥನವಿದೆ

ತಮಗೆ ಗೊತ್ತಿದೆಯೇನು ? ಇಲ್ಲಿ ಕರಣಾನುಯೋಗದ ಸ್ವಾಧ್ಯಾಯವನ್ನು ನಿತ್ಯ ಮಾಡುವಂಥವರೂ ಇದ್ದಾರೆ. ಅವರಿಗೆ ಇದೆಲ್ಲವೂ ತಿಳಿದಿದ್ದರೂ ಮೌನವಾಗಿ ಕುಳಿತಿದ್ದಾರೆ. ಏಕೆಂದರೆ ನವೀನ ಶ್ರೋತೃಗಳಿಗೆ ವಿಚಾರ ಮಾಡಲು ಅಧಿಕ ಸಮಯ ಕೊಡಬೇಕು, ಅವರಿಗೆ ಉತ್ತರವೀಯುವ ಅವಕಾಶವು ಮೊದಲು ಇರಬೇಕೆಂಬುದು ನಮ್ಮ ನಿತ್ಯಸ್ವಾಧ್ಯಾಯದ ಪದ್ಧತಿಯಿದೆ-ನಿಯಮವಿದೆ. ನಿತ್ಯ ಆಲಿಸುವಂಥ ಶ್ರೋತೃಗಳಿಗೆ ವಿಷಯವು ತಿಳಿದಿರುತ್ತದೆ ಅವರೇ ಉತ್ತರಿಸಿದರೆ ಹೊಸಬರು ತಮ್ಮನ್ನು ತಾವು ಕಡಿಮೆಯೆಂದು ಗಣಿಸಬಹುದಾಗಿದೆ. ಅಥವಾ ಹೊಸ ಮಾತನ್ನು ಆಲಿಸಿ ಬುದ್ಧಿಯಲ್ಲಿ ಜಿಜ್ಞಾಸೆ ಹೆಚ್ಚಿ ಏಕಾಗ್ರತೆಯಿಂದ ಆಲಿಸಬಹುದಾಗಿದೆ. ಇವೆಲ್ಲವುಗಳಿಗೆ ಅಭಿರುಚಿ ಮತ್ತು ಏಕಾಗ್ರತೆಯು ಲಾಭದಾಯಕವಿದೆ.

ಆಹಾರಕ ಶರೀರ ಮತ್ತು ಆಹಾರಕ ಅಂಗೋಪಾಂಗವೆಂಬ ಹೆಸರಿನ ಪ್ರಕೃತಿಗಳು ಏಳನೆಯ, ಎಂಟನೆಯ ಗುಣಸ್ಥಾನದಲ್ಲಿ ಕಟ್ಟುತ್ತವೆ ಮತ್ತು ಅವುಗಳ ಉದಯವು ಆರನೆಯ ಗುಣಸ್ಥಾನದಲ್ಲಿ ಬರುತ್ತದೆ. ಮೇಲಿನ ಗುಣಸ್ಥಾನದಲ್ಲಿ ಕಟ್ಟುತ್ತದೆ ನಂತರ ಕೆಳಗಿನ ಆರನೇ ಗುಣಸ್ಥಾನದಲ್ಲಿ ಬಂದ ಮೇಲೆ ಅದರ ಉದಯವಾಗುತ್ತದೆ. ಮುನಿರಾಜರು ಏಳರಿಂದ ಆರರಲ್ಲಿ ಮತ್ತು ಆರರಿಂದ ಏಳರಲ್ಲಿ ಬರುತ್ತ-ಹೋಗುತ್ತ ಇರುತ್ತಾರೆ. ಅವರಿಗೆ ಅಂತರ್ಮುಹೂರ್ತ ಅಂತರ್ಮುಹೂರ್ತದಲ್ಲಿ ಆರನೆಯ-ಏಳನೆಯ ಗುಣಸ್ಥಾನವಾಗುತ್ತಿರುತ್ತದೆ.

ಪ್ರಶ್ನೆ :- ಎಂಟನೆಯ ಗುಣಸ್ಥಾನದಲ್ಲಿ ಕರ್ಮಕಟ್ಟಿಕೊಳ್ಳುವಂಥವರು ಪುನಃ ಆರರಲ್ಲಿ ಹೇಗೆ ಬರಬಹುದಾಗಿದೆ ?

ಉತ್ತರ :- ಉಪಶಮ ಶ್ರೇಣಿಯಲ್ಲಿ ಎಂಟನೆಯ, ಒಂಭತ್ತನೆಯ, ಹತ್ತನೆಯ, ಹನ್ನೊಂದನೆಯ ಗುಣಸ್ಥಾನಕ್ಕೆ ಹೋಗಿ ಜೀವನು ಪುನಃ ಕ್ರಮದಿಂದಲೇ ಹತ್ತನೆಯ, ಒಂಭತ್ತನೆಯ, ಎಂಟನೆಯ, ಏಳನೆಯ ಮತ್ತು ಆರನೆಯ ಗುಣಸ್ಥಾನಕ್ಕೆ ಪ್ರಾಪ್ತನಾಗುತ್ತಾನೆ. ಯಾವುದೇ ಜೀವನು ಹನ್ನೊಂದನೆಯ ಗುಣಸ್ಥಾನದಿಂದ ನೇರವಾಗಿ ಮಿಥ್ಯಾತ್ವದೊಳಗೆ ಹೋಗುವುದಿಲ್ಲ. ಆರನೆಯ ಗುಣಸ್ಥಾನದವರೆಗಂತೂ ಕ್ರಮದಿಂದಲೇ ಬರುತ್ತಾನೆ, ಮರಣದ ನಂತರ ನೇರವಾಗಿ ನಾಲ್ಕರೊಳಗೆ ಹೋಗುತ್ತಾನೆ. ಆಹಾರಕ ಸಂಬಂಧದ ಪ್ರಕೃತಿಗಳನ್ನು ಕಟ್ಟಿಕೊಂಡಿದ್ದರೆ ಆ ಮುನಿರಾಜರಿಗೆ ಒಂದು ವೇಳೆ ಯಾವುದಾದರೂ ಪ್ರಶ್ನೆಯಿದ್ದರೆ ಅಥವಾ ತೀರ್ಥವಂದನೆಯ ವಿಕಲ್ಪವಿದ್ದರೆ ಅವರ ಮಸ್ತಕದಿಂದ ಒಂದು ಮೊಳ ಪ್ರಮಾಣದ ಸಪ್ತಧಾತು ರಹಿತ ಶುಭ್ರವಾದ ಪುರುಷಾಕಾರದ ಪುತ್ಥಳಿಯು ಹೊರಡುತ್ತದೆ ಮತ್ತು ತೀರ್ಥಗಳ ವಂದನೆ ಮಾಡಿ ಅಥವಾ ಒಂದು ವೇಳೆ ಸಂದೇಹದ ಸಮಾಧಾನವಾಗಬೇಕಿದ್ದರೆ ಅದರ ಸಲುವಾಗಿ ತೀರ್ಥಂಕರರ ಹತ್ತಿರ ಹೋಗುತ್ತಿದ್ದಂತೆಯೇ ಅವರಿಗೆ ಸಮಾಧಾನವಾಗುತ್ತದೆ. ಆಗ ಅದು ಒಂದು ಅಂತರ್ಮುಹೂರ್ತದಲ್ಲಿ ಮರಳಿ ಬಂದು ಮೂಲ ಶರೀರದಲ್ಲಿ ಪ್ರವೇಶ ಮಾಡುತ್ತದೆ. ಆರನೆಯ ಗುಣಸ್ಥಾನದ ಅಂತರ್ಮುಹೂರ್ತಕ್ಕಿಂತಲೂ ಈ ಆಹಾರಕ ಶರೀರವು ನಿರ್ಮಾಣವಾಗುವ ಮತ್ತು ತನ್ನ ಕಾರ್ಯಮುಗಿಸಿ ಮೂಲ ಶರೀರಕ್ಕೆ ಬಂದು ಸೇರುವ ಕಾಲವು ಚಿಕ್ಕದಿದೆ.

ಇಲ್ಲಿ ಈಗ ಶಲಾಕಾಪುರುಷರ ಚರ್ಚೆಯು ನಡೆಯುತ್ತಿದೆ. ಯಾವ ಜೀವರುಗಳು ಮೊದಲು ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಂಡಿದ್ದಾರೆ, ಆ ಜೀವರುಗಳಿಗೆ ಕೇವಲಜ್ಞಾನವಾದ ಮೇಲೆ ಎಂದರೆ ಹದಿಮೂರನೆಯ ಗುಣಸ್ಥಾನದಲ್ಲಿ ತೀರ್ಥಂಕರ ಪ್ರಕೃತಿಯ ಉದಯವಾಗುತ್ತದೆ. ಅವರಿಗೆ ಸಮವಸರಣದ ರಚನೆಯಾಗುತ್ತದೆ.

ಅವರದು ದಿವ್ಯಧ್ವನಿ ಹೊರಡುತ್ತದೆ, ಅವರುಗಳ ಮಹಾನ ಪುಣ್ಯದ ಉದಯದಿಂದ ಬೇರೆಯೂ ಅನೇಕ ಅತಿಶಯಗಳಾಗುತ್ತವೆ.

ತೀರ್ಥಂಕರ ಪ್ರಕೃತಿಯ ಬಂಧದ ಪ್ರಾರಂಭವನ್ನು ಯಾರು ಮಾಡುತ್ತಾರೆಯೆಂಬ ಮಾತಿನ ಚರ್ಚೆಯು ಮೊದಲೇ ಬಂದು ಹೋಗಿದೆ, ಅದನ್ನು ಸ್ಮರಿಸಿಕೊಳ್ಳುವುದು. ಕರ್ಮಭೂಮಿಯ ಮನುಷ್ಯನು, ನಾಲ್ಕರಿಂದ ಏಳನೆಯ ಗುಣಸ್ಥಾನವರ್ತಿಯು ತೀರ್ಥಂಕರ ಅಥವಾ ಕೇವಲಿಗಳ ಪಾದಮೂಲದಲ್ಲಿ ಈ ಪ್ರಕೃತಿಯ ಬಂಧದ ಪ್ರಾರಂಭ ಮಾಡುತ್ತಾನೆ. ಅದರ ನಂತರ ಅವನು ಪ್ರತಿಸಮಯ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುತ್ತಲೇ ಇರುತ್ತಾನೆ. ಅವನು ಬೇಕಾದರೆ ರಾಜ್ಯಭಾರ ನಡೆಸುತ್ತಿರಲಿ ಅಥವಾ ಗೃಹಸ್ಥಯೋಗ್ಯ ವ್ಯಾಪಾರದ ಕಾರ್ಯ ಮಾಡುತ್ತಿರಲಿ ಅಥವಾ ಭಗವಂತರ ಪೂಜೆ ಮೊದಲಾದ ಶುಭಕಾರ್ಯಗಳನ್ನು ಮಾಡುತ್ತಿರಲಿ, ಎಂಟನೆಯ ಗುಣಸ್ಥಾನದವರೆಗೆ ಇದರ ಬಂಧವು ನಿರಂತರವಾಗಿ ಆಗುತ್ತಲೇ ಇರುತ್ತದೆ.

ಆದರೆ ಈ ಪ್ರಕೃತಿಯು ಹೇಗೆ ಕಟ್ಟುತ್ತದೆ ? ಏಕೆಂದರೆ ಸಮವಸರಣದಲ್ಲಿಯಂತೂ ಅನೇಕ ಜೀವರುಗಳು ಹೋಗುತ್ತಾರೆ, ಎಲ್ಲರಿಗಂತೂ ಇದರ ಬಂಧವಾಗುವುದಿಲ್ಲ. ಶಾಸ್ತ್ರಗಳಲ್ಲಿಯಂತೂ ಇದರ ಕಾರಣಗಳ ಚರ್ಚೆ ಮಾಡುತ್ತ ಷೋಡಶಕಾರಣ ಭಾವನೆ - ಹದಿನಾರು ಭಾವನೆಗಳ ವರ್ಣನೆಯಿದೆ. ನಮ್ಮಲ್ಲಿ ಯಾರಿಗಾದರೂ ತೀರ್ಥಂಕರ ಪ್ರಕೃತಿಯ ಬಂಧದ ಅಪೇಕ್ಷೆಯಿದ್ದರೆ ಒಮ್ಮೆಲೇ ಸರಳ ಸಂಕ್ಷಿಪ್ತವಾದ ಮಾರ್ಗವೊಂದಿದೆ. ನಮ್ಮಲ್ಲಿ - ನಮ್ಮ ಆಗಮಗಳಲ್ಲಿ ಎಲ್ಲ ರೀತಿಯ ಮಾರ್ಗಗಳಿವೆ. ಎಷ್ಟು ಜೀವರುಗಳಿಗೆ ತೀರ್ಥಂಕರ ಪ್ರಕೃತಿಯ ಇಚ್ಛೆಯಿದೆ?

ಯಾವ ಜೀವನು ಯಾವುದಾದರೂ ಪ್ರಕೃತಿಯ ಬಂಧವನ್ನು ಬಯಸುತ್ತಿದ್ದರೆ, ಅವನಿಗೆ ಬಂಧವು ಒಳ್ಳೆಯದೆನಿಸುತ್ತದೆ. ಯಾರಿಗೆ ಕರ್ಮದ-ಪುಣ್ಯಕರ್ಮದ ಉದಯದಲ್ಲಿ ಪ್ರಾಪ್ತವಾದ ಸಂಯೋಗಗಳು ಒಳ್ಳೆಯವೆನಿಸುತ್ತವೆ. ಅಂತೆಯೆ ಪೂರ್ವದಲ್ಲಿ ಬಹಳಷ್ಟು ಪುಣ್ಯ ಮಾಡಿರುವುದರಿಂದಲೇ ನಮಗೆ ಒಳ್ಳೆಯ ಸಂಯೋಗಗಳ ಪ್ರಾಪ್ತಿಯಾಗಿದೆಯೆಂದು ಅವರು ಹೇಳುತ್ತಾರೆ; ಆ ಜೀವರುಗಳಿಗೆ ಪುಣ್ಯ ಪ್ರಕೃತಿಗಳ ಬಂಧವು ಹಿತರೂಪವೆನಿಸುತ್ತದೆ. ಯಾರಿಗೆ ಬಂಧವು ಹಿತರೂಪವೆನಿಸುತ್ತದೆ - ಒಳ್ಳೆಯದೆನಿಸುತ್ತದೆ, ಅವರಿಗೆ ಮೋಕ್ಷವು ಒಳ್ಳೆಯದೆನಿಸುವುದಿಲ್ಲ. ನಮಗಂತೂ ನಮ್ಮ ಅಭಿಪ್ರಾಯದ ಅವಲೋಕನೆ ಮಾಡುವುದಿದೆ, ಯಾರ ಅಪಹಾಸ್ಯ ಮಾಡುವುದಿಲ್ಲ. ಒಂದುವೇಳೆ ಆಂತರ್ಯದ ಮನ್ನಣೆಯಲ್ಲಿ ಈ ಮಿಥ್ಯಾ ಅಭಿಪ್ರಾಯವು ಬಿದ್ದುಕೊಂಡಿದ್ದರೆ ಮತ್ತು ಮೇಲು ಮೇಲಿನ ಆಚರಣೆಯಲ್ಲಿ ಸುಧಾರಣೆಯನ್ನು ತಂದುಕೊಳ್ಳಲು ಬಯಸುತ್ತಿದ್ದರೆ ಅದರಿಂದ ಯಾವ ಲಾಭವೂ ಆಗಲಾರದು. ಹೇಗೆ ಕಾಲಿನಲ್ಲಿ ಯಾವುದೋ ಮುಳ್ಳು ಅಥವಾ ಗಾಜಿನ ತುಂಡು ಸೇರಿಕೊಂಡಿದ್ದರೆ ಮತ್ತು ಮೇಲಿನಿಂದ ಎಷ್ಟೇ ಉಪಚಾರ-ತೊಳೆಯುವುದು, ಔಷಧ ಹಚ್ಚುವುದು, ಪಟ್ಟಿಕಟ್ಟುವುದು ಮಾಡುತ್ತಿದ್ದರೆ ಗಾಯವು ವಾಸಿಯಾಗುವುದಿಲ್ಲ ಪ್ರತಿಯಾಗಿ ಒಳಗೆ ನಂಜಾಗುತ್ತ ಹೋಗುತ್ತದೆ.

ನಾವು ರಾಗ-ದ್ವೇಷಗಳನ್ನು ಹಿಡಿತದಲ್ಲಿಟ್ಟುಕೊಳ್ಳ ಬಯಸುತ್ತೇವೆ ಮತ್ತು ಸ್ವಲ್ಪ ಶುಭಭಾವಗಳಾದರೆ ನಾವು ಮುಂದುವರೆದಿದ್ದೇವೆ - ಒಳ್ಳೆಯವರಾಗಿದ್ದೇವೆಯೆಂದು ಮನ್ನಿಸುತ್ತೇವೆ. ತೀರ್ಥಂಕರ ಪ್ರಕೃತಿಯು ಕೂಡ ಸಹಜವಾಗಿ ಬಂಧಿಸುತ್ತದೆ, ಅದು ಬಂಧಿಸಲು ಯೋಗ್ಯವಿರುವ ಪರಿಣಾಮಗಳು ಸಹಜವಾಗಿ ಆಗುತ್ತವೆ, ಅದನ್ನು ಕಟ್ಟಿಕೊಳ್ಳಲಿಚ್ಛಿಸುವಂಥ ಜೀವನಿಗಂತೂ ಅದು ಕಟ್ಟುವುದಿಲ್ಲ; ಏಕೆಂದರೆ ಅದು ಸಮ್ಯಗ್ದೃಷ್ಟಿಗೇನೇ ಕಟ್ಟುತ್ತದೆ. ಮತ್ತು ಸಮ್ಯಗ್ದೃಷ್ಟಿಗೆ ಬಂಧದ ಹಾಗೂ ಬಂಧ ಯೋಗ್ಯ ಭಾವಗಳ ಅಪೇಕ್ಷೆಯು ಎಂದೂ ಇರುವುದಿಲ್ಲ.

ಪ್ರಶ್ನೆ :- ನಾವು ವಿಚಾರಪೂರ್ವಕವಾಗಿಯೇ ಯಾತ್ರೆ ಹಾಗೂ ಧಾರ್ಮಿಕ ಶಿಬಿರಗಳಿಗೆ ಹೋಗುತ್ತೇವೆ ಮತ್ತು ತಾವು ಶುಭ ಭಾವಗಳು ಸಹಜವಾಗಿ ಆಗುತ್ತವೆಯೆಂದು ಹೇಗೆ ಹೇಳುತ್ತಿರುವಿರಿ ?

ಉತ್ತರ :- ಇಲ್ಲಿ ಕುಳಿತಿರುವಾಗ ಎಂದರೆ ಪ್ರವಚನವನ್ನು ಆಲಿಸುತ್ತಿರುವಾಗ ಅಥವಾ ಪೂಜೆ ಮಾಡುತ್ತಿರುವಾಗ ಜಪಕ್ಕೆ ಕುಳಿತಿರುವಾಗ ಅನ್ಯ ವಿಕಲ್ಪಗಳು - ಅಶುಭ ಭಾವಗಳು ಹೇಗೆ ಬರುತ್ತವೆ ? ಬರುತ್ತವೆಯಲ್ಲವೇನು ! ಅಶುಭ ವಿಕಲ್ಪಗಳು ಸಹಜವಾಗಿಯೇ ಬರುತ್ತವೆಯೋ ಅಥವಾ ನಾವು ಮಾಡುತ್ತೇವೆ? - ಅವಂತೂ ಸಹಜವಾಗಿಯೇ ಬರುತ್ತವೆ, ಹಾಗಾದರೆ ಶುಭ ಭಾವಗಳು ? ಶುಭಭಾವಗಳನ್ನಂತೂ ನಾವು ಮಾಡುತ್ತೇವೆಯೆಂದು ಮನ್ನಿಸಿ ನಾವು ಶುಭಭಾವಗಳ ಕರ್ತೃವಾಗಿ ಕುಳಿತಿರುವುದು ನಮ್ಮ ಅಪರಾಧವಿದೆ. ಎಲ್ಲವೂ ಸಹಜವಾಗಿ ನಡೆಯುವಂಥ ಆಟವಿದೆ. ನಾಟಕ ಸಮಯಸಾರದಲ್ಲಿ 'ಜ್ಞಾನಿಗಳಾದ ಸದ್ಗುರುಗಳು ಸಹಜವಾದ ಉದ್ಯಮವನ್ನು ಹೇಳಿದ್ದಾರೆ'ಂದು ಬರುತ್ತದೆ.

ತೀರ್ಥಂಕರ ಪ್ರಕೃತಿಯು ಕೂಡ ಸಹಜವಾಗಿಯೇ ಕಟ್ಟುತ್ತದೆ. ಈ ಶುಭ-ಅಶುಭ ಭಾವಗಳಂತೂ ಸಹಜವಾಗಿಯೇ ಬರುತ್ತವೆ, ಶುದ್ಧಭಾವವು ಕೂಡ ಸಹಜವಾಗಿಯೇ ಆಗುತ್ತದೆ. ಧರ್ಮವಂತೂ ತ್ರಿಕಾಲದಲ್ಲೂ ಸಹಜವೇ ಆಗುತ್ತದೆ.

ಯಾವ ಜೀವನು ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುತ್ತಾನೆ ಅವನು ತೀರ್ಥಂಕರನಾಗಿಯೇ ಆಗುತ್ತಾನೆ. ಯಾವ ಭವದಲ್ಲಿ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳಲು ಆರಂಭಿಸುತ್ತಾನೆ, ಅದೇ ಭವದಲ್ಲಿ ಆ ಜೀವನು ತೀರ್ಥಂಕರನಾಗಿ ಮೋಕ್ಷಕ್ಕೆ ಹೋಗುವ ಸಾಧ್ಯತೆಯಿದೆ, ಅಥವಾ ಒಂದು ದೇವಭವ ಇಲ್ಲವೇ ನರಕದ ಭವ ಮಾಡಿ ಮನುಷ್ಯನಾಗಿ ಜನ್ಮತಾಳಿ ತೀರ್ಥಂಕರನಾಗಿ ಮೋಕ್ಷಕ್ಕೆ ಹೋಗಬಹುದಾಗಿದೆ. ತಿರ್ಯಂಚಗಳಿಗೆ ತೀರ್ಥಂಕರ ಪ್ರಕೃತಿಯ ಬಂಧವಾಗುವುದಿಲ್ಲ ಮತ್ತು ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುವಂಥ ಮನುಷ್ಯನು ಮರಣಹೊಂದಿ ಭೋಗಭೂಮಿಯ ಮನುಷ್ಯನು ಕೂಡ ಆಗುವ ಸಾಧ್ಯತೆಯಿಲ್ಲ. ನಮ್ಮಲ್ಲಿ - ಭರತಕ್ಷೇತ್ರದಲ್ಲಿ ಎಲ್ಲ ತೀರ್ಥಂಕರರಿಗೆ ಐದೈದು ಕಲ್ಯಾಣಕಗಳಾಗುತ್ತವೆ. ಗರ್ಭ ಕಲ್ಯಾಣಕ, ಜನ್ಮ ಕಲ್ಯಾಣಕ, ತಪ ಕಲ್ಯಾಣಕ (ದೀಕ್ಷಾಕಲ್ಯಾಣಕ), ಕೇವಲಜ್ಞಾನ ಕಲ್ಯಾಣಕ ಮತ್ತು ಮೋಕ್ಷ ಕಲ್ಯಾಣಕ. ಈ ಕಲ್ಯಾಣಕಗಳಲ್ಲಿ ಇಂದ್ರಾದಿ ದೇವಗಳು ಬಂದು ಪೂಜೆ ಮಾಡುತ್ತಾರೆ. ಜನ್ಮ ಕಲ್ಯಾಣಕದ ಮೊದಲಾದವುಗಳ ಚರ್ಚೆಯನ್ನು ನಾವು ಮೇರು ಪರ್ವತ ಸಂಬಂಧದ ಪ್ರಕರಣದಲ್ಲಿ ಮಾಡೋಣ. ಯಾರಿಗೆ ಐದೂ ಕಲ್ಯಾಣಕಗಳಾಗುತ್ತವೆ ಆ ಜೀವರುಗಳು ಸ್ವರ್ಗ ಅಥವಾ ನರಕದಿಂದ ಬರುವಂಥ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುತ್ತಿರುವ ಜೀವರುಗಳಾಗಿರುತ್ತಾರೆ. ಎಂದರೆ ಅವರು ಆ ಸ್ವರ್ಗ ಅಥವಾ ನರಕದ ಮೊದಲಿನ ಮನುಷ್ಯ ಭವದಲ್ಲಿ ತೀರ್ಥಂಕರ ಪ್ರಕೃತಿಯ ಬಂಧವನ್ನು ಆರಂಭಿಸಿದ್ದರು.

ವಿದೇಹ ಕ್ಷೇತ್ರದಲ್ಲಿ ಎಂಥ ಜೀವರುಗಳು ಇರುವ ಸಾಧ್ಯತೆಯಿದೆಯೆಂದರೆ, ಅವರು ಜನ್ಮವಾದ ನಂತರ ತೀರ್ಥಂಕರ ಪ್ರಕೃತಿಯ ಬಂಧದ ಆರಂಭ ಮಾಡುತ್ತಾರೆ ಮತ್ತು ಅದೇ ಭವದಲ್ಲಿ ತೀರ್ಥಂಕರರಾಗುತ್ತಾರೆ - ಅವರದು ಗರ್ಭ ಮತ್ತು ಜನ್ಮವಂತೂ ಆಗಿ ಹೋಗಿರುತ್ತದೆ. ಇನ್ನು ಒಂದು ವೇಳೆ ಅವರಿಗೆ ನಾಲ್ಕನೆಯ ಅಥವಾ ಐದನೆಯ ಗುಣಸ್ಥಾನವಿರುವಾಗ ತೀರ್ಥಂಕರ ಪ್ರಕೃತಿಯ ಬಂಧವು ಪ್ರಾರಂಭವಾಗುತ್ತಿದ್ದರೆ ಅವರಿಗೆ ತಪಕಲ್ಯಾಣಕ, ಕೇವಲಜ್ಞಾನ ಕಲ್ಯಾಣಕ ಮತ್ತು ಮೋಕ್ಷಕಲ್ಯಾಣಕ-ಇವು ಮೂರು ಕಲ್ಯಾಣಕಗಳಾಗುತ್ತವೆ ಮತ್ತು ಒಂದು ವೇಳೆ

ಮುನಿಯಾದ ನಂತರ ತೀರ್ಥಂಕರ ಪ್ರಕೃತಿಯ ಬಂಧವು ಪ್ರಾರಂಭವಾದರೆ ಅವರಿಗೆ ಕೊನೆಯ ಎರಡೇ ಕಲ್ಯಾಣಕಗಳಾಗುತ್ತವೆ.

ಯಾರಿಗೆ ದೇವಾಯುವಿನ ಬಂಧವಾಗಿದೆ ಅಂಥ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುವಂಥ ಮನುಷ್ಯರು ಮರಣಹೊಂದಿ ಸೌಧರ್ಮ ಸ್ವರ್ಗದಿಂದ ಹಿಡಿದು ಸರ್ವಾರ್ಥಸಿದ್ಧಿಯವರೆಗೆ ಎಲ್ಲಿ ಬೇಕಾದರೂ ಉತ್ಪನ್ನರಾಗಬಹುದಾಗಿದೆ. ಯಾರಿಗೆ ಸಮ್ಯಕ್ತ್ವವಾಗುವ ಮೊದಲು ನರಕಾಯುವಿನ ಬಂಧವಾಗಿದೆ ಮತ್ತು ಅದರ ನಂತರ ಸಮ್ಯಗ್ದರ್ಶನವಾಗಿದೆ ಹಾಗೂ ತೀರ್ಥಂಕರ ಪ್ರಕೃತಿಯ ಬಂಧವು ಆರಂಭವಾಗಿದೆ ಆ ಜೀವರುಗಳು ಮರಣಹೊಂದಿ ಮೊದಲನೆಯ, ಎರಡನೆಯ ಅಥವಾ ಮೂರನೆಯ ನರಕದಲ್ಲಿ ಉತ್ಪನ್ನರಾಗುತ್ತಾರೆ. ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುವಂಥ ಮನುಷ್ಯರು ಅಲ್ಪ ಸಂಖ್ಯೆಯಲ್ಲಿರುತ್ತಿದ್ದರೂ ಕೂಡ ಮರಣಹೊಂದಿ ದೇವ ಅಥವಾ ನಾರಕಿಗಳಾಗುತ್ತಾರೆ ಮತ್ತು ಅಲ್ಲಿಯಂತೂ ಸಾಗರೋಪಮ ಆಯುವಿರುತ್ತದೆ. ಆದುದರಿಂದ ಪೂರ್ವೋಕ್ತ ಸ್ವರ್ಗಗಳಲ್ಲಿ ಮತ್ತು ನರಕಗಳಲ್ಲಿ ಪ್ರತಿಯೊಂದರಲ್ಲಿ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಳ್ಳುತ್ತಿರುವಂಥ ಜೀವರುಗಳು ಅಸಂಖ್ಯಾತ-ಅಸಂಖ್ಯಾತರಿದ್ದಾರೆ ಮತ್ತು ಅವರು ಅಲ್ಲಿಂದ ಬಂದು ಮನುಷ್ಯರಾಗಿತೀರ್ಥಂಕರರಾಗುವಂಥವರಿದ್ದಾರೆ.

ಕೇವಲಜ್ಞಾನವಾದ ಮೇಲೆ ತೀರ್ಥಂಕರ ಪ್ರಕೃತಿಯ ಉದಯವು ಆರಂಭವಾಗುತ್ತದೆ. ಹದಿಮೂರನೆಯ ಮತ್ತು ಹದಿನಾಲ್ಕನೆಯ-ಎರಡೂ ಗುಣಸ್ಥಾನಗಳಲ್ಲಿ ಅದರ ಉದಯವು ನಿರಂತರವಾಗಿ ಇರುತ್ತದೆ. ಕೇವಲಜ್ಞಾನವಾದ ಮೇಲೆ ಎಷ್ಟು ಆಯುವು ಶೇಷವಿರುತ್ತದೆ ಅಷ್ಟು ಕಾಲ ಅವರಿಗೆ ತೀರ್ಥಂಕರ ಪದವಿರುತ್ತದೆ. ಆ ಪದದ ಎಲ್ಲಕ್ಕಿಂತ ಕಡಿಮೆ ಕಾಲವು ಪೃಥಕ್ತ್ವ ವರ್ಷವಂತೂ ಇದ್ದೇ ಇರುತ್ತದೆ. ಸಾಮಾನ್ಯಕೇವಲಿಗಳದು ಹದಿಮೂರನೆಯ ಗುಣಸ್ಥಾನದ ಜಘನ್ಯ ಕಾಲವು ಒಂದು ಅಂತರ್ಮುಹೂರ್ತವಿರಬಹುದಾಗಿದೆ. ಹಾಗೆ ತೀರ್ಥಂಕರರದು ಇಷ್ಟು ಅಲ್ಪಕಾಲವಿರುವುದಿಲ್ಲ.

ನಮ್ಮ ಮೂಲ ವಿಷಯವು ಶಲಾಕಾ ಪುರುಷರ ಚರ್ಚೆಯಿದೆ. ಅವರೊಳಗಿಂದ ೨೪ ತೀರ್ಥಂಕರರ ಮಾತು ಹೇಳಲಾಯಿತು. ಇನ್ನು ಹನ್ನೆರಡು ಚಕ್ರವರ್ತಿಗಳಾಗುತ್ತಾರೆ. ಅವರು ಆರು ಖಂಡಗಳ ಅಧಿಪತಿಯಿರುತ್ತಾರೆ. ನಮ್ಮ ಹತ್ತಿರವು ಕೂಡ ಶ್ರೀಖಂಡ, ಆಮ್ರಖಂಡ, ಮೊದಲಾದ ಅನೇಕ ಖಂಡವಿವೆ; ಅಹುದು ಪಾಖಂಡವಂತೂ ಅನಾದಿಯದಿದೆ. ಆದರೆ ಇಲ್ಲಿ ಅವುಗಳ ಮಾತು ಇಲ್ಲ. ಭರತ, ಐರಾವತ, ವಿದೇಹ ಇವೆಲ್ಲ ಕ್ಷೇತ್ರಗಳಲ್ಲಿ ಐದೈದು ಮ್ಲೇಚ್ಛಖಂಡ ಮತ್ತು ಒಂದೊಂದು ಆರ್ಯಖಂಡಗಳಿರುತ್ತವೆ. ಎರಡೂವರೆ ದ್ವೀಪ-ಮನುಷ್ಯಲೋಕದ ಪ್ರಕರಣದಲ್ಲಿ ಇವುಗಳ ಕುರಿತಾಗಿ ಅಧಿಕ ಚರ್ಚೆ ಮಾಡುವುದಿದೆ.

ಪೂರ್ವದಲ್ಲಿ ಯಾರು ಸಮ್ಯಗ್ದೃಷ್ಟಿ ಪುರುಷರಾಗುತ್ತಾರೆ ಅವರು ದೇವಗಳಲ್ಲಿ ಜನ್ಮ ಪಡೆದು ಅಲ್ಲಿಂದ ಬಂದು ಮನುಷ್ಯರಾಗಿ ಉತ್ಪನ್ನರಾಗುತ್ತಾರೆ ನಂತರ ಚಕ್ರವರ್ತಿ ಪದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಇಲ್ಲಿ ಚತುರ್ಥಕಾಲದೊಳಗೆ ಇಂಥವರು ಹನ್ನೆರಡು ಜನ ಚಕ್ರವರ್ತಿಗಳಾಗುತ್ತಾರೆ.

ಪ್ರಶ್ನೆ :- ತೀರ್ಥಂಕರ ಪ್ರಕೃತಿಯ ಹಾಗೆ ಚಕ್ರವರ್ತಿಯೆಂಬ ಹೆಸರಿನ ಯಾವುದಾದರೂ ಪ್ರಕೃತಿಯಿದೆಯೇನು?

ಉತ್ತರ :- ಈ ಹೆಸರಿನ ಯಾವುದೇ ಪ್ರಕೃತಿಯು ೧೪೮ ಕರ್ಮ ಪ್ರಕೃತಿಗಳಲ್ಲಿಯಂತೂ ಇಲ್ಲ. ಈ ಪದವು

ಮಹಾನ ಸಾತಿಶಯ ಪುಣ್ಯಪ್ರಕೃತಿಯ ಉದಯದಲ್ಲಿ ಪ್ರಾಪ್ತವಾಗುತ್ತದೆ, ಅಂಥ ಪುಣ್ಯವು ಸಮ್ಯಗ್ದೃಷ್ಟಿಗಳಿಗೇ ಕಟ್ಟುತ್ತದೆ. ಚಕ್ರವರ್ತಿಗೆ ಅತುಲ ವೈಭವದ ಪ್ರಾಪ್ತಿಯಾಗುತ್ತದೆ. ಅವರಿಗೆ ಪ್ರಾಪ್ತವಾಗುವಂಥ ಹದಿನಾಲ್ಕು ರತ್ನಗಳಲ್ಲಿ ಒಂದು ಚಕ್ರರತ್ನವಿರುತ್ತದೆ. ಅದರ ಕಾರಣವಾಗಿ ಅವರು ಸಮಸ್ತ ದೊರೆಗಳನ್ನು ತಮ್ಮ ಆಧೀನ ಮಾಡಿಕೊಳ್ಳುತ್ತಾರೆ. ಅವರುಗಳ ಪುಣ್ಯದ ವಿಭೂತಿಯೇ ಅಂಥದ್ದಿರುವುದರಿಂದ ಅವರು ಯಾರೊಂದಿಗೂ ಯುದ್ಧ ಕಲಹಾದಿಗಳನ್ನು ಮಾಡಬೇಕಾಗುವಂಥ ಪ್ರಸಂಗವು ಕೂಡ ಬರುವುದಿಲ್ಲ. ಈ ಹುಂಡಾವಸರ್ಪಿಣಿಯಲ್ಲಿ ಚಕ್ರವರ್ತಿಯದೂ ಮಾನಭಂಗವಾಗುವಂತಾಯಿತು-ಭರತ ಚಕ್ರವರ್ತಿ ಮತ್ತು ಬಾಹುಬಲಿಯ ಯುದ್ಧವಾಗಿ ಭರತನಿಗೆ ಸೋಲಾಯಿತು.

ಅವಸರ್ಪಿಣಿಯ ಕುರಿತಾಗಿ ನಾವು ಹಿಂದಿನ ಪ್ರಕರಣದಲ್ಲಿ ತಿಳಿದುಕೊಂಡಿದ್ದೇವೆ. ಅಂಥ ಅಸಂಖ್ಯಾತ ಅವಸರ್ಪಿಣಿಗಳು ಕಳೆದುಹೋದ ನಂತರ ಒಂದು ಈಗ ವರ್ತಿಸುತ್ತಿರುವಂಥ ಕಾಲವು ಬರುತ್ತದೆ ಅದನ್ನು ಹುಂಡಾವಸರ್ಪಿಣಿಯೆಂದು ಹೇಳುತ್ತಾರೆ. ಈ ಕಾಲದಲ್ಲಿ ಬಹಳಷ್ಟು ಘಟನೆಗಳು ಅನ್ಯ ಅವಸರ್ಪಿಣಿಗಳಲ್ಲಿ ಸಂಭವಿಸದಂಥವು ಸಂಭವಿಸಿ ಬಿಡುತ್ತವೆ. ಆದಿನಾಥ ಭಗವಂತರು ಮೂರನೇ ಕಾಲದ ಕೊನೆಯಲ್ಲಿ ಆಗಿ ಹೋದರು, ತೀರ್ಥಂಕರರಿಗೆ ಪುತ್ರಿಯರ ಜನ್ಮವಾಗುವುದಿಲ್ಲ ಆದರೆ ಇದೇ ಕಾಲ ದೋಷದಿಂದ ಆದಿನಾಥರಿಗೆ ಪುತ್ರಿಯರು ಜನಿಸಿದರು, ಭರತ ಚಕ್ರವರ್ತಿಯ ಮಾನಭಂಗವಾಯಿತು, ಚತುರ್ಥಕಾಲದ ಮಧ್ಯದಲ್ಲಿಯೇ ಅನೇಕ ಕಾಲದವರೆಗೆ ಧರ್ಮದ ಲೋಪವಾಗಿ ಹೋಯಿತು- ಇತ್ಯಾದಿ ಘಟನೆಗಳು ನಡೆದು ಹೋದವು.

ಚಕ್ರವರ್ತಿಯ ಸಂಪದವು ಈ ಪ್ರಕಾರವಿರುತ್ತದೆ-

ಚಕ್ರವರ್ತಿಯ ಹತ್ತಿರ ೮೪ ಲಕ್ಷ ಆನೆಗಳಿರುತ್ತವೆ ಮತ್ತು ಅಷ್ಟೇ ರಥಗಳಿರುತ್ತವೆ. ೧೮ ಕೋಟಿ ಅಶ್ವಗಳಿರುತ್ತವೆ. ಆರು ಋತುಗಳ ಯೋಗ್ಯ ವಸ್ತುಗಳನ್ನು ನೀಡುವಂಥ ಕಾಲನಿಧಿ, ಭಾಜನ-ಪಾತ್ರಗಳದಾಯಕವಾದ ಮಹಾಕಾಲನಿಧಿ, ಅನ್ನ (ಧಾನ್ಯಾದಿಗಳನ್ನು) ಕೊಡುವಂಥ ಪಾಂಡು ನಿಧಿ, ಆಯುಧಗಳನ್ನು ಕೊಡುವಂಥ ಮಾಣವಕನಿಧಿ, ವಾದ್ಯಾದಿಗಳನ್ನು ಕೊಡುವಂಥ ಶಂಖನಿಧಿ, ಮಂದಿರಗಳನ್ನು ಕೊಡುವಂಥ ನೈಸರ್ಪನಿಧಿ, ವಸ್ತ್ರಗಳನ್ನು ಕೊಡುವಂಥ ಪದ್ಮನಿಧಿ, ಆಭೂಷಣಗಳನ್ನು ಕೊಡುವಂಥ ಪಿಂಗಲನಿಧಿ, ನಾನಾ ಪ್ರಕಾರದ ರತ್ನಸಮೂಹವನ್ನು ಕೊಡುವಂಥ ನಾನಾರತ್ನನಿಧಿ - ಈಪ್ರಕಾರ ಒಂಭತ್ತು ನಿಧಿಗಳಿರುತ್ತವೆ. ಅಲ್ಲದೆ ಚಕ್ರವರ್ತಿಗೆ ೧೪ ರತ್ನಗಳ ಪ್ರಾಪ್ತಿಯಾಗಿರುತ್ತದೆ. ಅವು ಈ ಪ್ರಕಾರವಿವೆ - ೧) ಚಕ್ರರತ್ನ, ೨) ಅಸಿರತ್ನ, ೩) ಛತ್ರರತ್ನ, ೪) ದಂಡರತ್ನ, ಅದು ಸೈನ್ಯಗಳ ಭೂಮಿಯನ್ನು ಸ್ವಚ್ಛ ಮಾಡುತ್ತದೆ, ೫) ಮಣಿರತ್ನ-ಚೂಡಾಮಣಿಯಿರುತ್ತದೆ ಅದು ಇಚ್ಛಿತ ಪದಾರ್ಥಗಳ ದಾನಕೊಡುತ್ತದೆ, ೬) ಚರ್ಮರತ್ನ, ೭) ಕಾಕಿಣಿರತ್ನ ಇವು ಏಳು ಅಚೇತನ ರತ್ನಗಳಿವೆ. ಯಾವಾಗ ಚಕ್ರವರ್ತಿಯು ತನ್ನ ಸೇನೆಯೊಂದಿಗೆ ವಿಜಯಾರ್ಧದ ಗುಹೆ (ತಮಿಶ್ರ ಗುಹೆ)ಗಳವರೆಗೆ ಬರುತ್ತಾನೆ, ಆಗ ಈ ರತ್ನದಿಂದ ಗುಹೆಗಳ ದ್ವಾರವು ತೆರೆಯಲ್ಪಡುತ್ತದೆ. ಈ ಗುಹೆಗಳಲ್ಲಿ ಎರಡು ಉನ್ಮಗ್ನಾ ಮತ್ತು ನಿಮಗ್ನಾ ಎಂಬ ಹೆಸರಿನ ನದಿಗಳಿದ್ದು ಅವು ಗಂಗಾ ನದಿಯಲ್ಲಿ ಕೂಡಿಕೊಳ್ಳುತ್ತವೆ. ಉನ್ಮಗ್ನಾ ನದಿಯಲ್ಲಿ ಯಾವ ವಸ್ತುವು ಬೀಳುತ್ತದೆ ಅದು ಹೊರಗೆ ಬರುತ್ತದೆ ಮತ್ತು ನಿಮಗ್ನಾ ನದಿಯಲ್ಲಿ ಅತ್ಯಂತ ಹಗುರವಾದ ವಸ್ತು ಬಿದ್ದರೂ ಅದು ಒಳಗೆ ಹೊರಟು ಹೋಗುತ್ತದೆ ಆ ಗುಹೆಗಳನ್ನು ದಾಟಿ ಹೋಗುವಲ್ಲಿ ಈ ರತ್ನಗಳು ಬೇರೆ ಬೇರೆ ರೀತಿಯಿಂದ ಸಹಾಯಕವಾಗುತ್ತವೆ. ಉಳಿದವು ಏಳು ಸಚೇತನ ರತ್ನಗಳಿದ್ದು ಅವು ಈ ಪ್ರಕಾರದವಿವೆ - ೧) ಗೃಹಪತಿರತ್ನ,

೨) ಸೇನಾಪತಿರತ್ನ, ೩) ಪಟ್ಟದಾನೆರತ್ನ, ೪) ಪಟ್ಟದಕುದುರೆರತ್ನ, ೫) ಪುರೋಹಿತರತ್ನ, ೬) ಸ್ಥಪತಿ ಎಂದರೆ ಸ್ಥಾಪತ್ಯವಿಶಾರದರತ್ನ ಮತ್ತು ೭) ಪಟ್ಟದರಸಿ ಸ್ತ್ರೀರತ್ನ.

ಚಕ್ರವರ್ತಿಗೆ ೯೬ ಸಾವಿರ ರಾಣಿಯರಿರುತ್ತಾರೆ, ೩೨ ಸಾವಿರ ಮಕುಟಬದ್ಧ ಸಾಮಂತ ದೊರೆಗಳಿರುತ್ತಾರೆ. ೧೪ ರತ್ನ ಹಾಗೂ ನವನಿಧಿಗಳ ರಕ್ಷಣೆಯ ಸಲುವಾಗಿ ಪ್ರತಿಯೊಂದಕ್ಕೆ ಸಹಸ್ರ ಸಹಸ್ರ ಯಕ್ಷರಿರುತ್ತಾರೆ. ಅವರುಗಳ ಪುಣ್ಯದ ಈ ವೈಭವವನ್ನು ಆಲಿಸಿ ನಮಗೆ ಹಿತವೆನಿಸುತ್ತದೆ. ಆದರೆ ಯಾವ ಚಕ್ರವರ್ತಿಯು ಚಕ್ರವರ್ತಿ ಪದದಲ್ಲಿದ್ದುಕೊಂಡು ಮರಣ ಹೊಂದುತ್ತಾನೆ ಅವನು ಇಲ್ಲಿಂದ ಸತ್ತು ಏಳನೆಯ ನರಕದಲ್ಲಿ ಜನ್ಮ ಪಡೆಯುತ್ತಾನೆಂಬುದು ನಿಯಮವಿದೆ. ಅಲ್ಲಿ ೩೩ ಸಾಗರದ ಆಯುವಿದೆ. ಇಲ್ಲಿಯಂತೂ ಚಕ್ರವರ್ತಿ ಪದವಿಯು ಒಳ್ಳೆಯದೆನಿಸುತ್ತಿತ್ತು ಆದರೆ ಕ್ಷಣಾರ್ಧದಲ್ಲಿ ಇಲ್ಲಿಂದ ಸತ್ತು ಏಳನೆಯ ನರಕದಲ್ಲಿ ಹೊರಟು ಹೋಗುತ್ತಾನೆ. ಅಲ್ಲಿ ಎಂಥೆಂಥ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ ಮತ್ತು ಎಂಥೆಂಥ ಪರಿಣಾಮಗಳಾಗುತ್ತವೆಯೆಂಬುದರ ಚರ್ಚೆಯನ್ನು ನಾವು ಮಾಡಿ ಬಂದಿದ್ದೇವೆ. ನಮಗೆ ಕೂಡ ನಮ್ಮ ಅನುಕೂಲ ಸಂಯೋಗಗಳು ತುಂಬ ಹಿತವೆನಿಸುತ್ತವೆ, ಅವುಗಳನ್ನು ಸ್ವಲ್ಪ ಸಮಯದವರೆಗೆಯಾದರೂ ಬಿಟ್ಟುಕೊಟ್ಟು ಸ್ವಯಂ ನಮ್ಮ ಕಲ್ಯಾಣದ ಮಾತುಗಳನ್ನು ಆಲಿಸುವುದು ನಮಗೆ ಹಿತವೆನಿಸುವುದಿಲ್ಲ. ಆ ಚಕ್ರವರ್ತಿಗಳೂ ಕೂಡ ಅನುಕೂಲತೆಗಳಲ್ಲಿ ಮುಳುಗಿಕೊಂಡಿರುತ್ತಾರೆ. ಭೋಗಗಳು ಅವರಿಗೆ ಒಳ್ಳೆಯವೆನಿಸುತ್ತವೆ, ಅಂತೆಯೇ ಅವರು ಚಕ್ರವರ್ತಿ ಪದದಲ್ಲಿಯೇ ಉಳಿದು ಬಿಡುತ್ತಾರೆ. ಅನ್ಯಚಕ್ರವರ್ತಿಗಳು ಎಂದರೆ ಯಾರು ಚಕ್ರವರ್ತಿ ಪದದ ತ್ಯಾಗ ಮಾಡಿ ಮುನಿಪದ ಧಾರಣ ಮಾಡುತ್ತಾರೆ ಅವರಲ್ಲಿ ಅದೆಷ್ಟೋ ಜನರು ಮೋಕ್ಷಕ್ಕೆ ಹೋಗುತ್ತಾರೆ ಕೆಲವರು ಸ್ವರ್ಗಕ್ಕೆ ಹೋಗುತ್ತಾರೆ. ಇಂಥ ೧೨ ಚಕ್ರವರ್ತಿಗಳು ಈ ಭರತ ಕ್ಷೇತ್ರದಲ್ಲಿ ನಾಲ್ಕನೆಯ ಕಾಲದಲ್ಲಿ ಆಗುತ್ತಾರೆ. ಉತ್ಸರ್ಪಿಣಿ ಕಾಲದಲ್ಲಿ ಮತ್ತು ಅವಸರ್ಪಿಣಿ ಕಾಲದಲ್ಲಿ ಕೂಡ ಆಗುತ್ತಾರೆ.

ಉಳಿದ ಶಲಾಕಾ ಪುರುಷರು ೯ ನಾರಾಯಣ, ೯ ಪ್ರತಿನಾರಾಯಣ, ೯ ಬಲಭದ್ರರು ಇರುತ್ತಾರೆಂಬುದರ ಪರಿಚಯವಿದೆಯಲ್ಲವೇನು ? ಒಬ್ಬ ಬಲಭದ್ರನು ಎಂದರೆ ಕೃಷ್ಣನ ಅಣ್ಣನಾದ ಬಲರಾಮನು ಸ್ವರ್ಗಕ್ಕೆ ಹೋಗಿದ್ದಾನೆ ಉಳಿದ ಎಂಟು ಜನರು ಮೋಕ್ಷಕ್ಕೆ ಹೋಗಿದ್ದಾರೆ. ನಾರಾಯಣನನ್ನು ವಾಸುದೇವನೆಂದು ಹೇಳುತ್ತಾರೆ ಮತ್ತು ಪ್ರತಿ ನಾರಾಯಣನನ್ನು ಪ್ರತಿವಾಸುದೇವನೆಂದು ಹೇಳುತ್ತಾರೆ. ನಾರಾಯಣ, ಪ್ರತಿನಾರಾಯಣ ಮತ್ತು ಬಲಭದ್ರರು ಒಂದೇ ಕಾಲದಲ್ಲಿ ಆಗುತ್ತಾರೆ.

ನಾರಾಯಣ ಮತ್ತು ಬಲಭದ್ರರು ಅಣ್ಣ-ತಮ್ಮಂದಿರರಿರುತ್ತಾರೆ. ಎಂಥ ಅಣ್ಣ ತಮ್ಮಂದಿರು ? ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳಲ್ಲ ಆದರೆ ಮಲತಾಯಿಯ ಮಕ್ಕಳಿರುತ್ತಾರೆ - ಇಬ್ಬರ ತಾಯಂದಿರು ಬೇರೆ-ಬೇರೆಯಿರುತ್ತಾರೆ. ಹೇಗೆಂದರೆ ರಾಮನು ಬಲಭದ್ರ ಮತ್ತು ಲಕ್ಷ್ಮಣನು ನಾರಾಯಣರಿದ್ದು ಅವರಿಬ್ಬರೂ ದಶರಥ ದೊರೆಯ ಪುತ್ರರಿದ್ದರು ಆದರೆ ಅವರಿಬ್ಬರ ತಾಯಂದಿರು ಬೇರೆ-ಬೇರೆಯಿದ್ದರು. ರಾಮನು ಕೌಸಲ್ಯೆಯ ಪುತ್ರನಿದ್ದನು ಮತ್ತು ಲಕ್ಷ್ಮಣನು ಸುಮಿತ್ರೆಯ ಪುತ್ರನಾಗಿದ್ದನು. ನಾರಾಯಣ ಮತ್ತು ಬಲಭದ್ರರಲ್ಲಿ ಅತ್ಯಂತ ಪ್ರೀತಿಯಿರುತ್ತದೆ.

ಬೇರೆ ಒಬ್ಬ ನಾರಾಯಣ ಮತ್ತು ಬಲಭದ್ರರ ಹೆಸರು ಕೂಡ ಗೊತ್ತಿದೆಯಲ್ಲವೇನು ? - ಅಹುದು ಕೃಷ್ಣ ಮತ್ತು ಬಲರಾಮ.

ಪ್ರತಿನಾರಾಯಣರು ತ್ರಿಖಂಡಾಧಿಪತಿಗಳಿರುತ್ತಾರೆ. ಅರ್ಧ ಚಕ್ರವರ್ತಿಗಳಿರುತ್ತಾರೆ. ಹೇಗೆ ಚಕ್ರವರ್ತಿಗಳು ಆರು ಖಂಡಗಳ ಅಧಿಪತಿಯಾಗಿರುತ್ತಾರೆ, ಹಾಗೆ ಪ್ರತಿನಾರಾಯಣರು ಮೂರು ಖಂಡಗಳ ಅಧಿಪತಿಯಾಗಿರುತ್ತಾರೆ. ಆ ಪ್ರತಿನಾರಾಯಣರು ದುಷ್ಟವೃತ್ತಿಯವರಾಗಿರುತ್ತಾರೆ ಮತ್ತು ನಾರಾಯಣರು ಅವರುಗಳ ವಧೆ ಮಾಡುತ್ತಾರೆ.

ನಾರಾಯಣರು ಬಲಭದ್ರರಿಗಿಂತ ಮೊದಲು ಸಾಯುತ್ತಾರೆ. ಹೇಗೆಂದರೆ ಕೃಷ್ಣನ ಮರಣವು ಆತನ ಅಣ್ಣ ಬಲರಾಮನಿಗಿಂತ ಮೊದಲು ಮತ್ತು ಲಕ್ಷ್ಮಣನ ಮರಣವು ರಾಮಚಂದ್ರನಿಗಿಂತ ಮೊದಲು ಆಗಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯವಿದೆ. ಆ ಬಲದೇವರುಗಳದು ತಮ್ಮ ಸೋದರ ನಾರಾಯಣರುಗಳ ಕುರಿತಾಗಿ ಅತ್ಯಂತ ಅನುರಾಗ, ಅತಿಶಯ ಪ್ರೀತಿಯು ಸಹಜವಾಗಿಯೇ ಇರುತ್ತದೆ. ಆದುದರಿಂದ ಅವರು ಸತ್ತು ಹೋಗಿದ್ದಾರೆಂದು ಮನ್ನಿಸುವ ಸಲುವಾಗಿಯೂ ಕೂಡ ಅವರು ತಯಾರಾಗುವುದಿಲ್ಲ ಮತ್ತು ಆರು-ಆರು ತಿಂಗಳವರೆಗೆ ಅವರ ಶವವನ್ನು ಹೆಗಲ ಮೇಲೆ ಹೊತ್ತು ತಿರುಗುತ್ತಾರೆ. ಅವರಿಗೆ ಸ್ನಾನ ಮಾಡಿಸುವ, ಊಟ ಮಾಡಿಸುವ ಪ್ರಯತ್ನ ಮಾಡುತ್ತಾರೆ, ಅವರನ್ನು ಸಂತೈಸುವ, ಅವರ ಮನ ಒಲಿಸುವ ಪ್ರಯತ್ನ ಮಾಡುತ್ತಾರೆ, ತುಂಬ ಶೋಕ ಮಾಡುತ್ತಾರೆ.

ಸಮ್ಯಗ್ದೃಷ್ಟಿಗಳು ಕೂಡ ಹೀಗೆ ಮಾಡುವ ಸಾಧ್ಯತೆಯಿದೆಯೇನು ? - ಎಂಬ ಪ್ರಶ್ನೆಯು ನಮ್ಮ ಅಂತರಂಗದಲ್ಲಿ ಸ್ವಾಭಾವಿಕವಾಗಿ ಮೂಡಿ ಬರುತ್ತದೆ. ನಾವು ಅವರುಗಳ ಬಾಹ್ಯ ಕ್ರಿಯೆಯನ್ನು ನೋಡಿ ನಮ್ಮಂಥ ಅಜ್ಞಾನಿಗಳು ಕೂಡ ಮಾಡಲಾರದಂಥ ಕ್ರಿಯೆಗಳನ್ನು ಅವರು ಹೇಗೆ ಮಾಡುತ್ತಾರೆ ? - ಎಂದು ವಿಚಾರ ಮಾಡುತ್ತೇವೆ ಪ್ರಥಮಾನುಯೋಗವನ್ನು ಓದುವಾಗ, ಅವರಿಗೆ ಇಷ್ಟೂ ತಿಳಿಯುತ್ತಿರಲಿಲ್ಲವೇನು ಆರು-ಆರು ತಿಂಗಳವರೆಗೆ ತಮ್ಮಂದಿರರ ಶವವನ್ನು ಹೊತ್ತು ತಿರುಗುತ್ತಾರೆಂದರೆ ಅವರೆಂಥ ಸಮ್ಯಗ್ದೃಷ್ಟಿಗಳು ? ಎಂದೆನಿಸುತ್ತದೆ. ಏನು ಮಾಡುವುದು; ಅಂಥದೇ ಪ್ರೀತಿಯು ಅವರದು ಪರಸ್ಪರರ ಸಲುವಾಗಿ ಇರುತ್ತದೆ ಮತ್ತು ಆರು ತಿಂಗಳವರೆಗೆ ಹೀಗೆಯೇ ಅವರ ಬುದ್ಧಿಯೂ ಭ್ರಷ್ಟವಾಗಿ ಹೋಗುತ್ತದೆ. ಆದಾಗ್ಯೂ ಚಾರಿತ್ರಮೋಹನೀಯ ಕರ್ಮದ ವಶರಾಗುವುದರಿಂದ ಹೀಗೆ ಆಗುತ್ತದೆ ಅಲ್ಲಿ ಮಿಥ್ಯಾತ್ವ ಮತ್ತು ಅನಂತಾನುಬಂಧಿಯ ಉದಯವಿರುವುದೇ ಇಲ್ಲ. ಉಳಿದ ಯಾವ ಚಾರಿತ್ರಮೋಹವಿರುತ್ತದೆ, ಅದರ ಕಾರಣದಿಂದ ಇದೆಲ್ಲ ಆಗುತ್ತದೆ.

ಈ ರೀತಿ ಪ್ರತಿ ಚತುರ್ಥ ಕಾಲದಲ್ಲಿ ೬೩ ಶಲಾಕಾ ಪುರುಷರಾಗುತ್ತಾರೆ. ಇನ್ನು ಈ ಅವಸರ್ಪಿಣಿ ಕಾಲದಲ್ಲಿಯೂ ೬೩ ಶಲಾಕಾ ಪುರುಷರು ಆಗಿರಬಹುದಲ್ಲವೇನು ? ಏಕೆಂದರೆ ಇದಂತೂ ಅಬಾಧಿತ ನಿಯಮವಿದೆ.

ಉತ್ತರ :- ಇಲ್ಲ, ನಾಲ್ಕು ಕಡಿಮೆಯಾಗಿದ್ದಾರೆ, ೫೯ ಶಲಾಕಾ ಪುರುಷರೇ ಆಗಿದ್ದಾರೆ. ಎಂದರೆ ಇವರುಗಳಲ್ಲಿ ಕೆಲವರದು ದ್ವಿಪಾತ್ರವಾಗಿದೆ, ಒಂದು ವೇಳೆ ಎಲ್ಲರೂ ಬೇರೆ ಜೀವರುಗಳಾಗಿರುತ್ತಿದ್ದರೆ ೬೩ ಆಗುತ್ತಿದ್ದರು. ನಮ್ಮ ಮೂವರು ತೀರ್ಥಂಕರರು ಎರಡು ಪಾತ್ರಗಳ ನಿರ್ವಹಣೆ ಮಾಡಿದ್ದಾರೆ ಅಲ್ಲವೇನು ? - ಶಾಂತಿನಾಥ, ಕುಂಥುನಾಥ ಮತ್ತು ಅರನಾಥರು ಚಕ್ರವರ್ತಿಗಳೂ ಆಗಿದ್ದರು. ಅಲ್ಲದೆ ಮಹಾವೀರರ ಜೀವನು ಮೊದಲು ಎಂದರೆ ಶ್ರೇಯಾಂಸನಾಥ ತೀರ್ಥಂಕರರ ಕಾಲದಲ್ಲಿ ತ್ರಿಪೃಷ್ಠ ನಾರಾಯಣನಾಗಿದ್ದನು. ನಂತರ ಆ ಜೀವನು ನರಕದೊಳಗೆ ಹೋದನು. ನಾರಾಯಣ ಮತ್ತು ಪ್ರತಿನಾರಾಯಣರೆಲ್ಲರೂ ಸತ್ತು ನಿಯಮದಿಂದ

ನರಕದೊಳಗೇ ಹೋಗುತ್ತಾರೆ. ಬಲಭದ್ರರು ಕೆಲವರು ಮೋಕ್ಷಕ್ಕೆ ಹೋಗುತ್ತಾರೆ ಕೆಲವರು ಸ್ವರ್ಗದೊಳಗೆ ಹೋಗುತ್ತಾರೆ. ಈ ೬೩ ಶಲಾಕಾ ಪುರುಷರನ್ನು ಹೊರತುಪಡಿಸಿ ಬೇರೆಯೂ ಮಹಾಪುರುಷರಾಗುತ್ತಾರೆ. ಹೇಗೆಂದರೆ ಕಾಮದೇವ, ತೀರ್ಥಂಕರರ ಮಾತಾ-ಪಿತರು, ನಾರದ, ರುದ್ರ ಮೊದಲಾದವರು. ಇವರುಗಳದೂ ತಮ್ಮದೇ ಆದ ವಿಶೇಷತೆಗಳಿರುತ್ತವೆ.

ರುದ್ರರು ಕೂಡ ಮುಂದೆ ಮೋಕ್ಷಕ್ಕೆ ಹೋಗುತ್ತಾರೆ ಆದರೆ ಆ ಭವದಲ್ಲಿ ಅವರು ಭಾವಲಿಂಗೀ ಸಂತರಾಗಿಯೂ ಕೂಡ ನಂತರ ಭ್ರಷ್ಟರಾಗಿ ಹೋಗುತ್ತಾರೆ-ನರಕಕ್ಕೆ ಹೊರಟು ಹೋಗುತ್ತಾರೆ. ನೋಡಿರಿ, ಜೀವರುಗಳ ಪರಿಣಾಮದಲ್ಲಿ ಎಂಥೆಂಥ ಬದಲಾವಣೆಯಾಗಬಹುದಾಗಿದೆ ? ಕೆಲವರು ಭಾವಲಿಂಗೀ ಸಂತರಿದ್ದು, ಅವರ ಜೀವನವು ಕೋಟಿ ಪೂರ್ವದ ಆಯುವಿನಲ್ಲಿ ಅಧಿಕ ಕಾಲದವರೆಗಂತೂ ಭಾವಲಿಂಗೀ ಮುನಿ ಅವಸ್ಥೆಯಲ್ಲಿ ಕಳೆದು ಹೋಗುತ್ತದೆ, ಆದರೆ ನಂತರ ಪರಿಣಾಮಗಳು ಯಾವ ರೀತಿ ಕೆಟ್ಟು ಹೋಗುತ್ತವೆಯೆಂದರೆ ಅವರು ಮಿಥ್ಯಾತ್ವದಲ್ಲಿ ಹೊರಟು ಹೋಗುತ್ತಾರೆ ಅಷ್ಟೇ ಅಲ್ಲ ಮಿಥ್ಯಾತ್ವದಲ್ಲಿ ಆಯುಬಂಧ ಮಾಡಿಕೊಂಡು ನರಕ-ನಿಗೋದದಲ್ಲಿ ಹೊರಟು ಹೋಗುವ ಸಾಧ್ಯತೆಯಿದೆ. ಅದರಿಂದ ನಮ್ಮ ಪರಿಣಾಮಗಳು ಯಾವಾಗ ಯಾವ ರೀತಿಯವಾಗಬಹುದಾಗಿದೆ ಎಂಬುದರ ಭರವಸೆಯಿಲ್ಲ.

ನಾವು ವೃದ್ಧರಾದ ಮೇಲೆ ಧರ್ಮಮಾಡಬಹುದಾಗಿದೆಯೆಂದು ವಿಚಾರ ಮಾಡುತ್ತೇವೆ, ಯಾವುದರ ಭರವಸೆಯನ್ನಿಟ್ಟುಕೊಂಡಿದ್ದೇವೆ ? ವರ್ತಮಾನದ ಪರಿಣಾಮಗಳ ಭರವಸೆಯಿಲ್ಲ ಮತ್ತು ಭವಿಷ್ಯಕಾಲದ ಪರಿಣಾಮಗಳ ನಂಬಿಗೆಯಲ್ಲಿ ಬಾಳುತ್ತಿದ್ದೇವೆ. ಲೋಕದಲ್ಲಿಯೂ ಉಕ್ತಿಯಿದೆ - 'ಹಂಚು ಕಾಯ್ದಿರುವಾಗ ರೊಟ್ಟಿಯನ್ನು ಸುಟ್ಟು ತಗೆಯಬೇಕು.' ತಿಳಿಯಲಿಲ್ಲವೇನು ? ಮಹಿಳೆಯರು ರೊಟ್ಟಿ ಮಾಡುತ್ತಿರುತ್ತಾರೆ ಅಷ್ಟರಲ್ಲಿ ಯಾರದೋ ದೂರವಾಣಿಯ ಕರೆ ಬರುತ್ತದೆ, ಆಗ ಒಲೆ ಉರಿಯುತ್ತಿರುವುದು (ಗ್ಯಾಸ ಹಚ್ಚಿರುವುದು) ಗಮನಕ್ಕೆ ಬಂದರೆ ಒಲೆಯನ್ನು (ಗ್ಯಾಸ) ಆರಿಸಿ ಮಾತಿಗೆ ಆರಂಭ ಮಾಡುತ್ತಾರೆ. ಆಯಿತು ಅರ್ಧ ಮುಕ್ಕಾಲು ಗಂಟೆಯಂತೂ ಕಳೆದು ಹೋಗುತ್ತದೆ. ನಂತರ ರೊಟ್ಟಿ ಮಾಡುತ್ತಾರೆ, ಆಗ ತಣ್ಣಗಾದ ಹಂಚಿನ ಮೇಲೆ ಅದನ್ನು ಸುಡಬಹುದಾಗಿದೆಯೇನು ? ಇಲ್ಲವಲ್ಲ, ಅದೇ ರೀತಿ ಈಗಂತೂ ಸ್ವಾಧ್ಯಾಯ ಮಾಡಿ (ಧಾರ್ಮಿಕ ಶಿಬಿರದಲ್ಲಿ ಪಾಲ್ಗೊಂಡು) ಶಾಸ್ತ್ರ ಶ್ರವಣದ ಪರಿಣಾಮಗಳಾಗಿವೆ; ಭವಿಷ್ಯದಲ್ಲಿ ಮಾಡೋಣವೆಂದರೆ ಯಾವಾಗ ಯಾವ ರೀತಿಯ ಕರೆಗಂಟೆ (ರೋಗ, ವಿಯೋಗ)ಗಳು ಬರುತ್ತವೆಯೆಂಬುದು ಯಾರಿಗೆ ಗೊತ್ತಿದೆ? ಅವುಗಳ ಮಧ್ಯದಲ್ಲಿ ಪರಿಣಾಮಗಳು ಅದೆಷ್ಟು ಛಿನ್ನ-ಭಿನ್ನವಾಗಿ, ನಷ್ಟ-ಭ್ರಷ್ಟವಾಗಿ ಎಂದರೆ ಎಷ್ಟು ಮಲಿನವಾಗಿ ಹೋಗಬಹುದಾಗಿದೆ ? ಎಂಬುದನ್ನು ಬಲ್ಲವರಾರು ! ಒಂದು ವೇಳೆ ಈಗ ಆಲಿಸದಿದ್ದರೆ ಯಾವಾಗ ಆಲಿಸಿ ತಿಳಿಯುವುದು, ಅದರ ಕುರಿತು ಯಾವಾಗ ವಿಚಾರ ಮಾಡುವುದು, ಇದು ಹೀಗೆಯೇ ಇದೆಯೆಂಬ ನಿರ್ಣಯವನ್ನು ಯಾವಾಗ ಮಾಡುವುದು ಇವೆಲ್ಲ ಕಾರ್ಯಗಳು ಯಾವಾಗ ನಡೆಯಬಹುದಾಗಿದೆ ? ಇತರರ ಮರಣವನ್ನು ನೋಡುತ್ತೇವೆ ಆದರೆ ನಮ್ಮನ್ನು ನಾವು ಅಮರರೆಂದು ಮನ್ನಿಸಿ ನಿಶ್ಚಿಂತರಾಗಿದ್ದೇವೆ.

ಯಾವ ಪರಿಣಾಮದಲ್ಲಿ ಯಾವಾಗ ಎಂಥ ಆಯುವಿನ ಬಂಧವಾಗುತ್ತದೆ ಮತ್ತು ಎಲ್ಲಿ ಹೋಗಿ ಜನಿಸಬೇಕಾಗುತ್ತದೆಯೆಂಬುದು ಯಾರಿಗೂ ಗೊತ್ತಿಲ್ಲ. ಸಂಪೂರ್ಣ ಲೋಕದಲ್ಲಿ ಈ ಜೀವನು ಎಲ್ಲಿ ಹೋಗಿ ಅಪ್ಪಳಿಸುವನು ಎಂಬುದರ ಪರಿಚಯವಿಲ್ಲ. - ನರಕದಲ್ಲಿ - ನಿಗೋದದಲ್ಲಿ ಎಲ್ಲಿ ಬೇಕಾದರೂ ಹೋಗುವ

ಸಾಧ್ಯತೆಯಿದೆ. ಈಗಂತೂ ಯಾವ ಸಂಯೋಗಗಳು ಪ್ರಾಪ್ತವಾಗಿವೆ ಅವುಗಳನ್ನು ಬಿಟ್ಟುಕೊಡಲಿಚ್ಛಿಸುವುದಿಲ್ಲ; ಆದರೆ ಮುಂದೆ ಎಂಥ ಸಂಯೋಗಗಳು ಪ್ರಾಪ್ತವಾಗಬಹುದಾಗಿದೆ ? ಇಲ್ಲಿಂದ ಸತ್ತು ಯಾವ ಗತಿಗಳಿಗೆ ಹೋಗಬೇಕಾಗುವುದು ಅಲ್ಲಿ ನಮ್ಮ ಕಲ್ಯಾಣದ ಮಾತುಗಳು ಕೇಳಲಿಕ್ಕೆ ಕೂಡ ಸಿಗುತ್ತವೆಯೋ ಅಥವಾ ಇಲ್ಲವೆಂಬುದನ್ನು ಹೇಗೆ ಹೇಳಬಹುದಾಗಿದೆ ?

ಈ ಪ್ರಕಾರ ನಾವು ಶಲಾಕಾಪುರುಷರ ವಿಷಯವನ್ನು ತಿಳಿದುಕೊಂಡಾಯಿತು. ಇಲ್ಲಿಯವರೆಗೆ ನಾವು ಸಂಪೂರ್ಣ ಲೋಕದಲ್ಲಿ ಮೇಲೆ ಊರ್ಧ್ವಲೋಕವಿದೆ, ಮಧ್ಯದೊಳಗೆ ಮಧ್ಯಲೋಕವಿದೆ, ಕೆಳಗೆ ಅಧೋಲೋಕವಿದೆ ಎಂಬುದನ್ನು ತಿಳಿಯುವುದರ ಜತೆ-ಜತೆಯಾಗಿ ಅಧೋಲೋಕದಲ್ಲಿ ನರಕಗಳ ರಚನೆ, ಅಲ್ಲಿಯ ಪ್ರತಿಕೂಲತೆಯ ಮಾತುಗಳನ್ನೂ ತಿಳಿದೆವು. ಅಂಥ ಪ್ರತಿಕೂಲತೆಗಳ ಮಧ್ಯದಲ್ಲಿಯೂ ಅಸಂಖ್ಯಾತ ಜೀವರುಗಳು ಸಮ್ಯಗ್ದರ್ಶನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ-ವೇದಕ ಸಮ್ಯಕ್ತ್ವ ಅಥವಾ ಪ್ರಥಮೋಪಶಮ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಇದರಿಂದ ಎಂಥದೇ ಸಂಯೋಗವಿದ್ದರೂ ನಮ್ಮ ಮಾರ್ಗವು ತಡೆಯಲ್ಪಡುವುದಿಲ್ಲವೆಂಬ ಮಾತಿನ ಪರಿಚಯವಾಗುತ್ತದೆ. ನಮಗಂತೂ ಸಂಯೋಗಗಳಲ್ಲಿ ಅಭಿರುಚಿಯಿದೆ. ಅಲ್ಲಿ ನರಕಗಳ ಅತ್ಯಂತ ಪ್ರತಿಕೂಲ ಸಂಯೋಗಗಳ ಅಭಿರುಚಿಯಂತೂ ನಾರಕಿಗಳಿಗೆ ಇರುವ ಸಾಧ್ಯತೆಯಿಲ್ಲ. ಅಲ್ಲಿಯೂ ಕೂಡ ಅನೇಕ ಜೀವರುಗಳು ವಿಚಾರ ಮಾಡುತ್ತಾರೆ. ಇದೆಂಥ ಸನ್ನಿವೇಶವಿದೆ - ಎಂಥ ಪರಿಸ್ಥಿತಿಗಳು ಬಂದು ಬೀಳುತ್ತಿವೆ ? ಎಷ್ಟು ತೀವ್ರ ವೇದನೆಯಾಗುತ್ತಿದೆ ? ನನ್ನಲ್ಲಿ ಎಂಥ ಪರಿಣಾಮಗಳಾಗುತ್ತಿವೆ ? - ಈ ರಾಗ-ದ್ವೇಷ-ಸಂಕ್ಲೇಶಾದಿ ಪರಿಣಾಮಗಳಿಂದ ನಾನು ಭಿನ್ನನಿದ್ದೇನೆ - ಎಂಬಿಂಥ ತತ್ತ್ವದ ವಿಚಾರಗಳಿಂದ ಜೀವನು ಅಲ್ಲಿ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳುತ್ತಾನೆ.

ಪ್ರಶ್ನೆ :- ಏಕೇಂದ್ರಿಯ ಜೀವವು ನರಕಕ್ಕೆ ಹೋಗುವುದಿಲ್ಲ. ಅಲ್ಲಿಯೂ ಪೃಥ್ವಿಯಂತೂ ಇದೆಯಲ್ಲವೇನು?

ಉತ್ತರ :- ನರಕದ ಕ್ಷೇತ್ರವು ಭಿನ್ನವಿಷಯವಿದೆ ಮತ್ತು ನಾರಕಿಯಾಗುವ ಮಾತು ಬೇರೆಯಿದೆ. ನರಕವಿದೆ ಅದಂತೂ ಪೃಥ್ವಿಯೇ ಇದೆ, ಅಲ್ಲಿ ಬಾದರ ಪೃಥ್ವಿಕಾಯಿಕ ಜೀವಗಳಿವೆ. ಆ ಏಳೂ ಪೃಥ್ವಿಗಳ ಆಧಾರದಿಂದ ಐದೂ ಪ್ರಕಾರದ ಬಾದರ ಏಕೇಂದ್ರಿಯ ಜೀವಗಳಿರುತ್ತವೆ; ಆದರೆ ಅವು ನರಕಗತಿಯ ಜೀವಗಳಲ್ಲ. ಈ ಪೃಥ್ವಿಗಳ ಕೆಳಗೆ ಮೂರು-ಮೂರು ವಾತವಲಯಗಳಿವೆ, ಮಧ್ಯದಲ್ಲಿ ಅಸಂಖ್ಯಾತ ಯೋಜನಗಳ ಅಂತರಾಳವಿದೆ. ಐದೂ ಪ್ರಕಾರದ ಸೂಕ್ಷ್ಮ ಜೀವಗಳಂತೂ ಸರ್ವತ್ರವಿವೆ - ಇಡೀ ಲೋಕಾಕಾಶದಲ್ಲಿ ಸ್ಥಾವರ ಜೀವಗಳಿರುತ್ತವೆ. ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ ಇವೆಲ್ಲ ಜೀವಗಳು ಸಂಪೂರ್ಣ ಲೋಕದಲ್ಲಿ ಅಸಂಖ್ಯಾತ-ಅಸಂಖ್ಯಾತವಿವೆ ಮತ್ತು ನಿಗೋದ ಶರೀರಗಳು ಕೂಡ ಅಸಂಖ್ಯಾತವಿವೆ ಆದರೆ ಒಂದೊಂದು ನಿಗೋದ ಶರೀರದಲ್ಲಿ ಅನಂತ-ಅನಂತ ಜೀವಗಳು ಕಂಡು ಬಂದಿವೆ. ಎಷ್ಟು ಅನಂತವೆಂದರೆ ಮೂರು ಕಾಲದಲ್ಲಿ ಎಷ್ಟು ಸಿದ್ಧರಾಗುವರು ಅವರಿಗಿಂತಲೂ ಅನಂತ ಗುಣಿತ ಜೀವಗಳು ಒಂದು ನಿಗೋದ ಶರೀರದಲ್ಲಿರುತ್ತವೆ - ಸೂಕ್ಷ್ಮ ನಿಗೋದದಲ್ಲಿಯೂ ಮತ್ತು ಬಾದರ ನಿಗೋದದಲ್ಲಿಯೂ ಕೂಡ ಅನಂತ ಜೀವಗಳಿರುತ್ತವೆ. ಬಾದರ ನಿಗೋದವೆಂದರೆ ಆಲೂಗಡ್ಡೆ, ಈರುಳ್ಳಿ, ಗಜ್ಜರಿ, ಗೆಣಸು, ಮೂಲಂಗಿ, ಬೆಳ್ಳೊಳ್ಳಿ, ಲೋಳೆಸರ (ಅಲೋವ್ಹೇರಾ)ಗಳಲ್ಲಿ ಅನಂತ ಜೀವಗಳು - ಒಂದು ಚಿಕ್ಕ ತುಂಡಿನಲ್ಲಿ ಅಸಂಖ್ಯಾತ ಶರೀರಗಳಿರುತ್ತವೆ ಮತ್ತು ಒಂದೊಂದು ಶರೀರದಲ್ಲಿ ಅನಂತ ಜೀವಗಳಿರುತ್ತವೆ. ಒಂದು ಶರೀರದಲ್ಲಿ ಕಂಡು ಬರುವಂಥ ಜೀವಗಳ ಅನಂತದ ಒಂದು ಭಾಗ ಪ್ರಮಾಣ ಜೀವಗಳು ಕೂಡ ಮೂರು ಕಾಲದಲ್ಲಿ ಸಿದ್ಧರಾಗುವ ಸಂಭವವಿಲ್ಲ. ಜೀವಗಳ

ಅನಂತತೆಯು ನಮ್ಮ ಬುದ್ಧಿಯ ಹಿಡಿತದಲ್ಲಿ ಬರುವುದಿಲ್ಲ. ಅಂತೆಯೇ ಇಷ್ಟು ಜೀವಗಳು ಸಿದ್ಧರಾಗುತ್ತ ಹೋದರೆ ಇಲ್ಲಿ ಯಾರು ಉಳಿಯಬಹುದಾಗಿದೆ ಎಂಬ ಪ್ರಶ್ನೆಯು ನಮ್ಮಲ್ಲಿ ಮೂಡಿ ಬರುತ್ತದೆ. ಕೆಲವರಂತೂ ತಾವು ಇಷ್ಟೊಂದು ಸ್ವಾಧ್ಯಾಯ ಮಾಡುತ್ತೀರಿ, ಮಾಡಿಸುತ್ತೀರಿ; ಒಂದು ವೇಳೆ ಎಲ್ಲರೂ ಸ್ವಾಧ್ಯಾಯ ಮಾಡಿ ಸಿದ್ಧರಾಗಿ ಹೋದರೆ ಗತಿಯೇನು ? ನಮ್ಮ ಆಸ್ತಿ-ಸಂಪತ್ತುಗಳ ಅವಸ್ಥೆಯೇನಾಗಬೇಕು ? - ಇವೆಲ್ಲವುಗಳ ರಕ್ಷಣೆಯನ್ನು ಯಾರು ಮಾಡುವರು ? ಭಗವಂತನು ಇವೆಲ್ಲವುಗಳ ನಿರ್ಮಾಣ ಮಾಡಿರುವಾಗ ಅವುಗಳನ್ನು ಭೋಗಿಸುವವರು ಯಾರು ? ತಿನ್ನುವವರು ಯಾರು ? - ಎಂದು ಕೇಳುತ್ತಾರೆ ಹೀಗೆ ವಿಚಾರ ಮಾಡುವಂಥವರು ಮತ್ತು ಕೇಳುವಂಥವರು ಇಡೀ ವಿಶ್ವವನ್ನು ತಮ್ಮ ಭೋಗ್ಯವೆಂದು ಮನ್ನಿಸಿದ್ದಾರೆ.

ನಮ್ಮ ಇಂಥ ಅನೇಕ ಪ್ರಶ್ನೆಗಳ ಉತ್ತರದ ರೂಪದಲ್ಲಿ ಚರ್ಚೆಯು ನಡೆಯುತ್ತಿದೆ. ಏಕೇಂದ್ರಿಯದಿಂದ ಚತುರಿಂದ್ರಿಯದವರೆಗಿನ ಜೀವಗಳು ಸತ್ತು ನಾರಕಿಯಾಗುವುದಿಲ್ಲ ಮತ್ತು ಅವು ದೇವಗತಿಯಲ್ಲಿಯೂ ಕೂಡ ಹೋಗುವ ಸಾಧ್ಯತೆಯಿಲ್ಲ. ಇವೆಲ್ಲ ನಿಯಮಗಳಿವೆ. ಯಾವ ಗತಿಯ ಅಥವಾ ಮಾರ್ಗಣಾದ ಜೀವವು ಯಾವ ಕರ್ಮ ಪ್ರಕೃತಿಯ ಬಂಧವನ್ನು ಯಾವಾಗ ಮಾಡಿಕೊಳ್ಳುವ ಸಾಧ್ಯತೆಯಿದೆ ? ಯಾರಿಗೆ ಯಾವ ಪ್ರಕೃತಿಗಳ ಉದಯವು ಯಾವಾಗ ಆಗುತ್ತದೆ ? ಇವೆಲ್ಲವುಗಳ ಎಲ್ಲ ನಿಯಮಗಳಿವೆ ಮತ್ತು ಅವು ನಿಶ್ಚಿತವಿವೆ. ಅವುಗಳಲ್ಲಿ ಯಾರೂ ಪರಿವರ್ತನೆ ಮಾಡುವ ಸಾಧ್ಯತೆಯಿಲ್ಲ. ನಾವು ಕೇವಲ ಅವುಗಳನ್ನು ತಿಳಿಯುವ ಸಾಧ್ಯತೆಯಿದೆ. ನಾವು ಅವುಗಳನ್ನು ಅಥವಾ ಆ ಭಾವಗಳನ್ನು ಬದಲಿಸುವ ಸಾಧ್ಯತೆಯಿಲ್ಲ.

ಈಗ ನರಕಗಳ ವರ್ಣನೆಯು ಸಮಾಪ್ತವಾಯಿತು ಆದರೆ ಅಧೋಲೋಕದ ವರ್ಣನೆಯು ಸಮಾಪ್ತವಾಗಿಲ್ಲ. ಮೊದಲಿನ ರತ್ನಪ್ರಭಾ ಪೃಥ್ವಿಯ ಮೇಲಿನ ಎರಡು ಭಾಗಗಳಲ್ಲಿ ಅರ್ಥಾತ್ ಖರಭಾಗ ಮತ್ತು ಪಂಕಭಾಗದಲ್ಲಿ ಭವನವಾಸಿ ಮತ್ತು ವ್ಯಂತರ ಜಾತಿಯ ದೇವಗಳಿರುತ್ತಾರೆ, ಅವರು ಅಧೋಲೋಕದಲ್ಲಿ ವಾಸಮಾಡುವಂಥ ದೇವಗತಿಯ ಜೀವಗಳಿದ್ದಾರೆ. ಎಲ್ಲ ದೇವಗಳು ಊರ್ಧ್ವಲೋಕದಲ್ಲಿ ಮತ್ತು ನಾರಕಿಗಳು ಅಧೋಲೋಕದಲ್ಲಿ ಇರುತ್ತಾರೆಂದು ನಮಗೆನಿಸುತ್ತದೆ, ಆದರೆ ಹಾಗೆ ಇಲ್ಲ. ನಾರಕಿಗಳಂತೂ ಕೇವಲ ಅಧೋಲೋಕದಲ್ಲಿ ತಮ್ಮ-ತಮ್ಮ ಬಿಲಗಳಲ್ಲಿ ಕಂಡು ಬರುತ್ತಾರೆ ಆದರೆ ದೇವಗತಿಯ ಜೀವಗಳು ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕದಲ್ಲಿ ಯಥಾಯೋಗ್ಯ ಸ್ಥಾನಗಳಲ್ಲಿ ಇರುತ್ತಾರೆ. ಜ್ಯೋತಿಷಿಗಳು ಮಧ್ಯಲೋಕದಲ್ಲಿ ಇರುತ್ತಾರೆ.

ಈ ಭವನವಾಸಿ, ವ್ಯಂತರ, ಜ್ಯೋತಿಷಿಗಳು ಯಾರಿದ್ದಾರೆ ನೋಡೋಣ. ಮೂವರನ್ನೂ ಸೇರಿಸಿ ಭವನತ್ರಿಕವೆಂದು ಹೇಳುತ್ತಾರೆ. ನಾವೆಲ್ಲರೂ ಆರು ಗುರಾಣಿಗಳಲ್ಲಿ ಓದಿದ್ದೇವೆ-ಆಲಿಸಿದ್ದೇವೆ ಅಲ್ಲವೇನು ? ಮನುಷ್ಯರು ಅಥವಾ ತಿರ್ಯಂಚಗಳು ಸಮ್ಯಕ್ತ್ವದ ಜತೆಯಲ್ಲಿ ಮರಣಹೊಂದಿ ಈ ಭವನತ್ರಿಕಗಳಲ್ಲಿ ಜನಿಸುವುದಿಲ್ಲ, ಅಲ್ಲಿಯ ಜೀವಗಳು ಜನ್ಮದಿಂದ ಸಮ್ಯಗ್ದೃಷ್ಟಿಯಾಗಿರುವುದಿಲ್ಲ; ಬೇಕಾದರೆ ಅವರು ನಂತರದಲ್ಲಿ ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳಬಹುದಾಗಿದೆ, ಚತುರ್ಥ ಗುಣಸ್ಥಾನವರ್ತಿಗಳಾಗಬಹುದಾಗಿದೆ. ಆದರೆ ಅಸಂಯತ ಸಮ್ಯಗ್ದೃಷ್ಟಿಗಳು ಅಥವಾ ದೇಶಸಂಯತ- ಪಂಚಮ ಗುಣಸ್ಥಾನವರ್ತೀ ಜೀವರುಗಳು ಪೂಜನೀಯರಿರುವುದಿಲ್ಲ ಎಂದರೆ ಅವರಿಗೆ ಅರ್ಘ್ಯ ಸಮರ್ಪಣೆ ಮಾಡುವುದು, ಪೂಜೆ-ವಂದನೆ ಮಾಡುವುದು ಅವರ ಆರತಿ ಮಾಡುವುದು ಇರುವುದಿಲ್ಲ. ಚರಣಾನುಯೋಗಕ್ಕೆ ಸಂಬಂಧಿಸಿದ ನಿಯಮಗಳೂ ಇರುತ್ತವೆ,

ಅವುಗಳನ್ನು ತಿಳಿದುಕೊಂಡು ವಿವೇಕಪೂರ್ಣವಾದ ಆಚರಣೆಯನ್ನಿಟ್ಟುಕೊಳ್ಳುವುದು ಯೋಗ್ಯವಿದೆ, ಇಲ್ಲದಿದ್ದರೆ ಮಿಥ್ಯಾತ್ವದ ದೋಷವು ಬರುತ್ತದೆ. ಭವನತ್ರಿಕಗಳ ಯಕ್ಷ, ದೇವ, ದೇವಿಯರನ್ನು ಭಗವಂತರೆಂದು ಮನ್ನಿಸುವುದು, ಅವರ ಪೂಜೆ ಮಾಡುವುದು ಗೃಹೀತ ಮಿಥ್ಯಾತ್ವವಿದೆ. ಅವರಂತೂ ಭಗವಂತರ ಭಕ್ತರಿದ್ದಾರೆ, ಭಗವಂತರಿಲ್ಲ. ನಾವು ವಿಚಾರ ಮಾಡದೇ ಯಾರೋ ಮಾಡುತ್ತಿರುವುದನ್ನು ಕಂಡು ಇಂಥ ಕಾರ್ಯಗಳನ್ನು ಮಾಡುತ್ತೇವೆ-ಸ್ವಯಂ ಯಾವ ವಿಚಾರವನ್ನೇ ಮಾಡುವುದಿಲ್ಲ.

ಭವನವಾಸೀ ದೇವಗಳು ಭವನಗಳಲ್ಲಿ ಇರುತ್ತಾರೆ. ನಮ್ಮಲ್ಲಿ ಯಾವ ಪ್ರಕಾರ ಗರ್ಭಗೃಹ ಅಥವಾ ನೆಲಮಾಳಿಗೆಗಳಿರುತ್ತವೆ ಅದೇ ಪ್ರಕಾರ ಪ್ರಥಮ ಪೃಥ್ವಿಯ ಖರಭಾಗ ಮತ್ತು ಪಂಕಭಾಗದಲ್ಲಿ ಪೃಥ್ವಿಯ ಮಧ್ಯದಲ್ಲಿಯೇ ಈ ದೇವಗಳು ವಾಸಮಾಡುವಂಥ ಸ್ಥಾನ-ಭವನಗಳಿರುತ್ತವೆ. ಅಲ್ಲಿ ಆ ದೇವಗಳ ವಾಸಮಾಡುವ ಪ್ರಾಸಾದಗಳು, ಜಿನಮಂದಿರಗಳು, ಅಕೃತ್ರಿಮ ಚೈತ್ಯಾಲಯ ಮೊದಲಾದವುಗಳಿರುತ್ತವೆ. ನಾವು ಮೂರು ಲೋಕದ ಅಕೃತ್ರಿಮ ಜಿನಚೈತ್ಯಾಲಯಗಳ ಪೂಜೆ ಮಾಡುತ್ತಿರುವಾಗ ಅಧೋಲೋಕದ ೭ ಕೋಟಿ ೭೨ ಲಕ್ಷ ಜಿನಚೈತ್ಯಾಲಯಗಳಿಗೆ ನಮಸ್ಕಾರ ಮಾಡುತ್ತೇವೆ, ಅರ್ಘ್ಯ ಸಮರ್ಪಿಸುತ್ತೇವೆ. ಊರ್ಧ್ವಲೋಕದ ೮೪ ಲಕ್ಷ ೯೭ ಸಾವಿರದಾ ೨೩ ಅಕೃತ್ರಿಮ ಚೈತ್ಯಾಲಯಗಳಿಗೆ ಮತ್ತು ಮಧ್ಯಲೋಕದ ೪೫೮ ಅಕೃತ್ರಿಮ ಚೈತ್ಯಾಲಯಗಳಿಗೆ ನಾವು ಅರ್ಘ್ಯ ಸಮರ್ಪಣೆ ಮಾಡುತ್ತೇವೆ. ಇವುಗಳ ರಚನೆ ಹಾಗೂ ವಿಶೇಷ ವರ್ಣನೆಯನ್ನು ನಾವು ಮುಂದೆ ನೋಡೋಣ. ವ್ಯಂತರರಲ್ಲಿ ಅದೆಷ್ಟೋ ವ್ಯಂತರರ ಭವನಗಳಿರುತ್ತವೆ, ಕೆಲವರವು ಆವಾಸಗಳಿರುತ್ತವೆ ಮತ್ತು ಕೆಲವರವು ಭವನ ಪುರಗಳು ಕೂಡ ಇರುತ್ತವೆ. ಇವರುಗಳ ಚರ್ಚೆಯು ಕೂಡ ಮುಂದೆ ಬರುವುದಿದೆ. ವ್ಯಂತರರುಗಳ ಮತ್ತು ಜ್ಯೋತಿಷಿಗಳವು ಕೂಡ ಅಕೃತ್ರಿಮ ಚೈತ್ಯಾಲಯಗಳಿರುತ್ತವೆ, ಅವು ಅಸಂಖ್ಯಾತವಿವೆ. ಇವುಗಳನ್ನು ಹೊರತುಪಡಿಸಿ ಚೈತ್ಯವೃಕ್ಷ, ಮಾನಸ್ತಂಭ, ಜಿನಬಿಂಬ, ಚೈತ್ಯಗಳು ಅನೇಕ ಕಡೆಗಳಲ್ಲಿ ಇರುತ್ತವೆ, ಸರ್ವತ್ರ ಜಿನಬಿಂಬಗಳು ವಿರಾಜಮಾನವಿವೆ, ಎಲ್ಲ ಕಡೆಗೆ ಒಂದು ಜಿನಧರ್ಮವೇ ನಡೆಯುತ್ತದೆ.

ಈ ಹುಂಡಾವಸರ್ಪಿಣಿ ಕಾಲವು ಅಂಥದ್ದು ಬಂದು ಬಿಟ್ಟಿರುವುದರಿಂದ ಇದರಲ್ಲಿ ಅನ್ಯಮತದವರ ದೇವಿ-ದೇವತೆಗಳ ಪ್ರಚುರತೆಯು ಇಷ್ಟೊಂದು ನಡೆಯುತ್ತಿದೆ. ವಿದೇಹ ಕ್ಷೇತ್ರದಲ್ಲಿ ಅಂಥ ಕುಲಿಂಗಿಗಳು ಮತ್ತು ಕುಧರ್ಮಿಗಳು ಇರುವುದಿಲ್ಲ. ನಮ್ಮಲ್ಲಿ ಈ ಕಾಲದಲ್ಲಿ ಕುಧರ್ಮಿಗಳ ಅಧಿಕತೆಯಿರುವುದರಿಂದ ನಮ್ಮ ಜೈನ ಧರ್ಮದ್ದೇನಾಗುವುದೋ ಎಂಬ ಚಿಂತೆಯು ನಮ್ಮನ್ನು ಕಾಡುತ್ತಿರುತ್ತದೆ.

ಯಾರಿಗೂ ನನ್ನದೇನಾಗುವುದೆಂಬ ಚಿಂತೆಯಿಲ್ಲ. ಯಾರು ಜಿನಧರ್ಮದ ಅವಲಂಬನೆ ತಗೆದುಕೊಳ್ಳುವರು ಅವರು ಉಳಿಯುವರು. ಧರ್ಮವಂತೂ ಶಾಶ್ವತವಾಗಿ ಇರುವಂಥ ವಸ್ತುವಿದೆ. ವಸ್ತು ವ್ಯವಸ್ಥೆಯು ಶಾಶ್ವತವಿದೆ ಮತ್ತು ಅದರ ಉಪದೇಶ ಕೊಡುವಂಥ ತೀರ್ಥಂಕರರ ಸದ್ಭಾವವು ಕೂಡ ಯಾವಾಗಲೂ ಇರುವುದಿದೆ. ಎಂದೂ ಅವರುಗಳ ಅಭಾವವಾಗಲಾರದು.

ಈ ಕಾಲದಲ್ಲಿ ಇಲ್ಲಿ ಭರತ ಭೂಮಿಯಲ್ಲಿ ಯಾವ ತೀರ್ಥಂಕರರಿಲ್ಲ, ಮುನಿರಾಜರ ದರ್ಶನವು ಕೂಡ ದುರ್ಲಭವಾಗಿದೆ ಆದರೆ ವಿದೇಹ ಕ್ಷೇತ್ರದಲ್ಲಿ ಯಾವಾಗಲೂ ತೀರ್ಥಂಕರರು ವಿರಾಜಿಸುತ್ತಿರುತ್ತಾರೆ. ಧರ್ಮದ ಮತ್ತು ಧರ್ಮದ ಉಪದೇಶ ಕೊಡುವಂಥವರ ಅಭಾವವು ಮೂರು ಕಾಲದಲ್ಲಿ ಎಂದೂ ಆಗುವುದಿಲ್ಲ.

ನಾವಂತೂ ಅತ್ಯಂತ ದುರ್ಭಾಗ್ಯಶಾಲಿಗಳಿರುವುದರಿಂದ ಇಂಥ ನಿಕೃಷ್ಟ ಕಾಲದಲ್ಲಿ ಇಲ್ಲಿ ಜನಿಸಿದ್ದೇವೆ. ಆದರೆ ಹೀಗಿದ್ದರೂ ಅದೆಷ್ಟು ಭಾಗ್ಯಶಾಲಿಗಳಿದ್ದೇವೆಂದರೆ - ತೀರ್ಥಂಕರರು ಯಾವ ಉಪದೇಶ ಕೊಟ್ಟಿದ್ದಾರೆ ಅದು ಆಚಾರ್ಯರ ಪರಂಪರೆಯಿಂದ ನಮಗೆ ಇಂದಿನವರೆಗೆ ಉಪಲಬ್ಧವಿದೆ. ಜ್ಞಾನಿಗಳು ಅದನ್ನು ಸರಳವಾಗಿ ತಿಳಿಸಿಕೊಟ್ಟಿದ್ದಾರೆ. ಭ. ಕುಂದಕುಂದಾಚಾರ್ಯರು, ಅಮೃತಚಂದ್ರಾಚಾರ್ಯರು, ಜಯಸೇನಾಚಾರ್ಯರು, ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು, ವೀರಸೇನಾಚಾರ್ಯರು ಮೊದಲಾಗಿ ಅದೆಷ್ಟೋ ದಿಗ್ಗಜ ಆಚಾರ್ಯರುಗಳು ಗ್ರಂಥ ರಚನೆ ಮಾಡಿ ಮೂಲ ಮಾರ್ಗವನ್ನಂತೂ ಸುರಕ್ಷಿತವಾಗಿಯೇ ಇಟ್ಟಿದ್ದಾರೆ, ಅದನ್ನು ಇನ್ನಷ್ಟು ಅಧಿಕ ಸರಳಗೊಳಿಸಿ ತಿಳಿಸಿಯೂ ಕೊಟ್ಟಿದ್ದಾರೆ. ಈ ಗ್ರಂಥಗಳು ನಮ್ಮ ಮಂದಿರಗಳಲ್ಲಿ, ಗ್ರಂಥಾಲಯಗಳಲ್ಲಿ ಪ್ರಾಪ್ತವಾಗುತ್ತವೆ. ನಮ್ಮ ನಮ್ಮ ಮನೆಗಳಲ್ಲಿಯೂ ಯಾವುದಾದರೂ ಗ್ರಂಥವು (ಪುರಾಣವು) ಬಟ್ಟೆಯ ಹೊದಿಕೆಯಲ್ಲಿ ಸುರಕ್ಷಿತವಾಗಿ ಇದ್ದವೆಂಬುದು ಎಲ್ಲರಿಗೂ ಗೊತ್ತಿದೆ ಮತ್ತು ಅವುಗಳ ಪೂಜೆಯನ್ನು ಭಕ್ತಿಯಿಂದ ಮಾಡಲಾಗುತ್ತಿತ್ತು. ಆದರೆ ಈಗ ಅವುಗಳ ಅಭ್ಯಾಸದಿಂದಲೇ ಇವೆಲ್ಲ ಮಾತುಗಳು ಇಂದು ನಮ್ಮ ಜ್ಞಾನದಲ್ಲಿ ಬರುತ್ತಿವೆ - ಅಂತೆಯೇ ಈಗ ನಾವು ನಮ್ಮ ಕಲ್ಯಾಣದ ಕುರಿತಾಗಿ ವಿಚಾರ ಮಾಡಬಹುದಾಗಿದೆ.

ನಾವು ಶಾಸ್ತ್ರಗಳ ಸಂರಕ್ಷಣೆಯನ್ನಂತೂ ಅವಶ್ಯವಾಗಿ ಮಾಡಬೇಕಾಗುವುದು. ಧರ್ಮಾತ್ಮಾ ಜೀವರುಗಳಿಗೆ ಶಾಸ್ತ್ರಗಳ ಪ್ರಚಾರ-ಪ್ರಸಾರದ ಎಂದರೆ ಅವುಗಳ ಮಾಧ್ಯಮದಿಂದ ಧರ್ಮದ ಪ್ರಭಾವನೆಯ ಮತ್ತು ತೀರ್ಥಕ್ಷೇತ್ರಗಳ ರಕ್ಷಣೆಯ ಭಾವವು ನಿಶ್ಚಿತವಾಗಿಯೇ ಬರುತ್ತದೆ. ಆದರೆ ಕೇವಲ ಶಾಸ್ತ್ರಗಳ ಮುದ್ರಣದಿಂದ ಅಥವಾ ಧನ ಖರ್ಚು ಮಾಡುವುದರಿಂದ ಅವುಗಳ ರಕ್ಷಣೆಯಾಗಲಾರದು. ಶಾಸ್ತ್ರಗಳಂತೂ ಅವನ್ನು ತಿಳಿಯುವಂಥವರ ಆಧಾರದಿಂದ ಉಳಿಯುವ ಸಾಧ್ಯತೆಯಿದೆ. ಪುಸ್ತಕಗಳ ಆಧಾರದಿಂದಲ್ಲ. ಶಾಸ್ತ್ರಗಳ ಅಭ್ಯಾಸ ಮಾಡುವುದರಿಂದ ನಿಯಮದಿಂದ ಅವುಗಳ ಅರ್ಥವು ತಿಳಿದುಬರುತ್ತದೆ. ವ್ಯವಹಾರದಲ್ಲಂತೂ ನಾವು ತುಂಬ ಕುಶಲರಿದ್ದೇವೆ. ಹೊಸ ವಿಷಯಗಳನ್ನು ಬೇಗನೇ ಕಲಿತುಕೊಳ್ಳುತ್ತೇವೆ. ಈ ಶಾಸ್ತ್ರಗಳ ಅಭಿರುಚಿಯು ಬಂದು ಬಿಟ್ಟರೆ ನಮಗೆ ತಿಳಿಯುವುದಿಲ್ಲವೆಂಬ ಮಾತು ಉಳಿಯುವ ಸಾಧ್ಯತೆಯೇ ಇಲ್ಲ.

ಭವನಗಳ ಚರ್ಚೆಯನ್ನು ಮುಂದೆ ಮಾಡೋಣ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಐದನೆಯ ತೀರ್ಥಂಕರರಾದ
ಸಂಜಾತಕ ಭಗವಂತರಿಗೆ ಜಯವಾಗಲಿ.

★★★★★

ಹೇಗೆ ತಾರಾಗಣಸಹಿತ ಶಶಿಬಿಂಬ ನಿರ್ಮಲ ಆಗಸದಿ ಶೋಭಿಪುದು ।
ಹಾಗೆ ತಪೋವ್ರತವಿಮಲ ಜಿನಲಿಂಗ ದರ್ಶನ ವಿಶುದ್ಧಿಯಿಂ ಶೋಭಿಪುದು ॥

೬. ಅಧೋಲೋಕದ ದೇವ-ಭವನವಾಸಿಗಳು

ತ್ರಿಲೋಕಸಾರದ ಆಧಾರದಿಂದ ಇಲ್ಲಿ ನಾವು ಮೂರು ಲೋಕಗಳ ಸ್ವರೂಪವನ್ನು ನೋಡುತ್ತಿದ್ದೇವೆ, ತಿಳಿಯುತ್ತಿದ್ದೇವೆ. ತ್ರಸನಾಳಿಯು ೧ ರಾಜೂ X ೧ ರಾಜೂ ಅಗಲ ಹಾಗೂ ದಪ್ಪಗಿದ್ದು ೧೪ ರಾಜೂ ಎತ್ತರವಿರುತ್ತದೆಯೆಂಬ ಚರ್ಚೆಯನ್ನು ಇಲ್ಲಿ ಮಾಡಲಾಗಿತ್ತು. ಅದರ ಕುರಿತಾಗಿ ಕೆಲವರ ಪ್ರಶ್ನೆಯು ಈ ರೀತಿ ಬಂದಿದೆ. ಅದು ೧೩ ರಾಜೂ ಎತ್ತರವಿರಬೇಕಾಗುವುದು ಏಕೆಂದರೆ ಕೆಳಗೆ ಒಂದು ರಾಜೂವಂತೂ ನಿಗೋದವಿದೆ. ಆದುದರಿಂದ ಇಲ್ಲಿ ತ್ರಿಲೋಕಸಾರದ ಆಧಾರ ಪಡೆಯೋಣ-ಗಾಥೆ ೧೪೩ ಇದೆ. ಮೊದಲು ಗಾಥೆಯನ್ನು ಓದಿ ನಂತರ ಅರ್ಥವನ್ನು ನೋಡೋಣ.

ಲೋಯಬಹುಮಜ್ಝದೇಸೇ ರುಕ್ಖೇ ಸಾರವ್ವ ರಜ್ಜುಪ್ಪದರಜುದಾ ।
ಚೋದಸರಜ್ಜುತ್ತುಂಗಾ ತಸಣಾಲಿ ಹೋದಿ ಗುಣಣಾಮಾ ॥೧೪೩॥

ಲೋಕಬಹುಮಧ್ಯದೇಶೇ ವೃಕ್ಷೇ ಸಾರ ಇವ ರಜ್ಜು ಪ್ರತರಯುತಾ ।
ಚತುರ್ದಶರಜ್ಜುತ್ತುಂಗಾ ತ್ರಸನಾಲೀ ಭವತಿ ಗುಣನಾಮಾ ॥೧೪೩॥

ಲೋಯಬಹುಮಜ್ಝದೇಸೇ ಅರ್ಥಾತ್ ಲೋಕದ ಬಹುಮಧ್ಯ ಎಂದರೆ ನಟ್ಟನಡುವೆ **ರುಕ್ಖೇ ಸಾರವ್ವ** ಹೇಗೆ ವೃಕ್ಷದ ಒಳಭಾಗದಲ್ಲಿ ಸಾರವಿರುತ್ತದೆ, ತೊಗಟೆ ಮೊದಲಾದುವಂತೂ ಮೇಲೆ ಮೇಲೆ ಇರುತ್ತವೆ ಅದರ ಮಧ್ಯದಲ್ಲಿ ಸಾರವಿರುತ್ತದೆ, ಹಾಗೆ ತ್ರಸನಾಳಿಯು ಲೋಕದ ಮಧ್ಯದಲ್ಲಿ ಇರುತ್ತದೆ. ಅದು ಎಷ್ಟು ಇದೆ? **ರಜ್ಜುಪ್ಪದರಜುದಾ** - ರಜ್ಜು ಪ್ರತರ ಅರ್ಥಾತ್ ಒಂದು ರಾಜೂ ಪ್ರತರ - ಒಂದು ಚೌಕ ರಾಜೂ - ೧ ರಾಜೂ X ೧ ರಾಜೂ ಇದನ್ನು ಭುಜವೆಂದು ಹೇಳುತ್ತಾರೆ. ಮತ್ತೆ ಹೇಗಿದೆ ? **ಚೋದಸರಜ್ಜುತ್ತುಂಗಾ** - ಹದಿನಾಲ್ಕು ರಾಜೂ ಉತ್ತುಂಗ ಅರ್ಥಾತ್ ಎತ್ತರವಿದೆ. **ತ್ರಸಣಾಲಿ ಹೋದಿ ಗುಣಣಾಮಾ** -ಹೇಗೆ ಅದರ ಹೆಸರಿದೆ ಹಾಗೆಯೇ ಇದೆ ಅರ್ಥಾತ್ ತ್ರಸ ಜೀವಗಳ ಸದ್ಭಾವವು ತ್ರಸನಾಳಿಯಲ್ಲಿಯೇ ಇದೆ. ಹೊರಗೆ ಇಲ್ಲ. ಉಪಪಾದ, ಮಾರಣಾಂತಿಕ ಮತ್ತು ಕೇವಲೀ ಸಮುದ್ಘಾತ ಮಾಡುವಂಥ ತ್ರಸಜೀವಗಳ ಅಸ್ತಿತ್ವವು ತ್ರಸನಾಳಿಯ ಹೊರಗೆಯೂ ಕೂಡ ಕಂಡು ಬರುತ್ತದೆ, ಅದರ ಮುಖ್ಯತೆಯು ಇರುವುದಿಲ್ಲ. ತ್ರಸನಾಳಿಯ ಹೊರಗೆ ಕೇವಲ ಸ್ಥಾವರ ಜೀವಗಳು ಕಂಡು ಬರುತ್ತವೆ, ಸ್ಥಾವರ ಜೀವಗಳಂತೂ ತ್ರಸನಾಳಿಯಲ್ಲಿಯೂ ಸರ್ವತ್ರ ಇರುತ್ತವೆ.

ಇದರ ಅರ್ಥವು ಇಡೀ ತ್ರಸನಾಳಿಯಲ್ಲಿ ತ್ರಸ ಜೀವಗಳು ಇರಲೇಬೇಕೆಂಬುದಾಗಿಲ್ಲ, ಅದರ ಕೆಲವು ಭಾಗಗಳಲ್ಲಿ ಇಲ್ಲದೆಯೂ ಇರಬಹುದಾಗಿದೆ. ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಜೀವಗಳೂ ಕೂಡ ಕೇವಲ ಮಧ್ಯಲೋಕದಲ್ಲಿ ಹಾಗೂ ಅಂತಿಮ ಸ್ವಯಂಭೂರಮಣ ಸಮುದ್ರದಲ್ಲಿ ಮತ್ತು ಸ್ವಯಂಭೂರಮಣ ದ್ವೀಪದ ಅಪರಾರ್ಧದಲ್ಲಿ ಕಂಡು ಬರುತ್ತವೆ. ಇದನ್ನು ತ್ರಸನಾಳಿ ಅಥವಾ ತ್ರಸನಾಡಿಯೆಂದೂ ಹೇಳುತ್ತಾರೆ - ಎರಡೂ ಒಂದೇ ಇದೆ. ಲೋಕಾಕಾಶದ ಘನಫಲವು ೭ರಾಜೂ X ೭ರಾಜೂ X ೭ರಾಜೂ ಅರ್ಥಾತ್ ಜಗತ್ ಶ್ರೇಣಿಯ ಘನ ಎಂದರೆ ೩೪೩ ಘನರಾಜೂ ಇದೆಯೆಂಬುದನ್ನು ನಾವು ಮೊದಲು ನೋಡಿದ್ದೆವು. ಅದರೊಳಗಿಂದ ತ್ರಸನಾಳಿಯ ಘನಫಲವು ೧ರಾಜೂ X ೧ರಾಜೂ X ೧೪ ರಾಜೂ ಅರ್ಥಾತ್ ೧೪ ರಾಜೂ ಕಳೆದರೆ

೩೨೯ ಘನರಾಜೂ ಉಳಿಯುತ್ತದೆ ಅಲ್ಲಿ ತ್ರಸಜೀವಗಳಿರುವುದಿಲ್ಲ. ಸ್ಥಾವರ ಜೀವಗಳಂತೂ ಸಂಪೂರ್ಣ ೩೪೩ ಘನರಾಜೂ ಕ್ಷೇತ್ರದಲ್ಲಿ ಇರುತ್ತವೆ.

ಬೇರೆ ಬೇರೆ ಗ್ರಂಥಗಳಲ್ಲಿ ಸ್ವಲ್ಪ ವಿಭಿನ್ನವಾದ ಕಥನ ಅಥವಾ ಚಿತ್ರಗಳನ್ನು ಬರೆದಿರುವುದು ಕಂಡು ಬಂದರೆ ಮನಸ್ಸಿನಲ್ಲಿ ಸಂದೇಹವು ತಲೆದೋರುವುದು ಸಹಜವಿದೆ. ಆದರೆ ಅಂಥ ವ್ಯತ್ಯಾಸಗಳನ್ನು ಗ್ರಂಥಗಳ ಆಧಾರದಿಂದ ಸರಿಪಡಿಸಿಕೊಳ್ಳುವುದು ನಮ್ಮ ಕರ್ತವ್ಯವಿದೆ.

ಈಗ ಅಧೋಲೋಕದ ಪ್ರಕರಣದಲ್ಲಿ ನಮಗೆ ಖರಭಾಗ ಮತ್ತು ಪಂಕಭಾಗದ ಚರ್ಚೆ ಮಾಡುವುದಿದೆ. ಅವು ಅಧೋಲೋಕದಲ್ಲಿವೆ ಆದರೆ ಅಲ್ಲಿ ದೇವಗತಿಯ ಜೀವಗಳು ಭವನವಾಸಿ ಮತ್ತು ವ್ಯಂತರರು ಇರುತ್ತಾರೆ. ಅಲ್ಲಿಯ ಅಕೃತ್ರಿಮ ಚೈತ್ಯಾಲಯಗಳ ಚರ್ಚೆಯನ್ನು ಮಾಡಲಾಗಿತ್ತು ಅಲ್ಲದೆ ಭವನವಾಸಿಗಳ ಭವನಗಳಿರುತ್ತವೆ ಆದರೆ ವ್ಯಂತರರ ಭವನ, ಆವಾಸ ಮತ್ತು ಭವನಪುರಗಳೂ ಇರುತ್ತವೆಯೆಂಬುದರ ಚರ್ಚೆ ಮಾಡಿದ್ದೆವು. ಯಾವುದನ್ನು ಭವನವೆನ್ನುವುದು, ಆವಾಸವೆಂದರೇನು ಮತ್ತು ಭವನಪುರವೆಂದು ಯಾವುದಕ್ಕೆ ಹೇಳುತ್ತಾರೆ ? - ಭವನಗಳಂತೂ ಭೂಮಿಯ ಒಳಗೆ ಇರುತ್ತವೆ - ದೊಡ್ಡ ದೊಡ್ಡವು ಎಂದರೆ ಅನೇಕ ಯೋಜನ ವಿಸ್ತಾರವುಳ್ಳ ಚೌಕಾಕಾರದವಿದ್ದು ೩೦೦ ಯೋಜನ ಎತ್ತರವಿರುತ್ತವೆ. ಪ್ರತಿಯೊಂದು ಭವನದಲ್ಲಿ ೧೦೦-೧೦೦ ಯೋಜನ ಎತ್ತರದ ಒಂದು ಪರ್ವತವಿರುತ್ತದೆ ಮತ್ತು ಅದರ ಮೇಲೆ ಅಕೃತ್ರಿಮ ಚೈತ್ಯಾಲಯವಿರುತ್ತದೆ. ಒಂದೊಂದು ಚೈತ್ಯಾಲಯದಲ್ಲಿ ೧೦೮-೧೦೮ ಜಿನಬಿಂಬಗಳು ವಿರಾಜಮಾನವಿವೆ, ಅವು ೫೦೦ ಧನುಷ್ಯ ಎತ್ತರವಾಗಿದ್ದು ರತ್ನಮಯವಿವೆ. ಅಲ್ಲಿ ಚೈತ್ಯವೃಕ್ಷಾದಿಗಳಿರುತ್ತವೆ ಅವುಗಳನ್ನು ಕೂಡ ನಂತರ ನೋಡೋಣ ಭವನಗಳ ವಿಸ್ತಾರವನ್ನೂ ನಂತರ ನೋಡೋಣ. ಮೊದಲು ಆವಾಸವೆಂದರೇನು ? ಎಂಬುದರ ಚರ್ಚೆ ಮಾಡೋಣ.

ಪೃಥ್ವಿಯ ಮೇಲೆ ಎತ್ತರವಾದ ಸ್ಥಾನಗಳಲ್ಲಿ ಕೆರೆ, ವೃಕ್ಷ, ಪರ್ವತ ಮೊದಲಾದವುಗಳ ಮೇಲೆ ವ್ಯಂತರರುಗಳ ಯಾವ ನಿವಾಸ ಸ್ಥಾನಗಳಿವೆ ಅವುಗಳನ್ನು ಆವಾಸವೆಂದು ಹೇಳುತ್ತಾರೆ. ವ್ಯಂತರರಂತೂ ಅನೇಕ ಸ್ಥಾನಗಳಲ್ಲಿ ಇರುತ್ತಾರೆ. ಖರಭಾಗ ಮತ್ತು ಪಂಕಭಾಗದಲ್ಲಂತೂ ಇದ್ದೇ ಇರುತ್ತಾರೆ ಆದರೆ ಹೇಗೆ ನಾವು ಪೃಥ್ವಿಯ ಮೇಲೆ ಇರುತ್ತೇವೆ ಹಾಗೆ ಅವರು ಕೂಡ ಪೃಥ್ವಿಯ ಮೇಲೆ, ವೃಕ್ಷಗಳು, ಪರ್ವತಗಳು ಮತ್ತು ಸಮುದ್ರಗಳ ಮೇಲೆಯೂ ಕೂಡ ಇರುತ್ತಾರೆ. ಮೇರುಗಿರಿ, ನಾಭಿಗಿರಿ, ವೃಷಭಗಿರಿ, ಯಮಕಗಿರಿ, ಕಂಚನಗಿರಿ ಇತ್ಯಾದಿ ಅನೇಕ ಪರ್ವತಗಳ ಮೇಲೆ ಕೂಡ ಅವರ ನಿವಾಸ ಸ್ಥಾನಗಳಿವೆ. ಸಮುದ್ರದ ಹಾಗೂ ಭೂಮಿಯ ಮೇಲೆ ಬೇರೆ-ಬೇರೆ ಪದರುಗಳ ಮೇಲೆ ೧ ಲಕ್ಷ ಯೋಜನ ಎತ್ತರದವರೆಗೆ ಬೇರೆ-ಬೇರೆ ಜಾತಿಯ ವ್ಯಂತರದೇವಗಳ ನಿವಾಸಸ್ಥಾನಗಳಿವೆ. ಅವುಗಳನ್ನು ಆವಾಸವೆಂದು ಹೇಳುತ್ತಾರೆ. ಪೃಥ್ವಿಯ ಒಳಗೆ ಇರುವಂಥವು ಭವನಗಳಿವೆ. ಪೃಥ್ವಿಯಿಂದ ಎತ್ತರದ ಸ್ಥಾನಗಳಲ್ಲಿ ವಿಭಿನ್ನ ಪದರುಗಳ ಮೇಲೆ ಕಂಡು ಬರುವಂಥವು ಆವಾಸಗಳಿವೆ ಅಲ್ಲದೆ ಯಾವವು ಭೂಮಿಯ ಮೇಲೆ ಎಂದರೆ ಹೇಗೆ ನಾವು ಸಮತಟ್ಟಾದ ಭೂಮಿಯ ಮೇಲೆ ಇರುತ್ತೇವೆ ಹಾಗೆ ಅವರು ವಾಸ ಮಾಡುವ ಯಾವ ಸ್ಥಾನಗಳಿವೆ ಅವನ್ನು ಭವನಪುರವೆಂದು ಹೇಳುತ್ತಾರೆ.

ಈ ಒಂದೊಂದು ಭವನದಲ್ಲಿ ಅಸಂಖ್ಯಾತ-ಅಸಂಖ್ಯಾತ ದೇವಗಳಿರುತ್ತಾರೆ. ದೇವಗತಿಯಲ್ಲಿ ಭವನವಾಸೀ, ವ್ಯಂತರ, ಜ್ಯೋತಿಷಿ ಮತ್ತು ವಿಮಾನವಾಸಿ ಅಥವಾ ವೈಮಾನಿಕರೆಂದು ನಾಲ್ಕು ಪ್ರಕಾರದ ದೇವಗಳಿದ್ದಾರೆ.

ಸೌಧರ್ಮಾದಿ ಸ್ವರ್ಗಗಳಲ್ಲಿ ಇರುವಂಥವರು ವೈಮಾನಿಕ ದೇವಗಳೆನಿಸಿಕೊಳ್ಳುತ್ತಾರೆ. ಪ್ರತಿಯೊಂದು ಸ್ವರ್ಗದಲ್ಲಿ - ಪ್ರತಿಯೊಂದು ವಿಮಾನದಲ್ಲಿ - ಅಸಂಖ್ಯಾತ ದೇವಗಳಿದ್ದಾರೆ. ಆದರೂ ವೈಮಾನಿಕ ದೇವಗಳಿಗಿಂತ ಭವನವಾಸಿಗಳು ಅಧಿಕರಿದ್ದಾರೆ, ಅವರಿಗಿಂತಲೂ ವ್ಯಂತರರು ಅಧಿಕರಿದ್ದಾರೆ ಮತ್ತು ಎಲ್ಲಕ್ಕಿಂತ ಅಧಿಕ ಸಂಖ್ಯೆಯಲ್ಲಿ ಜ್ಯೋತಿಷಿ ದೇವಗಳಿದ್ದಾರೆ. ಯಾರನ್ನು ನಾವು ಗ್ರಹ, ತಾರೆ, ನಕ್ಷತ್ರ, ಚಂದ್ರ, ಸೂರ್ಯರೆಂದು ಹೇಳುತ್ತೇವೆ, ಅವಂತೂ ಜ್ಯೋತಿಷಿ ದೇವಗಳ ವಿಮಾನಗಳಿವೆ. ೧ ಲಕ್ಷ ಯೋಜನ ಎತ್ತರವುಳ್ಳ ಮಧ್ಯಲೋಕದಲ್ಲಿ ೭೯೦ ರಿಂದ ಹಿಡಿದು ೯೦೦ ಯೋಜನದವರೆಗೆ ೧೧೦ ಯೋಜನದ ಪಟ್ಟಿಯೊಳಗೆ ಇವರೆಲ್ಲರೂ ಕಂಡು ಬರುತ್ತಾರೆ. ಮಧ್ಯಲೋಕದ ಪ್ರಕರಣದಲ್ಲಿ ನಾವು ಇವರುಗಳ ಸಂಖ್ಯೆಯ ಗಣಿತ ಮಾಡುವುದಿದೆ.

ಈ ವಿಮಾನಗಳಂತೂ ಪೃಥ್ವಿಯ ಖಂಡ-ಭಾಗಗಳಿವೆ. ಹೇಗೆ ನಿಂಬೆ ಹಣ್ಣನ್ನು ಎರಡು ಭಾಗ ಮಾಡಿ ಅದನ್ನು ಕೆಳಗೆ ದುಂಡಾದ ಭಾಗ, ಮೇಲೆ ಕತ್ತರಿಸಿ ಉಂಟಾದ ಸಮತಟ್ಟಾದ ಭಾಗವಿರುವಂತೆ ಇರಿಸಿದಾಗ ಕಾಣುವಂಥ ದೊಡ್ಡ-ದೊಡ್ಡ ಪೃಥ್ವಿಖಂಡಗಳೇ ದೇವಗಳ ವಿಮಾನವೆನಿಸಿಕೊಳ್ಳುತ್ತವೆ. ಪೃಥ್ವಿಯಂತೂ ಲೋಕಾಕಾಶದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಹರಡಿಕೊಂಡಿರುತ್ತದೆ. ಇವಂತೂ ತುಂಡುಗಳಿವೆ. ಸೂರ್ಯ, ಚಂದ್ರ ಮೊದಲಾದ ಜ್ಯೋತಿಷಿ ದೇವಗಳ ವಿಮಾನಗಳಿವೆ ಆದರೆ ಅವರನ್ನು ವೈಮಾನಿಕ ದೇವರೆನ್ನುವುದಿಲ್ಲ.

ಹೇಗೆ ನರಕಗಳಲ್ಲಿ ೪೯ ಪಟಲಗಳನ್ನು ನೋಡಿದ್ದೆವು, ಹಾಗೆ ಸ್ವರ್ಗಗಳಲ್ಲಿಯೂ ಕೂಡ ೬೩ ಪಟಲಗಳಿರುತ್ತವೆ ಮತ್ತು ಪ್ರತಿಯೊಂದು ಪಟಲದಲ್ಲಿ ಅನೇಕ ವಿಮಾನಗಳಿರುತ್ತವೆ. ಈ ವಿಮಾನಗಳಲ್ಲಿ ವಾಸ ಮಾಡುವಂಥ ದೇವಗಳಲ್ಲಿ ಕೂಡ ೧) ಕಲ್ಪವಾಸಿ ಮತ್ತು ೨) ಕಲ್ಪಾತೀತವೆಂಬ ಎರಡು ಭೇದಗಳಿವೆ. ಹದಿನಾರನೆಯ ಸ್ವರ್ಗದವರೆಗಿನ ಜೀವಗಳು ಕಲ್ಪವಾಸಿಯಿದ್ದಾರೆ ಮತ್ತು ಮೇಲೆ ಒಂಭತ್ತು ಗ್ರೈವೇಯಕ, ಒಂಭತ್ತು ಅನುದಿಶೆ ಹಾಗೂ ಐದು ಅನುತ್ತರ ವಿಮಾನಗಳ ದೇವಗಳು ಕಲ್ಪಾತೀತರಿದ್ದಾರೆ.

ಎಲ್ಲಿ ಇಂದ್ರ, ಪ್ರತೀಂದ್ರ, ಲೋಕಪಾಲ, ತ್ರಾಯಸ್ತ್ರಿಂಶ, ಅನಿಕ ಮೊದಲಾದ ಭೇದಗಳು ಕಂಡು ಬರುತ್ತವೆ ಆ ದೇವಗಳನ್ನು ಕಲ್ಪವಾಸಿಯೆಂದು ಹೇಳುತ್ತಾರೆ. ಹೇಗೆ ನಮ್ಮಲ್ಲಿ ಯಾವನೋ ದೊರೆಯಿರುತ್ತಾನೆ ಆತನ ನಗರದಲ್ಲಿ ಯಾವನೋ ಸೇನಾಪತಿ, ಸಭಾಪತಿ, ಮಂತ್ರಿಗಳಿರುತ್ತಾರೆ, ಸೈನಿಕರಿರುತ್ತಾರೆ, ನಗರ ನಿವಾಸಿಗಳಿರುತ್ತಾರೆ ಹಾಗೆ ಅಲ್ಲಿಯೂ ಭೇದಗಳು ಕಂಡು ಬರುತ್ತವೆ. ಇನ್ನು ಎಲ್ಲಿ ಒಡೆಯ-ಭೃತ್ಯರೆಂಬ ಯಾವುದೇ ಭೇದವಿರುವುದಿಲ್ಲ. ಪ್ರತಿಯೊಬ್ಬ ಜೀವನು ಅಹಮಿಂದ್ರನಿರುತ್ತಾನೆ, ಅವರನ್ನು ಕಲ್ಪಾತೀತರೆಂದು ಹೇಳುತ್ತಾರೆ. ಕಲ್ಪವಾಸಿಗಳ ಹದಿನಾರು ಸ್ವರ್ಗಗಳು ಯುಗಲಗಳಲ್ಲಿರುತ್ತವೆ. ಹೇಗೆಂದರೆ - ಸೌಧರ್ಮ - ಈಶಾನ ಅರ್ಥಾತ್ ಮೊದಲನೆಯ ಮತ್ತು ಎರಡನೆಯ ಸ್ವರ್ಗ. ಪ್ರತಿಯೊಂದು ಜೋಡಿಯಲ್ಲಿ ಯಾವ ಹೆಸರನ್ನು ಮೊದಲು ಹೇಳುತ್ತೇವೆ ಅದು ದಕ್ಷಿಣ ದಿಕ್ಕಿನ ಸ್ವರ್ಗವಿದೆ ಮತ್ತು ಎರಡನೆಯದು ಉತ್ತರ ದಿಕ್ಕಿನ ಸ್ವರ್ಗವಿದೆ. ಈ ವಿಮಾನಗಳ ರಚನೆ, ಸಂಖ್ಯೆ ಮೊದಲಾದವುಗಳ ಚರ್ಚೆಯನ್ನು ನಾವು ಊರ್ಧ್ವಲೋಕದಲ್ಲಿ ವೈಮಾನಿಕರ ಪ್ರಕರಣದಲ್ಲಿ ವಿಸ್ತಾರದಿಂದ ಮಾಡುವವರಿದ್ದೇವೆ. ಈಗಂತೂ ಭವನವಾಸಿಗಳ ಚರ್ಚೆಯು ನಡೆಯುತ್ತಿದೆ.

ಕಲ್ಪವಾಸಿಗಳ ಸಮಾನ ಭವನವಾಸಿಗಳಲ್ಲಿಯೂ ೧೦-೧೦ ಪ್ರಕಾರದ ಭೇದಗಳಿವೆ - ಅವರ ಪದಗಳು ಬೇರೆ-ಬೇರೆಯಾಗಿವೆ. ಅಲ್ಲಿ ಒಬ್ಬನು ಇಂದ್ರನಿರುತ್ತಾನೆ, ಒಬ್ಬನು ಪ್ರತೀಂದ್ರನಿರುತ್ತಾನೆ. ಇಂದ್ರನ ಸಮಾನ ಪ್ರತೀಂದ್ರನಿರುತ್ತಾನೆ. ಹೇಗೆ ನಮ್ಮಲ್ಲಿ ದೊರೆಯಿರುತ್ತಾನೆ ಹಾಗೆ ಅಲ್ಲಿ ಇಂದ್ರನಿರುತ್ತಾನೆ. ಪ್ರತೀಂದ್ರನೆಂದರೆ

ಯುವರಾಜ. ಆದರೆ ಗಮನಾರ್ಹವಿಷಯವೆಂದರೆ ಇಲ್ಲಿಯಂತೂ ದೊರೆ ಕುಮಾರನನ್ನು ಯುವರಾಜನೆಂದು ಹೇಳುತ್ತೇವೆ ಆದರೆ ಅಲ್ಲಿ ದೇವಗಳಿಗೆ ಯಾವ ಪುತ್ರ-ಪುತ್ರಿಯರಿರುವುದಿಲ್ಲ. ದೇವಗಳ ಉತ್ಪತ್ತಿಯ ಸ್ಥಾನ-ಉಪಪಾದ ಗೃಹಗಳಲ್ಲಿ ರತ್ನಜಡಿತ ಉಪಪಾದ ಶಯ್ಯೆಯಿರುತ್ತದೆ, ಅಲ್ಲಿ ಜೀವನು ಅಂತರ್ಮುಹೂರ್ತದಲ್ಲಿ ಪರ್ಯಾಪ್ತಿಗಳನ್ನು ಪೂರ್ಣಗೊಳಿಸಿ ಯೌವನಾವಸ್ಥೆಯಲ್ಲಿಯೇ ಜನ್ಮ ಪಡೆಯುತ್ತಾನೆ. ಅಲ್ಲಿ ಯಾರೂ ಬಾಲಕರಾಗಿ ಜನ್ಮ ಪಡೆಯುವುದಿಲ್ಲ ಮತ್ತು ಅವರ ಪಾಲನೆ, ಪೋಷಣೆ ಮಾಡಿ ದೊಡ್ಡವರನ್ನಾಗಿ ಮಾಡಬೇಕಾಗುವುದಿಲ್ಲ. ಎಂದರೆ ಆ ತರದ ಚಿಂತೆಯು ದೇವ-ದೇವಿಯರಿಗೆ ಇರುವುದಿಲ್ಲ. ನಮ್ಮದಂತೂ ಬಹಳಷ್ಟು ಸಮಯವು ಮಕ್ಕಳ ಪಾಲನೆ-ಪೋಷಣೆ ಅವರ ಕುರಿತಾಗಿ ಕಾಳಜಿ ವಹಿಸುವುದರಲ್ಲಿಯೇ ಕಳೆದು ಹೋಗುತ್ತದೆ. ಇನ್ನು ಉಳಿದಂತೆ ಶರೀರದ ಅಲಂಕಾರ ತಲೆಗೂದಲಿನ ಸಂರಕ್ಷಣೆ (ಕೂದಲು ಉದುರುತ್ತಿದ್ದರೆ ಅಥವಾ ಬೆಳ್ಳಗಾಗುತ್ತಿದ್ದರೆ) ಯೊಳಗೆ ಕಳೆಯುತ್ತದೆ. ಅಲ್ಲಿಯಂತೂ ಕೇಶ, ನಖ ರಹಿತ ಸುಂದರ ಸಪ್ತಧಾತುರಹಿತ ಶರೀರಗಳಿರುತ್ತವೆ. ಇಲ್ಲಿ ಆ ಕೇಶ ಸೌಂದರ್ಯ, ನಖ ಸೌಂದರ್ಯದ ಸಲುವಾಗಿ ಎಷ್ಟೊಂದು ಸಮಯವು ನಿರರ್ಥಕವಾಗುತ್ತದೆಯೆಂಬುದು ಆ ಕಾರ್ಯ ಮಾಡುವಂಥವರಿಗೇ ಗೊತ್ತು ! ಶರೀರವೇ ನಾನೆಂದು ಮನ್ನಿಸಲಾಗಿದೆಯೆಂದಮೇಲೆ ಇವೆಲ್ಲ ಮಾತುಗಳು ನಡೆಯುತ್ತಲೇ ಇರುತ್ತವೆ.

ಈಗ ನಾವು ಒಬ್ಬನು ಇಂದ್ರನಿರುತ್ತಾನೆ, ಒಬ್ಬನು ಪ್ರತೀಂದ್ರನಿರುತ್ತಾನೆಂಬುದನ್ನು ತಿಳಿದೆವು. ನಾಲ್ವರು ಲೋಕಪಾಲರಿರುತ್ತಾರೆ, ಇವರನ್ನು ದಿಗೇಂದ್ರರೆಂದೂ ಕೂಡ ಹೇಳುತ್ತಾರೆ - ದಿಶೆಗಳ ಇಂದ್ರರು, ಇವರು ಸೇನಾಪತಿಗಳ ಸಮಾನರಿರುತ್ತಾರೆ. ಸೋಮ, ಯಮ, ವರುಣ ಮತ್ತು ಕುಬೇರ - ಹೀಗೆ ಅವರಲ್ಲಿ ನಾಲ್ಕು ಪ್ರಕಾರವಿವೆ. ಪೂರ್ವದಿಕ್ಕಿನಲ್ಲಿ ಸೋಮ, ದಕ್ಷಿಣದಲ್ಲಿ ಯಮ, ಪಶ್ಚಿಮದಲ್ಲಿ ವರುಣ, ಉತ್ತರದಲ್ಲಿ ಕುಬೇರರಿರುತ್ತಾರೆ. ಇವರೆಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಎಂದರೆ ತಮ್ಮ-ತಮ್ಮ ಸ್ವರ್ಗಗಳಲ್ಲಿ ಇರುತ್ತಾರೆ, ಆದರೆ ವಿಹಾರ ಮಾಡುತ್ತ ಅನ್ಯತ್ರ ಹೊರಟು ಹೋಗುತ್ತಾರೆ - ಪಂಚಕಲ್ಯಾಣಕಗಳಲ್ಲಿ, ಕ್ರೀಡೆ ಮಾಡುವ ಸಲುವಾಗಿ ಅಸಂಖ್ಯಾತ ದ್ವೀಪ ಸಮುದ್ರಗಳಲ್ಲಿ ಹೋಗುತ್ತಾರೆ; ಆದರೆ ತಮ್ಮ ಸ್ಥಾನವನ್ನು ಬಿಟ್ಟುಕೊಡುವುದಿಲ್ಲ, ವಿಕ್ರಿಯೆಯಿಂದ ಮತ್ತೊಂದು ಅಥವಾ ಅನೇಕ ಶರೀರಗಳನ್ನು ಮಾಡಿಕೊಳ್ಳುತ್ತಾರೆ - ಶಾಖಾ ಶರೀರಗಳ ರಚನೆ ಮಾಡಿಕೊಳ್ಳುತ್ತಾರೆ. ಎಲ್ಲ ಶರೀರಗಳಲ್ಲಿ ಆತ್ಮಪ್ರದೇಶಗಳು ಅಖಂಡ ರೀತಿಯಲ್ಲಿ ಹರಡುತ್ತವೆ.

ತ್ರಾಯಸ್ತ್ರಿಂಶತ್ ಅರ್ಥಾತ್ ೩೩, ಇವರು ದೊರೆಕುಮಾರರಂತಿರುತ್ತಾರೆ; ಸಾಮಾನಿಕ ಎಂದರೆ ದೊರೆಯ ಪರಿವಾರದ ಸಮಾನ, ತನುರಕ್ಷಕ ಎಂದರೆ ಅಂಗರಕ್ಷಕರ ಸಮಾನವೆಂದು ತಿಳಿಯುವುದು.

ಪ್ರಶ್ನೆ :- ಅಂಗರಕ್ಷಕರು ಏತಕ್ಕಾಗಿ ಇರುತ್ತಾರೆ ? ಅಲ್ಲಿ ಯುದ್ಧ-ಆಕ್ರಮಣಗಳೇನಾದರೂ ಇರುತ್ತವೆಯೇನು?

ಉತ್ತರ : ಇಲ್ಲಿ ಯುದ್ಧವಾಗುವ ಅಥವಾ ಆಗದಿರುವ ಪ್ರಶ್ನೆಯಿಲ್ಲ. ಅವರ ಅಂಗರಕ್ಷಕರು, ಅವರುಗಳ ವಿಶಾಲವಾದ ಸೇನೆ-ಇದಂತೂ ಅವರ ವೈಭವವಿದೆ, ಪುಣ್ಯದ ಉದಯವಿದೆ. ಹೇಗೆ ನಮ್ಮಲ್ಲಿ ಪ್ರಧಾನಮಂತ್ರಿ, ರಾಷ್ಟ್ರಪತಿಗಳೊಂದಿಗೆ ಅವರ ಅಂಗರಕ್ಷಕರು-ಕಮಾಂಡರರು ನಡೆದುಕೊಂಡು ಬರುತ್ತಾರೆ ಹಾಗೆಂದು ತಿಳಿಯುವುದು, ಹೀನ ಜಾತಿಯ ದೇವಗಳು ಅವರ ಅಂಗರಕ್ಷಕರಿರುತ್ತಾರೆ ಅವರಿಗೆ ವಾಹನರಾಗುತ್ತಾರೆ-ಹೀಗೆ ಅವರು ಇಂದ್ರರ ಸನ್ಮಾನ ಮಾಡುತ್ತಾರೆ, ಅವರ ಆಜ್ಞೆಯಲ್ಲಿರುತ್ತಾರೆ. (ಆಜ್ಞೆಯ ಪಾಲನೆ ಮಾಡುತ್ತಾರೆ.)

ಪಾರಿಷದರೆಂಬ ಹೆಸರಿನ ದೇವಗಳಿರುತ್ತಾರೆ. ಹೇಗೆ ದೊರೆಯ ಸಭೆಯಲ್ಲಿ ಮಂಡಿಸುವಂಥವರಿರುತ್ತಾರೆ ಹಾಗೆ ಇವರಲ್ಲಿ ಅಂತಃ ಪಾರಿಷದರು ಅವರು ಉತ್ಕೃಷ್ಟರಿದ್ದು ಒಳಸಭೆಯಲ್ಲಿ ಕುಳಿತುಕೊಳ್ಳುತ್ತಾರೆ. ಮಧ್ಯ ಪಾರಿಷದರು ಮಧ್ಯದ ಸಭೆಯಲ್ಲಿ ಕುಳಿತುಕೊಳ್ಳುತ್ತಾರೆ ಮತ್ತು ಬಾಹ್ಯ ಪಾರಿಷದರು ಬಾಹ್ಯದ ಸಭೆಯಲ್ಲಿ ಕುಳಿತುಕೊಳ್ಳುತ್ತಾರೆ. ಇಲ್ಲಿ ಹೇಗೆ ದೊರೆಯ ಸೇನೆಯಿರುತ್ತದೆ ಹಾಗೆ ಅನೀಕ ಜಾತಿಯ ದೇವಗಳಿರುತ್ತಾರೆ. ಅವರಲ್ಲಿಯೂ ಕೂಡ ಆನೆಗಳ ಸೇನೆ, ಕುದುರೆಗಳ ಸೇನೆ ಇತ್ಯಾದಿ ಏಳು ಪ್ರಕಾರದವರೆಂದು ಹೇಳಲಾಗಿದೆ. ಅಲ್ಲಿ ಆನೆ, ಕುದುರೆ ಮೊದಲಾದ ಯಾವ ತಿರ್ಯಂಚಗಳಿರುವುದಿಲ್ಲ ಐರಾವತ ಆನೆಯ ಮಾತನ್ನು ಎಲ್ಲರೂ ಆಲಿಸಿದ್ದೇವೆ, ಅದಂತೂ ವಿಕ್ರಿಯೆಯಿಂದ ಅಂಥ ರೂಪು ಧಾರಣ ಮಾಡಲಾಗಿರುತ್ತದೆ. ಇಲ್ಲದಿದ್ದರೆ ಅಂಥ ಲಕ್ಷ ಯೋಜನ ದೊಡ್ಡದು ಸಾವಿರ ಸೊಂಡೆಯುಳ್ಳ ಆನೆಯನ್ನು ಎಲ್ಲಿ ಇರಿಸುವುದು ? ಅದಕ್ಕೆ ಏನು ತಿನ್ನಿಸುವುದು ? ಶಾಸ್ತ್ರದಲ್ಲಿ ಐರಾವತ ಆನೆಯ ವರ್ಣನೆಯು ಬರುತ್ತದೆ. ಅದರ ಒಂದೊಂದು ಸೊಂಡೆಯ ಮೇಲೆ ಸರೋವರಗಳು, ಸರೋವರಗಳಲ್ಲಿ ಕಮಲಗಳು, ಕಮಲದ ದಳಗಳ ಮೇಲೆ ನೃತ್ಯ ಮಾಡುತ್ತಿರುವ, ವಾದ್ಯಗಳನ್ನು ನುಡಿಸುತ್ತಿರುವ ದೇವಾಂಗನೆಯರು ಇರುವ ಮಾತನ್ನು ಓದುತ್ತೇವೆ - ಕೇಳುತ್ತೇವೆ ಅಲ್ಲವೇನು ?

ಇಲ್ಲಿ ಅನೀಕ ಜಾತಿಯ ದೇವಗಳ ಚರ್ಚೆಯು ನಡೆಯುತ್ತಿದೆ. ಒಬ್ಬನೇ ದೇವನು ಸಾವಿರಾರು ಆನೆ ಮೊದಲಾದವುಗಳ ರೂಪ ಧಾರಣಮಾಡುವ ಸಾಧ್ಯತೆಯಿದೆ. ಇಲ್ಲಿ ಯಾವ ರೀತಿ ನಗರ ವಾಸಿಗಳಿರುತ್ತಾರೆ ಆ ರೀತಿ ಅಲ್ಲಿ ಪ್ರಕೀರ್ಣಕವೆಂಬ ಒಂದು ಜಾತಿಯ ದೇವಗಳಿರುತ್ತಾರೆ. ಹೇಗೆ ಇಲ್ಲಿ ದಾಸ-ದಾಸಿಯರಿರುತ್ತಾರೆ ಹಾಗೆ ಅಲ್ಲಿ ಆಭಿಯೋಗ್ಯ ಜಾತಿಯ ದೇವಗಳಿರುತ್ತಾರೆ. ಹೇಗೆ ನಮ್ಮಲ್ಲಿ ನರ್ತನ, ಹಾಡುಗಾರಿಕೆ ಮೊದಲಾದ ಕ್ರಿಯೆಗಳಿಂದ ಆಜೀವಿಕೆ ನಡೆಸುವಂಥವರಿರುತ್ತಾರೆ ಹಾಗೆ ಅಲ್ಲಿ ಕಿಲ್ವಿಷಕ ಜಾತಿಯ ದೇವಗಳಿರುತ್ತಾರೆ. ಆದರೆ ಅಲ್ಲಿ ಯಾವ ಆಜೀವಿಕೆ ಎಂದರೆ ಹಣಕಾಸಿನ ವ್ಯವಹಾರವಿರುವುದಿಲ್ಲ, ಅವರು ಹಾಡುಗಾರಿಕೆ ಮೊದಲಾದವುಗಳನ್ನು ಮಾಡುತ್ತಾರೆ. ಈ ಪ್ರಕಾರ ಈ ಹತ್ತು-ಹತ್ತು ಪ್ರಕಾರದ ದೇವಗಳು ಭವನವಾಸಿಗಳಲ್ಲಿ ಮತ್ತು ಕಲ್ಪವಾಸಿಗಳಲ್ಲಿಯೂ ಇರುತ್ತಾರೆ. ಆದರೆ ಜ್ಯೋತಿಷಿ ಹಾಗೂ ವ್ಯಂತರರಲ್ಲಿ ಇವರೊಳಗಿನ ಎಂಟು ಪ್ರಕಾರದ ದೇವಗಳು ಕಂಡು ಬರುತ್ತಾರೆ, ಅವರಲ್ಲಿ ನಾಲ್ಕು ಪ್ರಕಾರದ ಲೋಕಪಾಲರು ಮತ್ತು ತ್ರಾಯಸ್ತ್ರಿಂಶತ್ ಜಾತಿಯ ದೇವಗಳಿರುವುದಿಲ್ಲ. ಅವರಲ್ಲಿ ಇಂದ್ರ-ಪ್ರತೀಂದ್ರ, ಸಾಮಾನಿಕ, ತನುರಕ್ಷಕ, ಪಾರಿಷದ, ಅನೀಕ, ಪ್ರಕೀರ್ಣಕ, ಆಭಿಯೋಗ್ಯ ಮತ್ತು ಕಿಲ್ವಿಷಕ - ಹೀಗೆ ಎಂಟು ಪ್ರಕಾರದ ದೇವಗಳಿರುತ್ತಾರೆ. ಇವರುಗಳ ಅವಸ್ಥೆಯು ಅಲ್ಲಿ ಹೀಗೆಯೇ ಇರುತ್ತದೆ ಎಂದರೆ ಯಾರು ಹೀನ ಜಾತಿಯ ದೇವಗಳಿದ್ದಾರೆ ಅವರು ಹಾಗೆಯೇ ಉಳಿಯುತ್ತಾರೆ. ಎಂದರೆ ಮುಷ್ಕರ (ಸ್ಟ್ರಾಯಿಕ್) ಮಾಡುವ ಸೌಲಭ್ಯವಿಲ್ಲ ಮತ್ತು ಅವರು ಯಾರೂ ಇಂದ್ರನ ಆಜ್ಞೆಯನ್ನು ಮೀರುವುದೂ ಇಲ್ಲ. ಈ ಹೊತ್ತು ನಾವು ಕೆಲಸಕ್ಕೆ ಬರುವುದಿಲ್ಲ, ಈ ಕೆಲಸವು ನನ್ನದಲ್ಲ - ಎಂಬಿತ್ಯಾದಿ ಮಾತುಗಳು ಅಲ್ಲಿ ನಡೆಯುವುದಿಲ್ಲ. ಇಲ್ಲಿ ಅಂಥ ಸೌಲಭ್ಯವಿದೆ-ಭೋಗಿಸಬೇಕಾಗುವುದು.

ದೇವಗಳಿಗೆ ವೈಕ್ರಿಯಿಕ ಶರೀರವಿರುತ್ತದೆ ಅದು ಎಂಟು ಗುಣಗಳಿಂದ ಯುಕ್ತವಿರುತ್ತದೆ. ಅವರಿಗೆ ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವವೆಂಬ ಋದ್ಧಿಗಳಿರುತ್ತವೆ. ಅವುಗಳ ಅರ್ಥವು ಈ ಪ್ರಕಾರವಿದೆ-

೧) ಅಣಿಮಾ-ಶರೀರವನ್ನು ಅಣುವಿನಂತೆ ಚಿಕ್ಕದನ್ನಾಗಿಸಿಕೊಳ್ಳುವ ಸಾಮರ್ಥ್ಯವಿರುವುದು.

೨) ಮಹಿಮಾ - ತಮ್ಮ ಶರೀರವನ್ನು ಮೇರುವಿನ ಸಮಾನ ಬಹಳಷ್ಟು ದೊಡ್ಡದಾಗಿ ಮಾಡಿಕೊಳ್ಳಬಹುದಾಗಿದೆ. ಐರಾವತ ಆನೆಯು ಅದು ಜಂಬೂದ್ವೀಪದಷ್ಟು ಒಂದು ಲಕ್ಷ ಯೋಜನ ದೊಡ್ಡದಿರುತ್ತದೆ. ಅದು ಭರತಕ್ಷೇತ್ರದ ಅಯೋಧ್ಯೆಯಲ್ಲಿ ಹೇಗೆ ಬರುತ್ತಿರಬಹುದು ? - ಇಲ್ಲಿ ಬಂದು ಚಿಕ್ಕ ರೂಪ ಧಾರಣ ಮಾಡುತ್ತಾರೆ.

೩) ಗರಿಮಾ - ಗುರು ಎಂದರೆ ಭಾರ, ಶರೀರವನ್ನು ವಜ್ರದ ಸಮಾನ ಭಾರವನ್ನಾಗಿ ಮಾಡಿಕೊಳ್ಳಬಹುದಾಗಿದೆ.

೪) ಲಘಿಮಾ - ಲಘು ಎಂದರೆ ಹಗುರ-ಶರೀರವನ್ನು ಅತ್ಯಂತ ಹಗುರ ಮಾಡಿಕೊಳ್ಳಬಹುದಾಗಿದೆ. ಹೇಗೆಂದರೆ ಜೇಡರ ಬಲೆಯ ಮೇಲೆ ನಡೆದುಕೊಂಡು ಹೋದರೂ ಅದಕ್ಕೆ ಯಾವ ಬಾಧೆಯಾಗುವುದಿಲ್ಲ, ತಮ್ಮ ಶರೀರವನ್ನು ಗಾಳಿಗಿಂತಲೂ ಹಗುರ ಮಾಡಿಕೊಳ್ಳುವ ಸಾಧ್ಯತೆಯಿದೆ.

೫) ಪ್ರಾಪ್ತಿ - ಭೂಮಿಯ ಮೇಲಿದ್ದುಕೊಂಡು ತಮ್ಮ ಬೆರಳಿನ ಅಗ್ರಭಾಗದಿಂದ ಸೂರ್ಯ, ಚಂದ್ರ ಮೊದಲಾದವರ ಸ್ಪರ್ಶ ಮಾಡಬಹುದಾದಂಥ ಸಾಮರ್ಥ್ಯ, ವೈಕ್ರಿಯಿಕ ಶರೀರದಲ್ಲಿಯಂತೂ ಇದೆಲ್ಲ ಇದ್ದೇ ಇರುತ್ತದೆ. ಆದರೂ ಮುನಿಗಳಿಗೂ ತಪಸ್ಸಿನ ಪ್ರಭಾವದಿಂದ ಇಂಥ ವೈಕ್ರಿಯಿಕ ಋದ್ಧಿಯ ಪ್ರಾಪ್ತಿಯಾಗುತ್ತದೆ ಆಗ ಅವರು ಔದಾರಿಕ ಶರೀರದಲ್ಲಿದ್ದುಕೊಂಡು ಹೀಗೆ ಮಾಡಬಹುದಾಗಿದೆ. ವಿಷ್ಣುಕುಮಾರ ಮುನಿಯ ಕಥೆಯಂತೂ ಎಲ್ಲರಿಗೂ ಪರಿಚಿತವಿದೆಯಲ್ಲವೇನು ? ಅಕಂಪನಾಚಾರ್ಯ ಮೊದಲಾಗಿ ೭೦೦ ಮುನಿಗಳ ಸಂಘದ ಮೇಲೆ ಘೋರ ಉಪಸರ್ಗವಾಗುತ್ತಿತ್ತು. ಬಲಿಯೆಂಬ ಹೆಸರಿನ ಮಂತ್ರಿಯು ದೊರೆಯಿಂದ ಏಳು ದಿವಸ ರಾಜ್ಯವನ್ನು ಕೇಳಿ ಪಡೆದುಕೊಂಡಿದ್ದನು ಮತ್ತು ಸ್ವಯಂ ದೊರೆಯಾಗಿ ಮುನಿಗಳ ಸಂಘದ ನಾಲ್ಕೂ ನಿಟ್ಟಿಗೆ ಅಗ್ನಿ ಹೊತ್ತಿಸಿ ಹೋಮಾದಿಗಳನ್ನು ಮಾಡುತ್ತಿದ್ದನು. ಬೇರೆ ಓರ್ವ ಅವಧಿಜ್ಞಾನಿ ಮುನಿಗಳು ವಿಷ್ಣುಕುಮಾರ ಮುನಿಗೆ ವೈಕ್ರಿಯಿಕ ಋದ್ಧಿಯ ಪ್ರಾಪ್ತಿ ಯಾಗಿರುವುದನ್ನು ತಿಳಿದುಕೊಂಡು ಹೇಳಿ ಕಳಿಸಿದ ಮೇಲೆ ವಿಷ್ಣುಕುಮಾರ ಮುನಿಯು ಬ್ರಾಹ್ಮಣ ವೇಶದಲ್ಲಿ ಬಂದು ತನ್ನ ವಿಕ್ರಿಯೆಯಿಂದ ಚಮತ್ಕಾರ ಮಾಡುತ್ತಾನೆ. ಆಗ ದೊರೆಯಾಗಿದ್ದ ಬಲಿಯು ವಿಷ್ಣುಕುಮಾರನಿಗೆ ಶರಣಾಗತನಾಗುತ್ತಾನೆ ಮತ್ತು ಉಪಸರ್ಗದ ನಿವಾರಣೆ ಮಾಡುತ್ತಾನೆಂಬುದಾಗಿ ಕಥೆಯು ಪುರಾಣ ಪ್ರಸಿದ್ಧವಿದೆ. ಆದರೆ ಅವರಿಗೆ ಪುನಃ ಮುನಿಪದ ಅಂಗೀಕಾರ ಮಾಡಬೇಕಾಯಿತು ಏಕೆಂದರೆ ಈ ಕಾರ್ಯವು ಮುನಿಪದಕ್ಕೆ ಯೋಗ್ಯವಿರಲಿಲ್ಲ. ಇದು ಪ್ರಾಪ್ತಿ ಋದ್ಧಿಯಿದೆ.

೬) ಪ್ರಾಕಾಮ್ಯ-ಜಲದ ಸಮಾನ ಪೃಥ್ವಿಯ ಮೇಲೆ ಮತ್ತು ಪೃಥ್ವಿಯ ಸಮಾನ ಜಲದ ಮೇಲೆ ನಡೆಯುವ ಸಾಮರ್ಥ್ಯ.

೭) ಈಶತ್ವ - ಇಡೀ ಜಗತ್ತಿನ ಮೇಲೆ ತಮ್ಮ ಪ್ರಭುತ್ವ ಸ್ಥಾಪಿತಗೊಳಿಸುವ ಸಾಮರ್ಥ್ಯವಿರುವುದು.

೮) ವಶಿತ್ವ - ಇಡೀ ಜಗತ್ತನ್ನು ತಮ್ಮ ವಶದಲ್ಲಿಟ್ಟುಕೊಳ್ಳುವ ಸಾಮರ್ಥ್ಯವಿರುವುದು.

ಹೀಗೆ ಇವು ಎಂಟು ಗುಣಗಳು ಅಥವಾ ಸಾಮರ್ಥ್ಯವು ದೇವಗಳಲ್ಲಿ ಕಂಡು ಬರುತ್ತದೆ.

ತತ್ತ್ವಾರ್ಥಸೂತ್ರದಲ್ಲಿ ಪ್ರತೀಂದ್ರರುಗಳ ಹೆಸರನ್ನು ಬೇರೆಯಾಗಿ ಹೇಳಿಲ್ಲ ಅವರಂತೂ ಇಂದ್ರರ

ಸಮಾನರಿರುತ್ತಾರೆ. ಇಂದ್ರ ಮತ್ತು ಪ್ರತೀಂದ್ರರು ಎಲ್ಲ ಸ್ಥಾನಗಳಲ್ಲಿ ಇರುತ್ತಾರೆ-ಭವನತ್ರಿಕಗಳಲ್ಲಿ ಹಾಗೂ ಕಲ್ಪವಾಸಿಗಳಲ್ಲಿಯೂ ಇರುತ್ತಾರೆ. ಯಾವಾಗ ಸಮವಸರಣದಲ್ಲಿ ಉಪಸ್ಥಿತವಿರುವಂಥ ನೂರು ಇಂದ್ರರುಗಳ ಸಂಖ್ಯೆಯ ಚರ್ಚೆಯು ಬರುತ್ತದೆ ಆಗ ಇಂದ್ರ-ಪ್ರತೀಂದ್ರ ಇಬ್ಬರನ್ನೂ ಸೇರಿಸಿ ಗಣಿಸಲಾಗುತ್ತದೆ.

ಈಗಂತೂ ನಾವು ಹತ್ತು ಪ್ರಕಾರದ ಭೇದ-ಜಾತಿಯನ್ನು ತಿಳಿದಾಯಿತು. ಭವನವಾಸಿಗಳಲ್ಲಿ ಹತ್ತು ಪ್ರಕಾರದ ಕುಲಗಳು ಕಂಡು ಬರುತ್ತವೆ, ಅವು ಈ ಪ್ರಕಾರವಿವೆ - ೧) ಅಸುರಕುಮಾರ, ೨) ನಾಗಕುಮಾರ, ೩) ಸುಪರ್ಣಕುಮಾರ, ೪) ದ್ವೀಪಕುಮಾರ, ೫) ಉದಧಿಕುಮಾರ, ೬) ವಿದ್ಯುತಕುಮಾರ, ೭) ಸ್ತನಿತಕುಮಾರ, ೮) ದಿಕ್ಕುಮಾರ, ೯) ಅಗ್ನಿಕುಮಾರ, ೧೦) ವಾತಕುಮಾರ. ಇವರೊಳಗಿನ ಅಸುರಕುಮಾರ ದೇವಗಳು ಮೊದಲನೇ ಪೃಥ್ವಿಯ ಪಂಕಭಾಗದಲ್ಲಿ ಇರುತ್ತಾರೆ. ಮತ್ತು ಉಳಿದ ಒಂಭತ್ತು ಪ್ರಕಾರದ ದೇವಗಳು ಖರಭಾಗದಲ್ಲಿ ಇರುತ್ತಾರೆ. ವ್ಯಂತರರ ಎಂಟು ಪ್ರಕಾರದ ಭೇದಗಳನ್ನು ನಾವು ನಂತರ ನೋಡುವುದಿದೆ. ಅವರೊಳಗಿನ ರಾಕ್ಷಸ ಜಾತಿಯ ವ್ಯಂತರ ದೇವರು ಪಂಕಭಾಗದಲ್ಲಿ ಇರುತ್ತಾರೆ, ಇತರರು ಖರಭಾಗದಲ್ಲಿ ಹಾಗೂ ಬೇರೆ ಕಡೆಯೂ ಇರುತ್ತಾರೆ.

ನಮಗಂತೂ ಭೂತವಾಗಿ ಯಾರು ನಮ್ಮ ದೂರದರ್ಶನದ ಧಾರಾವಾಹಿಗಳಲ್ಲಿ ಕಾಣಿಸುತ್ತಾರೆ ಆ ವ್ಯಂತರರದಷ್ಟೇ ಪರಿಚಯವಿದೆ. ನಾವು ಕೇವಲ ಅವರ ಕಾಲ್ಪನಿಕ ಕಥೆಗಳನ್ನು ಕೇಳಿದ್ದೇವೆ-ನೋಡಿದ್ದೇವೆ. ಆದರೆ ಯಾವಾಗ ನಾವು ಅವರ ಚರ್ಚೆಯನ್ನು ಆಗಮೋಕ್ತವಾಗಿ ಆಲಿಸುವೆವು, ಅವರ ರತ್ನದರಮನೆಗಳ ಸ್ವರೂಪವನ್ನು ಆಲಿಸುವೆವು ಆಗ ನಮಗೂ ವ್ಯಂತರರಾಗಬೇಕೆನ್ನುವ ವಿಕಲ್ಪವು ಬರಬಹುದಾಗಿದೆ, ಆದರೆ ಅಂಥ ವಿಕಲ್ಪವಾಗುವುದು ಬೇಡ. ಅಯ್ಯಾ ! ಋದ್ಧಿಧಾರಿಗಳಾದ ಭಾವಲಿಂಗೀ ಸಂತರುಗಳ ಪರಿಣಾಮವು ಕೂಡ ಕೆಟ್ಟು ಹೋಗುತ್ತದೆ, ಸಂಯೋಗಗಳ ಮಹಿಮೆಯು ಬಂದು ಬಿಡುತ್ತದೆ, ಕಷಾಯಗಳಾಗಿ ಬಿಟ್ಟರೆ ಸಮ್ಯಕ್ತ್ವದಿಂದ ಭ್ರಷ್ಟರಾಗಿ ಅವರು ಅಸುರಕುಮಾರಾದಿ ದೇವಗಳಲ್ಲಿ ಇಂದ್ರರಾಗಿ ಅಲ್ಲಿ ಉತ್ಪನ್ನರಾಗುತ್ತಾರೆ. ಅಲ್ಲಿಯ ಇಂದ್ರರು ಕೂಡ ಬಹಳಷ್ಟು ಪುಣ್ಯೋದಯದ ಕಾರಣದಿಂದಲೇ ಆಗುತ್ತಾರೆ. ಅಲ್ಲಿಯ ಸಾಧಾರಣ ಜಾತಿಯ ದೇವಗಳಂತೂ ಅಜ್ಞಾನವಶ ತಪಶ್ಚಾರಣಾದಿಗಳನ್ನು ಮಾಡಿಯೂ ಆಗುತ್ತಾರೆ. ಆದರೆ ಅಲ್ಲಿಯ ಮಹಾಋದ್ಧಿಧಾರಕ ಇಂದ್ರಾದಿಗಳಾಗಿ ಜನ್ಮ ಪಡೆಯುವಂಥವರು ಅವರಂತೂ ಪೂರ್ವ ಭವದಲ್ಲಿ ಸಂಯಮ ಧಾರಣ ಮಾಡಿರುವಂಥವರಿರುತ್ತಾರೆ, ತಪಸ್ಸು ಮಾಡಿರುವಂಥವರಿರುತ್ತಾರೆ. ಭಾವಲಿಂಗೀ ಸಂತರು ಕೂಡ ಸಂಯಮ ಹಾಗೂ ಸಮ್ಯಕ್ತ್ವದಿಂದ ಭ್ರಷ್ಟರಾಗಿ ಅಲ್ಲಿಯ ಇಂದ್ರಾದಿ ಮಹರ್ದ್ಧಿಕ ದೇವರಾಗಿ ಜನಿಸುತ್ತಾರೆ.

ಈ ಯಾವ ಹತ್ತು ಪ್ರಕಾರದ ಭವನವಾಸಿಗಳ ಕುಲದ ಚರ್ಚೆ ಮಾಡಿದೆವು ಅವರಲ್ಲಿ ಪ್ರತಿಯೊಂದು ಕುಲದಲ್ಲಿ - ಒಬ್ಬನು ದಕ್ಷಿಣದ ಇಂದ್ರ ಮತ್ತು ಒಬ್ಬನು ಉತ್ತರದ ಇಂದ್ರ. ಇಬ್ಬರು ಇಂದ್ರರಿರುತ್ತಾರೆ ಹೇಗೆಂದರೆ ಅಸುರಕುಮಾರ ಜಾತಿಯ ದೇವಗಳಲ್ಲಿ ದಕ್ಷಿಣೇಂದ್ರನ ಹೆಸರು ಚಮರವಿದೆ ಮತ್ತು ಉತ್ತರೇಂದ್ರನ ಹೆಸರು ವೈರೋಚನವಿದೆ. ಹೀಗೆ ಹತ್ತು ಪ್ರಕಾರದ ಕುಲಗಳ ಚರ್ಚೆ ಮಾಡಲಾಯಿತು. ಅವರಲ್ಲಿ ಪ್ರತಿಯೊಂದು ಕುಲದಲ್ಲಿ ಇಬ್ಬಿಬ್ಬರು ಇಂದ್ರರಂತೆ ಇಪ್ಪತ್ತು ಇಂದ್ರರು ಮತ್ತು ಇಪ್ಪತ್ತು ಪ್ರತೀಂದ್ರರು ಸೇರಿ ಭವನವಾಸಿಗಳ ನಲವತ್ತು ಇಂದ್ರರಾಗುತ್ತಾರೆ. ವ್ಯಂತರರಲ್ಲಿ ಎಂಟು ಪ್ರಕಾರವಿದ್ದು ಅವರಲ್ಲಿ ಪ್ರತಿಯೊಂದರಲ್ಲಿ ಇಬ್ಬಿಬ್ಬರು ಇಂದ್ರರು ಎಂದರೆ ಹದಿನಾರು ಇಂದ್ರರು ಮತ್ತು ಹದಿನಾರು ಪ್ರತೀಂದ್ರರು ಸೇರಿ ಮೂವತ್ತೆರಡು ಇಂದ್ರರಾಗುತ್ತಾರೆ.

ಹದಿನಾರು ಸ್ವರ್ಗಗಳಲ್ಲಿ ಹದಿನಾರು ಇಂದ್ರರಿರಬಹುದೇನು ? ಇಲ್ಲ ! ಅಲ್ಲಿಯಂತೂ ಹನ್ನೆರಡೇ ಇಂದ್ರರಿರುತ್ತಾರೆ ಮತ್ತು ಅಷ್ಟೇ ಪ್ರತೀಂದ್ರರು ಸೇರಿ ಇಪ್ಪತ್ನಾಲ್ಕು ಆದರು. ಹಾಗಾದರೆ ನಮ್ಮಲ್ಲಿ ಪಂಚಕಲ್ಯಾಣಕಗಳಲ್ಲಿ ಹದಿನಾರು ಇಂದ್ರರರನ್ನೇಕೆ ಮಾಡಲಾಗುತ್ತದೆ ? ನೇರವಾಗಿ ಪ್ರತಿಷ್ಠಾಚಾರ್ಯರನ್ನು ವಿಚಾರಿಸಿದರೆ - ಪ್ರತಿಷ್ಠೆ ಮಾಡಿಸುವಂಥವರಿಗೆ ಪ್ರಶ್ನಿಸಲಾದರೆ ಕೆಲವರು ಹಾಸ್ಯದಲ್ಲಿ ತೇಲಿಸಿಬಿಡುತ್ತಾರೆ, ಕೆಲವರು ಹೀಗೆಯೇ ಪದ್ಧತಿಯು ಬಂದು ಬಿಟ್ಟಿದೆಯೆಂದು ಹೇಳುತ್ತಾರೆ ಮತ್ತೆ ಕೆಲವರು ನಿಜವಾದ ಕಾರಣವನ್ನೂ ಹೇಳುತ್ತ ಧನವನ್ನು ಹೊಂದಿಸುವ ಸಲುವಾಗಿಯೆಂದು ಹೇಳುತ್ತಾರೆ. ಇಂದ್ರರ ಹರಾಜಿನಲ್ಲಿ ಅಧಿಕ ಧನರಾಶಿಯು ದೊರಕುತ್ತದೆಯೆನ್ನುತ್ತಾರೆ !

ನಮಗೆ ಒಟ್ಟು ನೂರು ಇಂದ್ರರನ್ನು ಕಾಣುವುದಿದೆ ಅಲ್ಲವೇನು ! ಜ್ಯೋತಿಷಿಗಳಲ್ಲಿ ಚಂದ್ರನು ಇಂದ್ರನಿದ್ದಾನೆ. ಮತ್ತು ಸೂರ್ಯನು ಪ್ರತೀಂದ್ರನಿದ್ದಾನೆ ಒಟ್ಟು ೯೮ ಆದರು. ಮನುಷ್ಯರಲ್ಲಿ ಚಕ್ರವರ್ತಿ ಮತ್ತು ತಿರ್ಯಂಚಗಳಲ್ಲಿ ಸಿಂಹ ಅಥವಾ ಅಷ್ಟಾಪದವನ್ನು ಇಂದ್ರವೆಂದು ಗಣಿಸಿದ ಮೇಲೆ ಒಟ್ಟು ನೂರು ಇಂದ್ರರಾಗುತ್ತಾರೆ. ತೀರ್ಥಂಕರರ ಸಮವಸರಣದಲ್ಲಿ ಇವರು ನೂರು ಜನ ಇಂದ್ರರು ಉಪಸ್ಥಿತರಿರುತ್ತಾರೆ.

ನಾವು ಭವನವಾಸಿಗಳ ಹತ್ತು ಪ್ರಕಾರದ ಕುಲಗಳ ಪರಿಚಯ ಮಾಡಿಕೊಂಡಂತಾಯಿತು ಅವರಲ್ಲಿ ಪ್ರತಿಯೊಂದು ಕುಲದ ದಕ್ಷಿಣ ಹಾಗೂ ಉತ್ತರದ ಇಂದ್ರರೆಂದು ಇಬ್ಬರು ಇಂದ್ರರಿರುತ್ತಾರೆ. ಅವರುಗಳ ಹೆಸರು ಮತ್ತು ಅವರ ಆಜ್ಞೆಯಲ್ಲಿ ಎಷ್ಟು ಭವನಗಳಿರುತ್ತವೆಯೆಂಬುದನ್ನು ನಿಮ್ನ ರೀತಿಯಿಂದ ನೋಡೋಣ,

ಕುಲದ ಹೆಸರು	ದಕ್ಷಿಣೇಂದ್ರರ		ಉತ್ತರೇಂದ್ರರ		ಒಟ್ಟು ಭವನ
	ಹೆಸರು	ಭವನ	ಹೆಸರು	ಭವನ	
೧) ಅಸುರಕುಮಾರ	ಚಮರ	೩೪ ಲಕ್ಷ	ವೈರೋಚನ	೩೦ ಲಕ್ಷ	೬೪ ಲಕ್ಷ
೨) ನಾಗಕುಮಾರ	ಭೂತಾನಂದ	೪೪ ಲಕ್ಷ	ಧರಣಾನಂದ	೪೦ ಲಕ್ಷ	೮೪ ಲಕ್ಷ
೩) ಸುಪರ್ಣಕುಮಾರ	ವೇಣು	೩೮ ಲಕ್ಷ	ವೇಣುಧಾರಿ	೩೪ ಲಕ್ಷ	೭೨ ಲಕ್ಷ
೪) ದ್ವೀಪಕುಮಾರ	ಪೂರ್ಣ	೪೦ ಲಕ್ಷ	ವಶಿಷ್ಟ	೩೬ ಲಕ್ಷ	೭೬ ಲಕ್ಷ
೫) ಉದಧಿಕುಮಾರ	ಜಲಪ್ರಭ	೪೦ ಲಕ್ಷ	ಜಲಕಾಂತ	೩೬ ಲಕ್ಷ	೭೬ ಲಕ್ಷ
೬) ವಿದ್ಯುತಕುಮಾರ	ಘೋಷ	೪೦ ಲಕ್ಷ	ಮಹಾಘೋಷ	೩೬ ಲಕ್ಷ	೭೬ ಲಕ್ಷ
೭) ಸ್ತನಿತ ಕುಮಾರ	ಹರಿಷೇಣ	೪೦ ಲಕ್ಷ	ಹರಿಕಾಂತ	೩೬ ಲಕ್ಷ	೭೬ ಲಕ್ಷ
೮) ದಿಕ್ಕುಮಾರ	ಅಮಿತಗತಿ	೪೦ ಲಕ್ಷ	ಅಮಿತವಾಹನ	೩೬ ಲಕ್ಷ	೭೬ ಲಕ್ಷ
೯) ಅಗ್ನಿಕುಮಾರ	ಅಗ್ನಿಶಿಖಿ	೪೦ ಲಕ್ಷ	ಅಗ್ನಿವಾಹನ	೩೬ ಲಕ್ಷ	೭೬ ಲಕ್ಷ
೧೦) ವಾತಕುಮಾರ	ಬಲಂಬ	೫೦ ಲಕ್ಷ	ಪ್ರಭಂಜನ	೪೬ ಲಕ್ಷ	೯೬ ಲಕ್ಷ

ಭವನಗಳ ಒಟ್ಟು ಸಂಖ್ಯೆ - ೭ ಕೋಟಿ ೭೨ ಲಕ್ಷ

ಈ ಭವನಗಳ ವಿಸ್ತಾರವು ಜಘನ್ಯವಂತೂ ಸಂಖ್ಯಾತ ಕೋಟಿ ಯೋಜನದ್ದಿದೆ ಮತ್ತು ಉತ್ಕೃಷ್ಟ ವಿಸ್ತಾರವು ಅಸಂಖ್ಯಾತ ಕೋಟಿ ಯೋಜನಗಳದ್ದಿರುತ್ತದೆ. ಮಧ್ಯಲೋಕದ ಅಸಂಖ್ಯಾತ ದ್ವೀಪ ಸಮುದ್ರಗಳನ್ನು ಹೊರತುಪಡಿಸಿ ಹೊರಗಿನ ಅಸಂಖ್ಯಾತ ದ್ವೀಪ ಸಮುದ್ರಗಳ ಕೆಳಗಿನ ಭಾಗದಲ್ಲಿ ಈ ಭವನಗಳು ಕಂಡು ಬರುತ್ತವೆ. ಇವು ಚೌಕಾಕಾರದವಿರುತ್ತವೆ. ಇವುಗಳ ಬಾಹುಳ್ಯವು ೩೦೦ ಯೋಜನದ್ದಿದೆ ಅರ್ಥಾತ್ ಭವನಗಳ ಅಟ್ಟ (ಛತ್ತ)ವು ಇಷ್ಟು ಎತ್ತರವಿರುತ್ತದೆ. ಪರಿಮಳಯುಕ್ತ ಪುಷ್ಪಗಳಿಂದ ಪರಿಶೋಭಿತವಿರುವಂಥ ರತ್ನಮಯ ಭೂಮಿಯು ಇವುಗಳದ್ದಿರುತ್ತದೆ. ಅದೇ ಪ್ರಕಾರ ರತ್ನಮಯ ಭಿತ್ತಿಗಳಿದ್ದು ಅವು ನಿತ್ಯ ಪ್ರಕಾಶಯುಕ್ತವಾಗಿರುತ್ತವೆ. ಎಲ್ಲ ಇಂದ್ರಿಯಗಳಿಗೆ ಸುಖದಾಯಕವಿರುವ ಚಂದನಾದಿ ವಸ್ತುಗಳಿಂದ ಈ ಭವನಗಳು ಸಿಂಚಿತವಾಗುತ್ತಿರುತ್ತವೆ.

ಪ್ರತಿಯೊಂದು ಭವನದ ಮಧ್ಯದಲ್ಲಿ ನೂರು ಯೋಜನ ಎತ್ತರದ ಪರ್ವತವಿರುತ್ತದೆ ಮತ್ತು ಅದರ ಮೇಲೆ ಒಂದು ಅಕೃತ್ರಿಮ ಚೈತ್ಯಾಲಯವಿರುತ್ತದೆ. ಪ್ರತಿಯೊಂದು ಚೈತ್ಯಾಲಯದಲ್ಲಿ ೧೦೮ ಜಿನಪ್ರತಿಮೆಗಳಿರುತ್ತವೆ. ಅವು ರತ್ನದಿಂದ ನಿರ್ಮಿತವಿವೆ - ರತ್ನಜಡಿತವಾಗಿರುವುದಿಲ್ಲ ಎಂದರೆ ಯಾರೂ ಮಾಡಿರುವಂಥವಿಲ್ಲ. ಈ ಪ್ರತಿಮೆಗಳು ೫೦೦ ಬಿಲ್ಲೆತ್ತರವಿದ್ದು ಪದ್ಮಾಸನದಲ್ಲಿ ವಿರಾಜಮಾನವಿವೆ.

ಪ್ರಶ್ನೆ :- ತಾವು ಅಕೃತ್ರಿಮ ಚೈತ್ಯಾಲಯಗಳಿಗೆ ನಮಸ್ಕಾರ ಮಾಡುತ್ತೀರಿ, ಪರೋಕ್ಷ ಪೂಜೆಯನ್ನು ಮಾಡುತ್ತೀರಿ, ಆ ಬಿಂಬಗಳು ರತ್ನಮಯವಿವೆ, ವಜ್ರಮಯವಿವೆ, ವಿವಿಧ ವರ್ಣಮಯ ರತ್ನಗಳಿಂದ ನಿರ್ಮಿತವಿವೆಯೆಂಬುದಾಗಿ ಬಹಳಷ್ಟು ವರ್ಣನೆಯನ್ನು ಮಾಡುತ್ತೀರಿ. ನಾವು ಕೂಡ ಇಲ್ಲಿ ಮೂರ್ತಿಯ ಮೇಲೆ ರತ್ನಗಳನ್ನು ಜಡಿಸಿದರೆ, ಪೋಷಾಕು ತೊಡಿಸಿದರೆ ತಪ್ಪೇನಿದೆ ?

ಉತ್ತರ :- ಬಿಂಬಗಳು ರತ್ನಮಯವಿರುವ ಮಾತು ಬೇರೆಯಿದೆ ಮತ್ತು ರತ್ನಜಡಿತವಿರುವ ಮಾತು ಬೇರೆಯಿದೆ. ತಾವು ಅನೇಕ ಸ್ಥಾನಗಳಲ್ಲಿ ರತ್ನಗಳಿಂದ ನಿರ್ಮಿಸಿದ ಎಂದರೆ ಯಾವ ರೀತಿ ಅಮೃತ ಶಿಲೆ ಅಥವಾ ಸ್ಫಟಿಕ ಪಾಷಾಣದಿಂದ ನಿರ್ಮಿಸಲಾಗುತ್ತದೆ ಅದೇ ರೀತಿ ರತ್ನನಿರ್ಮಿತ ಬಿಂಬಗಳನ್ನು ನೋಡಿರಬಹುದಾಗಿದೆ. ಆದರೆ ಒಂದು ವೇಳೆ ರತ್ನಗಳಿಂದ ಮೂರ್ತಿಯ ಅಲಂಕಾರ ಮಾಡಿದರೆ, ರತ್ನಜಡಿತ ಮುಕುಟ ಅಥವಾ ಆಭೂಷಣ ತೊಡಿಸಿದರೆ ವೀತರಾಗತೆಯು ಎಲ್ಲಿ ಉಳಿಯುತ್ತದೆ ? ಯಾವ ರೀತಿ ನಮಗೆ ಒಂದು ವೇಳೆ ಶೃಂಗಾರದ ಇಚ್ಛೆಯಿದ್ದರೆ ನಾವು ನಮ್ಮ ರಾಗದ ಪೋಷಣೆ ಮಾಡಬಯಸುತ್ತೇವೆ ಆಗ ನಮ್ಮ ಮಕ್ಕಳಿಗೆ ಶೃಂಗಾರ ಮಾಡುತ್ತೇವೆ, ಅವರಿಗೆ ನಮ್ಮ ಅಭಿರುಚಿಯ ಅನುಸಾರ ಬಟ್ಟೆ ತೊಡಿಸುತ್ತೇವೆ-ನಮ್ಮ ಅತೃಪ್ತ ಬಯಕೆಗಳನ್ನು ಮಕ್ಕಳ ಮೇಲೆ ಹೇರುತ್ತೇವೆ, ಅದೇ ರೀತಿ ನಮ್ಮ ರಾಗದ ಪ್ರದರ್ಶನ ಮತ್ತು ಪ್ರಯೋಗವನ್ನು ಅರಹಂತರ ಮೇಲೆಯೂ ಕೂಡ ಮಾಡುವುದು ಯೋಗ್ಯವಿದೆಯೇನು ?

ಈ ಮೂರ್ತಿಗಳನ್ನು ಯಾರೂ ನಿರ್ಮಾಣ ಮಾಡಿಲ್ಲ ಎಂದರೆ ಈ ಮೂರ್ತಿಗಳು ಯಾರಿಂದಲೂ ನಿರ್ಮಿತವಾಗಿರುವಂಥವಲ್ಲ. ಈ ರಚನೆಯು ಯಾವಾಗಲೂ ಇದ್ದಕ್ಕಿದ್ದಂತೆಯೇ ಉಳಿಯುತ್ತದೆ. ಕೇವಲ ಅರಹಂತರ ಪ್ರತಿಮೆಗಳೇ ಇವೆ ಎಂಬುದಾಗಿಲ್ಲ ಆದರೆ ಚಾಮರಧಾರೀ ದೇವಗಳ ಮೂರ್ತಿಗಳು ಕೂಡ ಜಿನಬಿಂಬಗಳ ಪಾರ್ಶ್ವ(ಮಗ್ಗುಲಿನ)ಭಾಗಗಳಲ್ಲಿ ಮಾಡಿರುವಂಥವಿವೆ. ಇವು ಯಾವ ತೀರ್ಥಂಕರ ಭಗವಂತರ ಮೂರ್ತಿಗಳಿವೆ ? ಎಂಬ ಪ್ರಶ್ನೆಯು ಇಲ್ಲಿ ಉದ್ಭವವಾಗುತ್ತದೆ. ಇವು ಯಾವ ವಿಶಿಷ್ಟ ತೀರ್ಥಂಕರರ ಪ್ರತಿಮೆಗಳಲ್ಲ;

ಆದರೆ ಸಾಮಾನ್ಯವಾಗಿ ತೀರ್ಥಂಕರ ಅರಹಂತರ ಪ್ರಾತಿಹಾರ್ಯ ಮೊದಲಾದ ವೈಭವಗಳ ರಚನೆಯೂ ಅಲ್ಲಿದೆ. ಚಾಮರ ಢಾಳಿಸುತ್ತಿರುವ ಇಂದ್ರರ ಮೂರ್ತಿಗಳೂ ಕೂಡ ಇವೆ. ನಾವು ಇಲ್ಲಿ ಮಂದಿರಗಳಲ್ಲಿ ಯಾವ ಮೂರ್ತಿಗಳನ್ನು ವಿರಾಜಮಾನ ಮಾಡುತ್ತೇವೆ ಅಲ್ಲಿ ಚಿಹ್ನೆಗಳನ್ನು ಮಾಡಿಸಿ ಭಗವಂತರ ಹೆಸರಿನಿಂದ ಸ್ಥಾಪನೆ ಮಾಡುತ್ತೇವೆ. ಮತ್ತು ಅವರ ಪೂಜೆ ಮಾಡುತ್ತೇವೆ. ಇವಂತೂ ನಾವು ನಿರ್ಮಿಸಿರುವಂಥವಿವೆ. ಪೂರ್ವದಲ್ಲಿ ಯಾವ ತೀರ್ಥಂಕರರು ಆಗಿ ಹೋಗಿದ್ದಾರೆ ಅವರ ಮೂರ್ತಿಗಳು ಇವು ಇವೆಯೆಂದು ತಾವು ಹೇಳುತ್ತಿದ್ದರೆ, ಆ ಯಾವ ತೀರ್ಥಂಕರರು ಆಗಿ ಹೋಗಿದ್ದಾರೆ ಅವರ ಮೊದಲು ಕೂಡ ಈ ಮೂರ್ತಿಗಳಿದ್ದವು. ಎಂದರೇನೆ ಈ ಜಿನಧರ್ಮ, ವಸ್ತುವ್ಯವಸ್ಥೆಯು ಅನಾದಿಯಿಂದ ಇದೆಯೆಂದ ಮೇಲೆ ಈ ಅಕೃತ್ರಿಮ ಚೈತ್ಯಾಲಯ, ಜಿನಬಿಂಬಗಳು ಕೂಡ ಅನಾದಿಯಿಂದ ಇವೆ, ಅಕೃತ್ರಿಮವಿವೆ. ಅರಹಂತ, ಸಿದ್ಧರು ಅನಾದಿಯಿಂದ ಇದ್ದಾರೆ, ಮೋಕ್ಷಮಾರ್ಗವು ಅನಾದಿಯಿಂದ ಇದೆ. ಅಷ್ಟೇ ಏಕೆ ಪೂಜೆ ಮಾಡುವಂಥ ನಮ್ಮ ಜೀವದ್ರವ್ಯ ಎಂದರೆ ನಾವು ಕೂಡ ಅನಾದಿಯಿಂದ ಇದ್ದೇವೆ, ಅಕೃತ್ರಿಮರಿದ್ದೇವೆ. ಭವನವಾಸಿಗಳ ಇನ್ನೂ ಕೆಲವು ಮಾತುಗಳು - ಮುಕುಟ ಚಿಹ್ನೆ, ಚೈತ್ಯವೃಕ್ಷ, ಮಾನಸ್ತಂಭ ಮೊದಲಾದ ವಿಷಯಗಳ ಚರ್ಚೆಯನ್ನು ಮುಂದೆ ಮಾಡುವುದಿದೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವಂಥ ಆರನೆಯ ತೀರ್ಥಂಕರ
ಶ್ರೀ ಸ್ವಯಂಪ್ರಭ ಭಗವಂತರಿಗೆ ಜಯವಾಗಲಿ.

★★★★★

ಹೇಗೆ ಜಡ ಮತ್ತು ಚೇತನ ಪದಾರ್ಥಗಳ ಸ್ವರೂಪವಿದೆ ಹಾಗೆ ಶ್ರದ್ಧೆ ಮಾಡಿದರೆ ಸರ್ವ ದುಃಖ ದೂರವಾಗುವುದು. ಮಿಥ್ಯಾದರ್ಶನದ ನಾಶವಾಗಿಹೋದ ಮೇಲೆ ಮಿಥ್ಯಾಭ್ರಾಂತಿಯ, ಅಸತ್ಯ ಉಪಾಯಗಳ ಇಚ್ಛೆ ಮೊದಲಾದವುಗಳ ನಾಶವಾಗಿ ಹೋಗುತ್ತದೆ. ವಿಪರೀತ ಅಭಿಪ್ರಾಯವು ಬಿಟ್ಟುಹೋದ ಮೇಲೆ ಕ್ರಮ-ಕ್ರಮದಿಂದ ಇಚ್ಛೆಯ ಅಭಾವವಾಗಿ ಹೋಗುತ್ತದೆ. ಆತ್ಮನು ಜ್ಞಾತಾ ಸ್ವರೂಪನಿದ್ದಾನೆ, ಅವನು ಜಡ ಮೊದಲಾಗಿ ಯಾವುದೇ ಪರ ಪದಾರ್ಥಗಳನ್ನು ಬದಲಿಸುವಲ್ಲಿ ಸಮರ್ಥನಿಲ್ಲವೆಂಬ ಶ್ರದ್ಧೆ ಮಾಡಿದರೆ ಭ್ರಮೆಯ ನಾಶವಾಗುತ್ತದೆ. ಅನಂತ ಪದಾರ್ಥಗಳಲ್ಲಿ ಬದಲಾವಣೆ ಮಾಡುವ ಭ್ರಮೆ ನಾಶವಾಗುವುದರಿಂದ ತಾನಾಗಿಯೇ ಅನಂತ ಪದಾರ್ಥಗಳ ಜ್ಞಾತಾನಾಗುತ್ತಾನೆ. ತಾನು ಸ್ವಯಂ ಆನಂದ ಮತ್ತು ಜ್ಞಾನಸ್ವರೂಪನಿರುವ ಅಭಿಪ್ರಾಯವು ಬಂದು ಬಿಟ್ಟರೆ ಸಮಸ್ತ ದುಃಖಗಳ ಅಭಾವವಾಗುತ್ತದೆ. ಒಂದು ವೇಳೆ ಪರಪದಾರ್ಥದ ವರ್ತಮಾನ ಪರಿಣಮನವು ಆತ್ಮನಿಂದ ಆಗುತ್ತಿದ್ದರೆ ಅದು ಆ ಪದಾರ್ಥದ ವರ್ತಮಾನವಾಗಿ ಉಳಿಯುವುದಿಲ್ಲ ಮತ್ತು ಯಾವುದೇ ಪದಾರ್ಥದ್ದು ವರ್ತಮಾನದ ಅಭಾವವಾದ ಮೇಲೆ ಆ ಪದಾರ್ಥದ ವಿದ್ಯಮಾನತೆಯು ಯಾವ ಕಾಲದಲ್ಲಿಯೂ ಸಂಭವಿಸುವುದಿಲ್ಲ. ಅರ್ಥಾತ್ ಆ ಪದಾರ್ಥವೇ ಉಳಿಯುವುದಿಲ್ಲ ಆದರೆ ಜೀವ-ಅಜೀವವೆಂಬ ಭೇದರೂಪದ ಪದಾರ್ಥಗಳಂತೂ ವಿಶ್ವದಲ್ಲಿ ಸದೈವ ವಿದ್ಯಮಾನವಿರುವುದನ್ನು ಅನಂತ ಕೇವಲೀ ಪ್ರಭುಗಳು - ಸರ್ವಜ್ಞ ಭಗವಂತರು ತಮ್ಮ ಸ್ವಭಾವರೂಪ ಪೂರ್ಣ ವಿಕಸಿತಜ್ಞಾನದಿಂದ ನೋಡಿದ್ದಾರೆ.

೭. ಅಧೋಲೋಕದ ವ್ಯಂತರ ದೇವಗಳು

ಸರ್ವಜ್ಞ ಭಗವಂತರ ವಚನಗಳ ಅನುಸಾರ ತ್ರಿಲೋಕಸಾರ ಗ್ರಂಥದ ರಚನೆಯಾಗಿದೆ, ಅದರದೇ ಆಧಾರದಿಂದ ನಾವು ಇಲ್ಲಿ ಮೂರು ಲೋಕಗಳ ಸ್ವರೂಪವನ್ನು ನೋಡುತ್ತಿದ್ದೇವೆ. ಅಧೋಲೋಕದ ಚರ್ಚೆಯಲ್ಲಿ ನಾವು ಭವನವಾಸಿಗಳ ಚರ್ಚೆ ಮಾಡುತ್ತಿದ್ದೆವು. ಅವರಲ್ಲಿ ಇಂದ್ರ , ಸಾಮಾನಿಕ, ಲೋಕಪಾಲ ಮೊದಲಾದ ಹತ್ತು ಪ್ರಕಾರದ ಜಾತಿಯನ್ನು ಮತ್ತು ಅಸುರಕುಮಾರ, ನಾಗಕುಮಾರ ಮೊದಲಾದ ಹತ್ತು ಪ್ರಕಾರದ ಕುಲಗಳನ್ನು ತಿಳಿದುಕೊಂಡಾಗಿದೆ. ಈ ಹತ್ತು ಭೇದಗಳನ್ನು ಗುರುತಿಸುವ ಸಲುವಾಗಿ ಅವರ ಮುಕುಟಗಳಲ್ಲಿ ಬೇರೆ-ಬೇರೆ ಚಿಹ್ನೆಗಳಿರುತ್ತವೆ, ಅವರ ಧ್ವಜಗಳು ಬೇರೆ ಬೇರೆಯಾಗಿರುತ್ತವೆ, ಪ್ರತಿಯೊಬ್ಬರ ಚೈತ್ಯ ವೃಕ್ಷಗಳು ಬೇರೆ-ಬೇರೆಯಾಗಿರುತ್ತವೆ, ಚೈತ್ಯವೃಕ್ಷದ ಮೂಲದಲ್ಲಿ ಪ್ರತಿಯೊಂದು ದಿಕ್ಕಿಗೆ ಐದೈದು ಪದ್ಮಾಸನಸ್ಥ ಜಿನಪ್ರತಿಮೆಗಳಿರುತ್ತವೆ. ಪ್ರತಿಯೊಂದು ಪ್ರತಿಮೆಯ ಮುಂಭಾಗದಲ್ಲಿ ಉತ್ತುಂಗವಾದ ರತ್ನಮಯವಾದ ಮಾನಸ್ತಂಭವಿರುತ್ತದೆ. ಈ ಪ್ರಕಾರ ಪ್ರತಿಯೊಂದು ದಿಕ್ಕಿನಲ್ಲಿ ಐದೈದು ಮಾನಸ್ತಂಭಗಳಿರುತ್ತವೆ ಮತ್ತು ಆ ಮಾನಸ್ತಂಭಗಳಲ್ಲಿ ಒಂದೊಂದು ದಿಕ್ಕಿಗೆ ಏಳೇಳು ಪ್ರತಿಮೆಗಳಿರುತ್ತವೆ. ತಾವು ಒಂದು ವೇಳೆ ದೇವಗಿರಿಗೆ ಹೋಗಿದ್ದರೆ ಅಲ್ಲಿನ ಮಾನಸ್ತಂಭದಲ್ಲಿ ಒಂದೊಂದು ದಿಕ್ಕಿನಲ್ಲಿ ಐದೈದು ಪ್ರತಿಮೆಗಳು ವಿರಾಜಮಾನವಿರುವುದನ್ನು ನೋಡಿರಬಹುದಾಗಿದೆ. ಆದುದರಿಂದ ಈ ವೃಕ್ಷಗಳನ್ನು ಚೈತ್ಯವೃಕ್ಷವೆಂದು ಹೇಳುತ್ತಾರೆ. ದೇವಗಳು ದಿನನಿತ್ಯವೂ ಅಲ್ಲಿಗೆ ಹೋಗಿ ಇವುಗಳ ಪೂಜೆ ಮಾಡುತ್ತಾರೆ.

ಈ ಹತ್ತು ಪ್ರಕಾರದ ದೇವಗಳ ಮುಕುಟದಲ್ಲಿ ಕಂಡು ಬರುವಂಥ ಚಿಹ್ನೆಗಳು ಮತ್ತು ಅವರುಗಳ ಚೈತ್ಯ ವೃಕ್ಷಗಳ ಹೆಸರು ಈ ಕೆಳಗಿನಂತಿವೆ,-

ಭವನವಾಸಿಗಳ ಭೇದ	ಮುಕುಟಗಳ ಚಿಹ್ನೆ	ಚೈತ್ಯವೃಕ್ಷಗಳು
೧) ಅಸುರಕುಮಾರ	ಚೂಡಾಮಣಿ ರತ್ನ	ಅಶ್ವತ್ಥ ವೃಕ್ಷ
೨) ನಾಗಕುಮಾರ	ಸರ್ಪ	ಸಪ್ತಪರ್ಣ ವೃಕ್ಷ
೩) ಸುಪರ್ಣಕುಮಾರ	ಗರುಡ	ಶಾಲ್ಮಲೀ ವೃಕ್ಷ
೪) ದ್ವೀಪಕುಮಾರ	ಆನೆ	ಜಂಬೂ ವೃಕ್ಷ
೫) ಉದಧಿಕುಮಾರ	ಮತ್ಸ್ಯ	ವೇತಸ ವೃಕ್ಷ
೬) ವಿದ್ಯುತಕುಮಾರ	ಸ್ವಸ್ತಿಕ	ಕದಂಬ ವೃಕ್ಷ
೭) ಸ್ತನಿತ ಕುಮಾರ	ವಜ್ರ	ಪ್ರಯಂಗು ವೃಕ್ಷ
೮) ದಿಕ್ಕುಮಾರ	ಸಿಂಹ	ಸರಿಸೋ ವೃಕ್ಷ
೯) ಅಗ್ನಿಕುಮಾರ	ಕಲಶ	ಪಲಾಶ ವೃಕ್ಷ
೧೦) ವಾತಕುಮಾರ	ಕುದುರೆ	ರಾಜದ್ರುಮ ವೃಕ್ಷ

ಪ್ರಶ್ನೆ :- ಪಂಕ ಎಂದರೆ ಕೆಸರು. ಹಾಗಾದರೆ ಪಂಕಭಾಗದಲ್ಲಿ - ಕೆಸರಿನಲ್ಲಿ ಇಂಥ ರಚನೆಯು ಹೇಗಿರಬಹುದಾಗಿದೆ ?

ಉತ್ತರ :- ಪಂಕಭಾಗವೆಂದಂತೂ ಅದರ ಹೆಸರು ಇದೆ. ಇಲ್ಲಿಯ ಭೂಮಿ, ಭಿತ್ತಿಗಳೆಲ್ಲವೂ ರತ್ನಮಯವಿರುತ್ತವೆಯೆಂಬುದರ ಚರ್ಚೆಯನ್ನು ಈ ಮೊದಲು ಮಾಡಿ ಬಂದಿದ್ದೇವೆ. ಇವುಗಳನ್ನು ಯಾರೂ ರಚನೆ ಮಾಡಿಲ್ಲ, ಅಂಥದೇ ಅಕೃತ್ರಿಮ ಸಹಜ ರಚನೆಯಿದೆ. ಮುಂಬಯಿ ನಿವಾಸಿಗಳಿಗೆ ಆಶ್ಚರ್ಯವಾಗುವ ಕಾರಣವಾದರೂ ಏನಿದೆ ? ಇಡೀ ಮುಂಬಯಿ ನಗರವನ್ನು ಕೂಡ ಕೆಸರಿನಲ್ಲಿ - ನೀರನ್ನು ತಗೆದು ಅದರಲ್ಲಿ ನಿರ್ಮಿಸಲಾಗಿದೆಯಲ್ಲವೇನು ?

ಶಾಸ್ತ್ರಗಳಲ್ಲಿ ಪ್ರತಿಯೊಂದು ಜಾತಿಯ ದೇವಗಳ, ದೇವಾಂಗನೆಯರ ಸಂಖ್ಯೆ, ಅವರುಗಳ ಹೆಸರು, ಅವರ ವಾಹನ ದೇವಗಳ ಹೆಸರು ಮೊದಲಾದವುಗಳ ಬಹಳಷ್ಟು ಚರ್ಚೆಯಿದೆ. ಅದನ್ನು ಬಿಟ್ಟು ನಾವು ಮುಂದೆ ಸಾಗೋಣ ಅಸುರಕುಮಾರರ ಉತ್ಕೃಷ್ಟ ಆಯುವು ೧ ಸಾಗರವಿದೆ. ದಕ್ಷಿಣೇಂದ್ರರ ಆಯುವು ೧ ಸಾಗರ ಮತ್ತು ಉತ್ತರೇಂದ್ರರದು ಸ್ವಲ್ಪ ಅಧಿಕ ೧ ಸಾಗರವಿದೆ. ಸರ್ವತ್ರ ಉತ್ತರದ ಭವನವಾಸಿಗಳ ಆಯುವು ಸ್ವಲ್ಪ ಅಧಿಕವೆಂದು ತಿಳಿಯುವುದು. ಭವನವಾಸಿಗಳಲ್ಲಿ ಅಸುರಕುಮಾರರ ಉತ್ಕೃಷ್ಟ ಆಯುವು ಎಲ್ಲರಿಗಿಂತ ಅಧಿಕವಿದೆ. ಎರಡನೆಯ ನಾಗಕುಮಾರರ ಉತ್ಕೃಷ್ಟ ಆಯುವು ೩ ಪಲ್ಯ, ಮೂರನೆಯ ಸುಪರ್ಣಕುಮಾರರದು ಎರಡೂವರೆ ಪಲ್ಯ, ನಾಲ್ಕನೆಯ ದ್ವೀಪ ಕುಮಾರರದು ೨ ಪಲ್ಯ ಹಾಗೂ ಐದನೆಯ ಉದಧಿಕುಮಾರರಿಂದ ಹಿಡಿದು ಹತ್ತನೆಯ ವಾತಕುಮಾರರವರೆಗೆ ಆರು ಪ್ರಕಾರದ ದೇವಗಳ ಆಯುವು ಒಂದೂವರೆ ಪಲ್ಯವಿರುತ್ತದೆ. ಇವೆಲ್ಲ ಭೇದಗಳಲ್ಲಿ ಆ ದೇವಗಳ ಜಘನ್ಯ ಆಯುವು ಹತ್ತು ಸಾವಿರ ವರ್ಷಗಳದ್ದಿರುತ್ತದೆ.

ಅಸುರಕುಮಾರ ದೇವಗಳ ದೇಹದ ಎತ್ತರವು ೨೫ ಧನುಷ್ಯ ಹಾಗೂ ಉಳಿದ ಒಂಭತ್ತು ಪ್ರಕಾರದ ದೇವಗಳ ಎತ್ತರವು ೧೦ ಧನುಷ್ಯವಿದೆ. ಅಸುರಕುಮಾರ ದೇವಗಳ ಶ್ವಾಸೋಚ್ಛ್ವಾಸವು ಹದಿನೈದು ದಿನ ಕಳೆದ ಮೇಲೆ ಒಂದು ಬಾರಿ ಮತ್ತು ಆಹಾರವು ಒಂದು ಸಾವಿರ ವರ್ಷಗಳ ನಂತರ ಒಂದು ಬಾರಿ ಇರುತ್ತದೆ. ದೇವಗಳಿಗೆ ಎಷ್ಟು ಸಾಗರದ ಆಯುವಿರುತ್ತದೆ ಅಷ್ಟು ಪಕ್ಷಗಳು (ಹದಿನೈದು ದಿನಗಳು) ಕಳೆದ ಮೇಲೆ ಶ್ವಾಸೋಚ್ಛ್ವಾಸವಿರುತ್ತದೆ ಮತ್ತು ಅಷ್ಟು ಸಾವಿರ ವರ್ಷಗಳು ಕಳೆದ ಮೇಲೆ ಆಹಾರವಿರುತ್ತದೆ - ಎಂಬುದು ನಿಯಮವಿದೆ. ನಾಗಕುಮಾರ ಮೊದಲಾದ ಮೂರು ಪ್ರಕಾರದ ದೇವಗಳಿಗೆ ಹನ್ನೆರಡೂವರೆ ಮುಹೂರ್ತಗಳು ಕಳೆದ ಮೇಲೆ ಒಮ್ಮೆ ಉಸಿರಾಟ ಮತ್ತು ಹನ್ನೆರಡೂವರೆ ದಿವಸಗಳು ಕಳೆದ ಮೇಲೆ ಆಹಾರವಿರುತ್ತದೆ. ಮುಂದಿನ ಮೂರು ಪ್ರಕಾರದ ದೇವಗಳಿಗೆ ಏಳೂವರೆ ಮುಹೂರ್ತದ ನಂತರ ಉಸಿರಾಟ ಹಾಗೂ ಏಳೂವರೆ ದಿವಸಗಳ ನಂತರ ಆಹಾರವಿರುತ್ತದೆ.

ಈಗ ಅಧೋಲೋಕದ ಪ್ರಕರಣದಲ್ಲಿ ವ್ಯಂತರರ ಚರ್ಚೆ ಮಾಡೋಣ. ಇವರ ಸಂಖ್ಯೆಯು ಅಸಂಖ್ಯಾತಗಳಲ್ಲಿ ಇರುತ್ತದೆ. ಇವರು ಅಧೋಲೋಕ ಹಾಗೂ ಮಧ್ಯಲೋಕದಲ್ಲಿ ಇರುತ್ತಾರೆ. ಭವನವಾಸೀ ಮತ್ತು ಕಲ್ಪವಾಸಿ ದೇವಗಳ ಭೇದವು ಜಾತಿಯ ಅಪೇಕ್ಷೆಯಿಂದ ಹತ್ತು-ಹತ್ತು ಪ್ರಕಾರದ್ದಿರುವುದನ್ನು ತಿಳಿದುಕೊಂಡಾಗಿದೆ. ಸ್ಮರಣೆಯಲ್ಲಿ ಇಟ್ಟುಕೊಳ್ಳುವುದು. ಅವರುಗಳಲ್ಲಿನ ಲೋಕಪಾಲ ಮತ್ತು ತ್ರಾಯಸ್ತ್ರಿಂಶತರನ್ನು ಹೊರತು ಪಡಿಸಿ ಉಳಿದ ಎಂಟು ಭೇದಗಳು ಈ ವ್ಯಂತರರಲ್ಲಿ ಇರುತ್ತವೆ. ಎಂದರೇನೆ ವ್ಯಂತರರಲ್ಲಿ - ೧) ಇಂದ್ರ (ಪ್ರತೀಂದ್ರ), ೨) ಸಾಮಾನಿಕ, ೩) ಪಾರಿಷದ, ೪) ತನುರಕ್ಷಕ, ೫) ಅನಿಕ, ೬) ಪ್ರಕೀರ್ಣಕ, ೭)

ಆಭಿಯೋಗ್ಯ, ೮) ಕಿಲ್ಬಿಷಕರೆಂದು ಎಂಟು ಭೇದಗಳು ಜಾತಿಯ ಅಪೇಕ್ಷೆಯಿಂದ ಇರುತ್ತವೆ. ಈ ವ್ಯಂತರರಲ್ಲಿ ಕುಲದ ಅಪೇಕ್ಷೆಯಿಂದಲೂ ಎಂಟು ಭೇದಗಳಿರುತ್ತವೆ. ಭವನವಾಸಿಗಳಲ್ಲಿ ಅಸುರಕುಮಾರ ಮೊದಲಾಗಿ ಹತ್ತು ಭೇದಗಳಿರುವುದನ್ನು ಮೊದಲೇ ತಿಳಿದುಕೊಂಡಿದ್ದೇವೆ. ಈಗ ವ್ಯಂತರರ ಎಂಟು ಪ್ರಕಾರದ ಕುಲಗಳು ಈ ಪ್ರಕಾರವಿವೆ - ೧) ಕಿನ್ನರ, ೨) ಕಿಂಪುರುಷ, ೩) ಮಹೋರಗ, ೪) ಗಂಧರ್ವ, ೫) ಯಕ್ಷ, ೬) ರಾಕ್ಷಸ, ೭) ಭೂತ, ೮) ಪಿಶಾಚ.

ಇವರೊಳಗಿನ ರಾಕ್ಷಸರ ಭವನಗಳು ಪಂಕಭಾಗದಲ್ಲಿ ಕಂಡು ಬರುತ್ತವೆ. ಉಳಿದ ಏಳು ಪ್ರಕಾರದ ವ್ಯಂತರರ ಭವನಗಳು ಮೇಲೆ ಖರಭಾಗದಲ್ಲಿ ಕಂಡು ಬರುತ್ತವೆ ಹಾಗೂ ಇವರ ಆವಾಸಗಳು ಚಿತ್ರಾ ಪೃಥ್ವಿ ಹಾಗೂ ಸಮುದ್ರಗಳ ಮೇಲೆ ಒಂದು ಲಕ್ಷ ಯೋಜನದವರೆಗೆ ಕಂಡು ಬರುತ್ತವೆ.

ವ್ಯಂತರರ ಶರೀರದ ವರ್ಣವನ್ನು ನೋಡೋಣ. ಕಿನ್ನರರ ವರ್ಣವು ಪ್ರಿಯಂಗು ಫಲದ ಸಮಾನ, ಕಿಂಪುರುಷರದು ಧವಲವರ್ಣ, ಮಹೋರಗರದು ಶ್ಯಾಮವರ್ಣ, ಗಂಧರ್ವರದು ಸುವರ್ಣದ ಸಮಾನ ವರ್ಣವಿರುತ್ತದೆ. ಯಕ್ಷ, ರಾಕ್ಷಸ, ಭೂತ ದೇವಗಳದು ಶ್ಯಾಮವರ್ಣವಿದ್ದರೆ ಪಿಶಾಚಗಳದ್ದು ಕೃಷ್ಣವರ್ಣವಿರುತ್ತದೆ. ಈ ಎಲ್ಲ ದೇವಗಳು ಅಲಂಕಾರಾದಿಗಳಿಂದ ಯುಕ್ತರಿರುತ್ತಾರೆ.

ವ್ಯಂತರರ ಭವನಗಳಲ್ಲಿಯೂ ಚೈತ್ಯ ವೃಕ್ಷಗಳಿರುತ್ತವೆ. ಈ ವೃಕ್ಷಗಳ ಮೂಲದಲ್ಲಿ ಒಂದೊಂದು ದಿಕ್ಕಿನಲ್ಲಿ ನಾಲ್ಕು-ನಾಲ್ಕು ಪ್ರತಿಮೆಗಳಿರುತ್ತವೆ. ಅಲ್ಲಿ ಭವನವಾಸಿಗಳ ಚೈತ್ಯವೃಕ್ಷದ ಮೂಲದಲ್ಲಿ ಪ್ರತಿಯೊಂದು ದಿಕ್ಕಿನಲ್ಲಿ ಐದೈದು ಪ್ರತಿಮೆಗಳಿರುತ್ತವೆ. ಇಲ್ಲಿ ಧ್ವಜೆ, ತೋರಣ ಮೊದಲಾದವುಗಳಿರುತ್ತವೆ. ಪ್ರತಿಮೆಗಳ ಮುಂಭಾಗದಲ್ಲಿ ಮಾನಸ್ತಂಭಗಳೂ ಇರುತ್ತವೆ. ಮೂರು ಪೀಠದ ಮೇಲೆ ಮಾನಸ್ತಂಭಗಳಿರುತ್ತವೆ, ಮೂರು ಕೋಟೆಗಳಿರುತ್ತವೆ. ಅವುಗಳಲ್ಲಿ ಮುತ್ತಿನ ಮಾಲೆಗಳು ದಿವ್ಯ ಗಂಟೆ ಮೊದಲಾದವು ಇರುತ್ತವೆ. ಇವರ ಚೈತ್ಯ ವೃಕ್ಷಗಳ ಹೆಸರು ಈ ಪ್ರಕಾರವಿವೆ.

ವ್ಯಂತರರುಗಳ ಕುಲ		ದಕ್ಷಿಣೇಂದ್ರ	ಉತ್ತರೇಂದ್ರ	ಚೈತ್ಯವೃಕ್ಷ
೧)	ಕಿನ್ನರ	ಕಿಂಪುರುಷ	ಕಿನ್ನರ	ಅಶೋಕವೃಕ್ಷ
೨)	ಕಿಂಪುರುಷ	ಸತ್ಪುರುಷ	ಮಹಾಪುರುಷ	ಚಂಪಾವೃಕ್ಷ
೩)	ಮಹೋರಗ	ಮಹಾಕಾಯ	ಅತಿಕಾಯ	ನಾಗಕೇಶರಿ ವೃಕ್ಷ
೪)	ಗಂಧರ್ವ	ಗೀತರತಿ	ಗೀತಯಶ	ತುಂವಡಿ ವೃಕ್ಷ
೫)	ಯಕ್ಷ	ಮಣಿಭದ್ರ	ಪೂರ್ಣಭದ್ರ	ವಟವೃಕ್ಷ
೬)	ರಾಕ್ಷಸ	ಭೀಮ	ಮಹಾಭೀಮ	ಕಂಟಾತರು ವೃಕ್ಷ
೭)	ಭೂತ	ಸುರೂಪ	ಪ್ರತಿರೂಪ	ತುಳಸೀ ವೃಕ್ಷ
೮)	ಪಿಶಾಚ	ಕಾಲ	ಮಹಾಕಾಲ	ಕದಂಬ ವೃಕ್ಷ

ಈ ಇಂದ್ರರಿಗೆ ಇಬ್ಬರು-ಇಬ್ಬರು ವಲ್ಲಭಿಕೆ ದೇವಾಂಗನೆಯರಿರುತ್ತಾರೆ. ಮತ್ತು ಅವರಿಗೆ ಒಬ್ಬೊಬ್ಬರಿಗೆ ಸಾವಿರ-ಸಾವಿರ ಪರಿವಾರ ದೇವಾಂಗನೆಯರಿರುತ್ತಾರೆ. ಮನುಷ್ಯ ಗತಿಯಲ್ಲಿ ತಪಸ್ಸು ಮಾಡಿ ನಂತರ ಭ್ರಷ್ಟವಾಗುವಂಥ ಜೀವರುಗಳು ವ್ಯಂತರ ಮತ್ತು ಜ್ಯೋತಿಷಿಗಳಲ್ಲಿ ಹೋಗಿ ಜನಿಸುತ್ತಾರೆ.

ಶಾಸ್ತ್ರಗಳಲ್ಲಿ ಈ ವಲ್ಲಭಿಕೆಯರ ಹೆಸರು, ಸಾಮಾನಿಕ, ತನುರಕ್ಷಕ ಮೊದಲಾದವರ ಸಂಖ್ಯೆ , ಪ್ರತಿಯೊಬ್ಬ ಅನಿಕ ದೇವಗಳ ಏಳು ಪ್ರಕಾರದ ಸೇನೆಗಳ ಹೆಸರುಗಳನ್ನು ವಿಸ್ತಾರದಿಂದ ಬರೆಯಲಾಗಿದೆ. ಅವುಗಳ ಚರ್ಚೆಯನ್ನು ಮಾಡದೇ ಈಗ ನಾವು ವ್ಯಂತರ ಇಂದ್ರರುಗಳ ನಗರ ಮೊದಲಾದವುಗಳ ವರ್ಣನೆಯನ್ನು ನೋಡೋಣ. ಎಲ್ಲಿ ಈ ನಗರಗಳು ಕಂಡು ಬರುತ್ತವೆ ಆ ದ್ವೀಪಗಳ ಹೆಸರು ಕ್ರಮದಿಂದ ಈ ಪ್ರಕಾರವಿವೆ - ೧) ಅಂಜನಕ, ೨) ವಜ್ರಧಾತುಕ, ೩) ಸುವರ್ಣ, ೪) ಮನಃಶಿಲಕ, ೫) ವಜ್ರ , ೬) ರಜತ, ೭) ಹಿಂಗುಲಕ, ೮) ಹರಿತಾಲ.

ಕಿನ್ನರ ಕುಲದ ಇಂದ್ರರುಗಳ ನಗರಗಳು ಅಂಜನಕ ದ್ವೀಪದಲ್ಲಿವೆ, ಅದರಲ್ಲಿ ಕಿಂಪುರುಷ ಇಂದ್ರರ ನಗರಗಳು ದಕ್ಷಿಣ ದಿಕ್ಕಿನಲ್ಲಿವೆ ಮತ್ತು ಕಿನ್ನರ ಇಂದ್ರರುಗಳ ನಗರಗಳು ಉತ್ತರ ದಿಕ್ಕಿನಲ್ಲಿವೆ - ಹೀಗೆಯೇ ಎಲ್ಲವುಗಳಲ್ಲಿ ತಿಳಿಯುವುದು. ಪ್ರತಿಯೊಬ್ಬರಿಗೆ ಐದೈದು ನಗರಗಳಿರುತ್ತವೆ - ಮಧ್ಯದಲ್ಲಿ ಒಂದು ಮತ್ತು ನಾಲ್ಕೂ ದಿಕ್ಕಿಗೆ ನಾಲ್ಕು ನಗರಗಳಿರುತ್ತವೆ. ಮಧ್ಯದಲ್ಲಿ ಇರುವಂಥ ನಗರಕ್ಕೆ ಇಂದ್ರನ ಹೆಸರು ಕೊಟ್ಟು ಮುಂದೆ ಪುರವೆಂದು ಹೇಳುತ್ತಾರೆ. ಮತ್ತು ಪೂರ್ವ-ದಕ್ಷಿಣ-ಪಶ್ಚಿಮ-ಉತ್ತರದ ನಗರಗಳ ಹೆಸರಿನಲ್ಲಿ ಇಂದ್ರನ ಹೆಸರಿನೊಂದಿಗೆ ಕ್ರಮದಿಂದ ಪ್ರಭ, ಕಾಂತ, ಆವರ್ತ, ಮಧ್ಯ ಶಬ್ದಗಳನ್ನು ಜೋಡಿಸುತ್ತಾರೆ. ಹೇಗೆಂದರೆ ಕಿನ್ನರ ಇಂದ್ರನ ಐದು ನಗರಗಳೊಳಗಿಂದ ಮಧ್ಯದ ನಗರದ ಹೆಸರು ಕಿನ್ನರಪುರ, ಪೂರ್ವದಿಕ್ಕಿನಲ್ಲಿರುವುದು ಕಿನ್ನರಪ್ರಭ, ದಕ್ಷಿಣದಿಕ್ಕಿನಲ್ಲಿರುವುದು ಕಿನ್ನರಕಾಂತ, ಪಶ್ಚಿಮ ದಿಕ್ಕಿನಲ್ಲಿರುವುದು ಕಿನ್ನರಾವರ್ತ ಮತ್ತು ಉತ್ತರ ದಿಕ್ಕಿನಲ್ಲಿರುವುದು ಕಿನ್ನರಮಧ್ಯವೆಂಬ ಹೆಸರಿನ ನಗರವಿದೆ. ಇವುಗಳ ಪ್ರತಿಯೊಂದರ ವಿಸ್ತಾರವು ಒಂದು ಲಕ್ಷ ಯೋಜನದ್ದಿದೆ.

ಜಂಬೂದ್ವೀಪದಷ್ಟು ದೊಡ್ಡದು ಅವರ ಒಂದೊಂದು ನಗರವಿದೆ. ಅವು ಸಮತಟ್ಟಾದ ಭೂಮಿಯ ಮೇಲಿವೆ. ನಾವು ಹೇಗೆ ಜಂಬೂದ್ವೀಪದ ಮೇಲೆ ಇದ್ದೇವೆ, ಹಾಗೆ ತಮ್ಮ ತಮ್ಮ ದ್ವೀಪಗಳ ಮೇಲೆ ಅವರ ನಗರಗಳಿವೆ ಅರ್ಥಾತ್ ಪರ್ವತಾದಿ ಪ್ರದೇಶಗಳ ಮೇಲೆ ಅಥವಾ ಅನ್ಯಸ್ಥಾನಗಳಲ್ಲಿ ಇಲ್ಲ. ಆದರೆ ವಿವಕ್ಷಿತ ದ್ವೀಪಗಳಲ್ಲಿ ಭೂಮಿಯ ಮೇಲೆ ನಿರ್ಮಿತವಿವೆ. ನಾಲ್ಕೂ ಕಡೆಗೆ ಪ್ರಾಕಾರ-ಕೋಟೆಗಳಿರುತ್ತವೆ. ಅವುಗಳ ಎತ್ತರವು ೩೭ $\frac{೧}{೨}$ ಯೋಜನ, ಅಗಲ ೧೨ $\frac{೧}{೨}$ ಯೋಜನ ಮತ್ತು ದಪ್ಪ ೨ $\frac{೧}{೨}$ ಯೋಜನವಿರುತ್ತದೆ. ಆ ಕೋಟೆಗಳ ಮಧ್ಯದಲ್ಲಿ ಪ್ರವೇಶ ಮಾಡುವ ಸಲುವಾಗಿ ದ್ವಾರಗಳಿರುತ್ತವೆ. ದ್ವಾರಗಳ ಮೇಲೆ ೭೫ ಯೋಜನ ಎತ್ತರದ ಸುಂದರವಾದ ಪ್ರಾಸಾದವಿರುತ್ತದೆ. ಅದರ ಒಳಭಾಗದಲ್ಲಿ ಸುಧರ್ಮಾ ಎಂಬ ಹೆಸರಿನ ಸಭೆ ಇರುತ್ತದೆ. ಅದು ೧೨ $\frac{೧}{೨}$ ಯೋಜನ ಉದ್ದ ೬ $\frac{೧}{೪}$ ಯೋಜನ ಅಗಲ ಮತ್ತು ೯ ಯೋಜನ ಎತ್ತರವಿರುತ್ತದೆ.

ತಾವು ಸುಧರ್ಮಾ ಸಭೆಯ ಹೆಸರನ್ನು ಕೇಳಿರಬಹುದು - ಇಂದ್ರರುಗಳ ಸಭೆಯನ್ನು ಸುಧರ್ಮಾ ಸಭೆಯೆಂದು ಹೇಳುತ್ತಾರೆ. ಅಲ್ಲಿ ಇಂದ್ರ , ಸಾಮಾನಿಕ, ಲೋಕಪಾಲ ಮೊದಲಾದವರೆಲ್ಲರೂ ಕುಳಿತುಕೊಳ್ಳುತ್ತಾರೆ. ಅಲ್ಲಿ ಯಾವ ದಿಕ್ಕಿನಲ್ಲಿ ಯಾರು ಕುಳಿತುಕೊಳ್ಳುವುದು, ಅವರ ದೇವಿಯರು ಎಲ್ಲಿ ಕುಳಿತುಕೊಳ್ಳಬೇಕಾಗುವುದು ಎಂಬುದರ ಕುರಿತಾಗಿಯೂ ನಿಶ್ಚಿತವಾದ ಸ್ಥಾನಗಳಿರುತ್ತವೆ.

ನಗರದ ಹೊರಗೆ ಎರಡೆರಡು ಸಾವಿರ ಯೋಜನ ಮುಂದೆ ಹೋದ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ಒಂದು ಲಕ್ಷ ಯೋಜನ ಉದ್ದ ಮತ್ತು ಐವತ್ತು ಸಾವಿರ ಯೋಜನ ಅಗಲವಿರುವ ರಮಣೀಯವಾದ ಉದ್ಯಾನವನಗಳಿರುತ್ತವೆ.

ಈ ಇಂದ್ರರುಗಳ ಯಾವ ಗಣಿಕಾ ಮಹತ್ತರಿಯರಿರುತ್ತಾರೆ ಅವರ ನಗರಗಳು ಕೂಡ ತಮ್ಮ-ತಮ್ಮ ಇಂದ್ರರ ದ್ವೀಪಗಳಲ್ಲಿಯೇ ತಮ್ಮ-ತಮ್ಮ ಇಂದ್ರರ ಇಂದ್ರಪುರಿಯ ಎರಡೂ ಪಾರ್ಶ್ವಗಳಲ್ಲಿ ಇರುತ್ತವೆ, ಅವು ಎಂಭತ್ನಾಲ್ಕು ಸಾವಿರ ಯೋಜನ ಉದ್ದಗಲವಾಗಿರುತ್ತವೆ.

ಅನ್ಯ ವ್ಯಂತರರ ನಗರಗಳು ಅನೇಕ ದ್ವೀಪ ಮತ್ತು ಅನೇಕ ಸಮುದ್ರಗಳಲ್ಲಿ ಇರುತ್ತವೆ. ಈ ನಗರಗಳನ್ನು ಭವನಪುರವೆಂದು ಹೇಳುತ್ತಾರೆ.

ರತ್ನಪ್ರಭಾ ಪೃಥ್ವಿಯ ಖರಭಾಗದಲ್ಲಿ ವ್ಯಂತರರ ಹದಿನಾಲ್ಕು ಸಾವಿರ ಭವನಗಳಿವೆ ಮತ್ತು ಪಂಕಭಾಗದಲ್ಲಿ ರಾಕ್ಷಸ ಕುಲದ ವ್ಯಂತರರುಗಳ ಹದಿನಾರು ಸಾವಿರ ಭವನಗಳಿವೆ. ಭೂಮಿ ಅಥವಾ ಸಮುದ್ರದಿಂದ ಒಂದು ಮೊಳದ ಎತ್ತರದಿಂದ ಹಿಡಿದು ಒಂದು ಲಕ್ಷ ಯೋಜನ ಎತ್ತರದವರೆಗೆ ವ್ಯಂತರರು ವಾಸ ಮಾಡುವ ಯಾವ ಸ್ಥಾನಗಳಿವೆ ಅವನ್ನು ಆವಾಸವೆಂದು ಹೇಳುತ್ತಾರೆ. ಅವುಗಳಲ್ಲಿ ವಾಸಮಾಡುವ ವ್ಯಂತರರುಗಳ ಹೆಸರು ಈ ಪ್ರಕಾರವಿವೆ,-

ಪೃಥ್ವಿಯಿಂದ ಒಂದು ಮೊಳ ಮೇಲೆ ಕ್ಷೇತ್ರದಲ್ಲಿ ಯಾರ ಆವಾಸಗಳಿವೆ ಅವು ನೀಚೋಪಪಾದಗಳಿವೆ. ಅವುಗಳ ಮೇಲೆ ಹತ್ತು ಸಾವಿರ ಮೊಳ ಮೇಲಿನ ಕ್ಷೇತ್ರದಲ್ಲಿ ದಿಗ್ವಾಸಿಗಳಿದ್ದಾರೆ, ಅವರ ಮೇಲೆ ಹತ್ತು ಸಾವಿರ ಮೊಳ ಎತ್ತರದ ಕ್ಷೇತ್ರದಲ್ಲಿ ಅಂತರನಿವಾಸಿಗಳಿದ್ದಾರೆ. ಅವರ ಮೇಲೆ ಹತ್ತು ಸಾವಿರ ಎತ್ತರದ ಕ್ಷೇತ್ರದಲ್ಲಿ ಕುಷ್ಮಾಂಡರಿದ್ದಾರೆ, ಅವರ ಮೇಲೆ ಇಪ್ಪತ್ತು ಸಾವಿರ ಮೊಳ ಎತ್ತರದ ಕ್ಷೇತ್ರದಲ್ಲಿ ಉತ್ಪನ್ನವೆಂಬ ಹೆಸರಿನ ವ್ಯಂತರರಿದ್ದಾರೆ, ಇದರಿಂದ ಮುಂದೆ ಮೇಲೆ-ಮೇಲಿನ ಇಪ್ಪತ್ತು-ಇಪ್ಪತ್ತು ಸಾವಿರ ಮೊಳದ ಅಂತರದಲ್ಲಿ ಕ್ರಮದಿಂದ ಅನುತ್ಪನ್ನ, ಪ್ರಮಾಣಕ, ಗಂಧ, ಮಹಾಗಂಧ, ಭುಜಂಗ, ಪ್ರೀತಿಕ, ಆಕಾಶೋತ್ಪನ್ನ ವ್ಯಂತರರಿದ್ದಾರೆ. ಇವರ ಆವಾಸಗಳು ನಮಗೆ ಕಾಣಿಸುವುದಿಲ್ಲ ಹಾಗೂ ಇವರ ಸಲುವಾಗಿ ಯಾವ ಆಧಾರದ ಅವಶ್ಯತೆಯಿರುವುದಿಲ್ಲ.

ವ್ಯಂತರರ ಉಚ್ಛ್ವಾಸವು ಸ್ವಲ್ಪ ಅಧಿಕ ಐದು ಮುಹೂರ್ತ ಕಳೆದ ಮೇಲೆ ಮತ್ತು ಆಹಾರವು ಸ್ವಲ್ಪ ಅಧಿಕ ಐದು ದಿನಗಳು ಕಳೆದ ಮೇಲೆ ಆಗುತ್ತದೆ. ನೀಚೋಪಪಾದ ಮೊದಲಾದ ವ್ಯಂತರರ ಆಯುವು ಈ ಪ್ರಕಾರವಿದೆ - ನೀಚೋಪಪಾದರದು ಹತ್ತು ಸಾವಿರ ವರ್ಷ, ದಿಗ್ವಾಸಿಗಳದು ಇಪ್ಪತ್ತು ಸಾವಿರ ವರ್ಷ, ಅಂತರ ನಿವಾಸಿಗಳದು ಮೂವತ್ತು ಸಾವಿರ ವರ್ಷ, ಕುಷ್ಮಾಂಡರದು ನಲವತ್ತು ಸಾವಿರ ವರ್ಷ, ಉತ್ಪನ್ನರದು ಐವತ್ತು ಸಾವಿರ ವರ್ಷ, ಅನುತ್ಪನ್ನರದು ಅರವತ್ತು ಸಾವಿರ ವರ್ಷ, ಪ್ರಮಾಣಕರದು ಎಪ್ಪತ್ತು ಸಾವಿರ ವರ್ಷ, ಗಂಧರದು ಎಂಭತ್ತು ಸಾವಿರ ವರ್ಷ, ಮಹಾಗಂಧರದು ಎಂಭತ್ನಾಲ್ಕು ಸಾವಿರ ವರ್ಷ, ಭುಜಂಗರದು ಪಲ್ಯದ ಎಂಟನೆಯ ಒಂದು ಭಾಗ, ಪ್ರೀತಿಕರದು ಪಲ್ಯದ ನಾಲ್ಕನೆಯ ಒಂದು ಭಾಗ ಮತ್ತು ಆಕಾಶೋತ್ಪನ್ನರದು ಅರ್ಧಪಲ್ಯ ಆಯುವಿರುತ್ತದೆ.

ಭವನವಾಸೀ ಮತ್ತು ವ್ಯಂತರರ ಚರ್ಚೆಯನ್ನು ಅಧೋಲೋಕದ ವಿಭಾಗದಲ್ಲಿ ಮಾಡಲಾಯಿತು. ಜ್ಯೋತಿಷಿಗಳ ಚರ್ಚೆಯನ್ನು ಮಧ್ಯಲೋಕದ ವಿಭಾಗದಲ್ಲಿ ಮಾಡುವುದಿದೆ, ಈಗ ನಾವು ಸ್ವರ್ಗದ ಕಡೆಗೆ ಸಾಗೋಣ ಅರ್ಥಾತ್ ಊರ್ಧ್ವಲೋಕದ ಚರ್ಚೆಯನ್ನು ನೋಡೋಣ. ಅಲ್ಲಿ ನಾವು ವೈಮಾನಿಕ ದೇವಗಳ ಚರ್ಚೆ ಮಾಡೋಣ. ದೇವಗತಿಯ ಜೀವಗಳು ಈ ನಾಲ್ಕು ಪ್ರಕಾರದವರಿರುತ್ತಾರೆಂಬುದನ್ನು ಮೊದಲೇ ತಿಳಿದುಕೊಂಡು ಬಂದಿದ್ದೇವೆ. ವೈಮಾನಿಕರಲ್ಲಿಯೂ ಕಲ್ಪವಾಸೀ ಮತ್ತು ಕಲ್ಪಾತೀತರೆಂದು ಎರಡು ಭೇದಗಳಿವೆ. ಮೊದಲನೆಯ ಸ್ವರ್ಗದಿಂದ ಹದಿನಾರನೆಯ ಸ್ವರ್ಗದವರೆಗೆ ಕಲ್ಪವಾಸೀ ದೇವಗಳಿರುತ್ತಾರೆ. ಮತ್ತು ಮೇಲೆ ಒಂಭತ್ತು ಗ್ರೈವೇಯಕ, ಒಂಭತ್ತು ಅನುದಿಶೆ ಹಾಗೂ ಐದು ಅನುತ್ತರ ವಿಮಾನವಾಸೀ ದೇವಗಳು ಕಲ್ಪಾತೀತರಿದ್ದಾರೆ. ಕಲ್ಪವಾಸಿಗಳಲ್ಲಿ ಇಂದ್ರ ಮೊದಲಾದ ಹತ್ತು ಭೇದಗಳು ಕಂಡು ಬರುತ್ತವೆ.

ಈ ಊರ್ಧ್ವಲೋಕವು ೭ ರಾಜೂ ಪ್ರಮಾಣ ಎತ್ತರವಿದೆ - ಮೇರುತಲದಿಂದ ಇದರ ಎತ್ತರವು ಇಷ್ಟು ಇದೆ. ಇಲ್ಲಿ ತ್ರಸನಾಳಿಯಲ್ಲಿ ಇವೆಲ್ಲ ವಿಮಾನಗಳಿವೆ - ವಿಮಾನ ಅರ್ಥಾತ್ ಪೃಥ್ವಿಯ ತುಂಡು (ವಿಭಾಗ) ಅದರ ಮೇಲೆ ಅಸಂಖ್ಯಾತ-ಅಸಂಖ್ಯಾತ ದೇವಗಳು ಇರುತ್ತಾರೆ. ನರಕಗಳ ಹಾಗೆಯೇ ಸ್ವರ್ಗಗಳಲ್ಲಿಯೂ ಪಟಲಗಳು ಕಂಡು ಬರುತ್ತವೆ. ಹದಿನಾರನೆಯ ಸ್ವರ್ಗದವರೆಗೆ ಸ್ವರ್ಗಗಳು ಎಂಟು ಯುಗಲಗಳಲ್ಲಿ ಕಂಡು ಬರುತ್ತವೆ. ಪ್ರತಿಯೊಂದು ಯಾವುದು ಮೊದಲನೆಯ ಹೆಸರು ಇರುತ್ತದೆ ಅದು ದಕ್ಷಿಣದ ಸ್ವರ್ಗವಿದೆ ಮತ್ತು ಎರಡನೆಯದು ಉತ್ತರದ ಸ್ವರ್ಗವಿದೆ. ಹೇಗೆಂದರೆ ಸೌಧರ್ಮ ಸ್ವರ್ಗವು ದಕ್ಷಿಣದಲ್ಲಿದೆ ಮತ್ತು ಈಶಾನ ಸ್ವರ್ಗವು ಉತ್ತರದಲ್ಲಿದೆ - ಇವೆರಡೂ ಒಂದು ಮಟ್ಟದಲ್ಲಿ (ಪಾತಳಿಯಲ್ಲಿ) ಇವೆ. ಮುಂದಿನ ಯುಗಲಗಳಲ್ಲಿಯೂ ಕೂಡ ಹೀಗೆಯೇ ತಿಳಿಯುವುದು. ಇವುಗಳ ಹೆಸರು ಈ ಪ್ರಕಾರವಿವೆ - (೧-೨) ಸೌಧರ್ಮ-ಈಶಾನ, (೩-೪) ಸನತ್‌ಕುಮಾರ -ಮಾಹೇಂದ್ರ, (೫-೬) ಬ್ರಹ್ಮ-ಬ್ರಹ್ಮೋತ್ತರ, (೭-೮) ಲಾಂತವ-ಕಾಪಿಷ್ಠ, (೯-೧೦) ಶುಕ್ರ-ಮಹಾಶುಕ್ರ, (೧೧-೧೨) ಶತಾರ-ಸಹಸ್ರಾರ, (೧೩-೧೪) ಆನತ-ಪ್ರಾಣತ, (೧೫-೧೬) ಆರಣ-ಅಚ್ಯುತ.

೧೪ನೆಯ ನಂಬರಿನ ಚಾರ್ಟ್‌ದಲ್ಲಿ ಇವರುಗಳ ಹೆಸರನ್ನು ನೋಡುವುದು. ಈ ಸ್ವರ್ಗಗಳ ಪಟಲಗಳ ಸಂಖ್ಯೆ ಹಾಗೂ ವಿಮಾನಗಳ ಸಂಖ್ಯೆಯನ್ನು ನಾವು ನಂತರ ನೋಡುವುದಿದೆ.

ಈ ಹದಿನಾರು ಸ್ವರ್ಗಗಳ ಮೇಲೆ ಒಂಭತ್ತು ಗ್ರೈವೇಯಕಗಳಿವೆ, ಅವುಗಳದು ಮೂರು-ಮೂರರ ಮೂರು ವಿಭಾಗಗಳಿವೆ. ಕೆಳಗಿನ ಮೂರು ಅಧಸ್ತನ ಗ್ರೈವೇಯಕ, ಮಧ್ಯದ ಮೂರು ಮಧ್ಯಮ ಗ್ರೈವೇಯಕ ಮತ್ತು ಮೇಲಿನ ಮೂರು ಉಪರಿಮ ಗ್ರೈವೇಯಕವೆಂದು ಕರೆಸಿಕೊಳ್ಳುತ್ತವೆ. ಇವು ಮೂರರಲ್ಲಿ ಪ್ರತಿಯೊಂದರ ಮೂರು-ಮೂರು ಭೇದಗಳಿವೆ - ಅಧೋ, ಮಧ್ಯ ಮತ್ತು ಊರ್ಧ್ವವೆಂದು ಅಧೋ ಅರ್ಥಾತ್ ಅಧಸ್ತನ-ಕೆಳಗಿನ. ಊರ್ಧ್ವ ಅರ್ಥಾತ್ ಉಪರಿಮ-ಮೇಲಿನದು. ಮಧ್ಯಮ ಅರ್ಥಾತ್ ಮಧ್ಯದಲ್ಲಿ ಇರುವಂಥದು.

ಇವುಗಳ ಮೇಲೆ ಒಂದೇ ಮಟ್ಟ-ಸ್ತರದಲ್ಲಿ ಒಂಭತ್ತು ಅನುದಿಶೆಗಳಿವೆ ಮತ್ತು ಅವುಗಳ ಮೇಲೆ ಒಂದೇ ಪಾತಳಿಯಲ್ಲಿ ಐದು ಅನುತ್ತರ ವಿಮಾನಗಳಿವೆ.

ಈಗ ಇವುಗಳ ಸ್ಥಾನವನ್ನು ನೋಡೋಣ - ಮೇರು ತಲದಿಂದ ಒಂದೂವರೆ ರಾಜೂ ಎತ್ತರದವರೆಗೆ ಸೌಧರ್ಮ-ಈಶಾನ ಯುಗಲವಿದೆ, ಇದರ ಮೇಲೆ ಒಂದೂವರೆ ರಾಜೂವಿನವರೆಗೆ ಸನತ್‌ಕುಮಾರ-ಮಾಹೇಂದ್ರ

ಯುಗಲವಿದೆ ಇದರ ಮೇಲೆ ಅರ್ಧ-ಅರ್ಧ ರಾಜೂ ಎತ್ತರದಲ್ಲಿ ಒಂದೊಂದರಂತೆ ಆರು ಯುಗಲಗಳಿವೆ. ಈ ರೀತಿ ಆರು ರಾಜೂಗಳಲ್ಲಿ ಹದಿನಾರು ಸ್ವರ್ಗಗಳಿವೆ, ಮೇಲೆ ಒಂದು ರಾಜೂವಿನಲ್ಲಿ ಕ್ರಮದಿಂದ ಒಂಭತ್ತು ಗ್ರೈವೇಯಕ, ಒಂಭತ್ತುಅನುದಿಶೆ ಹಾಗೂ ಐದು ಅನುತ್ತರ ವಿಮಾನಗಳಿವೆ.

ನಾವೆಲ್ಲರೂ ಗ್ರೈವೇಯಕದ ಹೆಸರನ್ನು ಬಹಳಷ್ಟು ಬಾರಿ ಆಲಿಸಿದ್ದೇವೆ. ಅಹುದು ಆರು ಗುರಾಣಿಯಲ್ಲಿ ಬರುತ್ತದೆ.

ಧರಿಸಿ ಮುನಿದೀಕ್ಷೆಯನು ಜೀವನು, ಪಿರಿಯ ಮಹನಿಯಮಗಳ ತಾನಾ
ಚರಿಸಿ ನೌಗ್ರೈವೇಯಕದಿ ಜನಿಸಿಹನು ಪಲವು ಸಲ ।
ಅರಿತುಕೊಳ್ಳದೆ ತನ್ನ ಆತ್ಮನ, ಮರೆತು ಭೇದಜ್ಞಾನವನು ತಾ
ಬರಿದೆ ತಪ ಮಾಡಿದರು ಸುಖಲೇಶವನು ಪಡೆಲಿಲ್ಲ ॥

ಪ್ರಶ್ನೆ :- ಹೀಗೇಕೆ ಹೇಳಿದ್ದಾರೆ ?

ಉತ್ತರ - ಮಿಥ್ಯಾತ್ವ ಅವಸ್ಥೆಯಲ್ಲಿ ಯಾವುದೇ ಜೀವನು ಹೆಚ್ಚು ಹೆಚ್ಚೆಂದರೆ ಯಾವ ಸ್ವರ್ಗದವರೆಗೆ ಹೋಗಬಹುದಾಗಿದೆಯೆಂದರೆ ಒಂಭತ್ತನೆಯ ಗ್ರೈವೇಯಕದವರೆಗೆ ಹೋಗಬಹುದೆಂದು ಹೇಳಿದ್ದಾರೆ. ಆದರೆ ಅದರಲ್ಲಿಯೂ ಕೂಡ ಇರುವ ನಿಯಮವೆಂದರೆ ಜಿನೇಂದ್ರ ಭಗವಂತರ ಆಗಮದಲ್ಲಿ ಯಾವ ರೀತಿ ಮುನಿಯಸ್ವರೂಪ ಹೇಳಲಾಗಿದೆ - ಯಾವ ರೀತಿ ಅಂತರಂಗ ಸ್ವರೂಪ ಮತ್ತು ಬಾಹ್ಯದ ಆಚರಣೆ ಹೇಳಲಾಗಿದೆ - ಹಾಗೆ ಬಾಹ್ಯದ ಆಚರಣೆಯನ್ನಂತೂ ಯಥೋಚಿತ ಪಾಲನೆ ಮಾಡುತ್ತಿದ್ದರೂ ಇನ್ನೂ ಸಮ್ಯಕ್ತ್ವವಾಗಿಲ್ಲ ಅಂಥವರನ್ನು ಮಿಥ್ಯಾತ್ವ ಗುಣಸ್ಥಾನವರ್ತಿ ದ್ರವ್ಯಲಿಂಗಿ ಮುನಿಗಳೆಂದು ಹೇಳುತ್ತಾರೆ. ಅವರು ನಿಜವಾದ ದ್ರವ್ಯಲಿಂಗವನ್ನು ಧಾರಣ ಮಾಡದ ವಿನಹ ಭಾವಲಿಂಗಿಯಾಗುವ ಸಾಧ್ಯತೆಯಿಲ್ಲ ಮತ್ತು ದ್ರವ್ಯಲಿಂಗವನ್ನು ಧಾರಣ ಮಾಡಿದ ನಂತರವೂ ಕೂಡ ಜೀವನು ನಾಲ್ಕನೆಯ ಅಥವಾ ಐದನೆಯ ಗುಣಸ್ಥಾನದಲ್ಲಿ ಇರಬಹುದಾಗಿದೆ ಅಥವಾ ನಾಲ್ಕನೆಯ, ಐದನೆಯ ಗುಣಸ್ಥಾನವರ್ತಿ ಜೀವಗಳು ದ್ರವ್ಯಲಿಂಗ ಧಾರಣ ಮಾಡಿರುತ್ತಾರೆ ಆದರೆ ಇನ್ನೂ ಏಳನೆಯ ಗುಣಸ್ಥಾನವು ಪ್ರಾಪ್ತವಾಗಿರುವುದಿಲ್ಲ - ಭಾವಲಿಂಗವು ಪ್ರಕಟವಾಗಿರುವುದಿಲ್ಲ.

ಇಂಥ ದ್ರವ್ಯಲಿಂಗೀ ಮುನಿಗಳು ಒಂಭತ್ತನೆಯ ಗ್ರೈವೇಯಕದವರೆಗೆ ಹೋಗುವ ಸಾಧ್ಯತೆಯಿದೆ. ಇಲ್ಲಿ ಮಿಥ್ಯಾತ್ವಸಹಿತ ಮೇಲೆ ಎಲ್ಲಿಯವರೆಗೆ ಹೋಗಬಹುದಾಗಿದೆ ಎಂಬುದರ ಚರ್ಚೆಯು ನಡೆಯುತ್ತಿದೆ. ಆ ಜೀವರುಗಳು ಮುನಿಯ ಆಚಾರಗಳನ್ನು ಆಗಮಾನುಸಾರ ಪಾಲನೆ ಮಾಡುತ್ತಾರೆ, ಅತ್ಯಂತ ಮಂದಕಷಾಯಿ ಇರುತ್ತಾರೆ ಆದರೆ ಅಭಿಪ್ರಾಯದಲ್ಲಿ ಇನ್ನೂ ಮಿಥ್ಯಾಬುದ್ಧಿಯು ನಡೆದಿರುತ್ತದೆ. ಅದೆಷ್ಟೋ ಜೀವರುಗಳು ಬಹಳಷ್ಟು ಶಾಸ್ತ್ರಗಳ ಅಭ್ಯಾಸ ಮಾಡಿರುತ್ತಾರೆ - ಹನ್ನೊಂದು ಅಂಗಗಳ ಪಾಠಿಗಳೂ ಕೂಡ ಇರುವ ಸಾಧ್ಯತೆಯಿದೆ. ಸಂಯಮದ ಪಾಲನೆ ಮಾಡುತ್ತಿರುವುದು ಕಂಡು ಬರುತ್ತದೆ ಆದರೆ ಅವರನ್ನು ಸಂಯಮಿಗಳೆಂದು ಹೇಳಲಾಗುವುದಿಲ್ಲ. ನಾಲ್ಕನೆಯ ಗುಣಸ್ಥಾನದವರೆಗಿನ ಜೀವರುಗಳು ಅಸಂಯಮಿಗಳೇ ಇರುತ್ತಾರೆ. ಧವಲಾ ಗ್ರಂಥದಲ್ಲಿ ಆಚಾರ್ಯ ಶ್ರೀ ವೀರಸೇನ ಸ್ವಾಮಿಗಳು ಇವರ ಆಚಾರಗಳನ್ನು ದ್ರವ್ಯಮಯವೆಂದು ಹೇಳಿದ್ದಾರೆ,

ಸಂಯಮವೆಂದು ಹೇಳಿಲ್ಲ. ಆರನೇ - ಏಳನೆಯ ಗುಣಸ್ಥಾನವರ್ತಿಗಳು ಮತ್ತು ಮೇಲಿನ ಗುಣಸ್ಥಾನವರ್ತಿ ಜೀವರುಗಳನ್ನೇ ಸಂಯಮಿಯೆಂದು ಹೇಳುತ್ತಾರೆ.

ಯಾವ ರೀತಿ ನಾವು ಬೇರೆ-ಬೇರೆ ಶಕ್ತಿಗಳ ಪ್ರಯೋಗವನ್ನು ಕಾಣುತ್ತೇವೆ, ಅವುಗಳಲ್ಲಿ ಮೇಲುಗೈ ಸಾಧಿಸಿದವರ ಹೆಸರು ಕೂಡ ವಿಶ್ವದಾಖಲೆಯಲ್ಲಿ ಬರುತ್ತದೆ ಅದೇ ರೀತಿ ಈ ಜೀವರುಗಳು ಕೂಡ ಮುನಿ ಆಚಾರವನ್ನು ಪಾಲಿಸುತ್ತಾರೆ ಆದರೆ ಇನ್ನೂ ಶರೀರದಲ್ಲಿ - ರಾಗದಲ್ಲಿ ಏಕತ್ವ ಬುದ್ಧಿಯು ಬಿದ್ದುಕೊಂಡಿರುತ್ತದೆ. ಈ ಇಪ್ಪತ್ತೆಂಟು ಮೂಲಗುಣಗಳ ಪರಿಪಾಲನೆ ಮಾಡುವುದರ ಮತ್ತು ಮುನಿಯೋಗ್ಯ ಆಚರಣೆಯ ಶುಭರಾಗದ ಕರ್ತೃತ್ವವು ಅವರಲ್ಲಿ ಇರುತ್ತದೆ. ಈ ರಾಗವು ಮಾಡಲು ಯೋಗ್ಯವಿದೆ ಮತ್ತು ರಾಗ ಮಾಡುತ್ತ ಮಾಡುತ್ತ ವೀತರಾಗತೆಯಾಗುವುದು ಎಂದರೆ ತಾನು ಮುನಿಯಿದ್ದೇನೆ -ಮೋಕ್ಷಮಾರ್ಗಿಯಿದ್ದೇನೆಂಬ ಮಿಥ್ಯಾಬುದ್ಧಿಯು ಅವರ ಮನ್ನಣೆಯಲ್ಲಿ ನಡೆದಿರುತ್ತದೆ. ನಾನು ಎಷ್ಟೊಂದು ಕಷ್ಟ ಸಹಿಸುತ್ತಿದ್ದೇನೆಂದು ವಿಚಾರ ಮಾಡುತ್ತಾರೆ. ಹೀಗೆ ದುಃಖ ಸಹಿಸುವುದಂತೂ ಆರ್ತಧ್ಯಾನವಾಯಿತು. ಆದರೆ ಮೋಕ್ಷವು ಅನಂತ ಸುಖದ ಅವಸ್ಥೆಯಿದೆಯೆಂದ ಮೇಲೆ ಮೋಕ್ಷಮಾರ್ಗದಲ್ಲಿ ದುಃಖವು ಇರುತ್ತಿರಬಹುದೇನು ? ಸಮ್ಯಗ್ದರ್ಶನವಾಗುತ್ತಿದ್ದಂತೆಯೇ ಎಲ್ಲಿ ಅತೀಂದ್ರಿಯ ಸುಖವು ಪ್ರಕಟವಾಗುತ್ತದೆ, ನಿರಾಕುಲತೆಯಾಗುತ್ತದೆ ಮತ್ತು ಮುಂದಿನ ಗುಣಸ್ಥಾನಗಳಲ್ಲಿ ಅದು ಹೆಚ್ಚುತ್ತ ಹೋಗುತ್ತದೆ, ಅಲ್ಲಿ ಮುನಿರಾಜರಿಗಂತೂ ಪ್ರಚುರ ಸುಖವಿರುತ್ತದೆ. ಅವರು ಪ್ರಚುರ ಆನಂದದಲ್ಲಿ ಲೀನರಿರುತ್ತಾರೆ.

ನಮಗೆಲ್ಲ ಸಂಯೋಗಗಳಲ್ಲಿ ಇಷ್ಟ-ಅನಿಷ್ಟತೆಯೆನಿಸುತ್ತದೆ, ಅದು ನಮ್ಮ ಮಿಥ್ಯಾ ಮನ್ನಣೆಯಿದೆ ಮತ್ತು ಅದೇ ಮನ್ನಣೆಯೊಂದಿಗೆ ನಾವು ಮುನಿಗಳ ಸಂಯೋಗದತ್ತ ನೋಡಿ-'ಪಾಪ ಮುನಿರಾಜರು! ಇಷ್ಟೊಂದು ಚಳಿಯಲ್ಲಿ ನಗ್ನರಿದ್ದುಕೊಂಡು ಎಲ್ಲವನ್ನು ಸಹಿಸುತ್ತಿದ್ದಾರೆ'ಂದು - ಹೇಳುತ್ತೇವೆ. ಇದು ಮಿಥ್ಯಾದೃಷ್ಟಿಯ ಮನ್ನಣೆಯಿದೆ. ಮುನಿರಾಜರ ಮನ್ನಣೆಯು ಇಂಥದ್ದಿರುವುದಿಲ್ಲ, ಕಷ್ಟ ಸಹನೆ ಮಾಡುವುದು ಅವರ ಸ್ವರೂಪವಿಲ್ಲ. ಅವರ ಸಮಸ್ತ ಕ್ರಿಯೆಗಳು ಸಹಜವಿರುತ್ತವೆ. ಅಂತರಂಗದಲ್ಲಿ ಎಷ್ಟು ಸ್ಥಿರತೆಯಾಗುತ್ತದೆಯೋ ಅಷ್ಟು ಪ್ರಮಾಣದಲ್ಲಿ ಬಾಹ್ಯದೊಳಗೆ ಶುಭ ಪರಿಣಾಮಗಳು ಹಾಗೂ ವೃತ್ತಿಯು ಸಹಜವಾಗುತ್ತದೆ, ಹೀಗೆಯೇ ಸಹಜವಾದ ನಿಮಿತ್ತ ನೈಮಿತ್ತಿಕ ಸಂಬಂಧವಿದೆ.

'ನಾನು ಯಾರಿದ್ದೇನೆ' ಎಂಬುದರ ಕುರಿತಾಗಿ ಮಿಥ್ಯಾ ಮನ್ನಣೆಯು ಅದಂತೂ ಮೂಲದಲ್ಲಿರುವ ದೋಷವಿದೆ. ಇಲ್ಲಿ ನಾವು ಒಂದು ಗಣಿತವನ್ನು ನೋಡಿ ಅದು ಸತ್ಯವಿದೆಯೋ ಅಥವಾ ಇಲ್ಲವೆಂಬುದರ ವಿಚಾರ ಮಾಡಬಹುದಾಗಿದೆ. ೨+೨=೫, ೫+೫=೧೦, ೧೦+೧೦=೨೦, ೨೦+೨೦=೪೦, ೪೦+೪೦=೮೦, ೮೦+೮೦=೧೬೦.... ಈ ಗಣಿತವು ಸರಿಯಾಗಿದೆಯಲ್ಲವೇನು ? - ಇಲ್ಲ, ಮೂಲದಲ್ಲಿಯೇ ೨+೨=೪ ಇರುವುದಕ್ಕೆ ಬದಲಾಗಿ ೫ ಇದೆ, ಮುಂದೆ ಕೋಟಿಗಳವರೆಗೆ ಕೂಡಿಸುತ್ತ ಹೋದರೂ ಮೂಲದಲ್ಲಿಯೇ ದೋಷವಾಗಿದೆಯೆಂದ ಮೇಲೆ ಮುಂದಿನ ಸಂಕಲನವೆಲ್ಲವೂ ದೋಷರೂಪವೇ ಇದೆ. ಅದೇ ರೀತಿ ಮಿಥ್ಯಾ ಮನ್ನಣೆಯ ರೂಪದ ದೋಷವು ಮೂಲದಲ್ಲಿಯೇ ಬಿದ್ದುಕೊಂಡಿರುವಾಗ ಮೋಕ್ಷದ ಸಲುವಾಗಿ ತಪಸ್ಸು ಮಾಡುವುದು - ಬಾಹ್ಯ ತಪಸ್ಸು ಮಾಡುವುದು, ಅದನ್ನಂತೂ ಶಾಸ್ತ್ರಗಳಲ್ಲಿ ಬಾಲತಪವೆಂದಿದ್ದಾರೆ - ಅಂಕಿಯಿಲ್ಲದ ಸೊನ್ನೆಯೆಂದಿದ್ದಾರೆ. ಅದು ಸ್ವಲ್ಪವಾದರೂ ಕಾರ್ಯಕಾರಿಯಾಗಬಹುದಾಗಿದೆಯೇನು ? ಅಹುದು, ಸಂಸಾರವನ್ನು ಹೆಚ್ಚಿಸುವ ಸಲುವಾಗಿ ಬಹಳಷ್ಟು ಕಾರ್ಯಕಾರಿಯಾಗುತ್ತದೆ, ಮೋಕ್ಷ ಪ್ರಾಪ್ತಿಯ ಸಲುವಾಗಿ ಸ್ವಲ್ಪ ಮಾತ್ರವೂ

ಕೆಲಸಕ್ಕೆ ಬರುವುದಿಲ್ಲ. ಯಾವ ನಿರ್ಜರೆಯು ಮೋಕ್ಷಮಾರ್ಗದಲ್ಲಿ ಕೆಲಸಕ್ಕೆ ಬರುವುದಿಲ್ಲವೋ ಅದನ್ನು ಅಕಾಮ ನಿರ್ಜರೆಯೆಂದು ಹೇಳುತ್ತಾರೆ. ಇದು ಸಂವರಪೂರ್ವಕವಾದ ನಿರ್ಜರೆಯಲ್ಲ ಆದರೆ ಉದಯರೂಪ ನಿರ್ಜರೆಯಿದೆ. ಅಜ್ಞಾನಿಯು ಕೋಟ್ಯಂತರ ಭವಗಳವರೆಗೆ ತಪಸ್ಸು ಮಾಡಿದರೂ ಕೂಡ ಅವನಿಗೆ ಎಷ್ಟು ಕರ್ಮಗಳ ನಿರ್ಜರೆಯಾಗುತ್ತದೆ ಅದಕ್ಕಿಂತ ಅಸಂಖ್ಯಾತ ಗುಣಿತ ಅಧಿಕವಾದ ನಿರ್ಜರೆಯು ಜ್ಞಾನಿಗೆ -ಮುನಿಗೆ ಕ್ಷಣ ಮಾತ್ರದಲ್ಲಿ ಆಗುತ್ತದೆ.

ಈ ನಿರ್ಜರೆಯೆಂದರೇನು ಮತ್ತು ಅಸಂಖ್ಯಾತಗುಣಿತವೆಂದರೇನು ? - ನಾವು ಪ್ರತಿ ಸಮಯದಲ್ಲಿ ಅನಂತ ಕರ್ಮ ಪರಮಾಣುಗಳನ್ನು ಕಟ್ಟಿಕೊಳ್ಳುತ್ತೇವೆ ಅದನ್ನು ಒಂದು ಸಮಯ ಪ್ರಬದ್ಧವೆಂದು ಹೇಳುತ್ತಾರೆ ಮತ್ತು ಪೂರ್ವದಲ್ಲಿ ಕಟ್ಟಲ್ಪಟ್ಟಿರುವ ಕರ್ಮದೊಳಗಿಂದ ಅನಂತ ಪರಮಾಣುಗಳು ಹೊರಟು ಹೋಗುತ್ತವೆ - ಉದುರಿ ಹೋಗುತ್ತವೆ ಅದನ್ನು ಉದಯವೆಂದು ಹೇಳುತ್ತಾರೆ ಅಲ್ಲದೇ ನಮ್ಮ ಹತ್ತಿರ ಅನಂತಾನಂತ ಕರ್ಮ ಪರಮಾಣುಗಳು ಸತ್ತಾದಲ್ಲಿ ಬಿದ್ದುಕೊಂಡಿರುತ್ತವೆ. ತಾತ್ಪರ್ಯವೆಂದರೆ ಎಷ್ಟೋ ಕರ್ಮ ಪರಮಾಣುಗಳು ಹೊಸದಾಗಿ ಕಟ್ಟುತ್ತವೆ ಮತ್ತು ಹಳೆಯವು ಎಷ್ಟೋ ಹೊರಟು ಹೋಗುತ್ತಿರುತ್ತವೆ. ಆದರೆ ಮುನಿರಾಜರಿಗೆ ಹಾಗಾಗುವುದಿಲ್ಲ ಅವರಿಗಂತೂ ಒಂದು ಸಮಯ ಪ್ರಬದ್ಧ ಕಟ್ಟುತ್ತವೆ ಮತ್ತು ಅದರ ಅಸಂಖ್ಯಾತ ಗುಣಿತ ಉದುರಿ-ಹೊರಟು ಹೋಗುತ್ತವೆ.

ಮಿಥ್ಯಾದೃಷ್ಟಿ ಜೀವವಂತೂ ಮಿಥ್ಯಾತ್ವ ಅವಸ್ಥೆಯಲ್ಲಿ ಬಂಧಯೋಗ್ಯವಿರುವ ಎಲ್ಲ ಪ್ರಕೃತಿಗಳನ್ನು ಕಟ್ಟಿಕೊಳ್ಳುತ್ತಿರುತ್ತಾನೆ ಎಂದರೆ ಮಿಥ್ಯಾತ್ವ, ೧೬ ಕಷಾಯ ಮೊದಲಾದ ಎಲ್ಲ ಕರ್ಮಪ್ರಕೃತಿಗಳು ಹಾಗೂ ಬೇರೆಯೂ ಕೂಡ ಕಟ್ಟುತ್ತವೆ ಆದರೆ ಮುನಿಗಳಿಗಂತೂ ಐವತ್ತೈದು ಪ್ರಕೃತಿಗಳ ಬಂಧವೇ ಆಗುವುದಿಲ್ಲ. ಅವರಿಗೆ ಇಷ್ಟೊಂದು ಪ್ರಕೃತಿಗಳ ಬಂಧದ ವ್ಯುಚ್ಛಿತ್ತಿಯಾಗಿ ಹೋಗಿದೆ. ಮಿಥ್ಯಾದೃಷ್ಟಿಯು ತಪಸ್ಸು ಮಾಡಿದರೂ ಕೂಡ ಕೆಲಸಮಯದವರೆಗೆ ಪುಣ್ಯಪ್ರಕೃತಿಗಳ ಬಂಧ ಮಾಡಿಕೊಳ್ಳುವನು. ಕೆಲಸಮಯದವರೆಗೆ ಎಂದೇಕೆ ಹೇಳಿದ್ದಾರೆ ? ಆಗಮದ ಅನುಸಾರ ವಿಚಾರ ಮಾಡಿದಾಗ ಯಾವನೋ ಶುಭಭಾವ ಮಾಡಿ ಮೊದಲು ಸ್ವರ್ಗದಲ್ಲಿ ಹೋಗುತ್ತಾನೆ, ಅಲ್ಲಿ ಅವನು ಹಿಂಸೆ, ಅಸತ್ಯ , ಕಳವು ಮೊದಲಾದ ಪಾಪವನ್ನಂತೂ ಮಾಡುವುದಿಲ್ಲವೆಂದ ಮೇಲೆ ಆ ಜೀವನು ಸತ್ತು ಮೇಲಿನ ಯಾವ ಸ್ವರ್ಗದವರೆಗೆ ಹೋಗುವ ಸಾಧ್ಯತೆಯಿದೆ ? ಯಾವ ಮಾತಿನ ಚರ್ಚೆಯು ನಡೆಯುತ್ತಿದೆ ಗೊತ್ತಾಯಿತಲ್ಲವೇನು ? ಸೋದರನೇ ! ಸ್ವರ್ಗದ ಯಾವುದೇ ಜೀವನು ಸತ್ತು ಸ್ವರ್ಗದಲ್ಲಿ ಉತ್ಪನ್ನನಾಗುವುದಿಲ್ಲ. ಅವನಿಗಂತೂ ನಿಯಮದಿಂದ ಕೆಳಗೆ ಮನುಷ್ಯ ಅಥವಾ ತಿರ್ಯಂಚ ಗತಿಯಲ್ಲಿ ಬರಬೇಕಾಗುವುದು. ಶುಭ ಮಾಡಿ ಸ್ವರ್ಗದೊಳಗೆ ಹೋದನು ಆದರೆ ಅಲ್ಲಿ ಶುಭದ ಫಲವನ್ನು ಇಚ್ಛೆಯಿಂದ ಭೋಗಿಸುತ್ತಿದ್ದಾನೆ. ಅಲ್ಲಿಯ ಆಯುವಂತೂ ಪಲ್ಯಗಳಷ್ಟು ಮತ್ತು ಸಾಗರಗಳಷ್ಟು ಇರುತ್ತದೆ, ಆದುದರಿಂದ ಅವರನ್ನು ಅಮರರೆಂದು ಹೇಳುತ್ತಾರೆ. ಭಕ್ತಾಮರದಲ್ಲಿ ಅಮರ ಭಕ್ತರೆಂದು ಹೇಳಿದ್ದಾರೆಯಲ್ಲವೇನು ?

ಅವರ ಆಯುವು ಆರು ತಿಂಗಳು ಶೇಷ ಉಳಿದಿರುವಾಗ ಅವರ ಕೊರಳಲ್ಲಿರುವ ಮಂದಾರ ಮಾಲೆಯು ಒಣಗಿ ಹೋಗುತ್ತದೆ ಆಗ ಅವರಿಗೆ ಇಲ್ಲಿಯ ಆಯುವು ಪೂರ್ಣವಾಯಿತೆಂದು ತಿಳಿದು ಬರುತ್ತದೆ. ಆಗ ಮಿಥ್ಯಾದೃಷ್ಟಿ ಜೀವಗಳು ಅದೆಷ್ಟು ಶೋಕ-ಅದೆಷ್ಟು ಸಂಕ್ಲೇಶ ಪರಿಣಾಮ ಮಾಡುತ್ತಾರೆಂದರೆ ಅದರಿಂದ ಕೆಲವರು

ಸತ್ತು ಏಕೇಂದ್ರಿಯಗಳಲ್ಲಿ - ಬಾದರ ಪೃಥ್ವಿಕಾಯಿಕ, ಬಾದರ ಜಲಕಾಯಿಕ ಅಥವಾ ಪ್ರತ್ಯೇಕ ವನಸ್ಪತಿಕಾಯಿಕದಲ್ಲಿ ಹೋಗಿ ಹುಟ್ಟುತ್ತಾರೆ. ಸ್ವರ್ಗದಿಂದ ಯಾರೂ ನೇರವಾಗಿ ನಿಗೋದದಲ್ಲಿ ಹೋಗುವುದಿಲ್ಲ.

ಅಜ್ಞಾನೀ ಜೀವದ ಇಂಥ ತಪಸ್ಸಿನಿಂದ ಯಾವ ಲಾಭವಾಯಿತು ?

ಇಲ್ಲಿ ಗ್ರೈವೇಯಕಗಳ ಚರ್ಚೆಯು ನಡೆದಿತ್ತು. ಅಲ್ಲಿ ಭಾವಲಿಂಗೀ ಮುನಿಗಳಂತೂ ಹೋಗಿಯೇ ಹೋಗುತ್ತಾರೆ ಆದರೆ ಮಿಥ್ಯಾತ್ವದ ಇರುವಿಕೆಯಲ್ಲಿ ಕೂಡ ದ್ರವ್ಯಲಿಂಗಿಯೂ ಅಲ್ಲಿಯವರೆಗೆ ಹೋಗಬಹುದಾಗಿದೆ. ಎಂಬುದನ್ನು ತಿಳಿದುಕೊಂಡೆವು. ಮೇಲಿನ ಮೂರು ಉತ್ತಮ ಸಂಹನನಗಳೊಳಗಿಂದ ಯಾವುದಾದರೂ ಒಂದು ಸಂಹನನವು ಇರುವುದು ಆವಶ್ಯಕವಿದೆ. ಅವು ಈ ಪಂಚಮಕಾಲದ ಮನುಷ್ಯರಲ್ಲಿ ಕಂಡುಬರುವುದಿಲ್ಲ ಎಂದರೆ ಇರುವುದಿಲ್ಲ. ಈ ಪಂಚಮಕಾಲದ ದ್ರವ್ಯಲಿಂಗಿಗಳಾಗಲಿ ಅಥವಾ ಭಾವಲಿಂಗಿಗಳಾಗಲಿ ಗ್ರೈವೇಯಕದೊಳಗೆ ಹೋಗುವ ಸಾಧ್ಯತೆಯಿಲ್ಲ.

ಸಂಹನನವೆಂಬ ಹೆಸರನ್ನು ಆಲಿಸಿದ್ದೇವೆ ಅಲ್ಲವೇನು ? ಮನುಷ್ಯರಲ್ಲಿ ಮತ್ತು ದ್ವೀಂದ್ರಿಯ ಮೊದಲಾದ ತಿರ್ಯಂಚಗಳಲ್ಲಿ ಸಂಹನನ ನಾಮಕರ್ಮದ ಉದಯದಿಂದ ವಿಶಿಷ್ಟ ಸಂಹನನವಿರುವುದು ಅರ್ಥಾತ್ ಶರೀರ ಹಾಗೂ ಮೊಳೆಗಳಲ್ಲಿ ಗಟ್ಟಿಮುಟ್ಟತೆಯು ಕಂಡು ಬರುವುದು ಅದನ್ನು ಸಂಹನನವೆಂದು ಹೇಳುತ್ತಾರೆ. ಆ ಸಂಹನನದಲ್ಲಿ - ೧) ವಜ್ರವೃಷಭನಾರಾಚ ಸಂಹನನ, ೨) ವಜ್ರನಾರಾಚ ಸಂಹನನ, ೩) ನಾರಾಚ ಸಂಹನನ, ೪) ಅರ್ಧನಾರಾಚ ಸಂಹನನ, ೫) ಕೀಲಿತ ಸಂಹನನ, ೬) ಅಸಂಪ್ರಾಪ್ತಾಸೃಪಾಟಿಕಾ ಸಂಹನನವೆಂದು ಆರು ಭೇದಗಳಿವೆ.

ಇವುಗಳಲ್ಲಿನ ಮೊದಲಿನ ಮೂರು ಉತ್ತಮ ಸಂಹನನಗಳಿವೆ. ಭರತಕ್ಷೇತ್ರದಲ್ಲಿ ಚತುರ್ಥ ಕಾಲದೊಳಗೆ ಆರೂ ಸಂಹನನವುಳ್ಳ ಜೀವರುಗಳಿರುತ್ತಿದ್ದರು, ಆದರೆ ಪಂಚಮಕಾಲದಲ್ಲಿ ಕೆಳಗಿನ ಮೂರು ಸಂಹನನವುಳ್ಳವರೇ ಇರುತ್ತಾರೆ.

ಹಾಗಂತೂ ಮೋಕ್ಷಕ್ಕೆ ಹೋಗುವಂಥ ಜೀವರುಗಳಿಗೆ ಆ ಅಂತಿಮ ಭವದಲ್ಲಿ ವಜ್ರವೃಷಭನಾರಾಚ ಸಂಹನನವೇ ಇರುತ್ತದೆ. ಯಾವುದೇ ಸಂಹನನವು ಜೀವವನ್ನು ಸ್ವರ್ಗಕ್ಕೆ ಅಥವಾ ಮೋಕ್ಷಕ್ಕೆ ತೆಗೆದುಕೊಂಡು ಹೋಗುವುದಿಲ್ಲ. ಏಳನೆಯ ನರಕಕ್ಕೆ ಹೋಗುವಂಥ ಜೀವನಿಗೂ ಕೂಡ ವಜ್ರವೃಷಭನಾರಾಚ ಸಂಹನನವೇ ಇರಬೇಕಾಗುತ್ತದೆ. ಇದಂತೂ ಸಹಜ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಕರಣಾನುಯೋಗದಲ್ಲಿ ಇಂಥ ನಿಮಿತ್ತಗಳ ನಿಯಮವನ್ನು ಕಂಡು ಅಲ್ಲಿಯ ಕಾರ್ಯಗಳ ಅನುಮಾನ (ಅಂದಾಜು) ಮಾಡಬಹುದಾಗಿದೆ. ಹೇಗೆ ಕರ್ಮಭೂಮಿಯ ಸ್ತ್ರೀಗೆ ಕೆಳಗಿನ ಮೂರು ಸಂಹನನಗಳೇ ಇರುತ್ತವೆ, ಆದುದರಿಂದ ಸ್ತ್ರೀಯು ಮೋಕ್ಷಕ್ಕೆ ಹೋಗುವ ಸಾಧ್ಯತೆಯಿಲ್ಲ. ಚತುರ್ಥಕಾಲದಲ್ಲಿಯೂ ಸ್ತ್ರೀಯರಿಗೆ ಮೋಕ್ಷವಾಗುವುದಿಲ್ಲ. ತಿರ್ಯಂಚ ಅಥವಾ ಮನುಷ್ಯ ಸ್ತ್ರೀಯರಿಗೆ ಹೆಚ್ಚು ಹೆಚ್ಚೆಂದರೆ ಐದನೆಯ ಗುಣಸ್ಥಾನವು ಪ್ರಾಪ್ತವಾಗುವ ಸಾಧ್ಯತೆಯಿದೆ.

ಆದಾಗ್ಯೂ ಯಾರದೋ ಮತದಲ್ಲಿ ಸ್ತ್ರೀಯರಿಗೆ ಮುಕ್ತಿಯಾಗುತ್ತದೆಯೆಂದು ಹೇಳುತ್ತಿದ್ದರೆ ಅಲ್ಲಿ ಅವರಿಗೆ ನಿಮಿತ್ತದ್ದೂ ಯಥಾರ್ಥ ಜ್ಞಾನವಿಲ್ಲವೆಂಬುದು ನಮಗೆ ಲಕ್ಷದೊಳಗೆ ಬರುತ್ತದೆ, ಎಂದರೇನೇ ಅವರ ಆ ಕಥನವು ಸರ್ವಥಾ ಅಸತ್ಯವಿದೆ-ಎಂಬ ಯಥಾರ್ಥ ನಿರ್ಣಯವನ್ನು ನಾವು ಮಾಡಬಹುದಾಗಿದೆ.

ಒಂಭತ್ತು ಗ್ರೈವೇಯಕಗಳ ಮೇಲೆ ಒಂದು ಮಟ್ಟದಲ್ಲಿ (ಒಂದೇ ಸ್ತರದಲ್ಲಿ) ಅನುದಿಶೆಯೆಂಬ ಹೆಸರಿನ ಒಂಭತ್ತು ವಿಮಾನಗಳಿವೆ - ಮಧ್ಯದಲ್ಲಿ ಒಂದು, ನಾಲ್ಕು ದಿಕ್ಕಿಗೆ ನಾಲ್ಕು ಮತ್ತು ನಾಲ್ಕು ಅನುದಿಕ್ಕುಗಳಲ್ಲಿ ಒಂದೊಂದರಂತೆ ನಾಲ್ಕು, ಅವುಗಳ ಚರ್ಚೆಯನ್ನು ನಾವು ಮುಂದೆ ಮಾಡುವುದಿದೆ.

ಅನುದಿಶೆಗಳ ಮೇಲೆ ಐದು ಅನುತ್ತರ ವಿಮಾನಗಳಿವೆ. ಮಧ್ಯದಲ್ಲಿ ಒಂದು ಮತ್ತು ನಾಲ್ಕೂ ದಿಶೆಗಳಲ್ಲಿ ಒಂದೊಂದರಂತೆ ನಾಲ್ಕು ಇವೆ. ಈ ಪ್ರಕಾರ ನಾವು ಸ್ವರ್ಗಗಳ ಹೆಸರನ್ನು ತಿಳಿದುಕೊಂಡೆವು ಇವುಗಳಲ್ಲಿ ಎಲ್ಲಿ, ಎಷ್ಟು ಪಟಲಗಳಿರುತ್ತವೆ ? ಎಷ್ಟು ವಿಮಾನಗಳಿರುತ್ತವೆ ? ಎಂಬಿವೇ ಮೊದಲಾದವುಗಳ ಚರ್ಚೆಯನ್ನು ಯಥಾ ಸಮಯದಲ್ಲಿ ಮಾಡಲಾಗುವುದು.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಏಳನೆಯ ತೀರ್ಥಂಕರ
ಶ್ರೀ ವೃಷಭಾನನ ಭಗವಂತರಿಗೆ ಜಯವಾಗಲಿ

★★★★★

ಅನಾದಿ ಕಾಲದಿಂದ ಬಹಳಷ್ಟು ಕಾಲವನ್ನಂತೂ ಅರ್ಥಾತ್ ಅನಂತ ಕಾಲವನ್ನಂತೂ ಈ ಜೀವನು ನಿಗೋದಾವಾಸದಲ್ಲಿಯೇ ಕಳೆದಿದ್ದಾನೆ. ಪುನಃ ಎಂದಾದರೊಮ್ಮೆ ನಿಗೋದದಿಂದ ಹೊರ ಹೊರಟು ಪಂಚ ಸ್ಥಾವರಗಳಲ್ಲಿ ಅಸಂಖ್ಯಾತ ಕಾಲದವರೆಗೆ ಪರಿಭ್ರಮಣ ಮಾಡಿ ಮತ್ತೆ ನಿಗೋದದಲ್ಲಿ ಹೊರಟು ಹೋಗುವನು. ಅಲ್ಲಿ ಅನಂತಕಾಲದಲ್ಲಿ ಪುನಃ ಪುನಃ ಅನಂತಾನಂತ ಪರಿವರ್ತನವನ್ನು ಏಕೇಂದ್ರಿಯದಲ್ಲಿಯೇ ಮಾಡಿದನು. ಅಲ್ಲಿಯಂತೂ ವಾಣಿಯೂ ದೊರಕಲಿಲ್ಲ ಮತ್ತು ಜಿಹ್ವೇಂದ್ರಿಯವೂ ದೊರಕಲಿಲ್ಲ. ಅಲ್ಲಿಂದ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಅಸಂಜ್ಞೀ ಪಂಚೇಂದ್ರಿಯ, ಸಂಜ್ಞೀ ತಿರ್ಯಂಚ ಪಂಚೇಂದ್ರಿಯಗಳಲ್ಲಿ ಉತ್ಪನ್ನನಾಗುವನು. ಅಲ್ಲಿ ಜಿಹ್ವೆಯಂತೂ ದೊರಕಿತು, ಆದರೆ ಅಕ್ಷರಾತ್ಮಕವಾಗಿ ಹೇಳುವ-ಕೇಳುವ ರೂಪದ ವಾಣಿಯು ದೊರಕಲಿಲ್ಲ. ಅತ್ಯಂತ ಕಠಿಣತೆಯಿಂದ ಅನಂತಾನಂತ ಕಾಲದಲ್ಲಿ ಈ ಮನುಷ್ಯ ಜನ್ಮ ದೊರಕಿತು; ಇಲ್ಲಿ ಮಾತನಾಡುವ ಶಕ್ತಿ ದೊರಕಿದರೆ ನೀಚ ಕುಲದವರು ಆಡುವಂಥ ಅಯೋಗ್ಯ ವಚನ, ಹಿಂಸೆಯ ವಚನ, ತಮ್ಮನ್ನು ಮತ್ತು ಇತರರನ್ನು ದುಃಖಿಯನ್ನಾಗಿ ಮಾಡುವಂಥ ವಚನಗಳನ್ನು ಆಡಿ ಮಹಾಪಾಪದ ಬಂಧ ಮಾಡಿಕೊಂಡು ದುರ್ಗತಿಗೆ ಪಾತ್ರನಾಗುವನು-ತನ್ನ ವಚನಗಳಿಂದಲೇ ತನ್ನ ಘಾತಕ ತಾನಾದನು ! ಕಠಿಣತೆಯಿಂದ ಯಾವುದೋ ಪೂರ್ವಪುಣ್ಯದ ಉದಯದಿಂದ ಮನುಷ್ಯ ಜನ್ಮ ಪಡೆದಿದೆಯೆಂದ ಮೇಲೆ ಮಾತುಗಳನ್ನು ಆಡುವಾಗ ಅತ್ಯಂತ ಸಾವಧಾನರಾಗಿರಬೇಕು.

೮. ಊರ್ಧ್ವಲೋಕ-ಸ್ವರ್ಗಗಳ ವಿಮಾನಗಳು

ಇಲ್ಲಿ ತ್ರಿಲೋಕಸಾರದ ಆಧಾರದಿಂದ ನಾವು ಮೂರು ಲೋಕದ ರಚನೆ ಮತ್ತು ಅದರ ಸ್ವರೂಪವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ನೋಡಿರಿ, ಇದು ಸರ್ವಜ್ಞ ಭಗವಂತರ ವಾಣಿಯಿದೆ. ಭಗವಂತರ ವಚನಗಳ ಅನುಸಾರ ಇದರ ವಿವೇಚನೆಯು ನಡೆಯುತ್ತಿದೆ. ಭಗವಂತರು ವೀತರಾಗರಿರುತ್ತಾರೆ ಮತ್ತು ಸರ್ವಜ್ಞರಿರುತ್ತಾರೆ. ಸರ್ವಜ್ಞ ಭಗವಂತರು ತಮ್ಮ ಕೇವಲಜ್ಞಾನದಲ್ಲಿ ಪ್ರತ್ಯಕ್ಷವಾಗಿ ತಿಳಿದುಕೊಂಡು ಇದರ ಕಥನ ಮಾಡಿದ್ದಾರೆ. ಇವೇನು ಮತಿ ಕಲ್ಪನೆಯ ಮಾತುಗಳಲ್ಲ.

ಸರ್ವಜ್ಞರ ವಾಣಿಯು ಸ್ವಯಂ ಪ್ರಮಾಣವಿದೆ. ಅದನ್ನು ಅನ್ಯ ಪ್ರಮಾಣಗಳ ಮೂಲಕ ಪ್ರಮಾಣಿತ ಎಂದರೆ ಸಿದ್ಧ ಮಾಡುವ ಅವಶ್ಯಕತೆಯಿರುವುದಿಲ್ಲ. ಪ್ರಾತಃಕಾಲದಲ್ಲಿ ಪೂರ್ವ ದಿಗಂತದಿಂದ ಸೂರ್ಯನು ಉದಯಿಸಿದನು ಎಂಬುದನ್ನು ನಾವುಗಳು ಯಾವ ದೀವಿಗೆಯಿಂದ ನೋಡಿ ಹೇಳುತ್ತೇವೆ ? ಅವನಂತೂ ಸ್ವಯಂ ಪ್ರಕಾಶಿತನಿದ್ದಾನೆ ಮತ್ತು ಅವನ ನಿಮಿತ್ತದಿಂದ ಅನ್ಯ ವಸ್ತುಗಳು ಕೂಡ ಪ್ರಕಾಶಿತವಾಗುತ್ತವೆ. ಯಾರು ತಮ್ಮ ಅಲ್ಪ ಜ್ಞಾನದಿಂದ ಸರ್ವಜ್ಞರ ವಾಣಿಯನ್ನು ಪ್ರಮಾಣಿತಗೊಳಿಸ ಬಯಸುತ್ತಾರೆ ಅವರ ಆ ಬಯಕೆಯು ದೋಷವಿದೆ, ಮಿಥ್ಯಾಮನ್ನಣೆಯಿದೆ- ಅವರಿಗೆ ಸರ್ವಜ್ಞರ ಸ್ವರೂಪದ ನಿರ್ಣಯವಿರುವುದಿಲ್ಲ. ಸರ್ವಜ್ಞರ ವಚನಗಳ ಅನುಸಾರ ವಸ್ತುಸ್ವರೂಪ ಮತ್ತು ತ್ರಿಲೋಕದ ರಚನೆಯನ್ನು ತಿಳಿದುಕೊಂಡು ನಮ್ಮ ಮನ್ನಣೆ ಅರ್ಥಾತ್ ಅಭಿಪ್ರಾಯದಲ್ಲಿ ಯಾವುದಾದರೂ ದೋಷವಿದ್ದರೆ ಅದನ್ನು ಸರಿಪಡಿಸುವುದಿದೆ. ಆದರೆ ಇದರಿಂದ ವಿಪರೀತವಾಗಿ ಜನರು ತಮ್ಮ ಮಿಥ್ಯಾ ಮನ್ನಣೆಯ ಅಥವಾ ಅಸತ್ಯ ಕಲ್ಪನೆಯ ಅಥವಾ ಅಲ್ಪಜ್ಞಾನದ ಆಧಾರದಿಂದ ಸರ್ವಜ್ಞರ ವಾಣಿಯ ಸತ್ಯಾಸತ್ಯತೆಯ ನಿರ್ಣಯ ಮಾಡಲಿಚ್ಛಿಸುತ್ತಾರೆ.

ಇದರ ಚರ್ಚೆಯು ಮೊದಲೇ ಆಗಿದೆ. ವಿಜ್ಞಾನದ ಆಧಾರದಿಂದ ವರ್ತಮಾನದಲ್ಲಿ ಶಾಲಾ-ಕಾಲೇಜುಗಳಲ್ಲಿ ಹೇಳುತ್ತಿರುವ ಭೂಗೋಳದ ಜತೆ ಇದರ ಹೊಂದಾಣಿಕೆ ಮಾಡಬಯಸಿದರೆ ನಮಗೆ ಸರ್ವಜ್ಞರಿಂದ ಹೇಳಲ್ಪಟ್ಟಿರುವ ಮೂರು ಲೋಕಗಳ ಸ್ವರೂಪದ ಪರಿಚಯವಾಗುವ ಸಾಧ್ಯತೆಯಿಲ್ಲ. ನಮ್ಮ ಅಸತ್ ಕಲ್ಪನೆಯಿಂದ ಅಥವಾ ಅಲ್ಪಜ್ಞಾನದಿಂದ ಪ್ರಮಾಣ ಮಾಡಹೋದರೆ ಅದರಲ್ಲಿ ನಮ್ಮದೇ ಹಾನಿಯಾಗುವುದಿದೆ.

ಇಲ್ಲಿ ಬಂದಿರುವ ಕೆಲವು ಪ್ರಶ್ನೆಗಳ ಉತ್ತರ ತಿಳಿಸಿಕೊಡುವ ಪ್ರಯತ್ನ ಮಾಡಿ, ನಂತರ ಮುಂದಿನ ವಿಷಯದ ಕಡೆಗೆ ಸಾಗೋಣ.

ಪ್ರಶ್ನೆ :- ಎರಡನೇ ನಂಬರಿನ ಯಾವ ವಾತವಲಯ ಸಂಬಂಧದ ಚಾರ್ಟ ಇದೆ ಅದರಲ್ಲಿ ೭, ೫, ೪ ಮೊದಲಾಗಿ ಏನನ್ನು ಬರೆಯಲಾಗಿದೆ ?

ಉತ್ತರ :- ವಾತ ವಲಯದ ೨ನೇ ನಂಬರಿನ ಚಾರ್ಟದಲ್ಲಿ ಲೋಕಾಕಾಶವನ್ನು ಎದುರಿನಿಂದ ತೋರಿಸಲಾಗಿದೆ. ಅದರಲ್ಲಿ ಲೋಕಾಕಾಶದ ಪೂರ್ವ-ಪಶ್ಚಿಮ ವಿಸ್ತಾರವು ಕಂಡು ಬರುತ್ತದೆ. ಲೋಕಾಕಾಶವಂತೂ ಘನಸ್ವರೂಪವಿದೆ. ಅದನ್ನು ನಾವು ಒಂದನೇ ನಂಬರಿನ ಚಾರ್ಟದ ಆಧಾರದಿಂದ ಬಹಳಷ್ಟು ಬಾರಿ ನೋಡಿದ್ದೇವೆ.

ಲೋಕಾಕಾಶದ ದಕ್ಷಿಣೋತ್ತರ ವಿಸ್ತಾರವು ಸರ್ವತ್ರ ಏಳು ರಾಜೂ ಪ್ರಮಾಣ ಅಗಲವಿದೆ. ಅದನ್ನು ಇಲ್ಲಿ ತೋರಿಸಿಲ್ಲ. ಕೇವಲ ಮುಂಭಾಗವನ್ನು ತೋರಿಸಲಾಗಿದೆ.

ಲೋಕಾಕಾಶದ ತಳದಲ್ಲಿ ಹಾಗೂ ಪ್ರತಿಯೊಂದು ಪೃಥ್ವಿಯ ಕೆಳಗೆ ಇಪ್ಪತ್ತು ಸಾವಿರ ಯೋಜನ ದಪ್ಪವಿರುವ ಘನೋದಧಿವಾತವಲಯವಿದೆ. ಅದರ ಕೆಳಗೆ ಇಲ್ಲಿ ಯಾವ ಹಳದೀ ಬಣ್ಣದಲ್ಲಿ ತೋರಿಸಲಾಗಿದೆ ಅದು ಘನವಾತವಲಯವಿದೆ ಅದು ಕೂಡ ಇಪ್ಪತ್ತು ಸಾವಿರ ಯೋಜನ ದಪ್ಪವುಳ್ಳದ್ದಿದೆ. ಎಲ್ಲಕ್ಕಿಂತ ಕೆಳಗೆ ಇರುವಂಥ ತನುವಾತವಲಯವು ಕೂಡ ಇಪ್ಪತ್ತುಸಾವಿರ ಯೋಜನ ದಪ್ಪವುಳ್ಳದ್ದಿದೆ.

ಲೋಕಾಕಾಶದ ತಳವು ದಕ್ಷಿಣೋತ್ತರ ಏಳು ರಾಜೂ ಮತ್ತು ಪೂರ್ವ-ಪಶ್ಚಿಮ ಏಳು ರಾಜೂವಿದೆ ಅದರಲ್ಲಿ ಮೂರೂ ವಾತವಲಯಗಳು ೨೦-೨೦-೨೦ ಸಾವಿರ ಯೋಜನವುಳ್ಳವಿವೆ. ನಾಲ್ಕೂ ಕಡೆಗೆ ಪಾರ್ಶ್ವಭಾಗಗಳಲ್ಲಿ ಅರ್ಥಾತ್ ಮಗ್ಗುಲಿಗೆ ಒಂದು ರಾಜೂ ಎತ್ತರದವರೆಗೆ ಅವುಗಳ ದಪ್ಪತೆಯು ಅಷ್ಟೇ ಎಂದರೆ ೨೦-೨೦-೨೦ ಸಾವಿರ ಯೋಜನ ಉಳಿಯುತ್ತದೆ. ಅಲ್ಲಿಂದ ಕಡಿಮೆಯಾಗುತ್ತ ಮಗ್ಗುಲಿಗೆ ಕ್ರಮದಿಂದ ಘನೋದಧಿವಾತವಲಯವು ೭ ಯೋಜನ, ಘನವಾತವಲಯವು ೫ ಯೋಜನ ಮತ್ತು ತನುವಾತವಲಯವು ೪ ಯೋಜನ ಅರ್ಥಾತ್ ಮೂರೂ ಸೇರಿ ಹದಿನಾರು ಯೋಜನ ಉಳಿಯುತ್ತದೆ. ಅರವತ್ತು ಸಾವಿರ ಯೋಜನಗಳಿಂದ ಕಡಿಮೆಯಾಗಿ ಹದಿನಾರು ಯೋಜನ ಉಳಿಯುತ್ತದೆ. ಅದರಿಂದ ಮೇಲೆ ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತ ಎಲ್ಲಿ ಮಧ್ಯಲೋಕವಿದೆ ಅಲ್ಲಿ ಘನೋದಧಿವಾತವಲಯವು ೫ ಯೋಜನ, ಘನವಾತವಲಯವು ೪ ಯೋಜನ ಮತ್ತು ತನುವಾತವಲಯವು ೩ ಯೋಜನ ಉಳಿಯುತ್ತದೆ. ಮೇಲೆ ಪುನಃ ಹೆಚ್ಚುತ್ತ ಹೋಗಿ ಬ್ರಹ್ಮಸ್ವರ್ಗದ ಹತ್ತಿರ ಅವು ಕ್ರಮದಿಂದ ೭ ಯೋಜನ, ೫ ಯೋಜನ ಮತ್ತು ೪ ಯೋಜನವಾಗುತ್ತವೆ. ಮೇಲೆ ಮತ್ತೂ ಕಡಿಮೆಯಾಗುತ್ತ ಪಾರ್ಶ್ವಭಾಗಗಳಲ್ಲಿ ನಾಲ್ಕೂ ಕಡೆಗೆ ಮಗ್ಗಲುಗಳಲ್ಲಿ ಕ್ರಮದಿಂದ ೫ ಯೋಜನ, ೪ ಯೋಜನ ಮತ್ತು ೩ ಯೋಜನ ಉಳಿದುಬಿಡುತ್ತದೆ.

ಲೋಕಾಕಾಶದ ಅಗ್ರಭಾಗದಲ್ಲಿ ಎಂಟನೆಯ ಈಷತ್ ಪ್ರಾಗ್ಭಾರ ಪೃಥ್ವಿಯಿದೆ ಅದರ ಕೆಳಗೆಯಂತೂ ೨೦ ಸಾವಿರ ೨೦ ಸಾವಿರ ಯೋಜನಗಳ ಮೂರು ವಾತವಲಯಗಳು ಇದ್ದೇ ಇವೆ ಆದರೆ ಈ ಪೃಥ್ವಿಯ ಮೇಲೆಯೂ ಕೂಡ ಕ್ರಮದಿಂದ ಇವು ಮೂರು ವಾತವಲಯಗಳಿವೆ. ಘನೋದಧಿವಾತವಲಯವು ಎರಡು ಹರದಾರಿ ದಪ್ಪವಿದ್ದು ಅದು ಪೃಥ್ವಿಯನ್ನು ತಾಗಿಕೊಂಡಿದೆ, ಮಧ್ಯದಲ್ಲಿ ಘನವಾತವಲಯವು ಒಂದು ಹರದಾರಿ ದಪ್ಪಗಿದೆ ಹಾಗೂ ಕೊನೆಯಲ್ಲಿ ತನುವಾತವಲಯವು ೧೫೭೫ ಧನುಷ್ಯ ದಪ್ಪಗಿದೆ. ಇದರ ಚರ್ಚೆಯಾಗಿತ್ತು ಆದರೆ ಪ್ರಶ್ನೆಯ ಉತ್ತರದಲ್ಲಿ ಪುನಃ ಚರ್ಚೆಯಾಗಿ ಮತ್ತಷ್ಟು ಸ್ಪಷ್ಟವಾಯಿತು.

ಪ್ರಶ್ನೆ :- ಅನುತ್ತರ ವಿಮಾನಗಳಲ್ಲಿನ ಮಧ್ಯದ ಯಾವ ಸರ್ವಾರ್ಥಸಿದ್ಧಿ ವಿಮಾನವಿದೆ ಅಲ್ಲಿಂದ ಸಿದ್ಧ ಶಿಲೆಯು ಎಷ್ಟು ಮೇಲೆ ಇದೆ ?

ಉತ್ತರ :- ಹನ್ನೆರಡು ಯೋಜನ ಮೇಲೆ ಇದೆ. ಸಿದ್ಧಶಿಲೆಯು ಎಂಟನೆಯ ಈಷತ್ ಪ್ರಾಗ್ಭಾರ ಪೃಥ್ವಿಯ ಮಧ್ಯ-ನಟ್ಟ ನಡುವೆ ಇದೆ. ಈ ಪೃಥ್ವಿಯ ಕೆಳಗೆ ಮೂರು ವಾತವಲಯಗಳಿವೆ. ಅವುಗಳೊಳಗಿನ ಘನೋದಧಿ ವಾತವಲಯದಲ್ಲಿ ಅನುತ್ತರ ವಿಮಾನಗಳಿವೆ.

ಪ್ರಶ್ನೆ :- ಸರ್ವಾರ್ಥಸಿದ್ಧಿಯ ದೇವಗಳು ಸಿದ್ಧಶಿಲೆಯವರೆಗೆ ಹೋಗುವ ಸಾಧ್ಯತೆಯಿದೆಯೇನು ?

ಉತ್ತರ :- ಇಲ್ಲ, ಹೋಗುವ ಸಾಧ್ಯತೆಯಿಲ್ಲ.

ಪ್ರಶ್ನೆ :- ಅವರು ಕೆಳಗೆ ಎಲ್ಲಿಯವರೆಗೆ ಹೋಗಬಹುದಾಗಿದೆ ?

ಉತ್ತರ :- ಅವರದು ಗಮನ ಮಾಡುವ ಶಕ್ತಿಯಂತೂ ಬಹಳಷ್ಟು ಇದೆ, ಎಂದರೆ ಕೆಳಗೆ ಏಳನೆಯ ಪೃಥ್ವಿಯವರೆಗೆ ಹೋಗಬಹುದಾಗಿದೆ. ಆದರೆ ಅವರಿಗೆ ಗಮನ ಮಾಡುವ ಭಾವವೇ ಆಗುವುದಿಲ್ಲ, ಅವರು ಎಂದೂ ಗಮನ ಮಾಡಿ ಕೆಳಗೆ ಬರುವುದಿಲ್ಲ. ತೀರ್ಥಂಕರರ ಪಂಚ ಕಲ್ಯಾಣಕಗಳಲ್ಲಿಯೂ ಅವರು ಬರುವುದಿಲ್ಲ. ಸೌಧರ್ಮ ಇಂದ್ರನಂತೂ ಜನ್ಮ ಕಲ್ಯಾಣಕದ ಸಮಯದಲ್ಲಿ ಬಂದು ನೃತ್ಯ ಮಾಡುತ್ತಾನೆ, ಎಲ್ಲ ಇಂದ್ರರುಗಳು ಐದೂ ಕಲ್ಯಾಣಕಗಳಲ್ಲಿ ಪೂಜೆ ಮಾಡುತ್ತಾರೆ, ಸಮವಸರಣದಲ್ಲಿ ಭಗವಂತರ ದಿವ್ಯ ಧ್ವನಿಯನ್ನು ಆಲಿಸುತ್ತಾರೆ, ಹಾಗಾದರೆ ಅವರಲ್ಲಿ ಯಾರು ಶ್ರೇಷ್ಠರು ? ಅಲ್ಲಿ ಶ್ರೇಷ್ಠ ಅಥವಾ ಅಶ್ರೇಷ್ಠವೇನೂ ಇಲ್ಲ. ಇಬ್ಬರೂ ಚತುರ್ಥ ಗುಣಸ್ಥಾನವರ್ತೀ ಜೀವರಿದ್ದಾರೆ. ಇಲ್ಲಿಯೂ ಕೂಡ ಕೆಲವರು ಜೋರು ಜೋರಾಗಿ ಹಾಡುತ್ತ ಕುಣಿಯುತ್ತ ಭಗವಂತರ ಪೂಜೆ-ಸ್ತುತಿ ಮಾಡುತ್ತಾರೆ ಮತ್ತು ಕೆಲವರು ಶಾಂತಭಾವದಿಂದ ನಮಸ್ಕಾರಾದಿಗಳನ್ನು ಮಾಡುತ್ತಾರೆ, ಸ್ವಾಧ್ಯಾಯ ಮಾಡುತ್ತಾರೆ. ಬಾಹ್ಯ ಕ್ರಿಯೆಯಿಂದ ಯಾವ ಶ್ರೇಷ್ಠ-ಅಶ್ರೇಷ್ಠತೆಯಿಲ್ಲ, ಫಲವಂತೂ ಪರಿಣಾಮಗಳದ್ದು ಮತ್ತು ಅಭಿಪ್ರಾಯದ್ದು ದೊರಕುತ್ತದೆ.

ಪೂಜೆ, ಭಕ್ತಿ ಮೊದಲಾದ ಕ್ರಿಯೆಗಳು ಕಂಡು ಬರುತ್ತವೆ. ನಾವು ಬೇಕಾದರೆ ಯಾರಿಗಾದರೂ - ಬೇರೆಯವರಿಗೆ ತೋರಿಸುವ ಸಲುವಾಗಿ ಇವೆಲ್ಲ ಕ್ರಿಯೆಗಳನ್ನು ಮಾಡುತ್ತೇವೆ ಅಥವಾ ಬೇರೆಯವರ ಕ್ರಿಯೆಗಳನ್ನು ನೋಡಿ-ನೋಡಿ ಅವುಗಳಲ್ಲಿ ದೋಷಗಳನ್ನು ಹುಡುಕುತ್ತೇವೆ ಅದು ಸರ್ವಥಾ ತಪ್ಪು ಇದೆ. ನಮಗಂತೂ ನಮ್ಮ ಪರಿಣಾಮಗಳ ಅವಲೋಕನೆ ಮಾಡುವುದಿದೆ ಮತ್ತು ನಮ್ಮ ಕಲ್ಯಾಣ ಮಾರ್ಗವನ್ನು ಪ್ರಶಸ್ತಪಡಿಸಿಕೊಳ್ಳುವುದಿದೆ.

ಪ್ರಶ್ನೆ :- ಚಿತ್ರಾ ಪೃಥ್ವಿಯು ಎಲ್ಲಿದೆ ?

ಉತ್ತರ :- ರತ್ನಪ್ರಭಾ ಎಂಬ ಹೆಸರಿನ ಮೊದಲನೇ ಪೃಥ್ವಿಯ ಖರಭಾಗವು ಹದಿನಾರು ಸಾವಿರ ಯೋಜನ ದಪ್ಪವುಳ್ಳದ್ದಿದೆ. ಅದರಲ್ಲಿ ಒಂದೊಂದು ಸಾವಿರ ಯೋಜನ ದಪ್ಪವಿರುವ ಹದಿನಾರು ಪೃಥ್ವಿಗಳಿವೆ. ಅವುಗಳಲ್ಲಿನ ಎಲ್ಲಕ್ಕಿಂತ ಮೇಲಿನ ಮೊದಲನೆಯ ಪೃಥ್ವಿಯ ಹೆಸರು ಚಿತ್ರಾ ಇದೆ, ಎರಡನೆಯದು ವಜ್ರಾ ಇದೆ ಅವುಗಳ ಹೆಸರನ್ನು ಮೊದಲು ನೋಡಿ ಬಂದಿದ್ದೇವೆ. ನಾವೆಲ್ಲರೂ ಈ ಚಿತ್ರಾ ಪೃಥ್ವಿಯ ಮೇಲೆ ವಾಸವಾಗಿದ್ದೇವೆ.

ಪ್ರಶ್ನೆ :- ಖರಭಾಗ, ಪಂಕಭಾಗ ಮತ್ತು ಅಬ್ಬಹುಲಭಾಗ - ಇವು ಕೇವಲ ಮೊದಲನೆಯ ಪೃಥ್ವಿಯಲ್ಲಿಯೇ ಇವೆಯೋ ಅಥವಾ ಏಳೂ ಪೃಥ್ವಿಗಳಲ್ಲಿ ಕಂಡು ಬರುತ್ತವೆ ?

ಉತ್ತರ :- ಇವು ಮೂರು ಭಾಗಗಳು ಕೇವಲ ಮೊದಲನೆಯ ರತ್ನಪ್ರಭಾ ಪೃಥ್ವಿಯಲ್ಲಿಯೇ ಇವೆ. ಅನ್ಯ ಎರಡನೆಯ ಮೊದಲಾದ ಪೃಥ್ವಿಗಳಲ್ಲಿ ಇಲ್ಲ. ಅಲ್ಲಿ ಕೇವಲ ನರಕದ ಬಿಲಗಳೇ ಇರುತ್ತವೆ.

ಇನ್ನೊಂದು ಮಾರ್ಮಿಕವಾದ ಪ್ರಶ್ನೆಯೆಂದರೆ ದೇವಗಳಿಗೆ ಎಷ್ಟು ಸಾಗರ ವರ್ಷಗಳ ಆಯುವಿರುತ್ತದೆ ಅಷ್ಟು ಸಾವಿರ ವರ್ಷಗಳು ಕಳೆದ ಮೇಲೆ ಅವರಿಗೆ ಆಹಾರದ ಇಚ್ಛೆಯಾಗುತ್ತದೆ ಮತ್ತು ಅವರು ಆಹಾರ

ತಗೆದುಕೊಳ್ಳುತ್ತಾರೆ ಅರ್ಥಾತ್ ಅವರ ಕಂಠದಿಂದ ಅಮೃತವು ಸ್ರವಿಸುತ್ತದೆ ಹಾಗೂ ಅವರಿಗೆ ತೃಪ್ತಿಯಾಗುತ್ತದೆ. ಅವರ ಆಹಾರವು ನಮ್ಮ ಹಾಗೆ ಎಂದರೆ ಅವರಿಗೆ ನಮ್ಮ ಹಾಗೆ ಏನನ್ನೂ ಮಾಡಲೂ ಬೇಕಾಗುವುದಿಲ್ಲ ಮತ್ತು ಅವರು ತಿನ್ನುವುದೂ ಇಲ್ಲ ಅರ್ಥಾತ್ ಅವರಿಗೆ ಕವಲಾಹಾರವಿರುವುದಿಲ್ಲ. ಇದರ ಅನುಸಾರ ಸರ್ವಾರ್ಥಸಿದ್ಧಿಯ ದೇವಗಳ ಆಯುವು ಮೂವತ್ತೂರು ಸಾಗರದ್ದಿರುತ್ತದೆಯೆಂದ ಮೇಲೆ ಅವರಿಗೆ ಮೂವತ್ತೂರು ಸಾವಿರ ವರ್ಷಗಳಿಗೊಮ್ಮೆ ಆಹಾರದ ಇಚ್ಛೆಯಾಗುತ್ತದೆ. ಎಂದರೇನೆ ಆ ದೇವಗಳು ಇಷ್ಟುವರ್ಷಗಳವರೆಗೆ ಆಹಾರ ತಗೆದುಕೊಳ್ಳುವುದಿಲ್ಲವೆಂದ ಮೇಲೆ ಅದನ್ನು ತಪಸ್ಸೆಂದು ಹೇಳಬಹುದಾಗಿದೆ ಅಲ್ಲವೇನು ?

ಉತ್ತರ :- ದೇವಗಳು ಸಾವಿರಾರು ವರ್ಷಗಳವರೆಗೆ ಆಹಾರ ತಗೆದುಕೊಳ್ಳುವುದಿಲ್ಲ. ಅಷ್ಟೇ ಅಲ್ಲ; ಅವರಿಗಂತೂ ಇಷ್ಟು ವರ್ಷಗಳವರೆಗೆ ಆಹಾರದ ಇಚ್ಛೆಯೂ ಕೂಡ ಆಗುವುದಿಲ್ಲ. ಆದಾಗ್ಯೂ ಅವರಿಗೆ ತಪಸ್ಸು ಆಗುವುದಿಲ್ಲ, ಅದನ್ನು ತಪಸ್ಸೆಂದು ಹೇಳಲಾಗಿಲ್ಲ ಮತ್ತು ನಮಗಂತೂ ಬಹಳಷ್ಟು ಇಚ್ಛೆಯಾಗುತ್ತದೆ, ಬಹಳಷ್ಟು ಹಸಿವೆಯಾಗುತ್ತದೆ ಆದಾಗ್ಯೂ ನಾವು ಇಚ್ಛೆಗಳನ್ನು ಅದುಮಿ-ಅದುಮಿ ಇಪ್ಪತ್ನಾಲ್ಕು ಗಂಟೆಯ ಉಪವಾಸ ಮಾಡುತ್ತೇವೆ. ಊಟ-ತಿಂಡಿ ಮಾಡದಿದ್ದರೆ ನಾವು ತಪಸ್ಸು ಮಾಡಿದೆವೆಂದು ನಮಗೆನಿಸುತ್ತದೆ. ದಶಲಕ್ಷಣ ಪರ್ವದಲ್ಲಿ - ಪರ್ಯೂಷಣ ಪರ್ವದಲ್ಲಿ ಒಂದು, ಐದು, ಹತ್ತು ದಿವಸಗಳ ಉಪವಾಸ ಮಾಡಿ ನಾವು ಮಹಾ ತಪಸ್ಸು ಮಾಡಿದ್ದೇವೆಂದು ಮನ್ನಿಸುತ್ತೇವೆ. ನಾವು ಭೋಜನ ಮಾಡದಿರುವುದರ ಹೆಸರು ತಪವೆಂದು ತಿಳಿದಿದ್ದೇವೆ, ಆದುದರಿಂದ ದೇವಗಳು ಸಾವಿರಾರು ವರ್ಷಗಳವರೆಗೆ ಭೋಜನವನ್ನೇ ಮಾಡುವುದಿಲ್ಲವೆಂದ ಮೇಲೆ ಅವರಿಗೆ ತಪಸ್ಸು ಹೇಗಾಗುವುದಿಲ್ಲವೆಂಬ ಪ್ರಶ್ನೆಯು ನಮ್ಮಲ್ಲಿ ಉತ್ಪನ್ನವಾಗುತ್ತಿದೆ.

ತಪವೆನ್ನಿರಿ ಅಥವಾ ಸಂಯಮವೆನ್ನಿರಿ ಅದಂತೂ ಅಂತರಂಗದಲ್ಲಿ ಯಾವ ಮುನಿಯೋಗ್ಯ ಸ್ಥಿರತೆಯಾಗುತ್ತದೆ ಅದಕ್ಕೆ ಹೇಳಿದ್ದಾರೆ. ಯಾವುದನ್ನು ಉಪವಾಸವೆನ್ನುವುದು ? ಉಪ ಅರ್ಥಾತ್ ಹತ್ತಿರ ಮತ್ತು ವಾಸ ಅರ್ಥಾತ್ ಇರುವುದು ತಮ್ಮ ಆತ್ಮನ ಹತ್ತಿರ ಇರುವುದು ಅರ್ಥಾತ್ ಆತ್ಮನಲ್ಲಿ ಲೀನವಾಗಿರುವುದು. ಇಂಥ ಅವಸ್ಥೆಯಲ್ಲಿ ಬಾಹ್ಯದೊಳಗೆ ಆಹಾರಾದಿಗಳ ವಿಕಲ್ಪವು ಬಾರದಿರುವುದು. ಇಚ್ಛೆಯೇ ಉತ್ಪನ್ನವಾಗದಿರುವುದು. ಇಚ್ಛೆಯು ಉತ್ಪನ್ನವಾಗದಿರುವುದರ ಹೆಸರು 'ಇಚ್ಛಾನಿರೋಧಸ್ತಪಃ' ಇದೆ, ಇಚ್ಛೆಯನ್ನು ಅದುಮಿ ಇಡುವುದರ ಹೆಸರು ತಪವಲ್ಲ. ಉಪವಾಸದಲ್ಲಿಯಂತೂ ಕಷಾಯ ಹಾಗೂ ಆಹಾರವನ್ನು ಕಡಿಮೆ ಮಾಡುವುದಿರುತ್ತದೆ. ನಾವುಗಳು ಉಪವಾಸದ ಹೆಸರಿನಲ್ಲಿ ಭೋಜನವನ್ನಂತೂ ಬಿಟ್ಟು ಬಿಡುತ್ತೇವೆ ಆದರೆ ಕಷಾಯಗಳ ವೃದ್ಧಿಯಾಗುತ್ತಿರುತ್ತದೆ. ಕೆಲವರಂತೂ ಹೊತ್ತು ಕಳೆಯುವ ಸಲುವಾಗಿ ಅಂಗಡಿಗೆ ಹೋಗುತ್ತಾರೆ. ಮನೆಯಲ್ಲೂ ಹೆಚ್ಚಿನ ಕೆಲಸ ತಗೆಯುತ್ತಾರೆ. ಇಸ್ಪೀಟು ಆಡುತ್ತಾರೆ. ವರ್ತಮಾನದಲ್ಲಂತೂ ದೂರದರ್ಶನದ ಎದುರಿಗೆ ಕುಳಿತು ಜೀವನದ ಅಮೌಲ್ಯ ಸಮಯವನ್ನು ಹಾಳು ಮಾಡಿಕೊಳ್ಳುತ್ತಾರೆ.

ಕೆಲವರು ಸ್ವಾಧ್ಯಾಯವನ್ನೂ ಮಾಡುತ್ತಾರೆ, ಆದರೆ ಅದು ಮುನಿಯೋಗ್ಯ ತಪವಲ್ಲ; ಏಕೆಂದರೆ ತಪಸ್ಸಿನ ಫಲವಂತೂ ನಿರ್ಜರೆಯಿದೆ. ತತ್ತ್ವಾರ್ಥಸೂತ್ರದಲ್ಲಿ 'ತಪಸಾ ನಿರ್ಜರಾಚ' ಎಂಬ ಸೂತ್ರವು ಬಂದಿದೆಯಲ್ಲವೇನು ಎಂದರೇನೆ ಯಾವ ಅಜ್ಞಾನಿ, ಮಿಥ್ಯಾದೃಷ್ಟಿಯು ಭೋಜನದ ತ್ಯಾಗ ಮಾಡುತ್ತಿದ್ದರೆ ಅವನಿಗೆ ಅದರಿಂದ ಎಷ್ಟು ನಿರ್ಜರೆಯಾಗುತ್ತದೆ ! ಉಪವಾಸಗಳನ್ನು ಮಾಡಿ ಮಾಡಿ ಬಹಳಷ್ಟು ಕೃಶವಾಗಿ ಹೋದರೆ ಅವರಿಗೆ ಬಹಳಷ್ಟು ನಿರ್ಜರೆಯಾಗುತ್ತಿರಬಹುದೇನು ? ಇಲ್ಲ, ವಾಸ್ತವಿಕತೆಯು ಹಾಗಿಲ್ಲ. ಮಿಥ್ಯಾತ್ವ ಅವಸ್ಥೆಯಲ್ಲಿ ಯಾವುದೇ ಕ್ರಿಯೆ

ಮಾಡಿದರೂ ಅದರಿಂದ ಅವನಿಗೆ ನಿರ್ಜರೆಯಾಗುವುದೇ ಇಲ್ಲ. ನಿರ್ಜರೆಯ ಪ್ರಾರಂಭವಂತೂ ನಾಲ್ಕನೆಯ ಗುಣಸ್ಥಾನದಿಂದ ಆಗುತ್ತದೆ ಮತ್ತು ಯಾವುದನ್ನು ತಪಸ್ಸು ಮತ್ತು ಸಂಯಮವೆಂದು ಹೇಳುತ್ತಾರೆ ಅದು ಆರನೆಯ ಗುಣಸ್ಥಾನದಿಂದ ಹಿಡಿದು ಮೇಲಿನ ಗುಣಸ್ಥಾನಗಳಲ್ಲಿ ಆಗುತ್ತದೆ.

ದೇವಗಳಿಗೆ ಸಮ್ಯಕ್ತ್ವಂತೂ ಆಗುವ ಸಾಧ್ಯತೆಯಿದೆ ಆದರೆ ಅವರ ಗುಣಸ್ಥಾನವು ನಾಲ್ಕನೆಯದೇ ಉಳಿಯುತ್ತದೆ, ಮೇಲಿನ ಗುಣಸ್ಥಾನಗಳಾಗುವುದಿಲ್ಲ. ಆದುದರಿಂದ ಅವರಿಗೆ ತಪಸ್ಸು ಆಗುವುದೇ ಇಲ್ಲ. ನಾಲ್ಕನೆಯ ಗುಣಸ್ಥಾನದವರೆಗೆಯಂತೂ ಅಸಂಯಮವಿದೆ. ಭೋಜನ ಮಾಡದೇ ಇರುವುದನ್ನು ಸಂಯಮ ಅಥವಾ ತಪಸ್ಸು ಎಂದು ಹೇಳುವುದಿಲ್ಲ ಮತ್ತು ವಸ್ತ್ರ ಪರಿಧಾರಣೆ ಮಾಡದಿರುವುದನ್ನು ಸಂಯಮವೆಂದು ಹೇಳುವುದಿಲ್ಲ. ಸಂ+ಯಮ ಅರ್ಥಾತ್ ಸಮ್ಯಕ್ ರೂಪದಿಂದ ಯಾರು ತಮ್ಮ ಆತ್ಮನಲ್ಲಿ ಸ್ಥಿತರಿದ್ದಾರೆ ಆ ಮುನಿರಾಜರಿಗೆ ಸಂಯಮವಾಗುತ್ತದೆ. ತಮ್ಮ ಆತ್ಮನಲ್ಲಿ ಸ್ಥಿರತೆಯಾಗುವುದೇ ನಿಜವಾದ ಆರಾಧನೆಯಿದೆ, ಅದುವೇ ಸಾಮಾಯಿಕವಿದೆ, ಅದುವೇ ಆಲೋಚನವಿದೆ, ಅದುವೇ ಪ್ರತಿಕ್ರಮಣವಿದೆ, ಅದುವೇ ಪ್ರತ್ಯಾಖ್ಯಾನವಿದೆ, ಅದುವೇ ಸಮಾಧಿ ಮೊದಲಾದವು ಇದೆ.

ಪ್ರಶ್ನೆ :- ಆತ್ಮನ ದೃಷ್ಟಿ ಮಾಡುವುದಿದೆಯೆಂದು ತಾವು ಹೇಳುತ್ತೀರಿ ಮತ್ತು ಇವೆಲ್ಲವೂ ಹೊರಗಿನ ಮಾತುಗಳಿವೆ; ಹಾಗಾದರೆ ನಾವು ಆತ್ಮನಲ್ಲಿ ಹೋಗಬೇಕೋ ಅಥವಾ ಬಾಹ್ಯದಲ್ಲಿ ವಿಹರಿಸಬೇಕು ?

ಉತ್ತರ :- ತಾವು ಆತ್ಮನಲ್ಲಿ ಹೋಗಬಯಸುತ್ತಿದ್ದರೆ ಈಗ ತಾವು ಎಲ್ಲಿರುವಿರಿ ಮತ್ತು ಯಾರಿರುವಿರಿ ? ನಮಗೆ ಎಲ್ಲಿಯೂ ಒಳಗೆ ಅಥವಾ ಹೊರಗೆ ಹೋಗುವುದಿಲ್ಲ. ಅಯ್ಯಾ ! ನಾವು ಸ್ವಯಂ ಆತ್ಮರೇ ಇದ್ದೇವೆ.

ಪ್ರಶ್ನೆ :- ಹಾಗಾದರೆ ಲೋಕಾಕಾಶದ ಸ್ವರೂಪವನ್ನು ತಿಳಿಯುವ ಸಲುವಾಗಿ ನಾವು ಬಾಹ್ಯದೃಷ್ಟಿ ಮಾಡುವುದಿದೆಯೋ ಅಥವಾ ನಮ್ಮ ದೃಷ್ಟಿಯನ್ನು ಆಂತರ್ಯದ ಕಡೆಗೆ ಮಾಡುವುದಿದೆ ?

ಉತ್ತರ :- ವಾಸ್ತವದಲ್ಲಿ ಜೀವರುಗಳಿಗೆ ಜ್ಞಾನವೆಂದರೇನು ಮತ್ತು ದೃಷ್ಟಿಯೆಂದರೇನು ? - ಎಂಬ ಮಾತುಗಳ ಪರಿಚಯವೇ ಇಲ್ಲದಿರುವುದರಿಂದ ಇಂಥ ಪ್ರಶ್ನೆಗಳು ಉದಿತವಾಗುತ್ತವೆ. ಈ ತ್ರಿಲೋಕಸಾರದ ಹಾಗೂ ಅನ್ಯ ಆಗಮ ಗ್ರಂಥಗಳ ರಚನೆಯನ್ನು ಮುನಿರಾಜರುಗಳು ಮಾಡಿದ್ದಾರೆ, ಹಾಗಾದರೆ ಅವರ ದೃಷ್ಟಿಯು ಆಂತರ್ಯದಲ್ಲಿ ಇತ್ತೋ ಅಥವಾ ಬಾಹ್ಯದ ಕಡೆಗೆ ಇತ್ತು ? ಬಾಹ್ಯ ವಸ್ತುಗಳ ಜ್ಞಾನವಿರುವುದನ್ನು ಬಾಹ್ಯದೃಷ್ಟಿಯೆಂದು ಹೇಳುವುದಿಲ್ಲ. ದೃಷ್ಟಿಯೆಂದಂತೂ ಶ್ರದ್ಧೆಗೆ - ಪ್ರತೀತಿಗೆ ಹೇಳುತ್ತಾರೆ. ದೃಷ್ಟಿ ಅರ್ಥಾತ್ ಯಾವುದರಲ್ಲಿ ನಾವು 'ನಮ್ಮತನ'ವನ್ನು ಸ್ಥಾಪಿತಗೊಳಿಸುತ್ತೇವೆ ಅದು ಇದೆ. ನಮ್ಮ ಶುದ್ಧಾತ್ಮ ಸ್ವರೂಪದಲ್ಲಿ ತ್ರಿಕಾಲೀ ಸ್ವಭಾವದಲ್ಲಿ 'ನನ್ನತನವಾಗುವುದನ್ನು ಸಮ್ಯಕ್ ದೃಷ್ಟಿ ಅರ್ಥಾತ್ ಯಥಾರ್ಥ ದೃಷ್ಟಿಯೆಂದು ಹೇಳುತ್ತಾರೆ ಹಾಗೂ ಬಾಹ್ಯ ವಸ್ತುಗಳಲ್ಲಿ ರಾಗಾದಿ ಭಾವಗಳಲ್ಲಿ 'ನನ್ನ'ತನದ ಸ್ಥಾಪನೆ ಮಾಡುವುದನ್ನು ಬಹಿರ್ದೃಷ್ಟಿ-ಮಿಥ್ಯಾದೃಷ್ಟಿಯೆಂದು ಹೇಳುತ್ತಾರೆ.

ಸಮಯಸಾರ ಗ್ರಂಥದಲ್ಲಿ ದೃಷ್ಟಿ ಪ್ರಧಾನ ಕಥನವಿದೆ, ದೃಷ್ಟಿಯ ವಿಷಯನಾದ ಯಾವ ತನ್ನ ಶುದ್ಧಾತ್ಮನಿದ್ದಾನೆ ಅವನ ಚರ್ಚೆಯಿದೆ. ಪ್ರವಚನಸಾರದಲ್ಲಿ ಜ್ಞಾನಪ್ರಧಾನ ಕಥನವಿದೆ. ಅದರಲ್ಲಿ ಆರು ದ್ರವ್ಯಗಳು, ಅವುಗಳ ಸ್ವರೂಪ, ಉತ್ಪಾದ-ವ್ಯಯ-ಧ್ರುವತೆ ಹೀಗೆ ಎಲ್ಲ ಜ್ಞೇಯಗಳ ಹಾಗೂ ಜ್ಞಾನದ ವರ್ಣನೆಯಿದೆ. ಈ

ಲೋಕಾಲೋಕವು ನಮ್ಮ ಜ್ಞಾನದ ಜ್ಞೇಯವಿದೆ ಮತ್ತು ಆತ್ಮನು ಜ್ಞೇಯವನ್ನು ತಿಳಿಯುವಂಥವನಿದ್ದಾನೆ. ನಾನು ಆತ್ಮನಿದ್ದೇನೆ ಈ ಎಲ್ಲ ಪದಾರ್ಥಗಳು ನನ್ನ ಜ್ಞೇಯವಿವೆ, ಇವೇನು ನನ್ನ ಭೋಗ್ಯ ಅಥವಾ ಉಪಭೋಗ್ಯಗಳಲ್ಲ ಎಂದರೇನೆ ನಾವು ಇವುಗಳ ಕರ್ತೃ ಅಥವಾ ಭೋಕ್ತವಿಲ್ಲ. ನಾನು ಜ್ಞಾನನಿದ್ದೇನೆ, ಇವು ಜ್ಞೇಯವಿವೆ. ಇವು ನನ್ನಿಂದ ಭಿನ್ನವಿವೆ. 'ಮೂರು ಲೋಕದ ಸ್ಥಿತಿಯನ್ನು ತಿಳಿದುಕೊಂಡು....' ಎಂದು ಮಂಗಲಾಚರಣೆಯಲ್ಲಿ ಬರುತ್ತದೆಯಲ್ಲವೇನು ? ತಾವುಗಳು ತಮ್ಮ ಸ್ವರೂಪದಿಂದ ಇರುವಿರಿ, ನಾನು ನನ್ನ ಸ್ವರೂಪದಿಂದ ಇದ್ದೇನೆ. ಎಲ್ಲ ವಸ್ತುಗಳು ನನ್ನಿಂದ ಭಿನ್ನವಿವೆ, ಪರಸ್ಪರ - ಒಂದು ಇನ್ನೊಂದರಿಂದ ಭಿನ್ನವಿವೆ. ಇವೆಲ್ಲ ಭಿನ್ನ ವಸ್ತುಗಳನ್ನು ತಿಳಿಯುವಂಥವನು ನಾನಿದ್ದೇನೆ. ಈ ವಸ್ತುಗಳು ಜ್ಞಾನದಲ್ಲಿ ಬರುತ್ತವೆ, ಇವುಗಳಿಂದಂತೂ ಜ್ಞಾನದ ಸಿದ್ಧಿಯಾಗುತ್ತದೆ.

ಅದರಿಂದ ತನ್ನನ್ನು ತನ್ನ ರೂಪದಿಂದ ಮತ್ತು ಪರವಸ್ತುಗಳನ್ನು ಪರರೂಪದಿಂದ ತಿಳಿಯುವುದು ಅದು ಸ್ವ-ಪರ ಭೇದ ವಿಜ್ಞಾನವಿದೆ. ಸ್ವ ಹಾಗೂ ಪರವನ್ನು ತಿಳಿಯುವುದು ಅದಂತೂ ಜ್ಞಾನದ ಕಾರ್ಯವಿದೆ ಮತ್ತು ನಾನು ನನ್ನ ಸ್ವರೂಪವಿದ್ದೇನೆಂದು ಸ್ವೀಕಾರ- ಅಂಥ ಪ್ರತೀತಿಯಾಗುವುದು ಅದು ದೃಷ್ಟಿಯ ಕಾರ್ಯವಿದೆ. ಯಾವಾಗ ಇಂಥ ದೃಷ್ಟಿಯಾಗುತ್ತದೆ ಆಗ ಜ್ಞಾನವು ಅದೇನು ವಿಶ್ರಮಿಸುತ್ತಿರುತ್ತದೆಯೇನು ? ಈಗ ದೃಷ್ಟಿಯ ಕಾರ್ಯವು ನಡೆಯುತ್ತಿದೆಯೆಂದ ಮೇಲೆ ಜ್ಞಾನಕ್ಕೆ ಸ್ವಲ್ಪ ಬಿಡುವು ದೊರಕುತ್ತಿರಬಹುದೇನು ? ಅಯ್ಯಾ, ಜ್ಞಾನವಂತೂ ತಿಳಿಯುವ ಕಾರ್ಯವನ್ನು ಮಾಡುತ್ತಲೇ ಇರುತ್ತದೆ. ಪ್ರತಿಯೊಂದು ಗುಣದಲ್ಲಿ ನಿರಂತರ ಪರಿಣಮನವಾಗುತ್ತದೆ. ನಾನು ಸ್ವಸ್ವರೂಪನಿದ್ದೇನೆಂಬ ದೃಷ್ಟಿಯು ಯಾವಾಗ ಆಗುತ್ತದೆ ಆಗ ಜ್ಞಾನವು ಸ್ವವನ್ನೂ ತಿಳಿಯುತ್ತದೆ ಮತ್ತು ಪರವನ್ನು ಕೂಡ ತಿಳಿಯುತ್ತದೆ - ಸ್ವವನ್ನು ಸ್ವರೂಪದಿಂದ ತಿಳಿಯುತ್ತದೆ ಮತ್ತು ಪರವನ್ನು ಪರರೂಪದಿಂದ ತಿಳಿಯುತ್ತದೆ. ದೃಷ್ಟಿಯು ದೃಷ್ಟಿಯ ಕಾರ್ಯ ಮಾಡುತ್ತದೆ ಮತ್ತು ಜ್ಞಾನವು ಜ್ಞಾನದ ಕಾರ್ಯ ಮಾಡುತ್ತದೆ.

ಶಾಲೆಯಲ್ಲಿ ನಾವು ನಮ್ಮ ಮಗುವನ್ನು ಕರೆದುಕೊಂಡು ಬರುವ ಸಲುವಾಗಿ ಹೋಗುತ್ತೇವೆ ಅಲ್ಲಿ ನೂರಾರು ಮಕ್ಕಳು ನಮ್ಮ ಜ್ಞಾನದಲ್ಲಿ ಬರುತ್ತಾರೆ, ಅವರಲ್ಲಿ ನಮ್ಮ ಮಗನೂ ಇದ್ದಾನೆ ಅವನನ್ನೂ ತಿಳಿಯುತ್ತೇವೆ, ಆದರೆ ಅವನನ್ನು ಇವನು 'ನಮ್ಮವನಿದ್ದಾನೆ' ಎಂದು ತಿಳಿಯುತ್ತೇವೆ-ಮನ್ನಿಸುತ್ತೇವೆ.

ನನ್ನ ಕೈಯಲ್ಲಿ ಲೆಕ್ಕಣಿಕೆ ಇದ್ದು ನಾನು ಅದನ್ನು ಎದುರಿಗಿನ ವ್ಯಕ್ತಿಯ ಎದುರು ಹಿಡಿದು ತೋರಿಸುತ್ತ 'ತಮಗೆ ಏನು ಕಾಣಿಸುತ್ತಿದೆ ?' ಎಂದು ಕೇಳಿದರೆ - ''ನನಗೆ ಲೆಕ್ಕಣಿಕೆ ಕಾಣಿಸುತ್ತಿದೆ' ಎಂದು ಆ ವ್ಯಕ್ತಿಯು ಉತ್ತರಿಸುತ್ತಾನೆ. ಆ ವ್ಯಕ್ತಿಯ 'ನನಗೆ' ಕಾಣಿಸುತ್ತಿದೆಯೆಂಬುದರ ಅರ್ಥವು ಆ ವ್ಯಕ್ತಿಯು ತಿಳಿಯುತ್ತಿದ್ದಾನೆ. ನನ್ನ ಪಕ್ಕದಲ್ಲಿರುವಂಥವನಿಗೆ ಕಾಣಿಸುತ್ತಿದೆಯೆಂದಂತೂ ಆ ವ್ಯಕ್ತಿಯು ಹೇಳುವುದಿಲ್ಲ. ಎಷ್ಟೊಂದು ವಿಷಯಗಳು ನಮ್ಮ ತಿಳಿವಳಿಕೆಯಲ್ಲಿ ಬರುತ್ತವೆ ಅಲ್ಲಿಯಂತೂ 'ನನ್ನ' ತಿಳಿವಳಿಕೆಯಲ್ಲಿ - ಜ್ಞಾನದಲ್ಲಿ ಬರುತ್ತಿದೆ - ಎಂಬುದಾಗಿ ಅನುಭವವು ಎಲ್ಲ ಜೀವರುಗಳಿಗೆ ಆಗುತ್ತದೆ. ಈ ಜ್ಞಾಯಕನು - ತಿಳಿಯುವಂಥ ಆತ್ಮನು ಆಬಾಲಗೋಪಾಲ ಎಲ್ಲರ ಜ್ಞಾನದಲ್ಲಿ ಬರುತ್ತಿದ್ದಾನೆ; ಆದರೆ ಇವನೇ ನಾನಿದ್ದೇನೆಂಬ ಪ್ರತೀತಿಯಾಗುತ್ತಿಲ್ಲ. ನಾವು ಎಲ್ಲವನ್ನೂ ತಿಳಿಯುವುದರ ನಿಷೇಧ ಮಾಡಿ ನಮ್ಮ ಜ್ಞಾನಲಕ್ಷಣವನ್ನು ನಾಶಮಾಡಲು ಇಚ್ಛಿಸುತ್ತಿದ್ದೇವೆ. ಅದು ನಾಶವಾಗುವುದಿಲ್ಲ ಆದರೆ ನಮ್ಮ ಅಭಿಪ್ರಾಯದಲ್ಲಿ ನಾವು ಹಾಗೆ ಮನ್ನಿಸಿಕೊಳ್ಳುತ್ತೇವೆ.

ನಮಗೆ ಎಲ್ಲಿಯೂ ಒಳಗೆ-ಹೊರಗೆ ಮಾಡಬೇಕಾಗಿಲ್ಲ. ನಾವಂತೂ ಒಳಗೆ ಮತ್ತು ಒಳಗೇ ಇದ್ದೇವೆ ಹೊರಗೆ ಎಲ್ಲಿಯೂ ಹೋಗಿಯೇ ಇಲ್ಲ. ನಾನು ಜ್ಞಾನಸ್ವರೂಪನಿದ್ದೇನೆ, ಜ್ಞಾನಮಾತ್ರನೇ ಇದ್ದೇನೆ - ಎನ್ನುವ ದೃಷ್ಟಿ - ಪ್ರತೀತಿಯು ಉಳಿದು ಬಿಡಬೇಕಾಗಿದೆ. ಪರವನ್ನು ತಿಳಿಯುವುದರಿಂದ ಯಾವುದೇ ಹಾನಿಯಾಗುವುದಿಲ್ಲ. ಇವೆಲ್ಲ ವಸ್ತುಗಳನ್ನು ತಿಳಿಯುವ ಕಾರ್ಯವು ನಿಂತುಹೋದರೆ ನಾವು ಆತ್ಮನಲ್ಲಿ ಹೊರಟು ಹೋಗಬಹುದಾಗಿದೆಯೆಂದು ಅಜ್ಞಾನಿಗಳು ಮನ್ನಿಸುತ್ತಾರೆ, ಆದರೆ ಆ ಮನ್ನಣೆಯು ವಿಪರೀತವಿದೆ. ಯಾವನು ಎಲ್ಲವನ್ನೂ ತಿಳಿಯುತ್ತಾನೆ ಅವನೇ ನಾನಿದ್ದೇನೆ. ಆ 'ನನ್ನ' ದೃಷ್ಟಿ ಮಾಡುವುದಿದೆ. ದೃಷ್ಟಿ ಮತ್ತು ಜ್ಞಾನದ ಭೇದವನ್ನು ತಿಳಿಯದಿರುವುದರಿಂದ ಈ ಪ್ರಶ್ನೆಯು ಉತ್ಪನ್ನವಾಗಿದೆ.

ಪ್ರಶ್ನೆ :- ಈ ಯಾವ ತ್ರಸನಾಳಿಯಿದೆ ಅದು ಬಾಹ್ಯದ ರಚನೆಯಿದೆ, ಹಾಗೆ ನಮ್ಮ ಒಳಗೆಯೂ ರಚನೆಯಿದೆಯೆಂದು ಹೇಳಬೇಕಾಗುವುದಲ್ಲವೇನು ? ಹೇಗೆ ಬಾಹ್ಯದಲ್ಲಿ ಈ ತ್ರಸನಾಳಿಯಿದೆ ಹಾಗೆ ನಮ್ಮಲ್ಲಿಯೂ ಕೋಟಿ ರಜ್ಜು ಮಜ್ಜಾರಜ್ಜೂ(ಸ್ಪಾಯನಲ್ ಕಾರ್ಡ್)ಇದೆಯಲ್ಲವೇನು ?

ಉತ್ತರ :- ಈ ಮಜ್ಜಾರಜ್ಜೂ (ಮೂಳೆಯೊಳಗಿರುವ ನೆಣ) ಅದು ಶರೀರದ ಅಂಗವಿದೆಯೋ ಅಥವಾ ಆತ್ಮನದು ? ಶರೀರವು ನಾನಿದ್ದೇನೆಂಬ ಮನ್ನಣೆಯೊಂದಿಗೆ ಇದೆಲ್ಲ ಭ್ರಾಂತಿಯು ನಡೆಯುತ್ತಿದೆ. ಯಾವುದಾದರೂ ರಕ್ತದ ಧಮನಿಯು ಜಾಗೃತವಾಗುತ್ತದೆಯೆಂಬ ಮಾನಸಿಕ ಗೊಂದಲವನ್ನು ಬಿಟ್ಟು ಬಿಡೋಣ. ನಮ್ಮ ಸ್ವರೂಪದ ಕುರಿತಾಗಿ ಈಗ ನಾವು ಜಾಗೃತರಾಗಬೇಕಾಗಿದೆ; ಅದರಲ್ಲಿ ಯಾವುದು ಆಗಬೇಕಾಗಿದೆಯೋ ಅದುವೇ ಆಗುತ್ತದೆ, ಶರೀರದ ಅಂಥ ರಚನೆಯಿಂದ ನಮಗೆ ಯಾವ ಲಾಭ-ಹಾನಿಯಾಗುವುದಿಲ್ಲ. ಶರೀರವಂತೂ ಅತ್ಯಂತ ಭಿನ್ನವಾದ ಪರಪದಾರ್ಥವಿದೆ, ನಾವಂತೂ ಕೇವಲ ಈಗ ಅದರ ಮೂಲಕ ಗುರುತಿಸ್ಪಡುತ್ತಿದ್ದೇವೆ - ಬೇರೆಯವರು ಈ ಶರೀರದ ಮೂಲಕ ನಮ್ಮನ್ನು ಗುರುತಿಸುತ್ತಿದ್ದಾರೆ ಆದರೆ ಇದು ನಮ್ಮ ನಿಜವಾದ ಪರಿಚಯವಲ್ಲ.

ಎಲ್ಲಿ ನಮ್ಮ ಆತ್ಮ ಪ್ರದೇಶಗಳಿವೆ ಅಲ್ಲಿಯೇ ಶರೀರದ ಪರಮಾಣುಗಳಿವೆ ಮತ್ತು ಅವುಗಳಲ್ಲಿಯೂ ಅನಂತ ಪರಮಾಣುಗಳು ಬರುತ್ತಿರುತ್ತವೆ ಹೋಗುತ್ತಿರುತ್ತವೆ. ಹೇಗೆಂದರೆ ಅನಂತ ಕರ್ಮ ಪರಮಾಣುಗಳು ಪ್ರತಿಸಮಯ ಬಂಧಿಸುತ್ತಿರುತ್ತವೆ ಮತ್ತು ಉದುರಿ ಹೋಗುತ್ತಿರುತ್ತವೆಯೆಂಬುದನ್ನು ನಾವು ಕರ್ಮಗಳ ಸಂಬಂಧದಲ್ಲಿ ತಿಳಿದುಕೊಂಡಿದ್ದೆವು, ಹಾಗೆಯೇ ಶರೀರದ ಪರಮಾಣುಗಳು ಕೂಡ ಪ್ರತಿಸಮಯ ಅನಂತ ಸಂಖ್ಯೆಯಲ್ಲಿ ಬರುತ್ತಿರುತ್ತವೆ ಮತ್ತು ಯಾವವು ಇವೆ ಅವುಗಳೊಳಗಿಂದ ಅನಂತ ಪರಮಾಣುಗಳು ಹೊರಟು ಹೋಗುತ್ತಿರುತ್ತವೆ ನಾವಂತೂ ಕನ್ನಡಿಯಲ್ಲಿ ನೋಡಿಕೊಂಡು ಎಲ್ಲವೂ ಸರಿಯಾಗಿದೆ ನಾನು ಹಾಗೆಯೇ ಇದ್ದೇನೆಂದು ಮನ್ನಿಸಿಕೊಂಡಿದ್ದೇವೆ.

ಹೇಗೆ ನಾವು ನಮ್ಮೂರಿನ ನದಿಯನ್ನು ಕಳೆದ ಅನೇಕ ವರ್ಷಗಳಿಂದ ನೋಡುತ್ತ ಬರುತ್ತಿದ್ದೇವೆ. ಅದು ಹೇಗಿದೆಯೋ ಹಾಗೇ ಕಂಡು ಬರುತ್ತದೆ. ಆದರೆ ತಾವು ಅರ್ಧ ಗಂಟೆ ನದಿಯ ದಡದಲ್ಲಿ ನಿಂತುಕೊಂಡು ನೋಡಿದರೆ ಅದೇ ನೀರು ಇದೆಯೋ ಅಥವಾ ಇಲ್ಲವೆಂಬುದು ತಿಳಿದು ಬರುತ್ತದೆ. ಅದು ಹೇಗಿದೆಯೋ ಹಾಗೇ ಕಂಡು ಬಂದರೂ ಅರ್ಧ ಗಂಟೆ ಮೊದಲು ತಾವು ನೋಡಿದ ನೀರು ಈಗ ಮೈಲಿಗಟ್ಟಲೆ ದೂರಕ್ಕೆ ಹೊರಟು ಹೋಗಿದೆ ಅಲ್ಲದೆ ಪ್ರವಾಹ ರೂಪದಿಂದ ಹೊಸ ನೀರು ಬಂದಿದೆ. ಶರೀರದಲ್ಲಿಯೂ ಹೊಸ-ಹೊಸ ಅನಂತ

ಪರಮಾಣುಗಳು ಬರುತ್ತವೆ ಮತ್ತು ಹಳೆಯ ಪರಮಾಣುಗಳೊಳಗಿಂದ ಅನಂತ ಪರಮಾಣುಗಳು ಹೊರಟು ಹೋಗುತ್ತವೆಯೆಂದ ಮೇಲೆ ನಾವು ಯಾರ ಹುಟ್ಟುಹಬ್ಬವನ್ನು ಆಚರಿಸುತ್ತೇವೆ ? ಅದು ಕೂಡ ಬರೇ ಹುಟ್ಟು ಹಬ್ಬವಲ್ಲ (ಹ್ಯಾಪಿ ಬರ್ಥಡೇ) ಇಲ್ಲಿಯಂತೂ ಯಾವಾಗಲೂ ಮತ್ತು ಇದ್ದಕ್ಕಿದ್ದಂತೆ ಇರುವಂಥ ನಾನು ಸ್ವಯಂ ಆತ್ಮನಿದ್ದು ಶಾಶ್ವತನಿದ್ದೇನೆ, ಆದರೆ ಶರೀರವನ್ನು ನನ್ನದೆಂದು, ಅಲ್ಲ ನಾನೆಂದು ಮನ್ನಿಸಿ ಅದರ ಗುಲಾಮಗಿರಿಯಲ್ಲಿ ಪರಮ ಆನಂದ ಮನ್ನಿಸುವಂಥವರಿಗೆ ಇಷ್ಟು ವಿಚಾರವಾದರೂ ಎಲ್ಲಿಂದ ತಾನೆ ಬರುತ್ತದೆ ?

ಪ್ರಶ್ನೆ :- ಅನುಪ್ರೇಕ್ಷೆಯೆಂದರೇನು ? ಆತ್ಮಚಿಂತನೆ ಮಾಡುವುದು ಎಂದರೆ ಯಾವ ಅನುಪ್ರೇಕ್ಷೆಯ ಅವಲಂಬನೆಯನ್ನು ಅಧಿಕ ಮಾಡಬೇಕು ? ಆತ್ಮಚಿಂತನೆ ಮತ್ತು ಅನುಪ್ರೇಕ್ಷೆಗಳ ಚಿಂತನದಲ್ಲಿ ಎಷ್ಟು ಸಮಯ ಕಳೆಯಬೇಕು ?

ಉತ್ತರ :- ನೋಡಿರಿ, ಯಾವಾಗ ಶಾಸ್ತ್ರಸ್ವಾಧ್ಯಾಯವಾಗುತ್ತದೆ ಆಗ ಇಂಥ ಪ್ರಶ್ನೆಗಳು ಉತ್ಪನ್ನವಾಗುವುದಿಲ್ಲ, ಆದರೆ ಪ್ರಶ್ನೆಗಳು ಉತ್ಪನ್ನವಾಗುತ್ತಿದ್ದರೆ ನಾವು ಸರಿಯಾಗಿ ಸ್ವಾಧ್ಯಾಯ ಮಾಡಬೇಕು; ಆಗ ಎಲ್ಲ ಪ್ರಶ್ನೆಗಳಿಗೆ ಸಮಾಧಾನಕಾರಕವಾದ ಉತ್ತರವು ನಮ್ಮ ಲಕ್ಷ್ಯದೊಳಗೆ ಬಂದು ಬಿಡುತ್ತದೆ. ಎಲ್ಲಕ್ಕಿಂತ ಮೊದಲು ಆತ್ಮನ ಸ್ವರೂಪವು ಹೇಗಿದೆಯೆಂಬ ಮಾತಿನ ನಿರ್ಣಯವನ್ನು ನಮಗೆ ಸಮಯಸಾರಾದಿ ಶಾಸ್ತ್ರಗಳಿಂದ ಮಾಡಿಕೊಳ್ಳಬೇಕಾಗುವುದು. ಕರಣಾನುಯೋಗದ ಶಾಸ್ತ್ರಗಳಿಂದಲೂ ಆತ್ಮನು ಹೇಗಿದ್ದಾನೆ ? ಕರ್ಮವೆಂದರೇನು? ಎಂಬುದರ ನಿರ್ಣಯವನ್ನೇ ಮಾಡುವುದಿದೆ.

ಇಲ್ಲಿಯಂತೂ ನಾವು ಕ್ಷೇತ್ರದ ಚರ್ಚೆ ಮಾಡುತ್ತಿದ್ದೇವೆ, ಮೂರು ಲೋಕದ ಚರ್ಚೆ ಮಾಡುತ್ತಿದ್ದೇವೆ. ಅದರಲ್ಲಿ ಯಾವ ದ್ರವ್ಯಗಳು ಎಲ್ಲಿ ಸ್ಥಿತವಿವೆಯೆಂಬುದನ್ನು ತಿಳಿಯುವ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಆತ್ಮನ ಸ್ವರೂಪವು ಎಂಥದ್ದಿದೆ, ಅವನು ಯಾವ ಪರ್ಯಾಯದಲ್ಲಿ ಎಲ್ಲಿ ಸ್ಥಿತನಿದ್ದಾನೆ, ಎಲ್ಲೆಲ್ಲಿ ಯಾವ-ಯಾವ ಶರೀರ ಧಾರಣ ಮಾಡಿ ಅನಾದಿಯಿಂದ ಸುತ್ತುತ್ತಲಿದ್ದಾನೆ ಎಂಬ ಮಾತಿನ ಪರಿಚಯವಾಗುತ್ತದೆ. ಆತ್ಮನು ಏನನ್ನು ಮಾಡುವ ಸಾಧ್ಯತೆಯಿದೆ ಮತ್ತು ಯಾವುದನ್ನು ಮಾಡುವ ಸಾಧ್ಯತೆಯಿಲ್ಲ - ಎಂಬುದರ ಜ್ಞಾನವು ನಮಗೆ ಸ್ವಾಧ್ಯಾಯದಿಂದ ಆಗುತ್ತದೆ. ಸ್ವಾಧ್ಯಾಯದಿಂದ ನಮ್ಮ ಭ್ರಾಂತಿಗಳು ದೂರವಾಗುತ್ತವೆ, ನಮ್ಮ ಪ್ರಶ್ನೆಗಳಿಗೆ ಉತ್ತರವಂತೂ ಸಿಕ್ಕೇ ಸಿಗುತ್ತದೆ ಅಲ್ಲದೆ ತತ್ತ್ವಗಳ ನಿರ್ಣಯವಾಗಿ ನಮಗೆ ಆತ್ಮದರ್ಶನ ಅರ್ಥಾತ್ ಸಮ್ಯಕ್ತ್ವವಾಗುತ್ತದೆ.

ಯಾವುದೇ ಒಂದು ವಿವಕ್ಷಿತ ಚಿಂತನದಿಂದ ಸಮ್ಯಗ್ದರ್ಶನವಾಗುವ ಮಾತು ಇಲ್ಲ. ಆತ್ಮನ ನಿರ್ಣಯವಾಗುವುದಿಲ್ಲ. ಎಲ್ಲಿಯವರೆಗೆ ತತ್ತ್ವಗಳ ನಿರ್ಣಯವಾಗುವುದಿಲ್ಲ ಅಲ್ಲಿಯವರೆಗೆ ತತ್ತ್ವಚಿಂತನೆ - ವಿಕಲ್ಪವು ಕಾರ್ಯಕಾರಿಯಿದೆ. ವಿಕಲ್ಪ ಮಾಡುವುದರಿಂದ ಸಮ್ಯಗ್ದರ್ಶನವಾಗುವುದಿಲ್ಲ, ತತ್ತ್ವನಿರ್ಣಯವಾದ ಮೇಲೆ ವಿಕಲ್ಪಾತೀತವಾದ ಮೇಲೆ ಸಮ್ಯಕ್ತ್ವವಾಗುತ್ತದೆ. ಜೀವನು ವಿಕಲ್ಪರಹಿತನು ಕೂಡ ಸಹಜವಾಗಿಯೇ ಆಗುತ್ತಾನೆ. ಯಾವ ವಿಕಲ್ಪ ಮಾಡುವುದು ? ಅಥವಾ ಈ ವಿಕಲ್ಪಗಳನ್ನು ಹೇಗೆ ಬಿಡುವುದು ? - ಎಂಬುದಾಗಿ ಜನರಿಗೆ ಪ್ರಶ್ನೆಯುಂಟಾಗಿದೆ. ಆದರೆ ವಿಕಲ್ಪಗಳು ತಾನಾಗಿಯೇ ಆಗುತ್ತಿರುತ್ತವೆ ಮತ್ತು ತಾನಾಗಿಯೇ ಬಿಟ್ಟು ಹೋಗುತ್ತವೆ.

ಜ್ಞಾನಿಗೆ ಕೂಡ ಯಾವಾಗ ಆತ್ಮಸ್ಥಿರತೆಯಿರುವುದಿಲ್ಲ ಆಗ ವಿಕಲ್ಪಗಳಾಗುತ್ತವೆ. ದ್ರವ್ಯಾನುಯೋಗದ ಆರು

ದ್ರವ್ಯಗಳು, ಏಳುತತ್ತ್ವಗಳು, ನಿಮಿತ್ತ-ನೈಮಿತ್ತಿಕ ಸಂಬಂಧ, ಉತ್ಪಾದ-ವ್ಯಯ-ಧ್ರುವತೆ, ಪಂಚ ಸಮವಾಯಗಳು, ಕ್ರಮಬದ್ಧ ಪರ್ಯಾಯ ಮೊದಲಾದ ಅನೇಕ ಸಿದ್ಧಾಂತಗಳ ಯಥಾರ್ಥ ನಿರ್ಣಯವಾಗುವುದು ಅತ್ಯಂತ ಆವಶ್ಯಕವಿದೆ.

ಪ್ರಶ್ನೆ :- ಹಾಗಾದರೆ ಇದೆಲ್ಲ ರಗಳೆಯು ಏತಕ್ಕಾಗಿ - ಈ ಭೂಗೋಲದ ಮಾತನ್ನು ನಾವು ಏತಕ್ಕಾಗಿ ತಿಳಿದುಕೊಳ್ಳುವುದು ? ಇದರಿಂದ ಆಗುವ ಲಾಭವಾದರೂ ಏನಿದೆ ? ನಮ್ಮ ಆತ್ಮನ ಸನ್ಮುಖ ದೃಷ್ಟಿಯನ್ನೇ ಮಾಡುವುದಿದೆಯೆಂದ ಮೇಲೆ ಇವೆಲ್ಲ ಮಾತುಗಳಿಂದ ಯಾವ ಪ್ರಯೋಜನವಿದೆ ?

ಉತ್ತರ :- ತಿಳಿಯುವುದು ಆತ್ಮನ ಸ್ವಭಾವವಿದೆಯೆಂದ ಮೇಲೆ ಸತ್ಯವನ್ನು ತಿಳಿಯುವುದು ಅವನ ಸ್ವಭಾವವಿದೆಯೋ ಅಥವಾ ತಿಳಿಯದಿರುವುದು ಅವನ ಸ್ವಭಾವವಿದೆ ? ಮುನಿರಾಜರು ಆತ್ಮಜ್ಞಾನಿಗಳಿರುತ್ತಾರೆ ಅವರುಗಳ ಆತ್ಮಸ್ಥಿರತೆಯು ಬಹಳಷ್ಟು ಇರುತ್ತದೆ, ಪ್ರಚುರ ಅತೀಂದ್ರಿಯ ಆನಂದದ ಅನುಭವವು ಅವರಿಗೆ ಇರುತ್ತದೆ. ಶುದ್ಧೋಪಯೋಗವನ್ನು ಮುನಿಯ ಲಕ್ಷಣವೆನ್ನಲಾಗಿದೆ. ಆದಾಗ್ಯೂ ಎಲ್ಲಿಯವರೆಗೆ ಅವರಿಗೆ ಆತ್ಮಸ್ಥಿರತೆಯಾಗುವುದಿಲ್ಲ ಅಲ್ಲಿಯವರೆಗೆ ಶುಭೋಪಯೋಗದ ಕಾಲದಲ್ಲಿ ತತ್ತ್ವಗಳ ಸ್ವರೂಪ, ಕರ್ಮದ ಅವಸ್ಥೆಗಳು, ತ್ರಿಲೋಕದ ರಚನೆ ಮೊದಲಾದವುಗಳ ಸಂಬಂಧದ ಚಿಂತನೆಯು ಅವರಲ್ಲಿ ನಡೆದೇ ಇರುತ್ತದೆ. ಅರಹಂತಾದಿಗಳ ಕುರಿತಾಗಿ ಅವರಲ್ಲಿ ಭಕ್ತಿಯಿರುತ್ತದೆ, ಅವರಲ್ಲಿ ಪ್ರವಚನ ವತ್ಸಲತೆಯಿರುತ್ತದೆ. ಇಲ್ಲಿ ಆಚಾರ್ಯ, ಉಪಾಧ್ಯಾಯ ಸಾಧುಗಳಿಗೆ ಪ್ರವಚನವೆಂದಿದ್ದಾರೆ ಮತ್ತು ಅವರ ಕುರಿತಾಗಿ ಯಾವ ವಾತ್ಸಲ್ಯ ಭಾವವಿದೆ ಅದನ್ನು ಪ್ರವಚನ ವಾತ್ಸಲ್ಯವೆನ್ನಲಾಗಿದೆ. 'ಧವಲಾ'ದಲ್ಲಿಯಂತೂ ಪಂಚಮ ಗುಣಸ್ಥಾನವರ್ತಿ ಮತ್ತು ಚತುರ್ಥ ಗುಣಸ್ಥಾನವರ್ತಿಗಳನ್ನು ಕೂಡ ಪ್ರವಚನವೆಂದಿದ್ದಾರೆ. ಅವರುಗಳ ಕುರಿತಾಗಿ ಯಾವ ಗುಣಾನುರಾಗವಿರುತ್ತದೆ ಅದು ಪ್ರವಚನ ಭಕ್ತಿ ಅಥವಾ ಪ್ರವಚನವಾತ್ಸಲ್ಯವಿದೆ. ಜ್ಞಾನೀ ಜೀವರು ಯಾವಾಗ ಶುದ್ಧೋಪಯೋಗದಲ್ಲಿ ಉಳಿಯುವುದಾಗುವುದಿಲ್ಲ, ಶುಭೋಪಯೋಗದಲ್ಲಿ ಬರುತ್ತಾರೆ ಆಗ ಅವರಿಗೆ ಬೇರೆ ಬೇರೆ ಪ್ರಕಾರದ ಶುಭಭಾವಗಳು ಸಹಜವಾಗಿ ಬರುತ್ತವೆ. ಯಾವುದರ ಚಿಂತನೆ ಮಾಡಬೇಕೆನ್ನುವ ಪ್ರಶ್ನೆಯು ನಿರರ್ಥಕವಿದೆ. ಆ ಭಾವಗಳು - ಅಂಥ ವಿಕಲ್ಪಗಳು ಇಚ್ಛೆಯಿಂದ ಆಗುವುದಿಲ್ಲ. ಎಂಥ ಭಾವ ಮಾಡಬೇಕು ಯಾವ ಭಾವ ಮಾಡಬಾರದೆಂಬ ಪ್ರಶ್ನೆಯು ನಮಗೆ ಬರುತ್ತದೆ.

ಯಾವ ಭಾವಗಳು ಬರಲು ಯೋಗ್ಯವಿವೆ ಅವುವೇ ಬರುತ್ತವೆ ಹಾಗೂ ಬರಲು ಯೋಗ್ಯವಿರುವ ಭಾವಗಳು ಬಂದೇ ಬರುತ್ತವೆ. ನಮಗೆ ನಿರ್ಣಯ ಮಾಡಬೇಕಾಗಿರುವುದೇನೆಂದರೆ - ರಾಗ ಭಾವದಿಂದ ನಾನು ಭಿನ್ನನಿದ್ದೇನೆ, ರಾಗವು ಕೂಡ ನನ್ನ ಜ್ಞೇಯವಿದೆ, ನಾನಂತೂ ಕೇವಲ ಅದನ್ನು ತಿಳಿಯುವಂಥವನಿದ್ದೇನೆ, ನಾನು ಆ ರಾಗವನ್ನು ಮಾಡುವಂಥವನು ಎಂದರೆ ಅದರ ಸ್ವಾಮೀ - ಒಡೆಯನಿಲ್ಲ. ಇಂಥ ಪ್ರಶ್ನೆಗಳಲ್ಲಿ ನಾವು ಬಹಳಷ್ಟು ಸಿಲುಕಿಕೊಂಡಿದ್ದೇವೆ ಆದಾಗ್ಯೂ ಎಲ್ಲಿಯವರೆಗೆ ನಿಜವಾದ ತತ್ತ್ವನಿರ್ಣಯವಾಗುವುದಿಲ್ಲ ಅಲ್ಲಿಯವರೆಗೆ ಗ್ರಂಥಗಳ ಅಧ್ಯಯನ, ಶಿಬಿರಗಳಲ್ಲಿ ಪಾಲ್ಗೊಳ್ಳುವುದು. ತನಗಿಂತ ಅಧಿಕ ಅಭ್ಯಾಸ ಮಾಡಿದವರೊಂದಿಗೆ ಚರ್ಚೆ ಮೊದಲಾದುವನ್ನು ಮಾಡುತ್ತಲೇ ಇರಬೇಕಾಗುವುದು.

ಪ್ರಶ್ನೆ - ಅಕೃತ್ರಿಮ ಚೈತ್ಯಾಲಯಗಳಲ್ಲಿ ಇರುವಂಥ ಜಿನಪ್ರತಿಮೆಗಳು ರತ್ನಜಡಿತವಿವೆಯಲ್ಲವೇನು ?

ಉತ್ತರ - ಅವು ರತ್ನಗಳಿಂದ ಮಾಡಿರುವಂಥವಿವೆ ಎಂದರೆ ನಿರ್ಮಿತವಿವೆ - ರತ್ನಮಯವಿವೆ,

ಯಾರಿಂದಲೂ ಮಾಡಿರುವಂಥವಿಲ್ಲ, ಅವು ರತ್ನಜಡಿತವಿಲ್ಲ. ಜಡಿತವೆಂದರೆ ಹೇಗೆ ಉಂಗುರದಲ್ಲಿ ರತ್ನವನ್ನು ಕೂಡ್ರಿಸಲಾಗಿದ್ದರೆ ಅದನ್ನು ರತ್ನಜಡಿತವೆನ್ನಲಾಗುತ್ತದೆ. ಆದರೆ ಆ ಪ್ರತಿಮೆಗಳು ಹಾಗಿಲ್ಲ ರತ್ನಮಯವಿವೆ, ಇದರ ಚರ್ಚೆಯನ್ನು ವಿಸ್ತಾರದಿಂದ ಈ ಮೊದಲು ಮಾಡಿಯಾಗಿದೆ.

ಪ್ರಶ್ನೆ - ನಾವು ಭಗವಂತರ ಮೂರ್ತಿಗಳಿಗೆ ಅಲಂಕಾರಾದಿಗಳನ್ನು ತೊಡಿಸುತ್ತೇವೆ, ಮೂರ್ತಿಗಳನ್ನು ಪುಷ್ಪ, ರತ್ನ, ವಸ್ತ್ರಾದಿಗಳಿಂದ ಪರಿಶೋಭಿತಗೊಳಿಸುತ್ತೇವೆ, ನಮ್ಮ ಸಮಾಧಾನದ ಸಲುವಾಗಿ ಅವರ ಪಾದಗಳಿಗೆ ಚಂದನಾದಿಗಳನ್ನು ಹಚ್ಚಿದರೆ ಅದರ ನಿಷೇಧವನ್ನೇಕೆ ಮಾಡುತ್ತೀರಿ ?

ಉತ್ತರ :- ನಿಷೇಧವು ಯಾವ ವ್ಯಕ್ತಿಯದಿರುವುದಿಲ್ಲ ಆದರೆ ವಿಪರೀತ ಮನ್ನಣೆಯ ನಿಷೇಧ ಮಾಡಲಾಗುತ್ತದೆ. ನಾವು ವೀತರಾಗೀ ಭಗವಂತರನ್ನು ನಮ್ಮ ಮನ್ನಣೆಯಿಂದ ಸರಾಗಿಯನ್ನಾಗಿ ಮನ್ನಿಸುತ್ತೇವೆ. ನಾವು ಸ್ವಯಂ ರಾಗಿಗಳಿದ್ದೇವೆ ಆದುದರಿಂದ ಮನ್ನಣೆಯಲ್ಲಿ ನಾವು ವೀತರಾಗೀ ಭಗವಂತರ ಸ್ವರೂಪವನ್ನು ಕೆಡಿಸಿ ಬಿಡುತ್ತೇವೆ. ಅರ್ಥಾತ್ ಭಗವಂತರ ಕುರಿತಾಗಿ ನಮ್ಮ ಮನ್ನಣೆಯು ದೋಷಯುಕ್ತವಿದೆ. ನಿಜವಾದ ದೇವ, ಗುರು, ಧರ್ಮದ ನಿರ್ಣಯವನ್ನು ನಾವೇ ಮಾಡುವುದಿದೆ. ಅವರುಗಳ ಕುರಿತಾಗಿ ನಮ್ಮ ಮನ್ನಣೆಯು ಸತ್ಯವಿದೆಯೋ ಅಥವಾ ಇಲ್ಲವೆಂಬುದನ್ನು ನಾವು ನೋಡುವುದಿದೆ. ಇಂಥ ಅಳತೆಕೋಲಿನಿಂದ ಜಗತ್ತಿನ ಅಳತೆ ಮಾಡಲು ಹೋಗಬೇಕಾಗಿಲ್ಲ. ಈ ದೇವ-ಭಗವಂತರು ನಿಜವಾದ ದೇವರಿದ್ದಾರೋ ಅಥವಾ ಇಲ್ಲ ಈ ಮುನಿಯು ನಿಜವಾದ ಮುನಿಯಿದ್ದಾನೆಯೋ ಅಥವಾ ಇಲ್ಲವೆಂಬುದರ ಚರ್ಚೆಯ ಅಭಿರುಚಿಯನ್ನು ತೊರೆದು ನಿಜವಾದ ದೇವ-ಗುರುಗಳ ಸ್ವರೂಪದ ನಿರ್ಣಯ ಮಾಡುವುದರತ್ತ ಉದ್ಯಮಶೀಲರಾಗಬೇಕು.

ಇನ್ನು ಕೆಲವು ಜನರಂತೂ 'ನಾವು ಯಾವಾಗ ಮುನಿಯಾಗುತ್ತೇವೆ ಆವಾಗ ನೋಡಿದರಾಯಿತು, ಈಗೇಕೆ ಅದರ ಚರ್ಚೆ ?' ಎನ್ನುತ್ತಾರೆ. ಈಗಂತೂ ಶ್ರಾವಕರೇ ಆಗಿದ್ದರೆ ಸಾಕು; ಆದರೆ ಹಾಗೆ ನಡೆಯುವುದಿಲ್ಲ. ನಮಗೆ ಒಂದು ವೇಳೆ ಮೋಕ್ಷಮಾರ್ಗವನ್ನು ಪ್ರಕಟ ಮಾಡಿಕೊಳ್ಳುವುದಿದ್ದರೆ ಆ ಮೋಕ್ಷಮಾರ್ಗವು ಚತುರ್ಥ ಗುಣಸ್ಥಾನದಿಂದ ಆರಂಭವಾಗುತ್ತದೆ ಮತ್ತು ನಾವು ಅಲ್ಲಿಂದ ಹಿಡಿದು ಸಂಪೂರ್ಣ ಮೋಕ್ಷಮಾರ್ಗ ಮತ್ತು ಮೋಕ್ಷದ ಸ್ವರೂಪವನ್ನು ತಿಳಿದುಕೊಳ್ಳುವುದು ಆವಶ್ಯಕವೇ ಇದೆ. ಆ ಜೀವರುಗಳ ಅಂತರಂಗ-ಬಹಿರಂಗ ಸ್ವರೂಪವು ಹೇಗಿರುತ್ತದೆ ಎಂಬುದರ ಕುರಿತಾಗಿ ಜ್ಞಾನ ಮಾಡಿಕೊಳ್ಳುವುದು ಮತ್ತು ನಿರ್ಣಯ ಮಾಡಿದರೇನೆ ಮೋಕ್ಷಮಾರ್ಗವು ಪ್ರಕಟವಾಗಬಹುದಾಗಿದೆ.

ಒಂದು ವೇಳೆ ನಿಜವಾದ ದೇವಗುರು ಮೊದಲಾದವರ ನಿರ್ಣಯವಾಗದೆ ಅಥವಾ ಮಾಡದೇ ಕುಲಾಚಾರದಿಂದ ಯಾವನೋ ಮನುಷ್ಯನು ಕೇವಲ ನಿಜವಾದ ದೇವರನ್ನೇ ಆರಾಧಿಸುತ್ತಿದ್ದರೆ - ಪೂಜೆ, ಭಕ್ತಿ, ವಂದನೆ ಮಾಡುತ್ತಿದ್ದರೂ ಅದನ್ನು ಗೃಹೀತ ಮಿಥ್ಯಾತ್ವವೆನ್ನಲಾಗಿದೆ. ತುಂಬ ಕಠಿಣವಾದ ಮಾತು ಇದೆ. ಎಲ್ಲಿಯವರೆಗೆ ಜೀವನು ವೀತರಾಗತೆ ಹಾಗೂ ಸರ್ವಜ್ಞತೆಯ ಸ್ವರೂಪವನ್ನು ತಿಳಿದುಕೊಂಡು ಅವುಗಳ ನಿರ್ಣಯ ಮಾಡುವುದಿಲ್ಲ ಅಲ್ಲಿಯವರೆಗೆ ಅವನ ಮನ್ನಣೆಯೇ ಕುದೇವವಿದೆ, ಕುಗುರುವಿದೆ, ಕುಧರ್ಮವಿದೆ.

ಪ್ರಶ್ನೆ :- ದೇವಗತಿಯ ದೇವಗಳು ಭಗವಂತರ ಪೂಜೆಯನ್ನು ಯಾವ ರೀತಿಯಾಗಿ ಮಾಡುತ್ತಾರೆ ?

ಉತ್ತರ :- ಅದರ ವರ್ಣನೆಯನ್ನು ಮುಂದೆ ಅಕೃತ್ರಿಮ ಚೈತ್ಯಾಲಯಗಳ ಪ್ರಕರಣದಲ್ಲಿ ಮಾಡಲಾಗುವುದು. ಈಗ ನಮ್ಮ ವಿಷಯವನ್ನು ಮುಂದುವರೆಸೋಣ.

ವಿಮಾನವಾಸೀ ದೇವಗಳ ಚರ್ಚೆಯಲ್ಲಿ ನಾವು ವಿಮಾನಗಳ ಹೆಸರನ್ನು ನೋಡಿಯಾಗಿದೆ. ಹೇಗೆ ನರಕಗಳಲ್ಲಿ ಪಟಲಗಳಿರುತ್ತವೆ ಹಾಗೆ ಸ್ವರ್ಗಗಳಲ್ಲಿಯೂ ಪಟಲಗಳಿರುತ್ತವೆ. ಬೇರೆ-ಬೇರೆ ಸ್ತರಗಳಲ್ಲಿ - ಮಜಲುಗಳ ಹಾಗೆ ಬೇರೆ-ಬೇರೆ ಪದರುಗಳಲ್ಲಿ ವಿಮಾನಗಳಿರುತ್ತವೆ. ಸೌಧರ್ಮ-ಈಶಾನ ಯುಗಲದಲ್ಲಿ ಸೌಧರ್ಮದೊಳಗೆ ೩೨ ಲಕ್ಷ ಮತ್ತು ಈಶಾನದೊಳಗೆ ೨೮ ಲಕ್ಷ ವಿಮಾನಗಳಿರುತ್ತವೆ ಆದರೆ ಇವೆಲ್ಲವು ಮೂವತ್ತೊಂದು ಪಟಲಗಳಲ್ಲಿ ವಿಭಾಜಿತವಿವೆ. ತಾವು ೧೪ನೇ ನಂಬರಿನ ಚಾರ್ಟದಲ್ಲಿ ನೋಡಬೇಕು. ಇದರಲ್ಲಿ ಸ್ವರ್ಗಗಳ ಹೆಸರು, ಅವುಗಳ ಪಟಲಗಳ ಹಾಗೂ ವಿಮಾನಗಳ ಸಂಖ್ಯೆಯನ್ನು ಬರೆಯಲಾಗಿದೆ. ಇವುಗಳ ಹೆಸರನ್ನು ಕೆಳಗಿನಿಂದ ಆರಂಭಿಸಿ ಮೇಲೆಯ ಕಡೆಗೆ ಓದುವುದು. ಮೊದಲಿನ-ಎರಡನೆಯ ಸ್ವರ್ಗಗಳು ಕೆಳಗೆ ಇವೆ. ಉಳಿದ ಸ್ವರ್ಗಗಳು ಕ್ರಮದಿಂದ ಮೇಲೆ-ಮೇಲೆ ಇವೆ.

ಯಾವ ರೀತಿ ನರಕಗಳಲ್ಲಿ ಪ್ರತಿಯೊಂದು ಪಟಲದ ಮಧ್ಯಭಾಗದಲ್ಲಿ ಇಂದ್ರಕ ಬಿಲವಿರುವುದನ್ನು ಹೇಳಲಾಗಿತ್ತು ಅದೇ ರೀತಿ ಸ್ವರ್ಗದ ವಿಮಾನಗಳಲ್ಲಿ ಪ್ರತಿಯೊಂದು ಪಟಲದಲ್ಲೂ ಮಧ್ಯಭಾಗದಲ್ಲಿ ಇಂದ್ರಕ ವಿಮಾನವಿರುತ್ತದೆ. ನಾಲ್ಕೂ ದಿಕ್ಕುಗಳಲ್ಲಿ ಪಂಕ್ತಿಬದ್ಧ ರಚನೆಯಿರುತ್ತದೆ, ಅವುಗಳನ್ನು ಶ್ರೇಣಿಬದ್ಧ ವಿಮಾನಗಳೆಂದು ಹೇಳುತ್ತಾರೆ ಮತ್ತು ಅವುಗಳ ಮಧ್ಯದಲ್ಲಿ ಹರಡಿಕೊಂಡಿರುವ ಪುಷ್ಪಗಳ ಸಮಾನ ಎಲ್ಲೆಲ್ಲಿಯೋ ಕಂಡು ಬರುವಂಥವುಗಳನ್ನು ಪ್ರಕೀರ್ಣಕ ವಿಮಾನವೆಂದು ಹೇಳುತ್ತಾರೆ. ಪ್ರತಿಯೊಂದು ಪಟಲದ ಇಂದ್ರಕ ವಿಮಾನ, ಪೂರ್ವ-ದಕ್ಷಿಣ-ಪಶ್ಚಿಮ ಇವು ಮೂರೂ ದಿಕ್ಕುಗಳ ಶ್ರೇಣಿಬದ್ಧ ವಿಮಾನ ಹಾಗೂ ಅವುಗಳ ಮಧ್ಯದಲ್ಲಿರುವ ಪ್ರಕೀರ್ಣಕ ವಿಮಾನ ಇವೆಲ್ಲವೂ ದಕ್ಷಿಣೇಂದ್ರನ ಆಜ್ಞೆಯಲ್ಲಿ ಇರುತ್ತವೆ - ಆತನ ಅಧಿಪತ್ಯದಲ್ಲಿ ಇರುತ್ತವೆ. ಮೊದಲನೆಯ ಸ್ವರ್ಗದ ಮೊದಲನೇ ಪಟಲವು ಎಲ್ಲಕ್ಕಿಂತ ಕೆಳಗೆ ಇದೆ. ಅಲ್ಲಿಂದ ಮೇಲಿನ ಕಡೆಗೆ ಎಣಿಕೆ ಮಾಡುವುದು.

ಈ ಮೊದಲನೇ ಪಟಲದ ಇಂದ್ರಕ ವಿಮಾನದ ಹೆಸರು ಋತುಇಂದ್ರಕವಿದೆ. ಇದು ೪೫ ಲಕ್ಷ ಯೋಜನ ವ್ಯಾಸವುಳ್ಳದ್ದಿದೆ. ಹೀಗೆಯೇ ೪೫ ಲಕ್ಷ ಯೋಜನ ವ್ಯಾಸವುಳ್ಳದ್ದು ಮತ್ತೆ ಯಾವ-ಯಾವುದಿದೆ ? ಮೊದಲನೆಯ ನರಕದ ಮೊದಲನೇ ಪಟಲದ ಸೀಮಂತಕವೆಂಬ ಹೆಸರಿನ ಇಂದ್ರಕ ಬಿಲ, ಎರಡೂವರೆ ದ್ವೀಪ ಅರ್ಥಾತ್ ಮನುಷ್ಯಲೋಕ ಮತ್ತು ಸಿದ್ಧಶಿಲೆಯು ಕೂಡ ೪೫ ಲಕ್ಷ ಯೋಜನ ವಿಸ್ತಾರವುಳ್ಳವುಗಳಿವೆ.

ಸ್ವರ್ಗಗಳ ಪಟಲುಗಳಲ್ಲಿ ಕೇವಲ ದಿಶೆಗಳಲ್ಲಿಯೇ ಶ್ರೇಣಿಬದ್ಧ ವಿಮಾನಗಳಿವೆ, ವಿದಿಶೆಗಳಲ್ಲಿ ಇಲ್ಲ. ನರಕಗಳ ಪಟಲುಗಳಲ್ಲಿಯಂತೂ ನಾವು ದಿಶೆಗಳಲ್ಲಿ ಮತ್ತು ವಿದಿಶೆಗಳಲ್ಲಿಯೂ ಕೂಡ ಶ್ರೇಣಿಬದ್ಧ ಬಿಲಗಳಿರುವುದನ್ನು ಈ ಮೊದಲು ತಿಳಿದುಕೊಂಡಿದ್ದೆವು. ನರಕಗಳಲ್ಲಿ ಮೊದಲನೇ ಪಟಲದಲ್ಲಿ ನಾಲ್ಕೂ ದಿಕ್ಕುಗಳಲ್ಲಿ ಎಂದರೆ ಪ್ರತಿಯೊಂದರಲ್ಲಿ ೪೯-೪೯ ಮತ್ತು ನಾಲ್ಕೂ ವಿದಿಶೆಗಳಲ್ಲಿ - ಪ್ರತಿಯೊಂದರಲ್ಲಿ ೪೮-೪೮ ಶ್ರೇಣಿಬದ್ಧ ಬಿಲಗಳಿರುತ್ತವೆ. ಸ್ವರ್ಗಗಳ ಮೊದಲನೇ ಪಟಲದಲ್ಲಿ ನಾಲ್ಕೂ ದಿಕ್ಕುಗಳಲ್ಲಿ - ಪ್ರತಿಯೊಂದರಲ್ಲಿ ೬೨-೬೨ ಶ್ರೇಣಿಬದ್ಧ ವಿಮಾನಗಳಿರುತ್ತವೆ ಮತ್ತು ಅವು ಪ್ರತಿಯೊಂದು ಪಟಲದಲ್ಲಿ ೧-೧ ರಂತೆ ಕಡಿಮೆಯಾಗುತ್ತ ಹೋಗುತ್ತವೆ.

ಪ್ರತಿಯೊಂದು ಪಟಲದಲ್ಲಿ ದಕ್ಷಿಣೇಂದ್ರನ ಹತ್ತಿರ ವಿಮಾನಗಳ ಸಂಖ್ಯೆಯು ಅಧಿಕವಿದೆ ಏಕೆಂದರೆ ಪೂರ್ವ ಮತ್ತು ಪಶ್ಚಿಮದ ಶ್ರೇಣಿಬದ್ಧ ವಿಮಾನಗಳು ಅವನ ಅಧಿಪತ್ಯದಲ್ಲಿರುತ್ತವೆ. ೧೪ನೇ ನಂಬರಿನ ಚಾರ್ಟ್‌ದಲ್ಲಿ ಸೌಧರ್ಮ ಸ್ವರ್ಗದ ವಿಮಾನಗಳನ್ನು ಕೆಂಪು ಬಣ್ಣದಲ್ಲಿ ಮತ್ತು ಈಶಾನೇಂದ್ರನ ವಿಮಾನಗಳನ್ನು ನೀಲಿಬಣ್ಣದಲ್ಲಿ

ತೋರಿಸಲಾಗಿದೆ. ಅದರಿಂದ ಈ ಮಾತು ಸರಿಯಾಗಿ ತಿಳಿದು ಬರಬಹುದಾಗಿದೆ. ಇದೇ ಚಾರ್ಟದ ಆಧಾರದಿಂದ ನಾವು ಪ್ರತಿಯೊಂದು ಸ್ವರ್ಗದ ಪಟಲಗಳ ಸಂಖ್ಯೆಯನ್ನು ನೋಡೋಣ.

ಸೌಧರ್ಮ-ಈಶಾನ ಸ್ವರ್ಗದಲ್ಲಿ ೩೧ ಪಟಲಗಳು, ಸನತ್‌ಕುಮಾರ-ಮಾಹೇಂದ್ರದಲ್ಲಿ- ೭ ಪಟಲುಗಳು ಬ್ರಹ್ಮಯುಗಲದಲ್ಲಿ ೪ ಪಟಲಗಳು, ಲಾಂತವಯುಗಲದಲ್ಲಿ ೨ ಪಟಲಗಳು, ಶುಕ್ರಯುಗಲದಲ್ಲಿ ೧ ಪಟಲ, ಶತಾರ ಯುಗಲದಲ್ಲಿ ೧ ಪಟಲಗಳಿವೆ. ಆನತ-ಪ್ರಾಣತದ ೩ ಪಟಲಗಳು ಮತ್ತು ಆರಣ-ಅಚ್ಯುತದ ೩ ಪಟಲಗಳು ಹೀಗೆ ಆನತಾದಿ ನಾಲ್ಕು ಸ್ವರ್ಗಗಳಲ್ಲಿ ಒಟ್ಟು ೬ ಪಟಲಗಳಿವೆ. ಒಂಭತ್ತು ಗ್ರೈವೇಯಕಗಳಲ್ಲಿ ಪ್ರತಿಯೊಂದು ಗ್ರೈವೇಯಕದ ೧-೧ ಪಟಲ ಹೀಗೆ ಒಟ್ಟು ೯ ಪಟಲಗಳಿವೆ. ಅನುದಿಶೆಯದು ೧ ಪಟಲ ಹಾಗೂ ಅನುತ್ತರದ್ದೂ ಕೂಡ ೧ ಪಟಲವಿದೆ ಈ ಪ್ರಕಾರ ಒಟ್ಟು ಪಟಲಗಳ ಸಂಖ್ಯೆಯು ೬೩ ಇದೆ.

ಈಗ ಈ ಸ್ವರ್ಗಗಳಲ್ಲಿನ ವಿಮಾನಗಳ ಸಂಖ್ಯೆಯನ್ನು ನೋಡೋಣ.

ಸೌಧರ್ಮದಲ್ಲಿ ೩೨ ಲಕ್ಷ ಮತ್ತು ಈಶಾನದಲ್ಲಿ ೨೮ ಲಕ್ಷ ಹೀಗೆ ಸೌಧರ್ಮ ಯುಗಲದಲ್ಲಿ ೬೦ ಲಕ್ಷ ವಿಮಾನಗಳಿವೆ. ಸನತ ಕುಮಾರದಲ್ಲಿ ೧೨ ಲಕ್ಷ ಮತ್ತು ಮಾಹೇಂದ್ರದಲ್ಲಿ ೮ ಲಕ್ಷ ಹೀಗೆ ಸನತಕುಮಾರ ಯುಗಲದಲ್ಲಿ ೨೦ ಲಕ್ಷ ವಿಮಾನಗಳಿವೆ. ಬ್ರಹ್ಮ ಯುಗಲದಲ್ಲಿ ಒಟ್ಟು ೪ ಲಕ್ಷ, ಲಾಂತವ ಯುಗಲದಲ್ಲಿ ೫೦ ಸಾವಿರ, ಶುಕ್ರ ಯುಗಲದಲ್ಲಿ ೪೦ ಸಾವಿರ, ಶತಾರ ಯುಗಲದಲ್ಲಿ ೬ ಸಾವಿರ ವಿಮಾನಗಳಿವೆ. ಇದು ವಿಮಾನಗಳ ಸಂಖ್ಯೆಯಿದೆ. ಪ್ರತಿಯೊಂದು ವಿಮಾನದಲ್ಲಿ ಅಸಂಖ್ಯಾತ-ಅಸಂಖ್ಯಾತ ದೇವಗಳಿರುತ್ತಾರೆ. ಕೇವಲ ಸರ್ವಾರ್ಥಸಿದ್ಧಿಯೆಂಬ ಹೆಸರಿನ ವಿಮಾನದಲ್ಲಿಯೇ ಸಂಖ್ಯಾತ ದೇವಗಳಿರುತ್ತಾರೆ.

ಆನತಾದಿ ನಾಲ್ಕು ಸ್ವರ್ಗಗಳಲ್ಲಿ ೭೦೦ ವಿಮಾನಗಳಿವೆ. ಗ್ರೈವೇಯಕಗಳಲ್ಲಿ ಮೂರು-ಮೂರರ ಗುಂಪನ್ನು ನಾವು ನೋಡಿದ್ದೆವು. ಅವುಗಳೊಳಗಿನ ಕೆಳಗಿನ ಮೂರು ಗ್ರೈವೇಯಕಗಳಲ್ಲಿ ೧೧೧ ವಿಮಾನಗಳಿವೆ, ಮಧ್ಯದ ಮೂರು ಗ್ರೈವೇಯಕಗಳಲ್ಲಿ ಒಟ್ಟು ೧೦೭ ವಿಮಾನಗಳಿವೆ ಮತ್ತು ಮೇಲಿನ ಮೂರು ಗ್ರೈವೇಯಕಗಳಲ್ಲಿ ಒಟ್ಟು ೯೧ ವಿಮಾನಗಳಿವೆ. ಅನುದಿಶೆಗಳಲ್ಲಿ ೯ ವಿಮಾನಗಳಿವೆ. ಅಲ್ಲಿ ಮಧ್ಯದಲ್ಲಿ ಒಂದು ಇಂದ್ರಕವಿಮಾನ, ನಾಲ್ಕೂ ದಿಶೆಗಳಲ್ಲಿ ೧-೧- ಶ್ರೇಣಿಬದ್ಧವಿಮಾನ ಹಾಗೂ ನಾಲ್ಕು ವಿದಿಶೆಗಳಲ್ಲಿ ೧-೧- ಪ್ರಕೀರ್ಣಕದಂತೆ ಒಟ್ಟು ಒಂಭತ್ತು ವಿಮಾನಗಳಿವೆ. ಇನ್ನು ಅನುತ್ತರದಲ್ಲಿ ೫ ವಿಮಾನಗಳಿವೆ. ಅಲ್ಲಿ ಒಂದು ಇಂದ್ರಕ ವಿಮಾನವಿದ್ದು ಅದರ ಹೆಸರು ಸರ್ವಾರ್ಥಸಿದ್ಧಿಯಿದೆ. ಪೂರ್ವ ದಿಕ್ಕಿನಲ್ಲಿ ವಿಜಯ, ದಕ್ಷಿಣದಲ್ಲಿ ವೈಜಯಂತ, ಪಶ್ಚಿಮದಲ್ಲಿ ಜಯಂತ ಮತ್ತು ಉತ್ತರದಲ್ಲಿ ಅಪರಾಜಿತವೆಂಬ ಹೆಸರಿನ ವಿಮಾನಗಳಿವೆ.

ಇವೆಲ್ಲ ವಿಮಾನಗಳ ಒಟ್ಟು ಸಂಖ್ಯೆಯು ಎಂಭತ್ನಾಲ್ಕು ಲಕ್ಷ ತೊಂಭತ್ತೇಳು ಸಾವಿರದ ಇಪ್ಪತ್ತೂ ರು ಇದೆ. ಯಾವಾಗ ನಾವು ಊರ್ಧ್ವಲೋಕದ ಅಕೃತ್ರಿಮ ಜಿನ ಚೈತ್ಯಾಲಯಗಳಿಗೆ ಅರ್ಘ ಸಮರ್ಪಣೆ ಮಾಡುತ್ತೇವೆ ಆಗ ಈ ಸಂಖ್ಯೆಯನ್ನು ರಾಗವಾಗಿ ಹಾಡುತ್ತ ಹೇಳುತ್ತೇವೆ. ಅಲ್ಲಿ ಪ್ರತಿಯೊಂದು ವಿಮಾನದಲ್ಲಿ ಒಂದೊಂದು ಅಕೃತ್ರಿಮ ಜಿನ ಚೈತ್ಯಾಲಯವಿದೆ. ಆ ಒಂದೊಂದು ಚೈತ್ಯಾಲಯದಲ್ಲಿ ೧೦೮-೧೦೮ ಅಕೃತ್ರಿಮ ಜಿನಬಿಂಬಗಳಿವೆ, ಅವುಗಳಿಗೆ ನಾವು ಇಲ್ಲಿಂದ ಪರೋಕ್ಷ ನಮಸ್ಕಾರ ಮಾಡುತ್ತೇವೆ. ಅಲ್ಲಿಯಂತೂ ಸರ್ವತ್ರ - ಎಲ್ಲ ಕಡೆಗೂ ಜಿನಧರ್ಮವೇ ನಡೆಯುತ್ತದೆ. ಅಲ್ಲಿ ಜನ್ಮವಾಗುತ್ತಿರುವಂತೆಯೇ ಅನ್ಯ ದೇವಗಳು ಅವರ ಸ್ವಾಗತ ಮಾಡುತ್ತಾರೆ.

ವಾದ್ಯಗಳನ್ನು ಬಾರಿಸುತ್ತಾರೆ, ಸ್ನಾನ ಮಾಡಿಸಿ, ಸ್ವರ್ಗದ ಅಲಂಕಾರಾದಿಗಳನ್ನು ಧಾರಣ ಮಾಡಿಸಿ ಅವರ ಜೊತೆಯಲ್ಲಿ ಜಿನದೇವರ ಪೂಜೆ, ಅಭಿಷೇಕ ಮಾಡುತ್ತಾರೆ. ಸಮ್ಯಗ್ದೃಷ್ಟಿಗಳು ಸ್ವಯಂ ತಾವಾಗಿಯೇ ಮಾಡುತ್ತಾರೆ. ಮಿಥ್ಯಾದೃಷ್ಟಿ ದೇವಗಳು ಅನ್ಯ ದೇವಗಳಿಂದ ಸಂಬೋಧನೆ ಮಾಡಿದ ಮೇಲೆ ಮಾಡುತ್ತಾರೆ. ಹೇಗೆ ನಮ್ಮಲ್ಲಿಯೂ ಜೈನ ಕುಲದೊಳಗೆ ಜನ್ಮವಾದ ಬಾಲಕನನ್ನು ನಲವತ್ತು ದಿವಸಗಳಾದ ಮೇಲೆ ಮಾತೆಯೊಂದಿಗೆ ಮಂದಿರಕ್ಕೆ ಕರೆದುಕೊಂಡು ಹೋಗುತ್ತಾರೆ. ಬಾಲಕನ ಕಿವಿಯಲ್ಲಿ ಣಮೋಕಾರ ಮಂತ್ರ ಹೇಳುತ್ತಾರೆ ಮತ್ತು ಮಗು ಎಂಟು ವರ್ಷದ್ದಾಗುವವರೆಗೆ ಅದು ಅಷ್ಟಮೂಲ ಗುಣಗಳ ಪಾಲನೆ ಮಾಡುವ ಅರ್ಥಾತ್ ಮದ್ಯ, ಮಾಂಸ, ಮಧುವಿನ ಹಾಗೂ ಐದು ಉದುಂಬರ ಫಲಗಳ ಸೇವನೆ ಮಾಡದಂತೆ ನೋಡಿಕೊಳ್ಳುವುದು ಮಾತೆಯ ಹೊಣೆಗಾರಿಕೆಯಿದೆ. ಬಾಲಕನು ದಿನಾಲೂ ಜಿನಮಂದಿರಕ್ಕೆ ಹೋಗುವ, ಣಮೋಕಾರ ಮಂತ್ರ ಮೊದಲಾದ ಪಾಠವನ್ನು ಹೇಳುವ-ಕಲಿತುಕೊಳ್ಳುವ, ಅಭಕ್ಷ್ಯ ಭಕ್ಷಣೆ ಮಾಡದಿರುವ, ಆರು-ದ್ರವ್ಯ, ಏಳು ತತ್ತ್ವಾದಿಗಳ ಮಾತನ್ನು ಕಲಿತುಕೊಳ್ಳುವ, ಸದಾಚಾರಯುಕ್ತ ನೈತಿಕ ಜೀವನದ ಅಂಗೀಕಾರ ಮಾಡುವ - ಇತ್ಯಾದಿಗಳೆಲ್ಲದರ ಹೊಣೆಗಾರಿಕೆಯು ಮಾತೆಯದಿದೆ ಮತ್ತು ಮನೆಯ ಇತರ ಸದಸ್ಯರದೂ ಹೊಣೆಗಾರಿಕೆಯಿದೆ. ಎಂಟು ವರ್ಷಗಳು ಪೂರ್ಣವಾದ ಮೇಲೆ ಮನುಷ್ಯ ಪರ್ಯಾಯದ ಜೀವನಿಗೆ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳ-ಬಹುದಾದ ಸಾಮರ್ಥ್ಯವು ಬರುತ್ತದೆ ಇಷ್ಟೇ ಏಕೆ ಪುರುಷ ಪರ್ಯಾಯವಿದ್ದರೆ ಮುನಿದೀಕ್ಷೆಯನ್ನು ಧಾರಣ ಮಾಡಬಹುದಾಗಿದೆ ಮತ್ತು ಕೇವಲಜ್ಞಾನವನ್ನು ಕೂಡ ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಎಂಟನೆಯ ತೀರ್ಥಂಕರ
ಶ್ರೀ ಅನಂತವೀರ್ಯ ಭಗವಂತರರಿಗೆ ಜಯವಾಗಲಿ.

★★★★★

ಈ ಆತ್ಮನಿಗೆ ಅಶುದ್ಧತೆಯು ನವೀನವಾಗಿ ಉತ್ಪನ್ನವಾಗಿಲ್ಲ ಅನಾದಿಕಾಲದಿಂದ ಸಂತಾನರೂಪವಾಗಿ ದ್ರವ್ಯಕರ್ಮದಿಂದ ರಾಗಾದಿಗಳಾಗುತ್ತವೆ. ಪುನಃ ಅವೇ ರಾಗಾದಿಗಳಿಂದ ದ್ರವ್ಯ ಕರ್ಮದ ಬಂಧವಾಗುತ್ತದೆ. ಅವೆರಡರ ಸಂಬಂಧವು ಕನಕಕಾಳಿಕೆಯಂತೆ ಅನಾದಿಕಾಲದಿಂದ ನಡೆಯುತ್ತ ಬರುತ್ತಿದೆ. ಆ ಸಂಬಂಧದ ಕಾರಣವಾಗಿ ಈ ಜೀವನಿಗೆ ತನ್ನ ಜ್ಞಾನಸ್ವಭಾವದ ಬೋಧವಿಲ್ಲದಿರುವುದರಿಂದ ಉದಯಾಗತವಾದ ಕರ್ಮ ಪರ್ಯಾಯದಲ್ಲಿ ಇಷ್ಟ-ಅನಿಷ್ಟ ಭಾವದಿಂದ ರಾಗ-ದ್ವೇಷ, ಮೋಹರೂಪವಾಗಿ ಪರಿಣಮನ ಮಾಡುತ್ತಲಿದ್ದಾನೆ. ಈ ಪರಿಣಾಮಗಳಾಗುವಲ್ಲಿ ದ್ರವ್ಯ ಕರ್ಮಗಳು ಕಾರಣವಾಗಿದ್ದರೂ ಕೂಡ ಈ ಪರಿಣಾಮಗಳು ಚೇತನಮಯವಾಗಿರುವುದರಿಂದ ಈ ಪರಿಣಾಮಗಳ ಕರ್ತೃವು ವ್ಯಾಪ್ಯ-ವ್ಯಾಪಕ ಭಾವದಿಂದ ಆತ್ಮನೇ ಇದ್ದಾನೆ. ಭಾವ್ಯ-ಭಾವಕ ರೂಪದಿಂದ ಆತ್ಮನೇ ಇವುಗಳ ಭೋಕ್ತೃವಿದ್ದಾನೆ. ಇಂಥ ತನ್ನ ಪರ್ಯಾಯದ ಸ್ವರೂಪವನ್ನು ಈ ಜೀವನು ಇಂಥ ಮನುಷ್ಯ ಪರ್ಯಾಯದಲ್ಲಿ ಪರಮ ಪವಿತ್ರವಾದ ಜಿನಾಗಮಗಳ ಅಧ್ಯಯನದಿಂದಲೇ ತಿಳಿಯಬಹುದಾಗಿದೆ ಮತ್ತು ಜಿನಾಗಮಗಳ ಅಧ್ಯಯನ ಮಾಡುವ ಭಾವ ಬರುವುದು ಮಹಾಭಾಗ್ಯವಿದ್ದರೇನೆ ಸಾಧ್ಯವಾಗುತ್ತದೆ ಹಾಗೂ ಅಂಥ ಸದ್ಭಾವವು ಎಂದರೆ ಉತ್ತಮ ಭಾವವು ಅಷ್ಟಮೂಲಗುಣಧಾರಿಯಾದ ಸದಾಚಾರ ಸಂಪನ್ನ ಜೀವನಿಗೇ ಬರುವ ಸಾಧ್ಯತೆಯಿದೆ.

೯. ವೈಮಾನಿಕ ಇಂದ್ರರು

ಸರ್ವಜ್ಞ ಭಗವಂತರ ವಾಣಿಯ ಅನುಸಾರ ಬರೆಯಲ್ಪಟ್ಟಿರುವ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಲೋಕದ ಅರ್ಥಾತ್ ತ್ರಿಭುವನದ ಸ್ವರೂಪವನ್ನು ನೋಡುವ ಪ್ರಯತ್ನ ಮಾಡುತ್ತಿದ್ದೇವೆ. ಅಧೋಲೋಕದ ಸವಿಸ್ತರ ವರ್ಣನೆಯನ್ನು ನೋಡಿದ ನಂತರ ನಾವು ಈಗ ಊರ್ಧ್ವಲೋಕದ ಚರ್ಚೆ ಮಾಡುತ್ತಿದ್ದೇವೆ. ಲೋಕಾಕಾಶದ ಮಧ್ಯದಿಂದ ೭ ರಾಜೂ ಮೇಲಿನವರೆಗೆ ಊರ್ಧ್ವಲೋಕವಿದೆ ಅದರಲ್ಲಿ ಒಂದು ಲಕ್ಷ ಯೋಜನದ ಎತ್ತರವುಳ್ಳ ಮಧ್ಯಲೋಕವೂ ಇದೆ. ಅಧೋಲೋಕದಲ್ಲಿಯಂತೂ ಏಳು ಪೃಥ್ವಿಗಳಿದ್ದು ಅವು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಹರಡಿಕೊಂಡಿವೆ ಆದರೆ ಊರ್ಧ್ವಲೋಕದ ಸ್ವರ್ಗಗಳಲ್ಲಿ ಪೃಥ್ವಿಯ ಖಂಡ (ತುಂಡು)ಗಳು ಹರಡಿಕೊಂಡಿವೆ ಅವುಗಳನ್ನೇ ವಿಮಾನಗಳೆಂದು ಹೇಳುತ್ತಾರೆ ಮತ್ತು ಅಲ್ಲಿರುವ ದೇವಗಳನ್ನು ವಿಮಾನವಾಸಿ ಅಥವಾ ವೈಮಾನಿಕರೆಂದು ಹೇಳುತ್ತಾರೆ.

ಹದಿನಾಲ್ಕನೆಯ ನಂಬರಿನ ಚಾರ್ಟದ ಆಧಾರದಿಂದ ನಾವು ಈ ಸ್ವರ್ಗಗಳ ಪಟಲ ಹಾಗೂ ವಿಮಾನಗಳ ಸಂಖ್ಯೆಯನ್ನು ತಿಳಿದುಕೊಂಡೆವು. ಪ್ರತಿಯೊಂದು ಪಟಲ ಪ್ರತಿಯೊಂದು ವಿಮಾನದ ಸಂಖ್ಯೆಯು ಮೇಲೆ ಮೇಲೆ ಕಡಿಮೆಯಾಗುತ್ತ ಹೋಗುತ್ತದೆ ಅದೇ ಪ್ರಕಾರ ಇಂದ್ರಕ ವಿಮಾನದ ವಿಸ್ತಾರವು ಕಡಿಮೆಯಾಗುತ್ತ ಹೋಗುತ್ತದೆ. ಮೊದಲಿನ ಪಟಲದ ಇಂದ್ರಕ ವಿಮಾನವು ೪೫ ಲಕ್ಷ ಯೋಜನ ವಿಸ್ತಾರವುಳ್ಳದಿದ್ದರೆ ಮುಂದಿನ ಇಂದ್ರಕಗಳ ವಿಸ್ತಾರವು ಕಡಿಮೆ-ಕಡಿಮೆಯಾಗುತ್ತ ಕೊನೆಯ ಅನುತ್ತರ ವಿಮಾನದ ಸರ್ವಾರ್ಥಸಿದ್ಧಿಯೆಂಬ ಹೆಸರಿನ ಇಂದ್ರಕದ ವಿಸ್ತಾರವು ೧ ಲಕ್ಷ ಯೋಜನ ಉಳಿದು ಬಿಡುತ್ತದೆ. ಎಲ್ಲಿ ಎಷ್ಟು ವಿಮಾನಗಳಿರುತ್ತವೆಯೆಂಬುದರ ಚರ್ಚೆಯನ್ನು ಮಾಡಿದ ನಂತರ ಎಲ್ಲಿ ಎಷ್ಟು ಇಂದ್ರರಿರುತ್ತಾರೆಂಬುದರ ಚರ್ಚೆಯು ಈಗ ಕ್ರಮಪ್ರಾಪ್ತವಿದೆ.

ಮೊದಲನೇ ಯುಗಲದಲ್ಲಿ ಸೌಧರ್ಮ ಇಂದ್ರನು ದಕ್ಷಿಣದ ಇಂದ್ರ ಮತ್ತು ಈಶಾನನು ಉತ್ತರದ ಇಂದ್ರನಿದ್ದಾನೆ ಹೀಗೆ ಇಬ್ಬರು ಇಂದ್ರರಿದ್ದಾರೆ. ಅವರ ಹೆಸರಿನಿಂದಲೇ ಸ್ವರ್ಗದ ಹೆಸರು ಇದೆ. ಎರಡನೇ ಯುಗಲದಲ್ಲಿ ಕೂಡ ಸನತಕುಮಾರ ಮತ್ತು ಮಾಹೇಂದ್ರನೆಂಬ ಹೆಸರಿನ ಇಬ್ಬರು ಇಂದ್ರರಿದ್ದಾರೆ.

ಬ್ರಹ್ಮ-ಬ್ರಹ್ಮೋತ್ತರವೆಂಬ ಮೂರನೇ ಯುಗಲದಲ್ಲಿ ಒಬ್ಬನೇ ಇಂದ್ರನಿದ್ದಾನೆ ಅವನ ಹೆಸರು ಬ್ರಹ್ಮ ಇಂದ್ರವಿದೆ. ದಕ್ಷಿಣದ ವಿಮಾನಗಳು ಬ್ರಹ್ಮ ವಿಮಾನಗಳಿವೆ ಮತ್ತು ಉತ್ತರದ ವಿಮಾನಗಳು ಬ್ರಹ್ಮೋತ್ತರ ವಿಮಾನಗಳಿವೆ ಆದರೆ ಎಲ್ಲವಿಮಾನಗಳು ಒಬ್ಬನೇ ಇಂದ್ರನ ಆಜ್ಞೆಯಲ್ಲಿವೆ. ಇಲ್ಲಿ ಬೇರೆ-ಬೇರೆ ಇಬ್ಬರು ಇಂದ್ರರಿಲ್ಲ.

ಮುಂದೆ ಲಾಂತವ-ಕಾಪಿಷ್ಠದಲ್ಲಿಯೂ ಒಬ್ಬನೇ ಲಾಂತವ ಇಂದ್ರನಿದ್ದಾನೆ. ಶುಕ್ರ-ಮಹಾಶುಕ್ರದಲ್ಲಿಯೂ ಒಬ್ಬನೇ ಇಂದ್ರನಿದ್ದಾನೆ, ಅವನ ಹೆಸರು ಮಹಾಶುಕ್ರ ಇಂದ್ರವಿದೆ ಹಾಗೂ ಶತಾರ-ಸಹಸ್ರಾರದಲ್ಲಿ ಒಬ್ಬ ಸಹಸ್ರಾರ ಇಂದ್ರನಿದ್ದಾನೆ. ಏಳನೆಯ ಯುಗಲ ಆನತ-ಪ್ರಾಣತದಲ್ಲಿ ಒಬ್ಬ ಆನತ ಇಂದ್ರ ಮತ್ತು ಒಬ್ಬ ಪ್ರಾಣತ ಇಂದ್ರ ಹೀಗೆ ಇಬ್ಬರು ಇಂದ್ರರಿದ್ದಾರೆ. ಎಂಟನೆಯ ಯುಗಲ ಆರಣ-ಅಚ್ಯುತದಲ್ಲಿಯೂ ಇಬ್ಬರು ಇಂದ್ರರಿದ್ದಾರೆ. ಒಬ್ಬನು ಆರಣ ಇಂದ್ರ ಮತ್ತು ಒಬ್ಬನು ಅಚ್ಯುತ ಇಂದ್ರನಿದ್ದಾನೆ.

ಹೀಗೆ ಮೊದಲನೇ ಎರಡು ಯಗಲಗಳಲ್ಲಿ ಇಬ್ಬಿಬ್ಬರಂತೆ ನಾಲ್ಕು ಇಂದ್ರರು, ಅದರ ನಂತರ ನಾಲ್ಕು ಯುಗಲಗಳಲ್ಲಿ ಪ್ರತಿಯೊಂದರಲ್ಲಿ ಒಬ್ಬೊಬ್ಬರಂತೆ ನಾಲ್ಕು ಇಂದ್ರರು ಮತ್ತು ಮೇಲಿನ ಏಳನೇ-ಎಂಟನೇ ಯುಗಲದಲ್ಲಿ ಇಬ್ಬಿಬ್ಬರಂತೆ ನಾಲ್ಕು ಇಂದ್ರರು ಇದ್ದಾರೆ. ಈ ಪ್ರಕಾರ ಹದಿನಾರು ಸ್ವರ್ಗಗಳಲ್ಲಿ ಹನ್ನೆರಡು ಜನ ಇಂದ್ರರಿದ್ದಾರೆ. ಇಲ್ಲಿಯೂ ಎಷ್ಟು ಜನರು ಇಂದ್ರರಿದ್ದಾರೆ ಅಷ್ಟೇ ಪ್ರತೀಂದ್ರರಿದ್ದಾರೆ ಎಂದರೆ ಹನ್ನೆರಡು ಇಂದ್ರರು ಮತ್ತು ಹನ್ನೆರಡು ಪ್ರತೀಂದ್ರರಿದ್ದಾರೆ.

ಪ್ರಶ್ನೆ :- ಇಂದ್ರಕ ವಿಮಾನವು ಮಧ್ಯದಲ್ಲಿ ಇರುತ್ತದೆಯೆಂದ ಮೇಲೆ ಅದು ದಕ್ಷಿಣೇಂದ್ರನದ್ದಿದೆಯೋ ಅಥವಾ ಉತ್ತರೇಂದ್ರನದ್ದಿದೆ ?

ಉತ್ತರ :- ಅಲ್ಲಿ ದಕ್ಷಿಣೇಂದ್ರನ ಅಧಿಪತ್ಯವೇ ನಡೆಯುತ್ತದೆ, ಉತ್ತರೇಂದ್ರನದಲ್ಲ. ಹೀಗೆಯೇ ಸಹಜ ವ್ಯವಸ್ಥೆಯಿದೆ. ಅದರಲ್ಲಿ ಯಾವ ಪಕ್ಷಪಾತವಿರುವುದಿಲ್ಲ.

ಪ್ರಶ್ನೆ :- ಪ್ರತಿಯೊಂದು ವಿಮಾನದಲ್ಲಿ ಅಕೃತ್ರಿಮ ಜಿನಚೈತ್ಯಾಲಯಗಳಿವೆ ಎಂದ ಮೇಲೆ ಆ ಬಿಂಬಗಳ ಪ್ರತಿಷ್ಠೆಯನ್ನು ಯಾರು ಮಾಡಿದರು ? ಏಕೆಂದರೆ ಅಪ್ರತಿಷ್ಠಿತ ಬಿಂಬವು ಪೂಜ್ಯವಿಲ್ಲವೆಂದು ಹೇಳುತ್ತೇವೆಯಲ್ಲವೇನು?

ಉತ್ತರ :- ಈ ಬಿಂಬಗಳು ಅನಾದಿಯಿಂದ ಇವೆ, ಅನಾದಿಯಿಂದಲೇ ಇಂದ್ರಾದಿ ಎಲ್ಲ ದೇವಗಳೂ ಇವುಗಳ ಪೂಜೆ ಮಾಡುತ್ತ ಬಂದಿದ್ದಾರೆ. ಮತ್ತು ಈ ಜಿನಬಿಂಬಗಳು ಸರ್ವಥಾ ಪೂರ್ಣತಃ ವಂದನೀಯವಿವೆ, ಪೂಜ್ಯವೇ ಇವೆ.

ಈಗ ಈ ಇಂದ್ರರುಗಳು ಎಲ್ಲಿ ಇರುತ್ತಾರೆಂಬುದನ್ನು ನೋಡೋಣ. ಏಕೆಂದರೆ ಹೇಗೆ ಸೌಧರ್ಮ, ಇಂದ್ರನ ವಿಮಾನಗಳು ೩೨ ಲಕ್ಷವಿವೆಯೆಂದ ಮೇಲೆ ಯಾವ ಸ್ಥಾನದಲ್ಲಿ ಯಾವ ವಿಮಾನದಲ್ಲಿ ಸೌಧರ್ಮ ಇಂದ್ರನು ಇರುತ್ತಾನೆ ?

ಸೌಧರ್ಮ ಇಂದ್ರನು ಮೂವತ್ತೊಂದನೇ ಪಟಲದಲ್ಲಿ ಇರುತ್ತಾನೆ. ಮೂವತ್ತೊಂದನೆಯ ಪಟಲದ ಪ್ರಭವೆಂಬ ಹೆಸರಿನ ಇಂದ್ರಕ ವಿಮಾನವಿದೆ, ಅದರ ದಕ್ಷಿಣ ದಿಕ್ಕಿನ ಹದಿನೆಂಟನೇ ಶ್ರೇಣಿಬದ್ಧ ವಿಮಾನದಲ್ಲಿ ಸೌಧರ್ಮ ಇಂದ್ರನು ಇರುತ್ತಾನೆ. ಈಶಾನ ಇಂದ್ರನು ಅದೇ ಮೂವತ್ತೊಂದನೆಯ ಪಟಲದಲ್ಲಿ ಉತ್ತರ ದಿಕ್ಕಿನ ಹದಿನೆಂಟನೇ ಶ್ರೇಣಿಬದ್ಧ ವಿಮಾನದಲ್ಲಿ ಇರುತ್ತಾನೆ.

ಸನತ್‌ಕುಮಾರ ಮತ್ತು ಮಾಹೇಂದ್ರ ಸ್ವರ್ಗದ ಪಟಲಗಳು ಒಟ್ಟು ಏಳು ಇವೆ. ಏಳನೆಯ ಪಟಲದ ಮಧ್ಯದಲ್ಲಿ ಚಕ್ರವೆಂಬ ಇಂದ್ರಕ ವಿಮಾನವಿದೆ. ಅದರ ದಕ್ಷಿಣದ ಹದಿನಾರನೆಯ ಶ್ರೇಣಿಬದ್ಧ ವಿಮಾನದಲ್ಲಿ ಸನತ್‌ಕುಮಾರ ಇಂದ್ರ ಮತ್ತು ಉತ್ತರದ ಹದಿನಾರನೆಯ ಶ್ರೇಣಿಬದ್ಧ ವಿಮಾನದಲ್ಲಿ ಮಾಹೇಂದ್ರ ಇಂದ್ರನು ಇರುತ್ತಾನೆ.

ಬ್ರಹ್ಮ-ಬ್ರಹ್ಮೋತ್ತರ ಸ್ವರ್ಗಗಳಲ್ಲಿ ಒಬ್ಬನೇ ಇಂದ್ರನಿದ್ದಾನೆ. ಈ ಮೂರನೆಯ ಯುಗಲದಲ್ಲಿ ನಾಲ್ಕು ಪಟಲಗಳಿವೆ. ನಾಲ್ಕನೆಯ ಪಟಲದಲ್ಲಿ ಬ್ರಹ್ಮೋತ್ತರ ಇಂದ್ರಕವಿದೆ. ಅದರ ದಕ್ಷಿಣದ ಹದಿನಾಲ್ಕನೆಯ ವಿಮಾನದಲ್ಲಿ ಬ್ರಹ್ಮ ಇಂದ್ರನು ಇರುತ್ತಾನೆ.

ಲಾಂತವ ಯುಗಲದಲ್ಲಿ ಎರಡು ಪಟಲಗಳಿವೆ. ಅಲ್ಲಿಯೂ ಒಬ್ಬನೇ ಇಂದ್ರನಿದ್ದಾನೆ. ಎರಡನೇ ಪಟಲದಲ್ಲಿ ಲಾಂತವ ಇಂದ್ರಕವಿದೆ. ಅದರ ದಕ್ಷಿಣದ ಹನ್ನೆರಡನೇ ಶ್ರೇಣಿಬದ್ಧ ವಿಮಾನದಲ್ಲಿ ಲಾಂತವ ಇಂದ್ರನು ಇರುತ್ತಾನೆ.

ಅದರ ನಂತರ ಶುಕ್ರಯುಗಲದಲ್ಲಿ ಒಂದೇ ಪಟಲವಿದೆ. ಇಲ್ಲಿಯ ಇಂದ್ರಕ ವಿಮಾನದ ಹೆಸರು ಮಹಾ ಶುಕ್ರ ಇಂದ್ರಕವಿದೆ ಮತ್ತು ಇಂದ್ರನ ಹೆಸರು ಕೂಡ ಮಹಾಶುಕ್ರ ಇಂದ್ರವಿದೆ, ಅವನು ಉತ್ತರ ದಿಕ್ಕಿನ ಹತ್ತನೆಯ ಶ್ರೇಣಿಬದ್ಧ ವಿಮಾನದಲ್ಲಿ ಇರುತ್ತಾನೆ.

ಶತಾರ-ಸಹಸ್ರಾರ ಯುಗಲದಲ್ಲಿಯೂ ಕೂಡ ಒಂದು ಪಟಲವಿದೆ. ಅಲ್ಲಿಯ ಇಂದ್ರಕದ ಹೆಸರು ಸಹಸ್ರಾರ ಇಂದ್ರಕವಿದೆ. ಅದರ ಉತ್ತರದಿಕ್ಕಿನ ಎಂಟನೆಯ ಶ್ರೇಣಿಬದ್ಧ ವಿಮಾನದಲ್ಲಿ ಸಹಸ್ರಾರ ಇಂದ್ರನು ಇರುತ್ತಾನೆ.

ನೋಡಿರಿ, ಬ್ರಹ್ಮ-ಬ್ರಹೋತ್ತರದ ಬ್ರಹ್ಮ ಇಂದ್ರನು ಮತ್ತು ಲಾಂತವ-ಕಾಪಿಷ್ಠದ ಲಾಂತವ ಇಂದ್ರನು - ಇವರಿಬ್ಬರೂ ಇಂದ್ರರು ದಕ್ಷಿಣದಲ್ಲಿ ಇರುತ್ತಾರೆ ಆದರೆ ಅವರುಗಳ ಅಧಿಪತ್ಯವು ದಕ್ಷಿಣ-ಉತ್ತರ ಎಲ್ಲ ಕಡೆಗೂ ಇರುತ್ತದೆ. ಶುಕ್ರ-ಮಹಾಶುಕ್ರ ಸ್ವರ್ಗಗಳ ಮಹಾಶುಕ್ರ ಇಂದ್ರನು ಹಾಗೂ ಶತಾರ-ಸಹಸ್ರಾರ ಸ್ವರ್ಗಗಳ ಸಹಸ್ರಾರ ಇಂದ್ರನು ಇವರಿಬ್ಬರೂ ಉತ್ತರದ ಇಂದ್ರರಿದ್ದಾರೆ ಮತ್ತು ಉತ್ತರದಲ್ಲಿ ಇರುತ್ತಾರೆ ಆದರೆ ಅವರುಗಳ ಅಧಿಪತ್ಯವು ದಕ್ಷಿಣ-ಉತ್ತರ ಸರ್ವತ್ರ ಇರುತ್ತದೆ ಎಂದರೆ ನಡೆಯುತ್ತದೆ.

(ಯಾವುದೋ ನಂತರದ ಪುಸ್ತಕದಲ್ಲಿ ಶತಾರ ಯುಗಲದಲ್ಲಿ ಶತಾರ ಇಂದ್ರಕ ಮತ್ತು ಶತಾರ ಇಂದ್ರನೆಂಬ ಹೆಸರು ಬಂದಿದೆ ಹಾಗೂ ಶುಕ್ರಯುಗಲದಲ್ಲಿ ಶುಕ್ರ ಇಂದ್ರಕ ಮತ್ತು ಶುಕ್ರ ಇಂದ್ರನ ಹೆಸರು ಹೇಳಿದ್ದಾರೆ.)

ಆನತ-ಪ್ರಾಣತಯುಗಲದಲ್ಲಿ ಇಬ್ಬರು ಇಂದ್ರರಿದ್ದಾರೆ. ದಕ್ಷಿಣದ ಇಂದ್ರನು ಆನತನಿದ್ದರೆ ಉತ್ತರದಲ್ಲಿ ಪ್ರಾಣತ ಇಂದ್ರನಿದ್ದಾನೆ. ಅಲ್ಲಿಯ ಆನತ ಇಂದ್ರಕದ ದಕ್ಷಿಣದಲ್ಲಿ ಆರನೇ ಶ್ರೇಣಿಬದ್ಧ ವಿಮಾನದಲ್ಲಿ ಆನತ ಇಂದ್ರನು ಇರುತ್ತಾನೆ ಹಾಗೂ ಉತ್ತರದಲ್ಲಿ ಆರನೇ ಶ್ರೇಣಿಬದ್ಧ ವಿಮಾನದಲ್ಲಿ ಪ್ರಾಣತ ಇಂದ್ರನು ಇರುತ್ತಾನೆ.

ಆರಣ-ಅಚ್ಯುತ ಯುಗಲದಲ್ಲಿಯೂ ಕೂಡ ಇಬ್ಬರು ಇಂದ್ರರು ಇರುತ್ತಾರೆ. ಅಲ್ಲಿಯ ಆರಣ ಇಂದ್ರಕದ ದಕ್ಷಿಣದಲ್ಲಿ ಆರಣ ಇಂದ್ರನು ಮತ್ತು ಉತ್ತರದಲ್ಲಿ ಅಚ್ಯುತ ಇಂದ್ರನು ಇರುತ್ತಾನೆ. ಅಲ್ಲಿಯ ಆರಣ ಇಂದ್ರಕದ ದಕ್ಷಿಣದಲ್ಲಿ ಆರನೆಯ ಶ್ರೇಣಿಬದ್ಧ ವಿಮಾನದಲ್ಲಿ ಆರಣ ಇಂದ್ರನು ಹಾಗೂ ಉತ್ತರದ ಆರನೆಯ ಶ್ರೇಣಿಬದ್ಧ ವಿಮಾನದಲ್ಲಿ ಅಚ್ಯುತ ಇಂದ್ರನು ಇರುತ್ತಾನೆ.

ಈ ಇಂದ್ರರುಗಳ ವಿಮಾನಗಳು ಎಲ್ಲಿವೆಯೆಂಬುದನ್ನಂತೂ ನಾವು ನೋಡಿದೆವು. ಆದರೆ ಇವರು ಎಲ್ಲಿ ಇರುತ್ತಾರೆ? - ಎಂದರೆ ಇವರುಗಳ ನಗರಗಳಿರುತ್ತವೆ. ಯಾವ ರೀತಿ ವ್ಯಂತರರ ಇಂದ್ರರುಗಳ ಚರ್ಚೆ ಮಾಡಿದ್ದೆವು ಅದೇ ರೀತಿ ಕಲ್ಪವಾಸೀ ಇಂದ್ರರುಗಳ ನಗರಗಳೂ ದೊಡ್ಡ-ದೊಡ್ಡವಿರುತ್ತವೆ. ಅವು ಸಮಚತುರಸ್ರಚೌಕಾಕಾರದವಿರುತ್ತವೆ. ಅವುಗಳ ವಿಸ್ತಾರವು ಹೀಗಿದೆ - ಸೌಧರ್ಮದ ವಿಸ್ತಾರವು ೮೪ ಸಾವಿರ ಯೋಜನ, ಈಶಾನದ ೮೦ ಸಾವಿರ ಯೋಜನ, ಸನತ್ ಕುಮಾರದ ೭೨ ಸಾವಿರ ಯೋಜನ, ಮಾಹೇಂದ್ರದ

೭೦ ಸಾವಿರ ಯೋಜನ, ಬ್ರಹ್ಮ ಯುಗಲದ ವಿಸ್ತಾರವು ೬೦ ಸಾವಿರ ಯೋಜನ, ಲಾಂತವ ಯುಗಲದ ವಿಸ್ತಾರವು ೫೦ ಸಾವಿರ ಯೋಜನ, ಶುಕ್ರಯುಗಲದ ವಿಸ್ತಾರವು ೪೦ ಸಾವಿರ ಯೋಜನ, ಶತಾರ ಯುಗಲದ ವಿಸ್ತಾರವು ೩೦ ಸಾವಿರ ಯೋಜನ, ಮುಂದಿನ ನಾಲ್ಕು ಸ್ವರ್ಗಗಳ ನಗರಗಳ ವಿಸ್ತಾರವು ೨೦-೨೦ ಸಾವಿರ ಯೋಜನವಿದೆ.

ಈ ನಗರಗಳ ನಾಲ್ಕೂ ನಿಟ್ಟಿಗೆ ಐದು ಪ್ರಾಕಾರಗಳು ನಿರ್ಮಿಸಲ್ಪಟ್ಟಿರುತ್ತವೆ. ಹೇಗೆ ನಮ್ಮಲ್ಲಿ ದುರ್ಗಕ್ಕೆ ದ್ವಾರ ಸಹಿತ ಪ್ರಾಕಾರಗಳಿರುತ್ತವೆ ಹಾಗೆಂದು ತಿಳಿಯುವುದು. ಒಂದು ಪ್ರಾಕಾರದ ನಂತರ ವಿಶಾಲವಾದ ಅಂತರವನ್ನು ಬಿಟ್ಟು ಇನ್ನೊಂದು ಪ್ರಾಕಾರ, ತಿರುಗಿ ಮತ್ತೊಂದು ಎಂದರೆ ಮೂರನೆಯ ಪ್ರಾಕಾರ ಹೀಗೆ ಐದು ಪ್ರಾಕಾರಗಳಿರುತ್ತವೆ.

ಎಲ್ಲದರ ಮಧ್ಯದಲ್ಲಿ ಇಂದ್ರನ ನಗರವಿದೆ. ಅದರ ನಾಲ್ಕೂ ನಿಟ್ಟಿಗೆ ಮೊದಲಿನ ಪ್ರಾಕಾರ ಎಂದರೆ ಕೋಟೆಯಿದೆ. ಮೊದಲಿನ ಮತ್ತು ಎರಡನೇ ಕೋಟೆಯ ಮಧ್ಯದಲ್ಲಿ ೧೩ ಲಕ್ಷ ಯೋಜನದ ಮೊದಲನೇ ಅಂತರಾಳವಿದೆ ಅಲ್ಲಿ ಸೇನೆಯ ನಾಯಕರು ಮತ್ತು ಅಂಗರಕ್ಷಕರ ನಿವಾಸಗಳಿವೆ. ಎರಡನೇ ಮತ್ತು ಮೂರನೇ ಕೋಟೆಯ ಮಧ್ಯದಲ್ಲಿ ೬೩ ಲಕ್ಷ ಯೋಜನದ ಅಂತರವಿದೆ, ಅಲ್ಲಿ ಮೂರೂ ಜಾತಿಯ ದೇವಗಳಿರುತ್ತಾರೆ. ಮೂರನೇ ಮತ್ತು ನಾಲ್ಕನೇ ಕೋಟೆಯ ಮಧ್ಯದಲ್ಲಿ ೬೫ ಲಕ್ಷ ಯೋಜನದ ಅಂತರವಿದ್ದು ಅಲ್ಲಿ ಸಾಮಾನಿಕ ದೇವಗಳು ಇರುತ್ತಾರೆ. ನಾಲ್ಕನೇ ಮತ್ತು ಐದನೇ ಕೋಟೆಯ ಮಧ್ಯದಲ್ಲಿ ಇರುವ ನಾಲ್ಕನೆಯ ಅಂತರವು ೮೪ ಲಕ್ಷ ಯೋಜನದ್ದಿದೆ, ಅಲ್ಲಿ ಆಭಿಯೋಗ್ಯ ಮತ್ತು ಕಿಲ್ವಿಷಕ ದೇವಗಳಿರುತ್ತಾರೆ.

ಐದನೇ ಕೋಟೆಯಿಂದ ಹೊರಗೆ ಐವತ್ತು ಸಾವಿರ ಯೋಜನ ಹೋದ ನಂತರ ನಂದನವನಗಳಿರುತ್ತವೆ. ಅವು ಆನಂದವನ್ನುಂಟು ಮಾಡುವಂಥವಿರುವುದರಿಂದ ಸಾಮಾನ್ಯವಾಗಿ ಅವುಗಳನ್ನು ನಂದನವನವೆಂದು ಹೇಳುತ್ತಾರೆ, ಆದರೆ ಅವುಗಳ ಹೆಸರು ಬೇರೆ-ಬೇರೆಯಿದೆ. ಪೂರ್ವದಿಕ್ಕಿನಲ್ಲಿ ಅಶೋಕವನವಿದೆ, ದಕ್ಷಿಣದಲ್ಲಿ ಸಪ್ತಚ್ಛದವನವಿದೆ, ಪಶ್ಚಿಮದಲ್ಲಿ ಚಂಪಕವನವಿದೆ ಮತ್ತು ಉತ್ತರದಲ್ಲಿ ಆಮ್ರವನವಿದೆ. ಪ್ರತಿಯೊಂದು ವನವು ಒಂದು ಸಾವಿರ ಯೋಜನ ಉದ್ದ ಮತ್ತು ಐನೂರು ಯೋಜನ ಅಗಲವಿರುತ್ತದೆ. ಈ ಪ್ರತಿಯೊಂದು ವನದ ಮಧ್ಯಭಾಗದಲ್ಲಿ ಒಂದೊಂದು ಚೈತ್ಯ ವೃಕ್ಷಗಳು ಕಂಡು ಬರುತ್ತವೆ. ಈ ಚೈತ್ಯ ವೃಕ್ಷಗಳ ನಾಲ್ಕು ಪಾರ್ಶ್ವಭಾಗಗಳಲ್ಲಿ ಪದ್ಮಾಸನಸ್ಥ ಜಿನಪ್ರತಿಮೆಗಳು ವಿರಾಜಮಾನವಿವೆ.

ಈ ವನಖಂಡಗಳಿಂದ ಬಹಳಷ್ಟು ಯೋಜನ ಮುಂದೆ ಹೋದ ಮೇಲೆ ಪೂರ್ವ ಮೊದಲಾದ ದಿಕ್ಕುಗಳಲ್ಲಿ ಲೋಕಪಾಲರ ನಗರಗಳಿರುತ್ತವೆ. ಈ ನಗರಗಳ ಆಗ್ನೇಯ ಮೊದಲಾದ ನಾಲ್ಕು ವಿದಿಶೆಗಳಲ್ಲಿ ನಾಲ್ಕು ಗಣಿಕಾ ಮಹತ್ತರೆಯರಾದ ದೇವಾಂಗನೆಯರ ನಗರಗಳಿರುತ್ತವೆ.

ಇಂದ್ರರುಗಳ ಮಹಾದೇವಿಯರು ಎಂಟು-ಎಂಟು ಜನರಿರುತ್ತಾರೆ. ಒಬ್ಬೊಬ್ಬ ದೇವಿಯು ವಿಕ್ರಿಯೆಯ ಮೂಲಕ ಸಾವಿರಾರು ಶರೀರಗಳನ್ನು ಮಾಡಿಕೊಳ್ಳುತ್ತಾಳೆ. ಹೇಗೆಂದರೆ ಸೌಧರ್ಮ ಇಂದ್ರನ ಮಹಾದೇವಿಯರು ವಿಕ್ರಿಯೆಯ ಮೂಲಕ ೧೬೦೦೦-೧೬೦೦೦ ಶರೀರಗಳನ್ನು ಮಾಡಿಕೊಳ್ಳುತ್ತಾರೆ. ಇಂದ್ರರಿಗೆ ಪರಿವಾರ ದೇವಿಯರಿರುತ್ತಾರೆ. ಅವರೊಳಗಿಂದ ವಲ್ಲಭಿಕೆಯರು ಸೌಧರ್ಮಾದಿ ಯುಗಲದಲ್ಲಿ ಕ್ರಮದಿಂದ ೩೨೦೦೦, ೮೦೦೦, ೨೦೦೦, ೫೦೦ ಮೊದಲಾದ ಸಂಖ್ಯೆಯಲ್ಲಿ ಇರುತ್ತಾರೆ.

ಇಂದ್ರನ ಪುರದ ಹೆಸರು ಅಮರಾವತಿ ಇದೆ. ಅದರ ಮಧ್ಯದಲ್ಲಿ ಇಂದ್ರನು ವಾಸ ಮಾಡುವ ಮಂದಿರದ ಈಶಾನ್ಯ ವಿದಿಶೆಯಲ್ಲಿ ಸುಧರ್ಮಾ ಎಂಬ ಹೆಸರಿನ ಆಸ್ಥಾನ ಮಂಟಪವಿದೆ. ಇದು ೧೦೦ ಯೋಜನ ಉದ್ದ, ಐವತ್ತು ಯೋಜನ ಅಗಲ ಮತ್ತು ಎಪ್ಪತ್ತೈದು ಯೋಜನ ಎತ್ತರವಿದೆ. ಅದರ ಮಧ್ಯದಲ್ಲಿ ಇಂದ್ರನ ಸಿಂಹಾಸನವಿರುತ್ತದೆ. ಅದರ ಎದುರಿಗೆ ಎಂಟು ಪಟ್ಟದೇವಿಯರ ಎಂಟು ಆಸನಗಳಿರುತ್ತವೆ. ಅವುಗಳ ನಂತರ ಪೂರ್ವಾದಿ ದಿಕ್ಕುಗಳಲ್ಲಿ ಸೋಮ, ಯಮ, ವರುಣ, ಕುಬೇರ ಈ ನಾಲ್ವರು ಲೋಕಪಾಲರ ಆಸನಗಳಿರುತ್ತವೆ. ಬೇರೆಯೂ ಪಾರಿಷದ, ತ್ರಾಯಸ್ತ್ರಿಂಶತ್ ಮೊದಲಾಗಿ ಸಾವಿರಾರು ದೇವಗಳ ಆಸನಗಳು ಯಾವ ಯಾವ ದಿಶೆಗಳಲ್ಲಿರುತ್ತವೆ ಎಂಬುದರ ವಿಸ್ತೃತ ವರ್ಣನೆಯು ಶಾಸ್ತ್ರಗಳಲ್ಲಿ ಬರುತ್ತದೆ.

ಈ ಆಸ್ಥಾನ ಮಂಟಪದ ಮುಂದೆ ಮಾನಸ್ತಂಭವಿರುತ್ತದೆ, ಅದರ ಚರ್ಚೆ ಮಾಡುವ ಮುನ್ನ ಈ ವಿಮಾನಗಳ ಕುರಿತಾಗಿ ಸ್ವಲ್ಪ ತಿಳಿದುಕೊಳ್ಳೋಣ, ಮೊದಲಿಗೆ ಈ ವಿಮಾನಗಳ ವರ್ಣವನ್ನು ನೋಡೋಣ. ಸೌಧರ್ಮ-ಈಶಾನದ ವಿಮಾನಗಳು ಪಂಚವರ್ಣದವಿವೆ. ಸಾನತ್‌ಕುಮಾರ-ಮಾಹೇಂದ್ರದಲ್ಲಿ ಕೃಷ್ಣವರ್ಣವನ್ನು ಹೊರತು ಪಡಿಸಿ ಉಳಿದ ನಾಲ್ಕು ವರ್ಣದ ವಿಮಾನಗಳಿರುತ್ತವೆ. ಬ್ರಹ್ಮ ಮೊದಲಾದ ನಾಲ್ಕು ಕಲ್ಪಗಳಲ್ಲಿ ನೀಲ ವರ್ಣವನ್ನು ಹೊರತುಪಡಿಸಿ ಉಳಿದ ನಾಲ್ಕು ವರ್ಣದ ವಿಮಾನಗಳಿರುತ್ತವೆ. ಬ್ರಹ್ಮ ಮೊದಲಾದ ನಾಲ್ಕು ಕಲ್ಪಗಳಲ್ಲಿ ನೀಲ ವರ್ಣವನ್ನು ಹೊರತುಪಡಿಸಿ ಉಳಿದ ಮೂರು ವರ್ಣದ ವಿಮಾನಗಳು ಕಂಡು ಬರುತ್ತವೆ. ಶುಕ್ರಾದಿ ನಾಲ್ಕು ಕಲ್ಪಗಳಲ್ಲಿ ರಕ್ತವರ್ಣ ಅರ್ಥಾತ್ ಕೆಂಪು ವರ್ಣವನ್ನು ಹೊರತು ಪಡಿಸಿ ಉಳಿದ ಎರಡು ವರ್ಣದ ವಿಮಾನಗಳು ಕಂಡು ಬರುತ್ತವೆ. ಆನತದಿಂದ ಹಿಡಿದು ಅನುತ್ತರದವರೆಗಿನ ಎಲ್ಲ ವಿಮಾನಗಳು ಒಂದು ಶುಕ್ಲ ವರ್ಣದವೇ ಇರುತ್ತವೆ.

ಈ ವಿಮಾನಗಳಂತೂ ಭೂ ಖಂಡ ಎಂದರೆ ಪೃಥ್ವಿಯ ಖಂಡಗಳಿವೆ, ಇವು ಯಾವುದರ ಆಧಾರದಿಂದ ಇವೆ ? ಇಲ್ಲಿ ಆಧಾರಕೊಡುವಂಥ ಅನ್ಯ ಯಾವ ವಸ್ತುಗಳಿರುವುದಿಲ್ಲ. ಆದರೆ ಅಲ್ಲಿಯ ಪುದ್ಗಲಗಳು ಆ ರೂಪದಿಂದ ಪರಿಣಮಿತವಾಗಿರುತ್ತವೆ. ಅವುಗಳನ್ನು ಅಲ್ಲಿ ಆಧಾರ ನೀಡುವಂಥವೆಂದು ಹೇಳಲಾಗುತ್ತದೆ. ಅದು ಈ ಪ್ರಕಾರವಿದೆ -

ತಮ್ಮಗಳ ಹತ್ತಿರ ವಾತವಲಯಗಳ ಸಂಬಂಧದ ಯಾವ ಎರಡನೇ ನಂಬರಿನ ಚಾರ್ಟ ಇದೆ ಅದರಲ್ಲಿ ಈ ಸ್ವರ್ಗಗಳ ಆಧಾರದ ಮಾತನ್ನು ಹೇಳಲಾಗಿದೆ. ಸೌಧರ್ಮ ಯುಗಲವು ಜಲದ ಆಧಾರದಿಂದ ಇದೆ ಅರ್ಥಾತ್ ಸೌಧರ್ಮ ಮತ್ತು ಈಶಾನ ಸ್ವರ್ಗದ ವಿಮಾನಗಳು ಜಲರೂಪ ಪುದ್ಗಲ ಸ್ಕಂಧಗಳ ಆಧಾರದಿಂದ ಅವುಗಳ ಮೇಲೆ ನಿಂತುಕೊಂಡಿವೆ. ಈ ಸ್ವರ್ಗಗಳ ಅಕ್ಕ-ಪಕ್ಕದಲ್ಲಿ ಮತ್ತು ಕೆಳಗೆ ಯಾವ ಪುದ್ಗಲಗಳಿವೆ ಅವು ಜಲರೂಪ ಪರಿಣಮಿತವಾಗಿವೆ ಅದರಿಂದ ಅವುಗಳಿಗೆ ಜಲಾಧಾರವೆಂದು ಹೇಳಿದ್ದಾರೆ. ಸಾನತ್‌ಕುಮಾರ-ಮಾಹೇಂದ್ರ ವಿಮಾನಗಳಿಗೆ ಪವನಾಧಾರವಿದೆ - ಪವನರೂಪ ಪುದ್ಗಲ ಸ್ಕಂಧಗಳ ಆಧಾರದಿಂದ ಈ ವಿಮಾನಗಳು ಸ್ಥಿತವಿವೆ. ಮುಂದಿನ ನಾಲ್ಕು ಯುಗಲಗಳಿಗೆ ಅರ್ಥಾತ್ ಎಂಟು ಕಲ್ಪಗಳಿಗೆ ಜಲಪವನಾಧಾರವಿದೆ. ಆನತದಿಂದ ಹಿಡಿದು ಅನುತ್ತರದವರೆಗೆ ಎಲ್ಲ ವಿಮಾನಗಳು ಆಕಾಶದ ಆಧಾರದಿಂದ ಸ್ಥಿತವಿವೆ. ಇದನ್ನು ಶುದ್ಧ ಆಕಾಶವೆಂದು ಕೂಡ ಹೇಳುತ್ತಾರೆ. ಏಕೆಂದರೆ ಇದರಲ್ಲಿ ಜಲ ಅಥವಾ ಪವನರೂಪದ ಪುದ್ಗಲಗಳಿರುವುದಿಲ್ಲ, ಮಧ್ಯದಲ್ಲಿ ಕೇವಲ ಆಕಾಶವಿದೆ, ಅಂತರಾಳವಿದೆ.

ಈಗ ಈ ಕಲ್ಪಗಳ ದೇವಗಳ ಮುಕುಟಗಳಲ್ಲಿ ಯಾವ ಚಿಹ್ನೆಗಳಿರುತ್ತವೆ ಅವು ಈ ಪ್ರಕಾರವಿವೆ. ಇಲ್ಲಿ ಸೌಧರ್ಮಾದಿ ಹನ್ನೆರಡು ಕಲ್ಪಗಳಲ್ಲಿ ಹನ್ನೆರಡು ಸ್ಥಾನ, ಆನತ ಯುಗಲದ ಒಂದು ಸ್ಥಾನ ಮತ್ತು ಆರಣ ಯುಗಲದ ಒಂದು ಸ್ಥಾನ ಹೀಗೆ ಹದಿನಾಲ್ಕು ಸ್ಥಾನಗಳಲ್ಲಿ ಚಿಹ್ನೆಗಳು ಕ್ರಮದಿಂದ ಈ ಪ್ರಕಾರವಿವೆ - ೧) ಸೂಅರ, ೨) ಜಿಂಕೆ, ೩) ಎಮ್ಮೆ, ೪) ಮತ್ಸ್ಯ, ೫) ಆಮೆ, ೬) ಕಪ್ಪೆ, ೭) ಕುದುರೆ, ೮) ಆನೆ, ೯) ಚಂದಿರ, ೧೦) ಸರ್ಪ, ೧೧) ಗೇಂಡಾಮೃಗ, ೧೨) ಅಂದಗಾರ, ೧೩) ಎತ್ತು, ೧೪) ಕಲ್ಪವೃಕ್ಷ.

ಈಗ ಮಾನಸ್ತಂಭದ ಕಡೆಗೆ ಹೋಗೋಣ. ಆಸ್ಥಾನ ಮಂಟಪದ ಅರ್ಥಾತ್ ಸುಧರ್ಮಾ ಸಭೆಯ ಮುಂದೆ ಮಾನಸ್ತಂಭವಿರುತ್ತದೆ. ಪ್ರತಿಯೊಬ್ಬ ಇಂದ್ರನ ಸುಧರ್ಮಾ ಸಭೆಯ ಮುಂದೆ ಹೀಗೆಯೇ ಮಾನಸ್ತಂಭಗಳಿರುತ್ತವೆ. ಈ ಮಾನಸ್ತಂಭಗಳು ಒಂದು ಯೋಜನ ಅಗಲ ಮತ್ತು ಮೂವತ್ತಾರು ಯೋಜನ ಎತ್ತರವಿರುತ್ತವೆ. ಈ ಮಾನಸ್ತಂಭಗಳು ಪೀಠ ಸಹಿತ ಎಂದರೆ ವೇದಿಕೆ (ಜಗುಲಿ) ಸಹಿತವಿರುತ್ತವೆ. ಹನ್ನೆರಡು ಕೋಣಗಳಿಂದ ಕೂಡಿದ ಈ ಮಾನಸ್ತಂಭಗಳು ವೃತ್ತಾಕಾರದವಿರುತ್ತವೆ. ಇವುಗಳ ಪರಿಧಿಯು ಹನ್ನೆರಡು ಯೋಜನದ್ದಿದೆ ಪರಿಧಿಯಲ್ಲಿ ಹನ್ನೆರಡು ಮಗ್ಗಲುಗಳಿರುತ್ತವೆ. ಪ್ರತಿಯೊಂದು ಮಗ್ಗಲು ಒಂದೊಂದು ಹರದಾರಿ ಅಗಲವಿರುತ್ತದೆ.

ಪ್ರಶ್ನೆ :- ಸ್ವರ್ಗದ ಮಾನಸ್ತಂಭಗಳ ಪ್ರತಿಯೊಂದು ಮಗ್ಗಲು (ಒಂದು ಕೋಣದಿಂದ ಇನ್ನೊಂದು ಕೋಣದ ನಡುವಿನ ಅಂತರ) ಅದುಒಂದೊಂದು ಹರದಾರಿಯದು ಹೇಗಾಯಿತು ?

ಉತ್ತರ :- ಒಂದು ಯೋಜನ ಅರ್ಥಾತ್ ನಾಲ್ಕು ಹರದಾರಿ ವ್ಯಾಸವಿದೆ, ಸ್ಥೂಲರೂಪದಿಂದ ಅದರ ಮೂರು ಗುಣಿತ ಪರಿಧಿಯಾಗುತ್ತದೆ, ಅದು ಹನ್ನೆರಡು ಹರದಾರಿಯಾಯಿತು. ಅದರಲ್ಲಿ ಹನ್ನೆರಡು ಮಗ್ಗಲುಗಳಿವೆ ಆದುದರಿಂದ ಒಂದೊಂದು ಮಗ್ಗಲು (ಪ್ರತಿಯೊಂದು ಮಗ್ಗಲು) ಒಂದು ಹರದಾರಿಯದಾಯಿತು. ಎಂದರೆ ಒಂದು ಕೋಣದಿಂದ ಎರಡನೆಯ ಕೋಣದವರೆಗಿನ ಭುಜದ ಅಳತೆಯು ಒಂದು ಹರದಾರಿಯಾಯಿತು. ಇದೆಲ್ಲವನ್ನು ಪ್ರಮಾಣ ಯೋಜನ ಮತ್ತು ಪ್ರಮಾಣ ಹರದಾರಿಗಳಲ್ಲಿ ತಿಳಿಯುವುದು. ಈ ಮಾನಸ್ತಂಭವು ೩೬ ಯೋಜನ ಎತ್ತರವಿದೆ. ಇದರಲ್ಲಿ ಮೇಲಿನಿಂದ ರತ್ನಮಯ ಸರಪಳಿಯಲ್ಲಿ ನೇತಾಡುತ್ತಿರುವ ರತ್ನಮಯ ಕರಂಡಕಗಳು ಅರ್ಥಾತ್ ಪೆಟ್ಟಿಗೆಗಳು ತೂಗು ಸೇತುವೆಯಂತೆ ತೂಗುತ್ತಿರುತ್ತವೆ. ಮೇಲಿನಿಂದ ಆರೂ ಕಾಲು ಯೋಜನ ಮತ್ತು ಕೆಳಗಿನಿಂದ ಐದೂ ಮುಕ್ಕಾಲು ಯೋಜನ ಹೊರತು ಪಡಿಸಿ ಮಧ್ಯದಲ್ಲಿ ಇಪ್ಪತ್ತಾನ್ನಲ್ಕು ಯೋಜನದಲ್ಲಿ ಈ ಕರಂಡಕಗಳಿರುತ್ತವೆ. ಈ ಕರಂಡಕಗಳು ಹರದಾರಿಯ ನಾಲ್ಕನೇ ಒಂದು ಭಾಗ ಪ್ರಮಾಣ ಅಗಲ ಮತ್ತು ಒಂದು ಹರದಾರಿ ಉದ್ದವಿರುತ್ತವೆ. ಇವುಗಳಲ್ಲಿ ತೀರ್ಥಂಕರರುಗಳ ಗೃಹಸ್ಥಾವಸ್ಥೆಯಲ್ಲಿ - ಬಾಲಕ, ಯುವಕ, ರಾಜಾವಸ್ಥೆಯಲ್ಲಿ ಧರಿಸಲು ಯೋಗ್ಯವಿರುವ ಆಭರಣಗಳು ತುಂಬಿಕೊಂಡಿರುತ್ತವೆ. ಇಂದ್ರನು ಆ ವಸ್ತುಗಳನ್ನು ಇಲ್ಲಿಂದ ತಗೆದುಕೊಂಡು ಬಂದು ತೀರ್ಥಂಕರರಿಗೆ ತೊಡಿಸುತ್ತಾನೆ.

ಯಾವಾಗ ಜಿನ ಶಿಶುವಿನ ಜನ್ಮಾಭಿಷೇಕವಾಗುತ್ತದೆ ಆಗ ಇಂದ್ರನು ಸ್ವರ್ಗಗಳಿಂದ ಅವರ ಸಲುವಾಗಿ ವಸ್ತ್ರ ಹಾಗೂ ಆಭೂಷಣಗಳನ್ನು ತಗೆದುಕೊಂಡು ಬರುತ್ತಾನೆಂಬುದು ನಮಗೆಲ್ಲರಿಗೂ ತಿಳಿದ ವಿಷಯವಿದೆ. ಇನ್ನು ಯಾವ ತೀರ್ಥಂಕರರ ಆಭರಣ ಯಾವ ಕರಂಡಕಗಳಲ್ಲಿ ಇರುತ್ತವೆ ಎಂಬುದರದೂ ನಿಯಮವಿದೆ. ತೀರ್ಥಂಕರ ಅರ್ಥಾತ್ ತೀರ್ಥಂಕರರಾಗುವಂಥ ಜೀವರುಗಳ ಎಂಬುದಾಗಿ ತಿಳಿಯುವುದು, ಮುನಿದಶೆಯಲ್ಲಿಯೇ ನಗ್ನ

ದಿಗಂಬರ ಅವಸ್ಥೆಯಿರುತ್ತದೆಯೆಂದ ಮೇಲೆ ತೀರ್ಥಂಕರ ಅವಸ್ಥೆಯಾದ ಮೇಲೆ ವಸ್ತ್ರಾಭರಣ, ಆಭೂಷಣಗಳ ಪ್ರಶ್ನೆಯಾದರೂ ಎಲ್ಲಿಂದ ಉದ್ಭವಿಸುತ್ತದೆ ?

ಸೌಧರ್ಮ ಇಂದ್ರನ ಆಸ್ಥಾನ ಮಂಟಪದ ಎದುರಿಗೆ ಯಾವ ಮಾನಸ್ತಂಭವಿದೆ ಅದರಲ್ಲಿ ಇರುವಂಥ ಕರಂಡಕಗಳಲ್ಲಿ ಭರತ ಕ್ಷೇತ್ರದ ತೀರ್ಥಂಕರರುಗಳ ವಸ್ತ್ರಾಭರಣಗಳಿರುತ್ತವೆ. ಸೌಧರ್ಮ ಇಂದ್ರನು ಅವುಗಳನ್ನು ಇಲ್ಲಿ ಭರತಕ್ಷೇತ್ರಕ್ಕೆ ತಗೆದುಕೊಂಡು ಬರುತ್ತಾನೆ. ಈಶಾನ ಇಂದ್ರನ ಆಸ್ಥಾನ ಮಂಟಪದ ಎದುರಿಗೆ ಯಾವ ಮಾನಸ್ತಂಭವಿದೆ ಅದರಲ್ಲಿ ಇರುವಂಥ ಕರಂಡಕಗಳಲ್ಲಿ ಐರಾವತ ಕ್ಷೇತ್ರದ ತೀರ್ಥಂಕರರುಗಳ ವಸ್ತ್ರಾಭರಣಗಳು ಇರುತ್ತವೆ, ಅವುಗಳನ್ನು ಈಶಾನ ಇಂದ್ರನು ಐರಾವತ ಕ್ಷೇತ್ರಕ್ಕೆ ತಗೆದುಕೊಂಡು ಹೋಗುತ್ತಾನೆ.

ಮೇಲೆ ಯಾವ ಸನತ್‌ಕುಮಾರ ಯುಗಲವಿದೆ ಅದರಲ್ಲಿ ಸನತ್‌ಕುಮಾರನ ಆಸ್ಥಾನ ಮಂಟಪದ ಎದುರಿಗೆ ಇರುವ ಮಾನಸ್ತಂಭದಲ್ಲಿ ಇರುವಂಥ ಕರಂಡಕಗಳಲ್ಲಿ ಪೂರ್ವವಿದೇಹಕ್ಷೇತ್ರದ ತೀರ್ಥಂಕರರುಗಳ ಆಭರಣಗಳಿರುತ್ತವೆ ಮತ್ತು ಮಾಹೇಂದ್ರನ ಆಸ್ಥಾನ ಮಂಟಪದ ಎದುರಿಗೆ ಇರುವ ಮಾನಸ್ತಂಭದ ಕರಂಡಕಗಳಲ್ಲಿ ಪಶ್ಚಿಮ ವಿದೇಹ ಕ್ಷೇತ್ರದ ತೀರ್ಥಂಕರರುಗಳ ವಸ್ತ್ರಾಭರಣಗಳಿರುತ್ತವೆ. ದೇವಗಳು ಈ ಮಾನಸ್ತಂಭಗಳ ಪೂಜೆ ಮಾಡುತ್ತಾರೆ.

ಆ ಮಾನಸ್ತಂಭದ ಹತ್ತಿರ ಎಂಟು ಯೋಜನ ಉದ್ದ, ಎಂಟು ಯೋಜನ ಅಗಲ ಮತ್ತು ಎಂಟು ಯೋಜನ ಎತ್ತರವಿರುವ ಉಪಪಾದ ಗೃಹವಿದ್ದು ಅದರಲ್ಲಿ ಎರಡು ರತ್ನಮಯ ಶಯ್ಯೆಗಳಿರುತ್ತವೆ. ಅದು ಇಂದ್ರರುಗಳ ಜನ್ಮಸ್ಥಾನ - ಉಪಪಾದಸ್ಥಾನವಿದೆ. ಈ ಉಪಪಾದಗೃಹದ ಹತ್ತಿರ ಅನೇಕ ಶಿಖರಗಳಿಂದ ಯುಕ್ತವಾದ ಜಿನಮಂದಿರವಿದೆ.

ಕಲ್ಪವಾಸೀ ದೇವಗಳ ದೇವಾಂಗನೆಯರಂತೂ ಹದಿನಾರನೇ ಸ್ವರ್ಗದವರೆಗೆ ಕಂಡು ಬರುತ್ತಾರೆ ಆದರೆ ಅವರೆಲ್ಲರೂ ಸೌಧರ್ಮ-ಈಶಾನ ಸ್ವರ್ಗಗಳಲ್ಲಿಯೇ ಜನಿಸುತ್ತಾರೆ. ಯಾವ ದೇವಿಯೂ ಮೇಲಿನ ಸ್ವರ್ಗಗಳಲ್ಲಿ ಜನಿಸುವುದಿಲ್ಲ. ಅಲ್ಲಿಯಂತೂ ಕೇವಲ ದೇವಗಳೇ - ಪುರುಷರೇ ಜನಿಸುತ್ತಾರೆ. ಮೇಲು - ಮೇಲಿನ ಸ್ವರ್ಗಗಳ ದೇವಿಯರ ಆಯುವು ಅಧಿಕ-ಅಧಿಕವಿರುತ್ತದೆ. ಆದರೆ ಅವರೆಲ್ಲರ ಜನ್ಮವಂತೂ ಮೊದಲನೇ - ಎರಡನೇ ಸ್ವರ್ಗದಲ್ಲಿಯೇ ಆಗುತ್ತದೆ. ದಕ್ಷಿಣ ದಿಕ್ಕಿನ ಕಲ್ಪಗಳಿಗೆ ಸಂಬಂಧಿಸಿದ ದೇವಿಯರು ಸೌಧರ್ಮ ಸ್ವರ್ಗದಲ್ಲಿ ಮತ್ತು ಉತ್ತರ ದಿಕ್ಕಿನ ಕಲ್ಪಗಳಿಗೆ ಸಂಬಂಧಿಸಿದ ದೇವಿಯರು ಈಶಾನ ಸ್ವರ್ಗದಲ್ಲಿ ಜನ್ಮ ತಾಳುತ್ತಾರೆ.

ಅಲ್ಲಿಯೂ ಕೂಡ ಅದೆಷ್ಟೋ ವಿಮಾನಗಳಲ್ಲಿ ಕೇವಲ ದೇವಿಯರೇ ಉತ್ಪನ್ನರಾಗುತ್ತಾರೆ, ಅಲ್ಲಿ ಯಾವ ದೇವಗಳೂ ಕಂಡು ಬರುವುದಿಲ್ಲ. ಅನ್ಯ ವಿಮಾನಗಳಲ್ಲಿ ದೇವ ಹಾಗೂ ದೇವಿಯರಿರುತ್ತಾರೆ. ಹೇಗೆ ನಮ್ಮಲ್ಲಿ ಅದೆಷ್ಟೋ ಶಾಲೆಗಳಲ್ಲಿ ಕೇವಲ ಹೆಣ್ಣು ಮಕ್ಕಳೇ ಇರುತ್ತಾರೆ. ಬೇರೆ ಕೆಲವು ಇಬ್ಬರಿಂದ ಕೂಡಿರುತ್ತವೆ. ಕೇವಲ ದೇವಿಯರೇ ಉತ್ಪನ್ನವಾಗುವ ಮತ್ತು ದೇವಿಯರೇ ಇರುವಂಥ ಆರು ಲಕ್ಷ ವಿಮಾನಗಳು ಸೌಧರ್ಮ ಸ್ವರ್ಗದಲ್ಲಿವೆ ಮತ್ತು ಅಂಥ ನಾಲ್ಕು ಲಕ್ಷ ವಿಮಾನಗಳು ಈಶಾನ ಸ್ವರ್ಗದಲ್ಲಿವೆ ಹಾಗೂ ಸೌಧರ್ಮ ಸ್ವರ್ಗದಲ್ಲಿ ಉಳಿದ ಇಪ್ಪತ್ತಾರು ಲಕ್ಷ ವಿಮಾನಗಳು ಮತ್ತು ಈಶಾನ ಸ್ವರ್ಗದಲ್ಲಿ ಇಪ್ಪತ್ತಾ ನ್ನಲ್ಕು ಲಕ್ಷ ವಿಮಾನಗಳು ದೇವ ಮತ್ತು ದೇವಿಯರು ಇಬ್ಬರೂ ಇರುವಂಥವಿವೆ.

ಪ್ರಶ್ನೆ :- ಅವುಗಳಿಗೆ ಉಪಪಾದ ಶಯ್ಯೆಯೆಂದು ಅದೇಕೆ ಹೇಳುತ್ತಾರೆ ?

ಉತ್ತರ :- ಉಪಪಾದದ ಅರ್ಥವು ಜನ್ಮವಿದೆ. ಅಲ್ಲಿ ದೇವಗಳ ಜನ್ಮವಾಗುತ್ತದೆ ಎಂದರೆ ಅಂತರ್ಮುಹೂರ್ತದಲ್ಲಿ ಆರೂ ಪರ್ಯಾಪ್ತಿಗಳು ಪೂರ್ಣವಾಗಿ ಜೀವನು ಯುವಾವಸ್ಥೆಯ ದೇವನಾಗಿ ಉತ್ಪನ್ನನಾಗುತ್ತಾನೆ. ದೇವಗತಿಯ ಜೀವನು ಮಾತೆಯ ಗರ್ಭದಲ್ಲಿ ಉತ್ಪನ್ನನಾಗುವುದಿಲ್ಲ. ಇಲ್ಲಿ ನಮ್ಮಲ್ಲಿ ಕರ್ಮಭೂಮಿ ಮತ್ತು ಭೋಗಭೂಮಿಗಳಲ್ಲಿ ಗರ್ಭಜರು ಕಂಡು ಬರುತ್ತಾರೆ, ಅವರ ಚರ್ಚೆಯನ್ನು ಮುಂದೆ ಮಾಡಲಾಗುವುದು.

ಸೌಧರ್ಮದಲ್ಲಿ ಉತ್ಪನ್ನವಾಗುವಂಥ ದೇವಾಂಗನೆಯರು ಮೇಲಿನ ದಕ್ಷಿಣ ಸ್ವರ್ಗಗಳಲ್ಲಿ ಹೋಗುತ್ತಾರೆ ಮತ್ತು ಈಶಾನದಲ್ಲಿ ಉತ್ಪನ್ನವಾಗುವಂಥ ದೇವಾಂಗನೆಯರು ಮೇಲಿನ ಉತ್ತರ ಸ್ವರ್ಗಗಳಲ್ಲಿ ಹೋಗುತ್ತಾರೆ. ಮೇಲಿನ ದೇವಗಳು ಅವಧಿಜ್ಞಾನದಿಂದ ತಿಳಿದುಕೊಂಡು ತಮ್ಮ ತಮ್ಮ ನಿಯೋಗಿನಿ ದೇವಿಯರನ್ನು ಮೇಲೆ ತಗೆದುಕೊಂಡು ಹೋಗುತ್ತಾರೆ.

ನಮ್ಮಲ್ಲಿಯೂ ಹಾಗೆಯೇ ಆಗುತ್ತದೆಯಲ್ಲವೇನು ? ನಮ್ಮ ಭಾರತೀಯರು ವಿದೇಶಗಳಲ್ಲಿ ಇರುತ್ತಾರೆ ಮತ್ತು ಅವರು ಭಾರತದಲ್ಲಿ ಬಂದು ವಿವಾಹ ಮಾಡಿಕೊಂಡು ತಮ್ಮ ಪತ್ನಿಯರನ್ನು ತಗೆದುಕೊಂಡು ಹೋಗುತ್ತಾರೆ. ಯಾರೋ ಹೇಳುತ್ತಿದ್ದಾರೆ - 'ಅಲ್ಲಿ ಚೆನ್ನಾಗಿದೆ, ದೇವಗಳು ತಮ್ಮ ಅವಧಿ ಜ್ಞಾನದಿಂದ ತಿಳಿಯುತ್ತಾರೆ. ಇಲ್ಲಿ ತಾಯಿ, ತಂದೆಯರು ಮಕ್ಕಳ ಮದುವೆಯ ಚಿಂತೆ ಮಾಡಿ ಮಾಡಿ ಸತ್ತು ಹೋಗುತ್ತಾರೆ.'

ಉತ್ತರ :- ಏನು ಮಾಡಬಹುದಾಗಿದೆ ! ನಮಗೆ ಚಿಂತೆ ಮಾಡಿದಲ್ಲದೇ ಇರುವುದಾಗುವುದಿಲ್ಲ. ತಾಯಿ-ತಂದೆಯರು ಮಧ್ಯಸ್ತಿಕೆ ವಹಿಸಲೆಂದು ಮಕ್ಕಳಂತೂ ಬಯಸುವುದಿಲ್ಲ ಆದರೆ ನಮ್ಮ ಮೋಹವೇ ನಮ್ಮ ಮೇಲೆ ಮೇಲುಗೈ ಸಾಧಿಸುತ್ತಿರುವುದರಿಂದ ನಾವು ಸ್ವಾಧ್ಯಾಯ ಮೊದಲಾದ ಮಾಡಲು ಯೋಗ್ಯವಿರುವ ಕಾರ್ಯಗಳನ್ನು ಬಿಟ್ಟುಕೊಟ್ಟು ಹಗಲಿರುಳೂ ಅಂಥ ಚಿಂತೆಗಳಲ್ಲಿ ಕಾಲ ಕಳೆಯುತ್ತೇವೆ. ಹಾಗಂತೂ ನಮ್ಮ ಚಿಂತೆಯಿಂದಾಗಲಿ ಅಥವಾ ಇಚ್ಛೆಯಿಂದಾಗಲಿ ಏನೂ ಆಗುವುದಿಲ್ಲ ಮತ್ತು ಆಗಬೇಕಾಗಿರುವುದು ಅದು ನಿಶ್ಚಿತವಾಗಿ ಆಗಿಯೇ ಆಗುತ್ತದೆ.

ದೇವ ಮತ್ತು ದೇವಾಂಗನೆಯರ ಆಯುವಿನಲ್ಲಿ ಬಹಳಷ್ಟು ಅಂತರವಿರುತ್ತದೆ. ಹೇಗೆಂದರೆ ಸೌಧರ್ಮ ಸ್ವರ್ಗದಲ್ಲಿ ದೇವಗಳ ಉತ್ಕೃಷ್ಟ ಆಯುವು (ಸಾಧಿಕ) ಎರಡು ಸಾಗರವಿದ್ದರೆ ದೇವಿಯರದು ಐದು ಪಲ್ಯವಿದೆ. ಒಂದು ಸಾಗರದಲ್ಲಿ ಎಷ್ಟು ಪಲ್ಯಗಳಿರುತ್ತವೆ ? - ಹತ್ತು ಕೋಟಾಕೋಟಿ ಪಲ್ಯಗಳಿರುತ್ತವೆ. ಒಬ್ಬ ಇಂದ್ರನಿಗಂತೂ ಎಂಟು-ಎಂಟು ಪಟ್ಟದೇವಿಯರಿರುತ್ತಾರೆ, ಉಳಿದ ದೇವಿಯರೂ ಅನೇಕರಿರುತ್ತಾರೆ. ಹಾಗಾದರೆ ಆತನ ಎರಡು ಸಾಗರ ಆಯುವಿನಲ್ಲಿ ಎಷ್ಟು ದೇವಿಯರು ಸತ್ತು ಹೊರಟು ಹೋಗುತ್ತಾರೆ, ಅಂಥದರಲ್ಲಿ ಸುಖವೆಂಥದು ? ಶಚಿ ಇಂದ್ರಾಣಿಯು ನಿಯಮದಿಂದ ಮನುಷ್ಯ ಭವಧಾರಣ ಮಾಡುತ್ತಾಳೆ ಮತ್ತು ಮೋಕ್ಷಕ್ಕೆ ಹೊರಟು ಹೋಗುತ್ತಾಳೆ. ಹೀಗೆ ಅದೆಷ್ಟು ಶಚಿ ಇಂದ್ರಾಣಿಯರು ಒಬ್ಬರ ನಂತರ ಒಬ್ಬರಂತೆ ಅಲ್ಲಿಂದ ಸತ್ತು ಕರ್ಮಭೂಮಿಯಲ್ಲಿ ಬಂದು ಮೋಕ್ಷಕ್ಕೆ ಹೋಗುತ್ತಾರೆ ಮತ್ತು ಆ ಸೌಧರ್ಮ ಇಂದ್ರನಂತೂ ಅಲ್ಲಿಯೇ ವಿರಾಜಮಾನನಾಗಿ ಉಳಿಯುತ್ತಾನೆ.

ಯಾವ ದೇವಗಳು ಮುಂದಿನ ಭವದಲ್ಲಿ ನಿಯಮದಿಂದ ಮೋಕ್ಷಕ್ಕೆ ಹೋಗುತ್ತಾರೆ ಅವರನ್ನು ಏಕಭವಾವತಾರಿ ಅಥವಾ ಏಕಾವತಾರಿಗಳೆಂದು ಹೇಳುತ್ತಾರೆ. ಸೌಧರ್ಮ ಇಂದ್ರ ಹಾಗೂ ದಕ್ಷಿಣ ದಿಕ್ಕಿನ ಎಲ್ಲ ಇಂದ್ರರು, ಸೌಧರ್ಮದ ನಾಲ್ವರೂ ಲೋಕಪಾಲರು - ಯಮ, ಸೋಮ, ವರುಣ, ಕುಬೇರ ; ಶಚಿ ಇಂದ್ರಾಣಿ, ಲೋಕಾಂತಿಕ ದೇವಗಳು, ಸರ್ವಾರ್ಥಸಿದ್ಧಿ ವಿಮಾನದ ದೇವಗಳು - ಇವರೆಲ್ಲರೂ ಏಕಾವತಾರಿಗಳಿದ್ದಾರೆ. ಅವರು ಅಲ್ಲಿಂದ ಚ್ಯುತರಾಗಿ (ಮರಣಹೊಂದಿ) ಮನುಷ್ಯ ಭವದಲ್ಲಿ ಜನ್ಮತಾಳಿ ನಿಯಮದಿಂದ ಅದೇ ಭವದಿಂದ ಮೋಕ್ಷಕ್ಕೆ ಹೋಗುತ್ತಾರೆ. ಬೇರೆ ದೇವಗಳು ಹೋಗುವುದಿಲ್ಲವೆಂಬ ಮಾತಿಲ್ಲ; ಆದರೆ ಈ ಜೀವರುಗಳು ನಿಯಮದಿಂದ ಹೋಗುತ್ತಾರೆ. ಲೋಕಾಂತಿಕ ದೇವಗಳ ಮಾತನ್ನು ನಾವೆಲ್ಲರೂ ಆಗಮದ ಆಧಾರದಿಂದ ಮತ್ತು ಪಂಚಕಲ್ಯಾಣಕಗಳಲ್ಲಿ ಆಲಿಸಿದ್ದೇವೆ-ನೋಡಿದ್ದೇವೆ. ಬ್ರಹ್ಮಸ್ವರ್ಗದ ಎಂಟೂ ದಿಕ್ಕುಗಳಲ್ಲಿ (ದಿಶೆ ಮತ್ತು ವಿದಿಶೆ) ಹೊರ ಭಾಗದಲ್ಲಿ ಅವರ ವಿಮಾನಗಳಿರುತ್ತವೆ ಅಲ್ಲಿ ಅವರು ಬ್ರಹ್ಮಚರ್ಯಪೂರ್ವಕ ಇರುತ್ತಾರೆ. ಅವರ ಪರಿಣಾಮಗಳು ವೈರಾಗ್ಯಮಯವಿರುತ್ತವೆ. ಅವರನ್ನು ದೇವರ್ಷಿ ಅಥವಾ ಬ್ರಹ್ಮರ್ಷಿಗಳೆಂದು ಕೂಡ ಹೇಳುತ್ತಾರೆ. ತೀರ್ಥಂಕರರ ದೀಕ್ಷಾಕಲ್ಯಾಣಕದ ಸಮಯದಲ್ಲಿ ಬಂದು ಅವರು ದೀಕ್ಷೆಯ ಅನುಮೋದನೆ ಮಾಡುತ್ತಾರೆ.

ಇನ್ನು ಈಗ ಎಲ್ಲ ವೈಮಾನಿಕ ದೇವಗಳ ಜಘನ್ಯ ಮತ್ತು ಉತ್ಕೃಷ್ಟ ಆಯುವು ಎಷ್ಟಿರುತ್ತದೆ ಎಂಬುದನ್ನು ನೋಡಿರಿ.

ಸೌಧರ್ಮ-ಈಶಾನದಲ್ಲಿ ಜಘನ್ಯ ಆಯುವು ಒಂದು ಪಲ್ಯ ಮತ್ತು ಉತ್ಕೃಷ್ಟ ಆಯುವು ಎರಡು ಸಾಗರದ್ದಿದೆ. ಸನತ್‌ಕುಮಾರ-ಮಾಹೇಂದ್ರದಲ್ಲಿ ಜಘನ್ಯ ಆಯುವು ಒಂದು ಸಮಯ ಅಧಿಕ ಎರಡು ಸಾಗರ ಮತ್ತು ಉತ್ಕೃಷ್ಟ ಆಯುವು ಏಳು ಸಾಗರವಿದೆ. ಕೆಳಗಿನ ಸ್ವರ್ಗದ ಉತ್ಕೃಷ್ಟ ಆಯುವಿನಲ್ಲಿ ಒಂದು ಸಮಯ ಕೂಡಿಸಿದರೆ ಅದು ಅದರ ಮೇಲಿನ ಸ್ವರ್ಗದ ಜಘನ್ಯ ಆಯುವಾಗುತ್ತದೆ. ಇಂದ್ರರುಗಳ ಆಯುವಂತೂ ಅಧಿಕವೇ ಇರುತ್ತದೆ. ಎಲ್ಲಿ ಶುಭಭಾವವು ಅಧಿಕವಿರುತ್ತದೆ ಅರ್ಥಾತ್ ಕಷಾಯಗಳು ಮಂದತರವಿರುತ್ತವೆ, ಅಲ್ಲಿ ದೇವಾಯುವಿನ ಸ್ಥಿತಿಯು ಕೂಡ ಅಧಿಕ ಕಟ್ಟುತ್ತದೆ.

ಬ್ರಹ್ಮ ಯುಗಲದಲ್ಲಿ ಉತ್ಕೃಷ್ಟ ಆಯುವು ಹತ್ತುಸಾಗರವಿದೆ. ಲಾಂತವ ಯುಗಲದಲ್ಲಿ ಉತ್ಕೃಷ್ಟ ಆಯುವು ಹದಿನಾಲ್ಕು ಸಾಗರವಿದೆ. ಶುಕ್ರ ಯುಗಲದಲ್ಲಿ ಉತ್ಕೃಷ್ಟ ಆಯುವು ಹದಿನಾರು ಸಾಗರವಿದೆ, ಶತಾರ ಯುಗಲದಲ್ಲಿ ಹದಿನೆಂಟು ಸಾಗರವಿದೆ. ಆನತ ಯುಗಲದಲ್ಲಿ ಇಪ್ಪತ್ತುಸಾಗರವಿದೆ, ಆರಣ ಯುಗಲದಲ್ಲಿ ಇಪ್ಪತ್ತೆರಡು ಸಾಗರ ವರ್ಷದ ಉತ್ಕೃಷ್ಟ ಆಯುವಿದೆ.

ಮುಂದೆ ಪ್ರತಿಯೊಂದು ಗ್ರೈವೇಯಕದಲ್ಲಿ ಕ್ರಮದಿಂದ ಒಂದೊಂದು ಸಾಗರ ಹೆಚ್ಚುತ್ತ ಕೆಳಗಿನ ಮೊದಲನೇ ಗ್ರೈವೇಯಕದಲ್ಲಿ ಇಪ್ಪತ್ತೂರು ಸಾಗರದಿಂದ ಹಿಡಿದು ಮೇಲಿನ ಕೊನೆಯ ಅರ್ಥಾತ್ ಒಂಭತ್ತನೆಯ ಗ್ರೈವೇಯಕದಲ್ಲಿ ಉತ್ಕೃಷ್ಟ ಆಯುವು ಮೂವತ್ತೊಂದು ಸಾಗರವಿದೆ. ಅನುದಿಶೆಗಳಲ್ಲಿ ಉತ್ಕೃಷ್ಟ ಆಯುವು ಮೂವತ್ತೆರಡು ಸಾಗರವಿದೆ ಮತ್ತು ಅನುತ್ತರಗಳಲ್ಲಿ ಉತ್ಕೃಷ್ಟ ಆಯುವು ಮೂವತ್ತೂರು ಸಾಗರ ವರ್ಷಗಳದ್ದಿದೆ.

ಇನ್ನು ಶಾಸ್ತ್ರಗಳಲ್ಲಿ ಘಾತಾಯುಷ್ಕದ ಮಾತು ಬರುತ್ತದೆ. ಸೌಧರ್ಮ ಸ್ವರ್ಗ ಯುಗಲದಲ್ಲಿ ಉತ್ಕೃಷ್ಟ ಆಯುವು ಎರಡು ಸಾಗರದ್ದಿದೆ ಎಂಬುದನ್ನಂತೂ ನಾವು ತಿಳಿದೆವು. ಆದರೆ ಅಲ್ಲಿ ಅದೆಷ್ಟೋ ಜೀವಗಳು

ಎರಡೂವರೆ ಸಾಗರ ಆಯುವುಳ್ಳವರೂ ಕಂಡು ಬರುತ್ತಾರೆ. ಈ ಅರ್ಧ ಸಾಗರವು ಅಧಿಕವೆಲ್ಲಿಂದ ಬಂತು ? ಏಕೆಂದರೆ ಕಟ್ಟುವ ಸಮಯದಲ್ಲಂತೂ ಎರಡು ಸಾಗರಕ್ಕಿಂತ ಅಧಿಕ ಅಲ್ಲಿಯ ಆಯುವು ಕಟ್ಟುವುದಿಲ್ಲ. ಈ ಎರಡೂವರೆ ಸಾಗರ ಆಯುವುಳ್ಳವರನ್ನು ಘಾತಾಯುಷ್ಕ ಸಮ್ಯಗ್ದೃಷ್ಟಿಗಳೆಂದು ಹೇಳುತ್ತಾರೆ. ಯಾವ ಸಮ್ಯಗ್ದೃಷ್ಟಿ ಜೀವರುಗಳು ಮೊದಲು ಮೇಲಿನ ಸ್ವರ್ಗಗಳ ಸಂಬಂಧದ ಅಧಿಕ ಆಯುವನ್ನು ಕಟ್ಟಿಕೊಂಡಿದ್ದರು ಎಂದರೆ ೪, ೫ ಅಥವಾ ೭ ಸಾಗರದ ಆಯುವನ್ನು ಕಟ್ಟಿಕೊಂಡಿದ್ದರೆಂದು ತಿಳಿಯೋಣ. ಅವರ ಪರಿಣಾಮಗಳಲ್ಲಿ ಎಂಥ ಒಂದು ವಿಚಿತ್ರತೆಯು ಸಂಭವಿಸುತ್ತದೆಯೆಂದರೆ ಅದರಿಂದ ಅವರುಗಳ ಆ ಕಟ್ಟಿದ ಆಯುವು ಕಡಿಮೆಯಾಗಿ ಕೆಳಗಿನ ಸ್ವರ್ಗದ ಉತ್ಕೃಷ್ಟ ಆಯು ಎಂದರೆ ಯಾವ ಎರಡು ಸಾಗರವಿದೆ ಅದರಲ್ಲಿ ಒಂದು ಅಂತರ್ಮುಹೂರ್ತ ಕಡಿಮೆ ಅರ್ಧಸಾಗರ ಅಧಿಕದಷ್ಟು ಅರ್ಥಾತ್ ಎರಡೂವರೆ ಸಾಗರ ಉಳಿದು ಬಿಡುತ್ತದೆ. ಈ ಘಾತವು ಬಧ್ಯಮಾನ ಆಯುವಿನಲ್ಲಿ ಆಗುತ್ತದೆ ಭುಜ್ಯಮಾನ ಆಯುವಿನಲ್ಲಿ ಆಗುವುದಿಲ್ಲ.

ಇದರ ಅರ್ಥವೇನೆಂಬುದನ್ನು ಈಗ ನೋಡೋಣ. ನಾವು ವರ್ತಮಾನದಲ್ಲಿ ಯಾವ ಆಯುವನ್ನು ಭೋಗಿಸುತ್ತೇವೆ - ಯಾವ ಆಯುವಿನ ಉದಯವು ನಡೆಯುತ್ತಲಿದೆ ಅದನ್ನು ಭುಜ್ಯಮಾನ ಆಯುವೆಂದು ಹೇಳುತ್ತಾರೆ. ನಾವು-ನೀವೆಲ್ಲರೂ ಮನುಷ್ಯರ ಭುಜ್ಯಮಾನ ಆಯು ಮನುಷ್ಯಾಯುವಿದ್ದೇವೆ. ವರ್ತಮಾನ ಭವದಲ್ಲಿ ಆಗಾಮಿ ಭವ ಸಂಬಂಧದ ಯಾವ ಆಯುವಿನ ಬಂಧವಾಗುತ್ತದೆ ಅದನ್ನು ಬಧ್ಯಮಾನ ಆಯುವೆಂದು ಹೇಳುತ್ತಾರೆ. ಒಂದು ಬಾರಿ ಆಯುವಿನ ಬಂಧವಾಗಿ ಹೋದ ಮೇಲೆ ಆ ಬಂಧಿಸಲ್ಪಟ್ಟಿರುವ ಆಯುವಿನ ಸ್ಥಿತಿಯು ಪರಿಣಾಮಗಳ ವಶದಿಂದ ಕಡಿಮೆಯಾಗುವುದನ್ನು ಘಾತಾಯುಷ್ಕವೆನ್ನುತ್ತಾರೆ ದೇವಾಯುವಿನ ಬಂಧ ಮಾಡಿಕೊಂಡಿರುವಂಥ ಜೀವನು ಒಂದು ವೇಳೆ ಸಮ್ಯಗ್ದೃಷ್ಟಿಯಾಗಿದ್ದರೆ ಕೆಳಗಿನ ಸ್ವರ್ಗದ ಉತ್ಕೃಷ್ಟ ಆಯುವಿಗಿಂತ ಅವನ ಆಯುವು ಅರ್ಧಸಾಗರ ಅಧಿಕ ಉಳಿಯುತ್ತದೆ ಮತ್ತು ಒಂದು ವೇಳೆ ಘಾತಾಯುಷ್ಕ ಜೀವನು ಮಿಥ್ಯಾದೃಷ್ಟಿಯಾಗಿದ್ದರೆ ಅವನ ಆಯುವು ಕೆಳಗಿನ ಸ್ವರ್ಗದ ಉತ್ಕೃಷ್ಟ ಆಯುವಿಗಿಂತ ಪಲ್ಯದ ಅಸಂಖ್ಯಾತದ ಒಂದು ಭಾಗ ಪ್ರಮಾಣ ಉಳಿದು ಬಿಡುತ್ತದೆ. ಬಧ್ಯಮಾನ ಆಯುವಿನ ಬಂಧಿಸಲ್ಪಟ್ಟಿರುವ ಸ್ಥಿತಿಯು ಅದೇ ಭವದಲ್ಲಿ ಕಡಿಮೆಯಾಗಿ ಹೋಗುವುದಕ್ಕೆ ಘಾತಾಯುಷ್ಕವೆನ್ನುತ್ತಾರೆ ಮತ್ತು ವರ್ತಮಾನದ ಅರ್ಥಾತ್ ಭುಜ್ಯಮಾನ ಆಯುವು ಕಡಿಮೆಯಾಗಿ ಹೋಗುವುದನ್ನು - ಘಾತವಾಗುವುದನ್ನು ಕದಲೀಘಾತವೆಂದು ಹೇಳುತ್ತಾರೆ. ದೇವಗಳು, ನಾರಕಿಗಳು ಹಾಗೂ ಭೋಗ ಭೂಮಿಜರುಗಳಲ್ಲಿ ಇಂಥ ಕದಲೀಘಾತವಾಗುವುದಿಲ್ಲ. ಕರ್ಮಭೂಮಿಯ ಮನುಷ್ಯರು ಮತ್ತು ತಿರ್ಯಂಚಗಳಲ್ಲಿ ಕದಲೀಘಾತವಾಗಿ ಮರಣವಾಗುವ ಸಾಧ್ಯತೆಯಿದೆ.

ಇಲ್ಲಿ ಯಾವನೋ ಜೀವನು ೧೦೦ ವರ್ಷಗಳ ಮನುಷ್ಯಾಯುವನ್ನು ಕಟ್ಟಿಕೊಂಡು ಬಂದಿದ್ದಾನೆಂದು ತಿಳಿಯೋಣ - ಅವನು ಮನುಷ್ಯನಾಗಿ ಜನ್ಮತಾಳಿದ್ದಾನೆ ಅರ್ಥಾತ್ ಅವನದು ಭುಜ್ಯಮಾನ ಮನುಷ್ಯಾಯುವು ನಡೆಯುತ್ತಿದೆ. ಆದರೆ ಇಪ್ಪತ್ತೈದನೇ ವರ್ಷದಲ್ಲಿ ಅಪಘಾತ, ರೋಗ, ವಿಷಭಕ್ಷಣೆ ಮೊದಲಾದ ನಿಮಿತ್ತಗಳಿಂದ ಅವನ ಆಯುವಿನ ನಿಷೇಕಗಳ ಘಾತವಾಗಿ ಅಲ್ಲಿಯ ಎಲ್ಲ ಪರಮಾಣುಗಳು ಉದಯದಿಂದ ಹಿಡಿದು ಅಂತರ್ಮುಹೂರ್ತ ಪ್ರಮಾಣ ನಿಷೇಕಗಳಲ್ಲಿ ಕೆಳಗೆ ಬಂದು ಬಿಡುತ್ತವೆ ಮತ್ತು ಅದರ ನಂತರ ಅಲ್ಲಿ ಆಗಾಮಿ ಮುಂಬರುವ ಆಯುವಿನ ಬಂಧವಾಗಿ ಜೀವನು ಅಂತರ್ಮುಹೂರ್ತದಲ್ಲಿ ಸತ್ತು ಹೋಗುತ್ತಾನೆ.

ಭುಜ್ಯಮಾನ ಆಯುವಿನ ಘಾತವನ್ನು ಕದಲೀಘಾತವೆಂದು ಹೇಳುತ್ತಾರೆ. ಮತ್ತು ಬಧ್ಯಮಾನ ಆಯುವಿನ ಘಾತವನ್ನು ಘಾತಾಯುಷ್ಕವೆಂದು ಹೇಳುತ್ತಾರೆ. ಘಾತಾಯುಷ್ಕ ಜೀವರುಗಳು ಸಹಸ್ರಾರ ಸ್ವರ್ಗದವರೆಗೇ ಕಂಡು ಬರುತ್ತಾರೆ, ಮೇಲೆ ಇರುವುದಿಲ್ಲ.

ದೇವಗಳಲ್ಲಿ ಯುವಕರಾಗಿಯೇ ಜನ್ಮವಾಗುತ್ತದೆ. ಅವರಿಗೆ ತಾಯಿ-ತಂದೆಯರು ಇರುವುದಿಲ್ಲ. ಉಪಪಾದ ಶಯ್ಯೆಯ ಮೇಲೆಯೇ ಅವರ ಉತ್ಪತ್ತಿಯಾಗುತ್ತದೆ. ಜೀವನ ಪರ್ಯಂತ ಅವರು ಇದ್ದಕ್ಕಿದ್ದ ಹಾಗೆಯೇ ಯುವಕರಾಗಿ ಉಳಿಯುತ್ತಾರೆ. ಸಾಗರೋಪಮ ಆಯುವಿದ್ದರೂ ಅವರು ನಮ್ಮ ಹಾಗೆ ವೃದ್ಧರಾಗುವುದಿಲ್ಲ. ಕೇವಲ ಮರಣಕ್ಕಿಂತ ಮೊದಲು ಆರು ತಿಂಗಳು ಉಳಿದ ಮೇಲೆ ಅವರ ಕೊರಳಲ್ಲಿನ ಮಾಲೆಗಳು ಬಾಡುತ್ತವೆ. ಶರೀರದ ಕಾಂತಿಯು ಕಡಿಮೆಯಾಗಿ ಹೋಗುತ್ತದೆ.

ಇನ್ನು ಆ ಆರು ತಿಂಗಳಂತೂ ನಮ್ಮ ಕಾಲಗಣನೆಯ ಅನುಸಾರ ಹೇಳಿದ್ದಾರೆ. ಅಲ್ಲಿಯಂತೂ ಹಗಲು-ರಾತ್ರಿಗಳ ಯಾವ ಭೇದವಿರುವುದಿಲ್ಲ. ಇಲ್ಲಿ ಚಂದ್ರ ಸೂರ್ಯರುಗಳ ಭ್ರಮಣದ ಕಾರಣ ಹಗಲು ಮತ್ತು ರಾತ್ರಿಗಳ ಭೇದವಾಗುತ್ತದೆ. ಪ್ರಕಾಶವಂತನಿರುವ ಸೂರ್ಯನು ಯಾವ ಕ್ಷೇತ್ರದಲ್ಲಿ ಬರುತ್ತಾನೆ ಅಲ್ಲಿ ಪ್ರಕಾಶವಾಗುತ್ತದೆ, ಅವನು ಮುಂದೆ ಹೊರಟು ಹೋದಾಗ ಕತ್ತಲು-ಅಂಧಕಾರವಾಗುತ್ತದೆ.

ಪ್ರಶ್ನೆ - ಅಲ್ಲಿ ಚಂದ್ರ-ಸೂರ್ಯರು ಏಕೆ ಇರುವುದಿಲ್ಲ. ?

ಉತ್ತರ :- ಈ ಚಂದ್ರ-ಸೂರ್ಯ, ತಾರೆಯರೆಲ್ಲರೂ ಈ ಮೊದಲನೆಯ ಪೃಥ್ವಿಯಿಂದ ಏಳು ನೂರಾ ತೊಂಭತ್ತು ಯೋಜನದಿಂದ ಹಿಡಿದು ಒಂಭತ್ತು ನೂರು ಯೋಜನದವರೆಗೇನೆ ಇರುತ್ತಾರೆ ಮತ್ತು ಸ್ವರ್ಗಗಳಂತೂ ಒಂದು ಲಕ್ಷ ನಲವತ್ತು ಯೋಜನ ಎತ್ತರವಿರುವಂಥ ಮೇರು ಪರ್ವತದ ಮೇಲೆಯಿಂದ ಆರಂಭವಾಗುತ್ತವೆ. ಅಲ್ಲಿ ಯಾವ ಚಂದ್ರಾದಿಕರು ಇರುವುದಿಲ್ಲ. ಅಲ್ಲಿಯಂತೂ ಕಲ್ಪವೃಕ್ಷಗಳ ಪ್ರಕಾಶವಿರುತ್ತದೆ.

ಇಲ್ಲಿ ಭರತ ಕ್ಷೇತ್ರದಲ್ಲಿಯೂ ಕೂಡ ಯಾವಾಗ ಭೋಗಭೂಮಿಯಿತ್ತು ಆಗ ಕಲ್ಪವೃಕ್ಷಗಳ ಪ್ರಕಾಶವೇ ಕಂಡು ಬರುತ್ತಿತ್ತು. ಹಾಗಾದರೆ ಆ ಸಮಯದಲ್ಲಿ ಇಲ್ಲಿಯೂ ಚಂದ್ರ, ಸೂರ್ಯ, ತಾರೆಯರು ಇದ್ದರೋ ಅಥವಾ ಇರಲಿಲ್ಲ? ಅಹುದು, ಇದ್ದರು ! ಆದರೆ ಕಲ್ಪವೃಕ್ಷಗಳ ಪ್ರಕಾಶದ ಎದುರಿಗೆ ಅವರ ಪ್ರಕಾಶವು ಮಂದವಾಗಿ ಹೋಗಿತ್ತು.

ಪ್ರಶ್ನೆ :- ಅಲ್ಲಿ ಸೂರ್ಯ, ಚಂದ್ರರು ಇರುವುದಿಲ್ಲವೆಂದ ಮೇಲೆ ಕಾಲವನ್ನು ಹೇಗೆ ಗಣಿಸುತ್ತಾರೆ ? ಗಡಿಯಾರವಾದರೂ ಇದೆಯೋ ಅಥವಾ ಇಲ್ಲ ?

ಉತ್ತರ :- ಕಾಲಗಣನೆಯ ಸಲುವಾಗಿ ಅವರದೂ ಯಾವುದಾದರೂ ವ್ಯವಸ್ಥೆಯಂತೂ ಇರಲೇಬೇಕಾಗುವುದು. ಅವರದಂತೂ ಲಕ್ಷಾಂತರ ಕೋಟ್ಯಂತರ ವರ್ಷಗಳ ಆಯುವಿರುತ್ತದೆ ಅದು ಸಾಗರಗಳಲ್ಲಿ ಇರುತ್ತದೆ. ಹಾಗಿದ್ದ ಮೇಲೆ ಅಲ್ಲಿ ಅವರು ಕಾಲದ ಗಣನೆಯನ್ನು ಹೇಗೆ ಮಾಡುತ್ತಿರಬಹುದು ? - ಎಂಬುದು ಪ್ರಶ್ನೆಯೇ ಇದೆ, ನಾವು ಓದಿದ ಆಗಮಗಳಲ್ಲಿ ಇದು ಕಂಡು ಬಂದಿಲ್ಲ.

ದೇವಗಳಲ್ಲಿ ಮತ್ತು ನಾರಕಿಗಳಲ್ಲಿ ಸಾಗರದ ಗಣನೆಯಿಂದ ಆಯುವಿರುತ್ತದೆ. ಅಲ್ಲಿಯಂತೂ ಸಾವಿರಾರು ಕೋಟಿ ವರ್ಷಗಳು ಕಳೆದು ಹೋದುದರ ಪರಿವೆಯೇ ಇರುವುದಿಲ್ಲ. ಸ್ವರ್ಗದ ಜೀವಗಳಂತೂ ಭೋಗವಿಲಾಸದಲ್ಲಿ ಮುಳುಗಿ ಹೋಗಿರುತ್ತಾರೆ ಮತ್ತು ನರಕಗಳಲ್ಲಿ ಇತರರಿಗೆ ಪೀಡೆ ಕೊಡುವ ಸಂಕ್ಲೇಶ ಪರಿಣಾಮಗಳಲ್ಲಿ ಮಗ್ನರಾಗಿರುತ್ತಾರೆ. ಅಲ್ಲಿಯಂತೂ ಯಾರೂ ಗಾಢವಾಗಿ ನಿದ್ರಿಸುವುದೂ ಇಲ್ಲ. ನಿದ್ರೆಯ ಐದು ಪ್ರಕಾರಗಳನ್ನು ಆಲಿಸಿದ್ದೇವೆಯಲ್ಲವೇನು ? ಅಹುದು - ಸ್ತ್ಯಾನಗೃದ್ಧಿ, ನಿದ್ರಾನಿದ್ರಾ, ಪ್ರಚಲಾಪ್ರಚಲಾ, ಪ್ರಚಲಾ, ನಿದ್ರಾ.

ದೇವ ಮತ್ತು ನಾರಕಿಗಳಿಗೆ ಮೊದಲಿನ ಮೂರು ಅತ್ಯಂತ ಗಾಢನಿದ್ರೆ - ಸ್ತ್ಯಾನಗೃದ್ಧಿ, ಪ್ರಚಲಾಪ್ರಚಲಾ ಮತ್ತು ನಿದ್ರಾನಿದ್ರಾ ಕರ್ಮಗಳ ಉದಯವೇ ಇರುವುದಿಲ್ಲ, ಅಲ್ಲಿ ಮಲಗಿಕೊಳ್ಳಲು ಸಿಗುವುದಿಲ್ಲ ಅಂತೆಯೇ ಇಲ್ಲಿ ಮಲಗಿಕೊಳ್ಳುತ್ತೇವೆ. (ಸ್ವಾಧ್ಯಾಯ, ವಿಧಾನ ಮೊದಲಾದ ದೀರ್ಘ ಪೂಜೆ, ಜಪ ಮಾಡುವಾಗ, ಶಾಸ್ತ್ರ ಶ್ರವಣದ ಸಮಯದಲ್ಲಿಯೂ ಕೆಲವರು ನಿದ್ರಿಸುತ್ತಾರೆ ಪಾಪ !)

ಅಲ್ಲಿಯ ಉಚ್ಛ್ವಾಸ, ಆಹಾರ ಮೊದಲಾದವುಗಳ ಕುರಿತಾಗಿ ಭವನತ್ರಿಕದ ಸಂದರ್ಭದಲ್ಲಿ ಮಾಡಿದ ಚರ್ಚೆಯ ಅನುಸಾರವಾಗಿಯೇ ತಿಳಿಯುವುದು. ಯಾರ ಆಯುವು ಎರಡು ಸಾಗರದ್ದಿದೆ ಅವರು ಎರಡು ಪಕ್ಷ ಎಂದರೆ ಒಂದು ತಿಂಗಳು ಕಳೆದ ಮೇಲೆ ಉಚ್ಛ್ವಾಸ ತಗೆದುಕೊಳ್ಳುತ್ತಾರೆ ಅರ್ಥಾತ್ ಅವರಿಗೆ ಒಂದೊಂದು ತಿಂಗಳಿನ ಅಂತರದಿಂದ ಉಸಿರಾಟವಿರುತ್ತದೆ ಮತ್ತು ಎರಡು ಸಾವಿರ ವರ್ಷಗಳಿಗೊಮ್ಮೆ ಆಹಾರವಾಗುತ್ತದೆ. ಕಂಠದಿಂದ ಅಮೃತವು ಸ್ರವಿಸುವುದೇ ಅವರ ಆಹಾರವಿದೆ. ಎಂದರೆ ಅವರಿಗೆ ಮಾನಸಿಕ ಆಹಾರವಿರುತ್ತದೆ. ಕವಲಾಹಾರವಿರುವುದಿಲ್ಲ.

ಪ್ರಶ್ನೆ :- ಸ್ವರ್ಗಗಳ ಆಯುವು ಅತ್ಯಂತ ಕಡಿಮೆಯೆಂದರೆ ಹತ್ತು ಸಾವಿರ ವರ್ಷದ್ದಿರುತ್ತದೆ ಎಂದು ಆಲಿಸಿದ್ದೆವು ?

ಉತ್ತರ :- ಈ ಹತ್ತು ಸಾವಿರ ವರ್ಷಗಳ ಜಘನ್ಯ ಆಯುವು ಭವನವಾಸಿ ಮತ್ತು ವ್ಯಂತರರಿಗೆ ಇರುತ್ತದೆ. ಜ್ಯೋತಿಷಿಗಳ ಜಘನ್ಯ ಆಯುವು ಪಲ್ಯದ ಎಂಟನೇ ಒಂದು ಭಾಗದಷ್ಟಿರುತ್ತದೆ ಹಾಗೂ ಈ ವಿಮಾನವಾಸಿ ಸೌಧರ್ಮ - ಈಶಾನದ ದೇವಗಳ ಜಘನ್ಯ ಆಯುವು ಒಂದು ಪಲ್ಯ ಪ್ರಮಾಣವಿರುತ್ತದೆ.

ಉಳಿದ ಚರ್ಚೆಯನ್ನು ನಂತರ ಮಾಡಲಾಗುವುದು.

ವಿದೇಹಕ್ಷೇತ್ರದಲ್ಲಿ ವಿರಾಜಮಾನರಿರುವ ಒಂಭತ್ತನೆಯ ತೀರ್ಥಂಕರ
ಶ್ರೀ ಸೂರ್ಯಪ್ರಭ ಭಗವಂತರಿಗೆ ಜಯವಾಗಲಿ

★★★★★

ಅರಿತು ಕ್ಷಮಾಗುಣಧರ ! ಕ್ಷಮಿಸು ತ್ರಿವಿಧದಿ ಸಕಲ ಜೀವಗಳನು ।
ಚಿರ ಸಂಚಿತ ಕ್ರೋಧಾಗ್ನಿಯನು ನೀನು ಉತ್ತಮ ಕ್ಷಮಾಗುಣದಿಂದ ಶಮಿಸು ॥

೧೦. ದೇವಗಳಲ್ಲಿ ಗತಿ-ಆಗತಿ, ಮಧ್ಯಲೋಕ

ಇಲ್ಲಿ ನಾವು ತ್ರಿಲೋಕಸಾರದ ಆಧಾರದಿಂದ ತ್ರಿಭುವನದ ರಚನೆಯನ್ನು ನೋಡುತ್ತಿದ್ದೇವೆ - ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ದೇವಗಳಿಗೆ ಸಂಬಂಧಿಸಿದ ಚರ್ಚೆಯು ಸ್ವಲ್ಪ ಉಳಿದಿದೆ ಅದನ್ನು ಮುಗಿಸಿ ನಾವು ಮಧ್ಯಲೋಕ ಅರ್ಥಾತ್ ತಿರ್ಯಕ್‌ಲೋಕದ ಸ್ವರೂಪವನ್ನು ತಿಳಿದುಕೊಳ್ಳೋಣ.

ದೇವಗಳಲ್ಲಿ ಯಾವ-ಯಾವ ಗುಣಸ್ಥಾನಗಳಿರುತ್ತವೆ ? - ಎಂಬುದರ ಉತ್ತರವು ಹೀಗಿದೆ - ಒಂಭತ್ತನೆಯ ಗ್ರೈವೇಯಕದವರೆಗೆ ಮಿಥ್ಯಾತ್ವ, ಸಾಸಾದನ, ಸಮ್ಯಗ್ಮಿಥ್ಯಾತ್ವ ಮತ್ತು ಅವಿರತ ಸಮ್ಯಕ್ತ್ವ ಇವು ನಾಲ್ಕೂ ಗುಣಸ್ಥಾನಗಳು ಕಂಡು ಬರುತ್ತವೆ. ಭವನತ್ರಿಕಗಳಲ್ಲಿ ಹಾಗೂ ಎಲ್ಲ ದೇವಿಯರಲ್ಲಿ ಸಮ್ಯಗ್ದೃಷ್ಟಿ ಜೀವನು ಉತ್ಪನ್ನನಾಗುವುದಿಲ್ಲ ಆದರೆ ಉತ್ಪನ್ನವಾದ ಮೇಲೆ ಅಂತರ್ಮುಹೂರ್ತದ ನಂತರ ಯಾವಾಗ ಬೇಕಾದರೂ ಆ ಜೀವಗಳು ಸಮ್ಯಕ್ತ್ವ ಪ್ರಾಪ್ತ ಮಾಡಿಕೊಳ್ಳಬಹುದಾಗಿದೆ. ಅನುದಿಶೆ ಮತ್ತು ಅನುತ್ತರ ವಾಸೀ ದೇವಗಳೆಲ್ಲರೂ ಜನ್ಮದಿಂದ ಸಮ್ಯಗ್ದೃಷ್ಟಿಗಳೇ ಇರುತ್ತಾರೆ, ಭಾವಲಿಂಗೀ ಮುನಿಗಳೇ ಮರಣಹೊಂದಿ ಅಲ್ಲಿ ಉತ್ಪನ್ನರಾಗುತ್ತಾರೆ, ಬೇರೆ ಯಾರೂ ಅಲ್ಲಿ ಉತ್ಪನ್ನರಾಗುವುದಿಲ್ಲ.

ಯಾವ ಗತಿಯ ಜೀವಗಳು ದೇವಗತಿಯಲ್ಲಿ ಉತ್ಪನ್ನರಾಗುತ್ತಾರೆಂಬುದನ್ನು ನೋಡೋಣ. ಮೊದಲನೇ ಸ್ವರ್ಗದ ದೇವನು ಸತ್ತು ಮೇಲೆ ಯಾವ ಸ್ವರ್ಗದವರೆಗೆ ಹುಟ್ಟಬಹುದಾಗಿದೆ ?

ಇಲ್ಲ, ಯಾವುದೇ ಸ್ವರ್ಗದ ದೇವನು ಸತ್ತು ಪುನಃ ದೇವಗತಿಯಲ್ಲಿ ಉತ್ಪನ್ನನಾಗುವುದಿಲ್ಲ. ನಾರಕಿಯೂ ಸತ್ತು ದೇವಗಳಲ್ಲಿ ಜನಿಸುವುದಿಲ್ಲ. ಎಂದ ಮೇಲೆ ದೇವಗಳಲ್ಲಿ ಉತ್ಪನ್ನರಾಗುವಂಥವರು ಕೇವಲ ಮನುಷ್ಯ ಮತ್ತು ತಿರ್ಯಂಚಗಳೇ ಉಳಿದಂತಾಯಿತು. ಮನುಷ್ಯರಲ್ಲಿಯೂ ಲಬ್ಧಿ ಅಪರ್ಯಾಪ್ತಕ ಜೀವನು ಸತ್ತು ದೇವಗಳಲ್ಲಿ ಜನಿಸುವುದಿಲ್ಲ. ತಿರ್ಯಂಚಗಳಲ್ಲಿ ಏಕೇಂದ್ರಿಯದಿಂದ ಚತುರಿಂದ್ರಿಯದವರೆಗಿನ ಜೀವನು ದೇವಗಳಲ್ಲಿ ಜನಿಸುವುದಿಲ್ಲ. ಲಬ್ಧಿ ಅಪರ್ಯಾಪ್ತಕ ಪಂಚೇಂದ್ರಿಯವೂ ದೇವಗಳಲ್ಲಿ ಜನಿಸುವುದಿಲ್ಲ.

ಭೋಗಭೂಮಿಯ ಎಲ್ಲ ತಿರ್ಯಂಚ ಹಾಗೂ ಮನುಷ್ಯರು ಸತ್ತು ನಿಯಮದಿಂದ ದೇವಗತಿಯಲ್ಲಿಯೇ ಜನಿಸುತ್ತಾರೆ. ಭೋಗ ಭೂಮಿಯ ಮಿಥ್ಯಾದೃಷ್ಟಿ ಮತ್ತು ಸಾಸಾದನ ಗುಣಸ್ಥಾನದ ಜೀವಗಳು ಭವನತ್ರಿಕದಲ್ಲಿಯೇ ಹೋಗುತ್ತಾರೆ ಮತ್ತು ಸಮ್ಯಗ್ದೃಷ್ಟಿಗಳು ಸೌಧರ್ಮ-ಈಶಾನದಲ್ಲಿಯೇ ಹೋಗುತ್ತಾರೆ. ಅದರ ಮೇಲಿನ ಸ್ವರ್ಗಗಳಲ್ಲಿ ಹೋಗುವ ಸಾಧ್ಯತೆಯಿಲ್ಲ. ಕುಭೋಗ ಭೂಮಿಯ ಜೀವಗಳು ಸತ್ತು ಭವನತ್ರಿಕದಲ್ಲಿ ಅಥವಾ ಕಲ್ಪವಾಸಿನಿ ದೇವಿಯರಲ್ಲಿ ಜನ್ಮಪಡೆಯುತ್ತಾರೆ.

ಅಸಂಯತ ಮತ್ತು ದೇಶಸಂಯತ ಮನುಷ್ಯರು ಮತ್ತು ತಿರ್ಯಂಚ ಜೀವರು ಮೇಲೆ ಹದಿನಾರನೆಯ ಅಚ್ಯುತ ಸ್ವರ್ಗದವರೆಗೆ ಜನಿಸಬಹುದಾಗಿದೆ. ಯಾರು ದ್ರವ್ಯದಿಂದ ಜಿನಲಿಂಗದ ಧಾರಕರಿದ್ದಾರೆ ಅರ್ಥಾತ್ ದಿಗಂಬರ ಮುನಿದೀಕ್ಷೆಯ ಅಂಗೀಕಾರ ಮಾಡಿ ಯಾರು ಶಾಸ್ತ್ರದ ಅನುಸಾರ ಮುನಿಯ ಆಚಾರವನ್ನು ಸಂಪೂರ್ಣವಾಗಿ ಪರಿಪಾಲನೆ ಮಾಡುತ್ತಾರೆ ಅವರನ್ನು ದ್ರವ್ಯಲಿಂಗಿಗಳೆಂದು ಹೇಳುತ್ತಾರೆ. ಇಂಥ ದ್ರವ್ಯಲಿಂಗದ ಧಾರಕ ಜೀವಗಳು ಮೊದಲನೇ, ನಾಲ್ಕನೇ ಅಥವಾ ಐದನೇ ಗುಣಸ್ಥಾನಗಳಲ್ಲಿ ಇರುವ ಸಾಧ್ಯತೆಯಿದೆ. ಒಂದು

ವೇಳೆ ಅವರಿಗೆ ಮುನಿಯೋಗ್ಯ ವೀತರಾಗತೆ ಅರ್ಥಾತ್ ಮೂರು ಕಷಾಯ ಚೌಕಡಿಗಳ ಅಭಾವವಾಗುತ್ತಿದ್ದರೆ ಅವರಿಗೆ ಆರನೇ-ಏಳನೇ ಮೊದಲಾದ ಗುಣಸ್ಥಾನಗಳಿರುತ್ತವೆ. ಅವರನ್ನಂತೂ ಭಾವಲಿಂಗೀ ಮುನಿಗಳೆಂದು ಹೇಳುತ್ತಾರೆ. ದ್ರವ್ಯಲಿಂಗದ ಗ್ರಹಣಪೂರ್ವಕವೇ ಭಾವಲಿಂಗವು ಪ್ರಕಟವಾಗುತ್ತದೆ, ಅನ್ಯಥಾ ಇಲ್ಲ.

ಮಿಥ್ಯಾತ್ವ ಅವಸ್ಥೆಯಲ್ಲಿ ಯಾರು ದ್ರವ್ಯಲಿಂಗ ಧಾರಣ ಮಾಡಿದ್ದಾರೆ ಅವರು ಪುರುಷಾರ್ಥದಿಂದ ನೇರವಾಗಿ ಏಳನೆಯ ಗುಣಸ್ಥಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ ನಂತರ ಆರನೆಯ ಗುಣಸ್ಥಾನಕ್ಕೆ ಬಂದು ಆರನೆಯ - ಏಳನೆಯ ಗುಣಸ್ಥಾನಗಳು ಆಗುತ್ತಿರುತ್ತವೆ. ಕೆಲವರು ನಾಲ್ಕನೇ ಅಥವಾ ಐದನೇ ಗುಣಸ್ಥಾನವುಳ್ಳ ಜೀವಗಳೂ ದ್ರವ್ಯಲಿಂಗಿಗಳಿರುತ್ತಾರೆ. ಅವರಂತೂ ಸಮ್ಯಗ್ದೃಷ್ಟಿಗಳಿದ್ದಾರೆ ಆದಾಗ್ಯೂ ಎಲ್ಲಿಯವರೆಗೆ ಆರನೆಯ-ಏಳನೆಯ ಗುಣಸ್ಥಾನವಿರುವುದಿಲ್ಲ ಅಲ್ಲಿಯವರೆಗೆ ಅವರನ್ನು ಭಾವಲಿಂಗೀ ಮುನಿಯೆಂದು ಹೇಳುವುದಿಲ್ಲ. ಈ ಜೀವರುಗಳನ್ನು ದ್ರವ್ಯಲಿಂಗಿಗಳೆಂದು ಕೂಡ ಯಾವಾಗ ಅವರು ಮುನಿಗಳ ಇಪ್ಪತ್ತೆಂಟು ಮೂಲಗುಣಗಳ -ಮುನಿಯ ಬಾಹ್ಯ ಕ್ರಿಯೆಗಳ ಪರಿಪಾಲನೆಯನ್ನು ನಿರತಿಚಾರವಾಗಿ ಮಾಡುತ್ತಾರೆ ಆವಾಗಲೇ ಹೇಳಲಾಗುತ್ತದೆ. ಎಲ್ಲಿಯವರೆಗೆ ಇವರಿಗೆ ಭಾವಮುನಿತನವು ಪ್ರಕಟವಾಗುವುದಿಲ್ಲ ಅಂಥ ಮಿಥ್ಯಾದೃಷ್ಟಿ ದ್ರವ್ಯಲಿಂಗಿಗಳು ಸತ್ತು ಒಂಭತ್ತನೆಯ ಗ್ರೈವೇಯಕದವರೆಗೆ ಹೋಗಬಹುದಾಗಿದೆ. ಭಾವಲಿಂಗೀ ಸಂತರಂತೂ ಸೌಧರ್ಮದಿಂದ ಹಿಡಿದು ಸರ್ವಾರ್ಥ ಸಿದ್ಧಿಯವರೆಗೆ ಎಲ್ಲಿ ಬೇಕಾದರೂ ಉತ್ಪನ್ನರಾಗಬಹುದಾಗಿದೆ. ಇನ್ನು ಅದರಲ್ಲಿ ಕೂಡ ಯಾವ ಸಂಹನನವುಳ್ಳ ಮನುಷ್ಯರು ಯಾವ ಸ್ವರ್ಗದವರೆಗೆ ಜನ್ಮ ಪಡೆಯುತ್ತಾರೆಂಬುದರ ಕುರಿತಾಗಿಯೂ ನಿಯಮವಿದೆ. ಮೊದಲನೇ ಸಂಹನನವುಳ್ಳವರು ಅನುತ್ತರದವರೆಗೆ, ಎರಡನೆಯವರು ಅನುದಿಶೆಯವರೆಗೆ, ಮೂರನೆಯವರು ಒಂಭತ್ತನೆಯ ಗ್ರೈವೇಯಕದವರೆಗೆ, ನಾಲ್ಕನೆಯವರು ಅಚ್ಯುತದವರೆಗೆ, ಐದನೆಯವರು ಸಹಸ್ರಾರದವರೆಗೆ, ಆರನೆಯವರು ಕಾಪಿಷ್ಠದವರೆಗೆ ಜನ್ಮ ಪಡೆಯಬಹುದಾಗಿದೆ. ಇದರ ಅರ್ಥವು ಮೂರು ಉತ್ತಮ ಸಂಹನನಗಳ ಧಾರಕ ಮುನಿಗಳೇ ಗ್ರೈವೇಯಕಗಳಲ್ಲಿ ಹೋಗುವ ಸಾಧ್ಯತೆಯಿದೆ ಎಂಬುದಾಗಿದೆ. ಕೆಳಗಿನ ಹೀನ ಸಂಹನನ ಧಾರಕ ಭಾವಲಿಂಗಿ ಮುನಿಗಳು ಕೂಡ ಅಲ್ಲಿ ಜನಿಸುವ ಸಾಧ್ಯತೆಯಿಲ್ಲ.

ತಾಪಸಿ ಮೊದಲಾದ ಬೇರೆ-ಬೇರೆ ಪಂಚಾಗ್ನಿ ತಪಸ್ಸು ಮಾಡುವಂಥ ಮಿಥ್ಯಾದೃಷ್ಟಿಗಳು ಉತ್ಕೃಷ್ಟರೂಪದಿಂದ ಭವನತ್ರಿಕದವರೆಗೆ ಜನಿಸಬಹುದಾಗಿದೆ. ಏಕದಂಡೀ, ತ್ರಿದಂಡಿಗಳು ಅಧಿಕವೆಂದರೆ ಬ್ರಹ್ಮಸ್ವರ್ಗದವರೆಗೆ ಹುಟ್ಟುತ್ತಾರೆ ನೆನೆಸಿದ ಕಾಳುಗಳು ಅಥವಾ ಗಂಜಿ, ಮಜ್ಜಿಗೆಯಂಥ ಆಹಾರ ಸೇವನೆ ಮಾಡುವಂಥ ಅನ್ಯಮತಿಗಳು ಅಚ್ಯುತ ಸ್ವರ್ಗದವರೆಗೆ ಜನಿಸುತ್ತಾರೆ.

ಇನ್ನು ದೇವಗತಿಯ ಜೀವಗಳು ಅಲ್ಲಿಂದ ಚ್ಯುತರಾಗಿ (ಮರಣಹೊಂದಿ) ಎಲ್ಲಿ ಜನಿಸುತ್ತಾರೆಂಬುದನ್ನು ನೋಡೋಣ-ದೇವಗಳಲ್ಲಿನ ಜೀವನು ಮನುಷ್ಯ ಅಥವಾ ತಿರ್ಯಂಚ ಪರ್ಯಾಯದಲ್ಲಿಯೇ ಬಂದು ಜನಿಸುತ್ತಾನೆ. ಮಿಥ್ಯಾತ್ವ ಮತ್ತು ಸಾಸಾದನ ಸಹಿತರು ಇವೆರಡರಲ್ಲಿ ಯಾವ ಪರ್ಯಾಯದಲ್ಲಿಯಾದರೂ ಜನ್ಮ ಪಡೆಯುತ್ತಾರೆ. ತಿರ್ಯಂಚಗಳಲ್ಲಿ ಜನ್ಮ ಪಡೆಯುವಂಥ ದೇವನು ಏಕೇಂದ್ರಿಯದಲ್ಲಿ ಅಥವಾ ಪಂಚೇಂದ್ರಿಯ ಗರ್ಭಜರಲ್ಲಿ ಜನಿಸುತ್ತಾನೆ. ಆದರೆ ಸಮ್ಯಗ್ದೃಷ್ಟಿ ದೇವ ಮತ್ತು ದೇವಿಯರು ಸತ್ತು ನಿಯಮದಿಂದ ದುಷಮ-ಸುಷಮಾ ಕಾಲದಲ್ಲಿ ಕರ್ಮ ಭೂಮಿಯ ಮನುಷ್ಯರಾಗಿ ಪುರುಷ ಪರ್ಯಾಯದಲ್ಲಿಯೇ ಜನ್ಮ ಧರಿಸುತ್ತಾರೆ. ಅನುದಿಶೆ ಮತ್ತು ಅನುತ್ತರ ವಿಮಾನಗಳಿಂದ ಬರುವಂಥ ಜೀವರುಗಳು ನಾರಾಯಣ ಅಥವಾ ಪ್ರತಿನಾರಾಯಣರಾಗುವುದಿಲ್ಲ

ಏಕೆಂದರೆ ನಾರಾಯಣ ಮತ್ತು ಪ್ರತಿನಾರಾಯಣರು ನಿಯಮದಿಂದ ನರಕಗಾಮಿಗಳಿರುತ್ತಾರೆ – ಸತ್ತು ನರಕದಲ್ಲಿಯೇ ಹೋಗುತ್ತಾರೆ. ಆದರೆ ಅನುತ್ತರ ಮತ್ತು ಅನುದಿಶೆಯ ಜೀವರು ಮನುಷ್ಯರಾಗಿ ಮೋಕ್ಷಕ್ಕೆ ಹೋಗುತ್ತಾರೆ ಅಥವಾ ಅದರ ನಂತರ ಮತ್ತೊಮ್ಮೆ ಸ್ವರ್ಗಕ್ಕೆ ಹೋಗಿ ಪುನಃ ಮನುಷ್ಯರಾಗಿ ಮೋಕ್ಷ ಪಡೆಯುತ್ತಾರೆ.

ದೇವಗತಿಯಿಂದ ಬಂದು ನಿಯಮದಿಂದ ಮೋಕ್ಷಕ್ಕೆ ಹೋಗುವಂಥವರ ಚರ್ಚೆಯನ್ನು ಮೊದಲು ಮಾಡಿಯಾಗಿದೆ.

ಪ್ರಶ್ನೆ :– ಏಕಭವಾವತಾರೀ ದೇವಗಳಲ್ಲಿ ಶಚಿ ಇಂದ್ರಾಣಿಯ ಹೆಸರು ಹೇಳಿದ್ದಿರಿ. ಆದರೆ ದೇವಿಯರಂತೂ ಸಮ್ಯಗ್ದೃಷ್ಟಿಗಳಾಗಿರುವುದಿಲ್ಲ ಅಲ್ಲವೇನು ?

ಉತ್ತರ :– ಶಚಿ ಇಂದ್ರಾಣಿಯಾಗಿರಲಿ ಅಥವಾ ಬೇರೆ ಯಾವುದೇ ಸ್ತ್ರೀ ಪರ್ಯಾಯದ ಜೀವವಿರಲಿ ಎಲ್ಲರೂ ಜನ್ಮದಿಂದ ಮಿಥ್ಯಾದೃಷ್ಟಿಗಳೇ ಆಗಿರುತ್ತಾರೆ. ಆದರೆ ಜನ್ಮಧಾರಣ ಮಾಡಿದ ನಂತರ ಅವರು ಸಮ್ಯಕ್ತ್ವದ ಪ್ರಾಪ್ತಿ ಮಾಡಿಕೊಳ್ಳುವ ಸಾಧ್ಯತೆಯಿದೆ. ಶಚಿ ಇಂದ್ರಾಣಿಯೂ ಕೂಡ ಅಲ್ಲಿ ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಂಡು ಮನುಷ್ಯನಾಗಿ –ಪುರುಷ ಪರ್ಯಾಯದಲ್ಲಿ ಜನ್ಮ ಪಡೆದು ಅದೇ ಭವದಿಂದ ಮೋಕ್ಷ ಹೊಂದುತ್ತಾನೆ. ಸಮ್ಯಕ್ತ್ವ ಸಹಿತ ಮರಣ ಹೊಂದುವ ಜೀವನು ಎಲ್ಲಿ ಉತ್ಪನ್ನನಾಗುತ್ತಾನೆ ಎಂಬುದರದೂ ನಿಯಮವಿದೆ. ಅವನು ಸ್ತ್ರೀ ಪರ್ಯಾಯದಲ್ಲಿ ಜನ್ಮಧಾರಣ ಮಾಡುವುದಿಲ್ಲ – ಭಾವದಿಂದಲೂ ಭಾವಸ್ತ್ರೀವೇದವುಳ್ಳವನಾಗುವುದಿಲ್ಲ ಮತ್ತು ದ್ರವ್ಯದಿಂದಲೂ ಸ್ತ್ರೀಯಾಗುವುದಿಲ್ಲ. ಅವನು ದೇವ, ಮನುಷ್ಯ ತಿರ್ಯಂಚದಲ್ಲಿ ಪುರುಷವೇದಸಹಿತ ಉತ್ಪನ್ನನಾಗುತ್ತಾನೆ. ಅವನು ಎರಡನೆಯ ಅಥವಾ ಕೆಳಗಿನ ಯಾವುದೇ ನರಕದಲ್ಲಿ ಉತ್ಪನ್ನನಾಗುವುದಿಲ್ಲ. ಸಮ್ಯಕ್ತ್ವ ಸಹಿತ ಜೀವನು ಮೊದಲನೆಯ ನರಕದಲ್ಲಿ ಉತ್ಪನ್ನನಾಗಬಹುದಾಗಿದೆ. ಅಲ್ಲಿಯಂತೂ ಕೇವಲ ನಪುಂಸಕವೇದವೇ ಇರುತ್ತದೆ, ಆದರೆ ಅನ್ಯ ಗತಿಗಳಲ್ಲಿ – ಮನುಷ್ಯ , ತಿರ್ಯಂಚಗಳಲ್ಲಿ ಸಮ್ಯಕ್ತ್ವದ ಜತೆಯಲ್ಲಿ ಜನಿಸುವಂಥ ಜೀವನು ನಪುಂಸಕವೇದಿಯೂ ಆಗುವುದಿಲ್ಲ.

ಪ್ರಶ್ನೆ :– ನಪುಂಸಕವೇದಿ ಜೀವನು ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆಯೇನು ? ಒಂದು ವೇಳೆ ಇಲ್ಲವೆಂದಾದರೆ ನಾರಕಿಗಳಿಗೆ ಹೀಗೆ ಸಮ್ಯಕ್ತ್ವವಾಗುತ್ತದೆ ?

ಉತ್ತರ :– ನಪುಂಸಕವೇದಿಗಳಿಗೆ ಸಮ್ಯಕ್ತ್ವವಾಗುವುದಿಲ್ಲವೆಂಬ ಕಥನವು ಯಾವ ಶಾಸ್ತ್ರದಲ್ಲಿಯೂ ಇಲ್ಲ. ಪ್ರತಿಯಾಗಿ ದ್ರವ್ಯದಿಂದ ಪುರುಷ ಜೀವನು ಭಾವವೇದದ ಅಪೇಕ್ಷೆಯಿಂದ ಮೂರೂ ವೇದಗಳಲ್ಲಿನ ಯಾವುದೇ ವೇದ ಸಹಿತನಾಗಿದ್ದರೂ ಆ ಜೀವನು ಅದೇ ಭವದಲ್ಲಿ ಮೋಕ್ಷಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿದೆಯೆಂಬ ಮಾತನ್ನು ಆಗಮದಲ್ಲಿ ಅನೇಕ ಕಡೆಗೆ ಹೇಳಿದ್ದಾರೆ. ಒಂಭತ್ತನೇ ಗುಣಸ್ಥಾನದ ಮೊದಲನೆಯ ಭಾಗದವರೆಗೆ ವೇದದ ಉದಯವು ಕಂಡು ಬರುತ್ತದೆ. ಹಾಗಂತೂ ಜೀವನು ಐದನೇ ಗುಣಸ್ಥಾನದಲ್ಲಿ ಬ್ರಹ್ಮಚರ್ಯ ನೆಲೆ (ಪ್ರತಿಮೆ)ಯ ಅಂಗೀಕಾರ ಮಾಡುತ್ತಾನೆ. ಅವನ ಆಚರಣೆಯಲ್ಲಿ ಅಥವಾ ಭಾವಗಳಲ್ಲಿಯೂ ಕೂಡ ಯಾವುದೇ ಅನ್ಯಥಾ ಮಾತು ಇರುವುದಿಲ್ಲ. ಆದರೆ ವೇದವೆಂಬ ಹೆಸರಿನ ನೋಕಷಾಯ ಕರ್ಮಗಳ ಅತ್ಯಂತ ಹೀನ ಅನುಭಾಗರೂಪ ಉದಯವು ಒಂಭತ್ತನೆಯ ಗುಣಸ್ಥಾನದ ಮೊದಲನೆಯ ಭಾಗದವರೆಗೆ ಕಂಡು ಬರುತ್ತದೆ, ಆದುದರಿಂದ ಆ ಜೀವರುಗಳನ್ನು ಸವೇದಿಯೆಂದು ಹೇಳುತ್ತಾರೆ, ಅದರ ನಂತರ ವೇದಗಳ ಉದಯವು

ನಾಶವಾಗಿ ಹೋಗುವುದರಿಂದ ಆ ಜೀವರುಗಳನ್ನು ಅಪಗತವೇದಿಯೆಂದು ಹೇಳುತ್ತಾರೆ. ಅದೇ ಜೀವರುಗಳು ಮುಂದೆ ಹದಿನಾಲ್ಕನೆಯ ಗುಣಸ್ಥಾನವನ್ನು ದಾಟಿ ಮೋಕ್ಷ ಪ್ರಾಪ್ತ ಮಾಡಿಕೊಳ್ಳುತ್ತಾರೆ. ಆದರೆ ಸ್ತ್ರೀ ವೇದವುಳ್ಳ ಹಾಗೂ ನಪುಂಸಕ ವೇದವುಳ್ಳ ಜೀವನು ಅದೇ ಭವದಲ್ಲಿ ತೀರ್ಥಂಕರನಾಗುವುದಿಲ್ಲ-ಆ ಜೀವಗಳು ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುವ ಸಾಧ್ಯತೆಯಿಲ್ಲ. ಒಂದು ವೇಳೆ ಬಂಧ ಮಾಡಿಕೊಂಡಿದ್ದರೆ ಒಂದು ದೇವ ಭವ ಮತ್ತು ಒಂದು ಮನುಷ್ಯ ಭವ ಹೀಗೆ ಎರಡೂ ಪುರುಷ ಭವಗಳನ್ನೇ ಮಾಡಿ ಆ ಜೀವನು ತೀರ್ಥಂಕರನಾಗುವನು. ಮೊದಲು ನರಕಾಯುವಿನ ಬಂಧವಾಗಿದ್ದರೆ ಒಂದು ನರಕದ ಮತ್ತು ಒಂದು ಮನುಷ್ಯ ಭವ ಮಾಡಿ ಆ ಜೀವನು ತೀರ್ಥಂಕರನಾಗುವನು.

ನರಕಗಳಲ್ಲಿ ಎಲ್ಲ ನಾರಕಿಗಳು ನಪುಂಸಕ ವೇದಿಗಳೇ ಇರುತ್ತಾರೆ ಮತ್ತು ಅಲ್ಲಿಯೂ ಕೂಡ ಅಸಂಖ್ಯಾತ ಜೀವಗಳು ಸಮ್ಯಕ್ತ್ವ ಪ್ರಾಪ್ತಮಾಡಿಕೊಳ್ಳುತ್ತಾರೆ. ಅಸಂಖ್ಯಾತ ತಿರ್ಯಂಚ ಸಮ್ಮೂರ್ಚ್ಛನ ಪಂಚೇಂದ್ರಿಯ ಜೀವಗಳು ಪಂಚಮ ಗುಣಸ್ಥಾನವರ್ತಿಗಳಿವೆ, ಅವು ಕೂಡ ನಪುಂಸಕ ವೇದಿಗಳಿರುತ್ತವೆ.

ಪ್ರಶ್ನೆ :- ಸ್ತ್ರೀವೇದಿ ಜೀವನು ಮೋಕ್ಷಕ್ಕೆ ಹೋಗಬಹುದಾಗಿದೆ ಆದರೆ ತೀರ್ಥಂಕರನಾಗುವುದಿಲ್ಲವೆಂದು ಈಗ ತಾವು ಹೇಳಿದಿರಿ, ಆದರೆ ಮಲ್ಲಿನಾಥ ತೀರ್ಥಂಕರರು ಸ್ತ್ರೀಯಿದ್ದರೆಂದು ಅದೆಷ್ಟೋ ಜನರು ಹೇಳಿರುವುದನ್ನು ನಾವಂತೂ ಕೇಳಿದ್ದೇವೆ ಅದು ಹೇಗೆಂಬುದನ್ನು ಸ್ಪಷ್ಟ ಪಡಿಸಿರಿ.

ಉತ್ತರ :- ಇಲ್ಲಿ ಸ್ತ್ರೀವೇದೀ ಎಂದರೆ ಭಾವ ಸ್ತ್ರೀ ವೇದಿಯು ಮೋಕ್ಷಕ್ಕೆ ಹೋಗುತ್ತಾನೆಂದು ಹೇಳಿದ್ದಾರೆ. ದ್ರವ್ಯದಿಂದ ಸ್ತ್ರೀಯು ಅರ್ಥಾತ್ ಸ್ತ್ರೀ ಪರ್ಯಾಯವುಳ್ಳ ಜೀವನಂತೂ ಐದನೆಯ ಗುಣಸ್ಥಾನದವರೆಗೇನೆ ಪುರುಷಾರ್ಥ ಮಾಡುವ ಸಾಧ್ಯತೆಯಿದೆ, ಅದರ ಮೇಲಿನ ಪುರುಷಾರ್ಥವು ಸಾಧ್ಯವಿಲ್ಲ. ಭಾವದಿಂದ ಸ್ತ್ರೀವೇದೀ ಮನುಷ್ಯನು ತೀರ್ಥಂಕರ ಪ್ರಕೃತಿಯ ಬಂಧವನ್ನಂತೂ ಮಾಡಿಕೊಳ್ಳಬಹುದಾಗಿದೆ. ಆದರೆ ತೀರ್ಥಂಕರ ಪ್ರಕೃತಿಯ ಉದಯವು ಆ ಭವದಲ್ಲಿ ಆಗುವ ಸಾಧ್ಯತೆಯಿಲ್ಲ. ಇನ್ನು ಮಲ್ಲಿನಾಥ ತೀರ್ಥಂಕರರ ಮಾತು ಉಳಿಯಿತು. ನಮ್ಮಲ್ಲಿ (ಭರತಕ್ಷೇತ್ರದಲ್ಲಿ) ಯಾವ ಇಪ್ಪತ್ನಾಲ್ಕು ತೀರ್ಥಂಕರರಾಗಿದ್ದಾರೆ ಅವರೆಲ್ಲರೂ ಐದೂ ಕಲ್ಯಾಣಕದವರೇ ಇದ್ದರು. ಅರ್ಥಾತ್ ಎಲ್ಲರೂ ಪೂರ್ವದ ಮೂರನೆಯ ಭವದಿಂದ ತೀರ್ಥಂಕರ ಪ್ರಕೃತಿಯನ್ನು ಕಟ್ಟಿಕೊಂಡು ಬಂದಿದ್ದರು ಮತ್ತು ಸಮ್ಯಕ್ತ್ವದ ಜೊತೆಗೆ ಮಾತೆಯ ಗರ್ಭದಲ್ಲಿ ಬಂದಿದ್ದರು. ಸಮ್ಯಕ್ತ್ವದ ಜತೆಯಲ್ಲಿ ಜನ್ಮ ಪಡೆಯುವಂಥವರು ಅವರಂತೂ ನಿಯಮದಿಂದ ದ್ರವ್ಯ ಮತ್ತು ಭಾವ ವೇದಗಳ ಅಪೇಕ್ಷೆಯಿಂದ ಪುರುಷರೇ ಇರುತ್ತಾರೆ, ಎಂದೂ ಸ್ತ್ರೀ ಇರುವುದಿಲ್ಲ. ಅದರಿಂದ ಮಲ್ಲಿನಾಥರು ಪುರುಷರೇ ಇದ್ದರೆಂಬುದು ಸಿದ್ಧವಾಯಿತು ಅದರಲ್ಲಿ ಯಾವುದೇ ರೀತಿಯ ಸಂದೇಹಕ್ಕೆ ಆಸ್ಪದವಿಲ್ಲ.

ಮಲ್ಲಿನಾಥರು ಯಾವ ಸ್ವರ್ಗದಿಂದ ಬಂದಿದ್ದರು ಗೊತ್ತಿಲ್ಲವೇನು ? ಅವರು ಅನುತ್ತರ ವಿಮಾನದಿಂದ - ಅಪರಾಜಿತ ವಿಮಾನದಿಂದ ಚ್ಯುತರಾಗಿ ಇಲ್ಲಿ ಬಂದಿದ್ದರು. ಅನುತ್ತರದಲ್ಲಿಯಂತೂ ಎಲ್ಲರೂ ಸಮ್ಯಗ್ದೃಷ್ಟಿಗಳಿರುತ್ತಾರೆ ಮತ್ತು ಪುರುಷರೇ ಇರುತ್ತಾರೆ. ಆದುದರಿಂದ ಮಲ್ಲಿನಾಥರು ಈ ಭವದಲ್ಲಂತೂ ಪುರುಷರೇ ಇದ್ದರು. ಪೂರ್ವಭವದಲ್ಲಿಯೂ ಪುರುಷ (ದೇವ)ರೇ ಇದ್ದರು. ಅಲ್ಲದೇ ಅಪರಾಜಿತದಲ್ಲಿ ನಗ್ನ ದಿಗಂಬರ ಭಾವಲಿಂಗೀ ಮುನಿರಾಜರೇ (ಮರಣಹೊಂದಿ) ಹೋಗುವ ಸಾಧ್ಯತೆಯಿದೆ ಮತ್ತು ಅವರು ಸ್ವಯಂ ಪುರುಷರೇ ಇರುತ್ತಾರೆ. ಈ ಪ್ರಕಾರ ಯಾರಿಗೆ ಮೂರು-ಮೂರು ಭವಗಳಲ್ಲಿ ಪುರುಷ ಪರ್ಯಾಯವಿತ್ತು

ಅವರನ್ನು ಸ್ತ್ರೀಯೆಂದು ಮನ್ನಿಸುವುದು ಮಹಾನ ಮಿಥ್ಯಾತ್ವವಿದೆ, ತೀರ್ಥಂಕರರ ಅವರ್ಣವಾದವಿದೆ, ಸರ್ವಜ್ಞರ ಮತದ ವಿರುದ್ಧ ಪ್ರರೂಪಣೆಯಿದೆ.

ಪ್ರಶ್ನೆ :- ಇಷ್ಟೆಲ್ಲ ನಿರ್ಣಯ ಮಾಡುವ ಸಲುವಾಗಿ ಎಷ್ಟು ಸಮಯ ಇದರಲ್ಲಿ ತೊಡಗಿಸಬೇಕಾಗುವುದು?

ಉತ್ತರ :- ಸಂಪೂರ್ಣ ಸಮಯ-ಇಡೀ ಜೀವನವನ್ನು ತತ್ತ್ವನಿರ್ಣಯದ ಸಲುವಾಗಿ ತೊಡಗಿಸ-ಬೇಕಾಗುವುದು. ನಮಗೆ ದೇವರ ಸ್ವರೂಪದ ನಿರ್ಣಯ, ಗುರುಗಳ ಸ್ವರೂಪದ ನಿರ್ಣಯ, ಶಾಸ್ತ್ರದ ಸ್ವರೂಪದ ನಿರ್ಣಯ ಎಲ್ಲವೂ ಯಥಾರ್ಥವಾಗಿ ಆಗಲೇಬೇಕಾಗುವುದು. ಮುನಿಗಳಂತೂ ನಗ್ನ ದಿಗಂಬರರೇ ಇರುತ್ತಾರೆ, ಎಂದ ಮೇಲೆ ದೇವರಿಗೆ ವಸ್ತ್ರ-ಅಲಂಕಾರವಿರುವುದರ ಪ್ರಶ್ನೆಯೇ ಉತ್ಪನ್ನವಾಗುವುದಿಲ್ಲ. ಗೃಹಸ್ಥ ದಶೆಯಲ್ಲಿ ಐದನೇ ಗುಣಸ್ಥಾನದವರೆಗಿನ ಪುರುಷಾರ್ಥವೇ ಆಗುವ ಸಾಧ್ಯತೆಯಿದೆ. ಪುರುಷನಿಗೂ ಮುನಿದೀಕ್ಷೆಯ ಅಂಗೀಕಾರ ಮಾಡಿದ ನಂತರವೇ ಧ್ಯಾನಾವಸ್ಥೆಯಲ್ಲಿ - ಆತ್ಮನಲ್ಲಿ ಏಕಾಗ್ರತೆಯಾದ ಮೇಲೆ ಏಳನೆಯ ಗುಣಸ್ಥಾನವು ಪ್ರಕಟವಾಗುತ್ತದೆ ಎಂದರೆ ಮುನಿದಶೆಯು ಪ್ರಾಪ್ತವಾಗುತ್ತದೆ, ಭಾವಲಿಂಗವು ಪ್ರಕಟವಾಗುತ್ತದೆ. ವಸ್ತ್ರಸಹಿತವಾಗಿ ಏಳನೆಯ ಗುಣಸ್ಥಾನವು ಪ್ರಕಟವಾಗುತ್ತಿದ್ದರೆ ನಂತರ ಮುನಿದೀಕ್ಷೆ ತಗೆದುಕೊಳ್ಳುವ ಅವಶ್ಯಕತೆಯಾದರೂ ಏನು ಉಳಿಯುತ್ತದೆ ? ಆದುದರಿಂದ ಗೃಹಸ್ಥಾವಸ್ಥೆಯಲ್ಲಿ ಮುನಿದಶೆ ಮತ್ತು ಕೇವಲಜ್ಞಾನವಾಗುವ ಸಾಧ್ಯತೆಯಿಲ್ಲ.

ಅನ್ಯ ಜೀವರುಗಳು ಅರ್ಥಾತ್ ಬೇರೆಯವರು ಏನು ಮಾಡುತ್ತಾರೆ, ಯಾವ ರೀತಿ ವಿಚಾರ ಮಾಡುತ್ತಾರೆ ಎಂಬುದರ ಚರ್ಚೆಯು ಇಲ್ಲಿ ಇಲ್ಲ. ನಮಗಂತೂ ನಮ್ಮ ಕಲ್ಯಾಣ ಮಾಡಿಕೊಳ್ಳುವುದಿದೆ ಮತ್ತು ಅದರ ಸಲುವಾಗಿಯೇ ನಮ್ಮ ನಿರ್ಣಯ ಸರಿಯಾಗಿರಬೇಕು ಮತ್ತು ದೃಢವಾಗಿರಬೇಕಾಗುವುದು. ಸರಿಯಾದ ಮತ್ತು ದೃಢವಾದ ನಿರ್ಣಯವು ಇಲ್ಲದೇ ಹೋದರೆ ದೇವ-ಶಾಸ್ತ್ರ-ಗುರುಗಳ ಸ್ವರೂಪವನ್ನು ಅನ್ಯಥಾ ಮನ್ನಿಸುತ್ತಿದ್ದರೆ ಅದು ಅಜ್ಞಾನ ಮಿಥ್ಯಾತ್ವವಿದೆ. ಒಂದು ವೇಳೆ ದೃಢವಾದ ನಿರ್ಣಯವು ಇಲ್ಲದಿದ್ದರೆ, ಸಂಶಯವು ಕಾರ್ಯ ಮಾಡುತ್ತಿದ್ದರೆ ಆಗ ಜೀವನು ಅಲ್ಲಿ-ಇಲ್ಲಿ ಬೇಕಾದಲ್ಲಿ ಸುತ್ತುತ್ತಿರುತ್ತಾನೆ. ಯಾರು-ಯಾರು ಏನೇನು ಹೇಳುತ್ತಾರೆ, ಎಂಬುದನ್ನು ತಿಳಿಯುವ ಸಲುವಾಗಿ ಅವನು ಮಿಥ್ಯಾ ಮನ್ನಣೆಯುಳ್ಳವರ ಪ್ರವಚನವನ್ನೂ ಆಲಿಸುತ್ತಿರುತ್ತಾನೆ ಮತ್ತು ಅದರೊಳಗಿಂದ ನಾವಂತೂ ಒಳ್ಳೆಯದನ್ನೇ ತಗೆದುಕೊಳ್ಳುವುದಿದೆ - ಎಂದು ಹೇಳುತ್ತಾನೆ ಆದರೆ ಅದು ಅವನ ಭ್ರಮೆಯಿದೆ. ಅವನಿಗೆ ಇನ್ನೂ ಸತ್ಯಾಸತ್ಯದ ನಿರ್ಣಯವೇ ಆಗಿಲ್ಲ.

ಲೌಕಿಕದಲ್ಲಿಯಂತೂ ಬಟ್ಟೆ, ಆಭರಣ, ಮನೆ, ಖಾದ್ಯ ಪದಾರ್ಥ ಮೊದಲಾದವುಗಳಲ್ಲಿ ಒಳ್ಳೆಯದು-ಕೆಟ್ಟದ್ದು ಎಂಬುದರ ನಿರ್ಣಯ ಮಾಡುತ್ತಾನೆ. ಆದರೆ ದೇವ-ಶಾಸ್ತ್ರ-ಗುರುಗಳ ನಿರ್ಣಯ ಮಾಡಬಯಸುವುದಿಲ್ಲ. ಹಾಗಿದ್ದಮೇಲೆ ಅವನ ಮನುಷ್ಯ ಭವವು ಇದ್ದಕ್ಕಿದ್ದಂತೆ ಹೊರಟು ಹೋಗುವುದು ಮತ್ತು ಮರಳಿ ಇಂಥ ಅವಕಾಶವು ದೊರಕುತ್ತದೆಯೋ ಅಥವಾ ಇಲ್ಲವೆಂಬುದು ಯಾರಿಗೆ ಗೊತ್ತಿದೆ ?

ಇನ್ನು ಯಾವ ೬೩ ಶಲಾಕಾ ಪುರುಷರನ್ನು ನಾವು ತಿಳಿದುಕೊಂಡಿದ್ದೇವೆ, ಅವರಲ್ಲಿ ಯಾವುದೇ ಜೀವನು ಮನುಷ್ಯ ಗತಿಯಿಂದ ಬಂದು ಶಲಾಕಾಪುರುಷನಾಗಿ ಜನ್ಮ ತಾಳುವುದಿಲ್ಲ. ಮನುಷ್ಯನು ಸತ್ತು ಮನುಷ್ಯನಾಗಬಹುದಾಗಿದೆ ಆದರೆ ಚಕ್ರವರ್ತಿ ಮೊದಲಾದ ಶಲಾಕಾ ಪುರುಷನಾಗುವುದಿಲ್ಲ. ತಿರ್ಯಂಚದೊಳಗಿಂದ ಬಂದು ಕೂಡ ಯಾವ ಜೀವನೂ ಶಲಾಕಾಪುರುಷನಾಗುವುದಿಲ್ಲ; ಅದೇ ಪ್ರಕಾರ ಭವನತ್ರಿಕದೊಳಗಿಂದ ಬಂದು ಕೂಡ ಯಾರೂ ಶಲಾಕಾ ಪುರುಷರಾಗುವುದಿಲ್ಲ. ನರಕದಿಂದ ಹೊರಬಂದು

ಜೀವನು ತೀರ್ಥಂಕರನಾಗಬಹುದಾಗಿದೆ. ಯಾವನೋ ಮನುಷ್ಯನು ನರಕಾಯುವಿನ ಬಂಧ ಮಾಡಿಕೊಂಡು, ನಂತರ ಸಮ್ಯಕ್ತ್ವ ಪ್ರಾಪ್ತಮಾಡಿಕೊಂಡು, ತೀರ್ಥಂಕರ ಪ್ರಕೃತಿಯ ಬಂಧದ ಪ್ರಾರಂಭ ಮಾಡಿಕೊಂಡಿದ್ದರೆ ಅವನು ನರಕದಿಂದ ಬಂದು ತೀರ್ಥಂಕರನಾಗುತ್ತಾನೆ, ಅಂಥವನನ್ನು ಹೊರತು ಪಡಿಸಿ ಉಳಿದ ಎಲ್ಲ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲಭದ್ರರು, ೯ ನಾರಾಯಣರು, ೯ ಪ್ರತಿನಾರಾಯಣರಾಗುವಂಥ ಜೀವರುಗಳು ಮನುಷ್ಯ, ತಿರ್ಯಂಚ ಅಥವಾ ಭವನತ್ರಿಕದೊಳಗಿಂದ ಬಂದು ಆಗುವುದಿಲ್ಲ. ಅವರೆಲ್ಲರೂ ವೈಮಾನಿಕ ದೇವಗಳೊಳಗಿಂದಲೇ ಬಂದು ಜೀವರುಗಳು ಶಲಾಕಾ ಪುರುಷರಾಗುತ್ತಾರೆ.

ಈಗ ದೇವಗಳು ಸತ್ತು ಯಾವ ಪರ್ಯಾಯಗಳಲ್ಲಿ ಜನಿಸುತ್ತಾರೆಂಬುದನ್ನು ನೋಡೋಣ. ಸಹಸ್ರಾರ ಕಲ್ಪದವರೆಗಿನ ದೇವಗಳು ಸತ್ತು ತಿರ್ಯಂಚಗಳಲ್ಲಿ ಜನಿಸಬಹುದಾಗಿದೆ. ಅರ್ಥಾತ್ ಅವರು ಕರ್ಮಭೂಮಿಯ ಮನುಷ್ಯ ಅಥವಾ ತಿರ್ಯಂಚದಲ್ಲಿ ಜನಿಸುತ್ತಾರೆ. ಎಲ್ಲ ಸಮ್ಯಗ್ದೃಷ್ಟಿ ದೇವಗಳು ಸತ್ತು ಮನುಷ್ಯರೇ ಆಗುತ್ತಾರೆ ಆದರೆ ಮಿಥ್ಯಾತ್ವ ಮತ್ತು ಸಾಸಾದನದಲ್ಲಿ ಸಾಯುವಂಥ ದೇವಗತಿಯ ಜೀವಗಳು ಮನುಷ್ಯ ಅಥವಾ ತಿರ್ಯಂಚರಾಗುತ್ತಾರೆ. ಆನತದಿಂದ ಹಿಡಿದು ಒಂಭತ್ತನೇ ಗ್ರೈವೇಯಕದವರೆಗಿನ ಜೀವಗಳು - ಅವರು ಬೇಕಾದರೆ ಮಿಥ್ಯಾದೃಷ್ಟಿಯಾಗಿರಲಿ, ಸಾಸಾದನರಿರಲಿ ಅಥವಾ ಅವಿರತ ಸಮ್ಯಗ್ದೃಷ್ಟಿಗಳಾಗಿರಲಿ ಅವರು ಅಲ್ಲಿಂದ ಸತ್ತು ಮನುಷ್ಯರೇ ಆಗುತ್ತಾರೆ. ಅನುದಿಶೆ ಮತ್ತು ಅನುತ್ತರ ವಾಸಿಗಳೆಲ್ಲರೂ ಸಮ್ಯಗ್ದೃಷ್ಟಿಗಳೇ ಇರುತ್ತಾರೆ ಮತ್ತು ಅಲ್ಲಿಂದ ಸತ್ತು ಅವರು ಮನುಷ್ಯರಲ್ಲಿಯೇ ಉತ್ಪನ್ನರಾಗುತ್ತಾರೆ.

ಯಾವುದೇ ದೇವನು ಸತ್ತು ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಅಥವಾ ಅಸಂಜ್ಞಿ ಪಂಚೇಂದ್ರಿಯದಲ್ಲಿ ಜನಿಸುವುದಿಲ್ಲ; ತಿರ್ಯಂಚದಲ್ಲಿ ಬೇಕಾದರೆ ಸಂಜ್ಞೀ ಪಂಚೇಂದ್ರಿಯರಾಗುತ್ತಾರೆ ಅಥವಾ ಏಕೇಂದ್ರಿಯ ಪರ್ಯಾಪ್ತರಾಗುತ್ತಾರೆ 'ಮಂದ ಭಾಗ್ಯದಿ ಸತ್ತು ಮತ್ತಲ್ಲಿಂದ ಥಾವರವಾಗಿ ಪುಟ್ಟಿ' ಎಂದು ಆರು ಗುರಾಣಿಯಲ್ಲಿ ನಾವು ಓದಿಲ್ಲವೇನು, ಎಂದರೆ ವಿಮಾನವಾಸೀ ದೇವನು ಸತ್ತು ಏಕೇಂದ್ರಿಯದಲ್ಲಿ ಉತ್ಪನ್ನನಾಗಬಹುದಾಗಿದೆ; ಆದರೆ ಎಲ್ಲ ಸ್ವರ್ಗಗಳ ದೇವಗಳು ಏಕೇಂದ್ರಿಯರಾಗಿ ಜನಿಸುವುದಿಲ್ಲ. ಭವನತ್ರಿಕ ಮತ್ತು ಸೌಧರ್ಮ ಈಶಾನ ಸ್ವರ್ಗದ ಮಿಥ್ಯಾದೃಷ್ಟಿ ದೇವಗಳು ಇನ್ನು ಶೀಘ್ರವೇ ಮರಣವಾಗುವುದಿದೆ ಎಂಬುದನ್ನು ತಿಳಿದುಕೊಂಡು ಅತ್ಯಂತ ಶೋಕಾಕುಲರಾಗುತ್ತ ಅತಿಶಯ ಸಂಕ್ಲೇಶ ಪರಿಣಾಮಗಳ ಕಾರಣ ಏಕೇಂದ್ರಿಯದಲ್ಲಿ ಜನ್ಮ ಪಡೆಯುತ್ತಾರೆ. ಅದರಲ್ಲಿಯೂ ಕೂಡ ಪೃಥ್ವಿಕಾಯಿಕ, ಜಲಕಾಯಿಕ ಅಥವಾ ಪ್ರತ್ಯೇಕ ವನಸ್ಪತಿಕಾಯಿಕದ ಬಾದರ ಪರ್ಯಾಪ್ತದಲ್ಲಿಯೇ ಜನಿಸುತ್ತಾರೆ, ಸೂಕ್ಷ್ಮ ಅಥವಾ ಸಾಧಾರಣ (ನಿಗೋದ)ದಲ್ಲಿ ಜನಿಸುವುದಿಲ್ಲ. ಅವರು ಅಗ್ನಿಕಾಯಿಕ ಅಥವಾ ವಾಯುಕಾಯಿಕದಲ್ಲಿಯೂ ಜನಿಸುವುದಿಲ್ಲ. ದೇವಗಳ ಮಾತಂತೂ ಇರಲಿ, ನಾವು ಕೂಡ ನಮ್ಮ ಅಥವಾ ನಮ್ಮ ಬಂಧುವರ್ಗದವರ - ಇಷ್ಟ ಮಿತ್ರಾದಿಗಳ ಮರಣವು ಸಮೀಪಿಸಿರುವುದನ್ನು ಕಂಡು ಅತ್ಯಂತ ಶೋಕ-ವಿಲಾಪ ಮಾಡುತ್ತಿದ್ದರೆ ನರಕ-ನಿಗೋದ ಹಾಗೂ ಅನ್ಯ ಏಕೇಂದ್ರಿಯ ಪರ್ಯಾಯಗಳಿಗೆ ಸಂಬಂಧಿಸಿದ ಕರ್ಮಬಂಧ ಮಾಡಿಕೊಂಡು ಅಲ್ಲಿ ಜನ್ಮ ಪಡೆಯುವ ಸಿದ್ಧತೆ ಮಾಡಿಕೊಳ್ಳುತ್ತೇವೆ.

ಈಗ ದೇವಗಳ ಜನ್ಮ ಸಂಬಂಧದ ವೃತ್ತಾಂತವನ್ನು ನೋಡೋಣ.

ಯಾವ ರೀತಿ ಉದಯಾಚಲದಿಂದ ಸೂರ್ಯನು ಉದಿತನಾಗುತ್ತಾನೆ, ಅದೇ ರೀತಿ ಉಪಪಾದ ಶಯ್ಯೆಯ ಮೇಲೆ ಅಂತರ್ಮುಹೂರ್ತದಲ್ಲಿ ಆರೂ ಪರ್ಯಾಪ್ತಿಗಳನ್ನು ಪೂರ್ಣಗೊಳಿಸಿ ಮನೋಹರವಾದ ಸುಗಂಧಮಯ ಸುಖದ ಸ್ಪರ್ಶವುಳ್ಳ ಪವಿತ್ರ ಶರೀರಧಾರಕ ದೇವಗಳು ಉತ್ಪನ್ನರಾಗುತ್ತಾರೆ. ಜನ್ಮವಾದ ಮೇಲೆ ಅಲ್ಲಿ ಆನಂದರೂಪ ವಾದ್ಯಗಳ ಧ್ವನಿ ಮತ್ತು ಜಯಕಾರ ಮೊದಲಾದ ಸ್ತುತಿರೂಪದ ಶಬ್ದಗಳನ್ನು ಆಲಿಸಿ ತಮಗೆ ದೇವಪರ್ಯಾಯವು ಪ್ರಾಪ್ತವಾಗಿದೆಯೆಂದು ತಿಳಿಯುತ್ತಾರೆ. ಅಲ್ಲಿಯ ಐಶ್ವರ್ಯ, ವೈಭವ ಹಾಗೂ ದೇವಾಂಗನೆ ಮೊದಲಾದ ಪರಿವಾರವನ್ನು ಕಂಡು ಅವಧಿ ಜ್ಞಾನದಿಂದ ತಮ್ಮ ಪೂರ್ವ ಪರ್ಯಾಯವನ್ನು ತಿಳಿಯುತ್ತಾರೆ.

ದೇವಗಳಿಗೆ ಭವ ಪ್ರತ್ಯಯ ಅವಧಿಜ್ಞಾನವಿರುತ್ತದೆ. ದೇವ ಮತ್ತು ನಾರಕಿಗಳಲ್ಲಿ ಅವರು ಬೇಕಾದರೆ ಸಮ್ಯಗ್ದೃಷ್ಟಿಯಾಗಿರಲಿ ಅಥವಾ ಮಿಥ್ಯಾದೃಷ್ಟಿಯಾಗಿರಲಿ ಎಲ್ಲರಿಗೂ ಆ ಭವದಲ್ಲಿ ಅವಧಿಜ್ಞಾನವು ಇದ್ದೇ ಇರುತ್ತದೆ. ಪರ್ಯಾಪ್ತಿಗಳು ಪೂರ್ಣವಾದ ಮೇಲೆ ಅಂತರ್ಮುಹೂರ್ತದಲ್ಲಿ ಈ ಅವಧಿಜ್ಞಾನವು ಪ್ರಾಪ್ತವಾಗುತ್ತದೆ. ಆದರೆ ಸಮ್ಯಗ್ದೃಷ್ಟಿಗಳಿಗೆ ಎಂದರೆ ಒಂದು ವೇಳೆ ಅವರು ಪೂರ್ವಭವದಲ್ಲಿ ಅವಧಿಜ್ಞಾನಿಗಳಾಗಿದ್ದರೆ ಅವರ ಅವಧಿ ಜ್ಞಾನವು ಅಪರ್ಯಾಪ್ತ ಅವಸ್ಥೆಯಲ್ಲಿಯೂ ಇರುತ್ತದೆ.

ಅವಧಿಜ್ಞಾನದಿಂದ ಪೂರ್ವಭವದ ವೃತ್ತಾಂತವನ್ನು ತಿಳಿದುಕೊಂಡು, ತಮ್ಮ ಯೋಗ್ಯ ಆಚರಣೆ ಹಾಗೂ ಧರ್ಮದ ಪ್ರಸಾದದಿಂದ ದೇವಗತಿಯು ಪ್ರಾಪ್ತವಾಗಿರುವುದನ್ನು ತಿಳಿದುಕೊಂಡು ಧರ್ಮದ ಪ್ರಶಂಸೆ ಮಾಡುತ್ತಾರೆ. ಅಲ್ಲಿಯ ನಿರ್ಮಲವಾದ ಸುಗಂಧಮಯ ಜಲದಿಂದ ಯುಕ್ತ ಸರೋವರದಲ್ಲಿ ಸ್ನಾನ ಮಾಡಿ ಪಟ್ಟಾಭಿಷಿಕ್ತರಾಗಿ ವಸ್ತ್ರ ಆಭೂಷಣಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಸಮ್ಯಗ್ದೃಷ್ಟಿ ದೇವಗಳು ಸ್ವಯಂ ತಾವಾಗಿಯೇ ಜಿನೇಂದ್ರ ಭಗವಂತರ ಅಭಿಷೇಕ-ಪೂಜೆ ಮಾಡುತ್ತಾರೆ. ಮಿಥ್ಯಾದೃಷ್ಟಿ ದೇವಗಳು ಅನ್ಯ ದೇವಗಳಿಂದ ಸಂಬೋಧಿತರಾಗುತ್ತ ಅನ್ಯ ದೇವಗಳು ಹೇಗೆ ಹೇಳುತ್ತಾರೋ ಹಾಗೆ ಜಿನೇಂದ್ರ ದೇವರ ಪೂಜೆ ಮಾಡುತ್ತಾರೆ. ಸ್ವರ್ಗದ ಸುಖಸಾಮಗ್ರಿಗಳಲ್ಲಿ ಅವರು ಅದೆಷ್ಟು ಮಗ್ನರಾಗಿ ಹೋಗುತ್ತಾರೆಂದರೆ ಅವರಿಗೆ ಕಳೆದು ಹೋದ ಕಾಲದ ಪರಿಚಯವೇ ಆಗುವುದಿಲ್ಲ.

ತೀರ್ಥಂಕರರ ಕಲ್ಯಾಣಕ ಹಾಗೂ ಮಹಾಪೂಜೆ ಮೊದಲಾದವುಗಳಲ್ಲಿ ಕಲ್ಪವಾಸಿ ದೇವಗಳು ಬರುತ್ತಾರೆ ಆದರೆ ಅಹಮಿಂದ್ರರು ತಮ್ಮ ಸ್ಥಾನದಲ್ಲಿಯೇ ಯಾವ ದಿಶೆಯಲ್ಲಿ ತೀರ್ಥಂಕರರು ವಿರಾಜಮಾನರಿದ್ದಾರೆ ಆ ದಿಶೆಯಲ್ಲಿ ಏಳು ಹೆಜ್ಜೆ ನಡೆದು ಮಸ್ತಕಕ್ಕೆ ಅಂಜುಲಿ ತಾಗಿಸಿ ಭಕ್ತಿಭಾವದಿಂದ ನಮಸ್ಕಾರ ಮಾಡುತ್ತಾರೆ.

ಇನ್ನು ಕೆಲವು ಪ್ರಶ್ನೆಗಳಿವೆ, ಅವುಗಳ ಉತ್ತರ ತಿಳಿದು ನಂತರ ಮುಂದಿನ ವಿಷಯವನ್ನು ಚರ್ಚಿಸಬಹುದಾಗಿದೆ.

ಪ್ರಶ್ನೆ :- ಸಿದ್ಧಶಿಲೆಯು ಉತ್ತಾನ, ಧವಲ, ಕೊಡೆಯ ಆಕಾರವಿರುತ್ತದೆ ಮತ್ತು ನಾವು ಚಂದ್ರಾಕಾರವಾಗಿ ತೋರಿಸುತ್ತೇವೆ ಇದು ಹೇಗೆ ? ಎಂದರೆ ವೃತ್ತಾಕಾರವು ಮೇಲೆ ಇರುತ್ತದೆ ಮತ್ತು ಕೆಳಗೆ ಸಮಪಾತದಲ್ಲಿರುತ್ತದೆ - ಎಂದು ನಾವು ಆಲಿಸಿದ್ದೇವೆ. ನಿಜವಾಗಿ ಅದರ ಸ್ವರೂಪವು ಹೇಗಿದೆ ?

ಉತ್ತರ :- ತ್ರಿಲೋಕಸಾರದ ಗಾಥೆ ೫೫೭, ೫೫೮ರಲ್ಲಿ ಇದರ ವರ್ಣನೆಯಿದೆ. ಜಯಧವಲಾ ಪುಸ್ತಕ ೧೬ರ ಕೊನೆಯಲ್ಲಿಯೂ ಕೂಡ ಇದರ ವರ್ಣನೆಯಿದೆ. ಅಲ್ಲಿ ಉತ್ತಾನದ ಅರ್ಥವು ಮೇಲಿನ ಭಾಗವು

ಸಮಾನವಿದೆ. ಕೆಳಗಿನಿಂದ ವೃತ್ತಾಕಾರವಿದೆ. ಆದರೆ ಇದು ಯಾವ ಪ್ರಕಾರ ಚಂದ್ರನು ಕಾಣಿಸುತ್ತಾನೆ ಅಷ್ಟು ವೃತ್ತಾಕಾರವಿಲ್ಲ. ಏಕೆಂದರೆ ಮಧ್ಯದಲ್ಲಿ ಎಂಟು ಯೋಜನದ ಅಗಲತೆಯಿದೆ ಮತ್ತು ವ್ಯಾಸವು ೪೫ಲಕ್ಷ ಯೋಜನವಿದೆಯೆಂದ ಮೇಲೆ ಅದರ ವೃತ್ತಾಕಾರವು ಅತೀ ಕಡಿಮೆಯಿದೆಯೆಂದಾಯಿತು.

ಪ್ರಶ್ನೆ :- ಸ್ವರ್ಗಗಳ ವಿಮಾನದ ರಚನೆಯು ಗೋಲಾಕಾರವಿದೆಯೋ ಅಥವಾ ಹೇಗಿದೆ ?

ಉತ್ತರ :- ವಿಮಾನಗಳು ಗೋಲಾಕಾರವಿವೆ. ಉಳಿದಂತೆ ಅಲ್ಲಿಯ ನಗರಗಳ ರಚನೆಯಂತೂ ಹೇಗೆ ವರ್ಣನೆಯು ಶಾಸ್ತ್ರಗಳಲ್ಲಿ ಬರುತ್ತದೆ ಹಾಗಿದೆಯೆಂದು ತಿಳಿಯುವುದು.

ಪ್ರಶ್ನೆ :- ಸ್ವರ್ಗದ ವನಗಳಲ್ಲಿ ವನಸ್ಪತಿ ಜೀವಗಳಿವೆಯೋ ಅಥವಾ ಇಲ್ಲ ? ಅಲ್ಲಿ ಸ್ಥಾವರ ಜೀವಗಳಿರುವುದಿಲ್ಲವೆಂದು ಆಲಿಸಿದ್ದೇವೆ ?

ಉತ್ತರ :- ಅಲ್ಲಿ ಸ್ಥಾವರ ಜೀವಗಳಿರುವುದಿಲ್ಲವೆಂಬ ಮಾತನ್ನು ಯಾರು ಹೇಳಬಹುದಾಗಿದೆ ? ಸ್ಥಾವರ ಜೀವಗಳಂತೂ ಸಂಪೂರ್ಣ ಲೋಕಾಕಾಶದಲ್ಲಿದೆ ಮತ್ತು ಎಲ್ಲಿ ಪೃಥ್ವಿಯಿರುತ್ತದೆ ಅಲ್ಲಿಯಂತೂ ಎಲ್ಲ ಬಾದರ ಏಕೇಂದ್ರಿಯ ಜೀವಗಳು ಇರುತ್ತವೆ.

ಪ್ರಶ್ನೆ :- ದೇವಗಳು ವಿಮಾನದಲ್ಲಿ ಎಲ್ಲೆಲ್ಲಿ ಗಮನ ಮಾಡುತ್ತಾರೆ ? ದೇವಗಳ ಭಾಷೆಯು ಯಾವುದಿದೆ?

ಉತ್ತರ :- ದೇವಗಳು ವಿಮಾನದಲ್ಲಿ ಇರುತ್ತಾರೆ, ಅವರು ವಿಕ್ರಿಯೆ ಮಾಡಿ ಅನ್ಯತ್ರ ಗಮನ ಮಾಡುತ್ತಾರೆ. ವಿಮಾನಗಳನ್ನು ತಗೆದುಕೊಂಡು ಸುತ್ತಾಡುವುದಿಲ್ಲ, ಅವರ ವಿಮಾನಗಳು ನಮ್ಮಂಥವಿರುವುದಿಲ್ಲ. ಮಧ್ಯಲೋಕದ ಅಸಂಖ್ಯಾತ ದ್ವೀಪ ಸಮುದ್ರಗಳಲ್ಲಿ ಅವರು ಬೇಕಾದಲ್ಲಿ ಹೋಗುವ ಸಾಧ್ಯತೆಯಿದೆ. ಸಹಸ್ರಾರ ಸ್ವರ್ಗದವರೆಗಿನ ದೇವಗಳು ಕೆಳಗೆ ಮೂರನೇ ನರಕದವರೆಗೆ ಹೋಗಬಹುದಾಗಿದೆ-ಹೋಗುತ್ತಾರೆ. ದೇವಗಳ ವಾಹನಗಳಿಗೂ ವಿಮಾನವೆನ್ನುತ್ತಾರೆ. ಅಲ್ಲಿಯ ಭಾಷೆಯು ಗೀರ್ವಾಣ ಭಾರತಿಯೆಂದು ಹೇಳುತ್ತಾರೆ. ವಿಶೇಷವಾದ ವರ್ಣನೆಯು ಕಂಡು ಬಂದಿಲ್ಲ.

ಪ್ರಶ್ನೆ :- ಮಿಥ್ಯಾದೃಷ್ಟಿಯು ಎಲ್ಲಿಯವರೆಗಿನ ಇಂದ್ರನಾಗಬಹುದಾಗಿದೆ ?

ಉತ್ತರ :- ಮಿಥ್ಯಾದೃಷ್ಟಿ ಜೀವನು ಒಂಭತ್ತನೆಯ ಗ್ರೈವೇಯಕದವರೆಗಿನ ಅಹಮಿಂದ್ರನಾಗಬಹುದಾಗಿದೆ.

ಇನ್ನು ಯಾವಾಗ ನಾವು ದೇವಗತಿಗೆ ಹೋಗುತ್ತೇವೆ ಆಗ ಇಲ್ಲಿಯ ಪ್ರಶ್ನೆಗಳ ಉತ್ತರವನ್ನು ಅಲ್ಲಿ ಅವಧಿ ಜ್ಞಾನದಿಂದ ತಿಳಿದುಕೊಳ್ಳೋಣ, ಈಗ ದೇವಗತಿಯ ಕುತೂಹಲವನ್ನು ಬಿಟ್ಟು ಬಿಡೋಣ ! ನಾಲ್ಕು ಗತಿಗಳಲ್ಲಿ ಎಲ್ಲಿಯೂ ಸುಖವಿಲ್ಲವೆಂದಮೇಲೆ ಈಗ ಊರ್ಧ್ವಲೋಕವನ್ನು ಬಿಟ್ಟು ನಾವು ಮಧ್ಯಲೋಕ ಅರ್ಥಾತ್ ತಿರ್ಯಕ್ ಲೋಕದ ಚರ್ಚೆಯನ್ನು ಆರಂಭಿಸೋಣ.

ತಿರ್ಯಕ್ ಅರ್ಥಾತ್ ಅಡ್ಡಡ್ಡಾಗಿರುವುದು. ಲೋಕದ ಮಧ್ಯಭಾಗದಲ್ಲಿ ಸ್ಥಿತವಿರುವುದರಿಂದ ಇದನ್ನು ಮಧ್ಯಲೋಕವೆಂದು ಕೂಡ ಹೇಳುತ್ತಾರೆ. ಮೇರುತಲದಿಂದ ಹಿಡಿದು ಸುದರ್ಶನ ಮೇರುವಿನ ೧ ಲಕ್ಷ ೪೦ ಯೋಜನ ಪ್ರಮಾಣ ಎತ್ತರದವರೆಗೆ ಈ ಮಧ್ಯಲೋಕದ ಎತ್ತರವಿದೆ ಅಲ್ಲದೆ ಇದರ ಅಗಲ ಮತ್ತು ಉದ್ದವು ೧ ರಾಜೂ ಮತ್ತು ೭ ರಾಜೂವಿದೆ. ಮೊದಲನೆಯ ಪೃಥ್ವಿಯು ಪೂರ್ವ-ಪಶ್ಚಿಮ ಒಂದು ರಾಜೂ ಮತ್ತು ದಕ್ಷಿಣೋತ್ತರ ಏಳು ರಾಜೂವಿದೆ ಇದುವೇ ಮಧ್ಯಲೋಕದ ಅಗಲ ಮತ್ತು ಉದ್ದಳತೆಯಿದೆ. ಮೇರುತಲವು ಪೃಥ್ವಿಯಲ್ಲಿ ಒಂದು ಸಾವಿರ ಯೋಜನ ಆಳದಲ್ಲಿದೆ ಅಲ್ಲಿಂದ ಮೇರುವಿನ ಎತ್ತರವನ್ನು ಗಣಿಸಲಾಗುತ್ತದೆ.

ಇದರ ಮಧ್ಯಭಾಗದಲ್ಲಿ - ನಟ್ಟ ನಡುವೆ ೧ ರಾಜೂ X ೧ ರಾಜೂ ಅಗಲಳತೆಯುಳ್ಳ ಚೌಕಾಕಾರದ ತ್ರಸನಾಡಿಯಿದ್ದು ಅದರಲ್ಲಿ ಅಸಂಖ್ಯಾತ ದ್ವೀಪ-ಸಮುದ್ರಗಳು ಕಂಡು ಬರುತ್ತವೆ. ಅದರ ಹೊರಗೆಯಂತೂ ಕೇವಲಭೂಮಿಯಿದೆ. ಈಗ ಈ ೧ ರಾಜೂ X ೧ ರಾಜೂ ಚತುಷ್ಕೋಣದೊಳಗಿಂದ ೧ ರಾಜೂ ವ್ಯಾಸವುಳ್ಳ ವೃತ್ತವನ್ನು ತಗೆಯುವುದು - ೩ನೇ ನಂಬರಿನ ಚಾರ್ಟ ನೋಡಬೇಕು. ವೃತ್ತದ ಹೊರಗೆ ನಾಲ್ಕೂ ಮೂಲೆಗಳಲ್ಲಿ ಭೂಮಿಯಿದೆ ಇದನ್ನು ಚತುಷ್ಕೋಣ ಭೂಮಿಯೆಂದು ಹೇಳುತ್ತಾರೆ. ಆ ವೃತ್ತದಲ್ಲಿ ಒಂದರ ಒಳಗೆ ಒಂದರಂತೆ ಅಸಂಖ್ಯಾತ ದ್ವೀಪಸಮುದ್ರಗಳು ವೃತ್ತಾಕಾರದಲ್ಲಿವೆ. ಎಲ್ಲಕ್ಕಿಂತ ನಡುವೆ-ಮಧ್ಯದಲ್ಲಿ ಜಂಬೂದ್ವೀಪವೆಂಬ ಹೆಸರಿನ ೧ ಲಕ್ಷ ಯೋಜನ ವ್ಯಾಸವುಳ್ಳ ವೃತ್ತಾಕಾರದ ದ್ವೀಪವಿದೆ. ಅದರ ನಾಲ್ಕೂ ಕಡೆಗೆ ಎಲ್ಲ ಕಡೆಯಿಂದ ವೃತ್ತಾಕಾರದಲ್ಲಿ ಸುತ್ತುವರೆದ ಲವಣ ಸಮುದ್ರವಿದೆ. ಅದರ ವಿಸ್ತಾರ ಅರ್ಥಾತ್ ಅಗಲವು ೨ ಲಕ್ಷ ಯೋಜನವಿದೆ. ಎಂದರೇನೆ ಇದು ಬಳೆಯ ಆಕಾರದಲ್ಲಿ ಹರಡಿಕೊಂಡಿದೆ, ಜಂಬೂದ್ವೀಪವನ್ನು ಬಳಸಿಕೊಂಡಿದೆ. ಜಂಬೂದ್ವೀಪದ ಹೊರಗಿನ ಸೀಮೆಯು ಅದರ ಒಳದಂಡೆಯಿದೆ ಹಾಗೂ ಇದರ ಹೊರಗಿನ ದಂಡೆಯು ಮುಂದಿನಧಾತಕೀ ಖಂಡವನ್ನು ಸ್ಪರ್ಶಿಸುತ್ತದೆ.

೧ ಲಕ್ಷ ಯೋಜನ	೨ ಲಕ್ಷ ಯೋಜನ	೪ ಲಕ್ಷ ಯೋಜನ
ಜಂಬೂದ್ವೀಪ	ಲವಣ ಸಮುದ್ರ	ಧಾತಕೀ ಖಂಡ

ಇದನ್ನು ಒಳ್ಳೆಯ ರೀತಿಯಿಂದ ತಿಳಿದುಕೊಳ್ಳುವ ಸಲುವಾಗಿ ಜಂಬೂದ್ವೀಪದ ಮಧ್ಯಬಿಂದುವಿನಿಂದ ೫೦,೦೦೦ ಯೋಜನ ತ್ರಿಜ್ಯವುಳ್ಳ ವೃತ್ತವನ್ನು ತಗೆದರೆ ಅದು ಜಂಬೂದ್ವೀಪದ ವಿಸ್ತಾರವಾಯಿತು. ಅದುವೇ ಒಂದು ಲಕ್ಷ ಯೋಜನ ವ್ಯಾಸದ್ದಾಯಿತು. ಅದೇ ಮಧ್ಯಬಿಂದುವಿನಿಂದ ಆ ತ್ರಿಜ್ಯದಲ್ಲಿ ಎರಡು ಲಕ್ಷ ಹೆಚ್ಚು ಮಾಡಿ ವೃತ್ತವನ್ನು ನಿರ್ಮಿಸಿದರೆ ಅದು ಲವಣ ಸಮುದ್ರದ ಹೊರದಂಡೆಯ ವೃತ್ತಾಕಾರವಿದೆ. ಅದು ಒಂದು ದಿಶೆಯಲ್ಲಿಯ ಎರಡು ಲಕ್ಷ ಯೋಜನದ ವಿಸ್ತಾರವಾಗುವುದು.

ಲವಣ ಸಮುದ್ರದ ಒಳವ್ಯಾಸವು ೧ ಲಕ್ಷ ಯೋಜನ (ಒಳಗಿನ ದಂಡೆಯು ವೃತ್ತಾಕಾರವಿರುವುದರಿಂದ ಅವುಗಳದು ಒಂದು ಇನ್ನೊಂದರ ಎದುರಿಗಿನ ವ್ಯಾಸವು) ಮತ್ತು ಲವಣ ಸಮುದ್ರದ ಹೊರ ದಂಡೆಗಳ ವ್ಯಾಸವು ಐದು ಲಕ್ಷ ಯೋಜನವಾಗುತ್ತದೆ. ಮೊದಲು ನಾವು ೫೦,೦೦೦ ಯೋಜನದಲ್ಲಿ ಮುಂದೆ ಎರಡು ಲಕ್ಷ ಯೋಜನ ಕೂಡಿಸಿ ಎರಡೂವರೆ ಲಕ್ಷ ಯೋಜನದ ತ್ರಿಜ್ಯದೊಂದಿಗೆ ವೃತ್ತವನ್ನು ನಿರ್ಮಿಸಿದ್ದೆವು ಮತ್ತು ವ್ಯಾಸವು ತ್ರಿಜ್ಯದಿಂದ ದ್ವಿಗುಣವಾಗುತ್ತದೆ. ಚಾರ್ಟ ನೋಡಿ ಇದನ್ನು ಚನ್ನಾಗಿ ತಿಳಿಯಬಹುದಾಗಿದೆ. ಈ ಹೊರಗಿನ ಸೀಮೆಯ ವ್ಯಾಸವನ್ನು ಆ ಸಮುದ್ರದ ಸೂಚೀಯೆಂದು ಹೇಳುತ್ತಾರೆ.

ಲವಣಸಮುದ್ರದ ವಿಸ್ತಾರವು ಒಂದು ದಿಕ್ಕಿನಲ್ಲಿ ೨ ಲಕ್ಷ ಯೋಜನದ್ದಿದೆ. ಅದರ ನಂತರ ಮುಂದೆ ಅದನ್ನು ಬಳಸಿಕೊಂಡಿರುವುದು ಧಾತಕೀ ಖಂಡವೆಂಬ ಹೆಸರಿನ ದ್ವೀಪವು ೪ ಲಕ್ಷ ಯೋಜನ ವಿಸ್ತಾರವುಳ್ಳದ್ದಿದೆ. ಮೊದಲು ಎರಡೂವರೆ ಲಕ್ಷ ಯೋಜನದ ತ್ರಿಜ್ಯದಲ್ಲಿ ಈ ನಾಲ್ಕು ಲಕ್ಷ ಕೂಡಿಸಿದರೆ ಆರೂವರೆ ಲಕ್ಷ ಯೋಜನ ವ್ಯಾಸವುಳ್ಳ ಅರ್ಥಾತ್ ಹದಿಮೂರು ಲಕ್ಷ ಯೋಜನ ಹೊರವ್ಯಾಸವುಳ್ಳದ್ದು ಧಾತಕೀ ಖಂಡ ದ್ವೀಪವಿದೆ.

ಮಧ್ಯದಿಂದ ಒಂದು ವೇಳೆ ನೋಡಿದರೆ ಜಂಬೂದ್ವೀಪದ ಒಂದು ಕಡೆಯ ವಿಸ್ತಾರವು ಐವತ್ತು ಸಾವಿರ ಯೋಜನ, ಅದರಿಂದ ಒಂದೂವರೆ ಲಕ್ಷ ಯೋಜನ ಲವಣಸಮುದ್ರದ ವಿಸ್ತಾರವು ಅಧಿಕವಾಗಿದೆ ಎರಡೂ ಸೇರಿ ಎರಡೂವರೆ ಲಕ್ಷ ಯೋಜನವಾಗುತ್ತದೆ. ಅದರಲ್ಲಿ ಒಂದೂವರೆ ಲಕ್ಷ ಯೋಜನ ಕೂಡಿಸಿದರೆ ನಾಲ್ಕು ಲಕ್ಷ ಯೋಜನ ವಿಸ್ತಾರವು ಕೇವಲ ಒಂದು ಧಾತಕೀ ಖಂಡದ ವಿಸ್ತಾರವಿದೆ. ಮಧ್ಯದ ಜಂಬೂದ್ವೀಪ, ಲವಣಸಮುದ್ರ, ಧಾತಕೀಖಂಡ ಸೇರಿ ಆರೂವರೆ ಲಕ್ಷ ಯೋಜನವಾಗುತ್ತದೆ ಅದರಲ್ಲಿ ಒಂದೂವರೆ ಲಕ್ಷ ಯೋಜನ ಕೂಡಿಸಿದಾಗ ಮುಂದಿನ ಕಾಲೋದಧಿ ಸಮುದ್ರದ ಕೇವಲ ಒಂದು ದಿಶೆಯಲ್ಲಿಯ ವಿಸ್ತಾರವು ಎಂಟು ಲಕ್ಷ ಯೋಜನವಾಗುತ್ತದೆ.

ಒಂದು ಜಂಬೂದ್ವೀಪವೇ ಅಖಂಡ ವೃತ್ತವಿದೆ ಅದರ ಮುಂದೆ ಒಂದು ಸಮುದ್ರ, ಒಂದು ದ್ವೀಪ, ಒಂದು ಸಮುದ್ರ, ಒಂದು ದ್ವೀಪ ಕ್ರಮದಿಂದ ದ್ವಿಗುಣ-ದ್ವಿಗುಣ ವಿಸ್ತಾರವುಳ್ಳವಿದ್ದು ಒಂದನೆಯದನ್ನು ಬಳಸಿಕೊಂಡಿರುವುದು ಎರಡನೆಯದು, ಎರಡನೆಯದನ್ನು ಬಳಸಿಕೊಂಡಿರುವುದು ಮೂರನೆಯದು ಹೀಗೆ ಕೊನೆಯದಾದ ಸ್ವಯಂಭೂರಮಣ ಸಮುದ್ರದವರೆಗೆ ಅಸಂಖ್ಯಾತ ದ್ವೀಪ ಮತ್ತು ಅಷ್ಟೇ ಸಮುದ್ರಗಳಿವೆ.

ಯಾವುದೇ ದ್ವೀಪ ಅಥವಾ ಸಮುದ್ರದ ವಿಸ್ತಾರವನ್ನು ತಿಳಿಯುವುದಿದ್ದರೆ ಅದರ ಒಳಗಿರುವ ಎಲ್ಲ ದ್ವೀಪ ಮತ್ತು ಸಮುದ್ರಗಳ ವಿಸ್ತಾರವನ್ನು ಒಂದುಗೂಡಿಸಿ ಅದರಲ್ಲಿ ಒಂದೂವರೆ ಲಕ್ಷಯೋಜನ ಕೂಡಿಸಿದರೆ ಆ ವಿವಕ್ಷಿತ ದ್ವೀಪ ಅಥವಾ ಸಮುದ್ರದ ಒಂದು ದಿಕ್ಕಿನ ವಿಸ್ತಾರವು ಬಂದು ಬಿಡುತ್ತದೆ. ಹೇಗೆ ನಾವು ಈಗ ತಾನೆ ನಾಲ್ಕನೇ ನಂಬರಿನ ಕಾಲೋದಧಿ ಸಮುದ್ರವನ್ನು ನೋಡಿದೆವು - ಅದರ ವಿಸ್ತಾರವು ೮ ಲಕ್ಷ ಯೋಜನವಿರುವುದನ್ನು ನೋಡಿದೆವು. ಇನ್ನೊಮ್ಮೆ ನೋಡೋಣ-ಮಧ್ಯದಲ್ಲಿನ ಜಂಬೂದ್ವೀಪ ಒಂದು ದಿಕ್ಕಿನ ವಿಸ್ತಾರವು ಅರ್ಧಲಕ್ಷ (೫೦೦೦೦) ಯೋಜನ, ಲವಣ ಸಮುದ್ರದ್ದು ಎರಡು ಲಕ್ಷ ಯೋಜನ, ಧಾತಕಿ ಖಂಡದ್ದು ನಾಲ್ಕು ಲಕ್ಷ ಯೋಜನ ಮತ್ತು ಕಾಲೋದಧಿ ಸಮುದ್ರದ ವಿಸ್ತಾರವು ಎಂಟು ಲಕ್ಷ ಯೋಜನವಾಗುತ್ತದೆ. ಎಲ್ಲವುಗಳ ಯೋಗವು ಹದಿನಾಲ್ಕೂವರೆ ಲಕ್ಷ ಯೋಜನವಾಗುತ್ತದೆ. ಅದರೊಳಗಿಂದ ಹೊರಭಾಗದ ಕಾಲೋದಧಿ ಸಮುದ್ರಕ್ಕೆ ಒಂದೂವರೆ ಲಕ್ಷ ಯೋಜನ ಅಧಿಕ ಕೊಡುವುದಿದೆ ಆದುದರಿಂದ ಅಷ್ಟನ್ನು ಬೇರೆ ಮಾಡಿ ಉಳಿದುದರಲ್ಲಿ ಎರಡು ಭಾಗ ಮಾಡುವುದು, ಒಂದು ಭಾಗದಲ್ಲಿ ಒಳಗಿನ ಎಲ್ಲ ದ್ವೀಪ ಮತ್ತು ಸಮುದ್ರ, ಎರಡನೆಯ ಭಾಗದಲ್ಲಿ ಒಂದೂವರೆ ಲಕ್ಷ ಯೋಜನ ಕೂಡಿಸಿದಾಗ ಕಾಲೋದಧಿ ಸಮುದ್ರದ ಹೊರಭಾಗದ ವಿಸ್ತಾರವಾಗುತ್ತದೆ. ಇಲ್ಲಿ ಕಾಲೋದಧಿ ಸಮುದ್ರದ ಹೊರಗಿನ ತ್ರಿಜ್ಯವು ಹದಿನಾಲ್ಕೂವರೆ ಲಕ್ಷಯೋಜನ, ಅದರೊಳಗಿಂದ ಒಂದೂವರೆ ಲಕ್ಷ ಕಡಿಮೆ ಮಾಡಿದಾಗ ಹದಿಮೂರು ಲಕ್ಷ ಯೋಜನವಾಯಿತು. ಅದರ ಅರ್ಧ ಆರೂವರೆ ಲಕ್ಷಯೋಜನದಲ್ಲಿ ಒಳಗಿನ ಮೂರನ್ನೂ ಕೂಡಿಸಿದಾಗ ಎಂಟು ಲಕ್ಷ ಯೋಜನ ಅದು ಕೇವಲ ಒಂದು ನಾಲ್ಕನೆಯ ಎಂದರೆ ಕಾಲೋದಧಿಯ ವಿಸ್ತಾರವಾಯಿತು.

ಈಗ ನಾವು ಎಲ್ಲಕ್ಕಿಂತ ಹೊರಗೆ ಸ್ಥಿತವಿರುವಂಥ ಸ್ವಯಂಭೂರಮಣ ಸಮುದ್ರದ ವಿಸ್ತಾರವನ್ನು ನೋಡೋಣ. ಮಧ್ಯಲೋಕದಲ್ಲಿ ೧ ರಾಜೂ X ೧ ರಾಜೂ ವಿಸ್ತಾರವುಳ್ಳ ಚೌಕಾಕಾರದ ತ್ರಸನಾಳಿಯಿದೆ. ಅದರಲ್ಲಿ ಅಷ್ಟೇ ವ್ಯಾಸವುಳ್ಳ ವೃತ್ತಾಕಾರದ ಸ್ವಯಂಭೂರಮಣ ಸಮುದ್ರದ ಹೊರದಂಡೆಯ ವೃತ್ತವಿದೆ. ಅರ್ಥಾತ್ ಮಧ್ಯದಿಂದ ಒಂದು ದಿಕ್ಕಿನಲ್ಲಿ ಅರ್ಧರಾಜೂವಿದ್ದು ಅದರಲ್ಲಿ ಅಸಂಖ್ಯಾತ ದ್ವೀಪ ಸಮುದ್ರಗಳು ಕಂಡು ಬರುತ್ತವೆ.

ಆ ಅರ್ಧರಾಜೂವಿನಲ್ಲಿ ಒಂದೂವರೆ ಲಕ್ಷ ಯೋಜನ ಕಡಿಮೆ ಮಾಡಿ ಅದರೊಳಗೆ ಸಮನಾದ ಎರಡು ಭಾಗ ಮಾಡಿದಾಗ ಅದು ಸ್ವಲ್ಪ ಕಡಿಮೆ ರಾಜೂವಿನ ನಾಲ್ಕನೆಯ ಒಂದು ಭಾಗ - ಒಂದು ನಾಲ್ಕಾಂಶ ರಾಜೂವಾಗುತ್ತದೆ; ಅರ್ಥಾತ್ ಸ್ವಲ್ಪ ಹೆಚ್ಚು ಕಡಿಮೆ (ಸುಮಾರು) ಒಂದು ನಾಲ್ಕಾಂಶ ರಾಜೂವಿನವರೆಗೆ ಒಳಗಿನ ಅಸಂಖ್ಯಾತ ದ್ವೀಪ-ಸಮುದ್ರಗಳಿವೆ ಮತ್ತು ಸಮಾನ ಭಾಗದಲ್ಲಿ ಒಂದೂವರೆ ಲಕ್ಷ ಯೋಜನ ಕೂಡಿಸಿದಾಗ ಅಷ್ಟು ವಿಸ್ತಾರವು ಕೇವಲ ಒಂದು ಸ್ವಯಂಭೂರಮಣ ಸಮುದ್ರದ್ದಿದೆ. ಇದು ಸಂಪೂರ್ಣ ವೃತ್ತಾಕಾರವಿದೆ - ಎಲ್ಲ ದಿಕ್ಕುಗಳಲ್ಲಿ ಇಷ್ಟೇ ವಿಸ್ತಾರವುಳ್ಳದ್ದಿದ್ದು ಕಂಕಣ-ಬಳೆಯ ಆಕಾರದಿಂದ ಬಳಸಿಕೊಂಡಿದೆ.

ಈಗ ಈ ಒಂದೂವರೆ ಲಕ್ಷ ಯೋಜನವನ್ನು ಗೌಣ ಮಾಡಿಯೂ ನೋಡಿದರೆ ಒಂದು ಕಡೆಗೆ $\frac{೧}{೪}$ ಮತ್ತು ಇನ್ನೊಂದು ಕಡೆಗೆ $\frac{೧}{೪}$ ಕೂಡಿಸಿದರೆ $\frac{೧}{೨}$ ರಾಜೂವಂತೂ ಸ್ವಯಂಭೂರಮಣ ಸಮುದ್ರದ ವಿಸ್ತಾರವಿದೆ. ಒಂದು ದಿಕ್ಕಿನಲ್ಲಿ ಹೊರಗಿನಿಂದ ಮಧ್ಯದ ಕಡೆಗೆ ವಿಚಾರ ಮಾಡಿದರೆ ಸಮುದ್ರದಿಂದ ಒಳಗಿರುವ ದ್ವೀಪವು ಅರ್ಧವಿಸ್ತಾರವುಳ್ಳದ್ದು ಅರ್ಥಾತ್ ಸ್ವಯಂಭೂರಮಣ ದ್ವೀಪದ ವಿಸ್ತಾರವು ಒಂದು ದಿಕ್ಕಿನಲ್ಲಿ $\frac{೧}{೮}$ ರಾಜೂವಿದೆ. ಅದಕ್ಕಿಂತ ಒಳಗಿನ ಸಮುದ್ರವು ಅದಕ್ಕಿಂತಲೂ ಅರ್ಧ ವಿಸ್ತಾರವುಳ್ಳದ್ದು ಇದೆ. ಅದೆಷ್ಟೋ ಬಾರಿ ಪ್ರವಚನಗಳಲ್ಲಿ ಈ ಸ್ವಯಂಭೂರಮಣ ಸಮುದ್ರದ ಹೆಸರನ್ನು ಆಲಿಸಿದ್ದೇವೆ. ಅಹುದು, ಸ್ವಯಂಭೂರಮಣ ಸಮುದ್ರದಲ್ಲಿ ಅಸಂಖ್ಯಾತ ಮಹಾಮತ್ಸ್ಯಗಳು ಸಮ್ಯಗ್ದೃಷ್ಟಿ ಪಂಚಮ ಗುಣಸ್ಥಾನವರ್ತಿಯಿವೆ. ಅಲ್ಲಿ ಈ ದೊಡ್ಡ ದೊಡ್ಡ ಅವಗಾಹನವುಳ್ಳ ಮೊಸಳೆಗಳು ಇರುತ್ತವೆ.

ಪ್ರಶ್ನೆ :- ಆ ಸಮುದ್ರದ ತಳದಲ್ಲಿ ರತ್ನಗಳಿರುತ್ತವೆಯೆಂದು ಬರುತ್ತದೆಯಲ್ಲವೇನು ?

ಉತ್ತರ :- ಅಹುದು, ಅವಂತೂ ಸ್ಮರಣೆಗೆ ಬರುತ್ತವೆ, ಅವುಗಳ ಮಹಿಮೆಯು ಬರುತ್ತದೆ. ಆದರೆ ಸಮ್ಯಗ್ದೃಷ್ಟಿಯ ಮಹಿಮೆಯು ನಮಗೆ ಬರುವುದಿಲ್ಲ, ಅಲ್ಲವೇನು ?

ಇದರ ಚರ್ಚೆಯನ್ನು ವಿಸ್ತಾರರೂಪದಿಂದ ಮುಂದೆ ಮಾಡಲಾಗುವುದು.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹತ್ತನೆಯ ತೀರ್ಥಂಕರ
ಶ್ರೀ ವಿಶಾಲಕೀರ್ತಿ ಭಗವಂತರಿಗೆ ಜಯವಾಗಲಿ.

★★★★★

ಮರಣವು ಆಕಸ್ಮಿಕವಾಗಿ ಬರುವುದು. ಈ ಮನುಷ್ಯಜನ್ಮ, ಈ ಜಿನೇಂದ್ರರ ಧರ್ಮವು ಬಿಟ್ಟು ಹೋದಮೇಲೆ ಮತ್ತೆ ದೊರಕುವುದು ಅನಂತಕಾಲದಲ್ಲಿ ದುರ್ಲಭವಿದೆ. ಯಾವ ಪ್ರಕಾರ ನದಿಯ ತರಂಗಗಳು ನಿರಂತರ ತಡೆಯಿಲ್ಲದೆ ಹೋಗುತ್ತಲೇ ಇರುತ್ತವೆ, ಮರಳಿ ಎಂದೂ ಬರುವುದೇ ಇಲ್ಲ. ಅದೇ ಪ್ರಕಾರ ಆಯು, ಕಾಯ, ರೂಪು, ಬಲ, ಲಾವಣ್ಯ, ಇಂದ್ರಿಯಗಳ ಶಕ್ತಿಯು ಒಮ್ಮೆ ಹೊರಟುಹೋದ ಮೇಲೆ ತಿರುಗಿ ಬರುವುದಿಲ್ಲ.

೧೧. ಮಧ್ಯಲೋಕ : ದ್ವೀಪ-ಸಮುದ್ರ

ಶ್ರೀಮದ್ ನೇಮಿಚಂದ್ರಾಚಾರ್ಯವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ತ್ರಿಲೋಕದ ರಚನೆಯ ಸಂಬಂಧವಾಗಿ ಸ್ವಲ್ಪ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಅಧೋಲೋಕ, ಊರ್ಧ್ವಲೋಕಗಳ ರಚನೆಯನ್ನು ನೋಡಿದ ಮೇಲೆ ಈಗ ನಾವು ತಿರ್ಯಕ್‌ಲೋಕ ಎಂದರೆ ಮಧ್ಯಲೋಕದ ರಚನೆಯ ಚರ್ಚೆ ಮಾಡುತ್ತಿದ್ದೇವೆ. ತಿರ್ಯಕ್ ಲೋಕದ ಅರ್ಥವು ತಿರ್ಯಂಚ ಲೋಕವೆಂದಲ್ಲ. ಏಕೆಂದರೆ ತಿರ್ಯಂಚಗಳಂತೂ ಸಂಪೂರ್ಣ ಲೋಕದಲ್ಲಿ ಇರುತ್ತವೆ. ಸ್ಥಾವರವಿರುವ ಯಾವ ಏಕೇಂದ್ರಿಯ ಜೀವಗಳಿವೆ ಅವು ಇಡೀ ಲೋಕದ ತುಂಬೆಲ್ಲ ಒತ್ತೊತ್ತಾಗಿ ತುಂಬಿಕೊಂಡಿವೆ. ತಿರ್ಯಕ್‌ದ ಅರ್ಥವು ಅಡ್ಡದಾದ. ಇದು ಚೌಕಾಕಾರದಲ್ಲಿ ಪ್ರತರರೂಪದಿಂದ ಹರಡಿಕೊಂಡಿದೆ ಇದರ ಎರಡು ಭುಜಗಳು ೧ ರಾಜೂ ಮತ್ತು ಏಳು ರಾಜೂವಿವೆ ಮತ್ತು ಇದರ ಎತ್ತರವು ೧ ಲಕ್ಷ ೪೦ ಯೋಜನದ್ದಿದೆ.

ಪ್ರಥಮ ಪೃಥ್ವಿಯ ಖರಭಾಗದಲ್ಲಿ ೧೬ ಸಾವಿರ ಯೋಜನದಲ್ಲಿ ಹದಿನಾರು ಪೃಥ್ವಿಗಳಿವೆ. ಅದರಲ್ಲಿನ ಪ್ರತಿಯೊಂದು ಪೃಥ್ವಿಯು ೧೦೦೦ ಯೋಜನ ದಪ್ಪವಿದೆ. ಎಲ್ಲಕ್ಕಿಂತ ಮೇಲೆ ಚಿತ್ರಾ ಪೃಥ್ವಿಯು ೧೦೦೦ ಯೋಜನ ದಪ್ಪವಿದೆ, ಅಲ್ಲಿಯವರೆಗೆ ಮೇರುವಿನ ಅಡಿಪಾಯವಿದೆ ಮತ್ತು ಭೂಮಿಯ ಮೇಲೆ ೯೯೦೪೦ ಯೋಜನವಿದೆ. ಮೇರುವಿನ ಮೂಲದಿಂದ ಅದರ ಚೂಲಿಕೆಯವರೆಗೆ ಈ ಮಧ್ಯಲೋಕದ ಎತ್ತರವಿದೆ.

ಈ ಮಧ್ಯಲೋಕದ ನಟ್ಟ ನಡುವೆ ತ್ರಸನಾಳಿಯಿದ್ದು ಅದು ೧ ರಾಜೂ X ೧ ರಾಜೂ ವಿಸ್ತಾರವುಳ್ಳ ಚೌಕಾಕಾರವಿದೆ. ಅದರಲ್ಲಿ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳು ವೃತ್ತಾಕಾರದಲ್ಲಿದ್ದು ಒಂದನ್ನೊಂದು ಬಳಸಿಕೊಂಡಿವೆ. ಅವು ಅಸಂಖ್ಯಾತವೆಂದರೆ ಎಷ್ಟಿವೆ - ಎಂದು ಕೇಳಿದರೆ - ಇಪ್ಪತ್ತೈದು ಕೋಟಾಕೋಟಿ ಉದ್ಧಾರಪಲ್ಯ ಪ್ರಮಾಣವಿವೆ.

ಮೊದಲು ನಾವು ಪಲ್ಯದ ಪ್ರಮಾಣವನ್ನು ನೋಡಿದ್ದೆವು, ಎಂದರೆ ಹೊಂಡವನ್ನು ತೋಡಿ ಅದನ್ನು ರೋಮಖಂಡಗಳಿಂದ ತುಂಬಲಾಗಿತ್ತು ! ಮತ್ತು ಪ್ರತಿ ನೂರು ವರ್ಷಗಳಿಗೆ ಒಂದರಂತೆ ರೋಮಖಂಡವನ್ನು ತಗೆಯಲಾಗಿತ್ತು, ಯಾವಾಗ ಆ ಹೊಂಡವು ಬರಿದಾಗುತ್ತದೆ ಆಗ ಅದು ಒಂದು ವ್ಯವಹಾರ ಪಲ್ಯವಾಗುತ್ತದೆ. ನಾವು ಸ್ವಲ್ಪ ವಿಚಾರ ಮಾಡುವುದಿದೆ. ಒಂದು ಆವಲಿಯಲ್ಲಿ ಅಸಂಖ್ಯಾತ (ಜಘನ್ಯ ಯುಕ್ತಾಸಂಖ್ಯಾತ) ಸಮಯಗಳಿರುತ್ತವೆ. ಇಂಥ ಸಂಖ್ಯಾತ ಕೋಟಾಕೋಟಿ ಆವಲಿಗಳು ಒಂದು ಸೇಕಂದದಲ್ಲಿ ಇರುತ್ತವೆ. ಇನ್ನು ಕೋಟಿ X ಕೋಟಿಯನ್ನು ಕೋಟಾಕೋಟಿಯೆಂದು ಹೇಳುತ್ತಾರೆ. ಒಂದು ಕೋಟಿಯಲ್ಲಿ ಒಂದರ ಮುಂದೆ ಏಳು ಸೊನ್ನೆಗಳಿರುತ್ತವೆ. ಕೋಟಾಕೋಟಿಯಲ್ಲಿ ಒಂದರ ಮುಂದೆ ಹದಿನಾಲ್ಕು ಸೊನ್ನೆಗಳಿರುತ್ತವೆ. ಒಂದು ಸೇಕಂದದಲ್ಲಿ ಇಷ್ಟು ಸಮಯಗಳಿದ್ದರೆ ಒಂದು ಗಂಟೆಯಲ್ಲಿ ಎಷ್ಟು, ಒಂದು ವರ್ಷದಲ್ಲಿ ಎಷ್ಟು, ನೂರು ವರ್ಷಗಳಲ್ಲಿ ಎಷ್ಟು ಇರಬಹುದಾಗಿದೆ ? ಇಷ್ಟು ಸಮಯವು ಕಳೆದು ಹೋದಮೇಲೆ ಒಂದು ರೋಮ ಖಂಡವನ್ನು ತಗೆಯುವುದು. ಆ ಹೊಂಡವು ಬರಿದಾದರೆ ಅದಂತೂ ವ್ಯವಹಾರ ಪಲ್ಯವಾಯಿತು. ಇದನ್ನು ಅಸಂಖ್ಯಾತ ಕೋಟಿ ವರ್ಷಗಳ ಸಮಯಗಳಿಂದ ಗುಣಿಸಿದಾಗ ಉದ್ಧಾರ ಪಲ್ಯದ ರೋಮಖಂಡಗಳ ಸಂಖ್ಯೆಯು ಬರುತ್ತದೆ. ಅಂಥ ಒಂದು ಉದ್ಧಾರಪಲ್ಯ, ಎರಡು ಉದ್ಧಾರಪಲ್ಯ, ಕೋಟಿ ಉದ್ಧಾರ ಪಲ್ಯ, ಕೋಟಾಕೋಟಿ ಉದ್ಧಾರಪಲ್ಯ, ಇಪ್ಪತ್ತೈದು

ಕೋಟಾಕೋಟಿ ಉದ್ಧಾರಪಲ್ಯದ ಎಷ್ಟು ಸಮಯಗಳಿರುತ್ತವೆ ಅಷ್ಟು ಅಸಂಖ್ಯಾತ ದ್ವೀಪ-ಸಮುದ್ರಗಳು ಈ ಮಧ್ಯಲೋಕದಲ್ಲಿವೆ, ಅಲ್ಲದೆ ಅವು ದ್ವಿಗುಣ-ದ್ವಿಗುಣ ವಿಸ್ತಾರವುಳ್ಳವಿವೆ. ಹಾಗಾದರೆ ಒಂದು ರಾಜೂ ಎಷ್ಟು ದೊಡ್ಡದಿರುತ್ತದೆಯೆಂಬುದರ ಅಂದಾಜು (ಅನುಮಾನ) ನಾವು ಇಲ್ಲಿ ಮಾಡಬಹುದಾಗಿದೆ.

ಇವುಗಳಲ್ಲಿ ಅರ್ಧ ಸಂಖ್ಯೆಯ ದ್ವೀಪಗಳಿವೆ ಮತ್ತು ಅರ್ಧ ಸಂಖ್ಯೆಯಲ್ಲಿ ಸಮುದ್ರಗಳಿವೆ ಅರ್ಥಾತ್ ಎರಡರ ಸಂಖ್ಯೆಯು ಸಮಾನವಿದೆ. ಈ ಅಸಂಖ್ಯಾತ ಸಮುದ್ರಗಳಲ್ಲಿ ಮೂರು ಸಮುದ್ರಗಳು ಕರ್ಮಭೂಮಿಗೆ ಸಂಬಂಧಿಸಿರುವಂಥವಿವೆ. ಅವು ಲವಣಸಮುದ್ರ , ಕಾಲೋದಧಿ ಸಮುದ್ರ ಮತ್ತು ಸ್ವಯಂಭೂರಮಣ ಸಮುದ್ರ. ಸಮುದ್ರಗಳಲ್ಲಿ ಲವಣ ಸಮುದ್ರವು ಮೊದಲನೆಯ ಸಮುದ್ರವಿದೆ, ಎರಡನೆಯದು ಕಾಲೋದಧಿ ಸಮುದ್ರವಿದೆ ಮತ್ತು ಸ್ವಯಂಭೂರಮಣ ಸಮುದ್ರವು ಅಂತಿಮ ಸಮುದ್ರವಿದೆ. ಅವುಗಳಲ್ಲಿಯೇ ಜಲಚರ ಜೀವಗಳಿರುತ್ತವೆ. ಅನ್ಯ ಸಮುದ್ರಗಳಲ್ಲಿ ಇರುವುದಿಲ್ಲ. ಜಲಚರವೆನ್ನಲಾಗಿದೆ, ಜಲಕಾಯಿಕವೆಂದು ಹೇಳಿಲ್ಲ. ಜಲಚರ ಎಂದರೆ ನೀರಿನಲ್ಲಿ ಇರುವಂಥ ಮೀನು, ಸರ್ಪ, ಆಮೆ ಮೊದಲಾದವು.

ಈ ಸಮುದ್ರಗಳ ಜಲದ ಸ್ವಾದವು ಈ ಕೆಳಗಿನಂತಿದೆ -

ಲವಣ ಸಮುದ್ರ	-	ಲವಣದ ಸಮಾನ ಕ್ಷಾರಸ್ವಾದ.
ಕಾಲೋದಧಿ ಸಮುದ್ರ	-	ಜಲದ ಸಮಾನ ಸ್ವಾದ.
ಪುಷ್ಕರವರ ಸಮುದ್ರ	-	ಜಲದ ಸಮಾನ ಸ್ವಾದ.
ವಾರುಣೀವರ ಸಮುದ್ರ	-	ಮದ್ಯದ ಸಮಾನ ಸ್ವಾದ
ಕ್ಷೀರವರ ಸಮುದ್ರ	-	ದುಗ್ಧ (ಹಾಲಿನ) ಸಮಾನ ಸ್ವಾದ
ಘತವರ ಸಮುದ್ರ	-	ಘೃತದ ಸಮಾನ ಸ್ವಾದ.

ಇವುಗಳನ್ನು ಹೊರತುಪಡಿಸಿ ಉಳಿದ ಸಮುದ್ರಗಳ ಜಲದ ಸ್ವಾದವು ಇಕ್ಷುರಸದ ಸಮಾನವಿದೆ. ಮಧ್ಯಲೋಕದ ಸಮುದ್ರ ಹಾಗೂ ದ್ವೀಪಗಳನ್ನು ಹೊರಗಿನಿಂದ ಒಳಗಿನಕಡೆಗೆ ಅಳತೆ ಮಾಡಿದ ಮೇಲೆ ಸ್ವಯಂಭೂರಮಣ ಸಮುದ್ರವು ಒಂದು ಕಡೆಗೆ ಸುಮಾರು $\frac{೧}{೪}$ ರಾಜೂ ಇದೆ, ಅದರ ಒಳಗಿನ ಕಡೆಗೆ ಸುಮಾರು $\frac{೧}{೮}$ ರಾಜೂ ಪ್ರಮಾಣ ವಿಸ್ತಾರವುಳ್ಳದ್ದು ಸ್ವಯಂಭೂರಮಣ ದ್ವೀಪವಿದೆ.

ಈಗ ನಾವು ೩ನೇ ನಂಬರಿನ ಚಾರ್ಟ ನೋಡೋಣ. ಹೊರಗೆ ನೀಲಿ ವರ್ಣದಲ್ಲಿ ಇರುವುದು ಅದು ಸ್ವಯಂಭೂರಮಣ ಸಮುದ್ರವಿದೆ. ಅದರ ಒಳಗೆ ಅದರ ಅರ್ಧ ಭಾಗದಷ್ಟು ಸ್ವಯಂಭೂರಮಣದ್ವೀಪವಿದೆ. ಇನ್ನು ಅದನ್ನು ಎರಡು ವರ್ಣಗಳಲ್ಲಿ ಏತಕ್ಕಾಗಿ ತೋರಿಸಲಾಗಿದೆ ಮತ್ತು ಆ ಎರಡು ವರ್ಣಗಳ ಮಧ್ಯದಲ್ಲಿ ವೃತ್ತಾಕಾರದ ಅಂಕುಡೊಂಕಾದ ರೇಖೆಯು ಏನಿದೆ ? ಎಂದು ಕೇಳಿದರೆ-

ಸ್ವಯಂಭೂರಮಣ ದ್ವೀಪದ ಮಧ್ಯಭಾಗದಲ್ಲಿ ವೃತ್ತಾಕಾರ-ಬಳೆಯ ಆಕಾರದ ದುಂಡಗಿನ ಪರ್ವತವಿದೆ ಅದರ ಹೆಸರು ಸ್ವಯಂಪ್ರಭ ಪರ್ವತವಿದೆ. ಈ ಪರ್ವತದ ಕಾರಣ ಆ ದ್ವೀಪದಲ್ಲಿ ಒಂದು ಅಂತರವರ್ತೀ ಭಾಗ ಮತ್ತು ಒಂದು ಪರಾವರ್ತಿ-ಹೊರಗಿನ ಭಾಗ ಎಂದರೆ ಸ್ವಯಂಭೂರಮಣ ಸಮುದ್ರದ ಕಡೆಗಿನ ಭಾಗವೆಂದು ಎರಡು ಭಾಗಗಳಾಗುತ್ತವೆ. ಒಳಗಿನ ಭಾಗದಲ್ಲಿ ಅನ್ಯದ್ವೀಪಗಳ ಸಮಾನ ತಿರ್ಯಂಚಗಳ ಜಘನ್ಯ

ಭೋಗಭೂಮಿಯಿದೆ ಮತ್ತು ಹೊರಗಿನ ಭಾಗದಲ್ಲಿ ತಿರ್ಯಂಚಗಳ ಕರ್ಮಭೂಮಿಯಿದೆ. ಸ್ವಯಂಭೂರಮಣ ಸಮುದ್ರದಲ್ಲಿಯೂ ತಿರ್ಯಂಚಗಳ ಕರ್ಮ ಭೂಮಿಯಿದೆ. ಇವುಗಳಲ್ಲಿ ದೊಡ್ಡ-ದೊಡ್ಡ ಅವಗಾಹನವುಳ್ಳ ಜೀವಗಳು ಕಂಡು ಬರುತ್ತವೆ. ಈ ಸಮುದ್ರದಲ್ಲಿಯೂ ದೊಡ್ಡ ಅವಗಾಹನವುಳ್ಳ ಅಸಂಖ್ಯಾತ ಮಹಾಮತ್ಸ್ಯಗಳು ಕಂಡು ಬರುತ್ತವೆ. ಎಲ್ಲಕ್ಕಿಂತ ದೊಡ್ಡ ಅವಗಾಹನವು ಎಷ್ಟಿದೆಯೆಂಬುದನ್ನು ನೋಡೋಣವೇನು ? ಹನ್ನೆರಡೂವರೆ ಕೋಟಿ ಘನಯೋಜನ ಅರ್ಥಾತ್ ಒಂದೊಂದು ಮಹಾಮತ್ಸ್ಯವು ೧೦೦೦ ಯೋಜನ ಉದ್ದ, ೫೦೦ ಯೋಜನ ಅಗಲ ಮತ್ತು ೨೫೦ ಯೋಜನ ಎತ್ತರವಿದೆ. ಅವುಗಳಲ್ಲಿಯ ಅಸಂಖ್ಯ ಸಮ್ಮೂರ್ಚ್ಛನ ಮಹಾಮತ್ಸ್ಯಗಳಂತೂ ಸಮ್ಯಗ್ದೃಷ್ಟಿಗಳಿವೆ - ಪಂಚಮಗುಣಸ್ಥಾನವರ್ತಿಗಳೂ ಇವೆ. ಅಲ್ಲಿ ಪಂಚಮ ಕಾಲವು ವರ್ತಿಸುತ್ತದೆಯೆಂದು ಶಾಸ್ತ್ರಗಳ ಕಥನವಿದೆ. ಅಲ್ಲಿಯ ಎಷ್ಟೋ ಮತ್ಸ್ಯಗಳು ಸತ್ತು ಏಳನೆಯ ನರಕಕ್ಕೆ ಕೂಡ ಹೋಗುತ್ತವೆ. ಸ್ವಯಂಭೂರಮಣ ಸಮುದ್ರವು ದುಂಡಗೆ ಇದೆ ಮತ್ತು ತ್ರಸನಾಳಿಯು ಚೌಕಾಕಾರವಿದೆ. ಸಮುದ್ರದ ಹೊರಗೆ ನಾಲ್ಕೂ ಮೂಲೆಗಳಲ್ಲಿ ಚತುಷ್ಕೋಣ ಭೂಮಿಯಿದೆ. ಅಲ್ಲಿಯೂ ಕೂಡ ಪಂಚಮ ಕಾಲವಿದ್ದು ಅಲ್ಲಿಯೂ ಪಂಚೇಂದ್ರಿಯ ತಿರ್ಯಂಚಗಳು ಕಂಡು ಬರುತ್ತವೆ. ಕರ್ಮಭೂಮಿಯಾಗಿರುವುದರಿಂದ ಅಲ್ಲಿ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಜೀವಗಳು ಕೂಡ ಕಂಡು ಬರುತ್ತವೆ.

ಇಲ್ಲಿ ಸ್ವಯಂಪ್ರಭ ಪರ್ವತದ ಹೊರಮಗ್ಗುಲಿನಲ್ಲಿರುವ ಜೀವಗಳ ಉತ್ಕೃಷ್ಟ ಅವಗಾಹನವು ಹೀಗಿದೆ.

ಜಾತಿ	ಹೆಸರು	ಉದ್ದ	ಕ್ಷೇತ್ರಫಲ
ಏಕೇಂದ್ರಿಯ	ಕಮಲ	ಸಾಧಿಕ ೧೦೦೦ ಯೋಜನ	೭೫೦ ಘನಯೋಜನ
ದ್ವೀಂದ್ರಿಯ	ಶಂಖ	೧೨ ಯೋಜನ	೩೬೫ ಘನಯೋಜನ
ತ್ರೀಂದ್ರಿಯ	ಕೆಂಪು ಚೇಳು	$\frac{೩}{೪}$ ಯೋಜನ	$\frac{೨೭}{೮೧೯೨}$ ಘನಯೋಜನ
ಚತುರಿಂದ್ರಿಯ	ದುಂಬಿ	೧ ಯೋಜನ	$\frac{೩}{೮}$ ಘನಯೋಜನ
ಪಂಚೇಂದ್ರಿಯ	ಮತ್ಸ್ಯ	೧೦೦೦ ಯೋಜನ	೧೨೫೦೦೦೦೦೦ ಘನಯೋಜನ

ಈ ಅಸಂಖ್ಯಾತ ದ್ವೀಪ ಸಮುದ್ರಗಳ ಅಸಂಖ್ಯಾತದ ಅಂದಾಜು ಬರಬೇಕು ಮತ್ತು ಇಷ್ಟು ಬಾರಿ ೧ ಲಕ್ಷ ಯೋಜನವನ್ನು ದ್ವಿಗುಣ-ದ್ವಿಗುಣಮಾಡುತ್ತ ಹೋದರೆ ಅಂತಿಮ ಸಮುದ್ರದ ಪ್ರಮಾಣವು $\frac{೧}{೪}$ ರಾಜೂ ಆಗುತ್ತದೆ, ಈ ಮಾತು ನಮ್ಮ ಲಕ್ಷ್ಯದೊಳಗೆ ಬಂದ ಮೇಲೆ ಮಧ್ಯಲೋಕದ ವಿಶಾಲತೆಯು ಲಕ್ಷ್ಯದೊಳಗೆ ಬರಬಹುದಾಗಿದೆ. ಆಗ ಮೂರು ಲೋಕವೆಂದರೆ ಏನಿದೆಯೆಂಬುದರ ಪರಿಚಯವಾಗಬಹುದಾಗಿದೆ. ಆದಾಗ್ಯೂ ಈ ಲೋಕವನ್ನು ಹೀಗೆ ಅಸಂಖ್ಯಾತವೆನ್ನುತ್ತಾರೆಂದ ಮೇಲೆ ಕೇವಲ ಜ್ಞಾನದ ವಿಷಯವಾದ ಅನಂತವು ಇನ್ನು ಅದೆಷ್ಟು ದೊಡ್ಡದಾಗಿರಬಹುದು ! ಅಯ್ಯಾ ನಾವು ಕೇವಲ ಒಂದು ಪೈಸೆಯಿಂದ ಆರಂಭಿಸೋಣ. ಮೊದಲನೇ ದಿವಸ ಒಂದು ಪೈಸೆ, ಎರಡನೆಯ ದಿವಸ ೨ ಪೈಸೆ, ಮೂರನೆಯ ದಿವಸ ೪ ಪೈಸೆ - ಈ ಕ್ರಮದಿಂದ ಮೂವತ್ತೆರಡನೇ ದಿವಸ ನಮಗೆ ಮೂವತ್ತೊಂದು ಬಾರಿ ದ್ವಿಗುಣದಷ್ಟು ಪೈಸೆ ದೊರಕುತ್ತವೆ. ನೋಡಿರಿ, ಎರಡು

ಬಾರಿ ದ್ವಿಗುಣ ಮಾಡಿದರೆ ೨ X ೨=೪ ಬರುತ್ತವೆ. ನಾಲ್ಕು ಬಾರಿ ದ್ವಿಗುಣ (ದುಪ್ಪಟ್ಟು) ಮಾಡಿದರೆ ೧೬ ಬರುತ್ತದೆ, ಎಂಟು ಬಾರಿ ದ್ವಿಗುಣ ಮಾಡಿದರೆ ೨೫೬ ಬರುತ್ತವೆ ಹದಿನಾರು ಬಾರಿ ದ್ವಿಗುಣ ಮಾಡಿದರೆ ೬೫೫೩೬ ಬರುತ್ತವೆ, ಮೂವತ್ತೆರಡು ಬಾರಿ ದ್ವಿಗುಣ ಮಾಡಿದರೆ ಬಾದಾಲ ಎಂದರೆ ೪೨೯೪೯೬೭೨೯೬ ಪೈಸೆಗಳು ಅರ್ಥಾತ್ ೪೨೯೪೯೬೭೨೯.೯೬ ರೂಪಾಯಿ ದೊರಕುವವು. ಮೂವತ್ತೊಂದು ಬಾರಿ ಮಾಡಿದರೆ ಇದರೊಳಗಿನ ಅರ್ಧ ಅರ್ಥಾತ್ ೨೧೪೭೪೮೪೩೬.೪೮ ರೂಪಾಯಿ ದೊರಕಬಹುದಾಗಿದೆ. ಅದಂತೂ ಮೂವತ್ತೊಂದನೆಯ ದಿನದ ಮಾತು ಇದೆ. ಆದರೆ ಎಲ್ಲ ಸೇರಿ ೪೨೯೪೯೬೭೨೯.೯೫ ರೂಪಾಯಿ ದೊರಕುವವು. ಇಲ್ಲಿಯಂತೂ ಒಂದು ಲಕ್ಷದಿಂದ ಆರಂಭ ಮಾಡಿ ಅಸಂಖ್ಯಾತ (೨೫ ಕೋಟಾಕೋಟಿ ಉದ್ಧಾರ ಪಲ್ಯ ಪ್ರಮಾಣ) ಬಾರಿ ದ್ವಿಗುಣ-ದ್ವಿಗುಣ ಮಾಡುವುದಿದೆ.

ಈ ಅಸಂಖ್ಯಾತ ದ್ವೀಪ ಸಮುದ್ರಗಳೊಳಗಿಂದ ಕೇವಲ ಎರಡೂವರೆ ದ್ವೀಪ ಹಾಗೂ ಅದರ ಅಂತರ್ಗತವಿರುವ ಎರಡು ಸಮುದ್ರಗಳು ಸೇರಿ ನಲವತ್ತೈದು ಲಕ್ಷ ಯೋಜನ ಪ್ರಮಾಣ ವ್ಯಾಸವುಳ್ಳ ದುಂಡಗಿನ ಮನುಷ್ಯ ಕ್ಷೇತ್ರವಿದೆ. ಮಧ್ಯದಲ್ಲಿ ಜಂಬೂದ್ವೀಪವು ಒಂದು ಲಕ್ಷ ಯೋಜನ, ಅದರ ಹೊರಗೆ ಎರಡೂ ಕಡೆಗೆ ಎರಡು-ಎರಡು ಲಕ್ಷ ಯೋಜನವುಳ್ಳ ಲವಣ ಸಮುದ್ರ, ಅದರ ಹೊರಗೆ ಎರಡೂ ಮಗ್ಗಲಿಗೆ ನಾಲ್ಕು-ನಾಲ್ಕು ಲಕ್ಷ ಯೋಜನವುಳ್ಳ ಧಾತಕೀಖಂಡ ದ್ವೀಪ, ಅದರ ಹೊರಗೆ ಎಂಟು-ಎಂಟು ಲಕ್ಷ ಯೋಜನ ವಿಸ್ತಾರವುಳ್ಳ ಕಾಲೋದಧಿ ಸಮುದ್ರ, ಅದರ ಹೊರಗೆ ಎರಡೂ ಕಡೆಗೆ ಅರ್ಧ-ಅರ್ಧ ಪುಷ್ಕರದ್ವೀಪವು-ಅದು ಎಂಟು-ಎಂಟು ಲಕ್ಷ ಯೋಜನವುಳ್ಳದ್ದಿದೆ. ಈ ಪ್ರಕಾರ ೧+೨+೨+೪+೪+೮+೮+೮=೪೫ ಲಕ್ಷ ಯೋಜನ ಮನುಷ್ಯ ಕ್ಷೇತ್ರವಿದೆ. ಮನುಷ್ಯರು ಈ ಕ್ಷೇತ್ರದಲ್ಲಿಯೇ ಕಂಡು ಬರುತ್ತಾರೆ, ಇದರಿಂದ ಹೊರಗೆ ಇರುವುದಿಲ್ಲ. ದೇವಗಳು ಕೂಡ ಮನುಷ್ಯರನ್ನು ಎತ್ತಿಕೊಂಡು ಇದರಿಂದ ಹೊರಗೆ ಒಯ್ಯುವ ಸಾಧ್ಯತೆಯಿಲ್ಲ. ಅಹುದು, ಕೇವಲ ಸಮುದ್ಘಾತದ ಅವಸ್ಥೆಯಲ್ಲಿ ಜೀವದ ಪ್ರದೇಶಗಳು ಹೊರಗೆ ಹರಡುತ್ತವೆ ಅದರ ಮಾತು ಇಲ್ಲಿ ಇಲ್ಲ.

ಮನುಷ್ಯ ಕ್ಷೇತ್ರದ ಮರ್ಯಾದೆಯು ಮಾನುಷೋತ್ತರ ಪರ್ವತದವರೆಗೆ ಇದೆ ಮತ್ತು ಅದು ಪುಷ್ಕರ ದ್ವೀಪದ ಮಧ್ಯದಲ್ಲಿ ಸ್ಥಿತವಿದೆ. ಮಾನುಷೋತ್ತರ ಪರ್ವತದಿಂದ ಹಿಡಿದು ಸ್ವಯಂಪ್ರಭ ಪರ್ವತದ ಮಧ್ಯದಲ್ಲಿ ಯಾವ ಅಸಂಖ್ಯಾತ ದ್ವೀಪಗಳಿವೆ ಅಲ್ಲಿ ತಿರ್ಯಂಚಗಳ ಜಘನ್ಯ ಭೋಗಭೂಮಿಯಿದೆ ಮತ್ತು ಮಧ್ಯದಲ್ಲಿ ಯಾವ ಅಸಂಖ್ಯಾತ ಸಮುದ್ರಗಳಿವೆ ಅವುಗಳಲ್ಲಿ ಯಾವ ಜಲಚರ ಜೀವಗಳು ಇರುವುದಿಲ್ಲ. ಅಲ್ಲಿ ಮನುಷ್ಯರು ಹೋಗುವ ಸಾಧ್ಯತೆಯಿಲ್ಲ. ದೇವಗಳಂತೂ ಸರ್ವತ್ರ-ಸರ್ವ ಅಸಂಖ್ಯಾತ ದ್ವೀಪ ಸಮುದ್ರಗಳಲ್ಲಿ ಹೋಗುವ ಸಾಧ್ಯತೆಯಿದೆ.

ಪ್ರಶ್ನೆ :- ಹಾಗಾದರೆ ದೇವಗಳು ನಮ್ಮಲ್ಲಿ ಏಕೆ ಬರುವುದಿಲ್ಲ ?

ಉತ್ತರ :- ಅವರು ಪಾಪೀ ಜನರಿಗೆ ಭೇಟಿಯಾಗುವ ಸಲುವಾಗಿ ಏತಕ್ಕಾಗಿ ಬರುತ್ತಾರೆ ? ಯಾವಾಗ ಇಲ್ಲಿ ತೀರ್ಥಂಕರರು ವಿರಾಜಮಾನರಿರುತ್ತಾರೆ ಆಗ ಅವರು ಇಲ್ಲಿಯೂ ಬರುತ್ತಾರೆ.

ಪ್ರಶ್ನೆ :- ಭೋಗಭೂಮಿಯನ್ನು ಜಘನ್ಯವೆಂದೇಕೆ ಹೇಳಿದ್ದಾರೆ ?

ಉತ್ತರ :- ಭೋಗಭೂಮಿಗಳು ಉತ್ತಮ ಭೋಗಭೂಮಿ, ಮಧ್ಯಮ ಭೋಗಭೂಮಿ ಮತ್ತು ಜಘನ್ಯ

ಭೋಗಭೂಮಿಯೆಂದು ಮೂರು ಪ್ರಕಾರದವಿರುತ್ತವೆ. ಎರಡೂವರೆ ದ್ವೀಪ ಎಂದರೆ ಮನುಷ್ಯ ಲೋಕದಲ್ಲಿಯಂತೂ ಮೂರು ಭೋಗಭೂಮಿಗಳಿವೆ. ಎಲ್ಲಿರುತ್ತವೆಯೆಂಬುದನ್ನು ನಾವು ನಂತರ ನೋಡೋಣ. ಅಲ್ಲಿ ತಿರ್ಯಂಚ ಮತ್ತು ಮನುಷ್ಯರು ಇಬ್ಬರೂ ಇರುತ್ತಾರೆ. ಎರಡೂವರೆ ದ್ವೀಪಗಳಲ್ಲಿ ಸರ್ವತ್ರ ಮನುಷ್ಯರು ಇರುತ್ತಾರೆ. ತಿರ್ಯಂಚಗಳೂ ಇರುತ್ತವೆ. ಮನುಷ್ಯಲೋಕವೆಂದು ಹೇಳಿದರೆ ಇಲ್ಲಿ ಕೇವಲ ಮನುಷ್ಯರೇ ಇರುತ್ತಾರೆ-ಎಂಬುದಾಗಿಲ್ಲ ಇಲ್ಲಿ ತಿರ್ಯಂಚಗಳೂ ಇರುತ್ತವೆ, ಜ್ಯೋತಿಷಿ ಹಾಗೂ ವ್ಯಂತರ ದೇವಗಳೂ ಇರುತ್ತಾರೆ. ತಿರ್ಯಂಚಗಳು ಇರುವ ಸ್ಥಾನವಂತೂ ಸರ್ವಲೋಕವಿದೆ.

ಪ್ರಶ್ನೆ :- ಹಾಗಾದರೆ ಪಶು-ಪಕ್ಷಿಗಳು ಸರ್ವಲೋಕದಲ್ಲಿ ಇರುತ್ತವೆಯೇನು ?

ಉತ್ತರ :- ಪಶು-ಪಕ್ಷಿಗಳಂತೂ ಪಂಚೇಂದ್ರಿಯವಿವೆ ಅವು ಕರ್ಮಭೂಮಿ ಹಾಗೂ ಭೋಗಭೂಮಿಯಲ್ಲಿ ಇರುತ್ತವೆ. ವಿಕಲೇಂದ್ರಿಯ-ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಜೀವಗಳು ಕೇವಲ ಕರ್ಮ ಭೂಮಿಯಲ್ಲಿಯೇ ಕಂಡು ಬರುತ್ತವೆ. ಏಕೇಂದ್ರಿಯಗಳು ಕೂಡ ತಿರ್ಯಂಚವೇ ಇವೆ, ಅವಂತೂ ಇಡೀ ಲೋಕದಲ್ಲಿ ಸರ್ವತ್ರ ಕಂಡು ಬರುತ್ತವೆ ಅದರಿಂದ ತಿರ್ಯಂಚಗಳು ಇಡೀ ಲೋಕದಲ್ಲಿ ಎಲ್ಲ ಕಡೆಗೂ ಇರುತ್ತವೆ.

ಪ್ರಶ್ನೆ :- ಆ ಜಘನ್ಯ ಭೋಗಭೂಮಿಯಲ್ಲಿ ಎಷ್ಟು ಆಯುವಿರುತ್ತದೆ ?

ಉತ್ತರ :- ಅಸಂಖ್ಯಾತ ದ್ವೀಪಗಳಲ್ಲಿ - ಎಲ್ಲಿ ತಿರ್ಯಂಚಗಳ ಜಘನ್ಯ ಭೋಗಭೂಮಿಯಿದೆ ಅಲ್ಲಿಯ ಉತ್ಕೃಷ್ಟ ಆಯುವು ಒಂದು ಪಲ್ಯಪ್ರಮಾಣವಿದೆ ಮತ್ತು ಜಘನ್ಯ ಆಯುವು ಒಂದು ಕೋಟಿ ಪೂರ್ವವರ್ಷ ಅಧಿಕ ಒಂದು ಸಮಯವಿದೆ. ಕರ್ಮಭೂಮಿಯ ಮನುಷ್ಯ ಮತ್ತು ಪಂಚೇಂದ್ರಿಯ ತಿರ್ಯಂಚಗಳ ಉತ್ಕೃಷ್ಟ ಆಯುವು ಒಂದು ಕೋಟಿ ಪೂರ್ವವಿರುತ್ತದೆ. ಒಂದು ಪೂರ್ವವೆಂದರೆ ಎಪ್ಪತ್ತು ಲಕ್ಷ ಐವತ್ತಾರು ಸಾವಿರ ಕೋಟಿ (೭೦೫೬೦೦೦೦೦೦೦೦೦) ವರ್ಷಗಳದ್ದಿರುತ್ತದೆ; ಇಂಥ ಒಂದು ಪೂರ್ವ, ಹತ್ತು ಪೂರ್ವ, ಲಕ್ಷಪೂರ್ವ, ಒಂದು ಕೋಟಿಪೂರ್ವವಿರುತ್ತದೆ. ಕರ್ಮಭೂಮಿಯ ಮನುಷ್ಯ, ಸಂಜ್ಞೀ ಮತ್ತು ಅಸಂಜ್ಞೀ ಪಂಚೇಂದ್ರಿಯ ತಿರ್ಯಂಚ ಇವರೆಲ್ಲರ ಉತ್ಕೃಷ್ಟ ಆಯುವು ಇಷ್ಟು ಇರುವ ಸಾಧ್ಯತೆಯಿದೆ. ಕರ್ಮಭೂಮಿಯ ಜಘನ್ಯ ಆಯುವು ಪರ್ಯಾಪ್ತ ಜೀವಗಳದು ಒಂದು ಅಂತರ್ಮುಹೂರ್ತ ಮತ್ತು ಲಬ್ಧ ಅಪರ್ಯಾಪ್ತಕಗಳದ್ದು ಕ್ಷುದ್ರ ಪ್ರಮಾಣ ಅರ್ಥಾತ್ ಒಂದು ಶ್ವಾಸದ ಹದಿನೆಂಟನೆಯ ಒಂದು ಭಾಗ ಪ್ರಮಾಣವಿರುತ್ತದೆ.

ಪ್ರಶ್ನೆ :- ಸ್ವಯಂಭೂರಮಣ ಸಮುದ್ರದಲ್ಲಿ ಸಮ್ಯಗ್ದೃಷ್ಟಿ ಜೀವಗಳಿವೆ. ಎಂದರೆ ಅವು ಯಾವ ಸಮ್ಯಕ್ತ್ವ ಸಹಿತವಿವೆ ? ಅಲ್ಲಿ ಅವುಗಳಿಗೆ ಯಾರು ಉಪದೇಶವೀಯುತ್ತಾರೆ ? ಅಲ್ಲಿ ಅವುಗಳ ಆಹಾರವು ಏನಿರುತ್ತದೆ?

ಉತ್ತರ :- ಅಲ್ಲಿ ಗರ್ಭಜ ಜೀವಗಳಿಗೆ ಪ್ರಥಮೋಪಶಮ ಸಮ್ಯಕ್ತ್ವವೂ ಆಗುವ ಸಾಧ್ಯತೆಯಿದೆ ಮತ್ತು ಕ್ಷಯೋಪಶಮ(ವೇದಕ) ಸಮ್ಯಕ್ತ್ವವೂ ಆಗುವ ಸಾಧ್ಯತೆಯಿದೆ. ಎಲ್ಲ ಸಮ್ಮೂರ್ಚ್ಛನ ಪಂಚೇಂದ್ರಿಯಗಳಿಗೆ ಕ್ಷಯೋಪಶಮ ಸಮ್ಯಕ್ತ್ವವೇ ಇರುತ್ತದೆ ಏಕೆಂದರೆ ಅವುಗಳಲ್ಲಿ ಪ್ರಥಮೋಪಶಮ ಸಮ್ಯಕ್ತ್ವವು ಪ್ರಾಪ್ತವಾಗುವುದಿಲ್ಲ. ದೇಶನಾಲಬ್ಧಿಯ ಮುಖ್ಯತೆಯಂತೂ ಪ್ರಥಮೋಪಶಮ ಸಮ್ಯಕ್ತ್ವದಲ್ಲಿ ಇರುತ್ತದೆ ಮತ್ತು ಅವುಗಳಲ್ಲಿಯೂ ಪೂರ್ವ ಭವದ ದೇಶನಾವು ನಿಮಿತ್ತವಾಗಬಹುದಾಗಿದೆ. ಜಾತಿಸ್ಮರಣವೂ ಒಂದು ಕಾರಣವಾಗುತ್ತದೆ. ವೇದಕ

ಸಮ್ಯಕ್ತ್ವವಂತೂ ಸಾದಿ ಮಿಥ್ಯಾದೃಷ್ಟಿ ಜೀವರುಗಳಿಗೆ ಆಗುತ್ತದೆ. ಇನ್ನು ಅವುಗಳ ಆಹಾರವೇನಿರುತ್ತದೆ ? ಅವು ಮೀನುಗಳನ್ನಂತೂ ತಿನ್ನುವುದಿಲ್ಲ. ಸಮುದ್ರದಲ್ಲಿಯೂ ವನಸ್ಪತಿಗಳಂತೂ ಇದ್ದೇ ಇರುತ್ತವೆಯಲ್ಲವೇನು - ಅಲ್ಲಿಯೂ ಅವುಗಳಿಗೆ ಯೋಗ್ಯವಿರುವ ಆಹಾರ ತಗೆದುಕೊಳ್ಳಬಹುದಾಗಿದೆ.

ಈಗ ನಾವು ಅನ್ಯ ಪ್ರಶ್ನೆಗಳನ್ನು ಸ್ವಲ್ಪ ಗೌಣ ಮಾಡಿ ಭೌಗೋಲಿಕ ಚರ್ಚೆಯನ್ನು ಮುಂದುವರೆಸೋಣ. ಇಲ್ಲಿ ಈಗ ಎರಡೂವರೆ ದ್ವೀಪದ ರಚನೆಯನ್ನು ತಿಳಿದುಕೊಳ್ಳೋಣ, ಅದರ ಸಲುವಾಗಿ ನಾಲ್ಕನೆಯ ನಂಬರಿನ ಚಾರ್ಟ ನೋಡಬೇಕು. ಇಲ್ಲಿ ನೀಲಿ ಬಣ್ಣದಲ್ಲಿ ಎರಡು ಸಮುದ್ರಗಳನ್ನು ತೋರಿಸಲಾಗಿದೆ. ಅವುವೇ ಲವಣ ಸಮುದ್ರ ಮತ್ತು ಕಾಲೋದಕ ಸಮುದ್ರಗಳಿವೆ. ಕಾಲೋದಧಿಯನ್ನು ಕಾಲೋದಕವೆಂದು ಕೂಡ ಹೇಳುತ್ತಾರೆ. ಲವಣ ಸಮುದ್ರದ ಮಧ್ಯದಲ್ಲಿ ಅತ್ಯಂತ ಚಿಕ್ಕದಾದ ಗುಂಡು ಅದು ಜಂಬೂದ್ವೀಪವಿದೆ ಹಾಗೂ ಎರಡು ಸಮುದ್ರಗಳ ಮಧ್ಯದಲ್ಲಿ ಧಾತಕೀಖಂಡ ದ್ವೀಪವಿದೆ. ಕಾಲೋದಕ ಸಮುದ್ರದ ಹೊರಗೆ ಪೂರ್ತಿ ಪುಷ್ಕರವರ ದ್ವೀಪವಿದೆ ಅದರ ನಟ್ಟನಡುವೆ ಕಂಕಣಾಕೃತಿಯ ಮಾನುಷೋತ್ತರ ಪರ್ವತವಿದೆ. ಕಾಲೋದಕ ಸಮುದ್ರದಿಂದ ಮಾನುಷೋತ್ತರ ಪರ್ವತದವರೆಗೆ ಅರ್ಧಪುಷ್ಕರ ದ್ವೀಪವಿದೆ ಅದನ್ನು ಪುಷ್ಕರಾರ್ಧವೆಂದು ಕೂಡ ಹೇಳುತ್ತಾರೆ. ಅದರ ಹೊರಗೆ ದ್ವೀಪದಲ್ಲಿ ಯಾವುದೇ ರಚನೆಯನ್ನು ತೋರಿಸಲಾಗಿಲ್ಲ. ಇಲ್ಲಿ ಜಂಬೂದ್ವೀಪದ ಆಕಾರವು ಅತ್ಯಂತ ಚಿಕ್ಕದಾಗಿರುವುದರಿಂದ ಅದರಲ್ಲಿಯೂ ಯಾವುದೇ ರಚನೆಯನ್ನು ತೋರಿಸುವುದು ಸಾಧ್ಯವಾಗಿಲ್ಲ, ಅದರ ವಿಸ್ತಾರವಾದ ಚರ್ಚೆಯನ್ನು ನಾವು ಜಂಬೂದ್ವೀಪದ ರಚನೆಯಲ್ಲಿ ಮಾಡೋಣ. ಇಲ್ಲಿಯಂತೂ ಸರಿಯಾದ ಅನುಪಾತದಲ್ಲಿ ಚಿತ್ರದ ನಿರ್ಮಾಣ ಮಾಡಲಾಗಿದೆ.

ಜಂಬೂದ್ವೀಪವಂತೂ ಒಂದು ಅಖಂಡ ವೃತ್ತಾಕಾರವಿದೆ. ಧಾತಕೀ ಖಂಡ ದ್ವೀಪದಲ್ಲಿ ಪೂರ್ವ ಧಾತಕೀ ಮತ್ತು ಪಶ್ಚಿಮ ಧಾತಕೀ ಹೀಗೆ ಎರಡು ಭಾಗಗಳಾಗಿವೆ ಮತ್ತು ಎರಡು ಭಾಗಗಳಲ್ಲಿ ವಿಭಾಜಿತ ಮಾಡುವಂಥ ಪರ್ವತಗಳ ಹೆಸರು ಈಶ್ವಾಕಾರ ಪರ್ವತವಿದೆ. ಚಾರ್ಟದಲ್ಲಿ ನೋಡಬೇಕು - ಲವಣ ಸಮುದ್ರದ ಉತ್ತರದಲ್ಲಿ ಒಂದು ಮತ್ತು ದಕ್ಷಿಣದಲ್ಲಿ ಒಂದು ಈಶ್ವಾಕಾರ ಪರ್ವತಗಳಿವೆ; ಅವು ಕಾಲೋದಕ ಸಮುದ್ರದವರೆಗೆ ಹರಡಿಕೊಂಡಿವೆ. ಅದೇ ಪ್ರಕಾರ ಪುಷ್ಕರಾರ್ಧದಲ್ಲಿಯೂ ಎರಡು ಈಶ್ವಾಕಾರ ಪರ್ವತಗಳಿವೆ; ಅವು ಕಾಲೋದಕ ಸಮುದ್ರದಿಂದ ಮಾನುಷೋತ್ತರ ಪರ್ವತದವರೆಗೆ ಹರಡಿಕೊಂಡಿವೆ. ಇವುಗಳ ಕಾರಣದಿಂದ ಪೂರ್ವ ಪುಷ್ಕರಾರ್ಧ ಮತ್ತು ಪಶ್ಚಿಮ ಪುಷ್ಕರಾರ್ಧವೆಂಬ ಎರಡು ವಿಭಾಗಗಳಾಗಿವೆ.

ಈಗ ಇಲ್ಲಿ ಕ್ರಮದಿಂದ ಹೀಗೆ ವಿಭಾಗಗಳಾಗಿವೆ - ೧) ಜಂಬೂದ್ವೀಪ, ೨) ಪೂರ್ವಧಾತಕೀ, ೩) ಪಶ್ಚಿಮ ಧಾತಕೀ, ೪) ಪೂರ್ವ ಪುಷ್ಕರಾರ್ಧ, ೫) ಪಶ್ಚಿಮ ಪುಷ್ಕರಾರ್ಧ. ಪ್ರತಿಯೊಂದರ ಮಧ್ಯದಲ್ಲಿ ಒಂದೊಂದು ಬಿಂದು ಮತ್ತು ವೃತ್ತಾಕಾರವನ್ನು ತೋರಿಸಲಾಗಿದೆ ಅವುವೇ ಕ್ರಮದಿಂದ ಪಂಚಮೇರು ಪರ್ವತಗಳಿವೆ. ಅವುಗಳ ಹೆಸರು ಕ್ರಮದಿಂದ - ೧) ಸುದರ್ಶನಮೇರು, ೨) ವಿಜಯಮೇರು, ೩) ಅಚಲಮೇರು, ೪) ಮಂದರಮೇರು, ೫) ವಿದ್ಯುನ್ಮಾಲೀಮೇರು ಎಂಬುದಾಗಿದೆ.

ಪ್ರತಿಯೊಂದು ಮೇರುವಿನ ಪೂರ್ವ ಮತ್ತು ಪಶ್ಚಿಮದಲ್ಲಿ ವಿದೇಹ ಕ್ಷೇತ್ರಗಳಿವೆ. ಪ್ರತಿಯೊಂದು ದ್ವೀಪದ (ಅಥವಾ ಅರ್ಧದ್ವೀಪದ) ದಕ್ಷಿಣದಲ್ಲಿ ಒಂದೊಂದು ಭರತಕ್ಷೇತ್ರ ಮತ್ತು ಉತ್ತರದಲ್ಲಿ ಒಂದೊಂದು ಐರಾವತ

ಕ್ಷೇತ್ರಗಳಿವೆ. ಇಲ್ಲಿ ಚಾರ್ಟದಲ್ಲಿ ದಕ್ಷಿಣದ ಕಡೆಗೆ ಹಳದೀ ಬಣ್ಣದಲ್ಲಿ ತೋರಿಸಿರುವುದು ಅವು ಭರತ ಕ್ಷೇತ್ರಗಳಿವೆ - ನಾಲ್ಕಂತೂ ಸ್ಪಷ್ಟವಾಗಿ ಕಾಣಿಸುತ್ತವೆ. ಜಂಬೂದ್ವೀಪದ ಭರತ ಕ್ಷೇತ್ರವು ಹಳದೀ ಬಿಂದುವಿನಂತೆ ಕಂಡು ಬರುತ್ತಲಿದೆ - ಇವು ಐದು ಭರತ ಕ್ಷೇತ್ರಗಳಿವೆ. ಹೀಗೆಯೇ ಐದು ಐರಾವತ ಕ್ಷೇತ್ರಗಳು ಉತ್ತರದಕಡೆಗೆ ಇವೆ ಅವುಗಳನ್ನು ಇಲ್ಲಿ ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ.

ಪ್ರತಿಯೊಂದು ಮೇರು ಸಂಬಂಧದ ವಿದೇಹ ಕ್ಷೇತ್ರ, ಭರತ ಕ್ಷೇತ್ರ, ಐರಾವತ ಕ್ಷೇತ್ರ ಹಾಗೂ ಅನ್ಯ ಭೋಗಭೂಮಿಗಳು ಮತ್ತು ಪರ್ವತಾದಿಗಳ ರಚನೆಯು ಹೇಗಿರುತ್ತದೆ - ಇತ್ಯಾದಿ ವಿಷಯಗಳ ನಿರ್ಣಯವನ್ನು ನಾವು ಜಂಬೂದ್ವೀಪದ ರಚನೆಯನ್ನು ನೋಡಿ ಮಾಡುವುದಿದೆ. ಅಲ್ಲದೆ ಜಂಬೂದ್ವೀಪದಿಂದ ಅನ್ಯ ದ್ವೀಪಗಳ ಸಂಬಂಧದ ಅಂತರವೇನಿದೆ - ವಿಶೇಷತೆಯೇನಿದೆ ಎಂಬುದನ್ನೂ ನೋಡುವುದಿದೆ.

ಉಳಿದ ಚರ್ಚೆಯನ್ನು ಮುಂದೆ ಮಾಡಬಹುದಾಗಿದೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹನ್ನೊಂದನೆಯ ತೀರ್ಥಂಕರ
ಶ್ರೀ ವಜ್ರಧರ ಭಗವಂತರಿಗೆ ಜಯವಾಗಲಿ.

★★★★★

ಆತ್ಮನ ಪರಿಣಾಮಗಳು ಸಂಕ್ಲೇಶ, ವಿಶುದ್ಧ ಮತ್ತು ಶುದ್ಧವೆಂದು ಮೂರು ಪ್ರಕಾರವಾಗಿವೆ. ಅಲ್ಲಿ ತೀವ್ರ ಕಷಾಯರೂಪವು ಸಂಕ್ಲೇಶವಿದ್ದರೆ ಮಂದ ಕಷಾಯರೂಪವು ವಿಶುದ್ಧವಿದೆ ಹಾಗೂ ಕಷಾಯ ರಹಿತವು ಅದು ಶುದ್ಧವಿದೆ. ಅಲ್ಲಿ ವೀತರಾಗ-ವಿಶೇಷಜ್ಞಾನರೂಪವಾದ ತಮ್ಮ ಸ್ವಭಾವದ ಘಾತ ಮಾಡುವಂಥ ಯಾವ ಜ್ಞಾನಾವರಣ ಮೊದಲಾದ ಘಾತಿಕರ್ಮಗಳಿವೆ; ಅವುಗಳ ತೀವ್ರ ಬಂಧವು ಸಂಕ್ಲೇಶ ಪರಿಣಾಮಗಳಿಂದ ಆಗುತ್ತದೆ ಮತ್ತು ವಿಶುದ್ಧ ಪರಿಣಾಮಗಳಿಂದ ಅವುಗಳ ಮಂದ ಬಂಧವಾಗುತ್ತದೆ. ಅಲ್ಲದೇ ವಿಶುದ್ಧ ಪರಿಣಾಮಗಳು ಪ್ರಬಲವಾಗಿದ್ದರೆ ಪೂರ್ವ ಕಾಲದಲ್ಲಿ ಆ ಕರ್ಮಗಳ ತೀವ್ರ ಬಂಧವಾಗಿರುವುದನ್ನು ಕೂಡ ಮಂದ ಮಾಡುತ್ತವೆ. ಶುದ್ಧ ಪರಿಣಾಮಗಳಿಂದ ಬಂಧವಾಗುವುದಿಲ್ಲ, ಕೇವಲ ಅವುಗಳ ನಿರ್ಜರೆಯೇ ಆಗುತ್ತದೆ. ಪಂಚ ಪರಮೇಷ್ಠಿಗಳ ಸ್ತವನಾದಿರೂಪದ ಯಾವ ಭಾವಗಳಾಗುತ್ತವೆ, ಅವು ಕಷಾಯಗಳ ಮಂದತೆಯೊಡನೆಯೇ ಆಗುತ್ತಿರುವುದರಿಂದ ಅವು ವಿಶುದ್ಧ ಪರಿಣಾಮಗಳಿವೆ. ಅಲ್ಲದೆ ಆ ವಿಶುದ್ಧ ಪರಿಣಾಮಗಳು ಎಲ್ಲ ಪ್ರಕಾರದ ಕಷಾಯಗಳು ದೂರವಾಗುವುದರ ಸಾಧನಗಳಿರುವುದರಿಂದ ಶುದ್ಧ ಪರಿಣಾಮದ ಕಾರಣವಿದೆ. ಅಂತೆಯೇ ಜಿನೇಂದ್ರ ದೇವರ ದರ್ಶನ, ಸ್ತವನಾದಿಗಳಿಂದ ಭವ ಭ್ರಮಣವನ್ನು ಕತ್ತರಿಸುವ ಪ್ರಯೋಜನದ ಸಿದ್ಧಿಯಾಗುತ್ತದೆ.

೧೨. ಜಂಬೂದ್ವೀಪ

ಶ್ರೀಮದ್ ನೇಮಿಚಂದ್ರ ಆಚಾರ್ಯದೇವ ವಿರಚಿತ ತ್ರಿಲೋಕಸಾರದ ಆಧಾರದಿಂದ ಇಲ್ಲಿ ನಾವು ಮೂರು ಲೋಕಗಳ ರಚನೆಯ ವಿಚಾರ ಮಾಡುತ್ತಿದ್ದೇವೆ. ಮಧ್ಯಲೋಕದ ಎರಡೂವರೆ ದ್ವೀಪಗಳ ರಚನೆಯನ್ನು ನಾವು ನೋಡಿಯಾಗಿದೆ. ಅವುಗಳ ಹೆಸರು ಹಾಗೂ ಸಾಮಾನ್ಯ ಕಥನವನ್ನು ನೋಡಿದೆವು. ಆದರೆ ಆ ದ್ವೀಪಗಳ ವರ್ಣನೆಯನ್ನು ವಿಸ್ತಾರಪೂರ್ವಕ ನೋಡಿದ ಮೇಲೆ ಸರಿಯಾದ ಅಂದಾಜು ಬರಬಹುದಾಗಿದೆ. ಎಲ್ಲಕ್ಕಿಂತ ಮೊದಲು ನಾವು ಜಂಬೂದ್ವೀಪದ ರಚನೆಯನ್ನು ಈಗ ನೋಡೋಣ. ಚಾರ್ಟ (ಚಿತ್ರ) ನಂ. ೫ರ ಆಧಾರದಿಂದ ಅದನ್ನು ನಾವು ತಿಳಿದುಕೊಳ್ಳೋಣ.

ಜಂಬೂದ್ವೀಪವು ಒಂದು ಲಕ್ಷ ಯೋಜನ ವಿಸ್ತಾರವುಳ್ಳದ್ದಿದ್ದು ವೃತ್ತಾಕಾರವಿದೆಯೆಂಬ ಮಾತನ್ನು ನಾವು ಅನೇಕ ಬಾರಿ ನೋಡಿಯಾಗಿದೆ. ಇದರಲ್ಲಿ ಆರು ಪರ್ವತಗಳು ಪೂರ್ವದಿಂದ ಪಶ್ಚಿಮದವರೆಗೆ ಅಡ್ಡಲಾಗಿ ಹರಡಿಕೊಂಡಿವೆ. ಅವು ಪೂರ್ವದ ಕಡೆಗೆಯೂ ಲವಣ ಸಮುದ್ರವನ್ನು ಸ್ಪರ್ಶ ಮಾಡುತ್ತವೆ ಮತ್ತು ಪಶ್ಚಿಮದ ಕಡೆಗೆಯೂ ಅವು ಲವಣ ಸಮುದ್ರವನ್ನು ಸ್ಪರ್ಶ ಮಾಡುತ್ತವೆ. ಈ ಪರ್ವತಗಳನ್ನು ಕುಲಾಚಲ ಪರ್ವತಗಳೆಂದು ಹೇಳುತ್ತಾರೆ. ಈ ಚಾರ್ಟದಲ್ಲಿ ಎಲ್ಲಕ್ಕಿಂತ ಕೆಳಗೆ ದಕ್ಷಿಣದಲ್ಲಿ ಯಾವುದು ಹಳದೀ ವರ್ಣವು ಕಂಡು ಬರುತ್ತಿದೆ, ಅದರ ಮೇಲೆ ಕಂಡು ಬರುತ್ತಿರುವ ಪರ್ವತದ ಹೆಸರು ಹಿಮವಾನ ಪರ್ವತವಿದೆ. ಅದರ ಮೇಲೆ ಉತ್ತರದ ಕಡೆಗೆ ಕ್ಷೇತ್ರವನ್ನು ಬಿಟ್ಟು ಯಾವ ಎರಡನೆಯ ಪರ್ವತವಿದೆ ಅದರ ಹೆಸರು ಮಹಾಹಿಮವಾನ ಪರ್ವತವಿದೆ. ಮೂರನೆಯದು ನಿಷಧ ಪರ್ವತವಿದೆ. ಇನ್ನು ಇದರಲ್ಲಿ ಇನ್ನೊಂದು ಸ್ಪಷ್ಟವಾಗಿ ತಿಳಿದು ಬರುವ ಮಾತೆಂದರೆ ಈ ಚಾರ್ಟದಲ್ಲಿ ಎಲ್ಲ ಪರ್ವತಗಳು ಸಮಾನವಾಗಿಲ್ಲ. ಕೆಲವು ಚಿಕ್ಕವಿದ್ದರೆ ಕೆಲವು ದೊಡ್ಡವಿವೆ, ಅವುಗಳ ಅಗಲರೂಪ ವಿಸ್ತಾರವು ಕೂಡ ಹೀನಾಧಿಕವಿದೆ.

ಒಂದು ಲಕ್ಷ ಯೋಜನ ವ್ಯಾಸವುಳ್ಳ ಜಂಬೂದ್ವೀಪದ ದಕ್ಷಿಣೋತ್ತರ ವ್ಯಾಸದಲ್ಲಿ ನಾವು ಒಂದು ನೂರಾ ತೊಂಭತ್ತು ಭಾಗ ಮಾಡಿದರೆ ಅದರಲ್ಲಿ ಒಂದು ಭಾಗ ಪ್ರಮಾಣದಷ್ಟಂತೂ ಭರತಕ್ಷೇತ್ರದ ಬಾಣವಿದೆ ಇದನ್ನು ಮೊದಲು ತಿಳಿಯೋಣ.

ಜಂಬೂ ದ್ವೀಪವು ದುಂಡಗಿನ ಆಕಾರವಿರುವುದರಿಂದ ಯಾವಾಗ ನಾವು ಅದನ್ನು ಅಡ್ಡಲಾಗಿ ವಿಭಾಜಿಸುತ್ತೇವೆ ಆಗ ಎಲ್ಲಕ್ಕಿಂತ ದಕ್ಷಿಣದ ಕಡೆಗೆ ಭರತ ಕ್ಷೇತ್ರವು ಹೀಗೆ ಧನುಷ್ಯಾಕಾರವಾಗಿ ಕಾಣುವುದು. ಧನುಷ್ಯದ ಯಾವ ಪ್ರತ್ಯಂಚು ಇರುತ್ತದೆ ಅದರ ಮಧ್ಯದಲ್ಲಿ ಬಾಣವನ್ನು ಹಿಡಿದು ಅದನ್ನು ಎಳೆದು ಬಿಡುತ್ತಾರೆ ಆ ಪ್ರತ್ಯಂಚವನ್ನು ಇಲ್ಲಿ ಭರತಕ್ಷೇತ್ರದ ಹೆದೆಯೆನ್ನೋಣ. ಮಧ್ಯದಲ್ಲಿ ಈ ಕ್ಷೇತ್ರವು ಅಧಿಕ ಅಗಲವಿದೆ ಮತ್ತು ದುಂಡಗಿನ ಆಕಾರವಿರುವುದರಿಂದ ಎರಡೂ ಕಡೆಗೆ ಅಗಲವು ಕಡಿಮೆಯಾಗುತ್ತ ಹೋಗುತ್ತದೆ. ಎಲ್ಲಿ ಅಗಲಳತೆಯು ಅಧಿಕವಿದೆ ಆ ಮಧ್ಯಭಾಗವನ್ನು ಭರತಕ್ಷೇತ್ರದ ಬಾಣ ಅಥವಾ ವಿಷ್ಕಂಭವೆಂದು ಹೇಳುತ್ತಾರೆ. ಅದುವೇ ಒಂದು ಲಕ್ಷ ಯೋಜನದೊಳಗಿನ ಒಂದು ನೂರಾ ತೊಂಭತ್ತನೆಯ ಒಂದು ಭಾಗ ಪ್ರಮಾಣವಿದೆ. ಇದನ್ನು ನಾವು ಒಂದು ಭಾಗ ಪ್ರಮಾಣವೆಂದು ಹೇಳೋಣ.

ಇದರ ಅಳತೆಯಿಂದ ಎಲ್ಲ ಕ್ಷೇತ್ರಗಳ ಮತ್ತು ಪರ್ವತಗಳ ಅಗಲವು ಮಧ್ಯಭಾಗದಲ್ಲಿ ಎಷ್ಟಿದೆಯೆಂಬುದನ್ನು ನಾವು ನೋಡೋಣ. ಭರತ ಕ್ಷೇತ್ರವನ್ನು ಯಾವಾಗ ಒಂದು ಭಾಗ ಪ್ರಮಾಣವೆಂದು ಹೇಳಲಾಯಿತು ಆಗ ಹಿಮವಾನ ಪರ್ವತದ ಅಗಲವು - ದಕ್ಷಿಣೋತ್ತರ ವಿಸ್ತಾರವು ಎರಡು ಭಾಗ ಪ್ರಮಾಣವಿದೆ. ಇಲ್ಲಿ ಪೂರ್ವ-ಪಶ್ಚಿಮ ವಿಸ್ತಾರದ ಮಾತು ಇಲ್ಲ. ಇಲ್ಲಿ ಒಂದು ಕ್ಷೇತ್ರ, ಒಂದು ಪರ್ವತ, ಒಂದು ಕ್ಷೇತ್ರ, ಒಂದು ಪರ್ವತ; ಪ್ರತಿಯೊಂದು ಒಂದರಿಂದ ಇನ್ನೊಂದು (ಎರಡನೆಯದು) ದ್ವಿಗುಣ ವಿಸ್ತಾರವುಳ್ಳದ್ದಿದೆ. ಹಿಮವಾನ ಪರ್ವತದಿಂದ ದ್ವಿಗುಣ ವಿಸ್ತಾರವುಳ್ಳದ್ದು ಅರ್ಥಾತ್ ನಾಲ್ಕು ಭಾಗ ಪ್ರಮಾಣ ಹೈಮವತ ಕ್ಷೇತ್ರವಿದೆ. ಅದರಿಂದ ದ್ವಿಗುಣ-ಎಂಟು ಭಾಗ ಪ್ರಮಾಣ ಮಹಾಹಿಮವಾನ ಪರ್ವತವಿದೆ. ಅದರಿಂದ ದ್ವಿಗುಣ ಹದಿನಾರು ಭಾಗ ಪ್ರಮಾಣ ಹರಿಕ್ಷೇತ್ರವಿದೆ. ಅದರಿಂದ ದ್ವಿಗುಣ ಮೂವತ್ತೆರಡು ಭಾಗ ಪ್ರಮಾಣ ನಿಷಧ ಪರ್ವತವಿದೆ.

ಉತ್ತರದಲ್ಲಿಯೂ ಹೀಗೆಯೇ ರಚನೆಯಿದೆ. ಐರಾವತ ಕ್ಷೇತ್ರವು ಒಂದು ಭಾಗ ಪ್ರಮಾಣವಿದೆ. ಶಿಖರೀ ಪರ್ವತವು ಎರಡು ಭಾಗ ಪ್ರಮಾಣವಿದೆ, ಹೈರಣ್ಯವತ್ ಕ್ಷೇತ್ರವು ನಾಲ್ಕು ಭಾಗ ಪ್ರಮಾಣವಿದೆ, ರುಕ್ಮಿ ಪರ್ವತವು ಎಂಟು ಭಾಗ ಪ್ರಮಾಣವಿದೆ, ರಮ್ಯಕ ಕ್ಷೇತ್ರವು ಹದಿನಾರು ಭಾಗ ಪ್ರಮಾಣವಿದೆ, ನೀಲ ಪರ್ವತವು ಮೂವತ್ತೆರಡು ಭಾಗ ಪ್ರಮಾಣವಿದೆ. ಇಷ್ಟು ಮೂರು ಪರ್ವತಗಳು ಮತ್ತು ಮೂರು ಕ್ಷೇತ್ರಗಳಂತೂ ಎರಡೂ ಕಡೆಗೆ ಇವೆ. ಮತ್ತು ಮಧ್ಯದಲ್ಲಿ ನಿಷಧ ಪರ್ವತದಿಂದ ನೀಲ ಪರ್ವತದವರೆಗೆ ಅರವತ್ನಾಲ್ಕು ಭಾಗ ಪ್ರಮಾಣ ಕ್ಷೇತ್ರವಿದೆ. ಅದರಲ್ಲಿ ಪೂರ್ವ ಮತ್ತು ಪಶ್ಚಿಮದೊಳಗೆ ವಿದೇಹ ಕ್ಷೇತ್ರಗಳು ಸ್ಥಿತವಿವೆ. ಇವುಗಳನ್ನು ಹೊಂದಿಸಿ ನೋಡಿದಾಗ, ಒಂದು ಕಡೆಗೆ ೧+೨+೪+೮+೧೬+೩೨ = ೬೩ ಭಾಗಗಳಾದವು, ಅದೇ ರೀತಿ ಇನ್ನೊಂದು ಕಡೆಗೆಯೂ ೬೩ ಭಾಗಗಳಾದವು ಹಾಗೂ ಮಧ್ಯದಲ್ಲಿ ೬೪ ಭಾಗವಾಯಿತು. ಎಲ್ಲವನ್ನು ಕೂಡಿಸಿದಾಗ ೬೩+೬೩+೬೪ = ೧೯೦ ಭಾಗವಾಯಿತು. ಇದರೊಳಗಿಂದ ಒಂದು ಭಾಗವು ಭರತಕ್ಷೇತ್ರದ ಅಗಲಳತೆ (ಮಧ್ಯದಲ್ಲಿ)ಯಾಗುತ್ತದೆ. ಇದನ್ನು ಬಾಣ ಅಥವಾ ಉತ್ಸೇಧವೆಂದು ಹೇಳುತ್ತಾರೆ.

ನಾವು ೧೦೦೦೦೦ ಯೋಜನದಲ್ಲಿ ೧೯೦ ಭಾಗ ಮಾಡಿದ್ದೆವು, ಅದರೊಳಗಿಂದ ಒಂದು ಭಾಗದ ಪ್ರಮಾಣವನ್ನು ತಗೆಯುವ ಸಲುವಾಗಿ ೧೦೦೦೦೦ ವನ್ನು ೧೯೦ ರಿಂದ ಭಾಗಿಸಿದಾಗ $\frac{೧೦೦೦೦೦}{೧೯೦}$ = $\frac{೧೦೦೦೦}{೧೯}$ = ೫೨೬ $\frac{೬}{೧೯}$ ಅರ್ಥಾತ್ ಐದುನೂರಾ ಇಪ್ಪತ್ತಾರು ಮತ್ತು ಆರು ಹತ್ತೊಂಭತ್ತಾಂಶ ಯೋಜನ ಈ ಭರತ ಕ್ಷೇತ್ರದ ಬಾಣದ್ದು ಪ್ರಮಾಣವಿದೆ. ಭರತಕ್ಷೇತ್ರದ ಧನುಷ್ಯದಂಥ ಆಕಾರವನ್ನು ನಾವು ನೋಡಿದೆವು ಅಲ್ಲವೇನು ? ಈಗ ಇನ್ನೂ ಹೆದೆಯ ಪ್ರಮಾಣವನ್ನು ತಿಳಿದುಕೊಂಡಿಲ್ಲ.

ನಮ್ಮ ಐದನೇ ನಂಬರಿನ ಚಾರ್ಟದಲ್ಲಿ ಜಂಬೂದ್ವೀಪದ ವೃತ್ತದ್ದು ಮೇಲಿನಿಂದ ಕೆಳಗಿನವರೆಗಿನ ಯಾವವ್ಯಾಸವಿದೆ, ಆ ವ್ಯಾಸದ ೧೯೦ ಭಾಗವನ್ನು ನಾವು ತಿಳಿದುಕೊಳ್ಳುತ್ತಿದ್ದೇವೆ. ಆ ರೇಖೆಯ ಮೇಲೆ ಭರತಕ್ಷೇತ್ರವು ೫೨೬ $\frac{೬}{೧೯}$ ಯೋಜನ ಪ್ರಮಾಣವಿದೆ. ಅದರಿಂದ ದ್ವಿಗುಣ ಹಿಮವಾನ ಪರ್ವತವಿದೆ. ಅದರಿಂದ ದ್ವಿಗುಣ-ದ್ವಿಗುಣ ವಿಸ್ತಾರವುಳ್ಳವು ಮುಂದಿನ ಕ್ಷೇತ್ರ ಹಾಗೂ ಪರ್ವತಗಳಿವೆ. ಎಷ್ಟು ಭರತಕ್ಷೇತ್ರದ ಬಾಣವಿದೆ-ವಿಸ್ತಾರವಿದೆ ಅಷ್ಟೇ ಐರಾವತ ಕ್ಷೇತ್ರದ್ದು ಇದೆ. ಎಷ್ಟು ಹಿಮವಾನ ಪರ್ವತದ ವಿಸ್ತಾರವಿದೆ ಅಷ್ಟೇ ಶಿಖರೀ ಪರ್ವತದ್ದು ಇದೆ. ಎಷ್ಟು ಹೈಮವತ ಕ್ಷೇತ್ರವಿದೆ, ಅಷ್ಟೇ ಹೈರಣ್ಯವತ ಕ್ಷೇತ್ರವಿದೆ, ಎಷ್ಟು ಮಹಾಹಿಮವಾನ

ಪರ್ವತವಿದೆ ಅಷ್ಟೇ ರುಕ್ಮಿ ಪರ್ವತವಿದೆ. ಇವೆರಡು ಪರ್ವತಗಳ ಮಧ್ಯದಲ್ಲಿ ಪರ್ವತಗಳ ಎರಡರಷ್ಟು ಒಂದು ಕ್ಷೇತ್ರವಿದೆ ಅದರಲ್ಲಿ ವಿದೇಹ ಕ್ಷೇತ್ರ ಹಾಗೂ ಅನ್ಯ ರಚನೆಗಳಿವೆ.

ನಾವು ಅದನ್ನು ಈ ಕೆಳಗಿನ ಚಾರ್ಟದ ಆಧಾರದಿಂದ ತಿಳಿಯೋಣ.

ಪರ್ವತ	ಹಿಮವಾನ		ಮಹಾಹಿಮವಾನ		ನಿಷಧ		ನೀಲ		ರುಕ್ಮೀ		ಶಿಖರೀ	
ಭಾಗಪ್ರಮಾಣ	೧	೨	೪	೮	೧೬	೩೨	೬೪	೩೨	೧೬	೮	೪	೨	೧
ಕ್ಷೇತ್ರ	ಭರತ		ಹೈಮವತ		ಹರಿ		ವಿದೇಹ		ರಮ್ಯಕ		ಹೈರಣ್ಯವತ		ಐರಾವತ

ದಕ್ಷಿಣೋತ್ತರದ ವ್ಯಾಸದ ವಿಭಾಜನೆಯನ್ನು ನಾವು ಈ ರೀತಿಯಾಗಿ ನೋಡಿದೆವು. ಒಂದು ವೇಳೆ ಪೂರ್ವ ಪಶ್ಚಿಮ ವ್ಯಾಸದ ಕುರಿತಾಗಿ ವಿಚಾರ ಮಾಡಿದರೆ ಮಧ್ಯದಲ್ಲಿ ೧೦೦೦೦ ಯೋಜನದ್ದು ಸುದರ್ಶನ ಮೇರು ಪರ್ವತವಿದೆ, ಅದರ ಎರಡೂ ಕಡೆಗೆ ಭದ್ರಶಾಲ ವನಗಳು ೨೨೦೦೦ ಯೋಜನವಿವೆ ಹಾಗೂ ಅದರ ಎರಡೂ ಕಡೆಗೆ ವಿದೇಹ ಕ್ಷೇತ್ರದ ವಿಸ್ತಾರವು ೨೩೦೦೦ ಯೋಜನದ್ದಿದೆ. ಈ ಪ್ರಕಾರ ೧೦೦೦೦ + ೨೨೦೦೦ + ೨೨೦೦೦ + ೨೩೦೦೦ + ೨೩೦೦೦ ಯೋಜನ ಸೇರಿದರೆ ೧೦೦೦೦೦ ಯೋಜನ ವ್ಯಾಸವಾಗುತ್ತದೆ.

ಇಲ್ಲಿಂದ ಸತ್ತು ವಿದೇಹ ಕ್ಷೇತ್ರದಲ್ಲಿ ಜನ್ಮ ಧಾರಣ ಮಾಡಬೇಕೆಂದು ಬಹಳಷ್ಟು ಜನರು ಬಯಸುತ್ತಾರೆ. ಹಾಗಾದರೆ ವಿದೇಹವು ಎಲ್ಲಿದೆ ಎಂಬುದನ್ನು ಹಾಗೂ ಇತರ ಅನೇಕ ಮಾತುಗಳನ್ನು ತಿಳಿದುಕೊಳ್ಳಬೇಕಾಗುವುದು. ಆದರೆ ಒಂದು ಮಾತನ್ನು ಸರಿಯಾಗಿ ತಿಳಿಯಬೇಕಾಗುವುದು. ಅದೇನೆಂದರೆ ಇಲ್ಲಿಂದ – ಈ ಕರ್ಮಭೂಮಿಯಿಂದ ಯಾರು ವಿದೇಹ ಕ್ಷೇತ್ರದಲ್ಲಿ ಜನಿಸ ಬಯಸುತ್ತಾರೆ ಅವರಿಗೆ ಮಿಥ್ಯಾತ್ವ ಅವಸ್ಥೆಯಲ್ಲಿ ಅಲ್ಲಿಗೆ ಹೋಗಬೇಕಾಗುವುದು, ಏಕೆಂದರೆ ಸಮ್ಯಕ್ತ್ವವಾದ ಮೇಲೆಯಂತೂ ದೇವಾಯುವಿನ ಬಂಧ ಮಾಡಿಕೊಂಡು ಜೀವನು ಸ್ವರ್ಗದಲ್ಲಿ ಹೋಗುತ್ತಾನೆ. ಇನ್ನು ಮೊದಲು ಮನುಷ್ಯಾಯುವನ್ನು ಕಟ್ಟಿಕೊಂಡು ನಂತರ ಸಮ್ಯಕ್ತ್ವ ಪ್ರಾಪ್ತ ಮಾಡಿಕೊಂಡರೆ ಹೋಗಬಹುದಾಗಿದೆ ಅಲ್ಲವೇನು ? – ಎಂದು ಕೇಳಿದರೆ, ಹಾಗೆಯೂ ಇಲ್ಲ; ಅಂಥ ಜೀವರುಗಳು ಭೋಗಭೂಮಿಯ ಮನುಷ್ಯರಾಗುತ್ತಾರೆ ಮತ್ತು ಅದು ಕೂಡ ಕ್ಷಾಯಿಕ ಸಮ್ಯಕ್ತ್ವವಾದರೆ ಮಾತ್ರ, ಇಲ್ಲದಿದ್ದರೆ ಅಲ್ಲಿಯೂ ಕೂಡ ಮಿಥ್ಯಾತ್ವದ ಜೊತಗೆ ಹೋಗಬೇಕಾಗುವುದು.

ವಿದೇಹ ಕ್ಷೇತ್ರದಲ್ಲಿ ಹೋಗಲು ಬಯಸುತ್ತಿರುವುದು ಏತಕ್ಕಾಗಿ ? ಮೋಕ್ಷಮಾರ್ಗವನ್ನು ಪ್ರಕಟಪಡಿಸಿಕೊಳ್ಳುವ ಸಲುವಾಗಿ ಪರ್ಯಾಪ್ತ ಉಪದೇಶ ಹಾಗೂ ಸಮಸ್ತ ಸಾಮಗ್ರಿಗಳು ಇಲ್ಲಿ ಉಪಲಬ್ಧವಿವೆ. ಎಲ್ಲಿಯಾದರೂ ಜನಿಸಿದರೆ ನನ್ನ ಕಲ್ಯಾಣವಾಗಬಹುದಾಗಿದೆಯೆಂಬ ಮನ್ನಣೆಯಂತೂ ನಿಮಿತ್ತಾಧೀನತೆಯ ಮನ್ನಣೆಯಿದೆ. ಒಂದು ಭವದ ವಾಂಛೆಯಲ್ಲಿ ಅನಂತ ಭವಗಳ ವಾಂಛೆ–ಇಚ್ಛೆಯ ಅಭಿಪ್ರಾಯವು ಬಿದ್ದುಕೊಂಡಿದೆ. ಮನುಷ್ಯ ಭವವನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ನಮಗೆ ಏನನ್ನೂ ಮಾಡಬೇಕಾಗಿಲ್ಲ. ನಾವು ಮನುಷ್ಯ ಪರ್ಯಾಯದಲ್ಲಿ ಇದ್ದೇವೆ. ಇಲ್ಲಿ ನಮ್ಮನ್ನು ನಾವು ಗುರುತಿಸುವ, ನಮ್ಮನ್ನು ನಾವು ನಂಬುವ ಎಂದರೆ ಸಮ್ಯಗ್ದರ್ಶನದ ಕಾರ್ಯವನ್ನು ಶೀಘ್ರವಾಗಿ ಮಾಡುವುದಿದೆ.

ಈಗಷ್ಟೇ ಈ ವ್ಯಾಖ್ಯಾನಕ್ಕಿಂತ ಮೊದಲು ಎರಡು ನಿಮಿಷವಿರುವಾಗ ಓರ್ವ ಸಹೋದರರು 'ಇದೆಲ್ಲ - ತ್ರಿಲೋಕ ರಚನೆಯನ್ನು ತಿಳಿದುಕೊಳ್ಳುವ ಅವಶ್ಯಕತೆಯಾದರೂ ಏನಿದೆಯೆಂಬುದನ್ನು ತಾವು ಮೊದಲು ತಿಳಿಸಿಕೊಡಬೇಕು' ಎಂದು ಸೂಚಿಸಿದರು.ಇದು ಹನ್ನೆರಡನೆಯ ವ್ಯಾಖ್ಯಾನವಿದೆ. ಮತ್ತು ಆ ಮಾತನ್ನಂತೂ ಮೊದಲನೆಯ ವ್ಯಾಖ್ಯಾನದಲ್ಲಿಯೇ ಸುಮಾರು ಅರ್ಧಗಂಟೆಯವರೆಗೆ ಒಳ್ಳೆಯ ರೀತಿಯಿಂದ ತಿಳಿಸಿಕೊಡಲಾಗಿತ್ತು. ಒಂದಂತೂ ಆ ಸಹೋದರರು ಮೊದಲಿನಿಂದ ಬಂದಿಲ್ಲ ಇನ್ನು ಅದೇ ಮಾತನ್ನು ಪುನಃ ತಿಳಿಸಿಕೊಡಬೇಕೆಂದರೆ ಉಳಿದ ಸಾಧರ್ಮೀ ಬಂಧು ವರ್ಗದ ಸಮಯವು ಹಾಳಾಗುವುದು ಅಲ್ಲದೇ ನಮ್ಮ ನಿಯೋಜಿತ ಸಮಯದಲ್ಲಿ ನಿರ್ದಿಷ್ಟ ವಿಷಯಗಳ ಚರ್ಚೆಯು ಅಪೂರ್ಣವಾಗಿ ಉಳಿಯಬಹುದಾಗಿದೆ. ನಮ್ಮ ಮುನಿರಾಜರಿಗೆ ಆತ್ಮನಲ್ಲಿ ಸ್ಥಿರವಾಗಿ ಉಳಿಯಬೇಕಾಗುವುದೆಂಬ ಮಾತಿನ ಪರಿಚಯವಿರಲಿಲ್ಲವೇನು ? ಅವರು ಇಷ್ಟೊಂದು ಗ್ರಂಥಗಳ ರಚನೆಯನ್ನು ಏತಕ್ಕಾಗಿ ಮಾಡಿದ್ದಾರೆ ? ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಷಟ್ಖಂಡಾಗಮದ ಜ್ಞಾತಾರರಿದ್ದರು ಅವರು ಗೊಮ್ಮಟಸಾರ, ಜೀವಕಾಂಡ, ಕರ್ಮಕಾಂಡ, ಲಬ್ಧಿಸಾರ, ಕ್ಷಪಣಾಸಾರ, ತ್ರಿಲೋಕಸಾರ, ದ್ರವ್ಯಸಂಗ್ರಹ ಮೊದಲಾದ ಮಹಾನಗ್ರಂಥಗಳ ರಚನೆ ಮಾಡಿದ್ದಾರೆ. ಹಾಗಾದರೆ ಅವರು ಸಮಯ ವ್ಯತೀತ ಮಾಡುವ ಸಲುವಾಗಿ ಇವುಗಳನ್ನು ಬರೆದಿರಬಹುದಾಗಿದೆಯೇನು ? ಪಂ. ಟೋಡರಮಲ್ಲರು ಕೂಡ ಕರಣಾನುಯೋಗವನ್ನು ಓದುವುದರಲ್ಲಿ ಯಾವ ಲಾಭವಿದೆ ಮೋಕ್ಷಮಾರ್ಗದಲ್ಲಿ ಮುಂದುವರೆಯಬೇಕೆಂಬ ಯೋಚನೆ ಮಾಡಿರಲಿಲ್ಲವೇನು? - ಹಾಗಿದ್ದರೆ ಅವರು ಮೋಕ್ಷಮಾರ್ಗ ಪ್ರಕಾಶಕವನ್ನು ಬರೆಯುವ ಮೊದಲು ಉಪರೋಕ್ತ ಗ್ರಂಥಗಳ ಟೀಕೆಗಳನ್ನು ಏತಕ್ಕಾಗಿ ಬರೆದರು ? ಗಣಿತದ ಸಂದೃಷ್ಟಿ ಅಧಿಕಾರವನ್ನು ಏತಕ್ಕಾಗಿ ಬರೆದರು ? ಜನಸಾಮಾನ್ಯರೂ ಸುಲಭವಾಗಿ ತಿಳಿದುಕೊಳ್ಳುವಂತೆ ಸರಳಗೊಳಿಸಿ ಏತಕ್ಕಾಗಿ ತಿಳಿಸಿಕೊಟ್ಟರು ?

ನನಗೆ ಮೋಕ್ಷಮಾರ್ಗವನ್ನು ಪ್ರಕಟ ಮಾಡಿಕೊಳ್ಳುವುದಿದೆಯೆಂದಮೇಲೆ ನಾನು ವ್ಯಾಪಾರ-ಉದ್ಯೋಗವನ್ನು ಏಕೆ ಮಾಡಲಿ ? ವರ್ತಮಾನ ಪತ್ರಿಕೆಯನ್ನು ಏತಕ್ಕಾಗಿ ಓದಲಿ ? ದೂರದರ್ಶನವನ್ನೇಕೆ ನೋಡಲಿ ? ಎನ್ನುವ ಪ್ರಶ್ನೆಗಳಂತೂ ಯಾರ ಮನಸ್ಸಿನಲ್ಲಿಯೂ ಉತ್ಪನ್ನವಾಗುವುದಿಲ್ಲ. ಯಾವಾಗ ಕರಣಾನುಯೋಗದ ಮಾತು ಬರುತ್ತದೆ ಆಗ ಮಾತ್ರ ಈ ಪ್ರಶ್ನೆಯು ಉತ್ಪನ್ನವಾಗುತ್ತದೆ. ಅಂಥ ಜೀವರುಗಳ ಮನ್ನಣೆಯ ಖಂಡನೆಯನ್ನು ಪಂ. ಟೋಡರಮಲ್ಲರು ಸಮ್ಯಗ್ಜ್ಞಾನ ಚಂದ್ರಿಕೆಯ ಪೀಠಿಕೆಯಲ್ಲಿ ಹಾಗೂ ಇದೇ ತ್ರಿಲೋಕಸಾರದ ಭೂಮಿಕೆಯಲ್ಲಿಯೂ ಕೂಡ ತುಂಬ ಒಳ್ಳೆಯ ಪದ್ಧತಿಯಿಂದ ಮಾಡಿದ್ದಾರೆ. ತಾವು ಅದನ್ನು ಅವಶ್ಯವಾಗಿ ಓದಿ ನೋಡಬೇಕು.

ನಮ್ಮದು ಜಂಬೂದ್ವೀಪದ ವಿಷಯವು ನಡೆದಿತ್ತು. ಅದರಲ್ಲಿ ಪೂರ್ವದಿಂದ ಪಶ್ಚಿಮದವರೆಗೆ ಹರಡಿಕೊಂಡಿರುವ ಈ ಆರು ಕುಲಾಚಲ ಪರ್ವತಗಳನ್ನು ನೋಡಿದೆವು - ಮೇರುವಿನ ದಕ್ಷಿಣದಲ್ಲಿ ಮೂರು ಮತ್ತು ಉತ್ತರದಲ್ಲಿ ಮೂರು, ಇವುಗಳ ಕಾರಣದಿಂದ ಜಂಬೂದ್ವೀಪದಲ್ಲಿ ಏಳು ಕ್ಷೇತ್ರಗಳಾಗಿವೆ. ಕ್ಷೇತ್ರಗಳನ್ನು ವರ್ಷವೆಂದು ಕೂಡ ಹೇಳುತ್ತಾರೆ ಮತ್ತು ಯಾವ ಪರ್ವತಗಳ ಕಾರಣವಾಗಿ ಈ ವರ್ಷ ಎಂದರೆ ಕ್ಷೇತ್ರಗಳು ವಿಭಾಜಿಸಲ್ಪಟ್ಟಿವೆ ಆ ಕುಲಾಚಲ ಪರ್ವತಗಳನ್ನು ವರ್ಷಧರ ಪರ್ವತಗಳೆಂದು ಕೂಡ ಹೇಳುತ್ತಾರೆ.

ದಕ್ಷಿಣದಿಂದ ಉತ್ತರದವರೆಗೆ ನೋಡುತ್ತ ಹೋದರೆ ಮೊದಲನೆಯದು ಭರತ ಕ್ಷೇತ್ರವಿದೆ ಮತ್ತು ಏಳನೆಯದು ಐರಾವತ ಕ್ಷೇತ್ರವಿದೆ ಅಲ್ಲಿ (ಆರ್ಯ ಖಂಡಗಳಲ್ಲಿ) ಅವಸರ್ಪಿಣಿ ಮತ್ತು ಉತ್ಸರ್ಪಿಣಿರೂಪದ

ಆರು-ಆರು ಕಾಲಗಳ ಚಕ್ರವು ನಡೆಯುತ್ತಿರುತ್ತದೆ; ಎರಡನೆಯದಾದ ಹೈಮವತ ಮತ್ತು ಆರನೆಯ ಹೈರಣ್ಯವತ ಕ್ಷೇತ್ರದಲ್ಲಿ ಯಾವಾಗಲೂ ಜಘನ್ಯ ಭೋಗಭೂಮಿಯು ಕಂಡು ಬರುತ್ತದೆ. ಮೂರನೆಯದಾದ ಹರಿಕ್ಷೇತ್ರ ಮತ್ತು ಐದನೆಯ ರಮ್ಯಕ ಕ್ಷೇತ್ರದಲ್ಲಿ ಯಾವಾಗಲೂ ಮಧ್ಯಮ ಭೋಗಭೂಮಿಯು ಕಂಡು ಬರುತ್ತದೆ. ನಾಲ್ಕನೆಯ ಕ್ಷೇತ್ರದಲ್ಲಿ ಮಧ್ಯದಲ್ಲಿ ಸುಮೇರು ಪರ್ವತವಿದೆ, ಅದರ ನಾಲ್ಕೂ ಕಡೆಗೆ ಭದ್ರಶಾಲ ವನವಿದೆ, ವನದ ದಕ್ಷಿಣದಲ್ಲಿ ದೇವಕುರು ಮತ್ತು ಉತ್ತರದ ಕಡೆಗಿನ ವನದ ಉತ್ತರದಲ್ಲಿ ಉತ್ತರ ಕುರವೆಂಬ ಹೆಸರಿನ ಯಾವ ಕ್ಷೇತ್ರವಿದೆ ಅಲ್ಲಿ ಯಾವಾಗಲೂ ಉತ್ತಮ ಭೋಗಭೂಮಿಯು ಕಂಡು ಬರುತ್ತದೆ. ಅದೇ ನಾಲ್ಕನೆಯ ಕ್ಷೇತ್ರದಲ್ಲಿ ಭದ್ರಶಾಲ ವನದ ಪೂರ್ವದಲ್ಲಿ ಹಾಗೂ ಪಶ್ಚಿಮದಲ್ಲಿ ವಿದೇಹ ಕ್ಷೇತ್ರವಿದೆ. ವಿದೇಹ ಕ್ಷೇತ್ರದಲ್ಲಿ ನದಿಗಳು ಮತ್ತು ಪರ್ವತಗಳ ಕಾರಣದಿಂದ ಬೇರೆ-ಬೇರೆ ಕ್ಷೇತ್ರಗಳುಂಟಾಗಿವೆ. ಈಗ ಚಾರ್ಟದಲ್ಲಿ ನೋಡಬೇಕು - ಪೂರ್ವ ವಿದೇಹದ ಉತ್ತರದಲ್ಲಿ ೧ ರಿಂದ ೮, ದಕ್ಷಿಣದಲ್ಲಿ ೯ ರಿಂದ ೧೬, ಪಶ್ಚಿಮ ವಿದೇಹದ ದಕ್ಷಿಣದಲ್ಲಿ ೧೭ ರಿಂದ ೨೪ ಮತ್ತು ಉತ್ತರದಲ್ಲಿ ೨೫ ರಿಂದ ೩೨ ಈ ರೀತಿ ಒಂದು ಮೇರುವಿಗೆ ಸಂಬಂಧಿಸಿದ ಮೂವತ್ತೆರಡು ವಿದೇಹ ಕ್ಷೇತ್ರಗಳಿರುತ್ತವೆ.

ಇಲ್ಲಿ ಭರತ-ಐರಾವತ ಕ್ಷೇತ್ರದಲ್ಲಿ ಅವಸರ್ಪಿಣಿಯ ಮೊದಲನೆಯ ಕಾಲವನ್ನು ನಾವು ಮೊದಲನೆಯ ಕಾಲವೆಂದು ಹೇಳುತ್ತೇವೆ. ಹಾಗಂತೂ ಅದರ ಹೆಸರು ಸುಷಮಾ ಸುಷಮಾ ಇದೆ, ಎರಡನೆಯ ಕಾಲವು ಸುಷಮಾ ಇದೆ, ಮೂರನೆಯದು ಸುಷಮಾ ದುಷಮಾ, ನಾಲ್ಕನೆಯದು ದುಷಮಾ ಸುಷಮಾ, ಐದನೆಯದು ದುಷಮಾ ಮತ್ತು ಆರನೆಯದು ದುಷಮಾ ದುಷಮಾ ಇದೆ. ಸುಷಮಾವನ್ನು ಸುಖಮಾ ಎಂದು ಮತ್ತು ದುಷಮಾವನ್ನು ದುಖಮಾ ಎಂದು ಕೂಡ ಹೇಳುತ್ತಾರೆ. ಭರತ ಮತ್ತು ಐರಾವತ ಕ್ಷೇತ್ರದಲ್ಲಿ ಕೇವಲ ಆರ್ಯ ಖಂಡದಲ್ಲಿಯೇ ಇವು ಆರು ಕಾಲಗಳ ಪರಿವರ್ತನೆಯಾಗುತ್ತದೆ. ಆರನೆಯ ಕಾಲದ ನಂತರ ವಿರುದ್ಧ ಕ್ರಮದಿಂದ ಉತ್ಸರ್ಪಿಣಿ ಕಾಲವಾಗುತ್ತದೆ.

ಮೊದಲನೆಯ ಕಾಲದಲ್ಲಿ ಇಲ್ಲಿ ಭರತ ಕ್ಷೇತ್ರದಲ್ಲಿ ಉತ್ತಮ ಭೋಗಭೂಮಿ ಇರುತ್ತದೆ. ಮತ್ತು ಕುರುಕ್ಷೇತ್ರದಲ್ಲಿ ಯಾವಾಗಲೂ ಉತ್ತಮ ಭೋಗಭೂಮಿ ಇರುತ್ತದೆ. ಎರಡನೆಯ ಕಾಲದಲ್ಲಿ ಇಲ್ಲಿ ಮಧ್ಯಮ ಭೋಗಭೂಮಿ ಇರುವುದನ್ನು ನಾವು ನೋಡಿದ್ದೆವು ಹಾಗೂ ಹರಿಕ್ಷೇತ್ರ ಮತ್ತು ರಮ್ಯಕ ಕ್ಷೇತ್ರದಲ್ಲಿ ಯಾವಾಗಲೂ ಮಧ್ಯಮ ಭೋಗಭೂಮಿ ಇರುತ್ತದೆ. ಮೂರನೆಯ ಕಾಲದಲ್ಲಿ ಇಲ್ಲಿ ಭರತ ಕ್ಷೇತ್ರದಲ್ಲಿ ಜಘನ್ಯ ಭೋಗಭೂಮಿ ಇರುತ್ತದೆ ಹಾಗೂ ಹೈಮವತ ಕ್ಷೇತ್ರ ಮತ್ತು ಹೈರಣ್ಯವತ ಕ್ಷೇತ್ರದಲ್ಲಿ ಯಾವಾಗಲೂ ಜಘನ್ಯ ಭೋಗಭೂಮಿ ಇರುತ್ತದೆ. ಭರತ-ಐರಾವತ ಕ್ಷೇತ್ರದಲ್ಲಿ ನಾಲ್ಕನೆಯ ಕಾಲದಿಂದ ಕರ್ಮಭೂಮಿಯು ಆರಂಭವಾಗುತ್ತದೆ ಆದರೆ ವಿದೇಹ ಕ್ಷೇತ್ರದಲ್ಲಿ ಯಾವಾಗಲೂ ನಾಲ್ಕನೆಯ ಕಾಲ ಮತ್ತು ಕರ್ಮಭೂಮಿ ಇರುತ್ತದೆ. ಭರತ ಕ್ಷೇತ್ರದಿಂದ ನಾಲ್ಕನೆಯ ಕಾಲದಲ್ಲಿ ಮತ್ತು ವಿದೇಹ ಕ್ಷೇತ್ರದಿಂದ ಯಾವಾಗಲೂ ಜೀವರುಗಳು ಮೋಕ್ಷಕ್ಕೆ ಹೋಗುತ್ತಾರೆ, ಇಲ್ಲಿ ತೀರ್ಥಂಕರರಾಗುತ್ತಾರೆ. ಭೋಗಭೂಮಿಯ ಜೀವರುಗಳಂತೂ ಸತ್ತು ದೇವಗತಿಯಲ್ಲಿಯೇ ಹೋಗುತ್ತಾರೆ - ಎಲ್ಲ ಮಿಥ್ಯಾದೃಷ್ಟಿಗಳು ಸತ್ತು ಭವನತ್ರಿಕದಲ್ಲಿ ಜನಿಸುತ್ತಾರೆ ಮತ್ತು ಸಮ್ಯಗ್ದೃಷ್ಟಿಗಳು ಸತ್ತು ಸೌಧರ್ಮ-ಈಶಾನದಲ್ಲಿ ಹುಟ್ಟುತ್ತಾರೆ. ಆದರೆ ನಾಲ್ಕನೆಯ ಕಾಲದ ಜೀವರುಗಳು ಸತ್ತು ನಾಲ್ಕೂ ಗತಿಗಳಲ್ಲಿ ಜನ್ಮ ಪಡೆಯಬಹುದಾಗಿದೆ ಅಥವಾ ಪುರುಷಾರ್ಥ ಮಾಡಿ ಮೋಕ್ಷಕ್ಕೆ ಕೂಡ ಹೋಗುವ ಸಾಧ್ಯತೆಯಿದೆ.

ಚಾರ್ಟದೊಳಗೆ ಇಲ್ಲಿ ಮಧ್ಯದಲ್ಲಿ ೧೦೦೦೦ ಯೋಜನ ವ್ಯಾಸವುಳ್ಳ ಮೇರು ಪರ್ವತದ ವಿಸ್ತಾರವು ಭೂಮಿಯ ಮೇಲೆ ಇದೆ ಎಂದರೆ ಮೂಲದಲ್ಲಿ ಅದು ಇಷ್ಟು ಅಗಲವಿದೆ. ಅದರ ನಾಲ್ಕೂ ನಿಟ್ಟಿಗೆ ಆನೆಯ ದಂತದ ಆಕಾರವುಳ್ಳ ಇವು ನಾಲ್ಕು ಗಜದಂತ ಪರ್ವತಗಳಿವೆ. ಈ ಪರ್ವತಗಳ ಮೇಲೆ ಅಕೃತ್ರಿಮ ಚೈತ್ಯಾಲಯಗಳಿವೆ. ನಾವು ಯಾವಾಗ ಇಂದ್ರಧ್ವಜ ವಿಧಾನ (ಆರಾಧನೆ) ಮಾಡುತ್ತೇವೆ ಆಗ ಈ ಎಲ್ಲ ಚೈತ್ಯಾಲಯಗಳ ಹೆಸರು ಹೇಳಿ ಅರ್ಘ್ಯ ಸಮರ್ಪಣೆ ಮಾಡುತ್ತ ಬಂದಿರುತ್ತೇವೆ. ಆದರೆ ಅದರ ಕಡೆಗೆ ನಮ್ಮ ಗಮನವಾದರೂ ಎಲ್ಲಿರುತ್ತದೆ? ನಮ್ಮ ಗಮನವಂತೂ ಯಾವ ಅಕ್ಷತೆಯನ್ನು ತಗೆದುಕೊಂಡಿದ್ದೇವೆ ? ಬಾದಾಮಿಯನ್ನು ತಗೆದುಕೊಂಡಿದ್ದೇವೆಯೋ ಅಥವಾ ಕೊಬ್ಬರಿಯ ಗಿಟಕವನ್ನು ತಗೆದುಕೊಂಡಿದ್ದೇವೆ ಎಂಬುದರ ಕಡೆಗೇ ಇರುತ್ತದೆ; ಆದರೆ ನಾವು ಯಾರಿಗೆ ಅರ್ಘ್ಯ ಸಮರ್ಪಿಸುತ್ತಿದ್ದೇವೆ ಮತ್ತು ಅವರು ಎಲ್ಲಿ ವಿದ್ಯಮಾನರಿದ್ದಾರೆ ಎಂಬುದರ ಕಡೆಗೆ ನಮ್ಮ ಲಕ್ಷವೇ ಇರುವುದಿಲ್ಲ - ಅತ್ತ ಗಮನ ಹರಿಸಬೇಕಾದ ಅವಶ್ಯಕತೆಯೆನಿಸುವುದಿಲ್ಲ !

ಆ ಗಜದಂತ ಪರ್ವತಗಳು ಈ ಗೋಡೆಯಂಥ ರೇಖೆಯವರೆಗೆ (ಚಾರ್ಟದಲ್ಲಿ ನೋಡುವುದು) ಹರಡಿಕೊಂಡಿವೆ. ಇದನ್ನು ಭದ್ರಶಾಲ ವನವೇದಿಯೆಂದು ಹೇಳುತ್ತಾರೆ. ಮೇರು ಪರ್ವತದ ನಾಲ್ಕೂ ಕಡೆಗೆ ಭದ್ರಶಾಲ ವನವಿವೆ ಅದನ್ನು ಬಿಟ್ಟು ಗಜದಂತಗಳ ದಕ್ಷಿಣದ ಕಡೆಗೆ ದೇವಕುರು ಮತ್ತು ಉತ್ತರದ ಕಡೆಗೆ ಉತ್ತರ ಕುರುವೆಂಬ ಹೆಸರಿನ ಉತ್ತಮ ಭೋಗಭೂಮಿಯ ಕ್ಷೇತ್ರಗಳಿವೆ.

ಇವುಗಳಲ್ಲಿ ಈ ಯಾವ ದುಂಡಗಿನ ಆಕಾರ ತೋರಿಸಲಾಗಿದೆ - ಉತ್ತರದಲ್ಲಿ ಇರುವುದು ಅದು ಜಂಬೂ ವೃಕ್ಷವಿದೆ ಮತ್ತು ದಕ್ಷಿಣದಲ್ಲಿ ಶಾಲ್ಮಲೀ ವೃಕ್ಷವಿದೆ. ವೃಕ್ಷವೆಂದು ಹೇಳಿದರೆ ಇವು ವನಸ್ಪತಿ ಕಾಯಿಕವಲ್ಲ ಆದರೆ ಇವಂತೂ ರತ್ನಮಯವಾದ ವೃಕ್ಷಾಕಾರ ರಚನೆಯಿವೆ ಮತ್ತು ಕೇವಲ ಒಂದು ವೃಕ್ಷವಿಲ್ಲ ಆದರೆ ಇವುಗಳ ಪರಿವಾರವು ತುಂಬ ದೊಡ್ಡದಿರುತ್ತದೆ. ಈ ವೃಕ್ಷಗಳ ಮೇಲೆ ಅನೇಕ ಅಕೃತ್ರಿಮ ಜಿನಪ್ರತಿಮೆಗಳಿರುತ್ತವೆ.

ಮಧ್ಯದಲ್ಲಿ ೧೦೦೦೦ ಯೋಜನದ ಮೇರು ಪರ್ವತವಿದೆ ಅದರಿಂದ ಮುಂದೆ ೨೨೦೦೦ ಯೋಜನ ಹೋದ ಮೇಲೆ ಭದ್ರಶಾಲ ವನವೇದಿಯಿದೆ, ಅಲ್ಲಿಯವರೆಗೆ ಈ ಪೂರ್ವವಿದೇಹ ಕ್ಷೇತ್ರದ ಪೂರ್ವದಲ್ಲಿ ಈ ದೇವಾರಣ್ಯ ವೇದಿಯಿದೆ. ಈ ದೇವಾರಣ್ಯವೇದಿ ಮತ್ತು ಲವಣ ಸಮುದ್ರದ ಮಧ್ಯದಲ್ಲಿ ದೇವಾರಣ್ಯ ವನವಿದೆ. ಹೀಗೆಯೇ ಪಶ್ಚಿಮ ವಿದೇಹದ ಪಶ್ಚಿಮದಲ್ಲಿ ಭೂತಾರಣ್ಯವೇದಿ ಮತ್ತು ಭೂತಾರಣ್ಯವನವಿದೆ. ಕೆಲವು ಗ್ರಂಥಗಳಲ್ಲಿ ಎರಡೂ ಕಡೆಗೆ ದೇವಾರಣ್ಯ ವನವೆಂಬ ಹೆಸರು ಬರುತ್ತದೆ.

ಇಲ್ಲಿ ಜಂಬೂದ್ವೀಪದ ಪರಿಧಿಯ ಮೇಲೆ ಜಂಬೂದ್ವೀಪ ಮತ್ತು ಲವಣಸಮುದ್ರದ ಮಧ್ಯದಲ್ಲಿ ಗೋಡೆ ಅಥವಾ ದಡದಂಥ ರಚನೆಯಿದೆ ಅದನ್ನು ಜಗತಿಯೆಂದು ಹೇಳುತ್ತಾರೆ. ಜಂಬೂದ್ವೀಪದ ನದಿಗಳು ಎಲ್ಲಿ ಲವಣ ಸಮುದ್ರದಲ್ಲಿ ಬಂದು ಸೇರುತ್ತವೆ ಅಲ್ಲಿ ಆ ಜಗತಿಯಲ್ಲಿ ದ್ವಾರ ಹಾಗೂ ತೋರಣಗಳಿರುತ್ತವೆ. ಹಾಗೂ ಪೂರ್ವಾದಿ ನಾಲ್ಕು ದಿಶೆಗಳಲ್ಲಿಯೂ ಜಗತಿಯಲ್ಲಿ ದ್ವಾರ (ಬಾಗಿಲು) ಹಾಗೂ ತೋರಣಗಳಿರುತ್ತವೆ.

ವಿದೇಹ ಕ್ಷೇತ್ರದ ಹಾಗೂ ಭರತ ಕ್ಷೇತ್ರದ ರಚನೆಯನ್ನು ವಿಸ್ತಾರದ ಜತೆಗೆ ನಾವು ನಂತರ ನೋಡೋಣ. ಈಗ ಜಂಬೂದ್ವೀಪದ ಇತರ ಕೆಲವು ವಿಶೇಷತೆಗಳ ಅವಲೋಕನ ಮಾಡೋಣ. ನಾವು ಯಾವ ಆರು ಕುಲಾಚಲ ಪರ್ವತಗಳನ್ನು ನೋಡಿದೆವು ಅವುಗಳ ಪ್ರತಿಯೊಂದರ ಮೇಲೆ ಒಂದೊಂದು ಸರೋವರಗಳು ಕಂಡು ಬರುತ್ತವೆ.

ಅವನ್ನೇ ಹ್ರದ ಅಥವಾ ದ್ರಹವೆಂದೂ ಹೇಳುತ್ತಾರೆ. ಹಿಮವಾನ ಪರ್ವತದ ಮೇಲೆ ಯಾವ ಸರೋವರವಿದೆ ಅದರ ಹೆಸರು ಪದ್ಮ ಸರೋವರವಿದೆ; ಮಹಾಹಿಮವಾನ ಪರ್ವತದ ಮೇಲೆ ಮಹಾಪದ್ಮ ಸರೋವರವಿದೆ, ನಿಷಧ ಪರ್ವತದ ಮೇಲೆ ತಿಗಿಂಛ ಸರೋವರವಿದೆ. ಇನ್ನೊಂದು ಕಡೆಯಿಂದ ನೋಡಿದಾಗ ಶಿಖರೀ ಪರ್ವತದ ಮೇಲೆ ಪುಂಡರೀಕ ಸರೋವರವಿದೆ, ರುಕ್ಮಿ ಪರ್ವತದ ಮೇಲೆ ಮಹಾಪುಂಡರೀಕ ಸರೋವರವಿದೆ, ನೀಲ ಪರ್ವತದ ಮೇಲೆ ಕೇಸರೀ ಸರೋವರವಿದೆ.

ಪದ್ಮ ಸರೋವರದ ಎರಡು ಪಟ್ಟು ವಿಸ್ತಾರವುಳ್ಳದ್ದು ಮಹಾಪದ್ಮ ಸರೋವರವಿದೆ ಮತ್ತು ಮಹಾಪದ್ಮ ಸರೋವರದ ಎರಡು ಪಟ್ಟು ವಿಸ್ತಾರವು ತಿಗಿಂಛ ಸರೋವರದ್ದಿದೆ. ಪದ್ಮ ಸರೋವರದಷ್ಟು ಪುಂಡರೀಕ ಸರೋವರವಿದೆ ಮತ್ತು ಅದರ ಎರಡು ಪಟ್ಟು ಮಹಾಪುಂಡರೀಕ ಸರೋವರವಿದೆ, ಅದರ ಎರಡರಷ್ಟು ವಿಸ್ತಾರವುಳ್ಳದ್ದು ಕೇಸರೀ ಸರೋವರವಿದೆ. ಪದ್ಮ ಸರೋವರವು ಐನೂರು ಯೋಜನ ಅಗಲವಿದೆ, ಒಂದು ಸಾವಿರ ಯೋಜನ ಉದ್ದವಿದೆ ಮತ್ತು ಹತ್ತು ಯೋಜನ ಆಳವಿದೆ.

ಪದ್ಮ ಸರೋವರದಿಂದ ಹಾಗೂ ಪುಂಡರೀಕ ಸರೋವರದಿಂದ ಮೂರು-ಮೂರು ನದಿಗಳು ಹೊರಡುತ್ತವೆ. ಮಧ್ಯದ ಸರೋವರಗಳಿಂದ ಎರಡೆರಡು ಎಂದರೆ ಒಂದು ದಕ್ಷಿಣದ ಕಡೆಯಿಂದ ಮತ್ತು ಒಂದು ಉತ್ತರದ ಕಡೆಯಿಂದ ಹೀಗೆ ಎರಡು-ಎರಡು ನದಿಗಳು ಹೊರಡುತ್ತವೆ. ಜಂಬೂದ್ವೀಪದ ಈ ಹದಿನಾಲ್ಕು ಮಹಾನದಿಗಳು ಲವಣ ಸಮುದ್ರದಲ್ಲಿ ಸೇರಿಕೊಳ್ಳುತ್ತವೆ. ಏಳು ಕ್ಷೇತ್ರಗಳಲ್ಲಿ - ಪ್ರತಿಯೊಂದರಲ್ಲಿ ಎರಡು-ಎರಡು ನದಿಗಳು ಹರಿಯುತ್ತವೆ- ಮೊದಲು ಯಾವ ನದಿಯ ಹೆಸರು ಹೇಳಲಾಗುತ್ತದೆ ಆ ನದಿಗಳು ಪೂರ್ವದ ಕಡೆಯಿಂದ ಹರಿದು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತವೆ ಮತ್ತು ಅನ್ಯ ನದಿಗಳು ಪಶ್ಚಿಮದ ಕಡೆಯಿಂದ ಹರಿದು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತವೆ.

ಪದ್ಮ ಸರೋವರದಿಂದ ಮೂರು ನದಿಗಳು ಹೊರಡುತ್ತವೆ-ಪೂರ್ವ ತಟದಿಂದ ಗಂಗಾ, ಪಶ್ಚಿಮ ತಟದಿಂದ ಸಿಂಧು, ಇವೆರಡೂ ದಕ್ಷಿಣದಲ್ಲಿ ಭರತ ಕ್ಷೇತ್ರದಲ್ಲಿ ಹೋಗುತ್ತವೆ. ಅಲ್ಲಿ ಗಂಗಾ ನದಿಯು ಪೂರ್ವದ ಕಡೆಗೆ ಮತ್ತು ಸಿಂಧು ನದಿಯು ಪಶ್ಚಿಮದ ಕಡೆಗೆ ತಿರುಗಿ ಲವಣ ಸಮುದ್ರದೊಳಗೆ ಹೋಗಿ ಸೇರುತ್ತವೆ. ಹಾಗೂ ಉತ್ತರ ತಟದಿಂದ ರೋಹಿತಾಸ್ಯಾ ನದಿಯು ಹೊರಡುತ್ತದೆ ಅದು ಉತ್ತರದಲ್ಲಿ ಹೈಮವತ ಕ್ಷೇತ್ರದಲ್ಲಿ ಹರಿಯುತ್ತ ನಾಭಿಗಿರಿ ಅರ್ಥಾತ್ ಹೈಮವತ ಕ್ಷೇತ್ರದ ಮಧ್ಯದ ಪರ್ವತವನ್ನು ನಾಲ್ಕನೆಯ ಒಂದು ಭಾಗದಲ್ಲಿ ಪ್ರದಕ್ಷಿಣೆ ಹಾಕಿ ಪಶ್ಚಿಮ ದಿಶೆಯಲ್ಲಿ ಹರಿಯುತ್ತ ಹೋಗುತ್ತದೆ ಮತ್ತು ಪಶ್ಚಿಮದಲ್ಲಿ ಲವಣ ಸಮುದ್ರದೊಳಗೆ ಹೋಗಿ ಸೇರುತ್ತದೆ. (ಚಾರ್ಟ ನಂ. ೫ ನೋಡುವುದು).

ಮಹಾಪದ್ಮ ಸರೋವರದ ದಕ್ಷಿಣ ದಡದಿಂದ ರೋಹಿತ ನದಿಯು ದಕ್ಷಿಣ ದಿಶೆಯಲ್ಲಿ ಹೈಮವತ ಕ್ಷೇತ್ರದಲ್ಲಿ ಹರಿಯುತ್ತದೆ, ನಾಭಿಗಿರಿಯನ್ನು ನಾಲ್ಕನೆಯ ಒಂದು ಭಾಗ ಪ್ರಮಾಣ ಪ್ರದಕ್ಷಿಣೆ ಹಾಕಿ ಅದು ಪೂರ್ವದಲ್ಲಿ ಹರಿಯುತ್ತದೆ ಮತ್ತು ಪೂರ್ವದಿಶೆಯಲ್ಲಿ ಲವಣ ಸಮುದ್ರದೊಳಗೆ ಸೇರುತ್ತದೆ. ಮಹಾಪದ್ಮ ಸರೋವರದ ಉತ್ತರ ದಡದಿಂದ ಹರಿಕಾಂತಾ ನದಿಯು ಉತ್ತರ ದಿಶೆಯಲ್ಲಿ ಹರಿಕ್ಷೇತ್ರದಲ್ಲಿ ಹರಿಯುತ್ತದೆ. ಅಲ್ಲಿಯ ನಾಭಿಗಿರಿಯನ್ನು ಹಾಗೆಯೇ ಪ್ರದಕ್ಷಿಣೆ ಹಾಕಿ ಪಶ್ಚಿಮ ದಿಶೆಯಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರದೊಳಗೆ ಹೋಗಿ ಸೇರುತ್ತದೆ.

ತಿಗಿಂಛ ಸರೋವರದ ದಕ್ಷಿಣ ದಡದಿಂದ ಹೊರಟು ದಕ್ಷಿಣದಲ್ಲಿ ಹರಿಕ್ಷೇತ್ರದಲ್ಲಿ ಹರಿಯುವಂಥದು ಹರಿತ ನದಿಯಿದೆ ಅಲ್ಲಿಯ ನಾಭಿಗಿರಿಗೆ ಪ್ರದಕ್ಷಿಣೆ ಹಾಕಿ ಪೂರ್ವದಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರದೊಳಗೆ ಹೋಗಿ ಸೇರುತ್ತದೆ. ತಿಗಿಂಛದ ಉತ್ತರ ದಡದಿಂದ ಹೊರಟು ಸೀತೋದಾ ನದಿಯು ಉತ್ತರದಲ್ಲಿ ದೇವಕುರು ಕ್ಷೇತ್ರದಲ್ಲಿ ಹರಿಯುತ್ತದೆ ಮತ್ತು ಸುದರ್ಶನ ಪರ್ವತವನ್ನು ನಾಲ್ಕನೆಯ ಒಂದು ಭಾಗ ಪ್ರಮಾಣ ಪ್ರದಕ್ಷಿಣೆ ಹಾಕುತ್ತ ಗಜದಂತ ಪರ್ವತದ ಕೆಳಗಿನ ಗುಹೆಯಲ್ಲಿ ಪ್ರವೇಶ ಮಾಡಿ ಒಳಗಿನಿಂದ ಹರಿಯುತ್ತ ಗುಹೆಯ ಇನ್ನೊಂದು ಕಡೆಯಿಂದ ಹೊರಬಂದು ಮೇರುವಿನ ನಾಲ್ಕನೆಯ ಒಂದು ಭಾಗ ಪ್ರಮಾಣ ಪ್ರದಕ್ಷಿಣೆಯ ನಂತರ ಪಶ್ಚಿಮ ದಿಶೆಯಲ್ಲಿ ವಿದೇಹ ಕ್ಷೇತ್ರದಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರದೊಳಗೆ ಹೋಗಿ ಸೇರುತ್ತದೆ.

ಕೇಸರಿ ಸರೋವರದ ದಕ್ಷಿಣ ದಡದಿಂದ ಸೀತಾ ನದಿಯು ದಕ್ಷಿಣ ದಿಶೆಯಲ್ಲಿರುವ ಉತ್ತರ ಕುರು ಕ್ಷೇತ್ರದಲ್ಲಿ ಹರಿಯುತ್ತ ಸುಮೇರು ಪರ್ವತದವರೆಗೆ ಬರುತ್ತದೆ ಮತ್ತು ಮೇರು ಪರ್ವತದ ನಾಲ್ಕನೆಯ ಒಂದು ಭಾಗ ಪ್ರಮಾಣ ಪ್ರದಕ್ಷಿಣೆ ಮಾಡುತ್ತ ಗಜದಂತ ಪರ್ವತದ ಕೆಳಗಿನ ಗುಹೆಯೊಳಗಿಂದ ಹರಿಯುತ್ತ ಹೊರಗೆ ಬಂದು ಮೇರುವಿನ ಪ್ರದಕ್ಷಿಣೆಯ ನಂತರ ಪೂರ್ವ ದಿಶೆಯಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರದೊಳಗೆ ಹೋಗಿ ಸೇರುತ್ತದೆ. ಕೇಸರಿ ಸರೋವರದ ಉತ್ತರ ದಡದಿಂದ ನರಕಾಂತಾ ನದಿಯು ಉತ್ತರ ದಿಶೆಯಲ್ಲಿ ರಮ್ಯಕ ಕ್ಷೇತ್ರದಲ್ಲಿ ಹರಿಯುತ್ತ ಅಲ್ಲಿಯ ನಾಭಿಗಿರಿಯ ಪ್ರದಕ್ಷಿಣೆ ಮಾಡುತ್ತ ಪಶ್ಚಿಮದ ಕಡೆಗೆ ತಿರುಗಿ ಪಶ್ಚಿಮದಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರವನ್ನು ಸೇರುತ್ತದೆ.

ಮಹಾಪುಂಡರಿಕ ಸರೋವರದ ದಕ್ಷಿಣ ದಡದಿಂದ ನಾರೀ ನದಿಯು ಹೊರಟು ದಕ್ಷಿಣ ದಿಕ್ಕಿನಲ್ಲಿ ರಮ್ಯಕ ಕ್ಷೇತ್ರದಲ್ಲಿ ಹರಿಯುತ್ತದೆ ಮತ್ತು ಅಲ್ಲಿ ನಾಭಿಗಿರಿಯ ಪ್ರದಕ್ಷಿಣೆ ಮಾಡುತ್ತ ಪೂರ್ವ ದಿಕ್ಕಿನಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತದೆ. ಮಹಾಪುಂಡರಿಕ ಸರೋವರದ ಉತ್ತರ ದಡದಿಂದ ರೂಪ್ಯಕೂಲಾ ನದಿಯು ಹೊರಟು ಉತ್ತರ ದಿಕ್ಕಿನಲ್ಲಿ ಹೈರಣ್ಯವತ ಕ್ಷೇತ್ರದಲ್ಲಿ ಹರಿಯುತ್ತ ಅಲ್ಲಿಯ ನಾಭಿಗಿರಿಯನ್ನು ಪ್ರದಕ್ಷಿಣೆ ಮಾಡಿ ಪಶ್ಚಿಮ ದಿಕ್ಕಿನಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತದೆ.

ಪುಂಡರಿಕ ಸರೋವರದಿಂದ ಮೂರು ನದಿಗಳು ಹೊರಡುತ್ತವೆ. ಅದರ ದಕ್ಷಿಣ ದಡದಿಂದ ಸುವರ್ಣಕುಲಾ ನದಿಯು ದಕ್ಷಿಣ ದಿಕ್ಕಿನಲ್ಲಿ ಹೈರಣ್ಯವತ ಕ್ಷೇತ್ರದಲ್ಲಿ ಹರಿಯುತ್ತ ಅಲ್ಲಿಯ ನಾಭಿಗಿರಿಯ ಪ್ರದಕ್ಷಿಣೆ ಮಾಡಿ ಪೂರ್ವ ದಿಕ್ಕಿನಲ್ಲಿ ಹರಿಯುತ್ತದೆ ಮತ್ತು ಲವಣ ಸಮುದ್ರವನ್ನು ಹೋಗಿ ಸೇರುತ್ತದೆ. ಇದರ ಪೂರ್ವದ ದಡದಿಂದ ರಕ್ತಾ ನದಿ ಮತ್ತು ಪಶ್ಚಿಮ ದಡದಿಂದ ರಕ್ತೋದಾ ನದಿಯು ಹೊರಟು ಐರಾವತ ಕ್ಷೇತ್ರದಲ್ಲಿ ಹರಿಯುತ್ತ ಕ್ರಮದಿಂದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಗೆ ತಿರುಗಿಕೊಂಡು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತದೆ.

ಭರತ ಕ್ಷೇತ್ರ ಮತ್ತು ಐರಾವತ ಕ್ಷೇತ್ರವನ್ನು ಬಿಟ್ಟು ಅನ್ಯ ಐದೂ ಕ್ಷೇತ್ರಗಳಲ್ಲಿ ಮಧ್ಯದಲ್ಲಿ ನಾಭಿ ಗಿರಿಗಳಿವೆ. ಅದಕ್ಕೆ ಪ್ರದಕ್ಷಿಣೆ ಹಾಕಿ ದಕ್ಷಿಣದಿಂದ ಬರುವ ನದಿಯು ಪಶ್ಚಿಮದಲ್ಲಿ ಮತ್ತು ಉತ್ತರದಿಂದ ಬರುವ ನದಿಯು ಪೂರ್ವದಲ್ಲಿ ಹರಿಯುತ್ತದೆ. ಹೀಗಾಗಿ ನದಿಯ ಉತ್ತರದಲ್ಲಿ ಮತ್ತು ದಕ್ಷಿಣದಲ್ಲಿ ಇಂಥ ಕ್ಷೇತ್ರಗಳು ಎರಡು - ಎರಡು ವಿಭಾಗವಾಗಿ ಹೋಗುತ್ತವೆ. ಇಲ್ಲಿ ಚಾರ್ಟದಲ್ಲಿ ತಾವು ವಿದೇಹ ಕ್ಷೇತ್ರವನ್ನು ನೋಡುವುದು. ಮೇರುವಿನ

ಪೂರ್ವದಲ್ಲಿ ಮತ್ತು ಪಶ್ಚಿಮದಲ್ಲಿ ಕ್ರಮದಿಂದ ಪೂರ್ವವಿದೇಹ ಮತ್ತು ಪಶ್ಚಿಮ ವಿದೇಹವಿದೆ. ಪೂರ್ವ ವಿದೇಹದಲ್ಲಿ ಸೀತಾ ನದಿಯ ಕಾರಣ ಉತ್ತರ ಮತ್ತು ದಕ್ಷಿಣ ಹೀಗೆ ಎರಡು ವಿಭಾಗಗಳಾಗುತ್ತವೆ ಅದೇ ರೀತಿ ಪಶ್ಚಿಮ ವಿದೇಹದಲ್ಲಿ ಸೀತೋದಾ ನದಿಯ ಕಾರಣ ಉತ್ತರ ಮತ್ತು ದಕ್ಷಿಣ ಹೀಗೆ ಎರಡು ವಿಭಾಗಗಳಾಗುತ್ತವೆ.

ಪೂರ್ವ ವಿದೇಹದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿಯೂ ಕೂಡ ಬೇರೆ-ಬೇರೆ ಎಂಟು ಕ್ಷೇತ್ರಗಳು ವಿಭಾಜಿತವಾಗಿವೆ ಅವುಗಳ ವರ್ಣನೆಯನ್ನು ನಾವು ವಿದೇಹ ಕ್ಷೇತ್ರದ ಚರ್ಚೆ ಮಾಡುವ ಸಮಯದಲ್ಲಿ ನೋಡೋಣ.

ಇಲ್ಲಿ ಈ ೫ನೇ ನಂಬರಿನ ಚಾರ್ಟದಲ್ಲಿ ಜಂಬೂದ್ವೀಪದಲ್ಲಿನ ಯಾವ ಆರು ಕುಲಾಚಲ ಪರ್ವತಗಳಿವೆ ಅವುಗಳ ಹೆಸರುಗಳನ್ನು ಎಡಗಡೆ ಬರೆಯಲಾಗಿದೆ ಅದರ ಮುಂದೆಯೇ ಕಂಸದೊಳಗೆ ಆ ಪರ್ವತಗಳ ಮೇಲೆ ಕಂಡು ಬರುವ ದ್ರಹ ಎಂದರೆ ಸರೋವರಗಳ ಹೆಸರು ಬರೆಯಲಾಗಿದೆ. ಅದೇ ಚಾರ್ಟದಲ್ಲಿ ಬಲಗಡೆ ಕ್ಷೇತ್ರಗಳ ಹೆಸರುಗಳನ್ನು ಬರೆಯಲಾಗಿದೆ ಮತ್ತು ಕಂಸದೊಳಗೆ ಆ ಕ್ಷೇತ್ರಗಳಲ್ಲಿ ಕಂಡು ಬರುವಂಥ ಎರಡೆರಡು ನದಿಗಳ ಹೆಸರು ಬರೆಯಲಾಗಿದೆ. ಮೊದಲಿನ ಹೆಸರುಳ್ಳ ನದಿಗಳು ಪೂರ್ವ ದಿಕ್ಕಿನಲ್ಲಿ ಹರಿಯುತ್ತವೆ ಮತ್ತು ಎರಡನೇ ಹೆಸರುಳ್ಳ ನದಿಗಳು ಪಶ್ಚಿಮ ದಿಕ್ಕಿನಲ್ಲಿ ಹರಿಯುತ್ತವೆ.

ಈಗ ಈ ಪರ್ವತಗಳ ಎತ್ತರ ಮತ್ತು ಅದರ ಅನುಪಾತದಲ್ಲಿ ದ್ರಹಗಳ ಅಗಲ, ಉದ್ದ, ಆಳವನ್ನು ನೋಡೋಣ. ಈ ದ್ರಹಗಳಲ್ಲಿ (ಸರೋವರಗಳಲ್ಲಿ) ಪೃಥ್ವಿಕಾಯಿಕ ಕಮಲದ ರಚನೆಯಿರುತ್ತದೆ. ಅದರ ಎತ್ತರ-ಅಗಲವನ್ನೂ ನೋಡೋಣ. ಪರ್ವತದ ಎತ್ತರದಿಂದ ಸರೋವರದ ಅಗಲವು ಐದು ಪಟ್ಟು, ಉದ್ದವು ಹತ್ತು ಪಟ್ಟು, ಆಳವು ಹತ್ತನೆಯ ಒಂದು ಭಾಗ ಪ್ರಮಾಣ ಮತ್ತು ಕಮಲದ ಎತ್ತರ-ಅಗಲವು ಸರೋವರದ ಆಳದ ಹತ್ತನೆಯ ಒಂದು ಭಾಗ ಪ್ರಮಾಣವಿರುತ್ತದೆ.

ಅದನ್ನು ಈ ರೀತಿಯಾಗಿ ನೋಡಬಹುದಾಗಿದೆ ಅರ್ಥಾತ್ ತಿಳಿಯಬಹುದಾಗಿದೆ.

ಪರ್ವತ	ಹಿಮವಾನ	ಮಹಾಹಿಮವಾನ	ನಿಷಧ	ನೀಲ	ರುಕ್ಮೀ	ಶಿಖರೀ
ಪರ್ವತದ ವರ್ಣ	ಸುವರ್ಣ ಸಮಾನ	ಬೆಳ್ಳಿಯ ಸಮಾನ	ಕಾಯ್ದಕಾರ್ತ ಸ್ವರದ ಸಮಾನ	ವೈಡೂರ್ಯ ಮಣಿ ಸಮಾನ	ಬೆಳ್ಳಿಯ ಸಮಾನ	ಚಿನ್ನದ ಸಮಾನ
ಪರ್ವತಗಳ ಎತ್ತರ	೧೦೦ ಯೋ.	೨೦೦ ಯೋ.	೪೦೦ ಯೋ.	೪೦೦ ಯೋ.	೨೦೦ ಯೋ.	೧೦೦ ಯೋ.
ದ್ರಹ	ಪದ್ಮ	ಮಹಾಪದ್ಮ	ತಿಗಿಂಛ	ಕೇಸರಿ	ಮಹಾಪುಂಡರೀಕ	ಪುಂಡರೀಕ
ದ್ರಹದ ಅಗಲ	೫೦೦ ಯೋ.	೧೦೦೦ ಯೋ.	೨೦೦೦ ಯೋ.	೨೦೦೦ ಯೋ.	೧೦೦೦ ಯೋ.	೫೦೦ ಯೋ.
ದ್ರಹದ ಉದ್ದ	೧೦೦೦ ಯೋ.	೨೦೦೦ ಯೋ.	೪೦೦೦ ಯೋ.	೪೦೦೦ ಯೋ.	೨೦೦೦ ಯೋ.	೧೦೦೦ ಯೋ.
ದ್ರಹದ ಆಳ	೧೦ ಯೋ.	೨೦ ಯೋ.	೪೦ ಯೋ.	೪೦ ಯೋ.	೨೦ ಯೋ.	೧೦ ಯೋ.
ಕಮಲಗಳ ಎತ್ತರ ಅಗಲ	೧ ಯೋ.	೨ ಯೋ.	೪ ಯೋ.	೪ ಯೋ.	೨ ಯೋ.	೧ ಯೋ.
ಅಲ್ಲಿಯ ದೇವಿಯರು	ಶ್ರೀ	ಹ್ರೀ	ಧೃತಿ	ಕೀರ್ತಿ	ಬುದ್ಧಿ	ಲಕ್ಷ್ಮೀ

ಈ ಕಮಲಗಳು ಅತ್ಯಂತ ಸುಗಂಧಮಯವಾಗಿರುತ್ತವೆ, ಇವುಗಳ ಸುಗಂಧದಿಂದ ಹತ್ತೂ ದಿಕ್ಕುಗಳು ಸುಗಂಧಿತವಾಗುತ್ತಿರುತ್ತವೆ. ವೈಡೂರ್ಯಮಣಿ (ನೀಲಮಣಿ)ಯಿಂದ ನಿರ್ಮಿತವಿರುವ ಇವುಗಳ ಕಾಂಡವು ಎತ್ತರವಾಗಿರುತ್ತವೆ. ಒಂದೊಂದು ಕಮಲಕ್ಕೆ ಹನ್ನೊಂದು ಸಾವಿರ ದಳಗಳಿರುತ್ತವೆ. ಯಾವ ಕಮಲವು ಒಂದು ಯೋಜನದ್ದಿದೆ, ಅದು ಜಲದಿಂದ ಅರ್ಧ ಯೋಜನ ಮೇಲಿದ್ದು ಅರಳಿದ ಕಮಲ ಪುಷ್ಪದ ಸಮಾನವಿರುತ್ತದೆ, ಆದರೆ ಅದು ವನಸ್ಪತಿ ಕಾಯಿಕವಲ್ಲ, ಪೃಥ್ವಿಕಾಯಿಕವಿದ್ದು ರತ್ನಮಯವಿರುತ್ತದೆ. ಅದರ ಮೃಣಾಲವು(ದೇಟು) ಮೂರು ಹರದಾರಿ ದಪ್ಪವಿದ್ದು ರೂಪ್ಯಮಯ ಶ್ವೇತವರ್ಣದ್ದಿರುತ್ತದೆ. ಉದಯ ವ್ಯಾಸವುಳ್ಳ ಅದರ ಕರ್ಣಿಕೆಯು ಒಂದು ಹರದಾರಿಯದಿರುತ್ತದೆ. ಅದರ ಮೇಲೆ ಶ್ರೀ ದೇವಿಯ ಮಂದಿರವು ಒಂದು ಹರದಾರಿ ಉದ್ದ, ಅರ್ಧ ಹರದಾರಿ ಅಗಲ ಮತ್ತು ಮುಕ್ಕಾಲು ಹರದಾರಿ ಎತ್ತರವಿರುತ್ತದೆ. ಆ ದ್ರಹದಲ್ಲಿ ಕಮಲದ ಪರಿವಾರರೂಪ ಒಂದು ಲಕ್ಷ ನಲವತ್ತು ಸಾವಿರ ಒಂದು ನೂರು ಹದಿನೈದು ಅನ್ಯ ಕಮಲಗಳಿರುತ್ತವೆ. ಆ ಕಮಲಗಳ ಮೇಲೆ ದೇವಿಯರ ಪರಿವಾರ ಅರ್ಥಾತ್ ಪಾರಿಷದ, ಅನಿಕ, ಸಾಮಾನಿಕ, ಅಂಗರಕ್ಷಕ ಮೊದಲಾದ ದೇವಗಳ ಮಂದಿರಗಳಿವೆ. ಶ್ರೀ, ಹ್ರೀ, ಧೃತಿ ಇವರು ಸೌಧರ್ಮ ಇಂದ್ರನ ದೇವಿಯರಿದ್ದಾರೆ ಮತ್ತು ಕೀರ್ತಿ, ಬುದ್ಧಿ, ಲಕ್ಷ್ಮೀ - ಇವರು ಈಶಾನ ಇಂದ್ರನ ದೇವಿಯರಿದ್ದಾರೆ.

ನಾವು ಜಂಬೂದ್ವೀಪದ ರಚನೆಯನ್ನು ವಿಸ್ತಾರಪೂರ್ವಕ ನೋಡಿದೆವು. ಇಂಥದೇ ರಚನೆಯು ಪೂರ್ವ ಧಾತಕೀ ದ್ವೀಪ ಹಾಗೂ ಪಶ್ಚಿಮ ಧಾತಕೀ ದ್ವೀಪದಲ್ಲಿಯೂ ಕಂಡು ಬರುತ್ತದೆ. ಅವುಗಳಲ್ಲಿ ಪ್ರತಿಯೊಂದರಲ್ಲಿ ಮಧ್ಯದಲ್ಲಿ ಒಂದೊಂದು ಮೇರು ಪರ್ವತವಿರುತ್ತದೆ, ಆರು-ಆರು ಕುಲಾಚಲ ಪರ್ವತಗಳಿರುತ್ತವೆ ಮತ್ತು ಏಳು-ಏಳು ಕ್ಷೇತ್ರಗಳಿರುತ್ತವೆ. ಆದರೆ ವಿಶೇಷತೆಯೇನೆಂದರೆ ಜಂಬೂದ್ವೀಪದ ಕುಲಾಚಲಗಳು ಪೂರ್ವದಿಂದ ಪಶ್ಚಿಮದವರೆಗೆ ಅಡ್ಡವಾಗಿ ಹರಡಿಕೊಂಡಿವೆ ಮತ್ತು ಉಳಿದ ದ್ವೀಪಗಳಲ್ಲಿ ಕುಲಾಚಲಗಳು ಸಾಇಕಲ ಚಕ್ರದ ಎಲೆಗಳಂತಿವೆ. ಧಾತಕೀ ಖಂಡದ ಕುಲಾಚಲಗಳು ಒಳಗಿನ ಕಡೆಯಿಂದ ಲವಣ ಸಮುದ್ರವನ್ನು ಸ್ಪರ್ಶಿಸುತ್ತಿದ್ದರೆ ಹೊರಗಿನ ಕಡೆಯಿಂದ ಕಾಲೋದಕ ಸಮುದ್ರವನ್ನು ಸ್ಪರ್ಶ ಮಾಡುತ್ತವೆ. ಪುಷ್ಕರಾರ್ಧದ ಕುಲಾಚಲಗಳು ಒಳಗಿನಿಂದ ಕಾಲೋದಕ ಸಮುದ್ರವನ್ನು ಸ್ಪರ್ಶ ಮಾಡುತ್ತಿದ್ದರೆ ಹೊರಗಿನ ಕಡೆಯಿಂದ ಮಾನುಷೋತ್ತರ ಪರ್ವತವನ್ನು ಸ್ಪರ್ಶ ಮಾಡುತ್ತವೆ. ಇಲ್ಲಿ ನಾಲ್ಕನೆಯ ನಂಬರಿನ ಚಾರ್ಟ ನೋಡುವುದು. ಅದರಲ್ಲಿ ಈ ಪರ್ವತಗಳು, ಅವುಗಳ ಮೇಲಿರುವ ದ್ರಹಗಳು ಹಾಗೂ ಅವುಗಳಿಂದ ಹೊರಡುವಂಥ ನದಿಗಳನ್ನು ತೋರಿಸಲಾಗಿದೆ. ಇವೆಲ್ಲ ಪರ್ವತಗಳು ಕೆಳಗಿನಿಂದ ಮೇಲಿನವರೆಗೆ ಸಮಾನ ಅಗಲವಿರುತ್ತವೆ. ಅವುಗಳ ಪಾರ್ಶ್ವಭಾಗ ಎಂದರೆ ಮಗ್ಗಲುಗಳು ವಿವಿಧ ರತ್ನಗಳಿಂದ-ಮಣಿಗಳಿಂದ ಯುಕ್ತವಿವೆ.

ಇನ್ನು ಇಲ್ಲಿಯ ಕುಲಾಚಲಗಳು, ದ್ರಹಗಳು ಮತ್ತು ನದಿಗಳ ಹೆಸರುಗಳಂತೂ ಜಂಬೂದ್ವೀಪದಲ್ಲಿ ನೋಡಲಾಗಿರುವಂಥವೇ ಇವೆ. ಆದರೆ ಮೇರುವಿನ ಹೆಸರುಗಳು ಬೇರೆ ಬೇರೆಯಾಗಿವೆ. ಪೂರ್ವಧಾತಕಿ ಖಂಡದಲ್ಲಿ ವಿಜಯ ಮೇರುವಿದೆ, ಪಶ್ಚಿಮಧಾತಕೀ ಖಂಡದಲ್ಲಿ ಅಚಲ ಮೇರುವಿದೆ, ಪೂರ್ವ ಪುಷ್ಕರಾರ್ಧದಲ್ಲಿ ಮಂದರ ಮೇರುವಿದೆ ಮತ್ತು ಪಶ್ಚಿಮ ಪುಷ್ಕರಾರ್ಧದಲ್ಲಿ ವಿದ್ಯುನ್ಮಾಲೀ ಮೇರುವಿದೆ. ಇಲ್ಲಿಯ ಭರತ, ಐರಾವತ, ವಿದೇಹ ಕ್ಷೇತ್ರಗಳು ಒಳಭಾಗದಲ್ಲಿ ಅಲ್ಪವಿಸ್ತಾರವುಳ್ಳವಿವೆ ಮತ್ತು ಹೊರಗಿನ ಭಾಗದತ್ತ ಅಧಿಕ ಅಗಲ ವಿಸ್ತಾರವುಳ್ಳವಿವೆ. ಚಾರ್ಟದೊಳಗೆ ನೋಡಿದರೆ ತಮಗೆ ತಿಳಿದು ಬರಬಹುದಾಗಿದೆ. ಧಾತಕೀ ಖಂಡದಲ್ಲಿ ದಕ್ಷಿಣದ ಕಡೆಗೆ ಯಾವ

ಎರಡು ಹಳದೀ ಕ್ಷೇತ್ರಗಳನ್ನು ತೋರಿಸಲಾಗಿದೆ ಅವು ಎರಡು ಧಾತಕೀ ಖಂಡಗಳ ಎರಡು ಭರತ ಕ್ಷೇತ್ರಗಳಿವೆ ಅವುಗಳ ಮಧ್ಯದಲ್ಲಿ ಈಶ್ವಾಕಾರ ಪರ್ವತವಿದೆ. ಇದೇ ರೀತಿ ಎರಡು ಪುಷ್ಕರಾರ್ಧದ ಎರಡು ಭರತ ಕ್ಷೇತ್ರಗಳಿವೆ. ಇದೇ ರೀತಿ ಉತ್ತರ ದಿಕ್ಕಿನಲ್ಲಿ ಅವುಗಳ ಎರಡು-ಎರಡು ಐರಾವತ ಕ್ಷೇತ್ರಗಳಿವೆ. ಅವುಗಳ ಮೇರುವಿನ ಪೂರ್ವ ಮತ್ತು ಪಶ್ಚಿಮದಲ್ಲಿ ಅಲ್ಲಿಯ ವಿದೇಹ ಕ್ಷೇತ್ರಗಳಿವೆ.

ಈ ಪ್ರಕಾರ ನಾವು ಎರಡೂವರೆ ದ್ವೀಪದಲ್ಲಿ ಕರ್ಮಭೂಮಿಯ ೫ X ೩೨ = ೧೬೦ ವಿದೇಹ ಕ್ಷೇತ್ರಗಳು, ೫ ಭರತ ಕ್ಷೇತ್ರಗಳು ಮತ್ತು ಐದು ಐರಾವತ ಕ್ಷೇತ್ರಗಳನ್ನು ನೋಡಿದೆವು. ಅಲ್ಲದೆ ಪ್ರತಿಯೊಂದು ಮೇರುವಿಗೆ ಸಂಬಂಧಿಸಿದ ಆರು-ಆರು ಭೋಗ ಭೂಮಿಗಳು ಹೀಗೆ ಒಟ್ಟು ಮೂವತ್ತು ಭೋಗಭೂಮಿಗಳನ್ನು ನೋಡಿದೆವು.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹನ್ನೆರಡನೆಯ ತೀರ್ಥಂಕರ
ಶ್ರೀ ಚಂದ್ರಾನನ ಭಗವಂತರಿಗೆ ಜಯವಾಗಲಿ.

★★★★★

ಎಲ್ಲಿಯವರೆಗೆ ಮನಸ್ಸು ಶಾಂತವಾಗುವುದಿಲ್ಲ ಅಲ್ಲಿಯವರೆಗೆ ಸಂಯಮದ ಪರಿಪಾಲನೆ ಮಾಡುತ್ತಿದ್ದರೂ ಕೂಡ ಎಂದೂ ಆತ್ಮನ ಕಲ್ಯಾಣವಾಗುವ ಸಾಧ್ಯತೆಯಿಲ್ಲ. ಕಾರಣವೇನೆಂದರೆ ಮನಸ್ಸಿನ ಅಸ್ಥಿರತೆಯಿಂದ ಬಾಹ್ಯ ಪದಾರ್ಥಗಳಲ್ಲಿ ಇಷ್ಟ-ಅನಿಷ್ಟದ ಮನ್ನಣೆಯಾಗುತ್ತದೆ ಅದರಿಂದ ರಾಗ-ದ್ವೇಷಗಳ ಪ್ರವೃತ್ತಿಯಾಗುತ್ತಿರುತ್ತದೆ ಮತ್ತು ಎಲ್ಲಿಯವರೆಗೆ ರಾಗ-ದ್ವೇಷಗಳ ಪರಿಣಮನವಿದೆ ಅಲ್ಲಿಯವರೆಗೆ ಕರ್ಮದ ಬಂಧವು ಕೂಡ ಅನಿವಾರ್ಯವಿದೆ. ಅದರಂತೆ ಎಲ್ಲಿಯವರೆಗೆ ನವೀನ-ನವೀನ ಕರ್ಮಗಳ ಬಂಧವಾಗುತ್ತಿರುವುದು ಅಲ್ಲಿಯವರೆಗೆ ದುಃಖಮಯವಾದ ಈ ಜನ್ಮ-ಮರಣರೂಪದ ಸಂಸಾರದ ಪರಂಪರೆಯು ಕೂಡ ನಡೆಯುತ್ತಲೇ ಇರುವುದು ಇಂಥ ಅವಸ್ಥೆಯಲ್ಲಿ ಆತ್ಮನಿಗೆ ಎಂದೂ ಶಾಂತಿಯ ಲಾಭವಾಗುವ ಸಾಧ್ಯತೆಯಿಲ್ಲ. ಆದುದರಿಂದ ಆತ್ಮ ಕಲ್ಯಾಣದ ಇಚ್ಛೆ ಮಾಡುವಂಥ ಭವ್ಯ ಜೀವರುಗಳು ಎಲ್ಲಕ್ಕಿಂತಲೂ ಮೊದಲು ತಮ್ಮ ಚಂಚಲವಾದ ಮನಸ್ಸನ್ನು ವಶದಲ್ಲಿ ಇಟ್ಟುಕೊಳ್ಳಬೇಕಾಗುವುದು. ಮನಸ್ಸು ವಶೀಭೂತವಾಗಿ ಹೋದ ನಂತರ ಅದರ ಸಂಕೇತದ ಪ್ರಕಾರ ಪ್ರವೃತ್ತವಾಗುವಂಥ ಇಂದ್ರಿಯಗಳು ತಾವಾಗಿಯೇ ವಶೀಭೂತವಾಗಿ ಹೋಗುತ್ತವೆ. ಆಗ ಇಂಥ ಅವಸ್ಥೆಯಲ್ಲಿ ಬಂಧದ ಅಭಾವವಾಗಿ ಹೋಗುವುದರಿಂದ ಮೋಕ್ಷವೇನು ಹೆಚ್ಚು ದೂರ ಉಳಿಯುವುದಿಲ್ಲ.

೧೩. ಭರತ ಕ್ಷೇತ್ರ

ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಮೂರು ಲೋಕಗಳ ಸ್ವರೂಪವನ್ನು ನೋಡುತ್ತಿದ್ದೇವೆ.

ತಿರ್ಯಕ್‌ಲೋಕ ಅರ್ಥಾತ್ ಮಧ್ಯಲೋಕದ ಸ್ವರೂಪವನ್ನು ನೋಡುತ್ತ ನಾವು ಎರಡೂವರೆ ದ್ವೀಪದ ರಚನೆಯನ್ನು ವಿಸ್ತಾರವಾಗಿ ನೋಡಿಯಾಯಿತು. ಜಂಬೂದ್ವೀಪದ ಕ್ಷೇತ್ರ, ಪರ್ವತ, ನದಿಗಳ ಚರ್ಚೆ ಮಾಡಲಾಯಿತು. ಈಗ ಭರತ ಕ್ಷೇತ್ರದ ಚರ್ಚೆ ಮಾಡೋಣ. ಜಂಬೂದ್ವೀಪದ ಒಂದು ಲಕ್ಷ ಯೋಜನ ಪ್ರಮಾಣ ದಕ್ಷಿಣೋತ್ತರ ವ್ಯಾಸದಲ್ಲಿ ಒಂದು ನೂರಾ ತೊಂಭತ್ತು ಭಾಗ ಮಾಡಿದ ಮೇಲೆ ಒಂದು ಭಾಗ ಪ್ರಮಾಣದ ಭರತ ಕ್ಷೇತ್ರವು ಬಾಣವಾಗುತ್ತದೆ ಅರ್ಥಾತ್ ವಿಷ್ಕಂಭವಾಗುತ್ತದೆಯೆಂಬ ಮಾತನ್ನು ನಾವು ಮೊದಲು ನೋಡಿದ್ದೆವು. ಅದರ ಪ್ರಮಾಣವು ೫೨೬ $\frac{೬}{೧೯}$ ಯೋಜನವಿದೆ. ಆ ಭರತ ಕ್ಷೇತ್ರದ ಜಿಹ್ವೆಯು ೧೪೭೭೧ $\frac{೫}{೨೧}$ ಯೋಜನವಿದೆ. ಅದರ ಆಕಾರವು ಅಡ್ಡಲಾಗಿ ಹರಡಿಕೊಂಡಿದೆ. ಆದರೆ ಶಾಸ್ತ್ರಗಳಲ್ಲಿ ಅದನ್ನು ತಿಳಿಸಿಕೊಡುವ ಸಲುವಾಗಿ ದೊಡ್ಡದನ್ನಾಗಿಸಿ ಅರ್ಧ ವೃತ್ತಾಕಾರಮಾಡಿ ತಿಳಿಸಿ ಕೊಟ್ಟಿದ್ದಾರೆ. ತಾವು ಆರನೇ ನಂಬರಿನ ಚಾರ್ಟ ನೋಡಬೇಕು. ಮೇಲೆ ಹಿಮವಾನ ಪರ್ವತ, ಪದ್ಮ ಸರೋವರ ಹಾಗೂ ಅದರಿಂದ ಹೊರಡುವಂಥ ಗಂಗಾ, ಸಿಂಧೂ ನದಿಗಳನ್ನು ತೋರಿಸಲಾಗಿದೆ. ಅದರ ಕೆಳಗೆ ಇಲ್ಲಿ ಅಡ್ಡಲಾದ ಹಳದಿ ಕ್ಷೇತ್ರವು ಭರತ ಕ್ಷೇತ್ರವಿದೆ; ಆದರೆ ಅವೇ ಪರ್ವತ ಮತ್ತು ಕ್ಷೇತ್ರಗಳನ್ನು ಕೆಳಗೆ ಅರ್ಧ ವೃತ್ತಾಕಾರ ಮಾಡಿ ತಿಳಿಸಿಕೊಡಲಾಗಿದೆ ಏಕೆಂದರೆ ಅದರಲ್ಲಿ ಯಾವ ನದಿಗಳಿವೆ, ಪರ್ವತಗಳಿವೆ, ಆರು ಖಂಡಗಳಿವೆ ಅವುಗಳನ್ನು ಸರಿಯಾಗಿ ತಿಳಿದುಕೊಳ್ಳಬಹುದಾಗಿದೆ.

ಎಲ್ಲಕ್ಕಿಂತ ಮೊದಲು ನಾವು ಗಂಗಾ ನದಿಯ ಉತ್ಪತ್ತಿ ಹಾಗೂ ಅದರ ಗಮನವನ್ನು ನೋಡೋಣ. ಹಿಮವಾನ ಪರ್ವತದ ಮೇಲೆ ದಕ್ಷಿಣೋತ್ತರ ೫೦೦ ಯೋಜನ ಅಗಲವಾದ ಮತ್ತು ಪೂರ್ವ-ಪಶ್ಚಿಮ ೧೦೦೦ ಯೋಜನ ಉದ್ದವಿರುವ ಪದ್ಮ ದ್ರಹವಿದೆ. ಅದರ ಪೂರ್ವ ದಿಕ್ಕಿನ ವಜ್ರದ್ವಾರದಿಂದ ಗಂಗಾ ನದಿಯು ಹೊರಡುತ್ತದೆ ಮತ್ತು ಹಿಮವಾನ ಪರ್ವತದ ಮೇಲೆ ಪೂರ್ವ ದಿಕ್ಕಿನಲ್ಲಿ ೫೦೦ ಯೋಜನದವರೆಗೆ ಹರಿಯುತ್ತದೆ ಹಿಮವಾನ ಪರ್ವತದ ಮೇಲೆ ಗಂಗಾ ಎಂಬ ಹೆಸರಿನ ಕೂಟವಿದೆ, ಅದಕ್ಕಿಂತ ಅರ್ಧ ಯೋಜನ ಮೊದಲೇ ಗಂಗಾ ನದಿಯು ದಕ್ಷಿಣ ದಿಕ್ಕಿನತ್ತ ತಿರುಗಿ ಹಿಮವಾನ ಪರ್ವತದ ದಕ್ಷಿಣ ದಡದವರೆಗೆ ಹರಿಯುತ್ತ ಹೋಗುತ್ತದೆ. ಅಲ್ಲಿ ಪರ್ವತದ ದಂಡೆಯಲ್ಲಿ ಜಿವ್ಹಿಕೆ ಅರ್ಥಾತ್ ಪ್ರಣಾಲಿ (ಮಾರ್ಗ) ಇದೆ. ಅದು ಅನೇಕ ಪ್ರಕಾರದ ರತ್ನಮಯವಿದೆ. ಇದು ಎರಡು ಹರದಾರಿ ಉದ್ದ ಮತ್ತು ಎರಡು ಹರದಾರಿ ಎತ್ತರವಿದೆ ಮತ್ತು ವೃಷಭಾಕಾರ ಅರ್ಥಾತ್ ಗೋಮುಖಾಕಾರವಿದೆ,

ಆರು ಕಾಲು (೬ $\frac{೧}{೪}$)ಯೋಜನ ಅಗಲವಿದೆ. ಈ ಪ್ರಣಾಲಿಕೆಯ ಮುಖ, ಕಿವಿ, ನಾಲಿಗೆ, ನೇತ್ರಗಳ ಆಕಾರ ವಂತೂ ಸಿಂಹದ ಸಮಾನವಿದೆ ಮತ್ತು ಭೃಕುಟಿ, ಮಸ್ತಕ ಮೊದಲಾದವುಗಳ ಆಕಾರವು ಹಸುವಿನ ಸಮಾನವಿದೆ.

ಇಲ್ಲಿ ಅದು ಹಿಮವಾನ ಪರ್ವತವನ್ನು ಬಿಟ್ಟು ಇಪ್ಪತ್ತೈದು ಯೋಜನ ಮುಂದೆ ಹೋಗಿ ಈ ಗಂಗಾ ನದಿಯು ಹತ್ತು ಯೋಜನ ಅಗಲವಾಗಿ ಕೆಳಗೆ ಬೀಳುತ್ತದೆ. ಎಲ್ಲಿ ಬೀಳುತ್ತದೆಯೆಂಬುದನ್ನು ಹೇಳುತ್ತಾರೆ - ಹಿಮವಾನ ಪರ್ವತದ ಮೂಲದಲ್ಲಿ ಹತ್ತು ಯೋಜನ ಆಳ, ಅರವತ್ತು ಯೋಜನ ಅಗಲವಾದ ದುಂಡಗಿನ ಕುಂಡವಿದೆ. ಆ ಕುಂಡದ ಮಧ್ಯದಲ್ಲಿ ಜಲದಿಂದ ಅರ್ಧ ಯೋಜನ ಎತ್ತರ ಮತ್ತು ಎಂಟು ಯೋಜನ

ಅಗಲವಾದ ದುಂಡಗಿನ ದ್ವೀಪವಿದೆ. ಆ ದ್ವೀಪದ ಮಧ್ಯದಲ್ಲಿ ಹತ್ತು ಯೋಜನ ಎತ್ತರವಾದ ವಜ್ರಮಯ ಪರ್ವತವಿದೆ. ಆ ಪರ್ವತವು ಕೆಳಗೆ ನಾಲ್ಕು ಯೋಜನ, ಮಧ್ಯದಲ್ಲಿ ಎರಡು ಯೋಜನ ಮತ್ತು ಮೇಲೆ ಒಂದು ಯೋಜನ ಅಗಲವಿದೆ. ಆ ಪರ್ವತದ ಮೇಲೆ ಮಂದಿರವಿದೆ, ಅದು ಕೆಳಗೆ ೩೦೦೦ ಧನುಷ್ಯ, ಮಧ್ಯದಲ್ಲಿ ೨೦೦೦ ಧನುಷ್ಯ ಮತ್ತು ಮೇಲೆ ೧೦೦೦ ಧನುಷ್ಯ ಅಗಲವಿದೆ. ಅದರಲ್ಲಿ ಶ್ರೀ ದೇವಿಯ ಅರಮನೆಯಿದೆ ಆ ಶ್ರೀದೇವಿಯ ಮಂದಿರದ ಮೇಲೆ ಕಮಲವಿದೆ ಆ ಕಮಲ ಕರ್ಣಿಕೆಯ ಮೇಲೆ ಸಿಂಹಾಸನವಿದೆ. ಅಲ್ಲಿ ಜಿನಬಿಂಬವು ವಿರಾಜಮಾನವಿದೆ ಆ ಜಿನಬಿಂಬದ ಮೇಲೆ ಗಂಗಾ ನದಿಯು ಪರ್ವತದಿಂದ ಬೀಳುತ್ತದೆ. ಅದೇನು ಜಿನಬಿಂಬದ ಅಭಿಷೇಕ ಮಾಡುತ್ತಿದೆಯೋ ಏನೋ ಎಂಬಂತೆ ಗಂಗಾನದಿಯು ಧುಮ್ಮಿಕ್ಕಿ ಬೀಳುತ್ತದೆ. ಈ ಜಿನಬಿಂಬವು ಜಡೆಯುಕ್ತವಿದೆಯೆಂದು ಹೇಳಿದ್ದಾರೆ. ಅದನ್ನೇ ಅನ್ಯಮತಿಯರು ಶಂಕರನ ಜಡೆಯಿಂದ ಗಂಗೆಯ ಅವತರಣವಾಗಿದೆಯೆಂದು ಹೇಳುತ್ತಾರೆ.

ಎಲ್ಲಿ-ಎಲ್ಲಿ ನದಿಗಳು ಪರ್ವತದಿಂದ ಬೀಳುತ್ತವೆ ಅಲ್ಲಿ-ಅಲ್ಲಿ ಇಂಥದೇ ಕುಂಡ, ದ್ವೀಪ, ದೇವಿಯ ಮಂದಿರ ಮತ್ತು ಜಿನಬಿಂಬಗಳ ರಚನೆಯಿದೆ.

ಗಂಗಾ ಕುಂಡದಿಂದ ಹೊರ ಹೊರಟು ಗಂಗಾ ನದಿಯು ದಕ್ಷಿಣ ದಿಕ್ಕಿನಲ್ಲಿ ನೇರವಾಗಿ ಹರಿಯುತ್ತ ಹೋಗಿ ವಿಜಯಾರ್ಧ ಪರ್ವತದ ಖಂಡ ಪ್ರಪಾತವೆಂಬ ಗುಹೆಯಲ್ಲಿ ಪ್ರವೇಶ ಮಾಡುತ್ತದೆ. ಇನ್ನೂವರೆಗೆ ನಾವು ವಿಜಯಾರ್ಧ ಪರ್ವತದ ಚರ್ಚೆ ಮಾಡಿರಲಿಲ್ಲ. ಭರತ ಕ್ಷೇತ್ರದ ಮಧ್ಯದಲ್ಲಿ ಪೂರ್ವದಿಂದ ಪಶ್ಚಿಮದವರೆಗೆ ಅಡ್ಡಲಾಗಿ ಹರಡಿಕೊಂಡಿರುವ ವಿಜಯಾರ್ಧ ಪರ್ವತವಿದೆ. ಇಂಥವೇ ಪರ್ವತಗಳು ಎಲ್ಲ ಭರತ, ಐರಾವತ, ವಿದೇಹ ಕ್ಷೇತ್ರದಲ್ಲಿ ಕಂಡು ಬರುತ್ತವೆ ಮತ್ತು ಎಲ್ಲವನ್ನು ವಿಜಯಾರ್ಧ ಪರ್ವತಗಳೆಂದೇ ಹೇಳುತ್ತಾರೆ.

ಈ ಪರ್ವತದ ಅಗಲವು ಐವತ್ತು ಯೋಜನವಿದೆ, ಅಷ್ಟೇ ಆ ಗುಹೆಯ ಉದ್ದವಿದೆ. ಗುಹೆಯ ಎತ್ತರವು ಎಂಟು ಯೋಜನ ಮತ್ತು ಅಗಲವು ಹನ್ನೆರಡು ಯೋಜನವಿದೆ. ಗುಹೆಯ ಉತ್ತರ ಹಾಗೂ ದಕ್ಷಿಣ ದ್ವಾರಗಳಲ್ಲಿ ಆರು-ಆರು ಯೋಜನ ಅಗಲವಾದ ಎರಡು ವಜ್ರಮಯ ಕವಾಟಗಳಿವೆ.

ಗುಹೆಯ ಪೂರ್ವ ಮತ್ತು ಪಶ್ಚಿಮ ಗೋಡೆಯ ಹತ್ತಿರ ಎರಡು ಕುಂಡಗಳಿವೆ. ಅವುಗಳೊಳಗಿಂದ ಉನ್ಮಗ್ನಾ ಮತ್ತು ನಿಮಗ್ನಾ ಅರ್ಥಾತ್ ಉನ್ಮಗ್ನಜಲಾ ಮತ್ತು ನಿಮಗ್ನಜಲಾವೆಂಬ ಹೆಸರಿನ ಎರಡು ನದಿಗಳು ಹೊರಡುತ್ತವೆ, ಅವು ಎರಡು ಯೋಜನ ಅಗಲವಿವೆ ಮತ್ತು ನೇರವಾಗಿ ಚಲಿಸುತ್ತ ಹೋಗಿ ಗಂಗಾ ನದಿಯಲ್ಲಿ ಸೇರುತ್ತವೆ. ತನ್ನ ಜಲ ಪ್ರವಾಹದಲ್ಲಿ ಬಿದ್ದಿರುವ ಭಾರವಾದ ದ್ರವ್ಯವನ್ನು ಕೂಡ ಯಾವುದು ಹೊರಗೆ ಹಾಕುತ್ತದೆ, ಮುಳುಗಿಸುವುದಿಲ್ಲ, ಒಳಗೆ ಪ್ರವೇಶ ಮಾಡಗೊಡುವುದಿಲ್ಲ ಅದನ್ನು ಉನ್ಮಗ್ನಾ ಎನ್ನುತ್ತಾರೆ ಮತ್ತು ತನ್ನ ಜಲಪ್ರವಾಹದಲ್ಲಿ ಬಿದ್ದಿರುವ ಹಗುರವಾದ ದ್ರವ್ಯವನ್ನು ಕೂಡ ಯಾವುದು ಮುಳುಗಿಸಿ ಬಿಡುತ್ತದೆ - ಕೆಳಗೆ ತಗೆದುಕೊಂಡು ಹೋಗುತ್ತದೆ, ತಳ ತಲುಪಿಸುತ್ತದೆ ಅದನ್ನು ನಿಮಗ್ನಾ ಎಂದು ಹೇಳುತ್ತಾರೆ.

ಮೊನ್ನೆಯ ದಿನವೇ ಈ ಮಾತು ಗುರುದೇವರ ಪ್ರವಚನದಲ್ಲಿ ಬಂದಿತ್ತು. ನಮ್ಮ ಆರು ಗಂಟೆಗಳ ಸ್ವಾಧ್ಯಾಯವನ್ನು ಹೊರತುಪಡಿಸಿ ಗುರುದೇವರ ಧ್ವನಿಸುರುಳಿಯ ಪ್ರವಚನವು ಕೂಡ ಒಂದು ಗಂಟೆ ಇರುತ್ತದೆಯಲ್ಲವೇನು ! ಅದರಲ್ಲಿ ಗುರುದೇವರು ಈ ಎರಡು ನದಿಗಳ ನಾಮೋಲ್ಲೇಖ ಮಾಡಿದ್ದರು. ಹೀಗೆ

ಕರಣಾನುಯೋಗದ ಅದೆಷ್ಟೋ ಮಾತುಗಳನ್ನು ಗುರುದೇವರು ತಮ್ಮ ಪ್ರವಚನಗಳಲ್ಲಿ ಹೇಳುತ್ತಿದ್ದರು. ಒಬ್ಬೊಬ್ಬ ಚಂದ್ರನ ಪರಿವಾರದಲ್ಲಿ ಎಷ್ಟೆಷ್ಟು ತಾರೆಗಳಿವೆ, ಲವಣ ಸಮುದ್ರದಲ್ಲಿ ಎಂಥ ಪಾತಾಳಗಳಿವೆ, ಆತ್ಮನ ಪ್ರದೇಶಗಳ ಕಂಪನರೂಪದ ಯೋಗವು ಯಾವ ಕರ್ಮದ ಉದಯದಿಂದ ಆಗುತ್ತದೆ ಮೊದಲಾಗಿ ಅನೇಕ ಮಾತುಗಳನ್ನು ನಾವು ಅವರ ಪ್ರವಚನಗಳಲ್ಲಿ ಆಲಿಸಿದ್ದೇವೆ, ಓದಿದ್ದೇವೆ. ಗುರುದೇವರ ಪ್ರವಚನ ಸಾಹಿತ್ಯವು ಎಷ್ಟೆಲ್ಲ ಮುದ್ರಣವಾಗಿದೆ, ಅವುಗಳದಂತೂ ನಮ್ಮ ನಿತ್ಯಸ್ವಾಧ್ಯಾಯದಲ್ಲಿ ವಾಚನ-ಚರ್ಚೆಯಾಗಿದೆ ಮತ್ತು ಎಲ್ಲದರಲ್ಲಿ ಕರಣಾನುಯೋಗದ ಯಾವ ಉದ್ಧರಣೆಕೆಗಳನ್ನು ಗುರುದೇವರು ಹೇಳುತ್ತಿದ್ದರು ಅವುಗಳನ್ನು ಬರೆದಿಟ್ಟುಕೊಂಡಿದ್ದೇವೆ. ಅವರು ಜಯಧವಲಾ ಮತ್ತು ಧವಲಾದ ಉದಾಹರಣೆಗಳನ್ನು ಅನೇಕ ಬಾರಿ ಕೊಡುತ್ತಿದ್ದರು. ಅದರ ಸಲುವಾಗಿ ಅವರಿಗೆ ಸ್ಮರಣೆ ಮಾಡಿಕೊಳ್ಳುವ ಅಥವಾ ಹುಡುಕಿ ತಗೆಯಬೇಕಾಗುತ್ತಿರಲಿಲ್ಲ. ಅವರಿಗೆ ಎಲ್ಲವೂ ಸ್ಮರಣೆಯಲ್ಲಿತ್ತು. ಆದರೆ ಈಗ ನಾವು ಕರಣಾನುಯೋಗದ ಸ್ವಾಧ್ಯಾಯ ಮಾಡತೊಡಗಿದರೆ ಎಲ್ಲಿಯಾದರೂ ತರಗತಿ (ಕ್ಲಾಸ) ತಗೆದುಕೊಂಡರೆ ಕೆಲವರಿಗೆ ಅಪಥ್ಯವಾಗುತ್ತದೆ.

ಇಲ್ಲಿ ದೇವಲಾಲಿಯಲ್ಲಿ ಪ್ರಶಿಕ್ಷಣ ಶಿಬಿರದೊಳಗೆ ನಾನು ಪಂಚಲಬ್ಧಿಯ ಕ್ಲಾಸು ತಗೆದುಕೊಳ್ಳುತ್ತಿದ್ದೆನು. ಓರ್ವ ಸಹೋದರಿಯು ನನ್ನ ಹತ್ತಿರ (ಬಿಡುವಿನ ಸಮಯದಲ್ಲಿ) ಬಂದು 'ತಾವು ಗುರುದೇವರ ಪ್ರವಚನವನ್ನು ಎಂದಾದರೂ ಆಲಿಸಿರುವಿರೇನು' ಎಂದು ಕೇಳಿದಳು. ಅದಕ್ಕೆ ನಾನು 'ಅಹುದು, ನಾವು ತುಂಬ ಭಾಗ್ಯಶಾಲಿಯಿದ್ದೇವೆ ಅಂತೆಯೇ ಮುಂಬಯಿಯಲ್ಲಂತೂ ಅನೇಕ ಬಾರಿ ಗುರುದೇವರ ಪ್ರವಚನಗಳನ್ನು ಆಲಿಸಿದ್ದೆವು ಅಲ್ಲದೆ ಸೋನಗಢಕ್ಕೆ ಹೋಗಿಯೂ ಕೂಡ ಅಲ್ಲಿ ತಿಂಗಳುಗಟ್ಟಲೆ ಉಳಿದುಕೊಳ್ಳುತ್ತಿದ್ದೆವು, ಅಲ್ಲಿಯೂ ನಾವು ಪ್ರವಚನಗಳನ್ನು ಕೇಳಿದ್ದೇವೆ. ಭೂಪಾಲ, ಬೆಂಗಳೂರು, ಬಡೋದಾದಲ್ಲಿ ನಡೆದ ಪಂಚಕಲ್ಯಾಣಕಗಳಲ್ಲಿಯೂ ೮-೮ ದಿವಸಗಳವರೆಗೆ ಅವರ ಪ್ರಚವನಗಳ ಲಾಭ ಪಡೆದಿದ್ದೇವೆ' ಎಂದಾಗ, ಆ ಸಹೋದರಿಯು ತನ್ನ ಪ್ರಶ್ನೆಯನ್ನು ಪುನರುಚ್ಚರಿಸುತ್ತ 'ತಾವು ನಿಜವಾಗಿ ಗುರುದೇವರ ಪ್ರವಚನವನ್ನು ಆಲಿಸಿದ್ದೀರಾ' ಎನ್ನುತ್ತಾಳೆ. ಆಗ ಈ ಪ್ರಶ್ನೆಯಲ್ಲಿ ಅವಶ್ಯವಾಗಿ ಏನೋ ರಹಸ್ಯವಿದೆಯೆನಿಸಿತು.

ಆಗ ನಾನು, 'ನಾವಂತೂ ಭಾಗ್ಯಶಾಲಿಗಳಿದ್ದೇವೆ ಅವರಿಂದಲೇ ನಾವು ಏನೆಲ್ಲವನ್ನು ಪಡೆದಿದ್ದೇವೆ. ನಮ್ಮ ಜನ್ಮವಂತೂ ದಿಗಂಬರದಲ್ಲಿ ಆಗಿದೆ. ಈ ಗ್ರಂಥಗಳಂತೂ ನಮ್ಮ ಮನೆಯಲ್ಲಿದ್ದವು ಅವರದೇ ಉಪಕಾರದಿಂದ ನಾವು ಇವನ್ನು ಓದಿ ತತ್ತ್ವವನ್ನು ತಿಳಿಯುವಂತಾಯಿತು' ಎನ್ನುತ್ತಿದ್ದಂತೆ ಅವಳು ಪುನಃ 'ಇಲ್ಲ, ತಾವು ಗುರುದೇವರ ಪ್ರವಚನವನ್ನು ಕೇಳಿಲ್ಲ' ಎನ್ನುತ್ತಾಳೆ. ಆಗ ನಾನು 'ಹಾಗಾದರೆ ತಾವು ಹೀಗೇಕೆ ಹೇಳುತ್ತಿರುವಿರಿ ಎಂಬುದನ್ನು ತಾವೇ ಹೇಳಿರಿ, ನನಗೇನು ಅರ್ಥವಾಗುತ್ತಿಲ್ಲ' ಎಂದಾಗ 'ಗುರುದೇವರು ಎಂದೂ ಕರಣಾನುಯೋಗದ ಮೇಲೆ ಪ್ರವಚನ ಮಾಡಿಲ್ಲ, ತಾವೇಕೆ ಮಾಡುತ್ತಿರುವಿರಿ ? ಕರಣಾನುಯೋಗದ ಮಾತುಗಳನ್ನು ಹೇಳುವ ಸಾಹಸವು ತಮಗೆ ಹೇಗೆ ಬಂತು ?' ಎಂದು ಕೇಳಿದಳು.

ಆಗ ನಾನು 'ಓಹೋ, ತುಂಬ ಒಳ್ಳೆಯ ಮಾತು ಇದೆ. ಗುರುದೇವರು ಕೆಲವು ಭವಗಳ ನಂತರ ತೀರ್ಥಂಕರರಾಗುತ್ತಾರೆಂದು ನಾವು ಆಲಿಸಿದ್ದೇವೆ, ಈ ಮಾತಿನ ಮೇಲೆ ತಮಗೆ ವಿಶ್ವಾಸವಿದೆಯೇನು ?' - ಎಂದು ಕೇಳಿದಾಗ, ಅಹುದು ನನಗೆ ಪೂರ್ಣ ವಿಶ್ವಾಸವಿದೆ ಎಂದು ಹೇಳಿದಳು. 'ಹಾಗಾದರೆ ಯಾವಾಗ ಅವರ ದಿವ್ಯಧ್ವನಿಯು ಹೊರಡುವುದು ಆಗ ಅವರು ಯಾವ ಅನುಯೋಗದ ಉಪದೇಶ ಕೊಡಬಹುದಾಗಿದೆ ? ಕೇವಲ

ದ್ರವ್ಯಾನುಯೋಗವನ್ನೇ ಹೇಳಬಹುದೋ ? ಅಥವಾ ನಾಲ್ಕು ಅನುಯೋಗಗಳ ಉಪದೇಶ ಕೊಡಬಹುದು?' ಎಂದು ನಾನು ಕೇಳಿದಾಗ ಅವಳು ಯಾವುದೇ ಉತ್ತರ ಕೊಡದೆ ಹೊರಟು ಹೋದಳು.

ಇನ್ನು ನಾನು ತಮಗೆ ಕೇಳುವುದೇನೆಂದರೆ - ಗುರುದೇವರು ಧವಲಾ ಗ್ರಂಥದ ಮೇಲೆ ಪ್ರವಚನ ಮಾಡಿದ್ದರು, ತಮಗೇನಾದರೂ ಗೊತ್ತಿದೆಯೇನು ? ಆದರೆ ಆ ಸಮಯದಲ್ಲಿ ಅವುಗಳ ಧ್ವನಿ ಮುದ್ರಣ (ರೇಕಾರ್ಡಿಂಗ)ವಾಗಿಲ್ಲ ನೋಡಿರಿ, ಇಲ್ಲಿಯೇ ಎದುರಿಗೆ ಸೋನಗಢದ ಬ್ರಹ್ಮಚಾರೀ ಸಹೋದರಿಯರು ಕುಳಿತಿದ್ದಾರೆ ಮತ್ತು ಅವರು ಅಂದು ಪ್ರತ್ಯಕ್ಷ ಉಪಸ್ಥಿತರಿದ್ದರು ಅವರು ಹೇಳುತ್ತಿದ್ದಾರೆ - ಧವಲಾದ ಎಂಟು ಭಾಗಗಳ - ಎಂಟು ಪುಸ್ತಕಗಳ ಮೇಲೆ ಎರಡು ಬಾರಿ ಆದ್ಯೋಪಾಂತ ಸ್ವಾಧ್ಯಾಯವಾಗಿದೆಯೆಂದು ಸ್ಪಷ್ಟಪಡಿಸುತ್ತಿದ್ದಾರೆ ಇವರು ಪ್ರತ್ಯಕ್ಷ ಸಾಕ್ಷಿಯಿಲ್ಲವೇನು ?

ತಮ್ಮ ಮತಿ ಕಲ್ಪನೆಯಿಂದ ತಪ್ಪು ಅರ್ಥ ಮಾಡುವಂಥ ಅಂಥ ಭಕ್ತರೇ ಗುರುದೇವರಂಥ ಮಹಾಪುರುಷರಿಗೆ ದೋಷ ತಗಲಿಸುತ್ತಾರೆ, ಇಂಥ ಹುರುಳಿಲ್ಲದ ಮಾತುಗಳನ್ನಾಡುತ್ತಾರೆ. ಕರಣಾನುಯೋಗವು ಯಾರಿಗಾದರೂ ತಿಳಿದು ಬರದಿದ್ದರೆ, ಅವರು ಅದರ ಅಭ್ಯಾಸ ಮಾಡದೆ ಇರುವ ಮಾತು ಬೇರೆಯಿದೆ ಆದರೆ ಒಂದು ವೇಳೆ ನಾವು ಅದರ ನಿಷೇಧ ಮಾಡುತ್ತಿದ್ದರೆ ಅದಂತೂ ಆ ಸರ್ವಜ್ಞ ಭಗವಂತರ ಅವಮಾನವಿದೆ. ನಾವಂತೂ ತ್ರಿಕಾಲೀ ಧ್ರುವ ಜ್ಞಾಯಕ ಭಗವಾನ ಆತ್ಮರಿದ್ದೇವೆ ಮತ್ತು ಕರಣಾನುಯೋಗವು ಅಪ್ರಯೋಜನಭೂತವಿದೆ ಅದನ್ನು ಓದಬೇಡಿರಿ ಅಥವಾ ಅದನ್ನು ಓದುವುದರ ಅವಶ್ಯಕತೆಯಾದರೂ ಏನಿದೆ - ಎಂದು ಹೇಳುವವರೂ ಇದ್ದಾರೆ. ನೋಡಿರಿ, ಇಲ್ಲಿ ಬ್ರ. ವಿಮಲಾಬೆನ್ ಇದ್ದಾರೆ, ಅವರು ಕರಣಾನುಯೋಗದ ವಿಶೇಷಜ್ಞರಿದ್ದಾರೆ. ಪಂ. ಹೇಮಚಂದ್ರರು, ಪಂ. ದೇವೇಂದ್ರಕುಮಾರ ಶಾಸ್ತ್ರಿ, ನಿಮಚರಂಥ ವಿದ್ವಾಂಸ ಮಹಾನುಭಾವರು ಕುಳಿತಿದ್ದಾರೆ. ಅವರೆಲ್ಲರೂ ಮತ್ತು ಉಳಿದಂತೆ ಇಲ್ಲಿ ಉಪಸ್ಥಿತರಿರುವ ನೂರಾರು ಸಂಖ್ಯೆಯ ಜೀವರುಗಳು ಕರಣಾನುಯೋಗದ ಅಭಿರುಚಿಯುಳ್ಳವರೂ ಇದ್ದಾರೆ, ಅದರ ವಿಶೇಷ ಅಭ್ಯಾಸ ಮಾಡಿರುವಂಥವರೂ ಇದ್ದಾರೆ.

ಇದಂತೂ ಭಗವಂತರ ವಾಣಿಯಿದೆ ನಾವು-ತಾವೆಲ್ಲರೂ ಒಟ್ಟಿಗೆ ಇದನ್ನು ಆಲಿಸುತ್ತಿದ್ದೇವೆ. ಗುರುದೇವರ ಪ್ರತಾಪದಿಂದ, ಅವರ ಉಪದೇಶದಿಂದ - ಅವರ ನಿಮಿತ್ತದಿಂದ ವರ್ತಮಾನದಲ್ಲಿ ಮುಮುಕ್ಷು ಸಮಾಜವು ತತ್ತ್ವಜ್ಞಾನವನ್ನು ಪಡೆದುಕೊಂಡಿದೆ - ದ್ರವ್ಯಾನುಯೋಗದ ಮರ್ಮವನ್ನು ತಿಳಿಯುವಂತಾಗಿದೆ. ನಗರ-ನಗರಗಳಲ್ಲಿ ಗ್ರಾಮ-ಗ್ರಾಮಗಳಲ್ಲಿ ಜೈನ ಸಾಹಿತ್ಯದ ವಾಚನ-ಶ್ರವಣಾದಿಗಳು ನಡೆಯುತ್ತಿವೆ. ಕರಣಾನುಯೋಗದ ಅಭ್ಯಾಸದಿಂದ ದ್ರವ್ಯಾನುಯೋಗದ ಸಮಸ್ತ ಸಿದ್ಧಾಂತಗಳಿಗೆ ಬಹಳಷ್ಟು ಬಲವು ಪ್ರಾಪ್ತವಾಗುತ್ತದೆ, ನಮ್ಮ ತತ್ತ್ವ ನಿರ್ಣಯದಲ್ಲಿ ದೃಢತೆಯು ಬರುತ್ತದೆ. ಒಂದು ವೇಳೆ ಕರ್ಮಗಳ ಸಂಬಂಧದಲ್ಲಿ, ಭೂಗೋಲದ ರಚನೆಯ ಕುರಿತಾಗಿ ನಾವು ಯಾವುದಾದರೂ ಅಸತ್ಯ ಕಲ್ಪನೆ ಮಾಡಿಕೊಂಡರೆ ನಮ್ಮ ಜ್ಞಾನವು ವಿಪರೀತವಾಗುವುದು, ಅಂಥ ವಿಪರೀತ ಜ್ಞಾನದ ಜೊತೆಗೆ ಸಮ್ಯಕ್ ಶ್ರದ್ಧೆಯು ಹೇಗೆ ಆಗುವ ಸಾಧ್ಯತೆಯಿದೆ. ನಮಗೆ ಸಮ್ಯಗ್ಜ್ಞಾನವಿಲ್ಲದ ಸಮ್ಯಗ್ದರ್ಶನವು ಬೇಕಾಗಿದೆಯೇನು ಅಥವಾ ಹಾಗೆ ಇರುವ ಸಾಧ್ಯತೆಯಾದರೂ ಇದೆಯೇನು ? ಯಾವುದಾದರೂ ಗ್ರಂಥದ ವಿಶಿಷ್ಟ ಗಾಥೆಯನ್ನು ಓದಿ ನಾವು ಸಮ್ಯಗ್ದರ್ಶನವನ್ನು ಬಯಸಿದರೆ ಆಗಬಹುದೇನು ? ತಿಳಿಯುವುದು ಜ್ಞಾನದ ಸ್ವಭಾವವಿದೆ. ಯಥಾರ್ಥ ತಿಳಿಯುವ ಅವಸರವು ಈಗ ನಮಗೆಲ್ಲ ಪ್ರಾಪ್ತವಾಗಿದೆ. ನಮ್ಮ ಹತ್ತಿರ ಸಮಯವಿದೆ ಮತ್ತು ವಿಧ-ವಿಧದ ಗ್ರಂಥಗಳು ಉಪಲಬ್ಧವಿವೆ. ಉಪಯೋಗ ಮಾಡಿಕೊಳ್ಳುವುದು ಕರ್ತವ್ಯವಿದೆ !

ಜ್ಞಾನದ ವಿಷಯವಂತೂ ಸಂಪೂರ್ಣ ಲೋಕಾಲೋಕವಿದೆ. ಇಲ್ಲಿ ಯಾವುದು ದೃಷ್ಟಿಯ ವಿಷಯವಿದೆ ಮತ್ತು ಯಾವುದು ಜ್ಞಾನದ ವಿಷಯವಿದೆಯೆಂಬುದರ ಪರಿಚಯವೂ ಇಲ್ಲ. ಈಗ ಅದು ನಮ್ಮ ವಿಷಯವಲ್ಲ ಆದರೆ ಜನರ ಮಾತುಗಳನ್ನು ಕೇಳಿ ಹಾಗೂ ಯಾವುದೋ ಅನುಯೋಗದ ನಿಷೇಧವನ್ನಾಲಿಸಿ ಖೇದವಾಗುತ್ತದೆ. ನಾಲ್ಕೂ ಅನುಯೋಗಗಳನ್ನು ಸರ್ವಜ್ಞರ ದಿವ್ಯಧ್ವನಿಯ ಆಧಾರದಿಂದಲೇ ರಚಿಸಲಾಗಿದೆ ಮತ್ತು ಅವೆಲ್ಲವೂ ವೀತರಾಗತೆಯ ಉತ್ಪಾದಕವಿವೆ- ಪೋಷಕವಿವೆ, ಇವುಗಳ ನಿಷೇಧ ಮಾಡಿದರೆ ಸರ್ವಜ್ಞ ಭಗವಂತರ ನಿಷೇಧವಾಗುತ್ತದೆ, ಅವರ ವಾಣಿಯ ನಿಷೇಧವಾಗುತ್ತದೆ; ತಮ್ಮ ಸರ್ವಜ್ಞ ಸ್ವಭಾವದ ನಿಷೇಧವಾಗುತ್ತದೆ ಮತ್ತು ಪ್ರಕಟವಾಗಬೇಕಾದ ವೀತರಾಗ ಭಾವದ ನಿಷೇಧವಾಗುತ್ತದೆ. ಸರ್ವಜ್ಞ ಸ್ವಭಾವದ ನಿಷೇಧ ಮಾಡಿ, ಅದೇ ಸರ್ವಜ್ಞ ಸ್ವಭಾವದ ಆಶ್ರಯದಿಂದ ಪ್ರಗಟವಾಗುವ ವೀತರಾಗಮಯ ಮೋಕ್ಷಮಾರ್ಗದ ಪ್ರಾಪ್ತಿಯ ಚೇಷ್ಟೆ ಮಾಡಿದರೆ ಅದು ಭ್ರಾಂತಿಯೇ ಇದೆ. ನಡೆಯಿರಿ, -

ನಮ್ಮ ಚರ್ಚೆಯು ಗಂಗಾ ನದಿಯ ವಿಷಯವಾಗಿ ನಡೆದಿತ್ತು. ಗುಹೆಯಲ್ಲಿ ಹರಿಯುತ್ತ ಇವೆರಡು ನದಿಗಳು - ಉನ್ಮಗ್ನಜಲಾ ಮತ್ತು ನಿಮಗ್ನಜಲಾ ಗಂಗಾ ನದಿಯಲ್ಲಿ ಬಂದು ಸೇರುತ್ತವೆ. ಗುಹೆಯಲ್ಲಿ ಹರಿಯುತ್ತ ಗಂಗಾ ನದಿಯು ದಕ್ಷಿಣ ದ್ವಾರದಿಂದ ಹೊರಗೆ ಬರುತ್ತದೆ, ನೇರವಾಗಿ ದಕ್ಷಿಣ ದಿಕ್ಕಿನಲ್ಲಿ ದಕ್ಷಿಣ ಭರತದ ಅರ್ಧ ಭಾಗದವರೆಗೆ ಹರಿದು ಪೂರ್ವ ದಿಕ್ಕಿನ ಕಡೆಗೆ ತಿರುಗುತ್ತದೆ ಮತ್ತು ಜಂಬೂದ್ವೀಪದ ಕೋಟೆಯ ಮಾಗಧವೆಂಬ ಹೊರಗಿನ ದ್ವಾರದೊಳಗಿಂದ ಹಾಯ್ದು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತದೆ. ನಮ್ಮಲ್ಲಿ ಯಾವ ರೀತಿ ಸುತ್ತಾಲೆಯಲ್ಲಿ ಅಥವಾ ಸಂಯುಕ್ತ ಗೋಡೆಯಲ್ಲಿ (ಕಂಪಾವುಂಡ ಗೋಡೆಯಲ್ಲಿ) ಬಾಗಿಲು (ಗೇಟ್ಸ್) ಇರುತ್ತವೆ, ಅದರ ಮಗ್ಗುಲಿಗೆ ಸ್ತಂಭ (ಪಿಲ್ಲರ್) ಇರುತ್ತದೆ ಹಾಗೆ ನದಿಗಳು ಎಲ್ಲಿ ಸಮುದ್ರದೊಳಗೆ ಪ್ರವೇಶ ಮಾಡುತ್ತವೆ ಅಲ್ಲಿ ದ್ವಾರ (ಗೇಟ್ಸ್)ಗಳಿರುತ್ತವೆ. ಜಂಬೂದ್ವೀಪದ ಅಂತಿಮಭಾಗದಲ್ಲಿ ಸಮುದ್ರದ ದಡದ ಮೇಲೆ ಗೋಡೆಯಂಥ ರಚನೆಯಿರುತ್ತದೆ ಅದನ್ನು ಜಗತಿಯೆಂದು ಹೇಳುತ್ತಾರೆ ಅದರಲ್ಲಿ ದ್ವಾರಗಳಿರುತ್ತವೆ.

ಈಗ ನಾವು ಗಂಗಾ ನದಿಯ ವರ್ಣನೆಯನ್ನು ನೋಡಿಯಾಯಿತು. ಇನ್ನು ಸಿಂಧು ನದಿಯ ವರ್ಣನೆಯನ್ನು ನೋಡೋಣ, ಇದು ಕೂಡ ಹಿಮವಾನ ಪರ್ವತದ ಮೇಲೆ ಇರುವ ದ್ರಹದಿಂದ ಹೊರಡುತ್ತದೆ. ಆದರೆ ಪಶ್ಚಿಮ ದಿಕ್ಕಿನ ವಜ್ರಧರದಿಂದ ಹೊರಟು ಪಶ್ಚಿಮಾಭಿಮುಖವಾಗಿ ೫೦೦ ಯೋಜನ ಹರಿದು ಹೋಗುತ್ತದೆ, ನಂತರ ದಕ್ಷಿಣದತ್ತ ತಿರುಗಿ ಹಿಮವಾನ ಪರ್ವತದ ದಕ್ಷಿಣ ತಟದವರೆಗೆ ಹರಿಯುತ್ತ ಹೋಗುತ್ತದೆ. ಅಲ್ಲಿಯೂ ಗಂಗೆಯ ಸಮಾನ ಗೋಮುಖಾಕಾರ-ವೃಷಭಾಕಾರದ ಪ್ರಣಾಲಿ ಇರುತ್ತದೆ, ಅಲ್ಲಿಂದ ೨೫ ಯೋಜನ ಮುಂದೆ ಹೋಗಿ ಕೆಳಗೆ ಬೀಳುತ್ತದೆ. ಅಲ್ಲಿ ಪರ್ವತದ ಕೆಳಗೆ ಸಿಂಧು ಕುಂಡವಿದೆ. ಗಂಗಾ ಕುಂಡದ ಹಾಗೆ ಇಲ್ಲಿಯೂ ಎಲ್ಲ ರಚನೆಯಿರುತ್ತದೆ. ಇಲ್ಲಿಯೂ ದೇವಿಯ ಅರಮನೆಯ ಮೇಲೆ ಸಿಂಹಾಸನದಲ್ಲಿ ಜಿನಬಿಂಬವು ವಿರಾಜಮಾನವಿದೆ. ಅದರ ಮೇಲೆ ಸಿಂಧು ನದಿಯ ಪ್ರವಾಹವು ಬೀಳುತ್ತದೆ. ಕುಂಡದೊಳಗಿಂದ ದಕ್ಷಿಣದ ಕಡೆಗೆ ಹರಿಯುತ್ತ ವಿಜಯಾರ್ಧ ಪರ್ವತದ ತಮಿಸ್ರವೆಂಬ ಹೆಸರಿನ ಗುಹೆಯಲ್ಲಿ ಪ್ರವೇಶ ಮಾಡುತ್ತದೆ ಮತ್ತು ಅದರ ದಕ್ಷಿಣ ದ್ವಾರದಿಂದ ಹೊರಗೆ ಬಂದು ದಕ್ಷಿಣ ಭರತದ ಅರ್ಧ ಭಾಗದವರೆಗೆ ದಕ್ಷಿಣ ದಿಕ್ಕಿನಲ್ಲಿ ಹರಿದು ಮತ್ತೇ ಪಶ್ಚಿಮದ ಕಡೆಗೆ ತಿರುಗುತ್ತದೆ ಮತ್ತು ಜಂಬೂದ್ವೀಪದ ಕೋಟೆಯ ಪ್ರಭಾಸವೆಂಬ ಹೆಸರಿನ ದ್ವಾರದಿಂದ ಹಾಯ್ದು ಹೋಗಿ ಲವಣ ಸಮುದ್ರದಲ್ಲಿ ಪ್ರವೇಶ ಮಾಡುತ್ತದೆ.

ಭರತ ಕ್ಷೇತ್ರದಲ್ಲಿ ಒಂದು ವಿಜಯಾರ್ಧ ಮತ್ತು ಗಂಗಾ-ಸಿಂಧು ಎರಡು ನದಿಗಳ ಕಾರಣದಿಂದ ಆರು ವಿಭಾಗಗಳಾಗಿವೆ. ಅವುಗಳಲ್ಲಿನ ವಿಜಯಾರ್ಧದ ದಕ್ಷಿಣದಲ್ಲಿ ಎರಡು ನದಿಗಳ ಮಧ್ಯದಲ್ಲಿ ಯಾವ ವಿಭಾಗವಿದೆ ಅದು ಆರ್ಯಖಂಡವಿದೆ, ಉಳಿದ ಐದು ಮ್ಲೇಚ್ಛ ಖಂಡಗಳಿವೆ. ಇಲ್ಲಿ ಚಾರ್ಟದಲ್ಲಿ ವಿಜಯಾರ್ಧದ ಉತ್ತರದಲ್ಲಿ ಎರಡು ನದಿಗಳ ಮಧ್ಯದಲ್ಲಿ ಯಾವ ವಿಭಾಗವಿದೆ, ಅದರಲ್ಲಿ ವೃಷಭಗಿರಿಯೆಂಬ ಹೆಸರಿನ ಪರ್ವತವನ್ನು ತೋರಿಸಲಾಗಿದೆ. ಈ ಹೆಸರನ್ನು ಕೇಳಿದ್ದೇವೆಯಲ್ಲವೇನು ? ಅಹುದು ; ಪೂಜೆಯಲ್ಲಿ ಬರುತ್ತದೆ 'ಭರತ ಚಲೇ ವೃಷಭಾಚಲ ಪರ' ಚಕ್ರವರ್ತಿಗಳು ಆರು ಖಂಡಗಳನ್ನು ಜಯಿಸಿ ಬರುತ್ತಾರೆ ಆಗ ಈ ವೃಷಭಾಚಲ ಪರ್ವತದ ಮೇಲೆ ತಮ್ಮ ಪ್ರಶಸ್ತಿ-ತಮ್ಮ ಹೆಸರನ್ನು ಬರೆಯುವ ಸಲುವಾಗಿ ಹೋಗುತ್ತಾರೆ. ಆದರೆ ಅಲ್ಲಿ ಸ್ವಲ್ಪವೂ ಸ್ಥಳಾವಕಾಶವಿರುವುದಿಲ್ಲ, ಆಗ ಮೊದಲು ಆಗಿ ಹೋದ ಒಬ್ಬ ಚಕ್ರವರ್ತಿಯ ಹೆಸರನ್ನು ಅಳಿಸಿ ಹಾಕಿ ತಮ್ಮ ಹೆಸರನ್ನು ಬರೆಯಬೇಕಾಗುತ್ತದೆ. ಅನಾದಿಯಿಂದಲೇ ಚಕ್ರವರ್ತಿಗಳು ಆಗುತ್ತ ಬಂದಿದ್ದಾರೆಂಬುದನ್ನು ತಿಳಿದ ಮೇಲೆ 'ನಾನೇ ಚಕ್ರವರ್ತಿಯಾದೆನೆ'ಂಬ ಗರ್ವ ಉಂಟಾಗುವುದಿಲ್ಲ.

ಗಂಗಾ-ಸಿಂಧುಗಳಂತೂ ದ್ರಹದ ಪೂರ್ವ-ಪಶ್ಚಿಮ ದ್ವಾರಗಳಿಂದ ಹೊರಡುತ್ತವೆ. ಹಾಗೆಯೇ ರಕ್ತಾ-ರಕ್ತೋದಾ ನದಿಗಳು ಶಿಖರೀ ಪರ್ವತದ ಮೇಲಿರುವ ಪುಂಡರೀಕ ದ್ರಹದ ಪೂರ್ವ-ಪಶ್ಚಿಮ ದ್ವಾರದಿಂದ ಹೊರಗೆ ಬಂದು ಪೂರ್ವ-ಪಶ್ಚಿಮ ದಿಕ್ಕಿನಲ್ಲಿ ೫೦೦-೫೦೦ ಯೋಜನ ಹೋಗಿ ಉತ್ತರದ ಕಡೆಗೆ ತಿರುಗಿ ವೃಷಭಾಕಾರದ ಪ್ರಣಾಲಿಯಿಂದ ಕೆಳಗೆ ಕುಂಡದಲ್ಲಿ ಸ್ಥಿತವಿರುವ ದ್ವೀಪ, ಪರ್ವತ, ಅರಮನೆ, ಜಿನಬಿಂಬದ ಅಂಥದೇ ರಚನೆಯಿದೆ, ಅಲ್ಲಿ ಜಿನಬಿಂಬದ ಜಡೆಯುಕ್ತ ಮಸ್ತಕದ ಮೇಲೆ ಹೋಗಿ ಬೀಳುತ್ತವೆ ಮತ್ತು ಉತ್ತರದಲ್ಲಿ ಹರಿಯುತ್ತ ಐರಾವತದ ವಿಜಯಾರ್ಧ ಗುಹೆಯೊಳಗಿಂದ ಹಾಯ್ದು ಉತ್ತರದಲ್ಲಿ ಹರಿಯುತ್ತ ಪೂರ್ವ-ಪಶ್ಚಿಮದತ್ತ ತಿರುಗಿಕೊಂಡು ಲವಣ ಸಮುದ್ರದಲ್ಲಿ ಹೋಗಿ ಸೇರುತ್ತವೆ.

ಉಳಿದ ಎಲ್ಲ ನದಿಗಳು ದ್ರಹಗಳ ದಕ್ಷಿಣ ಮತ್ತು ಉತ್ತರ ದ್ವಾರಗಳಿಂದ ಹೊರಗೆ ಬಂದು ದಕ್ಷಿಣ ಅಥವಾ ಉತ್ತರದಲ್ಲಿ ಹರಿಯುತ್ತ ಆ ಕ್ಷೇತ್ರದ ನಾಭಿಗಿರಿಯ ನಾಲ್ಕನೆಯ ಒಂದು ಭಾಗ ಪ್ರಮಾಣ ಪ್ರದಕ್ಷಿಣೆ ಹಾಕಿ ಪೂರ್ವದಲ್ಲಿ ಅಥವಾ ಪಶ್ಚಿಮದಲ್ಲಿ ಹರಿಯುತ್ತ ಲವಣ ಸಮುದ್ರದಲ್ಲಿ ಹೋಗಿ ಸೇರುತ್ತವೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹದಿಮೂರನೆಯ ತೀರ್ಥಂಕರರಾದ
ಶ್ರೀ ಭದ್ರಬಾಹು ಭಗವಂತರಿಗೆ ಜಯವಾಗಲಿ.

★★★★★

ಶುದ್ಧಕೆ ಶ್ರಾಮಣ್ಯವೆಂದು ಹೇಳಿದೆ ಮೇಣ್ಶುದ್ಧಕೆ ದರ್ಶನ-ಜ್ಞಾನವೆಂದು ಹೇಳಿದೆ ।
ಶುದ್ಧಕೆ ನಿರ್ವಾಣಮಪ್ಪುದು ಅದೇ ಸಿದ್ಧಮಪ್ಪುದು ಅದಕೆ ನಮನವಿರಲಿ

೧೪. ಭೋಗಭೂಮಿ, ವಿದೇಹ ಕ್ಷೇತ್ರ

ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಮೂರು ಲೋಕಗಳಿಗೆ ಸಂಬಂಧಿಸಿದ ರಚನೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಈಗ ಮಧ್ಯಲೋಕದ ಪ್ರಕರಣವು ನಡೆಯುತ್ತಲಿದೆ. ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪ ಸಮುದ್ರಗಳಿವೆ ಅವುಗಳಲ್ಲಿ ಮಧ್ಯದೊಳಗಿನ ಎರಡೂವರೆ ದ್ವೀಪ ಪ್ರಮಾಣ ಮನುಷ್ಯ ಲೋಕವಿದೆ. ಅಲ್ಲಿ ಪಂಚಮೇರು ಸಂಬಂಧದ ಐದು-ಐದು ಭರತ, ಐರಾವತ ಮತ್ತು ವಿದೇಹ ಕ್ಷೇತ್ರಗಳಿವೆ. ಅಲ್ಲಿ ಕರ್ಮಭೂಮಿ ಮತ್ತು ಭೋಗಭೂಮಿಗಳು ಎಲ್ಲಿ ಇರುತ್ತವೆಯೆಂಬುದರ ಚರ್ಚೆಯನ್ನಂತೂ ಮಾಡಿಯಾಗಿದೆ. ಈಗ ಇಲ್ಲಿ ಭೋಗ ಭೂಮಿಯಲ್ಲಿ ಎಂಥ ಪರಿಸ್ಥಿತಿಯಿರುತ್ತದೆ ಎಂಬುದರ ಅವಲೋಕನೆ ಮಾಡೋಣ.

ಉತ್ತಮ ಭೋಗಭೂಮಿಯ ಉತ್ಕೃಷ್ಟ ಆಯುವು ಮೂರು ಪಲ್ಯದ್ದಿರುತ್ತದೆ. ಕುರುಕ್ಷೇತ್ರ - ಉತ್ತರ ಕುರು ಮತ್ತು ದಕ್ಷಿಣ ಕುರು ಕ್ಷೇತ್ರದಲ್ಲಂತೂ ಯಾವಾಗಲೂ ಉತ್ತಮ ಭೋಗಭೂಮಿಯಿರುತ್ತದೆ, ಆದರೆ ಭರತ ಮತ್ತು ಐರಾವತ ಕ್ಷೇತ್ರಗಳಲ್ಲಿ ಅವಸರ್ಪಿಣಿಯ ಮೊದಲನೆಯ ಕಾಲದಲ್ಲಿ ಉತ್ತಮ ಭೋಗಭೂಮಿಯಿರುತ್ತದೆ ಅದು ನಾಲ್ಕು ಕೋಟಾಕೋಟಿ ಸಾಗರದವರೆಗೆ ನಡೆಯುತ್ತದೆ ಅದರ ನಂತರ ಇಲ್ಲಿಯೇ ಮಧ್ಯಮ ಭೋಗಭೂಮಿಯಾಗುತ್ತದೆ. ಯಾವಾಗ ಅವಸರ್ಪಿಣಿಯೆಂದು ಹೇಳುತ್ತೇವೆಂದ ಮೇಲೆ ಅದರಲ್ಲಿ ಕ್ರಮದಿಂದ ಆಯು, ಶರೀರದ ಎತ್ತರ ಹಾಗೂ ಅವಗಾಹನವು ಕಡಿಮೆಯಾಗುತ್ತ ಹೋಗುತ್ತದೆ ಆದರೆ ಆಹಾರವು ಹೆಚ್ಚುತ್ತ ಹೋಗುತ್ತದೆ. ಉತ್ತಮ ಭೋಗಭೂಮಿಯಲ್ಲಿ ಶರೀರದ ಎತ್ತರವು ೬೦೦೦ ಧನುಷ್ಯ ಎಂದರೆ ಮೂರು ಹರದಾರಿ ಇರುತ್ತದೆ. ಅಲ್ಲಿ ಮೂರು ದಿವಸಗಳು ಕಳೆದ ಮೇಲೆ ಒಂದು ಬಾರಿ ಭೋಜನವಿರುತ್ತದೆ ಅದು ಕೂಡ ಬದರೀಫಲ - ಚಿಕ್ಕ ಬೋರಿ ಹಣ್ಣಿನಷ್ಟು ಕಲ್ಪವೃಕ್ಷಗಳಿಂದ ಕೊಡಲ್ಪಡುವಂಥ ದಿವ್ಯ ಆಹಾರವನ್ನು ಅಲ್ಲಿಯ ಜೀವರುಗಳು ಗ್ರಹಣ ಮಾಡುತ್ತಾರೆ. ಮನುಷ್ಯರ ಶರೀರದ ವರ್ಣವು ಉದಯವಾಗುತ್ತಿರುವ ಸೂರ್ಯನ ಸಮಾನವಿರುತ್ತದೆ.

ಶರೀರದ ಎತ್ತರ ಮತ್ತು ಆಯುವು ಕಡಿಮೆ ಕಡಿಮೆಯಾಗುತ್ತ ಕೊನೆಯಲ್ಲಿ ೪೦೦೦ ಧನುಷ್ಯ ಮತ್ತು ಎರಡು ಪಲ್ಯವಾಗುತ್ತದೆ ಅದು ಮಧ್ಯಮ ಭೋಗಭೂಮಿಯ ಉತ್ಕೃಷ್ಟ ಎತ್ತರ ಹಾಗೂ ಆಯುವಿರುತ್ತದೆ. ಇಲ್ಲಿ ಎರಡು ದಿನದ ಅಂತರಾಳದಿಂದ ಭೋಜನವಿರುತ್ತದೆ ಅದು ಅಕ್ಷಫಲ ಅಥವಾ ಅಂಟವಾಳದಷ್ಟು ಪ್ರಮಾಣವಿರುತ್ತದೆ ಮನುಷ್ಯರು ಪೂರ್ಣ ಚಂದ್ರನ ಸಮಾನದ ವರ್ಣವುಳ್ಳವರಿರುತ್ತಾರೆ.

ಎರಡನೆಯ ಕಾಲದ ಕೊನೆಯಲ್ಲಿ ಹಾಗೂ ಮೂರನೆಯ ಕಾಲದ ಪ್ರಾರಂಭದಲ್ಲಿ ಶರೀರದ ಎತ್ತರವು ೨೦೦೦ ಧನುಷ್ಯ ಮತ್ತು ಆಯುವು ಒಂದು ಪಲ್ಯವಿರುತ್ತದೆ. ಇಲ್ಲಿ ಒಂದು ದಿನದ ಅಂತರಾಳದಿಂದ ಒಂದು ನೆಲ್ಲಿಕಾಯಿಯಷ್ಟು ಭೋಜನವಿರುತ್ತದೆ. ಈ ಕಾಲದಲ್ಲಿ ಮನುಷ್ಯರು ಹರಿತ ಶ್ಯಾಮವರ್ಣಯುಕ್ತ ಶರೀರವುಳ್ಳವರಿರುತ್ತಾರೆ. ಮೂರೂಭೋಗಭೂಮಿಯ ಜೀವರುಗಳು ಮಲಮೂತ್ರಾದಿ ನಿಹಾರರಹಿತರಿರುತ್ತಾರೆ.

ನಾಲ್ಕನೆಯ ಕಾಲದ ಆದಿಯಲ್ಲಿ ಇಲ್ಲಿ ಕರ್ಮಭೂಮಿಯ ಆರಂಭವಾಗುತ್ತದೆ. ಆಗ ಶರೀರದ ಎತ್ತರವು ೫೦೦ ಧನುಷ್ಯ ಮತ್ತು ಒಂದು ಕೋಟಿ ಪೂರ್ವದ ಆಯುವಿರುತ್ತದೆ. ದಿವಸದಲ್ಲಿ ಒಂದು ಬಾರಿ ಆಹಾರವಿರುತ್ತದೆ. ಶರೀರವು ಐದೂವರ್ಣಯುಕ್ತವಿರುತ್ತದೆ. ಆಯುವು ಕಡಿಮೆ ಕಡಿಮೆಯಾಗುತ್ತ ಕೊನೆಯಲ್ಲಿ ಒಂದು ನೂರಾ

ಇಪ್ಪತ್ತು ವರ್ಷಪ್ರಮಾಣ ಮತ್ತು ಎತ್ತರವು ಏಳು ಮೊಳ ಪ್ರಮಾಣ ಇರುತ್ತದೆ ಅದು ಪಂಚಮ ಕಾಲದ ಪ್ರಾರಂಭದಲ್ಲಿನ ಉತ್ಕೃಷ್ಟದ ಪ್ರಮಾಣವಿರುತ್ತದೆ. ಪಂಚಮ ಕಾಲದ ಕೊನೆಯಲ್ಲಿ ಎರಡು ಮೊಳ ಪ್ರಮಾಣ ಎತ್ತರ ಮತ್ತು ಇಪ್ಪತ್ತು ವರ್ಷ ಪ್ರಮಾಣ ಆಯುವು ಉಳಿದುಬಿಡುತ್ತದೆ. ಇನ್ನು ಆರನೆಯ ಕಾಲದ ಕೊನೆಯಲ್ಲಿ ಎತ್ತರವು ಒಂದು ಮೊಳ ಪ್ರಮಾಣ ಮತ್ತು ಆಯುವು ಹದಿನೈದು ವರ್ಷ ಪ್ರಮಾಣವಿರುತ್ತದೆ. ಪಂಚಮಕಾಲದಲ್ಲಿ ಶರೀರವು ಕಾಂತಿಹೀನ, ರೂಕ್ಷ, ಮಿಶ್ರವರ್ಣವುಳ್ಳದ್ದಿರುತ್ತದೆ. ಜೀವನು ಬಹಳ ಬಾರಿ ಆಹಾರ ಗ್ರಹಣ ಮಾಡುತ್ತಾನೆ. ಆರನೆಯ ಕಾಲದಲ್ಲಿ ಶರೀರವು ಹೊಗೆಯಂತೆ ಶ್ಯಾಮವರ್ಣವುಳ್ಳದ್ದಿರುತ್ತದೆ. ಜೀವನು ಅತ್ಯಂತ ಪ್ರಚುರ ವೃತ್ತಿಯಿಂದ ಪುನಃ ಪುನಃ ಆಹಾರ ಸೇವನೆ ಮಾಡುತ್ತಾನೆ.

ಭೋಗಭೂಮಿಯ ಜೀವರುಗಳು ಮಂದಕಷಾಯಿಗಳಿರುತ್ತಾರೆ. ಅಲ್ಲಿ ಹತ್ತು ಪ್ರಕಾರದ ಕಲ್ಪವೃಕ್ಷಗಳಿರುತ್ತವೆ. ತೂರ್ಯಾಂಗವೆಂಬ ಹೆಸರಿನ ಕಲ್ಪವೃಕ್ಷದಿಂದ ವಾದ್ಯ, ಪಾತ್ರಾಂಗದಿಂದ ಪಾತ್ರೆಗಳು ದೊರಕುತ್ತವೆ. ಭೂಷಣಾಂಗದಿಂದ ಆಭೂಷಣಗಳು ದೊರಕುತ್ತವೆ, ಪಾನಾಂಗದಿಂದ ಪೇಯ ಪದಾರ್ಥಗಳು, ಆಹಾರಾಂಗದಿಂದ ಆಹಾರ, ಪುಷ್ಪಾಂಗದಿಂದ ಪುಷ್ಪ, ಜ್ಯೋತಿರಾಂಗದಿಂದ ಪ್ರಕಾಶವು ಪ್ರಾಪ್ತವಾಗುತ್ತದೆ. ಗೃಹಾಂಗದಿಂದ ಮಂದಿರ ಅರ್ಥಾತ್ ಗೃಹ- ಮಹಲುಗಳು ಪ್ರಾಪ್ತವಾಗುತ್ತವೆ, ವಸ್ತ್ರಾಂಗದಿಂದ ವಸ್ತ್ರಗಳು ಮತ್ತು ದೀಪಾಂಗದಿಂದ ದೀವಿಗೆಗಳು ದೊರಕುತ್ತವೆ. ಈಗ ಭೋಗಭೂಮಿಯ ಸ್ವರೂಪ ನೋಡೋಣ. ಅಲ್ಲಿಯ ಭೂಮಿಯು ಕನ್ನಡಿಯ ಹಾಗೆ ಸ್ವಚ್ಛವಿರುತ್ತದೆ, ರತ್ನಮಯವಿರುತ್ತದೆ, ನಾಲ್ಕು ಅಂಗುಲ ಪ್ರಮಾಣ ಎತ್ತರವಾದ ಉತ್ತಮ ರಸ ಹಾಗೂ ಗಂಧಯುಕ್ತ ಕೋಮಲ ತೃಣಗಳಿಂದ ಸಂಯುಕ್ತವಿರುತ್ತದೆ. ಹಾಲು ಅಥವಾ ಮಿಷ್ಟರಸ, ಜಲ ಅಥವಾ ಮಧುವಿನ ಸಮಾನ ರಸ ಅಥವಾ ಘೃತದಿಂದ ತುಂಬಿಕೊಂಡಿರುವ ಬಾವಿ ಅಥವಾ ಸರೋವರಗಳಿಂದ ಭೋಗಭೂಮಿಯು ವ್ಯಾಪ್ತವಿರುತ್ತದೆ.

ಇಲ್ಲಿ ಮಾತೆಯ ಗರ್ಭದಿಂದ ಸ್ತ್ರೀ-ಪುರುಷ ಜೋಡಿ ಎಂದರೆ ಯುಗಲವು ಉತ್ಪನ್ನವಾಗುತ್ತದೆ. ಇವರ ಜನ್ಮವಾಗುತ್ತಿದ್ದಂತೆಯೇ ಮಾತಾ-ಪಿತ ಇಬ್ಬರದೂ ಮರಣವಾಗುತ್ತದೆ. ಹಾಗಾದರೆ ಆ ಮಕ್ಕಳು ತಂದೆ-ತಾಯಿಯರಿಲ್ಲದೆ ಬೆಳೆಯುತ್ತಾರೇನು ? ಅಹುದು ! ನಾವಿಲ್ಲದೇ ಹೋದರೆ ನಮ್ಮ ಮಕ್ಕಳ ಗತಿಯೇನು? ಎಂಬುದಾಗಿ ನಾವು ಮನ್ನಿಸುತ್ತೇವೆ. ಇಲ್ಲಿಯಂತೂ ಜನರು ಪುತ್ರ ಮೋಹದಲ್ಲಿ ಅಂಧರಾಗಿ ಎಂಥ ಪಾಪವನ್ನು ಬೇಕಾದರೂ ಮಾಡುತ್ತಾರೆ. ಗಳಿಸುವುದೂ ಮಕ್ಕಳ ಸಲುವಾಗಿಯೇ ಅಲ್ಲವೇನು ? ತಮ್ಮ ಸಲುವಾಗಿ ಎರಡು ತುತ್ತು ಚೆನ್ನಾಗಿ ತಿನ್ನಲೂ ಸಮಯ ದೊರಕುವುದಿಲ್ಲ. ಎಲ್ಲವನ್ನೂ ಇಲ್ಲಿಯೇ ಬಿಟ್ಟು ಹೋಗುವುದಿದೆ ಆದರೂ ಧನ ಸಂಗ್ರಹ ಸಂಪಾದನೆಯ ಸಲುವಾಗಿ ಎಂಥೆಂಥ ಪಾಪ ಮಾಡುವುದಿಲ್ಲ ? ಒಂದು ವೇಳೆ ಪುತ್ರನು ಸುಪುತ್ರನಾಗಿದ್ದರೆ ಅವನ ಸಲುವಾಗಿ ಧನ ಸಂಪಾದನೆ ಮಾಡಿ ಇಡುವ ಅವಶ್ಯಕತೆಯೇನಿದೆ ? ಸುಪುತ್ರನಂತೂ ಸ್ವಯಂ ಅರ್ಹನಿರುವುದರಿಂದ ನ್ಯಾಯ ಮಾರ್ಗದಿಂದ ಸಂಪಾದನೆ ಮಾಡಿ ಸುಖದಿಂದ ಜೀವಿಸಬಹುದಾಗಿದೆ ಮತ್ತು ಕುಪುತ್ರನಿದ್ದರೆ ಅವನ ಸಲುವಾಗಿ ಸಂಪಾದನೆ ಮಾಡುವುದು ಸಂಗ್ರಹಿಸುವುದು ನಿರರ್ಥಕವಿದೆ. ಅವನು ಅದನ್ನು ಕಳೆದುಕೊಂಡು ಬಿಡುತ್ತಾನೆ. ಅವನ ಸಲುವಾಗಿ ತಾವೇಕೆ ವ್ಯರ್ಥ ಪಾಪ ಮಾಡುವುದು ? - ಎಂಬುದಾಗಿ ಸಂಸ್ಕೃತದ ಒಂದು ಶ್ಲೋಕದಲ್ಲಿ ಹೇಳಿದ್ದಾರೆ.

ಭೋಗಭೂಮಿಯಲ್ಲಿ ಯುಗಲಗಳು ಜನಿಸುತ್ತಾರೆ. ಜನ್ಮದಿಂದ ಏಳು ದಿವಸಗಳವರೆಗೆ ತಮ್ಮ ಹೆಬ್ಬೆರಳು ಚೀಪುತ್ತಾರೆ, ಮುಂದೆ ಏಳು ದಿವಸಗಳವರೆಗೆ ತಮ್ಮ ಹೊಟ್ಟೆಯ ಆಧಾರದಿಂದ ಭೂಮಿಯನ್ನು ಬಿಟ್ಟು ಏಳುತ್ತ ಮುಂದೆ ಸರಿಯುತ್ತಾರೆ. ಮುಂದಿನ ಏಳು ದಿವಸಗಳವರೆಗೆ ಎದ್ದು ನಿಲ್ಲುವ ಹೆಜ್ಜೆ ಹಾಕುವ ಪ್ರಯತ್ನದಲ್ಲಿ ಪಳಗುತ್ತಾರೆ, ನಂತರ ಏಳು ದಿವಸಗಳಲ್ಲಿ ಸ್ಥಿರರೂಪದಿಂದ ಚೆನ್ನಾಗಿ ನಡೆಯಲಾರಂಭಿಸುತ್ತಾರೆ. ಅದರ ನಂತರ ಏಳು ದಿವಸಗಳಲ್ಲಿ ಕಲೆಗಳನ್ನು ಕಲಿತುಕೊಳ್ಳುತ್ತಾರೆ, ಮುಂದೆ ಏಳು ದಿವಸಗಳಲ್ಲಿ ತಾರುಣ್ಯಾವಸ್ಥೆಗೆ ಪ್ರಾಪ್ತರಾಗುತ್ತಾರೆ. ನಂತರ ಏಳು ದಿವಸಗಳಲ್ಲಿ ಪರಸ್ಪರ ದರ್ಶನವಾಗಿ ಗ್ರಹಣವಾಗುತ್ತದೆ. ಈ ಪ್ರಕಾರ ನಲವತ್ತೊಂಭತ್ತು ದಿವಸಗಳಲ್ಲಿ ಸಂಪೂರ್ಣತೆಗೆ ಪ್ರಾಪ್ತರಾಗುತ್ತಾರೆ.

ಈ ದಂಪತಿ ಎಂದರೆ ಸ್ತ್ರೀ-ಪುರುಷ ಯುಗಲದಲ್ಲಿ ಇಬ್ಬರದೂ ವಜ್ರವೃಷಭ ನಾರಾಚ ಸಂಹನನವಿರುತ್ತದೆ. ಇವರದು ಸಮಚತುರಸ್ರ ಸಂಸ್ಥಾನವಿರುತ್ತದೆ. ಇವರು ಮಂದಕಷಾಯಿಗಳಿರುತ್ತಾರೆ. ಅದರಿಂದ ಇವರನ್ನು ಆರ್ಯರೆಂದು ಹೇಳುತ್ತಾರೆ. ಪಂಚೇಂದ್ರಿಯ ವಿಷಯಗಳು ಇವರಿಗೆ ಅತ್ಯಂತ ಸುಲಭತೆಯಿಂದ ಪ್ರಾಪ್ತವಾಗುತ್ತವೆ, ಆದರೂ ಅವುಗಳಿಂದ ತೃಪ್ತಿಯಾಗುವುದಿಲ್ಲ ಅರ್ಥಾತ್ ವಿಷಯಗಳಿಂದ ಅರುಚಿಯ ಪರಿಣಾಮವಾಗುವುದಿಲ್ಲ ಆಯುವಿನ ಕೊನೆಯಲ್ಲಿ ಪುರುಷನು ಸೀನು ಬರುವುದರಿಂದ ಮತ್ತು ಸ್ತ್ರೀಯು ಆಕಳಿಕೆಯಿಂದ ಮರಣ ಹೊಂದುತ್ತಾರೆ ಮತ್ತು ಶರದ ಋತುವಿನ ಮೇಘದಂತೆ ಅವರ ಶರೀರಗಳು ವಿಲಯವಾಗಿ ಹೋಗುತ್ತವೆ. ಶರೀರದ ಅಂಶವು ಕೂಡ ಅಲ್ಲಿ ಉಳಿಯುವುದಿಲ್ಲ.

ಭೋಗಭೂಮಿಯ ಮನುಷ್ಯರು ಮತ್ತು ತಿರ್ಯಂಚಗಳು ಸತ್ತು ನಿಯಮದಿಂದ ದೇವಗತಿಯಲ್ಲಿಯೇ ಹೋಗುತ್ತಾರೆ, ಅನ್ಯಗತಿಗಳಿಗೆ ಹೋಗುವುದಿಲ್ಲ. ಅಲ್ಲಿಯ ಮಿಥ್ಯಾದೃಷ್ಟಿಗಳೆಲ್ಲರೂ ಸತ್ತು ಭವನತ್ರಿಕದಲ್ಲಿ ಜನಿಸುತ್ತಾರೆ ಮತ್ತು ಅಲ್ಲಿಯ ಎಲ್ಲ ಸಮ್ಯಗ್ದೃಷ್ಟಿಗಳು ಸತ್ತು ಸೌಧರ್ಮ ಈಶಾನದಲ್ಲಿ ಜನಿಸುತ್ತಾರೆ. ಅಲ್ಲಿಯ ಜೀವರುಗಳ ಆಯುವು ಅನಪವರ್ತ್ಯವಿರುತ್ತದೆ - ಅದರ ಅಪವರ್ತನವಾಗುವುದಿಲ್ಲ ಅರ್ಥಾತ್ ಕದಲೀ ಘಾತದಿಂದ ಮರಣವಾಗುವುದಿಲ್ಲ. ಅಸಂಖ್ಯಾತ ವರ್ಷಗಳ ಆಯುವನ್ನು ಪೂರ್ಣವಾಗಿ ಭೋಗಿಸಿಯೇ ಇವರ ಮರಣವಾಗುತ್ತದೆ. ಇವರುಗಳ ಭುಜ್ಯಮಾನ ಆಯುವಿನ ಛೇದವಾಗುವುದಿಲ್ಲ.

ಹಾಗಾದರೆ ಬೇರೆ ಯಾರದಾದರೂ ಆಯುವಿನಲ್ಲಿ ಛೇದವಾಗುತ್ತದೆಯೇನು ? ಅಹುದು ಕರ್ಮಭೂಮಿಯ ಕೆಲವು ಮನುಷ್ಯರ ಹಾಗೂ ತಿರ್ಯಂಚಗಳ ಭುಜ್ಯಮಾನ ಆಯುವಿನ ಘಾತವಾಗುವ ಸಾಧ್ಯತೆಯಿದೆ. ಉದಾಹರಣಾರ್ಥವಾಗಿ ಯಾರೋ ನೂರು ವರ್ಷಗಳ ಆಯುವನ್ನು ಕಟ್ಟಿಕೊಂಡು ಬಂದಿದ್ದಾರೆಂದು ತಿಳಿಯೋಣ ಮತ್ತು ಇಪ್ಪತ್ತು ವರ್ಷಗಳಲ್ಲಿ ಆಯು ಕರ್ಮದ ಭವಿಷ್ಯ ಕಾಲದ ಎಲ್ಲ ನಿಷೇಕಗಳ ಘಾತವಾಗಿ ಆ ಪರಮಾಣುಗಳು ಅಂತರ್ಮುಹೂರ್ತ ಪ್ರಮಾಣದ ನಿಷೇಕಗಳಲ್ಲಿ ಬಂದು ಸೇರಿಕೊಳ್ಳುತ್ತವೆ, ಪುನಃ ಅಲ್ಲಿ ಮುಂದಿನ ಭವದ ಆಯುವಿನ ಬಂಧವಾಗಿ ನಂತರ ಮರಣವಾಗುತ್ತದೆ. ಅಲ್ಲದೆ ಯಾವನೋ ಜೀವನು ಒಂದು ಕೋಟಿ ಪೂರ್ವದ ಆಯುವನ್ನು ತಗೆದುಕೊಂಡು ಜನಿಸಿದ್ದಾನೆ ಮತ್ತು ಪರ್ಯಾಪ್ತಿಗಳು ಪೂರ್ಣವಾದ ಮೇಲೆ ಕೇವಲ ಒಂದು ಅಂತರ್ಮುಹೂರ್ತದ ನಂತರವೇ ಕದಲೀಘಾತದಿಂದ ಅವನ ಮರಣವಾಗುವ ಸಾಧ್ಯತೆಯೂ ಇದೆ. ಎಂದರೆ ಅಂಥ ಪರಿಣಾಮಗಳಲ್ಲಿ ಅರ್ಥಾತ್ ಕದಲೀಘಾತದಿಂದ ಉದುರಿ ಹೋಗುವಂಥ ಆಯುವಿನ ಬಂಧವನ್ನು ಆ ಜೀವನು ಮಾಡಿಕೊಂಡಿದ್ದನು. ವರ್ತಮಾನ ಪರಿಣಾಮಗಳ ಕಾರಣದಿಂದ ಇಂಥ

ಮರಣವಾಗಿಲ್ಲ-ಆಗುವುದಿಲ್ಲ. ಕರ್ಮದ ಸ್ಥಿತಿಯು-ಸ್ವರೂಪವು ಹೀಗಿರುವಾಗ ಕ್ರಮಬದ್ಧ ಪರ್ಯಾಯದ ಸಿದ್ಧಾಂತಕ್ಕೂ ಯಾವ ಬಾಧೆ ಬರುವುದಿಲ್ಲ. ಇದರ ಚರ್ಚೆಯನ್ನು ಮೊದಲು ಕೂಡ ಬಹಳಷ್ಟು ಬಾರಿ ಮಾಡಿಯಾಗಿದೆ. ಆದುದರಿಂದ ಈಗ ಇಲ್ಲಿ ಅದರ ಚರ್ಚೆಯು ಅಪೇಕ್ಷಿತವಿಲ್ಲ.

ಎಲ್ಲಿ ಯಾವ ಭೋಗಭೂಮಿಯು ಯಾವಾಗಲೂ ಇರುತ್ತದೆ ಎಂಬುದನ್ನೂ ನೋಡಿಯಾಗಿದೆ. ಭರತ, ಐರಾವತಗಳಲ್ಲಿಯೂ ಆರು ಕಾಲಗಳ ಪರಿವರ್ತನೆಯಲ್ಲಿ ಮೂರೂ ಭೋಗಭೂಮಿಗಳ ಪರಿವರ್ತನವು ಇಲ್ಲಿ ಆಗುತ್ತದೆಯೆಂಬುದರ ಚರ್ಚೆಯನ್ನೂ ಮಾಡಲಾಯಿತು. ಯಾವಾಗ ಇಲ್ಲಿ ಅವಸರ್ಪಿಣಿಯ ತೃತೀಯ ಕಾಲ ಅರ್ಥಾತ್ ಜಘನ್ಯ ಭೋಗ ಭೂಮಿಯ ಕಾಲವು ಸಮಾಪ್ತವಾಗುವ ಸಮಯವು ಸಮೀಪಿಸುತ್ತದೆ ಎಂದರೆ ತೃತೀಯ ಕಾಲದೊಳಗಿಂದ ಒಂದು ಪಲ್ಯದ ಎಂಟನೆಯ ಒಂದು ಭಾಗವು ಶೇಷವಿರುತ್ತದೆ ಆಗ ಕ್ರಮದಿಂದ ಹದಿನಾಲ್ಕು ಜನ ಕುಲಂಕರರಾಗುತ್ತಾರೆ. ಇಲ್ಲಿ ಮೂರನೆಯ ಕಾಲದಲ್ಲಿ ಆಗಿರುವಂಥ ಕುಲಂಕರರ ಹೆಸರುಗಳು ಈ ಪ್ರಕಾರವಿವೆ - ೧) ಪ್ರತಿಶ್ರುತಿ, ೨) ಸನ್ಮತಿ, ೩) ಕ್ಷೇಮಂಕರ, ೪) ಕ್ಷೇಮಂಧರ, ೫) ಸೀಮಂಕರ, ೬) ಸೀಮಂಧರ, ೭) ವಿಮಲವಾಹನ, ೮) ಚಕ್ಷುಷ್ಮಾನ, ೯) ಯಶಸ್ವೀ, ೧೦) ಅಭಿಚಂದ್ರ, ೧೧) ಚಂದ್ರಾಭ, ೧೨) ಮರುದ್ದೇವ, ೧೩) ಪ್ರಸೇನಜಿತ, ೧೪) ನಾಭಿರಾಜ.

ನಾಭಿರಾಜ ಕುಲಂಕರನ ಪುತ್ರ ವೃಷಭದೇವರು ಪ್ರಥಮ ತೀರ್ಥಂಕರರಾದರು ಅವರನ್ನು ನಾವು ಆದಿನಾಥರೆಂದು ಕೂಡ ಕರೆಯುತ್ತೇವೆ.

ಸಮೀಚಿನ ಪಾತ್ರ ಅರ್ಥಾತ್ ಸುಪಾತ್ರಕ್ಕೆ ದಾನ ಕೊಡುವ ಪುಣ್ಯ ಪರಿಣಾಮದಿಂದ ಯಾರು ಮೊದಲು ಮನುಷ್ಯಾಯುವಿನ ಬಂಧ ಮಾಡಿಕೊಂಡಿರುತ್ತಾರೆ ನಂತರ ಸಮ್ಯಗ್ದೃಷ್ಟಿಯಾಗಿ ಯಾರು ಕ್ಷಾಯಿಕ ಸಮ್ಯಕ್ತ್ವಕ್ಕೆ ಪ್ರಾಪ್ತರಾಗಿರುತ್ತಾರೆ ಅಂಥ ಜೀವರುಗಳು ಕುಲಂಕರರಾಗಿ ಇಲ್ಲಿ ಭೋಗಭೂಮಿಯಲ್ಲಿ ಉತ್ಪನ್ನರಾಗುತ್ತಾರೆ. ಬೇರೆಯೂ ಯಾರು ಅಲ್ಲಿ ಸಮ್ಯಕ್ತ್ವದ ಜತೆಯಲ್ಲಿ ಜನಿಸುತ್ತಾರೆ ಅವರು ಕ್ಷಾಯಿಕ ಸಮ್ಯಗ್ದೃಷ್ಟಿಗಳೇ ಆಗಿರಬೇಕಾಗುತ್ತದೆ. ಉಳಿದ ಹಾಗೆಯಂತೂ ಅಲ್ಲಿ ಮಿಥ್ಯಾತ್ವ ಹಾಗೂ ಸಾಸಾದನದ ಜತೆ ಜನಿಸುವಂಥವರು ಕೂಡ ಬಹಳಷ್ಟು ಜೀವರುಗಳಿರುತ್ತಾರೆ. ಸಮ್ಯಕ್ತ್ವಸಹಿತ ಅಲ್ಲಿ ಜನಿಸುವಂಥವರ ಸಲುವಾಗಿ ಈ ಕ್ಷಾಯಿಕದ ಅಥವಾ ಕ್ಷಾಯಿಕದ ಪ್ರಾರಂಭವಾಗಿರುವಂಥ ಕೃತಕೃತ್ಯ ವೇದಕತೆಯ ಷರತ್ತು-ನಿಯಮವಿದೆ. ಈ ಕುಲಂಕರರು ಕ್ಷತ್ರಿಯ ಕುಲದಲ್ಲಿ ಉತ್ಪನ್ನರಾಗುತ್ತಾರೆಂದು ಹೇಳಿದ್ದಾರೆ. ಎಂದರೆ ಆಗ ಯಾವ ಕುಲಾದಿಗಳ ಪ್ರವೃತ್ತಿಯಂತೂ ಇರಲಿಲ್ಲ ಆದರೆ ಇವರ ಕುಲದಲ್ಲಿ ಭವಿಷ್ಯದೊಳಗೆ ಕ್ಷತ್ರಿಯರಾಗುವರು ಅದಕ್ಕಾಗಿ ಉಪಚಾರದಿಂದ ಇವರನ್ನು ಕೂಡ ಕ್ಷತ್ರಿಯ ಕುಲೋತ್ಪನ್ನರೆಂದು ಹೇಳಲಾಗುತ್ತದೆ. ಈ ಕುಲಂಕರರಲ್ಲಿ ಕೆಲವರು ಜಾತಿಸ್ಮರಣ ಸಹಿತರಿರುತ್ತಾರೆ, ಕೆಲವರು ಅವಧಿಜ್ಞಾನ ಸಹಿತರಾಗಿರುತ್ತಾರೆ.

ಪ್ರಾರಂಭದ ಕುಲಂಕರರ ಆಯುವು ಕೂಡ ದೊಡ್ಡದಿರುತ್ತದೆ. ಹೇಗೆಂದರೆ ಮೊದಲನೆಯ ಕುಲಂಕರನ ಆಯುವು ಪಲ್ಯದ ಹತ್ತನೆಯ ಒಂದು ಭಾಗ ಪ್ರಮಾಣವಿತ್ತು. ಮೊದಲಿನ ಎರಡು ಕುಲಂಕರರ ಮಧ್ಯದಲ್ಲಿ ಅಂತರವು ದೊಡ್ಡದಿತ್ತು ಎಂದರೆ ಮೊದಲನೆಯ ಕುಲಂಕರನ ಮರಣದ ನಂತರ ಪಲ್ಯದ ಎಂಭತ್ತನೆಯ ಒಂದು ಭಾಗ ಪ್ರಮಾಣ ಕಾಲವು ಕಳೆದು ಹೋದ ಮೇಲೆ ಎರಡನೆಯ ಕುಲಂಕರನಾಗಿದ್ದನು.

ಇವರನ್ನು ಕುಲಂಕರರೆಂದೇಕೆ ಹೇಳುತ್ತಾರೆ ? - ಏಕೆಂದರೆ ಇಲ್ಲಿಯವರೆಗಂತೂ ಭೋಗಭೂಮಿಯಿತ್ತು, ಯಾವ ಸಂಪಾದನೆ ಮೊದಲಾದ ಕಾರ್ಯ ಮಾಡುವುದಿರಲಿಲ್ಲ, ಜೀವರುಗಳು ಕೂಡ ಭದ್ರ ಪರಿಣಾಮಿ-ಗಳಾಗಿದ್ದರು. ಕಲ್ಪವೃಕ್ಷಗಳಿಂದ ಅವರ ಅವಶ್ಯಕತೆಗಳೆಲ್ಲ ಪೂರ್ಣವಾಗುತ್ತಿದ್ದವು. ಇಲ್ಲಿಂದ ಮುಂದೆ ಕರ್ಮಭೂಮಿಯ ಆರಂಭವಾಗುವುದಿದೆ ಎಂದ ಮೇಲೆ ಜೀವರುಗಳಿಗೆ ಅನೇಕ ಸಮಸ್ಯೆಗಳು ಉತ್ಪನ್ನವಾಗಲಾರಂಭಿಸುತ್ತವೆ, ಕುಲಂಕರರು ಆ ಸಮಸ್ಯೆಗಳ ನಿವಾರಣೆ ಮಾಡುತ್ತಾರೆ, ಬದಲಾಗುತ್ತಿರುವ ಪರಿಸ್ಥಿತಿಗಳಲ್ಲಿ ಹೇಗೆ ಜೀವನ ಸಾಗಿಸುವುದು ಎಂಬಿತ್ಯಾದಿಗಳ ಉಪದೇಶ ಕೊಡುತ್ತಾರೆ.

ಮೊದಲನೆಯ ಕುಲಂಕರನ ಸಮಯದಲ್ಲಿ ಜ್ಯೋತಿರಂಗ ಕಲ್ಪವೃಕ್ಷಗಳ ಪ್ರಕಾಶವು ಮಂದವಾಗತೊಡಗಿತು ಆಗ ಸೂರ್ಯಚಂದ್ರರು ಕಾಣಿಸಲಾರಂಭಿಸಿದರು. ಅವರಂತೂ ಮೊದಲು ಕೂಡ ವಿದ್ಯಮಾನರೇ ಇದ್ದರು ಆದರೆ ಕಲ್ಪವೃಕ್ಷಗಳ ಪ್ರಖರ ಪ್ರಕಾಶದ ಕಾರಣದಿಂದ ಕಂಡು ಬರುತ್ತಿರಲಿಲ್ಲ. ಜನರು ಅದನ್ನು ಆಪತ್ತೆಂದು ತಿಳಿದು ಭಯಭೀತವಾಗತೊಡಗಿದರು, ಮೊದಲನೇ ಕುಲಂಕರನು ಅವರಿಗೆ ತಿಳಿಸಿಕೊಟ್ಟು ಅವರುಗಳ ಭಯದ ನಿವಾರಣೆ ಮಾಡಿದನು. ಎರಡನೆಯ ಕುಲಂಕರನು ನಕ್ಷತ್ರಗಳು ಕಾಣಿಸುವುದರಿಂದ ಉತ್ಪನ್ನವಾದ ಭಯದ ನಿವಾರಣೆ ಮಾಡಿದನು ನಂತರ ಸಿಂಹ ಮೊದಲಾದ ಜೀವಗಳಲ್ಲಿ ಕ್ರೂರತೆಯು ಬರಲಾರಂಭಿಸಿತು ಅವುಗಳಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಮೂರನೆಯ ಕುಲಂಕರನು ತಿಳಿಸಿಕೊಟ್ಟನು ಮತ್ತು ಜನರ ಭಯದ ನಿವಾರಣೆ ಮಾಡಿದನು. ಸಿಂಹ ಮೊದಲಾದ ಪಶುಗಳು ಅಧಿಕ ಕ್ರೂರವಾದವು ಅವುಗಳಿಗೆ ದಂಡಾದಿಗಳ ಉಪಾಯ ಮಾಡಿ ನಾಲ್ಕನೆಯ ಕುಲಂಕರನು ಜನರ ಭಯ ನಿವಾರಣೆ ಮಾಡಿದನು. ಅದರ ನಂತರ ಕಲ್ಪವೃಕ್ಷಗಳು ಅಲ್ಪ ಫಲದಾಯಕವಾದವು ಅದರಿಂದ ಪ್ರಜೆಗಳಲ್ಲಿ ಕಲಹವಾಗತೊಡಗಿತು ಆಗ ಐದನೆಯ ಕುಲಂಕರನು ಸೀಮೆಯನ್ನು ನಿರ್ಮಿಸಿ ಪ್ರಜೆಗಳಿಗೆ ತಮ್ಮ - ತಮ್ಮ ಸೀಮೆಯಲ್ಲಿ ಉಳಿಯುವ ಉಪದೇಶ ನೀಡಿದನು. ನಂತರ ಕಲ್ಪವೃಕ್ಷಗಳು ಅತಿ ಮಂದವಾಗತೊಡಗಿದವು ಪ್ರಜೆಗಳಲ್ಲಿ ಆ ಮರ್ಯಾದೆಯಲ್ಲಿಯೂ ಜಗಳಗಳು ಆರಂಭವಾದವು ಆಗ ಆರನೆಯ ಕುಲಂಕರನು ಚಿಹ್ನಾದಿಗಳ ಮೂಲಕ ಆ ಮರ್ಯಾದೆಯನ್ನು ದೃಢ ಪಡಿಸಿದನು. ಏಳನೆಯ ಕುಲಂಕರನು ಗಮನ ಮಾಡುವ ಸಲುವಾಗಿ ಕುದುರೆ ಮೊದಲಾದ ವಾಹನಗಳ ಉಪಯೋಗವನ್ನು ಕಲಿಸಿಕೊಟ್ಟನು. ಎಂಟನೆಯ ಕುಲಂಕರನ ಸಮಯದಲ್ಲಿ ಬಾಲಕರ ಜನ್ಮವಾದ ಮೇಲೆಯೂ ಕೆಲಕಾಲದವರೆಗೆ ಮಾತಾ-ಪಿತರು ಜೀವಂತ ಉಳಿಯತೊಡಗಿದರು, ಆಗ ಕುಲಂಕರನು ಬಾಲಕರ ಮುಖ ನೋಡುವುದರಿಂದ ಉತ್ಪನ್ನವಾದ ಭಯವನ್ನು ದೂರ ಮಾಡಿದನು. ಅದರ ನಂತರ ಒಂಭತ್ತನೆಯ ಕುಲಂಕರನ ಸಮಯದಲ್ಲಿ ಬಾಲಕರು ಜನಿಸಿದ ನಂತರ ಅಧಿಕ ಕಾಲದವರೆಗೆ ಮಾತಾ-ಪಿತರು ಜೀವಿಸತೊಡಗಿದರು ಆಗ ಆ ಒಂಭತ್ತನೆಯ ಕುಲಂಕರನು ಬಾಲಕರಿಗೆ ಆಶೀರ್ವಾದ ಮಾಡುವುದನ್ನು ಕಲಿಸಿಕೊಟ್ಟನು. ಮಾತಾ-ಪಿತರು ಇನ್ನೂ ಅಧಿಕ ಕಾಲ ಜೀವಂತ ಉಳಿಯತೊಡಗಿದರು. ಆಗ ಹತ್ತನೆಯ ಕುಲಂಕರನು ಬಾಲಕರಿಗೆ ಚಂದಿರನನ್ನು ತೋರಿಸುವ ಮೊದಲಾದ ಕ್ರೀಡೆಗಳನ್ನು ಕಲಿಸಿಕೊಟ್ಟನು. ಅದರ ನಂತರ ಬಹಳಷ್ಟು ಅಧಿಕ ಕಾಲದವರೆಗೆ ಮಾತಾ-ಪಿತರು ಜೀವಂತ ಉಳಿಯತೊಡಗಿದಾಗ ಹನ್ನೊಂದನೆಯ ಕುಲಂಕರನು ಪ್ರಜೆಗಳ ಆ ಭಯವನ್ನು ದೂರ ಮಾಡಿದನು. ಹನ್ನೆರಡನೆಯ ಕುಲಂಕರನ ಸಮಯದಲ್ಲಿ ಮೇಘವೃಷ್ಟಿಯಾಗುವುದರಿಂದ ನದಿ, ಜಲಾಶಯಗಳುಂಟಾದವು ಆಗ ಈಜುವ ಉಪಾಯ, ನೌಕೆ ಮೊದಲಾದುವನ್ನು ನಿರ್ಮಿಸುವ, ಬಳಕೆಯಲ್ಲಿ ತಂದುಕೊಳ್ಳುವ ವಿಧಾನವನ್ನು ತಿಳಿಸಿಕೊಟ್ಟನು.

ಹದಿಮೂರನೆಯ ಕುಲಂಕರನ ಸಮಯದಲ್ಲಿ ಜರಾಯು ಸಹಿತ ಬಾಲಕರು ಜನಿಸತೊಡಗಿದರು ಆಗ ಕುಲಂಕರನು ಜರಾಯುವಿನ ಛೇದನೆ ಮಾಡುವುದನ್ನು ಕಲಿಸಿಕೊಟ್ಟನು. ಪ್ರಸೂತಿ ಶಾಸ್ತ್ರವು ಅಂದಿನಿಂದ ಆರಂಭವಾಗಿರುವಂತೆ ತಿಳಿದು ಬರುತ್ತದೆ.

ಹಾಗಾದರೆ ಈ ಜರಾಯುವೆಂದರೇನು ? ಯಾವಾಗ ಬಾಲಕನು ಜನಿಸುತ್ತಾನೆ ಆಗ ಅವನ ಮೇಲೆ ತೆಳುವಾದ ಆವರಣವಿರುತ್ತದೆ - ತೆಳುವಾದ ಚರ್ಮದ ಹೊದಿಕೆಯಿರುತ್ತದೆ ಅದರ ಒಳಗೆ ಆಮ್ನಿಯಾಟಿಕ ದ್ರವವಿರುತ್ತದೆ ಅದರಲ್ಲಿ ಬಾಲಕನಿರುತ್ತಾನೆ. ಅದರ ನಂತರ ನಾಭಿಯಲ್ಲಿರುವ ನಲಿಕೆ ಸಹಿತ-ಕರಳು ಬಳ್ಳಿ ಸಹಿತ ಬಾಲಕರು ಜನಿಸತೊಡಗಿದರು. ನಾಭಿಯಿಂದ ಹೊಂದಿಕೊಂಡಿರುವ ಈ ನಲಿಕೆಯನ್ನು ಕತ್ತರಿಸುವುದನ್ನೇ ಹದಿನಾಲ್ಕನೆಯ ಕುಲಂಕರನು ಕಲಿಸಿಕೊಟ್ಟನು. ಇವನ ಹೆಸರು ಕೂಡ ನಾಭಿರಾಜವಿತ್ತು. ಇವನ ಕಾಲದಲ್ಲಿ ಕಾಮನಬಿಲ್ಲು (ಇಂದ್ರಧನುಷ್ಯ), ಮಿಂಚು ಮೊದಲಾದವು ಆಗತೊಡಗಿದವು ಅವುಗಳನ್ನು ನೋಡುವುದರಿಂದ ಉತ್ಪನ್ನವಾದ ಪ್ರಜೆಗಳ ಭಯವನ್ನು ಈ ಹದಿನಾಲ್ಕನೆಯ ಕಲಂಕರನು ದೂರ ಮಾಡಿದನು. ವೃಕ್ಷಗಳ ಫಲಗಳಲ್ಲಿ ಇದು ಔಷಧಿಯಿದೆ, ಇದು ಭೋಜನ ಯೋಗ್ಯವಿದೆಯೆಂದು ಮೊದಲಾಗಿ ಕಲಿಸಿಕೊಟ್ಟನು. ಇದರ ನಂತರ ಕರ್ಮಭೂಮಿಯು ಆರಂಭವಾಯಿತು. ಗ್ರಾಮ, ನಗರ, ಪಟ್ಟಣ ಮೊದಲಾದವುಗಳ ರಚನೆ, ಲೌಕಿಕ ಕಾರ್ಯಗಳಿಗೆ ಸಂಬಂಧಿಸಿದ ಶಾಸ್ತ್ರ, ಅಸಿ, ಮಸಿ, ಕೃಷಿ, ವಿದ್ಯೆ, ಶಿಲ್ಪ, ವಾಣಿಜ್ಯ ಮೊದಲಾದ ಲೌಕಿಕ ವ್ಯವಹಾರ, ಹೇಗೆ ಆಜೀವಿಕೆ ಮಾಡುವುದು, ಎಂಥ ಆಚರಣೆ ಮಾಡುವುದು, ದಯೆಯು ಮೂಲವಾಗಿರುವಂಥ ಧರ್ಮ ಇವೆಲ್ಲವುಗಳ ಕುರಿತಾಗಿ ಆದಿಬ್ರಹ್ಮರು ಅರ್ಥಾತ್ ನಾಭಿರಾಜನ ಪುತ್ರರಾದ ಶ್ರೀ ವೃಷಭದೇವರು ಕಲಿಸಿಕೊಟ್ಟರು ಮತ್ತು ಅವರೇ ಈ ಭರತಕ್ಷೇತ್ರದ ಈ ಅವಸರ್ಪಿಣಿ ಕಾಲದ ಪ್ರಥಮ ತೀರ್ಥಂಕರರಾದರು.

ಮೊದಲಿನ ಐವರು ಕುಲಂಕರರು ಅಪರಾಧಿಗೆ 'ಹಾ' ಎಂಬ ವಚನವನ್ನಾಡಿ ದಂಡನೆ ನೀಡುತ್ತಿದ್ದರು. ಆ ಸಮಯದಲ್ಲಿ ಜೀವರುಗಳು ಭದ್ರ ಪರಿಣಾಮಿಗಳಾಗಿದ್ದರು. ಅವರನ್ನು ಬೈಯಬೇಕಾದ ಅವಶ್ಯಕತೆಯೂ ಬೀಳುತ್ತಿರಲಿಲ್ಲ. 'ಹಾ' ಎಂಬುದರ ಅರ್ಥವು 'ಅಯ್ಯೋ ಹೀಗೆ ಮಾಡಬಾರದಾಗಿತ್ತು' - ಇದುವೇ ಅವರ ಅಪರಾಧಕ್ಕೆ ದಂಡನೆಯಾಗಿತ್ತು, ಅಷ್ಟರಿಂದಲೇ ಅವರು ತಪ್ಪು ಕಾರ್ಯ ಮಾಡುವುದನ್ನು ಬಿಟ್ಟುಕೊಡುತ್ತಿದ್ದರು. ಅದರ ನಂತರ ಐವರು ಕುಲಂಕರರು 'ಹಾ ಮಾ' ಎಂದು ಹೇಳಿ ದಂಡನೆ ನೀಡುತ್ತಿದ್ದರು ಅರ್ಥಾತ್ 'ಅಯ್ಯೋ ತಪ್ಪು ಮಾಡಿದೆ, ಹೀಗೆ ಮಾಡಬೇಡ' ಅದರ ನಂತರ ವೃಷಭದೇವ ಸಹಿತ ಐವರು ಕುಲಂಕರರು 'ಹಾ ಮಾ ಧಿಕ್' ಎಂದು ಹೇಳಿ ದಂಡನೆ ನೀಡುತ್ತಿದ್ದರು ಅರ್ಥಾತ್ 'ತಪ್ಪು ಮಾಡಿದೆ, ಮಾಡಬೇಡ, ನಿನಗೆ ಧಿಕ್ಕಾರವಿರಲಿ'.

ಇಲ್ಲಿಯವರೆಗೆ ನಾವು ಭರತಕ್ಷೇತ್ರದ ಆರ್ಯಖಂಡದಲ್ಲಿ ಕಾಲದ ಪರಿವರ್ತನೆಯು ಹೇಗಾಗುತ್ತದೆ, ಇಲ್ಲಿ ಭೋಗಭೂಮಿ ಮತ್ತು ಕರ್ಮಭೂಮಿಯ ಪರಿವರ್ತನೆಯು ಯಾವ ರೀತಿ ಆಗುತ್ತದೆ, ಎಲ್ಲಿ ಯಾವಾಗಲೂ ಭೋಗಭೂಮಿಯಿರುತ್ತದೆ ಮೊದಲಾದುವನ್ನು ತಿಳಿದೆವು. ಈಗ ನಾವು ಪ್ರತಿಯೊಂದು ಮೇರುವಿಗೆ ಸಂಬಂಧಿಸಿದ ವಿದೇಹ ಕ್ಷೇತ್ರದ ರಚನೆಯನ್ನು ತಿಳಿಯೋಣ. ಎಲ್ಲಕ್ಕಿಂತ ಮೊದಲು ನಾವು ಪೂರ್ವ ವಿದೇಹವನ್ನು ತಿಳಿಯೋಣ ನಂತರ ಅದರ ಆಧಾರದಿಂದ ಪಶ್ಚಿಮ ವಿದೇಹವನ್ನು ತಿಳಿಯಬಹುದಾಗಿದೆ.

ಜಂಬೂ ದ್ವೀಪದ ವಿದೇಹ ಕ್ಷೇತ್ರವು ಎಲ್ಲಿದೆಯೆಂಬುದನ್ನು ನಾವು ೫ನೇ ನಂಬರಿನ ಚಾರ್ಟದಲ್ಲಿ

ನೋಡಿದ್ದೇವೆ. ಅದರಲ್ಲಿ ಮಧ್ಯದೊಳಗೆ ಸುದರ್ಶನ ಮೇರುವಿನ ವ್ಯಾಸವು ೧೦೦೦೦ ಯೋಜನವಿದೆ. ಅದರ ಪೂರ್ವದಲ್ಲಿ ೨೨೦೦೦ ಯೋಜನದವರೆಗೆ ಭದ್ರಶಾಲ ವನವಿದೆ. ಅದು ಸಮಾಪ್ತವಾದ ಮೇಲೆ ಭದ್ರಶಾಲ ವನವೇದಿಯಿದೆ ಅದು ನೀಲ ಪರ್ವತದಿಂದ ನಿಷಧ ಪರ್ವತದವರೆಗೆ ಇದೆ. ಅದರ ಪೂರ್ವದಲ್ಲಿ ಪೂರ್ವ ವಿದೇಹ ಕ್ಷೇತ್ರವಿದೆ, ಅದರ ವಿಸ್ತಾರವನ್ನು ನಾವು ಚಾರ್ಟ ನಂ. ೧೨.೧ ರ ಆಧಾರದಿಂದ ನೋಡೋಣ. ವಿದೇಹ ಕ್ಷೇತ್ರದ ಪೂರ್ವದಲ್ಲಿ ಸಮುದ್ರದ ಹತ್ತಿರ ದೇವಾರಣ್ಯವನ ಮತ್ತು ದೇವಾರಣ್ಯವನವೇದಿಯಿದೆ ಈ ವನವೇದಿಯೂ ಕೂಡ ನೀಲ ಪರ್ವತದಿಂದ ನಿಷಧ ಪರ್ವತದವರೆಗೆ ಇದೆ. ಚಾರ್ಟ ನೋಡುವುದು, ಇಲ್ಲಿ ಕೆಳಗೆ ದಕ್ಷಿಣದಲ್ಲಿ ನಿಷಧ ಪರ್ವತ ಮತ್ತು ಉತ್ತರದಲ್ಲಿ ನೀಲ ಪರ್ವತವಿದೆ. ನೀಲ ಪರ್ವತದ ಕೇಸರೀ ದ್ರಹದಿಂದ ಸೀತಾ ನದಿಯು ದಕ್ಷಿಣದಲ್ಲಿ ಮೇರುವಿನವರೆಗೆ ಬರುತ್ತದೆ ಮತ್ತು ಮೇರು ಪರ್ವತದ ನಾಲ್ಕನೆಯ ಒಂದು ಭಾಗ ಪ್ರಮಾಣ ಪ್ರದಕ್ಷಿಣೆ ಹಾಕಿ ಪೂರ್ವ ದಿಕ್ಕಿನ ಕಡೆಗೆ ಹರಿಯುತ್ತದೆ. ಅದರ ಕಾರಣದಿಂದ ಪೂರ್ವ ವಿದೇಹ ಕ್ಷೇತ್ರದೊಳಗೆ ಉತ್ತರ ಮತ್ತು ದಕ್ಷಿಣವೆಂದು ಎರಡು ವಿಭಾಗಗಳಾಗುತ್ತವೆ.

ಇಲ್ಲಿ ಚಾರ್ಟ ನಂ. ೧೨.೧ ರಲ್ಲಿ ಭದ್ರಶಾಲವನವೇದಿ ಮತ್ತು ದೇವಾರಣ್ಯ ವನವೇದಿಯ ಮಧ್ಯದಲ್ಲಿ ಪೂರ್ವವಿದೇಹವಿದೆ, ಅದರ ಮಧ್ಯದಲ್ಲಿ ಸೀತಾ ನದಿಯಿದೆ ಅದು ಪೂರ್ವ ದಿಕ್ಕಿನಲ್ಲಿ ಹರಿಯುತ್ತ ಹೋಗಿ ಲವಣ ಸಮುದ್ರವನ್ನು ಸೇರುತ್ತದೆ. ಸೀತಾ ನದಿಯ ಉತ್ತರ ಹಾಗೂ ದಕ್ಷಿಣದಲ್ಲಿ ನಾಲ್ಕು-ನಾಲ್ಕು ವಕ್ಷಾರ ಪರ್ವತಗಳಿವೆ ಅವನ್ನು ಇಲ್ಲಿ ಕಂದು ಬಣ್ಣ (ಬ್ರಾವುನ)ದಲ್ಲಿ ತೋರಿಸಲಾಗಿದೆ. ಅವುಗಳ ಮೇಲೆ ೧, ೨, ೩, ೪ ಮತ್ತು ದಕ್ಷಿಣದಲ್ಲಿ ೫, ೬, ೭, ೮ ಅಂಕಿಗಳನ್ನು ಬರೆಯಲಾಗಿದೆ. ಉತ್ತರ ದಿಕ್ಕಿನ ನಾಲ್ಕು ವಕ್ಷಾರ ಪರ್ವತಗಳು ನೀಲ ಪರ್ವತದಿಂದ ಸೀತಾ ನದಿಯವರೆಗೆ ಹರಡಿಕೊಂಡಿವೆ. ಮತ್ತು ದಕ್ಷಿಣ ದಿಕ್ಕಿನ ನಾಲ್ಕು ವಕ್ಷಾರ ಪರ್ವತಗಳು ನಿಷಧ ಪರ್ವತದಿಂದ ಸೀತಾ ನದಿಯವರೆಗೆ ಹರಡಿಕೊಂಡಿವೆ. ಈ ವಕ್ಷಾರ ಪರ್ವತಗಳ ಹೆಸರು ಈ ಪ್ರಕಾರವಿವೆ - ೧) ಚಿತ್ರಕೂಟ ವಕ್ಷಾರ, ೨) ನಲಿನಕೂಟ ವಕ್ಷಾರ, ೩) ಪದ್ಮಕೂಟ ವಕ್ಷಾರ, ೪) ಏಕಶೈಲ ವಕ್ಷಾರ, ೫) ತ್ರಿಕೂಟ ವಕ್ಷಾರ, ೬) ವೈಶ್ರವಣಕೂಟ ವಕ್ಷಾರ, ೭) ಅಂಜನ ಶೈಲವಕ್ಷಾರ, ೮) ಆತ್ಮಾಂಜನ ವಕ್ಷಾರ. ಇವುಗಳ ಕ್ರಮವನ್ನು ಸರಿಯಾಗಿ ನೋಡಿಕೊಳ್ಳಬೇಕು. ಉತ್ತರದಲ್ಲಿ ೧ ರಿಂದ ೪ ಪೂರ್ವ ದಿಕ್ಕಿನ ಕಡೆಗೆ ಇವೆ ಮತ್ತು ದಕ್ಷಿಣದಲ್ಲಿ ೫ ರಿಂದ ೮ ಪೂರ್ವದಿಂದ ಪಶ್ಚಿಮದ ಕಡೆಗೆ ಇವೆ - ಇವನ್ನು ಗಡಿಯಾರದ ಮುಳ್ಳಿನ ಹಾಗೆಂದು ಹೇಳುತ್ತಾರೆ.

ಉತ್ತರದ ನಾಲ್ಕು ವಕ್ಷಾರಗಳ ಮಧ್ಯದಲ್ಲಿ ಅವುಗಳ ಅಂತರಾಳದಲ್ಲಿ ಒಂದೊಂದು ನದಿಯು ನೀಲ ಪರ್ವತದಿಂದ ಹೊರಟು ದಕ್ಷಿಣದ ಕಡೆಗೆ ಹರಿಯುತ್ತವೆ ಮತ್ತು ಸೀತಾ ನದಿಯಲ್ಲಿ ಬಂದು ಕೂಡುತ್ತವೆ. ಈ ನದಿಗಳನ್ನು ವಿಭಂಗಾ ನದಿಯೆಂದು ಹೇಳುತ್ತಾರೆ. ದಕ್ಷಿಣದಲ್ಲಿಯೂ ಇಂಥವೇ ಮೂರು ವಿಭಂಗಾ ನದಿಗಳು ಇವೆ. ಅವು ನಿಷಧ ಪರ್ವತದಿಂದ ಹೊರಟು ಉತ್ತರ ದಿಕ್ಕಿನಲ್ಲಿ ಹರಿಯುತ್ತ ಸೀತಾ ನದಿಯಲ್ಲಿ ಹೋಗಿ ಒಂದಾಗುತ್ತವೆ. ಉತ್ತರದ ಮೂರು ಮತ್ತು ದಕ್ಷಿಣದ ಮೂರು ನದಿಗಳ ಹೆಸರು ಕ್ರಮದಿಂದ ಈ ಪ್ರಕಾರವಿವೆ - ೧) ದ್ರಹವತಿ (ಗಾಧವತಿ), ೨) ಗ್ರಾಹವತಿ (ದ್ರಹವತಿ), ೩) ಪಂಕವತಿ, ೪) ತಪ್ತಜಲಾ, ೫) ಮತ್ತಜಲಾ, ೬) ಉನ್ಮತ್ತಜಲಾ.

ಸೀತಾನದಿಯ ಉತ್ತರದಲ್ಲಿ ಎರಡು ವನವೇದಿಗಳು, ನಾಲ್ಕು ವಕ್ಷಾರಗಳು ಮತ್ತು ಮೂರು ವಿಭಂಗ ನದಿಗಳಿದ್ದು ಇವುಗಳ ಅಂತರಾಳದಲ್ಲಿ ಎಂಟು ಕ್ಷೇತ್ರಗಳಿರುತ್ತವೆ - ಆ ಪ್ರತಿಯೊಂದು ಕ್ಷೇತ್ರವು ಒಂದೊಂದು ವಿದೇಹ ಕ್ಷೇತ್ರವಿದೆ. ದಕ್ಷಿಣದಲ್ಲಿಯೂ ಹೀಗೆ ಎಂಟು ಕ್ಷೇತ್ರಗಳಿರುತ್ತವೆ. ಪೂರ್ವದಲ್ಲಿ ಎಂಟು ಮತ್ತು ಎಂಟು

ಹದಿನಾರು ಆದವು. ಹೀಗೆಯೇ ಪಶ್ಚಿಮ ವಿದೇಹದಲ್ಲಿಯೂ ಹದಿನಾರು ವಿದೇಹ ಕ್ಷೇತ್ರಗಳಿರುತ್ತವೆ. ಈ ಪ್ರಕಾರ ಒಂದೊಂದು ಮೇರು ಸಂಬಂಧದ ವಿದೇಹ ಕ್ಷೇತ್ರಗಳು ಮೂವತ್ತೆರಡು-ಮೂವತ್ತೆರಡು ಆಗುತ್ತವೆ. ಇವು ಮೂವತ್ತೆರಡರ ಕ್ರಮವು ಕೂಡ ಗಡಿಯಾರದ ಮುಳ್ಳಿನ ಹಾಗೆ ಇರುತ್ತದೆ. ಈಗ ಇವುಗಳ ಹೆಸರುಗಳನ್ನು ನೋಡೋಣ. ಚಾರ್ಟ ನಂ. ೧೨.೧ ರಲ್ಲಿ ತಮಗೆ ಈಗ ನೋಡುವುದಿದೆ. ಮೊದಲನೆಯದು ಕಚ್ಛಾ ಇದೆ, ಕಚ್ಛವಲ್ಲ ಇಲ್ಲದಿದ್ದರೆ ಕಚ್ಛದೊಳಗೆ ಹುಡುಕುತ್ತ ಹೋಗಬಹುದಾಗಿದೆ. ಇನ್ನೊಮ್ಮೆ ನೋಡಬೇಕು - ಉತ್ತರದಲ್ಲಿ - ೧) ಕಚ್ಛಾ, ೨) ಸುಕಚ್ಛಾ, ೩) ಮಹಾಕಚ್ಛಾ, ೪) ಸುಕಚ್ಛಾವತಿ, ೫) ಆವರ್ತಾ, ೬) ಲಾಂಗಲಾವರ್ತಾ, ೭) ಪುಷ್ಕಲಾ, ೮) ಪುಷ್ಕಲಾವತಿ, ಇನ್ನು ದಕ್ಷಿಣದಲ್ಲಿ - ೯) ವತ್ಸಾ, ೧೦) ಸುವತ್ಸಾ, ೧೧) ಮಹಾವತ್ಸಾ, ೧೨) ವತ್ಸಕಾವತಿ, ೧೩) ರಮ್ಯಾ, ೧೪) ಸುರಮ್ಯಕಾ, ೧೫) ರಮಣೀಯಾ, ೧೬) ಮಂಗಲಾವತಿ.

ಪಶ್ಚಿಮ ವಿದೇಹದಲ್ಲಿ ಮೊದಲು ದಕ್ಷಿಣದ ಕಡೆಗೆ ಅದರ ನಂತರ ಉತ್ತರ ಕಡೆಗೆ ಎಣಿಕೆ ಮಾಡೋಣ. ಪಶ್ಚಿಮ ವಿದೇಹದಲ್ಲಿ ಯಾವ ನದಿಯು ಹರಿಯುತ್ತದೆ ? ಅಹುದು, ಸೀತೋದಾ ನದಿಯು ಹರಿಯುತ್ತದೆ ಸೀತೋದಾ ನದಿಯ ದಕ್ಷಿಣದಲ್ಲಿ ಭದ್ರಶಾಲ ವನವೇದಿಯ ನಂತರ ಇಲ್ಲಿಂದ ನಾವು ಹದಿನೇಳು, ಹದಿನೆಂಟು ಹೀಗೆ ಎಣಿಸೋಣ. ಪಶ್ಚಿಮ ವಿದೇಹದ ಸಲುವಾಗಿ ಚಾರ್ಟ ನಂ. ೧೨.೨ ನೋಡಬೇಕು. ದಕ್ಷಿಣದಲ್ಲಿ ಹದಿನೇಳರಿಂದ ಇಪ್ಪತ್ನಾಲ್ಕರವರೆಗೆ ನಂತರ ಉತ್ತರದಲ್ಲಿ ಇಪ್ಪತ್ತೈದರಿಂದ ಮೂವತ್ತೆರಡರವರೆಗೆ ಅಂಕಿಗಳನ್ನು ಬರೆಯಲಾಗಿದೆ. ಅವುಗಳ ಹೆಸರು ಈ ಪ್ರಕಾರವಿವೆ - ದಕ್ಷಿಣದಲ್ಲಿ - ೧೭) ಪದ್ಮಾ, ೧೮) ಸುಪದ್ಮಾ, ೧೯) ಮಹಾಪದ್ಮಾ, ೨೦) ಪದ್ಮಕಾವತಿ, ೨೧) ಶಂಖಾ, ೨೨) ನಲಿನಿ, ೨೩) ಕುಮುದ, ೨೪) ಸರಿತ; ಉತ್ತರದಲ್ಲಿ - ೨೫) ವಪ್ರಾ, ೨೬) ಸುವಪ್ರಾ, ೨೭) ಮಹಾವಪ್ರಾ, ೨೮) ವಪ್ರಕಾವತಿ, ೨೯) ಗಂಧಾ, ೩೦) ಸುಗಂಧಾ, ೩೧) ಗಂಧಿಕಾ, ೩೨) ಗಂಧಮಾಲಿನಿ. ಇವು ಮೂವತ್ತೆರಡು ವಿದೇಹ ಕ್ಷೇತ್ರಗಳು ಸುದರ್ಶನ ಮೇರುವಿಗೆ ಸಂಬಂಧಿಸಿದವಿವೆ. ವರ್ತಮಾನದಲ್ಲಿ ಎಷ್ಟು ತೀರ್ಥಂಕರರು ವಿದೇಹ ಕ್ಷೇತ್ರದೊಳಗೆ ವಿದ್ಯಮಾನರಿದ್ದಾರೆ ? ಇಪ್ಪತ್ತು ತೀರ್ಥಂಕರರು ವಿರಾಜಿಸುತ್ತಿದ್ದಾರೆ. ಪಂಚಮೇರು ಸಂಬಂಧದಲ್ಲಿ ಇಪ್ಪತ್ತು ಇದ್ದಾರೆಂದರೆ ಒಂದೊಂದು ಮೇರು ಸಂಬಂಧದ ವಿದೇಹಗಳಲ್ಲಿ ನಾಲ್ಕು-ನಾಲ್ಕು ತೀರ್ಥಂಕರರಿದ್ದಾರೆ. ಮೊದಲಿನ ನಾಲ್ವರು ತೀರ್ಥಂಕರರು - ಸೀಮಂಧರ, ಯುಗಮಂಧರ, ಬಾಹು ಮತ್ತು ಸುಬಾಹುಗಳಿದ್ದಾರೆ. ನೋಡಿರಿ - ಸೀಮಂಧರ ಭಗವಂತರು ಸುದರ್ಶನ ಮೇರುವಿಗೆ ಸಂಬಂಧಿಸಿದ ಪೂರ್ವ ವಿದೇಹದ ಉತ್ತರದಲ್ಲಿದ್ದಾರೆ, ಯುಗಮಂಧರ ಭಗವಂತರು ಪೂರ್ವ ವಿದೇಹದ ದಕ್ಷಿಣದಲ್ಲಿದ್ದಾರೆ, ಬಾಹು ಭಗವಂತರು ಪಶ್ಚಿಮ ವಿದೇಹದ ದಕ್ಷಿಣದಲ್ಲಿದ್ದಾರೆ. ಮತ್ತು ಸುಬಾಹು ಭಗವಂತರು ಪಶ್ಚಿಮ ವಿದೇಹದ ಉತ್ತರದಲ್ಲಿದ್ದಾರೆ. ಅದರ ನಂತರ ಮುಂದಿನ ನಾಲ್ವರು ತೀರ್ಥಂಕರರು - ೫) ಸಂಜಾತಕ, ೬) ಸ್ವಯಂಪ್ರಭ, ೭) ವೃಷಭಾನನ ಮತ್ತು ೮) ಅನಂತವೀರ್ಯರಿದ್ದಾರೆ; ಅವರು ಪೂರ್ವಧಾತಕೀ ಖಂಡದಲ್ಲಿ ವಿಜಯ ಮೇರುವಿಗೆ ಸಂಬಂಧಿಸಿದ ಪೂರ್ವ ವಿದೇಹದ ಉತ್ತರದಲ್ಲಿ, ದಕ್ಷಿಣದಲ್ಲಿ ಹಾಗೂ ಪಶ್ಚಿಮ ವಿದೇಹದ ದಕ್ಷಿಣದಲ್ಲಿ ಮತ್ತು ಉತ್ತರದಲ್ಲಿ ವಿರಾಜಮಾನರಿದ್ದಾರೆ.

ಅದರ ನಂತರ ನಾವು ಪಶ್ಚಿಮ ಪುಷ್ಕರಾರ್ಧದ ಅಚಲಮೇರು ಸಂಬಂಧದ ಚರ್ಚೆ ಮಾಡೋಣ ಈ ರೀತಿ ಪಂಚ ಮೇರು ಸಂಬಂಧದ ಇಪ್ಪತ್ತು ಕ್ಷೇತ್ರಗಳಲ್ಲಿ ಇಪ್ಪತ್ತು ತೀರ್ಥಂಕರರು ಈಗ ವರ್ತಮಾನದಲ್ಲಿ ವಿದ್ಯಮಾನರಿದ್ದಾರೆ. ನಮ್ಮಲ್ಲಿ ಭರತ ಕ್ಷೇತ್ರದಲ್ಲಿ ನಾವು ಇಪ್ಪತ್ನಾಲ್ಕು ತೀರ್ಥಂಕರರ ಹೆಸರು ಹೇಳುತ್ತೇವೆ ಅವರಂತೂ ಒಬ್ಬರ ನಂತರ ಒಬ್ಬರು ಆಗಿದ್ದರು.

ಈಗ ನಾವು ಒಟ್ಟು ೩೨ X ೫ = ೧೬೦ ವಿದೇಹ ಕ್ಷೇತ್ರಗಳನ್ನು ನೋಡಿದೆವು. ಅವುಗಳಲ್ಲಿ ಪ್ರತಿಯೊಂದರಲ್ಲಿ ಒಂದು ಆರ್ಯಖಂಡ ಮತ್ತು ಐದು ಮ್ಲೇಚ್ಛ ಖಂಡಗಳಂತೆ ಆರು-ಆರು ಖಂಡಗಳಿರುತ್ತವೆ. ಇನ್ನು ಕಚ್ಛಾ ವಿದೇಹ ಕ್ಷೇತ್ರದ ಚರ್ಚೆಯಿದೆ. ಈಗ ನಾವು ಅಂಕಿ ಒಂದರ ಮೇಲೆ ಕಚ್ಛಾ ಎಂಬ ಹೆಸರಿನ ವಿದೇಹ ಕ್ಷೇತ್ರವನ್ನು ನೋಡಿದ್ದೆವು. ಚಾರ್ಟ ನಂ. ೧೨.೧ ರಲ್ಲಿ ನೋಡುವುದು. ಕಚ್ಛಾ ದೇಶದ ನಟ್ಟ ನಡುವೆ ಈ ಅಡ್ಡದಾದ ಕಂದು ಬಣ್ಣದ ರೇಖೆ ಎಂದರೆ ಭದ್ರಶಾಲ ವನವೇದಿಯಿಂದ ಚಿತ್ರಕೂಟ ವಕ್ಷಾರದವರೆಗೆ ತೋರಿಸಲಾಗಿದೆ, ಅದು ವಿಜಯಾರ್ಧ ಪರ್ವತವಿದೆ. ನೀಲ ಪರ್ವತದಿಂದ ಹೊರಡುವ ರಕ್ತಾ ಮತ್ತು ರಕ್ತೋದಾ ಎಂಬ ಎರಡು ನದಿಗಳು ನೇರವಾಗಿ ದಕ್ಷಿಣ ದಿಕ್ಕಿನಲ್ಲಿ ಹರಿಯುತ್ತ ವಿಜಯಾರ್ಧ ಪರ್ವತದ ಗುಹೆಗಳೊಳಗಿಂದ ಹಾಯ್ದು ದಕ್ಷಿಣದಲ್ಲಿ ಸೀತಾ ನದಿಯೊಳಗೆ ಕೂಡಿಕೊಳ್ಳುತ್ತವೆ. ಎರಡು ನದಿಗಳು ಮತ್ತು ಒಂದು ವಿಜಯಾರ್ಧದ ಕಾರಣ ವಿದೇಹ ಕ್ಷೇತ್ರದಲ್ಲಿ ಆರು ಖಂಡಗಳಾಗುತ್ತವೆ. ವಿಜಯಾರ್ಧದ ದಕ್ಷಿಣದಲ್ಲಿ ಎರಡು ನದಿಗಳ ಮಧ್ಯದಲ್ಲಿ ಆರ್ಯಖಂಡವಿದೆ ಮತ್ತು ಉಳಿದ ಐದು ಮ್ಲೇಚ್ಛ ಖಂಡಗಳಿವೆ. ಹೇಗೆ ಭರತ ಮತ್ತು ಐರಾವತ ಕ್ಷೇತ್ರದಲ್ಲಿ ಆರು-ಆರು ಖಂಡಗಳಿರುವುದನ್ನು ತಿಳಿದುಕೊಂಡಿದ್ದೆವು ಹಾಗೆ ಇಲ್ಲಿಯೂ ಇರುತ್ತವೆಯೆಂಬುದನ್ನು ತಿಳಿಯುವುದು. ಆದರೆ ಭರತ-ಐರಾವತದ ಆರ್ಯಖಂಡಗಳಲ್ಲಿ ಹೇಗೆ ಕಾಲಗಳ ಪರಿವರ್ತನೆಯಾಗುತ್ತದೆ ಹಾಗೆ ಇಲ್ಲಿ ಆಗುವುದಿಲ್ಲ. ಯಾವಾಗಲೂ ಇಲ್ಲಿ ಅವಸರ್ಪಿಣಿಯ ಚತುರ್ಥ ಕಾಲದಂಥ ಕಾಲವಿರುತ್ತದೆ.

ಒಂದುನೂರಾ ಅರವತ್ತು ವಿದೇಹಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದು ವಿಜಯಾರ್ಧ ಮತ್ತು ಎರಡೆರಡು ನದಿಗಳಿರುವ ಕಾರಣ ಆರು-ಆರು ಖಂಡಗಳು ಕಂಡು ಬರುತ್ತವೆ. ಇಲ್ಲಿ ಪೂರ್ವ ವಿದೇಹದ ಉತ್ತರದಲ್ಲಿ ನೀಲ ಪರ್ವತದಿಂದ ಹೊರಡುವಂಥ ಪ್ರತಿಯೊಂದು ವಿದೇಹದಲ್ಲಿನ ಎರಡು-ಎರಡು ನದಿಗಳು ದಕ್ಷಿಣದ ಕಡೆಗೆ ಹರಿದು ಸೀತಾ ನದಿಯಲ್ಲಿ ಹೋಗಿ ಸೇರುತ್ತವೆ, ಅವುಗಳ ಹೆಸರು ರಕ್ತಾ ಮತ್ತು ರಕ್ತೋದಾ ಎಂಬುದಾಗಿದೆ. ಪೂರ್ವ ವಿದೇಹದ ದಕ್ಷಿಣದಲ್ಲಿ ನಿಷಧ ಪರ್ವತದಿಂದ ಹೊರಡುವಂಥ ಎರಡು-ಎರಡು ನದಿಗಳು ಉತ್ತರ ದಿಕ್ಕಿನಲ್ಲಿ ಹರಿಯುತ್ತವೆ ಮತ್ತು ಸೀತಾ ನದಿಯಲ್ಲಿ ಹೋಗಿ ಕೂಡುತ್ತವೆ, ಅವುಗಳ ಹೆಸರು ಗಂಗಾ ಮತ್ತು ಸಿಂಧುವಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಇವೇ ಹೆಸರುಗಳಿರುತ್ತವೆ.

ಪ್ರತಿಯೊಂದು ವಿದೇಹ ಕ್ಷೇತ್ರದ ವಿಜಯಾರ್ಧ ಪರ್ವತವು ಬೇರೆ-ಬೇರೆಯಿದೆ. ಇಲ್ಲಿ ಎರಡನೇ ನಂಬರಿನದು ಸುಕಚ್ಛಾ ದೇಶವಿದೆ ಅದು ಚಿತ್ರಕೂಟ ವಕ್ಷಾರ ಮತ್ತು ದ್ರಹವತಿ ವಿಭಂಗಾ ನದಿಯ ಮಧ್ಯದ ಅಂತರಾಳದಲ್ಲಿದೆ. ಅದರ ವಿಜಯಾರ್ಧವು ಕೂಡ ವಕ್ಷಾರದಿಂದ ನದಿಯವರೆಗೇ ಇದೆ. ಇವೆಲ್ಲ ಎಂದರೆ ಪ್ರತಿಯೊಂದು ವಿದೇಹ ಕ್ಷೇತ್ರದಲ್ಲಿ ಚಕ್ರವರ್ತಿ, ತೀರ್ಥಂಕರ ಮತ್ತು ಅನ್ಯ ಶಲಾಕಾಪುರುಷರು ಬೇರೆ ಬೇರೆಯಾಗಿರುತ್ತಾರೆ ಅವರು ಒಂದು ಕ್ಷೇತ್ರದಿಂದ ಬೇರೆ ಅನ್ಯಕ್ಷೇತ್ರದೊಳಗೆ ಹೋಗುವುದಿಲ್ಲ. ಅಲ್ಲಿಯ ಚಕ್ರವರ್ತಿಗಳು ಕೂಡ ಆರು ಖಂಡಗಳನ್ನು ಜಯಿಸಿದ ಮೇಲೆ ಅಲ್ಲಿರುವ ವೃಷಭಗಿರಿಯ ಮೇಲೆ ಹೋಗಿ ತಮ್ಮ ಹೆಸರು ಬರೆಯುತ್ತಾರೆ.

ಎಂದರೆ ಎಷ್ಟು ವಿದೇಹ ಕ್ಷೇತ್ರಗಳಿವೆ ಅಷ್ಟೇ ವಿಜಯಾರ್ಧ ಪವರ್ತಗಳಿವೆ. ಹಾಗಾದರೆ ಜಂಬೂದ್ವೀಪದಲ್ಲಿ ಒಟ್ಟು ಎಷ್ಟು ವಿಜಯಾರ್ಧ ಪರ್ವತಗಳಿವೆ ?

ಉತ್ತರ :- ಮೂವತ್ನಾಲ್ಕು ವಿಜಯಾರ್ಧ ಪರ್ವತಗಳಿವೆ. ಅಹುದು ಮೂವತ್ತೆರಡು ವಿದೇಹದ

ಮೂವತ್ತೆರಡು ಮತ್ತು ಭರತ ಕ್ಷೇತ್ರದ್ದೊಂದು ಹಾಗೂ ಐರಾವತ ಕ್ಷೇತ್ರದ್ದೊಂದು - ಹೀಗೆ ಒಟ್ಟು ಮೂವತ್ನಾಲ್ಕು ವಿಜಯಾರ್ಧ ಪರ್ವತಗಳು ಒಂದೊಂದು ಮೇರುವಿಗೆ ಸಂಬಂಧಿಸಿದವಿರುತ್ತವೆ.

ಜಂಬೂದ್ವೀಪದಲ್ಲಿ ಎಷ್ಟು ವಕ್ಷಾರ ಪರ್ವತಗಳನ್ನು ನೋಡಿದೆವು ? - ನಾವು ಪೂರ್ವ ವಿದೇಹದಲ್ಲಿ ಉತ್ತರದಲ್ಲಿ ನಾಲ್ಕು ಮತ್ತು ದಕ್ಷಿಣದಲ್ಲಿ ನಾಲ್ಕು ವಕ್ಷಾರಗಳನ್ನು ನೋಡಿದ್ದೆವು ಅಲ್ಲವೇನು, ಹಾಗೆಯೇ ಪಶ್ಚಿಮ ವಿದೇಹದಲ್ಲಿಯೂ ನೋಡಿದ್ದೆವು. ಹಾಗಾದರೆ ಒಟ್ಟು ಹದಿನಾರು ವಕ್ಷಾರಗಳಾದವು. ಇವೆಲ್ಲ ಹೆಸರುಗಳನ್ನು ನಾವು ಕೊನೆಯಲ್ಲಿ ಯಾವಾಗ ಮಧ್ಯಲೋಕದ ಅಕೃತ್ರಿಮ ಜಿನಚೈತ್ಯಾಲಯಗಳನ್ನು ನೋಡುವುದಿದೆ ಆಗ ಮತ್ತೊಮ್ಮೆ ನೋಡುವವರಿದ್ದೇವೆ, ಅದಕ್ಕಾಗಿ ಸ್ಮರಣೆಯಲ್ಲಿಟ್ಟುಕೊಳ್ಳುವುದು.

ಇಲ್ಲಿ ಒಂದು ಮಾತಿನತ್ತ ಗಮನ ಹರಿಸಬೇಕಾಗುವುದು. ಪ್ರತಿಯೊಂದು ವಿದೇಹ ಕ್ಷೇತ್ರದಲ್ಲಿ ಐದು-ಐದು ಮ್ಲೇಚ್ಛ ಖಂಡಗಳಿವೆ ಮತ್ತು ಒಂದು-ಒಂದು ಆರ್ಯಖಂಡವಿರುತ್ತದೆ. ಮ್ಲೇಚ್ಛ ಖಂಡಗಳಲ್ಲಿ ಧರ್ಮದ ಯಾವ ಪ್ರವೃತ್ತಿಯೂ ಇರುವುದಿಲ್ಲ. ಸ್ವಾಧ್ಯಾಯದ ಅಭಿರುಚಿಯುಳ್ಳವರಲ್ಲಿ ಅದೆಷ್ಟೋ ಜನರು ಅಲ್ಲಿ ವಿದೇಹ ಕ್ಷೇತ್ರದಲ್ಲಿ ಜನಿಸಬಯಸುತ್ತಾರೆ. ಒಂದು ವೇಳೆ ತಪ್ಪಿ ಎಲ್ಲಾದರೂ ಮ್ಲೇಚ್ಛ ಖಂಡಗಳಲ್ಲಿ ಜನಿಸಿದರೆ ಏನಾಗಬಹುದು ? - ಎಂಬುದನ್ನು ಸ್ವಲ್ಪ ಯೋಚಿಸಬೇಕು. ಜನರು ವಿದೇಹದಲ್ಲಿ ಜನಿಸ ಬಯಸುತ್ತಾರೆ ಅದು ಕೂಡ ಸೀಮಂಧರ ಭಗವಂತರ ಹತ್ತಿರ, ಏಕೆಂದರೆ ಅವರಿಗೆ ಬಾಹು, ಸುಬಾಹು ಭಗವಂತರು ನಡೆಯುವುದಿಲ್ಲ. ಎಂದರೆ ಸೀಮಂಧರ ಭಗವಂತರು ಹೆಚ್ಚು ಪ್ರಿಯರಿದ್ದಾರೆ ಅಲ್ಲವೇನು ? ನಮ್ಮ ಇಪ್ಪತ್ತಾನ್ಲುಕ್ಕು ತೀರ್ಥಂಕರರಲ್ಲಿಯೂ ಕೂಡ ನಾವು ಇಷ್ಟರನ್ನಾಗಿ ಆಯ್ಕೆ ಮಾಡಿಕೊಂಡಿದ್ದೇವೆ. ಪಾರ್ಶ್ವನಾಥರನ್ನು ಸಂಕಟ ವಿಮೋಚಕರನ್ನಾಗಿ ಮತ್ತು ಶಾಂತಿನಾಥರನ್ನು ಶಾಂತಿ ಪ್ರದಾಯಕರನ್ನಾಗಿ, ಅಲ್ಲವೇನು ? ಇವೆಲ್ಲವೂ ಅಭಿಪ್ರಾಯದ ದೋಷಗಳಿವೆ.

ವಿದೇಹ ಕ್ಷೇತ್ರದಲ್ಲಿ ವರ್ತಮಾನದಲ್ಲಿ ಇಪ್ಪತ್ತು ತೀರ್ಥಂಕರರು ವಿದ್ಯಮಾನರಿದ್ದಾರೆ. ಕೆಲವೊಮ್ಮೆ ಹೇಗಾಗುತ್ತದೆಯೆಂದರೆ ಎಲ್ಲ ಒಂದುನೂರಾ ಅರವತ್ತು ವಿದೇಹ ಕ್ಷೇತ್ರಗಳಲ್ಲಿ ಪ್ರತಿಯೊಂದರಲ್ಲಿ ತೀರ್ಥಂಕರರು ಇರುತ್ತಾರೆ ಮತ್ತು ಅದೇ ಕಾಲದಲ್ಲಿ ಐದು ಭರತಕ್ಷೇತ್ರ ಮತ್ತು ಐದು ಐರಾವತ ಕ್ಷೇತ್ರಗಳಲ್ಲಿಯೂ ಕೂಡ ತೀರ್ಥಂಕರರು ವಿರಾಜಮಾನರಿರುತ್ತಾರೆ. ಈ ರೀತಿ ಒಟ್ಟು ಒಂದುನೂರಾ ಎಪ್ಪತ್ತು ತೀರ್ಥಂಕರರು ಏಕಕಾಲಕ್ಕೆ ಇರುವ ಸಾಧ್ಯತೆಯಿದೆ. ಹೀಗೆ ಯಾವಾಗಲಾದರೂ ಆಗಿತ್ತೇನು ? - ಅಹುದು, ಯಾವಾಗ ನಮ್ಮಲ್ಲಿ ಅಜಿತನಾಥ ತೀರ್ಥಂಕರರು ಇದ್ದರು ಆಗ ಹೀಗೆ ಆಗಿತ್ತು. ಪೂರ್ವ ವಿದೇಹದ ಕೊನೆಯಲ್ಲಿ ಪೂರ್ವದ ಸೀಮೆಯ ಮೇಲೆ ದೇವಾರಣ್ಯ ವನವೇದಿಯಿದೆ. ಅದರ ಪೂರ್ವ ದಿಕ್ಕಿನಲ್ಲಿ ದೇವಾರಣ್ಯ ವನವಿದೆ. ಇದರ ಮಧ್ಯದೊಳಗಿಂದ ಸೀತಾನದಿಯು ಪೂರ್ವದಕಡೆಗೆ ಹರಿಯುತ್ತದೆ ಮತ್ತು ಲವಣ ಸಮುದ್ರವನ್ನು ಹೋಗಿ ಸೇರುತ್ತದೆ. ದೇವಾರಣ್ಯ ವನ ಮತ್ತು ಲವಣ ಸಮುದ್ರದ ಮಧ್ಯದಲ್ಲಿ ಗೋಡೆಯಂಥ ರಚನೆಯಿದೆ ಇದನ್ನು ಜಗತಿಯೆಂದು ಹೇಳುತ್ತಾರೆ. ಸೀತಾ ನದಿಯು ಎಲ್ಲಿ ಸಮುದ್ರದೊಳಗೆ ಪ್ರವೇಶ ಮಾಡುತ್ತದೆ ಅಲ್ಲಿ ಈ ಜಗತಿಯಲ್ಲಿ ದ್ವಾರವು ಕಂಡು ಬರುತ್ತದೆ. ಎಲ್ಲ ಮಹಾನದಿಗಳು ಎಲ್ಲಿ ಸಮುದ್ರದೊಳಗೆ ಪ್ರವೇಶ ಮಾಡುತ್ತವೆಯೋ ಅಲ್ಲಿ ಇಂಥದೇ ರಚನೆಯಿರುತ್ತದೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹದಿನಾಲ್ಕನೆಯ ತೀರ್ಥಂಕರರಾದ
ಶ್ರೀ ಭುಜಂಗ ಭಗವಂತರಿಗೆ ಜಯವಾಗಲಿ.

★★★★★

೧೫. ವಿದ್ಯಾಧರರು, ಕುಭೋಗಭೂಮಿ

ಶ್ರೀಮದ್ ನೇಮಿಚಂದ್ರ ಆಚಾರ್ಯ ಭಗವಂತರಿಂದ ವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಇಲ್ಲಿ ಮೂರು ಲೋಕಗಳ ಸ್ವರೂಪವನ್ನು ನೋಡುತ್ತಿದ್ದೇವೆ. ಅಧೋಲೋಕ, ಊರ್ಧ್ವಲೋಕಗಳ ಸ್ವರೂಪವನ್ನು ನೋಡಿದ ನಂತರ ಮಧ್ಯಲೋಕದ ವರ್ಣನೆಯನ್ನು ನೋಡುತ್ತ ನಾವು ಮನುಷ್ಯ ಲೋಕದಲ್ಲಿ ಆರು ಕುಲಾಚಲ, ಏಳು ಕ್ಷೇತ್ರ, ಕರ್ಮಭೂಮಿ, ಭೋಗಭೂಮಿ ಮೊದಲಾದವುಗಳ ವರ್ಣನೆಯನ್ನು ನೋಡಿದೆವು. ಭರತಕ್ಷೇತ್ರ ಹಾಗೂ ವಿದೇಹ ಕ್ಷೇತ್ರಗಳ ವರ್ಣನೆಯನ್ನೂ ನೋಡಿದೆವು. ಆರು-ಆರು ಕಾಲಗಳ ಪರಿವರ್ತನೆಯಂತೂ ಕೇವಲ ಭರತ ಮತ್ತು ಐರಾವತ ಕ್ಷೇತ್ರಗಳಲ್ಲಿಯೇ ಆಗುತ್ತದೆ, ಅದು ಕೂಡ ಕೇವಲ ಆರ್ಯಖಂಡಗಳಲ್ಲಿಯೇ ಈ ಪರಿವರ್ತನೆಯಾಗುತ್ತದೆ, ಮ್ಲೇಚ್ಛ ಖಂಡಗಳಲ್ಲಿ ಆಗುವುದಿಲ್ಲ. ಆರ್ಯ ಖಂಡದಲ್ಲಿಯಂತೂ ಒಂದರಿಂದ ಆರು ಕಾಲ ಮತ್ತು ನಂತರ ವಿರುದ್ಧ ಕ್ರಮದಿಂದ ಅವುವೇ ಕಾಲಗಳ ಪರಿವರ್ತನೆಯಾಗುತ್ತಿರುತ್ತದೆ. ಆದರೆ ಭರತ-ಐರಾವತಗಳ ಮ್ಲೇಚ್ಛ ಖಂಡಗಳಲ್ಲಿ ಚತುರ್ಥಕಾಲ ಸದೃಶ ಪರಿಸ್ಥಿತಿಯಿರುತ್ತದೆ ಅಲ್ಲಿ ಭೋಗ ಭೂಮಿಯೂ ಇರುವುದಿಲ್ಲ ಮತ್ತು ಐದನೇ ಹಾಗೂ ಆರನೇ ಕಾಲವೂ ಇರುವುದಿಲ್ಲ. ಇನ್ನು ಚತುರ್ಥಕಾಲದ ಅರ್ಥವು ಅಲ್ಲಿಂದ ಮೋಕ್ಷವಾಗುತ್ತದೆಯೆಂದು ಮನ್ನಿಸಬಾರದು. ಇಲ್ಲಿಯಂತೂ ಕೇವಲ ಶರೀರದ ಅವಗಾಹನ ಮತ್ತು ಆಯುವಿನ ಅಪೇಕ್ಷೆಯಿಂದ ಕಥನವಿದೆ. ಎಲ್ಲಿ ಆರ್ಯ ಖಂಡಗಳಲ್ಲಿ ಆರು ಕಾಲಗಳಿರುತ್ತವೆ ಅಲ್ಲಿ ಮ್ಲೇಚ್ಛ ಖಂಡಗಳಲ್ಲಿ ಚತುರ್ಥಕಾಲದ ಆದಿಯಿಂದ ಅಂತ್ಯದವರೆಗೆ ಎಷ್ಟು ಪರಿವರ್ತನವಾಗುತ್ತದೆ ಅಷ್ಟೇ ಕಂಡು ಬರುತ್ತದೆ.

ಇಲ್ಲಿ ಅವಸರ್ಪಿಣಿಯ ಚತುರ್ಥಕಾಲದ ಪ್ರಾರಂಭದಲ್ಲಿ ಐನೂರು ಧನುಷ್ಯ ಎತ್ತರ ಹಾಗೂ ಒಂದು ಕೋಟಿಪೂರ್ವದ ಆಯುವಿರುತ್ತದೆ ಮತ್ತು ಕೊನೆಯಲ್ಲಿ ಏಳು ಮೊಳದ ಎತ್ತರ ಹಾಗೂ ಒಂದು ನೂರಾ ಇಪ್ಪತ್ತು ವರ್ಷದ ಆಯುವು ಉತ್ಕೃಷ್ಟ ರೂಪದಿಂದ ಇರುತ್ತದೆ. ಚಕ್ರವರ್ತಿಯು ಆರೂ ಖಂಡಗಳನ್ನು ಜಯಿಸುತ್ತಾನೆ, ಮ್ಲೇಚ್ಛಖಂಡಗಳ ಮೇಲೆ ವಿಜಯ ಪ್ರಾಪ್ತ ಮಾಡಿಕೊಳ್ಳುತ್ತಾನೆ ಆಗ ಸಾವಿರಾರು ಮ್ಲೇಚ್ಛ ಕನ್ಯೆಯರ ಜತೆ ವಿವಾಹ ಮಾಡಿಕೊಂಡು ಅವರನ್ನು ಆರ್ಯಖಂಡದೊಳಗೆ ತಗೆದುಕೊಂಡು ಬರುತ್ತಾನೆ. ಹಾಗಾದರೆ ಅವರು ಇವನಿಗೆ ಸರಿಯಾಗುವಷ್ಟು ಎತ್ತರವುಳ್ಳವರೇ ಇರಬಹುದಾಗಿದೆ ಅಲ್ಲವೇನು ? ಮತ್ತು ಕೊನೆಯಲ್ಲಿ ಆಗುವಂಥ ಚಕ್ರವರ್ತಿಯ ಎತ್ತರ, ಆಕಾರವು ಚಿಕ್ಕದಿರುತ್ತದೆ ಎಂದ ಮೇಲೆ ಆ ಮ್ಲೇಚ್ಛ ಕನ್ಯೆಯರು ಕೂಡ ಅವನಿಗೆ ಯೋಗ್ಯವಾಗುವಂಥ ಎತ್ತರ ಹಾಗೂ ಆಕಾರದವರೇ ಇರುತ್ತಾರೆ.

ಎಲ್ಲಿ ಯಾವ ಕಾಲವು ವರ್ತಿಸುತ್ತದೆಯೆಂಬುದನ್ನು ನಾವು ಮೊದಲು ವಿಸ್ತಾರದಿಂದ ನೋಡಿಯಾಗಿದೆ. ಎಲ್ಲಿ ಯಾವಾಗಲೂ ಉತ್ತಮ, ಮಧ್ಯಮ ಅಥವಾ ಜಘನ್ಯ ಭೋಗಭೂಮಿಯು ಇರುತ್ತದೆ, ಆ ಕ್ಷೇತ್ರಗಳನ್ನೂ ತಿಳಿದುಕೊಂಡಾಗಿದೆ. ವಿದೇಹ ಕ್ಷೇತ್ರದಲ್ಲಿ ಯಾವಾಗಲೂ ಚತುರ್ಥಕಾಲವು ವರ್ತಿಸುತ್ತದೆ. ಅಲ್ಲಿ ತೀರ್ಥಂಕರರ ವಿದ್ಯಮಾನತೆಯು ಕೂಡ ಯಾವಾಗಲೂ ಇದ್ದೇ ಇರುತ್ತದೆ. ಮೋಕ್ಷಮಾರ್ಗ ಹಾಗೂ ಅದರ ಉಪದೇಶವು ಕೂಡ ಯಾವಾಗಲೂ ನಡೆದೇ ಇರುತ್ತದೆ, ಅದರ ಲೋಪವೆಂದೂ ಆಗುವುದಿಲ್ಲ. ಈ ಜೈನಧರ್ಮದ ಗತಿಯೇನು ? ಎಂಬ ಚಿಂತೆಯು ನಮ್ಮನ್ನು ಕಾಡುತ್ತಿರುತ್ತದೆ. ಅದರ ಲೋಪವಾಗಿ ಹೋದರೆ ? - ಎನ್ನುವ ಸಂದೇಹವು ನಮ್ಮ

ತಲೆ ತಿನ್ನುತ್ತಿರುತ್ತದೆ. ಆದರೆ ನಾನು ಜಿನೇಂದ್ರ ಕಥಿತ ತತ್ತ್ವಜ್ಞಾನವನ್ನು ಅಂಗೀಕಾರ ಮಾಡದಿದ್ದರೆ ನನ್ನ ಅವಸ್ಥೆಯು ಏನಾಗಬಹುದಾಗಿದೆ ? - ಎಂಬುದರ ಚಿಂತೆಯು ನಮಗಿಲ್ಲ. ಲೋಕವು ಎಷ್ಟು ದೊಡ್ಡದಿದೆಯೆಂಬುದನ್ನು ನೋಡುತ್ತಿದ್ದೇವೆ ಒಂದು ವೇಳೆ ನಾವು ನಮ್ಮ ಸ್ವರೂಪವನ್ನು ತಿಳಿದುಕೊಳ್ಳದಿದ್ದರೆ ಎಲ್ಲಿ ಹೋಗಿ ಜನಿಸುವುದು ಮತ್ತು ಅಲ್ಲಿ ಯಾರ ಆಶ್ರಯದಿಂದ ಯಾವ ಯಾವುದನ್ನು ಭೋಗಿಸುವುದು, ಎಲ್ಲೆಲ್ಲಿ ಭ್ರಮಿಸಬೇಕಾಗುವುದು ಎಂಬುದರ ವಿಚಾರ ಮಾಡಬೇಕಾಗುವುದು. ಈ ಮಾತಿನ ಭಯವು ನಮಗೆ ಮೂಡಿ ಬರಬೇಕಾಗುವುದು. ಸಂಸಾರದ ಭಯವೆನಿಸಿದರೆ ಅದರೊಳಗಿಂದ ಬಿಡುಗಡೆಯಾಗುವ ಉಪಾಯವನ್ನು ನನಗೆ ಇದೇ ಭವದಲ್ಲಿ ಮತ್ತು ಸಾಧ್ಯವಾದಷ್ಟು ಬೇಗ ಮಾಡಬೇಕಾಗುವುದೆಂಬ ಪ್ರಜ್ಞೆಯು ನಮ್ಮಲ್ಲಿ ಜಾಗೃತವಾಗುವ ಸಾಧ್ಯತೆಯಿದೆ.

ಭರತ-ಐರಾವತಗಳ ಐದು-ಐದು ಮ್ಲೇಚ್ಛ ಖಂಡಗಳಲ್ಲಿ ಹಾಗೂ ವಿಜಯಾರ್ಧ ಪರ್ವತದ ಶ್ರೇಣಿಗಳಲ್ಲಿ ಎಲ್ಲಿ ವಿದ್ಯಾಧರರು ವಾಸಮಾಡಿಕೊಂಡಿರುತ್ತಾರೆ ಅಲ್ಲಿ ಚತುರ್ಥಕಾಲದ ಆದಿಯಿಂದ ಅಂತ್ಯದವರೆಗಿನ ಸಮಾನ ಹಾನಿ ವೃದ್ಧಿಯಾಗುತ್ತದೆ. ಸುಖ-ದುಃಖದ ಅಪೇಕ್ಷೆಯಿಂದ ದೇವಗಳಲ್ಲಿ ಯಾವಾಗಲೂ ಪ್ರಥಮಕಾಲ ಮತ್ತು ನರಕಗಳಲ್ಲಿ ಯಾವಾಗಲೂ ಆರನೆಯ ಕಾಲವು ಇರುತ್ತದೆಯೆಂದು ತಿಳಿಯುವುದು; ಆ ಸಮಾನತೆಯು ಆಯು, ಶರೀರದ ಅವಗಾಹನ ಅಥವಾ ಆಹಾರದ ಅಪೇಕ್ಷೆಯಿಂದಲ್ಲ. ಕುಭೋಗಭೂಮಿಯಲ್ಲಿ ಮೂರನೆಯ ಕಾಲವಿರುತ್ತದೆ. ಸ್ವಯಂಭೂ ರಮಣ ಸಮುದ್ರ ಹಾಗೂ ಅರ್ಧ ಸ್ವಯಂಭೂರಮಣದ್ವೀಪ ಇವುಗಳಲ್ಲಿ ದುಃಖಮಾ ಅರ್ಥಾತ್ ಪಂಚಮ ಕಾಲವು ವರ್ತಿಸುತ್ತದೆ.

ನಾವು ಈ ಮೊದಲು ವಿಜಯಾರ್ಧ ಪರ್ವತಗಳ ಚರ್ಚೆ ಮಾಡಿರುವುದು ಸ್ಮರಣೆಯಲ್ಲಿರಬಹುದು. ಪ್ರತಿಯೊಂದು ವಿದೇಹಕ್ಷೇತ್ರ , ಭರತಕ್ಷೇತ್ರ , ಐರಾವತ ಕ್ಷೇತ್ರಗಳಲ್ಲಿ ಒಂದೊಂದು ವಿಜಯಾರ್ಧ ಪರ್ವತವಿರುತ್ತದೆ. ಅದು ಆಯಾಯಾ ಕ್ಷೇತ್ರವನ್ನು ದಕ್ಷಿಣ ಮತ್ತು ಉತ್ತರ ಹೀಗೆ ಎರಡು ವಿಭಾಗಗಳಲ್ಲಿ ವಿಭಾಜಿತ ಮಾಡುತ್ತದೆ. ವಿಜಯದ ಅರ್ಥವು ದೇಶವಿದೆ. ಈ ಪರ್ವತದ ಮೂಲಕ ಕ್ಷೇತ್ರ ಎಂದರೆ ದೇಶವು ಅರ್ಧವಾಗುತ್ತದೆ ಆದುದರಿಂದ ಇದರ ವಿಜಯಾರ್ಧವೆಂಬ ಹೆಸರು ಸಾರ್ಥಕವಿದೆ. ಈ ವಿಜಯಾರ್ಧ ಪರ್ವತಗಳು ಪೂರ್ವ-ಪಶ್ಚಿಮ ಉದ್ದವಾಗಿದ್ದು ತಮ್ಮ-ತಮ್ಮ ಸೀಮೆಯವರೆಗೆ ಹರಡಿಕೊಂಡಿವೆ. ಇವುಗಳ ದಕ್ಷಿಣೋತ್ತರ ಅಗಲವು ಐವತ್ತು ಯೋಜನವಿದೆ ಮತ್ತು ಎತ್ತರವು ಇಪ್ಪತ್ತೈದು ಯೋಜನವಿದೆ. ವಿಜಯಾರ್ಧ ಪರ್ವತವು ಕೆಳಗಿನಿಂದ ಹಿಡಿದು ಹತ್ತು ಯೋಜನ ಎತ್ತರದವರೆಗೆ ಐವತ್ತು ಯೋಜನ ಸಮಾನ ಅಗಲವಿದೆ. ಹತ್ತು ಯೋಜನ ಎತ್ತರದ ನಂತರ ದಕ್ಷಿಣ ಮತ್ತು ಉತ್ತರ ಎರಡೂ ದಿಕ್ಕುಗಳಲ್ಲಿ ಹತ್ತು-ಹತ್ತು ಯೋಜನದ ಕಡಿತವಾಗುತ್ತದೆ. ಅಲ್ಲಿ ಪರ್ವತದ ಅಗಲವು ಮೂವತ್ತು ಯೋಜನ ಉಳಿಯುತ್ತದೆ ಅದು ಮುಂದೆ ಹತ್ತು ಯೋಜನದವರೆಗೆ ಸಮಾನ ಉಳಿಯುತ್ತದೆ. ಪುನಃ ಇಲ್ಲಿ ದಕ್ಷಿಣ ಮತ್ತು ಉತ್ತರದಲ್ಲಿ ಹತ್ತು-ಹತ್ತು ಯೋಜನದ ಕಡಿತವಾಗುತ್ತದೆ ಮತ್ತು ಪರ್ವತದ ಅಗಲವು ಹತ್ತು ಯೋಜನ ಉಳಿಯುತ್ತದೆ, ಅದು ಮೇಲೆ ಐದು ಯೋಜನದವರೆಗೆ ಸಮಾನವಿರುತ್ತದೆ.

ಅಲ್ಲಿ ಪ್ರಥಮ ಶ್ರೇಣಿ ಅರ್ಥಾತ್ ಕಡಿತದ ಮೇಲೆ ವಿದ್ಯಾಧರರು ವಾಸಿಸುತ್ತಾರೆ. ಎಂದರೆ ದಕ್ಷಿಣ ಮತ್ತು ಉತ್ತರ ಎರಡೂ ಕಡೆಯ ಶ್ರೇಣಿಗಳಲ್ಲಿ ವಿದ್ಯಾಧರರ ನಗರಗಳಿರುತ್ತವೆ. ವಿದೇಹ ಕ್ಷೇತ್ರದ ವಿಜಯಾರ್ಧಗಳ ದಕ್ಷಿಣ ಶ್ರೇಣಿಯಲ್ಲಿ ಐವತ್ತೈದು ನಗರ ಮತ್ತು ಉತ್ತರ ಶ್ರೇಣಿಯಲ್ಲಿ ಐವತ್ತೈದು ನಗರಗಳಿವೆ. ಜಂಬೂದ್ವೀಪದ ಭರತ-ಐರಾವತ ಕ್ಷೇತ್ರ ಸಂಬಂಧದ ವಿಜಯಾರ್ಧದ ದಕ್ಷಿಣ ಶ್ರೇಣಿಯಲ್ಲಿ ಐವತ್ತು ಮತ್ತು ಉತ್ತರ ಶ್ರೇಣಿಯಲ್ಲಿ

ಅರವತ್ತು ನಗರಗಳಿವೆ. ಇವೆಲ್ಲ ನಗರಗಳು ರತ್ನಮಯವಿರುತ್ತವೆ. ಕೋಟೆ, ದ್ವಾರ, ಮಂದಿರ, ಮಾರ್ಗ, ಸರೋವರ, ವನ ಇವುಗಳಿಂದ ಆ ನಗರಗಳು ವಿರಾಜಿತವಿವೆ. ಆ ನಗರಗಳಲ್ಲಿ ವಿದ್ಯಾಧರರು ವಾಸ ಮಾಡಿಕೊಂಡಿದ್ದಾರೆ. ಈ ವಿದ್ಯಾಧರರಂತೂ ಮನುಷ್ಯರಿದ್ದಾರೆ, ದೇವಗಳಲ್ಲ. ಅವರಿಗೆ ವಿಶಿಷ್ಟ ವಿದ್ಯೆಗಳು ಪ್ರಾಪ್ತವಾಗುತ್ತವೆ. ಅವರು ಮೋಕ್ಷಕ್ಕೆ ಕೂಡ ಹೋಗುತ್ತಾರೆ. ಯಾವ ವಿದ್ಯಾಧರರು ಮೋಕ್ಷಕ್ಕೆ ಹೋಗಿದ್ದಾರೆಂಬುದು ತಮಗೆ ಗೊತ್ತಿದೆಯೇನು ?- ಅಹುದು ಹನುಮಂತನು ವಿದ್ಯಾಧರನಿದ್ದನು, ಅವನು ಮೋಕ್ಷಕ್ಕೆ ಹೋಗಿದ್ದಾನೆ. ರಾವಣನ ಪುತ್ರ ಮೇಘನಾಥನು ಕೂಡ ಮೋಕ್ಷಕ್ಕೆ ಹೋಗಿದ್ದಾನೆ.

ಈ ವಿದ್ಯಾಧರರಿಗೆ ಮೂರು ಪ್ರಕಾರದ ವಿದ್ಯೆಗಳು ಪ್ರಾಪ್ತವಾಗುತ್ತವೆ - ೧) ಸಾಧಿತವಿದ್ಯೆ - ಯಾವುದನ್ನು ಸ್ವಯಂ ಸಾಧ್ಯ ಮಾಡಿಕೊಳ್ಳಲಾಗುತ್ತದೆ ಅದು ಸಾಧಿತ ವಿದ್ಯೆಯಿದೆ. ೨) ಕುಲವಿದ್ಯೆ - ಪಿತೃಪಕ್ಷ ಅರ್ಥಾತ್ ಕುಲಪರಂಪರೆಯಿಂದ ನಡೆದುಕೊಂಡು ಬಂದಿರುವ ವಿದ್ಯೆ. ೩) ಜಾತಿ ವಿದ್ಯೆ - ಮಾತೃಪಕ್ಷ ಅರ್ಥಾತ್ ಜಾತಿಯಲ್ಲಿ ನಡೆದುಕೊಂಡು ಬಂದಿರುವ ವಿದ್ಯೆ.

ವಿದ್ಯಾಧರರು ಷಟ್‌ಕರ್ಮಗಳಿಂದ ಸಂಯುಕ್ತರಿರುತ್ತಾರೆ. ಆ ಷಟ್ಕರ್ಮಗಳು ಈ ಪ್ರಕಾರವಿವೆ - ೧) ಇಜ್ಯಾ, ೨) ವಾರ್ತಾ, ೩) ದತ್ತಿ, ೪) ಸ್ವಾಧ್ಯಾಯ, ೫) ಸಂಯಮ, ೬) ತಪ.

ಪೂಜ್ಯವಿರುವುದನ್ನು ಪೂಜಿಸುವುದು ಇಜ್ಯಾ ಇದೆ. ಅಸಿ, ಮಸಿ ಮೊದಲಾದ ಜೀವಿಸುವ ಉಪಾಯರೂಪದ ವ್ಯಾಪಾರವು ವಾರ್ತೆಯಿದೆ. ದಾನ ಕೊಡುವುದು ದತ್ತಿಯಿದೆ. ಪಠನ ಪಾಠಣ ಮಾಡುವುದು ಸ್ವಾಧ್ಯಾಯವಿದೆ. ಅವಿರತಿಯ ತ್ಯಾಗವು ಸಂಯಮವಿದೆ. ತಪಶ್ಚರಣ ಮಾಡುವುದು ಅದು ತಪವಿದೆ.

ಪ್ರಶ್ನೆ :- ಈ ಅಸಿ, ಮಸಿಯೆಂದರೇನು ಇದೆ ?

ಉತ್ತರ :- ಅಸಿ, ಮಸಿ, ಕೃಷಿ, ವಿದ್ಯೆ, ವಾಣಿಜ್ಯ ಮತ್ತು ಶಿಲ್ಪ ಮೊದಲಾದ ಲೌಕಿಕ ವ್ಯವಹಾರವನ್ನು ಆಜೀವಿಕೆಯ ಸಲುವಾಗಿ ಇಲ್ಲಿ ಭರತ ಕ್ಷೇತ್ರದಲ್ಲಿ ವೃಷಭದೇವರು ಯುಗದ ಆದಿಯಲ್ಲಿ ಜನರಿಗೆ ಕಲಿಸಿಕೊಟ್ಟಿದ್ದರು. ಅಸಿ ಎಂದರೆ ಖಡ್ಗ, ಧನುಷ್ಯ ಮೊದಲಾದ ಶಸ್ತ್ರ ವಿದ್ಯೆಯಲ್ಲಿ ತರಬೇತಿ ಹೊಂದಿ ಸೈನಿಕ ಕಾರ್ಯ ಮಾಡುತ್ತ ಧನಾರ್ಜನೆ ಮಾಡುವುದು ಮತ್ತು ಆಜೀವಿಕೆಯನ್ನು ನಡೆಸುವುದು. ಬೇರೆ ರೀತಿಯಿಂದ ಹೇಳಿದರೆ ತಮ್ಮ ಜೀವನದ (ಹೊಟ್ಟೆ, ಬಟ್ಟೆಗಳ) ಸಲುವಾಗಿ ಇವು ಆರು ಬೇರೆ-ಬೇರೆ ಸಾಧನಗಳಿವೆ. ಮಸಿಯ ಅರ್ಥವು ಲೇಖನ ಕಾರ್ಯಮಾಡಿ ಧನ ಸಂಪಾದನೆ ಮಾಡುವುದು. ಗುಮಾಸ್ತ-ಲೆಕ್ಕಪತ್ರ ಬರೆಯುವುದು ಮೊದಲಾದವು ಇದರಲ್ಲಿ ಬರುತ್ತವೆ. ಕೃಷಿ ಅರ್ಥಾತ್ ಒಕ್ಕಲುತನ (ಬೇಸಾಯ) ಮಾಡುವುದು. ವಿದ್ಯೆ ಅರ್ಥಾತ್ ಚಿತ್ರ ಬರೆಯುವುದು, ನೃತ್ಯ ಗಾಯನ ಮೊದಲಾದ ಎಪ್ಪತ್ತೆರಡು ಕಲೆಗಳ ಮೂಲಕ ಧನಾರ್ಜನೆ ಮಾಡುವುದು. ಇನ್ನು ಶಿಲ್ಪ ಎಂದರೆ ಬಡಿಗ, ಕಮ್ಮಾರ, ಅಕ್ಕಸಾಲಿಗ, ನಾವಲಿಗ, ಅಗಸ ಇವೆಲ್ಲ ಕಾರ್ಯಗಳು ಬರುತ್ತವೆ. ವಾಣಿಜ್ಯ ಎಂದರೆ ಅನೇಕ ಪ್ರಕಾರದ ವಸ್ತುಗಳ ವ್ಯಾಪಾರ ಮಾಡುವುದು.

ವಿದ್ಯಾಧರರು ಕರ್ಮಭೂಮಿಯ ಮನುಷ್ಯರಿದ್ದಾರೆ. ಅವರಲ್ಲಿ ಯಾವಾಗಲೂ ಚತುರ್ಥಕಾಲವಿರುತ್ತದೆ. ಭರತ-ಐರಾವತಗಳ ಆರ್ಯ ಖಂಡದಲ್ಲಿ ಚತುರ್ಥಕಾಲದ ಆದಿಯಿಂದ ಅಂತ್ಯದವರೆಗೆ ಯಾವ ರೀತಿ ಹಾನಿ (ಅವಸರ್ಪಿಣಿ ಕಾಲದಲ್ಲಿ) ಮತ್ತು ವೃದ್ಧಿ (ಉತ್ಸರ್ಪಿಣಿ ಕಾಲದಲ್ಲಿ) ಆಗುತ್ತದೆ ಅದೇ ರೀತಿ ಅಲ್ಲಿಯ ವಿಜಯಾರ್ಧದ

ವಿದ್ಯಾಧರ ಶ್ರೇಣಿಯಲ್ಲಿ ಆಗುತ್ತಿರುತ್ತದೆ. ಅಲ್ಲಿ ಪಂಚಮ, ಷಷ್ಠಮಕಾಲವಿರುವುದಿಲ್ಲ. ಇಲ್ಲಿ ಭರತ, ಐರಾವತಗಳ ಆರ್ಯಖಂಡದಲ್ಲಿ ಆರನೇ (ಷಷ್ಠಮ) ಕಾಲದ ಕೊನೆಯಲ್ಲಿ ಅದೆಷ್ಟೋ ದಿವಸಗಳವರೆಗೆ ತೀಕ್ಷ್ಣ ಪ್ರಚಂಡವಾದ ಗಾಳಿ ಬೀಸುತ್ತದೆ, ಪ್ರಳಯವಾಗುತ್ತದೆಯೆಂಬುದನ್ನು ತಾವೆಲ್ಲರೂ ಆಲಿಸಿರಬಹುದು. ಆ ಸಮಯದಲ್ಲಿ ವಿದ್ಯಾಧರರು ಬಂದು ಕೆಲವು ಮನುಷ್ಯರನ್ನು ಮತ್ತು ತಿರ್ಯಂಚಗಳನ್ನು ತಮ್ಮಲ್ಲಿ ತಗೆದುಕೊಂಡು ಹೋಗುತ್ತಾರೆ. ವಿಜಯಾರ್ಧದ ದ್ವಿತೀಯ ಶ್ರೇಣಿ - ಎರಡನೆಯ ಕಡಿತವಿದೆ ಅಲ್ಲಿ ಸೌಧರ್ಮ ಸಂಬಂಧದ ಆಭಿಯೋಗ್ಯ ದೇವಗಳ ನಾನಾ ಪ್ರಕಾರದ ಮಣಿಮಯ ನಗರಗಳಿವೆ. ವಿಜಯಾರ್ಧದ ಶಿಖರಗಳ ಮೇಲೆ ಸಿದ್ಧಾಯತನ ಮೊದಲಾದ ಕೂಟಗಳಿವೆ. ಅಲ್ಲಿ ಪೂರ್ಣಭದ್ರ ಕೂಟದ ಮೇಲೆ ವಿಜಯಾರ್ಧ ಕುಮಾರಪತಿ ದೇವಗಳು ವಾಸ ಮಾಡಿರುತ್ತಾರೆ.

ಇಲ್ಲಿಯವರೆಗೆ ನಾವು ಕರ್ಮಭೂಮಿ, ಭೋಗಭೂಮಿಗಳ ಚರ್ಚೆ ಮಾಡಿಯಾಯಿತು. ಆದರೆ ಇವುಗಳಲ್ಲಿ ಕುಭೋಗಭೂಮಿಯೆಂದರೇನು ಮತ್ತು ಅವು ಎಲ್ಲಿ ಇರುತ್ತವೆ ? - ಎಂಬುದರ ಚರ್ಚೆಯನ್ನು ಈಗ ಮಾಡೋಣ. ಅವುಗಳನ್ನೇ ಕುಮನುಷ್ಯ ದ್ವೀಪಗಳೆಂದು ಕೂಡ ಹೇಳುತ್ತಾರೆ. ಅದರ ಸಲುವಾಗಿ ೯ನೇ ನಂಬರಿನ ಚಾರ್ಟ ನೋಡುವುದು. ಅಲ್ಲಿ ವಾಸಿಸುವಂಥ ಮನುಷ್ಯರನ್ನು ಕುಮನುಷ್ಯರು ಅಥವಾ ಅಂತರ್ದ್ವೀಪಜ ಮನುಷ್ಯರೆಂದು ಕೂಡ ಹೇಳುತ್ತಾರೆ. ಈ ಕುಭೋಗಭೂಮಿಗಳು ಲವಣಸಮುದ್ರ ಮತ್ತು ಕಾಲೋದಧಿ ಸಮುದ್ರದಲ್ಲಿ ಕಂಡು ಬರುವಂಥ ದ್ವೀಪಗಳಲ್ಲಿ ಇವೆ. ಈಗ ಸ್ವಲ್ಪ ಈ ಚಾರ್ಟ ನೋಡುತ್ತ ತಿಳಿದುಕೊಳ್ಳೋಣ.

ಇಲ್ಲಿ ಮಧ್ಯದೊಳಗೆ ಒಂದು ಲಕ್ಷ ಯೋಜನ ವ್ಯಾಸವುಳ್ಳ ಜಂಬೂದ್ವೀಪವಿದೆ, ಅದನ್ನು ಸುತ್ತುವರೆದುದು ಎರಡು ಲಕ್ಷ ಯೋಜನ ವಿಸ್ತಾರವುಳ್ಳದ್ದು ಇಲ್ಲಿ ಯಾವ ನೀಲಿ ವರ್ಣದಲ್ಲಿ ತೋರಿಸಲಾಗಿದೆ ಅದು ಲವಣ ಸಮುದ್ರವಿದೆ. ಅದರ ಮುಂದೆ ಅದರಿಂದ ದ್ವಿಗುಣ ವಿಸ್ತಾರವುಳ್ಳದ್ದು ಧಾತಕೀಖಂಡ ದ್ವೀಪವಿದೆ ಆದರೆ ಇಲ್ಲಿ ನಕಾಶದೊಳಗೆ ಸ್ಥಳಾವಕಾಶವು ಕಡಿಮೆ ಇದೆ ಮತ್ತು ಮುಂದಿನ ಕಾಲೋದಧಿ ಸಮುದ್ರದ ಪೂರ್ಣ ವಿಸ್ತಾರವನ್ನು ತೋರಿಸುವುದಿತ್ತು ಆದುದರಿಂದ ಈ ಧಾತಕೀಖಂಡ ದ್ವೀಪವನ್ನು ಬಹಳ ಚಿಕ್ಕದನ್ನಾಗಿ ತೋರಿಸಲಾಗಿದೆ. ಇದನ್ನು ತಮ್ಮ ಬುದ್ಧಿಯೊಳಗೆ ಲವಣ ಸಮುದ್ರದಿಂದ ದ್ವಿಗುಣ ವಿಸ್ತಾರವುಳ್ಳದ್ದೆಂದು ತಿಳಿದುಕೊಳ್ಳುವುದು. ಅದರ ಹೊರಗೆ ಕಾಲೋದಧಿ ಸಮುದ್ರವಿದೆ ಅದು ಎಂಟು ಲಕ್ಷ ಯೋಜನವಿಸ್ತಾರವುಳ್ಳದ್ದಿದೆ.

ಇಲ್ಲಿ ನಾವು ಲವಣಸಮುದ್ರ ಮತ್ತು ಕಾಲೋದಧಿ ಸಮುದ್ರದಲ್ಲಿ ಕಂಡು ಬರುವಂಥ ತೊಂಭತ್ತಾರು ದ್ವೀಪಗಳನ್ನು ನೋಡೋಣ ಅಲ್ಲಿ ಕುಭೋಗಭೂಮಿ ಇರುತ್ತದೆ. ಇವುಗಳೊಳಗಿಂದ ನಲವತ್ತೆಂಟು ದ್ವೀಪಗಳು ಲವಣ ಸಮುದ್ರದಲ್ಲಿವೆ ಮತ್ತು ನಲವತ್ತೆಂಟು ಕಾಲೋದಧಿ ಸಮುದ್ರದಲ್ಲಿವೆ. ಅದರಲ್ಲಿಯೂ ಇಪ್ಪತ್ತಾ ನ್ನುಲ್ಕು ದ್ವೀಪಗಳು ಸಮುದ್ರದ ಅಭ್ಯಂತರ ದಡದ ಹತ್ತಿರ ಇವೆ ಮತ್ತು ಇಪ್ಪತ್ತಾ ನ್ನುಲ್ಕು ಹೊರಗಿನ ದಡದ ಹತ್ತಿರದಲ್ಲಿವೆ. ನಾವು ಚಾರ್ಟದ ಆಧಾರದಿಂದ ಈ ದ್ವೀಪಗಳ ಮಾತನ್ನು ತಿಳಿದುಕೊಳ್ಳೋಣ. ಎಲ್ಲಕ್ಕಿಂತ ಮೊದಲು ಲವಣ ಸಮುದ್ರದ ಅಭ್ಯಂತರ ದಡದ ಹತ್ತಿರ ಅರ್ಥಾತ್ ಜಂಬೂದ್ವೀಪದ ಸಮೀಪ ನಾಲ್ಕು ದಿಕ್ಕುಗಳಲ್ಲಿ ಮತ್ತು ನಾಲ್ಕು ವಿದಿಕ್ಕುಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ ಎಂಟು ದ್ವೀಪಗಳಿವೆ. ಚಾರ್ಟದಲ್ಲಿ ಅವುಗಳನ್ನು ಕಪ್ಪು ವರ್ಣದೊಳಗೆ ತೋರಿಸಲಾಗಿದೆ ಅವುಗಳ ಪಕ್ಕದಲ್ಲಿಯೇ ಅವುಗಳ ಕ್ರಮ ಸಂಖ್ಯೆಯನ್ನು ಬರೆಯಲಾಗಿದೆ. - ಮೊದಲನೆಯದು ಪೂರ್ವದಲ್ಲಿ ಎರಡನೆಯದು ದಕ್ಷಿಣದಲ್ಲಿ, ಮೂರನೆಯದು ಪಶ್ಚಿಮದಲ್ಲಿ, ನಾಲ್ಕನೆಯದು ಉತ್ತರದಲ್ಲಿ, ಐದನೆಯದು ಆಗ್ನೇಯದಲ್ಲಿ, ಆರನೆಯದು ನೈಋತ್ಯದಲ್ಲಿ, ಏಳನೆಯದು ವಾಯವ್ಯದಲ್ಲಿ ಮತ್ತು

ಎಂಟನೆಯದು ಈಶಾನ್ಯದಲ್ಲಿ. ಈ ಎಂಟು ದ್ವೀಪಗಳ ಅಂತರಾಳದಲ್ಲಿ ಅವುಗಳಿಂದ ಹೊರದಡದ ಕಡೆಗೆ ಚಿಕ್ಕ ಆಕಾರವುಳ್ಳ ಬೇರೆ ಎಂಟು ದ್ವೀಪಗಳಿವೆ ಅವುಗಳನ್ನು ಇಲ್ಲಿ ಕೆಂಪು ವರ್ಣದೊಳಗೆ ತೋರಿಸಲಾಗಿದೆ. ಮೊದಲನೆಯ ಮತ್ತು ಐದನೆಯ ದ್ವೀಪದ ಅಂತರಾಳದಲ್ಲಿ ಒಂಭತ್ತನೆಯ ದ್ವೀಪವಿದೆ, ಮುಂದೆ ಕ್ರಮದಿಂದ ಒಂದೊಂದು ಅಂತರಾಳದಲ್ಲಿ ಹತ್ತನೆಯದರಿಂದ ಹದಿನಾರನೆಯದವರೆಗೆ ದ್ವೀಪಗಳಿವೆ, ಹೀಗೆ ಎಂಟು ಮತ್ತು ಎಂಟು ಹದಿನಾರಂತೂ ಇವು ಆದವು.

ಜಂಬೂದ್ವೀಪದಲ್ಲಿ ಇಲ್ಲಿ ಚಾರ್ಟದೊಳಗೆ ಉತ್ತರದಲ್ಲಿ ಶಿಖರೀ ಪರ್ವತ ಮತ್ತು ದಕ್ಷಿಣದಲ್ಲಿ ಹಿಮವಾನ ಪರ್ವತವನ್ನು ತೋರಿಸಲಾಗಿದೆ; ಅವುಗಳ ಪ್ರತಿಯೊಂದರ ಪೂರ್ವ ದಿಕ್ಕಿನಲ್ಲಿ ಎರಡು ಮತ್ತು ಪಶ್ಚಿಮ ದಿಕ್ಕಿನಲ್ಲಿ ಎರಡು ಹೀಗೆ ನಾಲ್ಕು-ನಾಲ್ಕು ದ್ವೀಪಗಳಿವೆ. ಚಾರ್ಟ ನೋಡುವುದು - ಇಲ್ಲಿ ಹಿಮವಾನ ಪರ್ವತದ ಸಾಲಿನಲ್ಲಿ ಪೂರ್ವದೊಳಗೆ ಒಂಭತ್ತನೆಯ ದ್ವೀಪದ ಪೂರ್ವದಲ್ಲಿ ಹದಿನೇಳನೆಯ ದ್ವೀಪವಿದೆ. ಅದೇ ರೇಖೆಯಲ್ಲಿ (ಸಾಲಿನಲ್ಲಿ) ಹಿಮವಾನ ಪರ್ವತದ ಪಶ್ಚಿಮದಲ್ಲಿ ಹನ್ನೆರಡನೆಯ ದ್ವೀಪದ ಪಶ್ಚಿಮದಲ್ಲಿ ಹದಿನೆಂಟನೆಯ ದ್ವೀಪವಿದೆ. ಹದಿನೇಳನೆಯದರ ಕೆಳಗೆ ಹತ್ತೊಂಭತ್ತನೆಯ ಮತ್ತು ಹದಿನೆಂಟನೆಯದರ ಕೆಳಗೆ ಇಪ್ಪತ್ತನೆಯ ದ್ವೀಪವಿದೆ. ಅದೇ ಪ್ರಕಾರ ಶಿಖರೀ ಪರ್ವತದ ಸಾಲಿನಲ್ಲಿ ಪೂರ್ವದೊಳಗೆ ಇಪ್ಪತ್ತೊಂದನೆಯ, ಪಶ್ಚಿಮದಲ್ಲಿ ಇಪ್ಪತ್ತೆರಡನೆಯ, ಪೂರ್ವದಲ್ಲಿ ಇಪ್ಪತ್ತೂರನೆಯ ಮತ್ತು ಪಶ್ಚಿಮದಲ್ಲಿ ಇಪ್ಪತ್ನಾಲ್ಕನೆಯ ದ್ವೀಪವು ಸ್ಥಿತವಿದೆ. ಇನ್ನು ಈ ದ್ವೀಪಗಳ ವಿಸ್ತಾರವನ್ನು ನೋಡೋಣ - ಜಂಬೂದ್ವೀಪದ ವೇದಿಕೆ ಅರ್ಥಾತ್ ಜಗತಿಯಿಂದ ಐದುನೂರು ಯೋಜನ ದೂರದ ಮೇಲೆ ಸಮುದ್ರದಲ್ಲಿ ದಿಕ್ಕುಗಳಿಗೆ ಸಂಬಂಧಿಸಿದ (ಒಂದರಿಂದ ನಾಲ್ಕು ನಂಬರಿನ) ದ್ವೀಪಗಳು ಸ್ಥಿತವಿವೆ ಅವು ನೂರು ಯೋಜನ ವಿಸ್ತಾರವುಳ್ಳವಿದ್ದು ದುಂಡಗೆ ಇವೆ; ಜಂಬೂದ್ವೀಪದಿಂದ ಐನೂರು ಯೋಜನ ದೂರದ ಮೇಲೆ ವಿದಿಕ್ಕುಗಳಿಗೆ ಸಂಬಂಧಿಸಿದ (ಐದರಿಂದ ಎಂಟು ನಂಬರಿನ) ದ್ವೀಪಗಳಿವೆ ಅವು ಐವತ್ತೈದು ಯೋಜನ ವಿಸ್ತಾರವುಳ್ಳವಿವೆ; ಜಂಬೂದ್ವೀಪದಿಂದ ಐದು ನೂರಾ ಐವತ್ತು ಯೋಜನ ದೂರದ ಮೇಲೆ ಅಂತರದಿಕ್ಕುಗಳಿಗೆ ಸಂಬಂಧಿಸಿದ (ಒಂಭತ್ತರಿಂದ ಹದಿನಾರು ನಂಬರಿನ) ದ್ವೀಪಗಳಿವೆ ಅವು ಐವತ್ತು ಯೋಜನ ವಿಸ್ತಾರವುಳ್ಳವಿವೆ. ಜಂಬೂದ್ವೀಪದಿಂದ ಆರು ನೂರು ಯೋಜನ ದೂರದ ಮೇಲೆ ಪರ್ವತದ ನಿಕಟವರ್ತಿ (ಹದಿನೇಳರಿಂದ ಇಪ್ಪತ್ನಾಲ್ಕು ನಂಬರಿನ) ದ್ವೀಪಗಳಿವೆ ಅವು ಇಪ್ಪತ್ತೈದು ಯೋಜನ ವಿಸ್ತಾರವುಳ್ಳವಿವೆ. ಇವೆಲ್ಲವೂ ಸಮುದ್ರದಲ್ಲಿ ಸ್ಥಿತವಿರುವಂಥ ದುಂಡಗಿನ ಆಕಾರವುಳ್ಳ ನಡುಗಡ್ಡೆಗಳಿವೆ - ದ್ವೀಪಗಳಿವೆ.

ಇವೆಲ್ಲವುಗಳ ಹೆಸರುಗಳು ಬೇರೆ-ಬೇರೆಯಾಗಿವೆ. ಹೀಗೆಯೇ ಇಪ್ಪತ್ತಾ ನ್ನಲ್ಕು ದ್ವೀಪಗಳು ಲವಣ ಸಮುದ್ರದ ಹೊರದಂಡೆಯ ಸಮೀಪ ಧಾತಕೀ ಖಂಡದಿಂದ ಇಷ್ಟೇ ದೂರದ ಮೇಲೆ ಸ್ಥಿತವಿವೆ. ಅವುಗಳ ಹೆಸರು ಕೂಡ ಇವುವೇ ಆಗಿರುತ್ತವೆ. ಈಗ ನಾವು ಕ್ರಮದಿಂದ ಇವುಗಳ ಹೆಸರನ್ನು ನೋಡೋಣ. ಒಂಭತ್ತನೇ ನಂಬರಿನ ಚಾರ್ಟದಲ್ಲಿ ಮೊದಲು ನಾವು ಲವಣ ಸಮುದ್ರದ ಇಪ್ಪತ್ತಾ ನ್ನಲ್ಕು ದ್ವೀಪಗಳ ಹೆಸರು ನೋಡೋಣ. ಅಭ್ಯಂತರ ಹಾಗೂ ಹೊರದಂಡೆಯ ಮೇಲೆ ಅದೇ ನಂಬರಿನ ಮೇಲೆ ಅದೇ ಹೆಸರಿನ ಅಂಥವೇ ದ್ವೀಪಗಳಿವೆ. ಚಾರ್ಟದಲ್ಲಿ ಅವುಗಳ ವರ್ಣಗಳಿಂದ ಆಕಾರದಿಂದ ಪರಿಚಯವಾಗಿಯೇ ಆಗುವುದು. ದಿಕ್ಕು-ವಿದಿಕ್ಕುಗಳಿಗೆ ಸಂಬಂಧಿಸಿದ ದ್ವೀಪಗಳ ಹೆಸರು ಒಳಗಿನ ದಡದಿಂದ ಹೊರಗಿನ ದಡದವರೆಗೆ ಬರೆಯಲಾಗಿದೆ; ಒಂಭತ್ತರಿಂದ ಇಪ್ಪತ್ನಾಲ್ಕನೆಯ ದ್ವೀಪಗಳ ಹೆಸರನ್ನು ಹೊರಗಿನ ದಡದ ಹತ್ತಿರ ಬರೆಯಲಾಗಿದೆ. ಇವುಗಳ ಹೆಸರು ಕ್ರಮದಿಂದ ಈ ಪ್ರಕಾರವಿವೆ

- ೧) ಏಕೋರುಕ, ೨) ಲಾಂಗುಲಿಕ, ೩) ವೈಷಾಣಿಕ, ೪) ಅಭಾಷಕ, ೫) ಶಷ್ಕುಲಿಕರ್ಣ, ೬) ಕರ್ಣಪ್ರಾವರಣ, ೭) ಲಂಬಕರ್ಣ, ೮) ಶಶಕರ್ಣ, ೯) ಸಿಂಹಮುಖ, ೧೦) ಅಶ್ವಮುಖ, ೧೧) ಶ್ವಾನಮುಖ, ೧೨) ಮಹಿಷಮುಖ, ೧೩) ವರಾಹಮುಖ, ೧೪) ಶಾರ್ದೂಲಮುಖ, ೧೫) ಘೂಕಮುಖ, ೧೬) ವಾನರಮುಖ, ೧೭) ಮತ್ಸ್ಯಮುಖ, ೧೮) ಕಾಲಮುಖ, ೧೯) ಮೇಷ ಮುಖ, ೨೦) ಗೋಮುಖ, ೨೧) ಮೇಘಮುಖ, ೨೨) ವಿದ್ಯುನ್ಮುಖ, ೨೩) ದರ್ಪಣಮುಖ, ೨೪) ಹಸ್ತಿಮುಖ.

ಈ ರೀತಿ ಲವಣ ಸಮುದ್ರದಲ್ಲಿ ಇಪ್ಪತ್ನಾಲ್ಕು ಅಭ್ಯಂತರದಕಡೆಗೆ ಮತ್ತು ಇಪ್ಪತ್ನಾಲ್ಕು ಹೊರಗಿನ ಕಡೆಗೆ ಹೀಗೆ ಒಟ್ಟು ನಲವತ್ತೆಂಟು ಅಂತರ್ದ್ವೀಪಗಳಿವೆ-ಕುಭೋಗಭೂಮಿಯ ದ್ವೀಪಗಳಿವೆ. ಕಾಲೋದಧಿ ಸಮುದ್ರದಲ್ಲಿಯೂ ಕೂಡ ಇಪ್ಪತ್ನಾಲ್ಕು ದ್ವೀಪಗಳು ಅಭ್ಯಂತರ ಪರಿಧಿಯ ಕಡೆಗೆ ಮತ್ತು ಇಪ್ಪತ್ನಾಲ್ಕು ಬಾಹ್ಯ ಪರಿಧಿಯ ಕಡೆಗೆ ಕಂಡು ಬರುತ್ತವೆ - ದಿಕ್ಕುಗಳಲ್ಲಿ ನಾಲ್ಕು, ವಿದಿಕ್ಕುಗಳಲ್ಲಿ ನಾಲ್ಕು, ಅಂತರ್ದಿಕ್ಕುಗಳಲ್ಲಿ ಎಂಟು ಪೂರ್ವದಲ್ಲಿ ಚಿಕ್ಕ-ಚಿಕ್ಕವು ನಾಲ್ಕು ಮತ್ತು ಪಶ್ಚಿಮದಲ್ಲಿ ಚಿಕ್ಕ-ಚಿಕ್ಕವು ನಾಲ್ಕು ಹೀಗೆ ಒಟ್ಟು ಇಪ್ಪತ್ನಾಲ್ಕು ಆದವು. ಈಗ ಅವುಗಳ ಹೆಸರುಗಳನ್ನು ನೋಡೋಣ. ಚಾರ್ಟದಲ್ಲಿ ನೋಡಿ ಅವುಗಳ ಸ್ಥಾನವನ್ನು ತಿಳಿಯುವುದು. ೧) ವತ್ಸ್ಯಮುಖ, ೨) ಅಶ್ವಕರ್ಣ, ೩) ಪಕ್ಷಿಮುಖ, ೪) ಹಸ್ತಕರ್ಣ, ೫, ೬, ೭, ೮) ಸೂಕರಕರ್ಣ, ೯) ಉಷ್ಟ್ರಕರ್ಣ, ೧೦, ೧೧) ಮಾರ್ಜಾರ ಮುಖ, ೧೨) ಕರ್ಣ ಪ್ರಾವರಣ, ೧೩) ಗಜಮುಖ, ೧೪, ೧೫) ಮಾರ್ಜಾರ ಮುಖ, ೧೬) ಗೋಕರ್ಣ, ೧೭) ವೃಕಮುಖ, ೧೮) ವ್ಯಾಘ್ರಮುಖ, ೧೯) ಶಿಶುಮಾರ ಮುಖ, ೨೦) ಮಕರಮುಖ, ೨೧) ಅಕ್ಷಮುಖ, ೨೨) ಶೃಗಾಲಮುಖ, ೨೩) ದ್ವೀಪಿಕ ಮುಖ, ೨೪) ಭೃಂಗಾರ ಮುಖ.

ಹೀಗೆ ಲವಣ ಸಮುದ್ರದ ನಲವತ್ತೆಂಟು ಮತ್ತು ಕಾಲೋದಧಿಯ ನಲವತ್ತೆಂಟು ಸೇರಿ ಒಟ್ಟು ತೊಂಭತ್ತಾರು ದ್ವೀಪಗಳಿವೆ. ಅಲ್ಲಿ ಯಾವ ಮನುಷ್ಯರು ವಾಸಿಸುತ್ತಾರೆ ಅವರನ್ನು ಅಂತರ್ದ್ವೀಪಜ ಮ್ಲೇಚ್ಛರೆಂದು ಹೇಳುತ್ತಾರೆ, ಕುಮನುಷ್ಯರೆಂದು ಕೂಡ ಹೇಳುತ್ತಾರೆ. ಅಲ್ಲಿ ಕುಭೋಗಭೂಮಿ ಇರುತ್ತದೆ. ಅಲ್ಲಿ ಇರುವಂಥ ಮನುಷ್ಯರ ಮುಖಗಳು ಚಿತ್ರ-ವಿಚಿತ್ರವಾಗಿರುತ್ತವೆ ಅಂಥ ಮನುಷ್ಯರ ಕಾರಣದಿಂದ ಆ ದ್ವೀಪಗಳಿಗೆ ಆ ಹೆಸರುಗಳು ಬಂದು ಬಿಟ್ಟಿವೆ. ಅವು ಸಮುದ್ರದ ಮಧ್ಯದಲ್ಲಿ ಕಂಡು ಬರುವಂಥ ನಡುಗಡ್ಡೆಗಳಾಗಿರುವುದರಿಂದ ಅವುಗಳಿಗೆ ದ್ವೀಪವೆಂದು ಹೇಳುತ್ತಾರೆ. ಇವುಗಳ ನಾಲ್ಕೂ ನಿಟ್ಟಿಗೆ ಸಮುದ್ರವಿದೆ. ನಮ್ಮಲ್ಲಿ ಅಂಡಮಾನ ದ್ವೀಪ, ಲಕ್ಷದ್ವೀಪಗಳಿಲ್ಲವೇನು ! ಹಾಗೆಂದು ತಿಳಿಯುವುದು. ಆಂಗ್ಲ ಭಾಷೆಯಲ್ಲಿ ಇವನ್ನು ಆರ್ಯಲಂಡ ಎನ್ನುತ್ತಾರೆ.

ಆ ದ್ವೀಪಗಳಲ್ಲಿ ಇರುವಂಥ ಕುಮಾನುಷ್ಯರ ಹೆಸರು ಅವುವೇ ಇವೆ. ಏಕೋರುಕ ಒಂದು ಕಾಲುಳ್ಳ ಮನುಷ್ಯರು ಇರುತ್ತಾರೆ. ಅವರು ಗುಹೆಗಳಲ್ಲಿ ಇರುತ್ತಾರೆ ಮತ್ತು ಅಲ್ಲಿಯ ಮಧುರವಾದ ಮಣ್ಣನ್ನು ತಿನ್ನುತ್ತಾರೆ. ಉಳಿದ ಎಲ್ಲ ಕುಮನುಷ್ಯರು ವೃಕ್ಷಗಳ ಕೆಳಗೆ ವಾಸಿಸುತ್ತಾರೆ ಮತ್ತು ಕಲ್ಪವೃಕ್ಷಗಳಿಂದ ಕೊಡಲ್ಪಡುವ ಫಲ-ಹಣ್ಣುಗಳನ್ನು ತಿನ್ನುತ್ತಾರೆ. ಅವರ ಜನ್ಮಾದಿಗಳ ಪ್ರವೃತ್ತಿಯು ಜಘನ್ಯ ಭೋಗಭೂಮಿಯ ಹಾಗೆ ಇರುತ್ತದೆ.

ಲಾಂಗುಲಿಕ ಮನುಷ್ಯರು ಬಾಲವುಳ್ಳವರಿರುತ್ತಾರೆ, ವೈಷಾಣಿಕರು ಕೊಂಬುಳ್ಳವರಿರುತ್ತಾರೆ, ಅಭಾಷಕರು ಮೂಗರಿರುತ್ತಾರೆ, ಶಷ್ಕುಲಿಕರ್ಣರು ಪೂರಿಯ ಸಮಾನ ಕಿವಿಯುಳ್ಳವರಿರುತ್ತಾರೆ, ಕರ್ಣ ಪ್ರಾವರಣ ಮನುಷ್ಯರ

ಕಿವಿಗಳು ಎಷ್ಟು ದೊಡ್ಡವಿರುತ್ತವೆಂದರೆ ಒಂದು ಕಿವಿಯನ್ನು ಹಾಸಿಕೊಂಡು ಇನ್ನೊಂದು ಕಿವಿಯನ್ನು ಹೊದ್ದುಕೊಳ್ಳುವ ಕೆಲಸಕ್ಕೆ ಬರುತ್ತವೆ - ಕಿವಿಯಿಂದ ಶರೀರವನ್ನು ಮುಚ್ಚಿಕೊಳ್ಳುತ್ತಾರೆ. ಲಂಬಕರ್ಣರು ಉದ್ದವಾದ ಕಿವಿಯುಳ್ಳವರಿರುತ್ತಾರೆ. ಶಶಕರ್ಣರು ಮೊಲದಂಥ ಕಿವಿಯುಳ್ಳವರಿರುತ್ತಾರೆ.

ಅನ್ಯ ಮನುಷ್ಯರ ಮುಖಗಳು ಅನೇಕ ಪ್ರಾಣಿಗಳಂಥವವಿರುತ್ತವೆ ಉಳಿದ ಶರೀರವು ಮನುಷ್ಯರ ಹಾಗೆ ಇರುತ್ತದೆ. ಅವರ ಹೆಸರುಗಳಿಂದಲೇ ಪರಿಚಯವಾಗುತ್ತದೆ. ಸಿಂಹಮುಖ, ಅಶ್ವಮುಖ (ಕುದುರೆಯಂಥ ಮುಖ) ಶಾರ್ದೂಲ ಮುಖ (ಸಿಂಹದಂಥ ಮುಖ) ಉಳಿದ ಎಲ್ಲ ಮನುಷ್ಯರ ಹೆಸರು ಹೇಗೆ ಅವರ ಮುಖ ಅಥವಾ ಕರ್ಣಗಳಿರುತ್ತವೆ ಹಾಗೆ ಆ ಮನುಷ್ಯರು ಇರುತ್ತಾರೆಂದು ತಿಳಿಯುವುದು.

ಇವರ ಹೆಸರುಗಳನ್ನು ಆಲಿಸಿ ತಮಗೆಲ್ಲ ನಗೆ ಬರುತ್ತಿದೆ, ಒಂದು ವೇಳೆ ತಾವು ಅಲ್ಲಿಯ ಕುಮನುಷ್ಯರಾಗುವುದನ್ನು ಇಷ್ಟಪಡದಿದ್ದರೆ, ಅಲ್ಲಿ ಹೋಗಬಾರದೆಂದು ಬಯಸುತ್ತಿದ್ದರೆ ಮೊದಲು ಜೀವರುಗಳು ಅಲ್ಲಿ ಏಕೆ ಉತ್ಪನ್ನರಾಗುತ್ತಾರೆ ಆ ಕಾರಣಗಳನ್ನು ನೋಡೋಣ, ನಂತರ ಅಂಥ ಪರಿಣಾಮಗಳನ್ನು ಇಟ್ಟುಕೊಳ್ಳುವುದೋ ಅಥವಾ ಇಟ್ಟುಕೊಳ್ಳಬಾರದು - ಎಂಬುದರ ಯೋಚನೆ ಮಾಡಬಹುದಾಗಿದೆ. ಆ ಪರಿಣಾಮಗಳನ್ನು ಸ್ವಯಂ ಮಾಡುವುದು ಮತ್ತು ಮಾಡುವಂಥವರ ಅನುಮೋದನೆ ಮಾಡುವುದು ಎರಡರ ಫಲವು ಅದುವೇ ಇದೆ. ಕುಭೋಗಭೂಮಿಗಳಲ್ಲಿ ಯಾವ ಜೀವರುಗಳು ಉತ್ಪನ್ನರಾಗುತ್ತಾರೆಂಬುದನ್ನು ತ್ರಿಲೋಕ ಸಾರದ ೯೨೨, ೯೨೩ ಮತ್ತು ೯೨೪ ನೆಯ ಗಾಥೆಗಳಲ್ಲಿ ತಿಳಿಸಿಕೊಟ್ಟಿದ್ದಾರೆ. ತಾವು ಮೂಲಗ್ರಂಥವನ್ನು ನೋಡುವುದು. ಇದೇ ಮಾತನ್ನು ಆಚಾರ್ಯ ೧೦೮ ಸೂರ್ಯಸಾಗರ ಮಹಾರಾಜರು ಸಂಯಮ ಪ್ರಕಾಶ ಗ್ರಂಥದಲ್ಲಿ ಮುನಿಧರ್ಮ ಸಂಬಂಧದ ದ್ವಿತೀಯ ಭಾಗದಲ್ಲಿ ಪುಟ ೬೨೦ ರಲ್ಲಿ ಬರೆದಿರುವುದನ್ನು ಕಾಣಬಹುದಾಗಿದೆ. ಈ ಗ್ರಂಥವು ೧೦೮ ಧರ್ಮಭೂಷಣ ಮಹಾರಾಜರ ಪ್ರೇರಣೆಯಿಂದ ೧೯೯೫ ರ ಇಸ್ವಿಯಲ್ಲಿ ಪುನಃ ಪ್ರಕಾಶಿತವಾಗಿದ್ದು ಅತ್ಯಂತ ಮೌಲಿಕ ರಚನೆಯಿದೆ. ಶ್ರಾವಕ ಧರ್ಮದ ಮೇಲೆ ಎರಡು ಭಾಗ ಹಾಗೂ ಮುನಿಧರ್ಮದ ಮೇಲೆ ಎರಡು ಭಾಗ ಹೀಗೆ ಒಟ್ಟು ನಾಲ್ಕು ಭಾಗಗಳಿವೆ.

ಯಾವ ಜೀವರುಗಳು ಜಿನಲಿಂಗ ಅರ್ಥಾತ್ ಮುನಿವೇಷ ಧಾರಣ ಮಾಡಿ ಮಾಯಾಚಾರ ಮಾಡುತ್ತಾರೆ, ಜ್ಯೋತಿಷ, ಮಂತ್ರ , ವೈದ್ಯಕ ಮೊದಲಾದವುಗಳಿಂದ ಆಜೀವಿಕೆ ಮಾಡುತ್ತಾರೆ ಅವರು ಕುಭೋಗ ಭೂಮಿಯಲ್ಲಿ ಜನ್ಮತಾಳುತ್ತಾರೆ. ಏನು ಹೇಳುತ್ತಿದ್ದಾರೆ ನೋಡಿರಿ ! ಆಹಾರವನ್ನು ಆಜೀವಿಕೆಯೆಂದಿದ್ದಾರೆ, ಏಕೆ ? ಮುನಿರಾಜರಿಗೆ ಆಹಾರದಾನ ಕೊಡುವುದಂತೂ ಸಮಾಜದ ಅಹೋಭಾಗ್ಯವಿದೆ, ಕರ್ತವ್ಯವಿದೆ, ಸಮಾಜವೇನು ಅವರ ಮೇಲೆ ಉಪಕಾರ ಮಾಡುತ್ತಿಲ್ಲ, ಜೋತಿಷ ಹೇಳುವುದು ಮಂತ್ರ ವೈದ್ಯಕ ಮೊದಲಾದವು ಮುನಿಗಳ ಕಾರ್ಯವಲ್ಲ, ಆಹಾರಕ್ಕೆ ಬದಲಾಗಿ ಇವುಗಳನ್ನು ಮಾಡುವುದು ಮತ್ತು ಅದರಿಂದ ಸಮಾಜವು ತಮ್ಮ ಕಡೆಗೆ ಆಕರ್ಷಿತವಾಗುವುದು ಅಲ್ಲದೆ ತಮ್ಮ ವ್ಯವಸ್ಥೆಯು ಒಳ್ಳೆಯ ರೀತಿಯಿಂದ ಆಗುವುದೆಂಬ ಅಭಿಪ್ರಾಯವಂತೂ ಮಿಥ್ಯೆಯಿದೆ. ಯಾರಿಗೋ ಜ್ಯೋತಿಷ ಹೇಳುವುದು, ಮಂತ್ರ , ಮಣಿ ಅರ್ಥಾತ್ ರತ್ನ ಚಿಕಿತ್ಸೆ ತಿಳಿಸಿಕೊಡುವುದು, ಬೆಳ್ಳಿಯ ವ್ಯಾಪಾರ ಮಾಡಿರಿ, ಚಿನ್ನದ ಖರೀದಿಯಲ್ಲಿ ಧನವನ್ನು ತೊಡಗಿಸಿರೆಂದು ಸಲಹೆ ಕೊಡುವುದು, ಔಷಧಿಯನ್ನು ತಯಾರಿಸಿ ಕೊಡುವುದು ಅಥವಾ ಅದರ ಉಪದೇಶ ಕೊಡುವುದು ಮೊದಲಾದವುಗಳನ್ನು ಯಾರು ಮಾಡುತ್ತಾರೆ ಅವರು ಅದನೆಲ್ಲ ಆಹಾರಾದಿರೂಪದ ಆಜೀವಿಕೆಯ ಸಲುವಾಗಿ ಮಾಡುತ್ತಾರೆಂದು ಹೇಳಿದ್ದಾರೆ.

ಮುಂದೆ ಹೇಳುತ್ತಾರೆ - ಯಾರು ಮುನಿವೇಷ ಧಾರಣ ಮಾಡಿ ದುಡ್ಡು ಕಾಸು-ಧನಾದಿಗಳನ್ನು ಬಯಸುತ್ತಾರೆ ಅವರು ಕುಭೋಗಭೂಮಿಯಲ್ಲಿ ಉತ್ಪನ್ನರಾಗುತ್ತಾರೆ. ಯಾವುದೇ ನಿಮಿತ್ತದಿಂದ ಧನ ಸಂಗ್ರಹ ಮಾಡುವುದು ಮುನಿಗಳ ಕಾರ್ಯವಿರುವುದಿಲ್ಲ. ತೀರ್ಥಕ್ಷೇತ್ರಗಳ ನಿರ್ಮಾಣ ಮಾಡುವುದು ಅಥವಾ ತೀರ್ಥಗಳ ರಕ್ಷಣೆ ಮಾಡುವುದು ಅಥವಾ ಅನ್ಯ ಯಾವುದೇ ನಿಮಿತ್ತದಿಂದ ಧನ ಸಂಗ್ರಹ ಮಾಡುವುದು ಮುನಿಗಳ ಕಾರ್ಯವಲ್ಲ. ಇನ್ನೂ ಮುಂದೆ ಹೇಳುತ್ತ ಮುನಿವೇಷಧಾರಣ ಮಾಡಿ ಯಾರು ಋದ್ಧಿ, ಯಶಸ್ಸು, ಸಾತಾರೂಪ ಗಾರವದಿಂದ ಯುಕ್ತರಿದ್ದಾರೆ, ಅವರು ಕುಭೋಗ ಭೂಮಿಯಲ್ಲಿ ಜನ್ಮಧಾರಣ ಮಾಡುತ್ತಾರೆ. ಗಾರವ ಎಂದರೆ ಅಭಿಮಾನ, ಮುನಿವೇಷ ಧಾರಣ ಮಾಡಿ ಯಾರು ಯಾವುದಾದರೂ ಋದ್ಧಿಯ, ಯಶಸ್ಸು-ಕೀರ್ತಿಯ, ಅನ್ಯ ಯಾವುದೇ ಅನುಕೂಲತೆ ಮೊದಲಾದವುಗಳ ಅಭಿಮಾನ ಮಾಡುತ್ತಾರೆ - ಗರ್ವ ಮಾಡುತ್ತಾರೆ, ಅವರ ಮಾತು ಇದೆ. ಯಾರು ಮುನಿವೇಷ ಧಾರಣ ಮಾಡಿ ಆಹಾರ, ಭಯ, ಮೈಥುನ, ಪರಿಗ್ರಹ ಸಂಬಂಧದ ವಾಂಛೆ-ತೀವ್ರ ಲಾಲಸೆಯನ್ನಿಟ್ಟುಕೊಂಡಿರುತ್ತಾರೆ ಅವರು ಕುಭೋಗ ಭೂಮಿಯಲ್ಲಿ ಉತ್ಪನ್ನರಾಗುತ್ತಾರೆ. ಈ ನಾಲ್ಕೂ ಸಂಜ್ಞೆಗಳಂತೂ ನಾಲ್ಕೂ ಗತಿಯ ಜೀವಗಳಲ್ಲಿ ಕಂಡು ಬರುತ್ತವೆ ಆದರೆ ಮುನಿಧರ್ಮದ ಅಂಗೀಕಾರ ಮಾಡಿಯೂ ಕೂಡ ಯಾರು ಇವುಗಳಲ್ಲಿ ತೀವ್ರ ರುಚಿಯುಳ್ಳವರಿದ್ದಾರೆ ಅವರ ಮಾತು ನಡೆಯುತ್ತಿದೆ.

ಇನ್ನೂ ಮುಂದೆ ಹೇಳಿರುವುದೇನೆಂದರೆ - ಯಾರು ಮುನಿವೇಷ ಧಾರಣ ಮಾಡಿ ಸಮಾಜದ ಅನ್ಯಗೃಹಸ್ಥರ ಜಾತಪತ್ರಗಳನ್ನು ಹೊಂದಿಸಿ ಪರಸ್ಪರರ ವಿವಾಹ ಮಾಡಿಸುತ್ತಾರೆ, ವೈವಾಹಿಕ ಜೀವನ ಮುಂದುವರೆಸುವ ಅಥವಾ ಹೊಂದಾಣಿಕೆ ಮಾಡಿಸುವ ಕಾರ್ಯ ಮಾಡುತ್ತಾರೆ ಅವರು ಕುಭೋಗ ಭೂಮಿಯಲ್ಲಿ ಜನಿಸುತ್ತಾರೆ. ಮುನಿಪದದಂಥ ಉಚ್ಚ ಪದದ ಅಂಗೀಕಾರ ಮಾಡಿ ಇದೆಂಥ ವಿಡಂಬನೆಯಿದೆ ! ಎಂಥೆಂಥ ಪರಿಣಾಮ ಮಾಡಿ ಜೀವನು ಎಲ್ಲೆಲ್ಲಿ ಹೋಗುತ್ತಾನೆ ಕೇವಲ ಆ ಕಾರ್ಯ (ಪರಿಣಾಮ) ಮಾಡುವಂಥ ಜೀವಗಳಷ್ಟೇ ಅಲ್ಲ, ಆದರೆ ಅವರಿಗೆ ಅನುಮೋದನೆ ಕೊಡುವಂಥ ಎಂದರೆ ಅವರನ್ನು ಮುನಿಯ ಹಾಗೆ ಮನ್ನಿಸಿ ಅವರ ಆದರ ಮಾಡುವ ನಮಸ್ಕಾರ ಮಾಡುವ ಅವರಿಗೆ ಆಹಾರದಾನ ಕೊಡುವಂಥವರು ಕೂಡ ಅಲ್ಲಿ ಹೋಗುವರು. ಅಲ್ಲಿ ಹೋಗುವಂಥ ಜೀವರು ತಮ್ಮ ಶಿಷ್ಯರನ್ನು ಬಿಟ್ಟು ಹೇಗೆ ತಾನೆ ಹೋಗುವರು ? ಜತೆಯಲ್ಲಿ ತಗೆದುಕೊಂಡೇ ಹೋಗುವರು-ಬೇಕಾದರೆ ಕುಭೋಗ ಭೂಮಿಯಲ್ಲಿ ಹೋಗಲಿ ಅಥವಾ ನರಕ-ನಿಗೋದದಲ್ಲಿ ಹೋಗಲಿ ಎಲ್ಲಿ ಹೋದರೂ ಜತೆಯಲ್ಲಿ ತಮ್ಮ ಶಿಷ್ಯ ವೃಂದವನ್ನು ಕೊಂಡೊಯ್ಯುವರು. ಆ ಕುಗುರು ಕಲ್ಲಿನ ನೌಕೆಯಂತಿಹನೆಂದು ಆರು ಗುರಾಣಿಯಲ್ಲಿ ಬರುತ್ತದೆಯಲ್ಲವೇನು ? ಕೃತ, ಕಾರಿತ, ಅನುಮೋದನೆ ಎಲ್ಲದರಲ್ಲೂ ಸಮಾನರೂಪದ ಬಂಧನವಿದೆ.

ಇವೇನು ನನ್ನ ಸ್ವಂತದ ಮಾತುಗಳಲ್ಲ. ಒಂದು ಸಾವಿರ ವರ್ಷಗಳ ಮೊದಲು ತ್ರಿಲೋಕಸಾರ ಗ್ರಂಥದಲ್ಲಿ ಆಚಾರ್ಯ ಶ್ರೀ ನೇಮಿಚಂದ್ರರು ಬರೆದ ಗಾಥೆಗಳು ಹೇಳುವ ಮಾತು ಇವೆ. ಮೊದಲು ಗಾಥೆಗಳನ್ನು ಓದಿ ನೋಡೋಣ. ಇಲ್ಲಿಯವರೆಗೆ ಒಂದೇ ಗಾಥೆಯ ಅರ್ಥವನ್ನು ನೋಡುತ್ತಿದ್ದೆವು. ಮೂರೂ ಗಾಥೆಗಳನ್ನು ಮೊದಲು ಒಂದು ಬಾರಿ ಹೇಳೋಣ ನಂತರ ಉಳಿದ ಎರಡು ಗಾಥೆಗಳ ಅರ್ಥವನ್ನು ನೋಡಬಹುದಾಗಿದೆ.

ಜಿನಲಿಂಗೇ ಮಾಯಾವಿನೋ ಜ್ಯೋತಿರ್ಮಂತ್ರೋಪಜೀವಿನಃ ಧನಕಾಂಕ್ಷಿಣಃ ।
ಅತಿಗಾರವಸಂಜ್ಞಾಯುತಃ ಕುರ್ವಂತಿ ಯೇ ಪರವಿವಾಹಮಪಿ ॥೯೨೨॥
ದರ್ಶನವಿರಾಧಿಕಾ ಯೇ ದೋಷಂ ನಾಲೋಚಯಂತಿ ದೂಷಣಕಾಃ ।
ಪಂಚಾಗ್ನಿ ತಪಸಃ ಮಿಥ್ಯಾಃ ಮೌನಂ ಪರಿಹೃತ್ಯ ಭುಂಜತೇ ॥೯೨೩॥
ದುರ್ಭಾವಾಶುಚಿಸೂತಕಪುಷ್ಪವತಿ ಜಾತಿ ಸಂಕರಾದಿಭಿಃ ।
ಕೃತದಾನಾ ಅಪಿ ಕುಪಾತ್ರೇಷು ಜೀವಾಃ ಕುನರೇಷು ಜಾಯಂತೇ ॥೯೨೪॥

ತಮಗೆ ತಿಳಿಯುವ ಸಲುವಾಗಿ ಸಂಸ್ಕೃತ ಛಾಯೆಯನ್ನು ಓದಿದ್ದೇನೆ. ಹಾಗಂತೂ ಮೂಲದಲ್ಲಿ ಪ್ರಾಕೃತ ಗಾಥೆಗಳಿವೆ. ಈಗ ಗಾಥೆ ೯೨೩ ರ ಅರ್ಥವು ಹೀಗಿದೆ - ಯಾವ ಜೀವರುಗಳು ಮುನಿಲಿಂಗ-ಮುನಿವೇಷ ಧಾರಣ ಮಾಡಿ ಸಮ್ಯಗ್ದರ್ಶನದ ವಿರಾಧನೆ ಮಾಡುತ್ತಾರೆ - ಮಿಥ್ಯಾತ್ವದ ಪೋಷಣೆ ಮಾಡುತ್ತಾರೆ ಅವರು ಕುಭೋಗ ಭೂಮಿಯಲ್ಲಿ ಉತ್ಪನ್ನರಾಗುತ್ತಾರೆ. ಯಾರು ಮುನಿವೇಷಧಾರಣ ಮಾಡಿ ತಾವು ಮಾಡಿದ ದೋಷಗಳನ್ನು ಶ್ರೀಗುರು (ಆಚಾರ್ಯರು)ಗಳ ಹತ್ತಿರ ಹೋಗಿ ಆಲೋಚನೆ ಮಾಡುವುದಿಲ್ಲ, ಅವರು ಕುಭೋಗ ಭೂಮಿಯಲ್ಲಿ ಉತ್ಪನ್ನರಾಗುತ್ತಾರೆ. ಮುನಿವೇಷ ಧಾರಣ ಮಾಡಿ ಯಾರು ಅನ್ಯ ಜೀವರುಗಳಿಗೆ ದೋಷ ತಗಲಿಸುತ್ತಾರೆ ಅವರು ಕುಭೋಗ ಭೂಮಿಯಲ್ಲಿ ಜನಿಸುತ್ತಾರೆ. ಯಾವ ಮಿಥ್ಯಾದೃಷ್ಟಿಗಳು ಪಂಚಾಗ್ನಿ ಸಾಧನೆ ಮೊದಲಾದ ಪ್ರಕಾರದಿಂದ ತಪ(ಕುತಪ) ಮಾಡುತ್ತಾರೆ ಯಾರು ಮೌನವನ್ನು ಬಿಟ್ಟು ಭೋಜನ ಮಾಡುತ್ತಾರೆ ಅವರು ಕುಭೋಗ ಭೂಮಿಯಲ್ಲಿ ಜನ್ಮ ಪಡೆಯುತ್ತಾರೆ. ಅದೇ ಪ್ರಕಾರ ಯಾವ ಗೃಹಸ್ಥರು ದಾನ ಕೊಡಲು ಅಯೋಗ್ಯ ಅವಸ್ಥೆಯಲ್ಲಿ ದಾನ ಕೊಡುತ್ತಾರೆ, ಸೂತಕಾದಿಗಳು ಇದ್ದ ಮೇಲೆಯೂ ಯಾರು ದಾನ ಕೊಡುತ್ತಾರೆ, ಸ್ತ್ರೀಯು ರಜಸ್ವಲೆಯ ಅವಸ್ಥೆಯಲ್ಲಿ ದಾನ ಕೊಡುತ್ತಾಳೆ, ಜಾತಿ ಸಂಕರದ ಅರ್ಥವು ಅಂತಜಾರ್ತಿಯ ವಿವಾಹದಂಥ ದೋಷ ಸಹಿತವಾಗಿದ್ದರೂ ದಾತೃವು ದಾನಕೊಟ್ಟರೆ ಅವನು ಕುಭೋಗಭೂಮಿಯಲ್ಲಿ ಉತ್ಪನ್ನನಾಗುತ್ತಾನೆ. ಯಾವಾಗ ದಾನ ಕೊಡುತ್ತಾರೆ ಆಗ ಅಲ್ಲಿ ದಾತೃವಿನ ಗುಣ, ಪಾತ್ರ ಎಂದರೆ ಯಾರಿಗೆ ದಾನ ಕೊಡಲಾಗುತ್ತದೆ ಅವರ ಗುಣ ಮತ್ತು ಯಾವ ದ್ರವ್ಯವನ್ನು ದಾನದಲ್ಲಿ ಕೊಡಲಾಗುತ್ತದೆ ಅದರ ವಿಚಾರವಿರುವುದು ಆವಶ್ಯಕವಿದೆ. ಹೇಗೆ ವಕ್ತಾರನು ಎಂಥವನಿರಬೇಕು ಮತ್ತು ಶ್ರೋತೃವು ಎಂಥವನಿರಬೇಕೆಂಬುದರ ಚರ್ಚೆಯನ್ನು ಮೊದಲನೆಯ ದಿನವೇ ಇಲ್ಲಿ ಮಾಡಲಾಗಿತ್ತು. ವಕ್ತಾರ ಮತ್ತು ಶ್ರೋತಾರ ಇಬ್ಬರಿಗೂ ಸರ್ವಜ್ಞ ಭಗವಂತರ ಮೇಲೆ ವಿಶ್ವಾಸವಿರಬೇಕಾಗುವುದು. ಸರ್ವಜ್ಞ ಪ್ರಭುವಿನ ಅಸ್ತಿತ್ವ, ಅವರ ವೀತರಾಗೀ ಸರ್ವಜ್ಞ ಸ್ವರೂಪದ, ಕೇವಲಜ್ಞಾನಿಯ ಜ್ಞಾನದ, ಅವರ ವಾಣಿಯ, ಅವರ ವಾಣಿಯ ಅನುಸಾರ ರಚನೆಗೊಂಡಿರುವ ಆಗಮ ಗ್ರಂಥಗಳ ಅವರು ತಿಳಿಸಿಕೊಟ್ಟಿರುವ ಮುನಿಸ್ವರೂಪದ, ಮೋಕ್ಷಮಾರ್ಗದ ವಿಶ್ವಾಸವು ಯಾರಿಗೆ ಇರುವುದಿಲ್ಲ ಅವರು ಯೋಗ್ಯ ವಕ್ತಾರರೂ ಇಲ್ಲ ಮತ್ತು ಯೋಗ್ಯ ಶ್ರೋತೃಗಳೂ ಇಲ್ಲ. ಇದೇ ರೀತಿ ದಾನ ಕೊಡುವಂಥವರ ಗುಣಗಳ ಮತ್ತು ಯಾವ ದೋಷಗಳನ್ನು ದೂರ ಮಾಡಿ ದಾನ ಕೊಡಲಾಗುತ್ತದೆ ಎಂಬುದರ ಜ್ಞಾನವಿರುವುದು ಅತ್ಯಗತ್ಯವಿದೆ. ಹೇಗೆ ದಾತೃವಿನ ಗುಣಗಳನ್ನು ನೋಡಲಾಗುತ್ತದೆ ಹಾಗೆಯೇ ಯಾರಿಗೆ ದಾನ ಕೊಡುತ್ತಿದ್ದೇವೆ ಎಂಬುದರ ವಿವೇಕ-ವಿಚಾರವು ಇರಬೇಕಾಗುತ್ತದೆ ಅಲ್ಲದೆ ಯಾವ ವಸ್ತುವಿನ ದಾನ ಕೊಡುತ್ತಿದ್ದೇವೆ ಆ ದಾನದ್ರವ್ಯದ್ದೂ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುತ್ತದೆ. ಕೇವಲ ಧನರಾಶಿಯನ್ನು ಬರೆಯಿಸಿಬಿಟ್ಟರೆ ದಾನವಾಗುವುದಿಲ್ಲ.

ಶಾಸ್ತ್ರದಲ್ಲಿ ಆಹಾರದಾನ, ಔಷಧದಾನ, ಅಭಯದಾನ, ಜ್ಞಾನದಾನವೆಂದು ನಾಲ್ಕು ಪ್ರಕಾರದ ದಾನಗಳನ್ನು

ಹೇಳಿದ್ದಾರೆ. ಆಹಾರದಾನ ಕೊಡುವ ಸಮಯದಲ್ಲಿಯೂ ಯಾರಿಗೆ ಕೊಡುವುದು ಎಂಬುದರ ಕುರಿತಾಗಿ ಪಾತ್ರ-ಕುಪಾತ್ರಗಳ ವಿಚಾರವಿರಬೇಕಾಗುವುದು. ಪಾತ್ರದಲ್ಲಿಯೂ ಮುನಿರಾಜರು-ಮಹಾವ್ರತಿಗಳು ಉತ್ತಮ ಪಾತ್ರರಿದ್ದಾರೆ, ಶ್ರಾವಕ-ದೇಶವ್ರತಿಯು ಮಧ್ಯಮ ಪಾತ್ರನಿದ್ದಾನೆ ಮತ್ತು ಸಮ್ಯಗ್ದೃಷ್ಟಿಯು ಜಘನ್ಯ ಪಾತ್ರನಿದ್ದಾನೆ. ಮುನಿವೇಷ ಧಾರಣ ಮಾಡಿಯೂ ಕೂಡ ಯಾರು ಶಿಥಿಲಾಚಾರಿಯಿದ್ದಾರೆ - ಭ್ರಷ್ಟರಿದ್ದಾರೆ ಅವರಂತೂ ಕುಪಾತ್ರರಿದ್ದಾರೆ. ಕುಪಾತ್ರದಾನದ ಫಲದಲ್ಲಿ ಜೀವರುಗಳು ಕುಭೋಗ ಭೂಮಿಗಳಲ್ಲಿ ಜನಿಸುತ್ತಾರೆ. ಆದುದರಿಂದ ಇದೆಲ್ಲದರ ವಿವೇಕವು ಇರಬೇಕಾಗುವುದು. ಅಜ್ಞಾನದ ಕಾರಣದಿಂದಲೂ ಇಂಥ ದೋಷಗಳಾಗಿ ಹೋದರೆ ಆಗ ಕೂಡ ಅವುಗಳ ಫಲವು ಇದುವೇ ಇದೆ. ಇದರ ಉಪಾಯವೆಂದರೆ ಸ್ವಯಂ ಜ್ಞಾನಿಯಾಗುವುದೊಂದೇ ಇದೆ. ಜ್ಞಾನ ಅರ್ಥಾತ್ ಶಾಸ್ತ್ರಗಳಿಂದ ಇದೆಲ್ಲದರ ತಿಳಿವಳಿಕೆ ಪ್ರಾಪ್ತ ಮಾಡಿಕೊಳ್ಳುವುದಿದೆ. ಮುನಿಗಳ ಸ್ವರೂಪ, ಭಗವಂತರ ಸ್ವರೂಪ ಮೊದಲಾದವುಗಳ ನಿರ್ಣಯವನ್ನು ನಾವು ಆಗಮಗಳ ಆಧಾರದಿಂದ ಮಾಡಬೇಕಾಗುವುದು. ಯಾರು ನಿಜವಾದ ಧರ್ಮಾತ್ಮರಿದ್ದಾರೆ, ಯಾರು ಧರ್ಮದ ಸೋಗು ಹಾಕಿದ್ದಾರೆ ಎಂಬುದರ ಅಳತೆಯನ್ನು ಆಗಮವೆಂಬ ಅಳತೆ ಕೋಲಿನಿಂದ ಅಳತೆ ಮಾಡುವುದು ಸಾಧ್ಯವಾಗುವುದಿಲ್ಲ - ಎಂದರೆ ಅಳತೆ ಮಾಡುವುದಿರುವುದಿಲ್ಲ ನಮ್ಮ ಕಲ್ಯಾಣದ ಸಲುವಾಗಿ ನಮ್ಮ ಬುದ್ಧಿಯನ್ನು ಸರಿಪಡಿಸಿಕೊಳ್ಳಬೇಕಾಗುವುದು. ಪೇಟೆಯಲ್ಲಿ ನಕಲೀ ನೋಟುಗಳು ಚಲಾವಣೆಯಲ್ಲಿ ಇರುತ್ತವೆ ನಾವು ನಮ್ಮ ಜೇಬಿಗೆ ನಕಲೀ ನೋಟುಗಳು ಬಾರದಂತೆ ಸಾವಧಾನತೆಯನ್ನು ಇಟ್ಟುಕೊಳ್ಳುವುದಿರುತ್ತದೆ. ಅವುಗಳನ್ನು ಮುದ್ರಣ ಮಾಡುವಂಥವರ ಸಂಶೋಧನೆ ಮಾಡಲು ಹೋಗಬಾರದು. ಹಾಗೆ ಮಾಡಹೋದರೆ ಅಪಾಯ ತಪ್ಪಿದ್ದಲ್ಲ.

ನಮಗಂತೂ ನಿಜವಾದ ದೇವ, ನಿಜವಾದ ಗುರು, ನಿಜವಾದ ಧರ್ಮದ ನಿರ್ಣಯ ಮಾಡುವುದಿದೆ. ಮೋಕ್ಷ ಮಾರ್ಗದ ನಿರ್ಣಯ ಮಾಡುವುದಿದೆ. ನಮ್ಮ ಅಭಿಪ್ರಾಯದಲ್ಲಿ, ನಮ್ಮ ಕ್ರಿಯೆಗಳಲ್ಲಿ ಮಿಥ್ಯಾತ್ವದ ಪೋಷಣೆಯಾಗದಂತೆ ನೋಡಿಕೊಳ್ಳುವುದಿದೆ. 'ಸಮಾಜವು ಏನೆನ್ನಬಹುದು?' ಎಂಬ ಚಿಂತೆಯನ್ನು ಬಿಟ್ಟು ಬಿಡಬೇಕಾಗುವುದು. ಸಮಾಜಕ್ಕೆ ತೋರಿಸುವ ಸಲುವಾಗಿ ಏನನ್ನಾದರೂ ಮಾಡುವುದಿದೆಯೋ ಅಥವಾ ತಮ್ಮ ಕಲ್ಯಾಣದ ಸಲುವಾಗಿ ಏನನ್ನಾದರೂ ಮಾಡುವ ವಿಚಾರವಿದೆ ? ಮನುಷ್ಯ ಭವದ ದುರ್ಲಭತೆಯನ್ನು ತಿಳಿದರೂ ಕೂಡ ಈ ಮನುಷ್ಯ ಭವವನ್ನು ಸಮಾಜದ ಸಲುವಾಗಿ ಕಳೆದುಕೊಳ್ಳುವ ಇಚ್ಛೆಯಿದೆಯೇನು ? ಈ ಸಮಾಜವು ನಮ್ಮೊಂದಿಗೆ ನರಕ-ನಿಗೋದಗಳಿಗೆ ಬರುವುದಿದೆಯೇನು ? ಅಹುದು, ಸಮಾಜವನ್ನೇ ಬಯಸುವುದಾದರೆ ನಿಗೋದದಲ್ಲಿ ಎಲ್ಲಕ್ಕಿಂತ ದೊಡ್ಡ ಸಮಾಜವು ದೊರಕಬಹುದಾಗಿದೆ. ಯಾವಾಗ ಮನುಷ್ಯ ಭವದಲ್ಲಿ ಜನ್ಮ ಪಡೆದೆವು ಆಗ ಸಮಾಜವಿಲ್ಲದೆ ಜನ್ಮ ಪಡೆದಿದ್ದೆವು ಅಲ್ಲವೇನು !

ನಾವು ಅದೆಷ್ಟೋ ಕಾರಣಗಳನ್ನು ನೋಡಿಯಾಯಿತು. ಜೀವನು ಮಿಥ್ಯಾತ್ವದ ಪಾಪ ಸಹಿತ ಯಾವಾಗ ಕಿಂಚಿತ್ ಪುಣ್ಯದ ಉಪಾರ್ಜನೆ ಮಾಡುತ್ತಾನೆ ಆಗ ಸಂಸಾರದ ಎಂಥೆಂಥ ಅವಸ್ಥೆಗಳನ್ನು ಧಾರಣ ಮಾಡಬೇಕಾಗುತ್ತದೆ. ಇಲ್ಲಿಯಂತೂ ಜೀವನವು ಅತಿ ಅಲ್ಪವಿದೆ. ನಮಗೆ ದೊರೆತ ಸಮಯ ಹಾಗೂ ಬುದ್ಧಿಯ ಸದುಪಯೋಗ ಮಾಡಿಕೊಳ್ಳಬೇಕು ಎಂಬುದಾಗಿಯೇ ಸಮಸ್ತ ಜ್ಞಾನಿಗಳ ಉಪದೇಶವಿದೆ. ಇಂಥ ಅವಸರವು ಸರಿದುಹೋದರೆ ಅನಂತ ಕಾಲದಲ್ಲಿ ಆತ್ಮಕಲ್ಯಾಣದ ಉಪದೇಶವು ದೊರಕುವುದು ದುರ್ಲಭವಾಗಿ ಹೋಗುತ್ತದೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹದಿನೈದನೆಯ ತೀರ್ಥಂಕರ
ಶ್ರೀ ಈಶ್ವರ ಭಗವಂತರಿಗೆ ಜಯವಾಗಲಿ.

★★★★★

೧೬. ಲವಣ ಸಮುದ್ರದ ಪಾತಾಳ

ಶ್ರೀ ನೇಮಿಚಂದ್ರ ಆಚಾರ್ಯ ವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಇಲ್ಲಿ ತ್ರಿಲೋಕ ರಚನೆಯ ಸ್ವರೂಪವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಅಧೋಲೋಕ, ಊರ್ಧ್ವಲೋಕ ಮತ್ತು ಮಧ್ಯಲೋಕಗಳ ಚರ್ಚೆಯನ್ನು ಮಾಡಿಯಾಗಿದೆ. ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳಿವೆ. ಅದರಲ್ಲಿ ನಾವು ಎರಡೂವರೆ ದ್ವೀಪ, ಜಂಬೂದ್ವೀಪ ಮತ್ತು ಅಲ್ಲಿಯ ಭರತ, ಐರಾವತ, ವಿದೇಹಾದಿ ಕ್ಷೇತ್ರಗಳ ಚರ್ಚೆ ಮಾಡಿಯಾಗಿದೆ. ಲವಣ ಸಮುದ್ರ ಮತ್ತು ಕಾಲೋದಧಿ ಸಮುದ್ರದಲ್ಲಿ ಕಂಡು ಬರುವಂಥ ಅಂತರ್ದ್ವೀಪ ಅರ್ಥಾತ್ ಕುಭೋಗ ಭೂಮಿಯ ವರ್ಣನೆಯನ್ನು ಕೂಡ ನೋಡಿಯಾಗಿದೆ. ಈಗ ಲವಣ ಸಮುದ್ರ ಮತ್ತು ಅದರಲ್ಲಿ ಕಂಡು ಬರುವಂಥ ಪಾತಾಳಗಳ ಚರ್ಚೆ ಮಾಡೋಣ. ಅದಕ್ಕಿಂತ ಮೊದಲು ಜಂಬೂದ್ವೀಪ ಮತ್ತು ಲವಣ ಸಮುದ್ರದ ಮಧ್ಯದಲ್ಲಿ ಸ್ಥಿತವಿರುವ ಕೋಟೆಯ ವರ್ಣನೆಯನ್ನು ನೋಡುವುದಿದೆ. ಮೊದಲು ನಾವು ಇದನ್ನು ಜಗತಿ ಅಥವಾ ವೇದಿಕೆಯೆಂದು ಹೇಳಿದ್ದೆವು ಇದನ್ನು ಪ್ರಾಕಾರವೆಂದು ಕೂಡ ಹೇಳುತ್ತಾರೆ. ಇಂಥವೇ ಪ್ರಾಕಾರಗಳು ಸಮಸ್ತದ್ವೀಪ ಮತ್ತು ಸಮುದ್ರಗಳ ಕೊನೆಯಲ್ಲಿ ಇರುತ್ತವೆ.

ಈ ಪ್ರಾಕಾರಗಳು ನಾಲ್ಕು ಗೋಪುರ ಎಂದರೆ ದ್ವಾರಗಳಿಂದ ಯುಕ್ತವಿವೆ. ಈ ಪ್ರಾಕಾರಗಳು ಕೆಳಗೆ ಹನ್ನೆರಡು ಯೋಜನ ಅಗಲವಿವೆ, ಮೇಲೆ ನಾಲ್ಕು ಯೋಜನ ಅಗಲವಿವೆ ಮತ್ತು ಎಂಟು ಯೋಜನ ಎತ್ತರವಿವೆ. ಪೃಥ್ವಿಯಲ್ಲಿ ಎರಡು ಹರದಾರಿ ಆಳವಾದ ಅಡಿಪಾಯವು ಇವುಗಳಿಗಿದೆ. ಈ ಪ್ರಾಕಾರಗಳು ನಾನಾ ಪ್ರಕಾರದ ರತ್ನಮಯವಿರುವಂಥವಿವೆ. ಇವುಗಳ ತಳಹದಿಯು ವಜ್ರಮಯವಿದೆ. ವೈಢೂರ್ಯ ರತ್ನಗಳಿಂದ ನಿರ್ಮಾಪಿತವಿರುವ ಅತ್ಯಂತ ರಮಣೀಯ ಶಿಖರಗಳಿಂದ ಸಂಯುಕ್ತವಿರುವಂಥ ಈ ಗೋಡೆಯಂಥ ರಚನೆಯು ಅರ್ಥಾತ್ ಪ್ರಾಕಾರವು ಪ್ರತಿಯೊಂದು ದ್ವೀಪ ಮತ್ತು ಸಮುದ್ರದ ಕೊನೆಯಲ್ಲಿ ಪರಿಧಿಯ ರೂಪದಿಂದ ಸರ್ವತ್ರವಿದೆ. ಪ್ರಾಕಾರಗಳ ಮೇಲಿನ ಅಗಲದ ಮಧ್ಯದಲ್ಲಿ ಸುವರ್ಣಮಯವಾದ ಶಿಖರಗಳ ಪಂಕ್ತಿಯಿದ್ದು ಅದು ಎರಡು ಹರದಾರಿ ಎತ್ತರ ಮತ್ತು ಐನೂರು ಧನುಷ್ಯ ಅಗಲವಿದೆ. ಅದರ ಎರಡೂ ಮಗ್ಗಲಿಗೆ ಅನೇಕ ವನಗಳು, ವಾಪಿಗಳು ಮತ್ತು ಪ್ರಾಸಾದಗಳಿವೆ, ಅಲ್ಲಿ ವ್ಯಂತರ ದೇವಗಳಿರುತ್ತಾರೆ. ಈ ಪ್ರಾಕಾರಗಳ ಪೂರ್ವಾದಿ ದಿಕ್ಕುಗಳಲ್ಲಿ -ವಿಜಯ, ವೈಜಯಂತ, ಜಯಂತ ಮತ್ತು ಅಪರಾಜಿತವೆಂಬ ಹೆಸರಿನ ನಾಲ್ಕು ದ್ವಾರಗಳಿವೆ. ಈ ತೋರಣಯುಕ್ತ ದ್ವಾರಗಳ ಮೇಲೆ ಪ್ರತಿಯೊಂದರ ಮೇಲೆ ಎರಡು ಯೋಜನ ಅಗಲ ಮತ್ತು ನಾಲ್ಕು ಯೋಜನ ಎತ್ತರವಾದ ಪ್ರಾಸಾದವಿರುತ್ತದೆ. ಅದರ ಮೇಲೆ ಆಕಾಶತಲದಲ್ಲಿ ೧೨೦೦೦ ಯೋಜನ ಉದ್ದ ೬೦೦೦ ಯೋಜನ ಅಗಲವಾದ ನಗರವಿದ್ದು, ಅವು ಪ್ರತಿಯೊಂದರ ಹೆಸರು ಕೂಡ ವಿಜಯಾದಿ ಇದೆ ಮತ್ತು ಆ ನಗರಗಳಲ್ಲಿ ವಾಸಿಸುವಂಥ ವ್ಯಂತರ ದೇವಗಳ ಹೆಸರು ಕೂಡ ವಿಜಯಾದಿ ಇದೆ.

ಪೂರ್ವ-ಪಶ್ಚಿಮ ದ್ವಾರದಿಂದ ಸೀತಾ, ಸಿತೋದಾ ನದಿಯು ಲವಣ ಸಮುದ್ರದಲ್ಲಿ ಬಂದು ಸೇರುತ್ತದೆ. ಹದಿನಾಲ್ಕು ನದಿಗಳೊಳಗಿಂದ ಉಳಿದ ಹನ್ನೆರಡು ನದಿಗಳ ಅನ್ಯ ಹನ್ನೆರಡು ದ್ವಾರಗಳು ಕೂಡ ಇವುಗಳಲ್ಲಿ ಇವೆ. ಈಗ ನಾವು ಲವಣ ಸಮುದ್ರದ ವರ್ಣನೆಯನ್ನು ನೋಡೋಣ. ಜಂಬೂದ್ವೀಪವು ಒಂದು ಲಕ್ಷ ಯೋಜನ ವ್ಯಾಸವುಳ್ಳ ವೃತ್ತವಿದೆ. ಅದನ್ನು ಸುತ್ತುವರೆದಿರುವ ಈ ಲವಣ ಸಮುದ್ರವು ಒಂದು ಕಡೆಗೆ ಎರಡು ಲಕ್ಷ ಯೋಜನ

ವಿಸ್ತಾರವುಳ್ಳದ್ದಿದೆ. ಇದರ ಒಂದು ಕಡೆಗೆ ಜಂಬೂದ್ವೀಪವಿದೆ ಮತ್ತು ಇನ್ನೊಂದು ಕಡೆಗೆ ಧಾತಕೀಖಂಡ ದ್ವೀಪವಿದೆ. ಆದರೆ ಇದರ ಆಳವು ಎಲ್ಲಿ ಎಷ್ಟಿದೆಯೆಂಬುದನ್ನು ತಿಳಿಯುವ ಸಲುವಾಗಿ ಅದು ಒಂದು ಮಗ್ಗಲಿನಿಂದ ಹೇಗೆ ಕಾಣಬಹುದಾಗಿದೆ ಎಂಬುದರ ಚರ್ಚೆ ಮಾಡೋಣ.

ತಾವು ಏಳನೆಯ ನಂಬರಿನ ಚಾರ್ಟ ನೋಡುವುದು. ಇಲ್ಲಿ ಮೇಲಿನ ಬಲ ಮೂಲೆಯಲ್ಲಿ ನೀಲಿ ವರ್ಣದ್ದು ಲವಣ ಸಮುದ್ರವಿದೆ. ಅದರ ಪಕ್ಕದಲ್ಲಿ ಕಂದು ಬಣ್ಣದಲ್ಲಿ ಚಿತ್ರಾಪೃಥ್ವಿಯಿದೆ ಮತ್ತು ತಳದಲ್ಲಿ ವಜ್ರಾ ಪೃಥ್ವಿಯಿದೆ. ಈ ಚಿತ್ರವನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಗಬಹುದಾಗಿದೆ ಏಕೆಂದರೆ ಇಲ್ಲಿ ಸಮುದ್ರದ ಮಟ್ಟವು ಭೂಮಿಗಿಂತಲೂ ಮೇಲೆ ಕಂಡು ಬರುತ್ತಿದೆ ಎಂದರೆ ತೋರಿಸಲಾಗಿದೆ. ನಾವು ಇಲ್ಲಿಯವರೆಗೆ ಶಾಲೆಯಲ್ಲಿ ಭೂಗೋಳದಲ್ಲಿ ಅಥವಾ ಲೌಕಿಕ ವ್ಯವಹಾರದಲ್ಲಿ ನಾವು ಸಮುದ್ರದ ಮಟ್ಟದಿಂದ ಎಷ್ಟು ಮೇಲಿದ್ದೇವೆ ಎಂಬ ಮಾತನ್ನು ಕೇಳುತ್ತ ನೋಡುತ್ತ ಅಥವಾ ಹೇಳುತ್ತ ಬಂದಿದ್ದೇವೆ. ಇಲ್ಲಿಯಂತೂ ಲವಣ ಸಮುದ್ರವು ಹೇಗಿದೆಯೆಂದರೆ ಒಂದು ನೌಕೆಯ ಮೇಲೆ ಇನ್ನೊಂದು ನೌಕೆಯನ್ನು ಬೋರಲಾಗಿ ಇರಿಸಿರುವಂತೆ ಇದೆ.

ಇದರದು ಸರ್ವಾಧಿಕ ಆಳವು ಇದರ ಮಧ್ಯದಲ್ಲಿ ಇರುತ್ತದೆ, ಅರ್ಥಾತ್ ಎರಡೂ ಕಡೆಯಿಂದ ೯೫೦೦೦ ಯೋಜನ ದೂರದಲ್ಲಿ ಮಧ್ಯದ ಯಾವ ೧೦೦೦೦ ಯೋಜನವಿದೆ ಅಲ್ಲಿ ಲವಣ ಸಮುದ್ರದ ಆಳವು ೧೦೦೦ ಯೋಜನವಿದೆ. ಅಲ್ಲಿ ಈ ಸಮುದ್ರದ ತಳದಲ್ಲಿ ವಜ್ರಾಪೃಥ್ವಿಯು ಕಂಡು ಬರುತ್ತದೆ. ಏಕೆಂದರೆ ಮೊದಲನೇ ಪೃಥ್ವಿಯ ೧೬೦೦೦ ಯೋಜನ ಪ್ರಮಾಣ ಖರಭಾಗದೊಳಗಿಂದ ಎಲ್ಲಕ್ಕಿಂತ ಮೇಲೆ ೧೦೦೦ ಯೋಜನ ಅಗಲವಾದ ಚಿತ್ರಾ ಪೃಥ್ವಿಯಿದೆ. ತಾವು ಚಾರ್ಟದಲ್ಲಿ ಸ್ಪಷ್ಟವಾಗಿ ನೋಡಬಹುದಾಗಿದೆ - ಜಂಬೂದ್ವೀಪ ಮತ್ತು ಧಾತಕೀ ಖಂಡದ ಹತ್ತಿರ ಈ ಸಮುದ್ರವು ಭೂಮಿಯ ಮಟ್ಟದಿಂದ ಹಿಡಿದು ಮಧ್ಯದವರೆಗೆ ಅಧಿಕ ಆಳವಾಗುತ್ತ ಹೋಗಿದೆ - ಇದರ ಆಳವು ಹೆಚ್ಚುತ್ತ ಹೋಗಿದೆ. ಇಷ್ಟೇ ಅಲ್ಲ, ಇದರ ಎತ್ತರವು ಕೂಡ ಭೂಮಿಯ ಮಟ್ಟದಿಂದ ಹೆಚ್ಚುತ್ತ ಹೋಗಿದೆ. ಮಧ್ಯದಲ್ಲಿ ಇದು ೧೦೦೦ ಯೋಜನ ಆಳವಿದೆ ಅಲ್ಲಿ ೧೧೦೦೦ ಯೋಜನ (ಕೆಲವು ಕಡೆ ಇದನ್ನು ೭೦೦ ಯೋಜನವೆಂದು ಹೇಳಿದ್ದಾರೆ) ಭೂಮಿಯ ಮಟ್ಟದಿಂದ ಎತ್ತರವಿದೆ. ಪೌರ್ಣಿಮೆಯ ದಿನದವರೆಗೆ ಇದು ಹೆಚ್ಚುತ್ತ - ಹೆಚ್ಚುತ್ತ ಇದರ ಎತ್ತರವು ೫೦೦೦ ಯೋಜನ (ಕೆಲವು ಕಡೆ ಇದನ್ನು ಎರಡು ಹರದಾರಿ ಎಂದಿದ್ದಾರೆ) ಹೆಚ್ಚಿ ೧೬೦೦೦ ಯೋಜನವಾಗಿ ಬಿಡುತ್ತದೆ.

ಮಧ್ಯದಲ್ಲಿ ಈ ಸಮುದ್ರದ ಜಲವು ಇಷ್ಟೊಂದು ಮೇಲೆ-ಕೆಳಗೆ ಆಗುತ್ತದೆ, ಯಾವಾಗ ಮೇಲೆ ಬರುತ್ತದೆ ಆಗ ಎರಡೂ ಕಡೆಗೂ ಹರಿದು ೯೫೦೦೦ ಯೋಜನ ದೂರದಲ್ಲಿ ಎರಡೂ ಕಡೆಗೆ ಯಾವ ದ್ವೀಪಗಳಿವೆ ಅಲ್ಲಿ ಭರತಿ ಎಂದರೆ ಉಬ್ಬರವು ಬರುತ್ತದೆ. ಯಾವಾಗ ಮಧ್ಯದಲ್ಲಿ ಜಲವು ಕೆಳಗೆ ಹೋಗುತ್ತದೆ ಆಗ ಎರಡೂ ದಂಡೆಗಳಿಂದ ಜಲವು ಸೆಳೆಯಲ್ಪಟ್ಟು ಮಧ್ಯದಲ್ಲಿ ಬರುತ್ತದೆ. ಆಗ ನಾವು ಅದನ್ನು ಏರಿಳಿತ (ಭರಿತಿ-ಓಹಟಿ) ಎನ್ನುತ್ತೇವೆ. ಯಾವಾಗ ಉಬ್ಬರವು (ಭರತಿ) ಬರುತ್ತದೆ ಆಗ ನೀರು ಎರಡೂ ಕಡೆಗೆ ಹೆಚ್ಚುತ್ತದೆ ಮತ್ತು ಯಾವಾಗ ಇಳಿತ (ಓಹಟಿ)ವಾಗುತ್ತದೆ ಆಗ ಎರಡೂ ಕಡೆಯಿಂದ ನೀರು ಹಿಂದೆ ಸರಿಯುತ್ತ ಹೋಗುತ್ತದೆ. ಹಾಗಾದರೆ ಇಷ್ಟೆಲ್ಲ ನೀರು ಎಲ್ಲಿ ಹೋಗುತ್ತದೆ ? ಎಂಬುದರ ಉತ್ತರವನ್ನು ನಾವು ಆಗಮದ ಆಧಾರದಿಂದ ನೋಡೋಣ. ಈಗ ಸ್ವಲ್ಪ ೮ನೇ ನಂಬರಿನ ಚಾರ್ಟ ನೋಡುವುದು. ಇಲ್ಲಿ ಮಧ್ಯದೊಳಗೆ ಒಂದು ಲಕ್ಷ ಯೋಜನ ವ್ಯಾಸವುಳ್ಳ

ಜಂಬೂದ್ವೀಪವಿದೆ ಅದರ ಹೊರಗೆ ಎರಡು ಲಕ್ಷ ಯೋಜನ ವಿಸ್ತಾರವುಳ್ಳ ಲವಣ ಸಮುದ್ರವಿದೆ. ಲವಣ ಸಮುದ್ರದ ಮಧ್ಯದಲ್ಲಿ ಎರಡೂ ಕಡೆಯಿಂದ ಒಂದು ಲಕ್ಷ ಯೋಜನದ ದೂರದಲ್ಲಿ ತಮಗೆ ಒಂದು ವೃತ್ತಾಕಾರದ ರೇಖೆಯು ಕಂಡು ಬರುತ್ತಲಿದೆ. ಅದರ ಮೇಲೆ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರದಲ್ಲಿ ಈ ನಾಲ್ಕು ದಿಕ್ಕುಗಳಲ್ಲಿ ಯಾವ ನಾಲ್ಕು ವೃತ್ತಾಕಾರಗಳು ಕಂಡು ಬರುತ್ತಲಿವೆ ಅವು ಎಲ್ಲಕ್ಕಿಂತ ದೊಡ್ಡ ಜೇಷ್ಠ ಪಾತಾಳದ ಮುಖಗಳಿವೆ. ಇವುಗಳ ಮುಖದ ವ್ಯಾಸವು ೧೦೦೦೦ ಯೋಜನವಿದೆ. ಇವುಗಳ ಮಧ್ಯದಲ್ಲಿ ವಿದಿಕ್ಕುಗಳಲ್ಲಿಯೂ ಅಂಥವೇ ನಾಲ್ಕು ವೃತ್ತಾಕಾರಗಳು ಕಾಣಿಸುತ್ತಿವೆ. ಇವು ಮಧ್ಯಮ ಪಾತಾಳದ ಮುಖಗಳಿವೆ ಅವು ೧೦೦೦ ಯೋಜನ ವ್ಯಾಸವುಳ್ಳವಿವೆ. ಈ ದಿಕ್ಕು ಮತ್ತು ವಿದಿಕ್ಕುಗಳ ಮಧ್ಯದ ಅಂತರಾಳದಲ್ಲಿ ತಮಗೆ ಈ ಯಾವ ಬಿಂದುಗಳು ಕಂಡು ಬರುತ್ತಲಿವೆ - ಪ್ರತಿಯೊಂದು ಅಂತರಾಳದಲ್ಲಿ ೧೨೫ರ ಲೆಕ್ಕದಿಂದ ಎಂಟು ಅಂತರಾಳಗಳಲ್ಲಿ ಎಲ್ಲ ಸೇರಿ ಒಂದು ಸಾವಿರ ಜಘನ್ಯ ಪಾತಾಳಗಳ ಮುಖಗಳಿವೆ. ಅವುಗಳ ಪ್ರತಿಯೊಂದರ ವ್ಯಾಸವು ೧೦೦ ಯೋಜನವಿದೆ. ಹೀಗೆ ಒಟ್ಟು ೧೦೦೮ ಪಾತಾಳಗಳಿವೆ.

ಈಗ ಇವುಗಳ ಆಕಾರ ನೋಡುವ ಸಲುವಾಗಿ ಏಳನೇ ನಂಬರಿನ ಚಾರ್ಟ ನೋಡುವುದು. ಇವು ಮೃದುಂಗದ ಆಕಾರದವಿವೆ. ಸಮತಟ್ಟಾದ ಭೂಮಿಯಿಂದ ಕೆಳಗಿನ ಯಾವ ಆಳದ ಪ್ರಮಾಣವಿದೆ ಅಷ್ಟು ಈ ಪಾತಾಳಗಳ ಎತ್ತರವಿದೆಯೆಂದು ತಿಳಿಯುವುದು. ಮಧ್ಯದಲ್ಲಿ ಇವುಗಳ ವ್ಯಾಸವು ಸರ್ವಾಧಿಕವಿದೆ, ಮೇಲೆ ಮತ್ತು ಕೆಳಗೆ ಕ್ರಮದಿಂದ ಕಡಿಮೆಯಾಗುತ್ತ ಹೋಗುತ್ತದೆ. ಇವುಗಳ ಮುಖ ಮತ್ತು ತಳದ ವ್ಯಾಸವು ಸಮಾನವಿದೆ. ಇವುಗಳೊಳಗಿನ ಜೇಷ್ಠ ಪಾತಾಳದ ವಿಷಯವಾಗಿ ನೋಡೋಣ. ಅದು ಒಂದು ಲಕ್ಷ ಯೋಜನ ಆಳವಿದೆ. ಇಷ್ಟೊಂದು ಹೇಗೆ ಇರಬಹುದಾಗಿದೆ ? ನಾವು ಮೊದಲನೇ ಪೃಥ್ವಿಯ ದಪ್ಪವನ್ನು ಒಂದು ಲಕ್ಷ ಎಂಭತ್ತು ಸಾವಿರ ಯೋಜನವಿದೆಯೆಂಬುದನ್ನು ನೋಡಿದ್ದೆವು. ಅದರಲ್ಲಿ ಮೇಲಿನ ಖರಭಾಗವು ೧೬೦೦೦ ಯೋಜನದ್ದು ಮತ್ತು ಪಂಕ ಭಾಗವು ೮೪೦೦೦ ಯೋಜನದ್ದಿರುತ್ತದೆ. ಪಂಕಭಾಗದ ಕೊನೆಯವರೆಗೆ ಈ ಪಾತಾಳವು ಆಳವಿದೆ ಅರ್ಥಾತ್ ಈ ತಳದ ಕೆಳಗೆ ಅಬ್ಬಹುಲ ಭಾಗವಿದೆ ಅಲ್ಲಿ ಪ್ರಥಮ ನರಕದ ಸೀಮಾಂತಕ ಬಿಲವಿದೆ.

ಈ ಪಾತಾಳದ ಗೋಡೆಗಳು ಹಾಗೂ ಆನಿಕೆಯು (ತಳಭಾಗವು) ವಜ್ರಮಯವಿದೆ. ಅವುಗಳ ದಪ್ಪವು ೫೦೦ ಯೋಜನವಿದೆ. ಅನ್ಯ ಮಧ್ಯಮ ಮತ್ತು ಜಘನ್ಯ ಪಾತಾಳಗಳ ಪ್ರಮಾಣವನ್ನು ನೋಡೋಣ.

ಪಾತಾಳ - ಯೋಜನಗಳಲ್ಲಿ

ಪಾತಾಳ	ಎತ್ತರ	ಮಧ್ಯದ ವ್ಯಾಸ	ಮುಖ-ತಳಭಾಗ ವ್ಯಾಸ	ಭಿತ್ತಿಗಳ ದಪ್ಪ
ಜೇಷ್ಠ	೧೦೦೦೦೦	೧೦೦೦೦೦	೧೦೦೦೦	೫೦೦
ಮಧ್ಯಮ	೧೦೦೦೦	೧೦೦೦೦	೧೦೦೦	೫೦
ಜಘನ್ಯ	೧೦೦೦	೧೦೦೦	೧೦೦	೫

ಇವು ನಾಲ್ಕು ಜೇಷ್ಠ ಪಾತಾಳಗಳ ಹೆಸರು ಈ ಪ್ರಕಾರವಿವೆ - ಪೂರ್ವ ಮೊದಲಾದ ದಿಕ್ಕುಗಳಲ್ಲಿ ಕ್ರಮದಿಂದ ಪೂರ್ವದಲ್ಲಿ ವಡವಾಮುಖ. ತಮ್ಮ ಚಾರ್ಟದಲ್ಲಿ ಇದನ್ನು ಪಶ್ಚಿಮದಲ್ಲಿ ತೋರಿಸಲಾಗಿದೆ. ಬೇರೆ-ಬೇರೆ

ಶಾಸ್ತ್ರಗಳಲ್ಲಿ ಪೂರ್ವ ಮತ್ತು ಪಶ್ಚಿಮದ ಹೆಸರುಗಳು ತಿರುವು-ಮುರುವು ಇದೆ. ತ್ರಿಲೋಕಸಾರ ಗ್ರಂಥದ ಗಾಥೆಯಲ್ಲಿ ಪೂರ್ವದಲ್ಲಿ ವಡವಾಮುಖವೆಂಬುದಾಗಿದೆ. ತಿಲೋಯ ಪಣ್ಣತ್ತಿಯೊಳಗೆ ಅದನ್ನು ಪಶ್ಚಿಮದಲ್ಲಿ ಎಂದು ಬರೆಯಲಾಗಿದೆ. ದಕ್ಷಿಣದಲ್ಲಿ ಕದಂಬಕ, ಪಶ್ಚಿಮದಲ್ಲಿ ಪಾತಾಳ, ಉತ್ತರದಲ್ಲಿ ಯೂಪಕೇಶರಿಯೆಂಬ ಹೆಸರಿನ ಪಾತಾಳಗಳಿವೆ.

ಇನ್ನು ಈ ಪಾತಾಳಗಳ ಒಳಗೆ ಏನಿದೆಯೆಂಬುದನ್ನು ನೋಡೋಣ. ಪ್ರತಿಯೊಂದು ಪಾತಾಳದ ಎತ್ತರದಲ್ಲಿ ಮೂರು ವಿಭಾಗ ಮಾಡಿದ ಮೇಲೆ ಎಲ್ಲಕ್ಕಿಂತ ಮೇಲಿನ ಒಂದು ಭಾಗದಲ್ಲಿ ಕೇವಲ ಜಲವೇ ಕಂಡು ಬರುತ್ತದೆ. ಕೆಳಗಿನ ಭಾಗದಲ್ಲಿ ಕೇವಲ ಪವನವೇ ಕಂಡು ಬರುತ್ತದೆ ಮತ್ತು ಮಧ್ಯದ ಭಾಗದಲ್ಲಿ ಜಲ-ಪವನಗಳು ಸೇರಿಕೊಂಡಿರುವ ಮಿಶ್ರ ರೂಪವು ಕಂಡು ಬರುತ್ತದೆ. ಸ್ವಲ್ಪ ಗಮನವಿಟ್ಟು ನೋಡುವುದು, ಏಳನೇ ನಂಬರಿನ ಚಾರ್ಟದಲ್ಲಿಯೂ ಇದನ್ನು ತೋರಿಸಲಾಗಿದೆ. ಈ ಪಾತಾಳಗಳ ಮುಖಗಳು ಲವಣ ಸಮುದ್ರದ ತಳಭಾಗದಲ್ಲಿವೆ. ಈ ಪಾತಾಳಗಳ ಮೂರು ವಿಭಾಗಳೊಳಗಿನ ಮಧ್ಯದ ಜಲ-ಪವನವುಳ್ಳ ವಿಭಾಗವು ಕೆಳಗಿನ ವಿಭಾಗದಲ್ಲಿ ಸ್ಥಿತವಿರುವ ಪವನದ ಕಾರಣದಿಂದ ಚಂಚಲವಾಗುತ್ತದೆ (ಚಲಿಸುತ್ತಿರುತ್ತದೆ) ಪಾತಾಳಗಳ ಪವನವು ಯಾವಾಗಲೂ ಸ್ವಭಾವದಿಂದಲೇ ಶುಕ್ಲ ಪಕ್ಷಗಳಲ್ಲಿ ಹೆಚ್ಚುತ್ತದೆ ಮತ್ತು ಕೃಷ್ಣ ಪಕ್ಷಗಳಲ್ಲಿ ಕಡಿಮೆಯಾಗುತ್ತದೆ. ಕೃಷ್ಣ ಪಕ್ಷದಲ್ಲಿ ಮಧ್ಯದ ವಿಭಾಗದಲ್ಲಿ ಜಲದ ವೃದ್ಧಿಯಾಗುತ್ತ ಹೋಗುತ್ತದೆ ಆಗ ಜಲವು ಪಾತಾಳಗಳಲ್ಲಿ ಬಂದು ಬಿಡುತ್ತದೆ, ಶುಕ್ಲ ಪಕ್ಷದಲ್ಲಿ ಮಧ್ಯದ ವಿಭಾಗದಲ್ಲಿ ಪವನದ ವೃದ್ಧಿಯಾಗುತ್ತ ಹೋಗುತ್ತದೆ ಆಗ ಜಲವು ಹೊರಗೆ ಸಮುದ್ರದಲ್ಲಿ ಬಂದು ಬಿಡುತ್ತದೆ, ಮೇಲೆ ಉಕ್ಕುತ್ತದೆ.

ಪೌರ್ಣಿಮೆಯಂದು ಪಾತಾಳಗಳ ಮೂರು ವಿಭಾಗಗಳೊಳಗಿನ ಕೆಳಗಿನ ಎರಡು ವಿಭಾಗಗಳಲ್ಲಿ ವಾಯು ಅರ್ಥಾತ್ ಪವನ ಮತ್ತು ಮೇಲಿನ ವಿಭಾಗದಲ್ಲಿ ಕೇವಲ ಜಲವು ವಿದ್ಯಮಾನವಿರುತ್ತದೆ. ಅಮಾವಾಸ್ಯೆಯಂದು ಮೇಲಿನ ಎರಡು ಭಾಗಗಳಲ್ಲಿ ಜಲ ಮತ್ತು ಕೆಳಗಿನ ಒಂದು ಭಾಗದಲ್ಲಿ ಕೇವಲ ಪವನವು ವಿದ್ಯಮಾನವಿರುತ್ತದೆ.

ಜೇಷ್ಠ ಪಾತಾಳಗಳಲ್ಲಿ ಅವುಗಳ ಮೂರನೆಯ ಒಂದು ಭಾಗ ಅರ್ಥಾತ್ ಒಂದು ಲಕ್ಷ ಯೋಜನದ ಮೂರನೆಯ ಒಂದು ಭಾಗ ೩೩೩೩ $\frac{೧}{೩}$ ಯೋಜನವಿದೆ, ಮಧ್ಯಮ ಪಾತಾಳಗಳ ಮೂರನೆಯ ಒಂದು ಭಾಗ - ಹತ್ತು ಸಾವಿರ ಯೋಜನದ ಮೂರನೆಯ ಒಂದು ೩೩೩೩ $\frac{೧}{೩}$ ಯೋಜನ ಮತ್ತು ಜಘನ್ಯ ಪಾತಾಳಗಳ ಮೂರನೆಯ ಒಂದು ಭಾಗ - ಒಂದು ಸಾವಿರ ಯೋಜನದ ಮೂರನೆಯ ಒಂದು ಭಾಗ ೩೩೩ $\frac{೧}{೩}$ ಯೋಜನವಿದೆ. ಆಯಾಯಾ ಪಾತಾಳಗಳಲ್ಲಿ ಮಧ್ಯದ ಮೂರನೇ ಒಂದು ಭಾಗದಲ್ಲಿ ಕೃಷ್ಣ ಪಕ್ಷದ ಹದಿನೈದು ದಿನಗಳವರೆಗೆ ಜಲದ ವೃದ್ಧಿಯಾಗುತ್ತದೆ, ಶುಕ್ಲಪಕ್ಷದ ಹದಿನೈದು ದಿನಗಳವರೆಗೆ ಪವನದ ವೃದ್ಧಿಯಾಗುತ್ತಿರುತ್ತದೆ. ಜೇಷ್ಠ ಪಾತಾಳಗಳಲ್ಲಿ ಹದಿನೈದು ದಿನಗಳಲ್ಲಿ ೩೩೩೩ $\frac{೧}{೩}$ ಯೋಜನ ವೃದ್ಧಿಯಾಗುತ್ತದೆ ಆದುದರಿಂದ ಇದಕ್ಕೆ ಹದಿನೈದರಿಂದ ಭಾಗಿಸಿದ ಮೇಲೆ ಒಂದು ದಿನದ ವೃದ್ಧಿಯ ಪ್ರಮಾಣವು ಬಂದು ಬಿಡುತ್ತದೆ. ಅದೇ ರೀತಿ

ಮಧ್ಯಮ ಮತ್ತು ಜಘನ್ಯ ಪಾತಾಳಗಳಲ್ಲಿ ಅವವುಗಳ ಮೂರನೆಯ ಒಂದು ಭಾಗವನ್ನು ಹದಿನೈದರಿಂದ ಭಾಗಿಸಿದ ಮೇಲೆ ಪ್ರತಿ ದಿನದ ವೃದ್ಧಿಯ ಪ್ರಮಾಣವು ಬಂದು ಬಿಡುತ್ತದೆ.

ಪ್ರಶ್ನೆ :- ಯಾವ ಪಾತಾಳದ ಕೆಳಗೆ ಸೀಮಂತಕ ಬಿಲವಿದೆ ?

ಉತ್ತರ :- ಸೀಮಂತಕ ಬಿಲವು ಎಂದರೆ ಯಾವುದು ಮೊದಲನೇ ನರಕದ ಪ್ರಥಮ ಪದರಿನ ಇಂದ್ರಕ ಬಿಲವಿದೆ ಅದರ ವಿಸ್ತಾರವು ನಲವತ್ತೈದು ಲಕ್ಷ ಯೋಜನ ಅರ್ಥಾತ್ ಪೂರ್ತಿ ಎರಡೂವರೆ ದ್ವೀಪದಷ್ಟಿದೆ. ಆದುದರಿಂದ ನಾಲ್ಕೂ ಜೇಷ್ಠ ಪಾತಾಳಗಳ ತಳದಲ್ಲಿ ಸೀಮಂತಕ ಬಿಲವಿದೆ. ಮಧ್ಯಮ ಪಾತಾಳಗಳಂತೂ ೧೦೦೦೦ ಯೋಜನ ಆಳವುಳ್ಳವಿವೆ, ಅವಂತೂ ಮೊದಲನೇ ರತ್ನಪ್ರಭಾ ಪೃಥ್ವಿಯ ಖರಭಾಗದಲ್ಲಿ ಸ್ಥಿತವಿವೆ. ಇನ್ನೊಂದು ಮಾತೆಂದರೆ ಇಲ್ಲಿ ಯಾವ ಭವನವಾಸಿಗಳ ಭವನಗಳು ಇರುವುದಿಲ್ಲ. ಅವಂತೂ ಹೊರಗಿನ ದ್ವೀಪ-ಸಮುದ್ರಗಳ ಕೆಳಗೆ ಇರುತ್ತವೆ.

ಜೇಷ್ಠ ಪಾತಾಳಗಳ ಎರಡೂ ಪಾರ್ಶ್ವಭಾಗಗಳಲ್ಲಿ (ಮಗ್ಗುಲಗಳಲ್ಲಿ) ಒಂದೊಂದು ಪರ್ವತವಿದ್ದು ಅವು ಜಲದಿಂದ ೧೦೦೦ ಯೋಜನ ಎತ್ತರವಿವೆ, ಧವಲ ವರ್ಣದವಿವೆ, ಅವುಗಳ ಮೇಲೆ ವ್ಯಂತರ ದೇವಗಳು ಇರುತ್ತಾರೆ.

ಇಲ್ಲಿ ಪುನಃ ಓರ್ವರ ಪ್ರಶ್ನೆಯಿದೆ - ಈ ದ್ವೀಪಗಳು, ಸಮುದ್ರಗಳು, ಪಾತಾಳಗಳನ್ನು ತಿಳಿಯುವುದರಿಂದ ಯಾವ ಲಾಭವಿದೆ ? ಈ ಪ್ರಶ್ನೆಯನ್ನು ನಮ್ಮ ನಿತ್ಯ ಸ್ವಾಧ್ಯಾಯದ ಮತ್ತು ಎಲ್ಲರಿಗಿಂತ ಯುವ ಅವಸ್ಥೆಯ ಮುಮುಕ್ಷುಗಳು ಕೇಳಿದ್ದಾರೆ ಅವರ ವಯಸ್ಸು ಕೇವಲ ತೊಂಭತ್ತೈದು ವರ್ಷವಿದೆ. ಅವರು ಹೇಳುತ್ತಿರುವುದೇನೆಂದರೆ, ತಾವು ಮೊದಲಿನ ದಿನವೇ ತಿಳಿಸಿಕೊಟ್ಟಿದ್ದೀರಿ ಆದರೆ ನಾನು ಮರೆತು ಹೋಗಿದ್ದೇನೆ, ಈಗ ಇಲ್ಲಿ ಯಾರದೋ ಈ ಪ್ರಶ್ನೆಯಿದೆ, ಕೃಪೆ ಮಾಡಿ ಉತ್ತರಿಸಬೇಕು.

ಹಾಗಾದರೆ ಆಲಿಸಿರಿ-ಕರಣಾನುಯೋಗದ ಇವೆಲ್ಲ ವಿಷಯಗಳ ಕುರಿತಾಗಿ ಬೇಕಾದರೆ ಅದು ತ್ರಿಲೋಕ ರಚನೆಯಾಗಿರಲಿ ಅಥವಾ ಕರ್ಮಗಳ ಅವಸ್ಥೆಗಳಾಗಿರಲಿ ಇಲ್ಲವೇ ಗುಣಸ್ಥಾನ-ಮಾರ್ಗಣಾ ಸ್ಥಾನಗಳ ಮಾತಿರಲಿ ಇವುಗಳನ್ನು ತಿಳಿಯುವುದರಿಂದ ನಮಗೆ ಯಾವ ಲಾಭವಿದೆ ? ಎಂಬ ಪ್ರಶ್ನೆಯು ಬಹಳಷ್ಟು ಜನರದಿದೆ. ಅವರ ಅಭಿಪ್ರಾಯದಲ್ಲಿ - ಪ್ರಶ್ನೆ ಕೇಳುವ ರೀತಿಯನ್ನು ನೋಡಿದರೆ ಈ ವ್ಯರ್ಥವಾದ ನಿರರ್ಥಕವಾದ ವಿಷಯಗಳ ಚರ್ಚೆಯನ್ನು ಏತಕ್ಕಾಗಿ ಮಾಡುವುದು ? ಎಂದು ಹೇಳುತ್ತಿರುವುದೇ ನಮಗೆ ತಿಳಿದು ಬರುತ್ತಿದೆ. ಹಾಗಾದರೆ ತಿಳಿಯುವ ಕಾರ್ಯದಿಂದ ತಾವು ಯಾವ ಲಾಭವನ್ನು ಬಯಸುತ್ತೀರಿ ? ಎಂಬುದು ನಮ್ಮ ಪ್ರಶ್ನೆಯಿದೆ. ನಿಜವಾಗಿ ಇವುಗಳನ್ನು ತಿಳಿಯುವುದರಿಂದ ನಮ್ಮ ಜ್ಞಾನವು ಯಥಾರ್ಥವಾಗುತ್ತದೆ ಇದುವೇ ಲಾಭವಿದೆ. ಇವುಗಳ ಕುರಿತಾಗಿ ಇರುವಂಥ ಅಜ್ಞಾನದ ನಾಶವಾಗುತ್ತದೆ ಇದುವೇ ಇವನ್ನು ತಿಳಿಯುವುದರ ಲಾಭವಿದೆ. ಕೇವಲ ಜ್ಞಾನಿಗಳು ಒಂದು ಸಮಯದಲ್ಲಿ ಇವೆಲ್ಲ ವಸ್ತುಗಳನ್ನು ಯುಗಪತ್ತಾಗಿ ತಿಳಿಯುತ್ತಿದ್ದಾರೆ ಅವರಿಗೆ ಯಾವ ಲಾಭವಾಗುತ್ತಿದೆ ? ಎಂದು ನಾವು ಕೇಳಿದರೆ, ಅದು ಅವರ ಸ್ವಭಾವವಿದೆಯೆಂದು ತಾವು ಉತ್ತರಿಸುವಿರಿ. ಅಹುದು, ಇಲ್ಲಿ ನಾವು-ತಾವು ಯಾವುದನ್ನು ತಿಳಿಯುತ್ತಿದ್ದೇವೆ, ಅದು ಕೂಡ ನಮ್ಮ ಸ್ವಭಾವವಿದೆ. ನಾವು ಮತ್ತು ತಾವುಗಳೆಲ್ಲರು ನಿಜವಾಗಿಯಂತೂ ನಮ್ಮ ಸ್ವಭಾವವನ್ನೇ ತಿಳಿಯುತ್ತಿದ್ದೇವೆ.

ಈ ಯಾವ ತ್ರಿಲೋಕ ರಚನೆಯ ಮಾತುಗಳಿವೆ ಅವನ್ನು ಇಷ್ಟೊಂದು ಆಳವಾಗಿ ತಿಳಿಯುತ್ತಿರುವುದಕ್ಕೆ ಕಾರಣವೇನಿದೆ ? 'ತಾವು ತಿಳಿಸಿಕೊಡುತ್ತಿರುವುದರಿಂದ ತಿಳಿಯುತ್ತಿದ್ದೇವೆ' ಎಂಬ ಧ್ವನಿಯು ಬಂತು. ಹಾಗಾದರೆ ಆಲಿಸಿರಿ-ನಿಮಿತ್ತದಿಂದ ಕಾರ್ಯವಾಗುವುದಿಲ್ಲ. ಜ್ಞಾನದ ಪ್ರತಿಯೊಂದು ಪರ್ಯಾಯವು ಸ್ವಯಂ ತನ್ನಿಂದ ಆಗುತ್ತದೆ. ತಿಳಿಯುವುದು ಜೀವದ-ನಮ್ಮ ಸ್ವಭಾವವಿದೆ, ಏನನ್ನು ತಿಳಿಯುವುದೆಂಬ ಜ್ಞೇಯವು ಕೂಡ ನಿಶ್ಚಿತವಿದೆ. ಇಲ್ಲಿ ತಿಳಿಯುವುದರ ನಿಷೇಧವನ್ನೇಕೆ ಮಾಡಲಾಗುತ್ತದೆಯೆಂಬುದು ನನ್ನ ಗಮನಕ್ಕೆ ಬರುತ್ತಿಲ್ಲ. ಇದನ್ನು ತಿಳಿಯುವುದರಿಂದ ಲಾಭವೇನು ? ಎಂದು ಕೇಳುತ್ತೀರಿ. ಹಾಗಾದರೆ ಇದನ್ನು ತಿಳಿಯುವುದರ ಕುರಿತಾಗಿಯೇ ಈ ಪ್ರಶ್ನೆಯು ತಮ್ಮ ಮನಸ್ಸಿನಲ್ಲಿ ಅದೇಕೆ ಉತ್ಪನ್ನವಾಗುತ್ತದೆ ? ಎಂಬುದೂ ನನ್ನ ಪ್ರಶ್ನೆಯಿದೆ. ದೂರದರ್ಶನದಲ್ಲಿ ಕ್ರಿಕೆಟ್ ಪಂದ್ಯದ ನೇರ ಪ್ರಸಾರ ನೋಡುವಾಗ ಈ ಪ್ರಶ್ನೆಯು ಏಕೆ ಬರುವುದಿಲ್ಲ ? ಅಲ್ಲಿ ಒಂದು ಚೆಂಡು ತನ್ನ ಉಪಾದಾನದಿಂದ ಹಾರುತ್ತದೆ, ಅಪ್ಪಳಿಸುತ್ತದೆ, ಉರುಳುತ್ತ ಹೋಗುತ್ತದೆ, ಅದರ ಹಿಂದೆ ಅಲ್ಲಿಯಂತೂ ಹನ್ನೊಂದು ಆಟಗಾರರಲ್ಲಿ ಯಾರೋ ಒಬ್ಬರು ಅಥವಾ ಇಬ್ಬರು ಓಡುತ್ತಾರೆ ಮತ್ತು ಇಲ್ಲಿ (ತಮ್ಮ-ತಮ್ಮ ಮನೆಯಲ್ಲಿ) ಕೋಟ್ಯಂತರ ಜನರು ಸೋಫಾದಲ್ಲಿ ಕುಳಿತಲ್ಲಿಯೇ ಹಾರುತ್ತಾರೆ - ಅಲ್ಲಿ ಅದನ್ನು ತಿಳಿಯುವುದರಿಂದ ಯಾವ ಲಾಭವಿದೆ - ಎಂಬ ಪ್ರಶ್ನೆಯನ್ನಂತೂ ಯಾರೂ ಕೇಳುವುದಿಲ್ಲ. ದೂರದರ್ಶನದ ವಾರ್ತಾ ವಾಹಿನಿಗಳಲ್ಲಿ ಯಾವಾಗಲೂ ವಿಧ ವಿಧದ ವಾರ್ತೆಗಳು ನಡೆಯುತ್ತಲೇ ಇರುತ್ತವೆ, ಅವುಗಳನ್ನು ತಿಳಿಯುವುದರಿಂದ ಯಾವ ಲಾಭವಿದೆ ? ಹೋಗಲಿ, ರಾಗ-ದ್ವೇಷ, ವೈರ-ವಿರೋಧದ ಭಾವನೆಗಳಿಂದ ತುಂಬಿದ ಧಾರಾವಾಹಿಗಳು, ಚಲನ ಚಿತ್ರಗಳು ಮೂಡಿ ಬರುತ್ತಿರುತ್ತವೆ ಅವನ್ನು ತಿಳಿಯುವುದರಿಂದ ಯಾವ ಲಾಭವಿದೆ ? ಪ್ರತಿಯಾಗಿ ಅವುಗಳನ್ನು ತಿಳಿಯುವುದರಿಂದ ಯಾವ ರಾಗ-ದ್ವೇಷದ ಪರಿಣಾಮಗಳಾಗುತ್ತವೆ, ಆಕುಲತೆಯಾಗುತ್ತದೆ, ಕರ್ಮಬಂಧವಾಗುತ್ತದೆ ಅದಂತೂ ಹಾನಿಯೇ ಹಾನಿಯಿದೆ. ಅಲ್ಲಿ ಮೂಡಿ ಬರುವಂಥ ಕಾರ್ಯಕ್ರಮಗಳಲ್ಲಿನ ಪಾತ್ರಗಳೊಂದಿಗೆ ದರ್ಶಕರು ಏಕರೂಪ-ಒಂದಾಗಿ ಹೋಗುತ್ತಾರೆ, ಅವರುಗಳ ದುಃಖ-ಕಷ್ಟದಿಂದ ಇವರು ದುಃಖಿಯಾಗುತ್ತಾರೆ. ಒಂದು ವೇಳೆ ಅಲ್ಲಿಯ ಕಥಾನಾಯಕನು ಕೈಯಲ್ಲಿ ಪಿಸ್ತೂಲು ಇದ್ದರೂ ಹೊಡೆಸಿಕೊಳ್ಳುತ್ತಿದ್ದರೆ ಆಗಇವರು ಇಲ್ಲಿ ಕುಳಿತಲ್ಲಿಯೇ 'ಅಯ್ಯಾ , ಗುಂಡು ಹಾರಿಸಿ ಬಿಡು' ಎಂದು ಹೇಳುತ್ತಾರೆ. ಸೋದರರೇ ! ಅದು ಅಭಿನಯವಿದೆ; ಗುಂಡು ಹಾರಿಸದೇ ಇರುವ ಸಲುವಾಗಿ ಮತ್ತು ಹೊಡೆಯಿಸಿಕೊಳ್ಳುವ ಸಲುವಾಗಿ ಅವನಿಗೆ ಧನದ ಲಾಭವೇ ಇದೆ ಮತ್ತು ತಾವು ಯಾವ ಭಾವ ಮಾಡುತ್ತಿರುವಿರಿ ಆ ಪ್ರತಿಯೊಂದು ಪರಿಣಾಮದ ಅನುಸಾರ ಇಲ್ಲಿ ತಮಗೆ ಕರ್ಮಗಳ ಬಂಧವಾಗುತ್ತಲಿದೆ. ಇದು ನಿರರ್ಥಕವಾದ ಶಿಕ್ಷೆ - ಅನರ್ಥದಂಡವಿದೆ ! ಆ ಸಮಸ್ತ ಕರ್ಮಗಳ ಫಲವನ್ನು ಈ ಜೀವನು ಭೋಗಿಸಬೇಕಾಗುತ್ತದೆ.

ಇಲ್ಲಿಯಂತೂ ನಾವು ಸತ್ಯವನ್ನು ವಸ್ತುಸ್ಥಿತಿಯನ್ನು ತಿಳಿಯುತ್ತಿದ್ದೇವೆ, ಇಲ್ಲಿ ಯಾವುದಾದರೂ ಸ್ಥೂಲ ರಾಗ-ದ್ವೇಷ ಅಥವಾ ಹಿಂಸಾದಿ ಪಾಪಗಳ ವಿಚಾರವು ಬರುವುದಿಲ್ಲ. ನಮ್ಮಲ್ಲಿ ಮನೆಯೊಳಗೆ ನಿತ್ಯ ಮುಂಜಾನೆ ಒಂದೂವರೆ ಗಂಟೆ ಕರಣಾನುಯೋಗದ ಸ್ವಾಧ್ಯಾಯವು ನಡೆಯುತ್ತದೆ ಜೀವಕಾಂಡ, ಕರ್ಮಕಾಂಡ, ಲಬ್ಧಿಸಾರ, ಕ್ಷಪಣಾಸಾರ, ಧವಲಾ, ಜಯಧವಲಾಗಳ ನಂತರ ಈಗ ಮಹಾಧವಲಾ ಗ್ರಂಥದ ಸ್ವಾಧ್ಯಾಯವು ನಡೆಯುತ್ತಿದೆ. ಒಂದೂವರೆ ಗಂಟೆಯು ಹೇಗೆ ಕಳೆದು ಬಿಡುತ್ತದೆಯೆಂಬುದು ನಮ್ಮಗಳ ಗಮನಕ್ಕೇನೆ ಬರುವುದಿಲ್ಲ. ಆತ್ಮನ ಸ್ವಭಾವವು ತಿಳಿಯುವುದಿದೆ, ಹಾಗಿರುವಾಗ ಅದು ಸರಿಯಾಗಿ ತಿಳಿಯುತ್ತಿರುವಾಗ ಅಲ್ಲಿ ಜ್ಞಾನದ ವಿಕಾಸವಾಗುತ್ತಿದೆಯೋ ಅಥವಾ ಹ್ರಾಸವಾಗುತ್ತಿದೆ ? ಅದೇ ರೀತಿ ದ್ರವ್ಯಾನುಯೋಗದ ಸಾಮೂಹಿಕ ಸ್ವಾಧ್ಯಾಯವು

ಕೂಡ ನಮ್ಮಲ್ಲಿ ದಿನಾಲೂ ಎರಡು ಗಂಟೆ ನಡೆಯುತ್ತದೆ. ಕರಣಾನುಯೋಗದ ಅಭ್ಯಾಸದಿಂದ ದ್ರವ್ಯಾನುಯೋಗದ ಸಿದ್ಧಾಂತಗಳ ದೃಢತೆಗೆ ಅತ್ಯಂತ ಅನುಕೂಲವಾಗುತ್ತದೆ.

ಯಾವ ಪರಿಣಾಮಗಳಿಂದ ಎಂಥ ಕರ್ಮಗಳ ಬಂಧವಾಗುತ್ತದೆ ? ಯಾವ ಗತಿಯ ಜೀವನು ಯಾವ ಕರ್ಮ ಕಟ್ಟಿಕೊಂಡು ಎಲ್ಲಿ ಜನಿಸುತ್ತಾನೆ, ಮಿಥ್ಯಾತ್ವದ ಕಾರಣದಿಂದ ಜೀವನು ಎಲ್ಲೆಲ್ಲಿ ಉತ್ಪನ್ನನಾಗುತ್ತಾನೆ, ಯಾವ ಪರ್ಯಾಯಗಳಲ್ಲಿ ಹೆಚ್ಚು ಹೆಚ್ಚೆಂದರೆ ಎಷ್ಟು ಕಾಲದವರೆಗೆ ಜನ್ಮ-ಮರಣಗಳನ್ನು ಮಾಡುತ್ತಿರುತ್ತಾನೆ, ಅವುಗಳ ಸಂಖ್ಯೆ ಅವನು ಇರುವಂಥ ಸ್ಥಾನಗಳು, ಕರ್ಮಗಳ ನಿರ್ಜರೆಯು ಯಾವ ಗುಣಸ್ಥಾನದಲ್ಲಿ ಯಾವ ವಿಧಿಯಿಂದ ಆಗುತ್ತದೆ, ಕರ್ಮಗಳ ಕ್ಷಪಣವು ಹೇಗಾಗುತ್ತದೆ - ಇವೆಲ್ಲ ಮಾತುಗಳನ್ನು ಓದುವ-ಓದಿಸುವ ಸಮಯದಲ್ಲಿ ಜ್ಞಾನದ ಏಕಾಗ್ರತೆಯು ಹೆಚ್ಚುತ್ತ ಹೋಗುತ್ತದೆ - ಜ್ಞಾನದಲ್ಲಿ ವಿಶುದ್ಧತೆಯಾಗುತ್ತ ಹೋಗುತ್ತದೆ. ಯಾವುದೇ ಅನುಯೋಗವಿರಲಿ ಅದರಲ್ಲಿ ಏಕಾಗ್ರತೆಯಾಗುವುದರಿಂದ ವಿಶುದ್ಧಿಯು ವೃದ್ಧಿಸುತ್ತ ಹೋಗುತ್ತದೆ. ಶ್ರೀ ಅಮೃತಚಂದ್ರಾಚಾರ್ಯರು ಸಮಯಸಾರ ಮಹಾಗ್ರಂಥದ ಟೀಕೆ ಬರೆಯುವ ಸಮಯದಲ್ಲಿ 'ಮಮಪರಮವಿಶುದ್ಧಿರ್ಭವತು' ಎಂದು ಹೇಳಿದ್ದಾರೆ ಅಲ್ಲವೇನು !

ಜ್ಞಾನದ ಈ ಏಕಾಗ್ರತೆಯಲ್ಲಿ ವಿಶುದ್ಧಿಯು ವೃದ್ಧಿಸಿದ ಮೇಲೆ ತತ್ತ್ವವಿಚಾರದ ಕಾಲದಲ್ಲಿ ಜೀವನು ತನ್ನ ಆತ್ಮನಲ್ಲಿ ಲೀನನಾಗಿ ಹೋಗುತ್ತಾನೆ. ಕರಣಾನುಯೋಗದ ಗಣಿತಗಳನ್ನಂತೂ ನಾವು ಇಲ್ಲಿ ಬಿಟ್ಟು ಕೊಟ್ಟಿದ್ದೇವೆ. ಆ ಗಣಿತಗಳನ್ನು ತಿಳಿಯುತ್ತ-ತಿಳಿಯುತ್ತ ಕೂಡ ಎಂಥ ಏಕಾಗ್ರತೆಯಾಗುತ್ತದೆಯೆಂದರೆ, ಆ ಕಾಲದಲ್ಲಿ ಆತ್ಮಸನ್ಮುಖತೆಯಪೂರ್ವಕ ಸಮ್ಯಗ್ದರ್ಶನವಾಗಿ ಬಿಡುತ್ತದೆ, ಅದನ್ನು ಬೀಜ ಸಮ್ಯಕ್ತ್ವವೆಂದು ಹೇಳುತ್ತಾರೆ. ಹಾಗಾದರೆ ನಮ್ಮ ಜ್ಞಾನದ ಏಕಾಗ್ರತೆಯಂತೂ ದೂರದರ್ಶನದ ದೃಶ್ಯಗಳನ್ನು ನೋಡುವಾಗ ಕೂಡ ಆಗುತ್ತದೆಯಲ್ಲ ? ಎಂದು ತಾವು ಕೇಳಬಹುದಾಗಿದೆ - ಆದರೆ ಅಲ್ಲಿ ಅಭಿಪ್ರಾಯದ ಮತ್ತು ಜ್ಞಾನದ ದೋಷವನ್ನು ಇಟ್ಟುಕೊಂಡು ಏಕಾಗ್ರರಾಗುತ್ತೀರಿ. ಅದರಿಂದೇನು ತಮ್ಮ ಆತ್ಮನ ಅನುಭವವಾಗುವ ಸಾಧ್ಯತೆಯಿಲ್ಲ. ಆಗ ಆಕುಲತೆಯು ಇದ್ದೇ ಇರುತ್ತದೆ ಮತ್ತು ರಾಗ-ದ್ವೇಷಗಳಾಗುತ್ತಿರುತ್ತವೆ.

ರಾಗ-ದ್ವೇಷ ರಹಿತ ಅರ್ಥಾತ್ ಆಂಶಿಕ ವೀತರಾಗತೆಯೊಂದಿಗೆ ಯಾವುದೋ ಒಂದು ವಿಷಯವನ್ನು ತಿಳಿಯುತ್ತ ಉಳಿಯುವರೂಪ ಧ್ಯಾನವಂತೂ ಶ್ರೇಣಿ ಹತ್ತುವಾಗಲೂ ಇರುತ್ತದೆ, ಅದನ್ನು ಶುಕ್ಲಧ್ಯಾನವೆಂದು ಹೇಳುತ್ತಾರೆ. ಅಲ್ಲದೇ ಶ್ರೇಣಿಯನ್ನು ಕೂಡ ಯಾರು ಪೂರ್ವಧಾರಿಯಿದ್ದಾರೆ - ಹದಿನಾಲ್ಕು ಪೂರ್ವಗಳ ಜ್ಞಾತಾರರು ಅಥವಾ ದಶಪೂರ್ವಧಾರಿಗಳೇ ಹತ್ತುತ್ತಾರೆ. ನಾವು ನಮ್ಮ ಮತಿ ಕಲ್ಪನೆಯಿಂದಲೇ ಯಾವುದೋ ಅನುಯೋಗದ ನಿಷೇಧ ಮಾಡತೊಡಗಿರುವುದು ಸರಿಯಿಲ್ಲ. ದ್ರವ್ಯಾನುಯೋಗದಿಂದ ತತ್ತ್ವಜ್ಞಾನದ ಅಭ್ಯಾಸ ಮಾಡಿ ಸಿದ್ಧಾಂತಗಳನ್ನು ತಿಳಿದುಕೊಂಡ ಮೇಲೆ ಅದರದಂತೂ ವಿಚಾರ-ಚಿಂತನವಾಗಲೇ ಬೇಕಾಗುವುದು. ಆದರೆ ನಮ್ಮ ಮನಸ್ಸು ಮರ್ಕಟದ ಸಮಾನವಿದೆ. ಅದಕ್ಕೆ ನಿತ್ಯ ಹೊಸ ಹೊಸ ಅವಲಂಬನೆಯು ಬೇಕಾಗುತ್ತದೆ. ದೂರ ದರ್ಶನದ ಎದುರಿಗೆ ಕುಳಿತುಕೊಂಡಿರುವಾಗ ಕೈಯಲ್ಲಿ ರಿಮೋಟ ಕಂಟ್ರೋಲ ಇಟ್ಟುಕೊಂಡಿರುತ್ತೇವೆ ಮತ್ತು ವಾಹಿನಿಗಳನ್ನು ಬದಲಾಯಿಸುತ್ತ ಇರುತ್ತೇವೆ - ಎಲ್ಲಿ ಏನಿದೆ ? ಎಂಬುದನ್ನು ತಿಳಿಯುವ ಕುತೂಹಲವು - ಆಕುಲತೆಯ ರಾಗವು ಇವನನ್ನು ಶಾಂತಿಯಿಂದ ಕೂಡ್ರಗೊಡುವುದಿಲ್ಲ.

ಪಂ. ಟೋಡರಮಲ್ಲರು ಸಮ್ಯಗ್ಜ್ಞಾನ ಚಂದ್ರಿಕೆಯ ಪೀಠಿಕೆ ಬರೆಯುತ್ತ ಹೇಳಿರುವುದೇನೆಂದರೆ, ಅಲ್ಲಿ ಕೆಲವರು ದ್ರವ್ಯಾನುಯೋಗದ ಪಕ್ಷಪಾತಿಗಳಿದ್ದಾರೆ, ಕೆಲವರು ಚರಣಾನುಯೋಗದ, ಕೆಲವರು ಪ್ರಥಮಾನುಯೋಗದ, ಕೆಲವರು ವ್ಯಾಕರಣ-ಅಲಂಕಾರದ, ಕೆಲವರು ಧನ ಸಂಪಾದನೆಯ ಮೊದಲಾಗಿ. ಆದರೆ ಎಲ್ಲ ಜೀವಗಳಿಗೆ ಅವರ ಮನ್ನಣೆ - ವಿಚಾರವು ಹೇಗೆ ದೋಷಯುಕ್ತವಿದೆ ಎಂಬುದನ್ನು ಅತಿಶಯ ಉತ್ತಮ ರೀತಿಯಿಂದ ತಿಳಿಸಿಕೊಟ್ಟಿದ್ದಾರೆ. ಅದನ್ನು ಎಲ್ಲರೂ ಅವಶ್ಯವಾಗಿ ಓದಬೇಕು.

ಇಲ್ಲಿ ನಾವು ಯಾವ ಈ ವಿಷಯವನ್ನು ತಿಳಿಯುತ್ತಿದ್ದೇವೆ ಆ ತಿಳಿಯುವಿಕೆಯು ಎಲ್ಲಿಂದ ಆಗುತ್ತಲಿದೆ? ಈ ಚಾರ್ಟಗಳಿಂದ ಆಗುತ್ತಲಿದೆಯೋ ಅಥವಾ ಈ ಜಡ ವಾಣಿಯೊಳಗಿಂದ ಆಗುತ್ತಿದೆ ? ಇಲ್ಲ; ಪರದಿಂದ ಜ್ಞಾನದ ಕಾರ್ಯವಾಗುವುದಿಲ್ಲ, ಈ ಪ್ರತಿಯೊಂದು ಜ್ಞಾನ ಪರ್ಯಾಯವು ತನ್ನಿಂದ ವಿಕಸಿತವಾಗುತ್ತಿದೆ. ನಾವೆಲ್ಲರೂ ನಮ್ಮ ನಮ್ಮ ಯೋಗ್ಯತೆಯಿಂದ ತಿಳಿಯುತ್ತಿದ್ದೇವೆ ಮತ್ತು ನಾವು ಒಂದು ವೇಳೆ ತಿಳಿಯುವುದರದೇ ನಿಷೇಧ ಮಾಡಿದರೆ ಜ್ಞಾನ ಸ್ವಭಾವದ-ಸರ್ವಜ್ಞ ಸ್ವಭಾವದ ನಿಷೇಧವಾಗುತ್ತದೆ.

ಈ ಜ್ಞಾನವು ಸಹಜರೂಪದಿಂದ ಆಗುತ್ತದೆ. ಎಲ್ಲರನ್ನು ಒಂದು ಕಡೆಗೆ ಸೇರಿಸುವ ಮತ್ತು ಎಲ್ಲರಲ್ಲಿ ಜ್ಞಾನವನ್ನು ತುಂಬಿಬಿಡುವ ಸಾಮರ್ಥ್ಯವಾದರೂ ಯಾರಲ್ಲಿ ಇದೆ ? ಯಾವುದಾದರೂ ವಿಷಯವು ತಿಳಿದು ಬಾರದೆ ಇರುವ ಮಾತು ಬೇರೆಯಿದೆ. ಆದರೆ ಒಂದು ವೇಳೆ ಅಭಿಪ್ರಾಯದಲ್ಲಿ ನಿಷೇಧವಿರುವುದು ಮತ್ತು ಓದುವ-ಓದಿಸುವುದರ ನಿಷೇಧ ಮಾಡಿದರೆ ಅದು ಮಹಾ ಅಪರಾಧವೇ ಇದೆ. ಈ ಶಾಸ್ತ್ರ-ಗ್ರಂಥಗಳಂತೂ ನಮ್ಮ ಅಮಾನತ್ತು ಇವೆ. ಲೌಕಿಕ ಸಂಪತ್ತನ್ನಂತೂ ನಾವು ನಮ್ಮ ಮಕ್ಕಳ ಸಲುವಾಗಿ ಗಳಿಸಿ ಇಡಬಯಸುತ್ತೇವೆ. ಆದರೆ ಅದು ಪುಣ್ಯದ ಆಧೀನವಿದೆ. ಈ ವಿಷಯಗಳನ್ನು ಓದಿದರೇನೇ ಕಾರ್ಯಕಾರಿಯಾಗುವಂತಿದೆ. ಕೇವಲಶಾಸ್ತ್ರಗಳನ್ನು ಮುದ್ರಿಸುವುದರಿಂದ ಏನೂ ಆಗುವ ಸಾಧ್ಯತೆಯಿಲ್ಲ.

ವರ್ತಮಾನದಲ್ಲಿಯಂತೂ ಮುದ್ರಣ ಮೊದಲಾದವುಗಳ ಪದ್ಧತಿಯಲ್ಲಿ ಅದೆಷ್ಟು ಸುಧಾರಣೆಯಾಗಿದೆ, ಅನುಕೂಲತೆಯಾಗಿದೆ. ಪ್ರತಿಗಳನ್ನು ಮಾಡಿಸುವುದಂತೂ ಝೀರಾಕ್ಸ ಮಿಶನ್ನುಗಳಿಂದ ನಿಮಿಷ ಮಾತ್ರದಲ್ಲಿ ನೂರಾರು ಪ್ರತಿಗಳು ದೊರಕುವಂತಾಗಿದೆ. ಭಗವತ್ಸರೂಪದ ಕುಂದಕುಂದಾಚಾರ್ಯರಾಗಲಿ ಅಥವಾ ನೇಮಿಚಂದ್ರಾಚಾರ್ಯರಾಗಲಿ ಈ ಯಾವ ಗ್ರಂಥಗಳ ರಚನೆ ಮಾಡಿದ್ದರು ಅವರು ಹೇಗೆ ಮಾಡಿದ್ದರೆಂಬುದನ್ನು ಲಕ್ಷ್ಯದೊಳಗೆ ತಂದುಕೊಳ್ಳಬೇಕು. (ಭ. ಕುಂದಕುಂದದೇವ, ಅಕ್ಷಯ ಚಕ್ಷು ಕೃತಿಗಳನ್ನು ಮತ್ತೊಮ್ಮೆ ಓದಿ ನೋಡಬೇಕು) ತಾಳೋಲೆಯ ಮೇಲೆ ಅಕ್ಷರಗಳನ್ನು ಕೋರೈಸುವ ವಿಧಿ, ತಾಳೆ ಗರಿಗಳನ್ನು ಸಂಗ್ರಹಿಸುವ ಶ್ರಾವಕರ ಶ್ರದ್ಧೆ, ಆಚಾರ್ಯರಿಂದ ಬರೆಯಲ್ಪಟ್ಟ ಗಾಥೆಗಳನ್ನು ಅದರಲ್ಲಿರುವ ವಿಷಯದ ಅನುಸಾರ ಜೋಡಣೆ ಮಾಡುವ ಅವರುಗಳ ವಿಷಯ ಪ್ರಜ್ಞೆ ಅವುಗಳ ಪ್ರತಿಲಿಪಿ ಮಾಡಿಸುವ, ಸಂರಕ್ಷಿಸುವ ಧರ್ಮಭಾವನೆ, ಸ್ವಯಂ ಓದಿ ಲಾಭಾನ್ವಿತರಾಗಿ ಇತರರಿಗೆ ಓದುವ ಸಲುವಾಗಿ ಒದಗಿಸುವ ಹೊಣೆಗಾರಿಕೆ - ಇದನ್ನೆಲ್ಲ ನಮ್ಮಂಥ ಗೃಹಸ್ಥರು ತಮ್ಮ ಸಾಂಸಾರಿಕ ಕಾರ್ಯಗಳಿಂದ ಅದೆಷ್ಟು ಸಮಯ ಖರ್ಚು ಮಾಡಿ ಈ ನಿಧಿಯು ಇಂದಿನವರೆಗೆ ಉಳಿಯುವಂತೆ ಮಾಡಿದ್ದಾರೆ, ಅವರೆಲ್ಲರ ಉಪಕಾರವು ಅದೆಷ್ಟು ಮಹಾನವಿದೆಯೆಂಬುದರ ಅರಿವು ಮೂಡಿ ಬಂದರೆ ಅವುಗಳನ್ನು ಓದಿ ತಿಳಿದುಕೊಂಡು ನಾವು ನಮ್ಮ ಜೀವನದ ಪದ್ಧತಿಯನ್ನು ಬದಲಿಸಿಕೊಳ್ಳಬಹುದಾಗಿದೆ-ಮೋಕ್ಷಮಾರ್ಗವನ್ನು ಗುರುತಿಸಬಹುದಾಗಿದೆ.

ನಾವು ಭಾಗ್ಯದಿಂದ ನಮ್ಮ ಕೈಗೆ ಬಂದ ಕೃತಿಯನ್ನು ನಮ್ಮ ಕಲ್ಯಾಣದ ಸಲುವಾಗಿ ಓದಬೇಕು ಶ್ರದ್ಧೆಯಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿರಬೇಕು. ನಮ್ಮ ಸಮಯದ ಸದುಪಯೋಗವು ನಾವು ಸ್ವಯಂ ಓದುವ, ಇತರರಿಗೆ ಓದಿಸುವ, ಅಭಿರುಚಿಯಿರುವಂಥವರಿಗೆ ಅನುಕೂಲತೆಗಳನ್ನು ಓದಗಿಸುವ ಕಾರ್ಯಗಳಲ್ಲಿ ಆಗಬೇಕು. ಅದರಿಂದ ನಮಗೆ ಶಾಂತಿ ದೊರಕಿದಾಗ ಇದನ್ನು ಎಲ್ಲರೂ ಕಾಲಾಂತರದಲ್ಲೂ ಎಂದರೆ ನಮ್ಮ ಪರಂಪರೆಯವರು - ಜೈನ ಬಾಂಧವರು ಓದಿ ಸರ್ವಜ್ಞ ಭಗವಂತರ, ತನ್ನ ಸರ್ವಜ್ಞ ಸ್ವಭಾವದ ಮಹಿಮೆಯಿಂದ ಪ್ರಮುದಿತರಾಗಲಿ ಎನ್ನುವ ಸಹಜ ಭಾವನೆಯು ಬರುವುದರಿಂದಲೇ ಇವುಗಳನ್ನು ಹೊಸ ಪದ್ಧತಿಯಿಂದ ಸುರಕ್ಷಿತಗೊಳಿಸುವ ಉದ್ಯಮವು ಇಂದು ನಡೆಯುತ್ತಿದೆ.

ಇಂಥ ಪ್ರಶ್ನೆಗಳು ಉಪಸ್ಥಿತವಾದ ಮೇಲೆ ಚರ್ಚೆಯ ಮೂಲ ವಿಷಯವು ಸ್ಥಗಿತವಾಗುತ್ತದೆ. ಭಾವನೆಯು ವಿಷಯದ ಹಳಿಯಿಂದ ಜಾರಿ ತನ್ನ ಲೋಕದಲ್ಲಿ ಹರಡುತ್ತ ಹೋಗುತ್ತದೆ. ಸಮುದ್ಘಾತವೆಂದರೇನು ? ಮೊದಲಾದ ಅನ್ಯ ಪ್ರಶ್ನೆಗಳೂ ಇವೆ. ಸಮುದ್ಘಾತದ ಪ್ರಕಾರಗಳು, ಯಾವ ಜೀವನು ಯಾವ ಸಮುದ್ಘಾತ ಮಾಡಿದಾಗ ಎಲ್ಲಿಯವರೆಗೆ ಅವನ ಆತ್ಮ ಪ್ರದೇಶಗಳು ಹರಡುತ್ತವೆ ಎಂಬಿತ್ಯಾದಿಗಳ ಚರ್ಚೆಯನ್ನು ಮುಂದೆ ಮಾಡಲಾಗುವುದು.

ಪ್ರಶ್ನೆ :- ಕುಭೋಗಭೂಮಿಜರಾದ ಕುಮನುಷ್ಯರು ಗರ್ಭಜರಿರುತ್ತಾರೇನು ?

ಉತ್ತರ :- ಅಹುದು, ಅನ್ಯ ಭೋಗಭೂಮಿ-ಕರ್ಮಭೂಮಿಯ ಮನುಷ್ಯರ ಹಾಗೆಯೇ ಅವರೂ ಗರ್ಭಜರಿರುತ್ತಾರೆ.

ಪ್ರಶ್ನೆ :- ಕರ್ಮಗಳು ಹೇಗೆ ಉದುರಿ ಹೋಗುತ್ತವೆ ?

ಉತ್ತರ :- ಇದು ಕರ್ಮಕಾಂಡದ ವಿಷಯವಿದೆ. ಆ ವಿಷಯದ ಶಿಬಿರಗಳಲ್ಲಿ ಇದರ ಚರ್ಚೆಯನ್ನು ವಿಸ್ತಾರವಾಗಿ ಮಾಡಲಾಗಿದೆ. ಇಲ್ಲಿ ಅದನ್ನು ತಿಳಿಸಿಕೊಡುವುದು ಸಾಧ್ಯವಾಗುವುದಿಲ್ಲ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹದಿನಾರನೆಯ ತೀರ್ಥಂಕರರಾದ
ಶ್ರೀ ನೇಮಿಪ್ರಭ ಭಗವಂತರಿಗೆ ಜಯವಾಗಲಿ.

★★★★★

ಯಾವ ಗೃಹಸ್ಥರುಗಳ ಹೃದಯವು ಜಿನಾಗಮದ ಅಭ್ಯಾಸ ಮಾಡುವುದರ ಕಾರಣ ದಯೆಯಿಂದ ಓತಪ್ರೋತವಾಗಿ ಹೋಗಿದೆ, ಅದೇ ಗೃಹಸ್ಥರು ವಾಸ್ತವದಲ್ಲಿ ಧರ್ಮಾತ್ಮರಿದ್ದಾರೆ. ಆದರೆ ಇದರ ವಿರುದ್ಧವಾಗಿ ಯಾರ ಚಿತ್ತವು ದಯೆಯಿಂದ ಆರ್ದ್ರವಾಗಿ ಹೋಗಿಲ್ಲ ಅವರು ಎಂದೂ ಧರ್ಮಾತ್ಮರಾಗುವ ಸಾಧ್ಯತೆಯಿಲ್ಲ. ಏಕೆಂದರೆ ಧರ್ಮದ ಮೂಲವಂತೂ ದಯೆಯಿದೆ. ಪ್ರಾಣಿದಯೆಯು ಅದು ಧರ್ಮರೂಪ ವೃಕ್ಷದ ಮೂಲವಿದೆ, ವ್ರತಗಳಲ್ಲಿ ಮುಖ್ಯವಿದೆ, ಸಂಪತ್ತಿಗಳ ಸ್ಥಾನವಿದೆ ಮತ್ತು ಗುಣಗಳ ಭಂಡಾರವಿದೆ. ಯಾವ ಪ್ರಕಾರ ಪುಷ್ಪಗಳ ಮಾಲೆಯು ದಾರದ ಆಶ್ರಯದಿಂದ ಇರುತ್ತದೆ, ಅದೇ ಪ್ರಕಾರ ಮನುಷ್ಯರಲ್ಲಿ ಸಮಸ್ತ ಗುಣಗಳು ಒಂದು ಜೀವದಯೆಯ ಆಶ್ರಯದಿಂದಲೇ ಇರುತ್ತವೆ.

೧೭. ಜ್ಯೋತಿಷ್ಕ ವಿಮಾನಗಳು

ಶ್ರೀಮದ್ ನೇಮಿಚಂದ್ರ ಆಚಾರ್ಯ ವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಇಲ್ಲಿ ಮೂರು ಲೋಕಗಳ ಸ್ವರೂಪವನ್ನು ನೋಡುವ ಪ್ರಯತ್ನ ಮಾಡುತ್ತಿದ್ದೇವೆ. ಅಧೋಲೋಕದ ವರ್ಣನೆಯನ್ನು ನೋಡುವ ಸಮಯದಲ್ಲಿ ನಾವು ಭವನವಾಸೀ, ವ್ಯಂತರ ದೇವಗಳ ಚರ್ಚೆ ಮಾಡಿದ್ದೆವು ಹಾಗೂ ಊರ್ಧ್ವಲೋಕ ಸಂಬಂಧದ ವರ್ಣನೆಯನ್ನು ನೋಡುವಾಗ ಕಲ್ಪವಾಸಿಗಳು ಹಾಗೂ ಕಲ್ಪಾತೀತರೆಂಬ ವಿಮಾನವಾಸಿಗಳ ಚರ್ಚೆಯನ್ನು ಕೂಡ ಮಾಡಿಯಾಗಿದೆ.

ದೇವಗತಿಯ ದೇವಗಳಲ್ಲಿನ ಜ್ಯೋತಿಷಿ ದೇವಗಳ ಚರ್ಚೆಯನ್ನು ಇದುವರೆಗೆ ಮಾಡಿಲ್ಲ ಏಕೆಂದರೆ ಈ ಜ್ಯೋತಿಷಿ ದೇವಗಳ ವಿಮಾನಗಳು ಮಧ್ಯಲೋಕದಲ್ಲಿ ಕಂಡು ಬರುತ್ತವೆ. ಮಧ್ಯಲೋಕದ ಸ್ವರೂಪವನ್ನು ತಿಳಿದುಕೊಂಡಲ್ಲದೆ, ಅಲ್ಲಿಯ ದ್ವೀಪ-ಸಮುದ್ರಗಳ ಪ್ರಮಾಣ ಹಾಗೂ ರಚನೆಯನ್ನು ತಿಳಿದುಕೊಂಡಲ್ಲದೆ ಜ್ಯೋತಿಷಿಗಳ ವಿಮಾನಗಳನ್ನು ತಿಳಿಯುವುದು ಕಠಿಣವಿದೆ, ಆದುದರಿಂದ ಈಗ ನಾವು ಅವುಗಳ ಚರ್ಚೆ ಮಾಡೋಣ.

ಮಧ್ಯಲೋಕದ ಅಸಂಖ್ಯಾತ ದ್ವೀಪ-ಸಮುದ್ರಗಳ ಮೇಲೆ ಭೂಮಿತಲದಿಂದ ಅರ್ಥಾತ್ ಮೊದಲನೇ ಪೃಥ್ವಿಯ ಮೇಲೆ ನಾವು ಎಲ್ಲಿ ವಾಸಿಸುತ್ತಿದ್ದೇವೆ ಅಲ್ಲಿಂದ ಏಳುನೂರಾ ತೊಂಭತ್ತು ಯೋಜನ ಮೇಲೆ ಹೋದಮೇಲೆ ಅಲ್ಲಿಂದ ಹಿಡಿದು ಒಂಭೈನೂರು ಯೋಜನದವರೆಗೆ ಎಲ್ಲ ಸೂರ್ಯ, ಚಂದ್ರ, ತಾರೆಯರು ಕಂಡು ಬರುತ್ತಾರೆ. ಈ ಒಂದು ನೂರಾ ಹತ್ತು ಯೋಜನದ ಪಟ್ಟಿಯಲ್ಲಿಯೇ ಅವರೆಲ್ಲರೂ ಕಂಡು ಬರುತ್ತಾರೆ. ನಾವು ಇಲ್ಲಿ ರಾತ್ರಿ ಕುಳಿತಲ್ಲಿಯೇ ನಕ್ಷತ್ರಗಳ ಎಣಿಕೆ ಮಾಡುತ್ತೇವೆ ಅಲ್ಲವೇನು ? ರಾತ್ರಿಯ ಮಾತು ಏತಕ್ಕಾಗಿ ಬೇಕಾಗಿದೆ. ನಾವು ಈಗ ಹಗಲಿನಲ್ಲಿಯೇ ನಕ್ಷತ್ರಗಳ ಎಣಿಕೆ ಮಾಡೋಣ. ಆದರೆ ಅದರ ಸಲುವಾಗಿ ಆಗಮ ಚಕ್ಷುವಿನ ಆವಶ್ಯಕತೆಯಿದೆ. ಪ್ರವಚನಸಾರದಲ್ಲಿ ಬರುತ್ತದೆಯಲ್ಲವೇನು - ಎಲ್ಲ ಜೀವಗಳು ಇಂದ್ರಿಯ ಚಕ್ಷುವುಳ್ಳವರಿದ್ದಾರೆ, ದೇವಗಳು ಅವಧಿಚಕ್ಷುವುಳ್ಳವರಿದ್ದಾರೆ, ಮುನಿರಾಜರು ಆಗಮ ಚಕ್ಷುವುಳ್ಳವರಿದ್ದಾರೆ ಮತ್ತು ಸಿದ್ಧರು (ಸರ್ವಜ್ಞ ಭಗವಂತರು) ಸರ್ವತಃ ಚಕ್ಷುವುಳ್ಳವರಿದ್ದಾರೆ.

ಸರ್ವತಃ ಚಕ್ಷುವುಳ್ಳವರು-ಸರ್ವಜ್ಞ ಭಗವಂತರು - ತೀರ್ಥಂಕರರು ಎಲ್ಲವನ್ನು ತಿಳಿದುಕೊಂಡು ಯಾವುದನ್ನು ಹೇಳಿದ್ದಾರೆ ಅದರ ಅನುಸಾರ ಮುನಿರಾಜರು ಆಗಮಗಳ ರಚನೆ ಮಾಡಿದ್ದಾರೆ. ಆ ಆಗಮರೂಪದ ನೇತ್ರಗಳ ಮೂಲಕ ನೋಡಿ ನಾವು ಇಲ್ಲಿ ಕುಳಿತಲ್ಲಿಯೇ ತಾರೆಗಳ ಎಣಿಕೆ ಮಾಡುವುದಿದೆ. ಚಂದ್ರ, ಸೂರ್ಯ, ತಾರೆ, ನಕ್ಷತ್ರ ಎಲ್ಲರ ಒಟ್ಟು ಸಂಖ್ಯೆಯನ್ನು ನಾವು ತಿಳಿಯೋಣ. ಇವುಗಳನ್ನು ಜ್ಯೋತಿಷ್ಕಬಿಂಬವೆಂದು ಹೇಳುತ್ತಾರೆ.

ಮಧ್ಯಲೋಕದಲ್ಲಿ ೧ ರಾಜೂ ಉದ್ದ-ಅಗಲವಿರುವ ತ್ರಸನಾಳಿಯ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಕೊನೆಯಲ್ಲಿ ಯಾವ ಘನೋದಧಿವಾತವಲಯವಿದೆ ಅಲ್ಲಿಯವರೆಗೆ ಅರ್ಥಾತ್ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳು ಎಲ್ಲಿಯವರೆಗೆ ಇವೆ ಅಲ್ಲಿಯವರೆಗೆ ಈ ಎಲ್ಲ ಜ್ಯೋತಿಷ್ಕ ವಿಮಾನಗಳು ಕಂಡು ಬರುತ್ತವೆ. ಮಧ್ಯದಲ್ಲಿ ಮೇರು ಪರ್ವತದಿಂದ ಹನ್ನೊಂದು ನೂರಾ ಇಪ್ಪತ್ತೊಂದು ಯೋಜನದೂರದ ಮೇಲಿಂದ ಇವರುಗಳ ಭ್ರಮಣವಾಗುತ್ತದೆ. ಎರಡೂವರೆ ದ್ವೀಪದವರೆಗೆ ಅರ್ಥಾತ್ ಮನುಷ್ಯಲೋಕದವರೆಗಿನ ಚಂದ್ರ, ಸೂರ್ಯ,

ತಾರೆಯರು ಸುತ್ತುತ್ತಾರೆ-ಮೇರುವಿನ ಪ್ರದಕ್ಷಿಣೆ ಹಾಕುತ್ತಾರೆ. ಅವರುಗಳಲ್ಲಿನ ಬಹಳಷ್ಟು ತಾರೆಯರು ಸ್ಥಿರರೂ ಇದ್ದಾರೆ, ಆದರೆ ಎರಡೂವರೆ ದ್ವೀಪದ ಹೊರಗಿನ ದ್ವೀಪ ಸಮುದ್ರಗಳ ಮೇಲೆ ಯಾವ ಜ್ಯೋತಿಷ್ಕ ವಿಮಾನಗಳಿವೆ-ಯಾವ ಸೂರ್ಯ, ಚಂದ್ರ, ತಾರೆಯರಿದ್ದಾರೆ ಅವರೆಲ್ಲರೂ ಸ್ಥಿರರಿದ್ದಾರೆ - ಅವರುಗಳ ಭ್ರಮಣವಾಗುವುದಿಲ್ಲ.

ನಾವು ಇಲ್ಲಿ ಯಾವ ಸೂರ್ಯೋದಯ, ಸೂರ್ಯಾಸ್ತವಾಗುವುದನ್ನು ನೋಡುತ್ತೇವೆ, ಚಂದ್ರನು ಕಾಣಿಸುತ್ತಾನೆ, ನಕ್ಷತ್ರ ತಾರೆಗಳೂ ಸುತ್ತುವುದನ್ನು ಕಾಣುತ್ತೇವೆ ಅದಂತೂ ಕೇವಲ ಮನುಷ್ಯ ಲೋಕದ ಮೇಲೆಯೇ ಕಂಡು ಬರುತ್ತದೆ. ಅದರ ಹೊರಗೆ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳ ಮೇಲೆ ಯಾವ ಚಂದ್ರ, ಸೂರ್ಯ, ತಾರೆಯರಿದ್ದಾರೆ ಅವರು ಎಲ್ಲಿರುತ್ತಾರೆ ಅಲ್ಲೇ ಸ್ಥಿರವಿರುತ್ತಾರೆ, ಅವರು ಸುತ್ತುವುದಿಲ್ಲ. ಎಲ್ಲಿ ಸೂರ್ಯರು ಸ್ಥಿರರಿದ್ದಾರೆ ಅಲ್ಲಿ ಯಾವಾಗಲೂ ಪ್ರಕಾಶವೇ ಇರುತ್ತದೆ ಮತ್ತು ಎಲ್ಲಿ ಕೇವಲ ಅಂಧಕಾರವಿದೆ ಅಲ್ಲಿಯಂತೂ ಅಂಧಕಾರವೇ ಇದೆ.

ಹಗಲು-ರಾತ್ರಿಗಳ ಈ ಪರಿವರ್ತನೆಯಂತೂ ಕೇವಲ ಮನುಷ್ಯಲೋಕದಲ್ಲಿಯೇ ಆಗುತ್ತದೆ. ನಾವು ಹಗಲು, ರಾತ್ರಿ, ತಿಂಗಳು, ವರ್ಷ ಮೊದಲಾದವುಗಳ ಎಣಿಕೆ ಮಾಡುತ್ತೇವೆ. ಇಲ್ಲಿಯಂತೂ ಮನುಷ್ಯರ-ನಮ್ಮ ಅಪೇಕ್ಷೆಯಿಂದ ಅಳತೆ ಮಾಡಲಾಗುತ್ತದೆ. ವೈಮಾನಿಕ ದೇವಗಳ ಚರ್ಚೆಯ ಸಮಯದಲ್ಲಿ ನಾವು ಅಲ್ಲಿ ಎಷ್ಟು ಸಾಗರದ ಆಯುವಿರುತ್ತದೆ ಅಷ್ಟು ಸಾವಿರ ವರ್ಷಗಳ ನಂತರ ಆಹಾರದ ಇಚ್ಛೆಯಾಗುತ್ತದೆ ಮತ್ತು ಅಷ್ಟು ಪಕ್ಷಗಳ ನಂತರ ಶ್ವಾಸ(ಉಸಿರಾಟ) ತಗೆದುಕೊಳ್ಳುತ್ತಾರೆಂಬುದನ್ನು ನೋಡಿದ್ದೆವು. ಈ ಗಣನೆಯಂತೂ ನಮ್ಮ ಅಪೇಕ್ಷೆಯಿಂದ ಇದೆ ಏಕೆಂದರೆ ನಮಗೆ ನಮ್ಮ ಭಾಷೆಯಲ್ಲಿ ತಿಳಿಯುವುದಿದೆ. ಅನಾರ್ಯರು-ಮ್ಲೇಚ್ಛರು ಮ್ಲೇಚ್ಛ ಭಾಷೆಯಲ್ಲಿ ತಿಳಿಯುತ್ತಾರೆ ಹಾಗೆ ನಾವು ಹಗಲು-ರಾತ್ರಿಗಳ ನಮ್ಮ ಭಾಷೆಯಲ್ಲಿ ಕಾಲವನ್ನು ತಿಳಿಯುತ್ತೇವೆ. ಚಂದ್ರ ಮತ್ತು ಸೂರ್ಯರು ತಮ್ಮ-ತಮ್ಮ ವಿಶಿಷ್ಟ ಅಂಗಳದಲ್ಲಿ ಸುತ್ತುತ್ತಾರೆ-ಭ್ರಮಣ ಮಾಡುತ್ತಾರೆ ಅದರ ಕಾರಣದಿಂದ ಇಲ್ಲಿ ಹಗಲು-ರಾತ್ರಿಗಳ ವಿಭಾಜನೆಯಾಗುತ್ತದೆ.

'ತೀರ್ಥಂಕರ ಭಗವಂತರು ನೂರು ಇಂದ್ರರ ಉಪಸ್ಥಿತಿಯಲ್ಲಿ ಈ ಮಾತನ್ನು ಹೇಳಿದ್ದಾರೆ' ಎಂಬುದನ್ನು ನಾವು ಆಲಿಸಿದ್ದೇವೆ. ಆ ನೂರು ಇಂದ್ರರಲ್ಲಿ ಜ್ಯೋತಿಷ್ಕ ದೇವಗಳ ಇಬ್ಬರು ಇಂದ್ರರಿರುತ್ತಾರೆ - ಒಬ್ಬ ಚಂದ್ರನು (ಇಂದ್ರ) ಮತ್ತು ಒಬ್ಬ ಸೂರ್ಯನು (ಪ್ರತೀಂದ್ರ) ಇರುತ್ತಾರೆ.

ಪ್ರಶ್ನೆ :- ಚಂದ್ರ ಮತ್ತು ಸೂರ್ಯರು ತಮ್ಮ ಸ್ಥಾನವನ್ನು ಬಿಟ್ಟು ಸಮವಸರಣದಲ್ಲಿ ಬರುತ್ತಿದ್ದರೆ ಆಗ ಇಲ್ಲಿಯ ಜನರುಗಳ ಗತಿಯೇನಾಗುತ್ತಿರಬಹುದು ?

ಉತ್ತರ :- ಯಾವ ಚಂದ್ರ ಮತ್ತು ಸೂರ್ಯರನ್ನು ನಾವು ನೋಡುತ್ತೇವೆ, ಅವಂತೂ ಅವರುಗಳ ವಿಮಾನವಿವೆ-ಜ್ಯೋತಿಷಿ ದೇವಗಳು ಇರುವ ಸ್ಥಾನಗಳಿವೆ. ಇಲ್ಲಿ ಚಂದ್ರನೂ ಬರುವುದಿಲ್ಲ ಮತ್ತು ಸೂರ್ಯನೂ ಬರುವುದಿಲ್ಲ ಹಾಗೂ ಚಂದ್ರ ಇಂದ್ರ ಮತ್ತು ಸೂರ್ಯ ಇಂದ್ರರೂ ಇಲ್ಲಿ ಬರುವುದಿಲ್ಲ. ಇವರುಗಳು ವಾಸ ಮಾಡುವ ಸ್ಥಾನಕ್ಕೆ ವಿಮಾನವೆಂದು ಹೇಳುತ್ತಾರೆ. ಇವು ಅರ್ಧಗೋಲಾಕಾರವಿರುತ್ತವೆ. ಹೇಗೆ ನಿಂಬೆ ಹಣ್ಣನ್ನು ಅರ್ಧ ಮಾಡಿ ಹೆಚ್ಚಿದ ಭಾಗವನ್ನು ಮೇಲ್ಮುಖವಾಗಿರಿಸಿರುವಂಥ ಆಕಾರದವಿರುತ್ತವೆ. ಮೇಲಿನ

ಸಮತಟ್ಟಾದ ಭಾಗದ ಮೇಲೆ ಅವರುಗಳ ಗೃಹಗಳು ಜಿನಗೃಹಗಳು ಇರುತ್ತವೆ. ಅವರು ವಾಸಮಾಡುವ ಸ್ಥಾನಗಳಿಗೆ ಮಂದಿರ- ಮಹಲುಗಳೆಂದು ಕೂಡ ಹೇಳುತ್ತಾರೆ.

ಇವೆಲ್ಲ ವಿಮಾನಗಳು ಪೃಥ್ವಿಕಾಯಿಕ ಶರೀರಗಳಿಂದ ನಿರ್ಮಿಸಲ್ಪಟ್ಟಿವೆ. ಸೂರ್ಯವಿಮಾನದ ಪೃಥ್ವಿಕಾಯಿಕಗಳಿಗೆ ಆತಪ ನಾಮಕರ್ಮದ ಉದಯವಿರುತ್ತದೆ, ಅವುಗಳ ಪ್ರಭೆಯು ಉಷ್ಣತೆಯಿಂದ ಯುಕ್ತವಿರುತ್ತದೆ. ಅಲ್ಲಿಯ ದೇವಗಳ ಶರೀರವಂತೂ ವೈಕ್ರಿಯಿಕವಿರುತ್ತದೆ. ಅವರೆಲ್ಲ ದೇವಗಳು ವಿಕ್ರಿಯೆ ಮಾಡಿ ಒಂದು ಅಥವಾ ಅನೇಕ ಶರೀರ ಮಾಡಿಕೊಳ್ಳುತ್ತಾರೆ. ಆ ವೈಕ್ರಿಯಿಕ ಶರೀರದ ಮೂಲಕ ಅವರು ಸಮವಸರಣ ಹಾಗೂ ಅನ್ಯಸ್ಥಾನಗಳಿಗೆ ಹೋಗುತ್ತಾರೆ. ಅಂತೆಯೇ ಅಷ್ಟಾಹ್ನಿಕದಲ್ಲಿ ನಂದೀಶ್ವರ ದ್ವೀಪದಲ್ಲಿ, ವಿವಿಧ ಕ್ರೀಡೆ ಮಾಡುವ ಸಲುವಾಗಿ ಅನ್ಯದ್ವೀಪ ಮತ್ತು ಸಮುದ್ರಗಳಲ್ಲಿ ಹೋಗುತ್ತಾರೆ. ತಮ್ಮ ಮೂಲ ಶರೀರ ಸಹಿತವಾಗಿ ಆ ದೇವಗಳು ಅಥವಾ ಇಂದ್ರರುಗಳಂತೂ ತಮ್ಮ ಸ್ವರ್ಗಗಳಲ್ಲಿಯೇ ಇರುತ್ತಾರೆ. ವಿಕ್ರಿಯೆಯ ಮೂಲಕ ಅನ್ಯ ಶರೀರಗಳನ್ನು ಮಾಡಿಕೊಳ್ಳುತ್ತಾರೆ ಅದನ್ನು ವೈಕ್ರಿಯಿಕ ಸಮುದ್ಘಾತವೆಂದು ಹೇಳಿದ್ದಾರೆ. ಅವರ ಆತ್ಮಪ್ರದೇಶಗಳು ಎರಡೂ ಕಡೆಗೆ ಹರಡಿಕೊಂಡಿರುತ್ತವೆ. ಅವರ ಆ ಆತ್ಮಪ್ರದೇಶಗಳ ಸಂಪರ್ಕವು ತುಂಡರಿಸುವುದಿಲ್ಲ. ಆತ್ಮನಂತೂ ಒಂದು ಅಖಂಡ ದ್ರವ್ಯವಿದ್ದಾನಲ್ಲವೇನು, ಅವನ ವಿಭಾಗವಾಗುವುದಿಲ್ಲ. ಕೇವಲ ಶರೀರದ ನಿರ್ಮಾಣ ಮಾಡಿ ಕಳಿಸುವುದಿಲ್ಲ, ಅವರು ಸ್ವಯಂ ಅದರಲ್ಲಿ ಇರುತ್ತಾರೆ. ಇಲ್ಲದಿದ್ದರೆ ಸಮವಸರಣದಲ್ಲಿ ಕೇವಲ ಜಡ ಶರೀರವೇ ಬರುತ್ತದೆಯೆಂದು ತಿಳಿಯಬಾರದು. ಆ ಜಡವೇನು ಆಲಿಸುತ್ತದೆ ಮತ್ತು ತಿಳಿಯುತ್ತದೆ ?

ದೇವಗಳಂತೂ ವಿಕ್ರಿಯೆಗಳನ್ನೂ ಮಾಡುತ್ತಾರೆ, ವಿಹಾರ ಮಾಡುತ್ತ ಹೋಗಲೂ ಬಹುದಾಗಿದೆ. ನಾವು ಆಹಾರಕ ಶರೀರದ ಹೆಸರನ್ನು ಆಲಿಸಿದ್ದೇವೆ. ಅಲ್ಲಿಯೂ ಮುನಿರಾಜರದಂತೂ ಔದಾರಿಕ ಶರೀರವಿದೆ. ಯಾವಾಗ ಅವರು ಆಹಾರಕ ಶರೀರ ಮಾಡಿಕೊಂಡು ಅದರ ಜತೆಯಲ್ಲಿ ಸಮವಸರಣಾದಿಗಳಿಗೆ ಹೋಗುತ್ತಾರೆ ಆಗ ಎರಡೂ ಶರೀರಗಳ ಮಧ್ಯದಲ್ಲಿ ಆತ್ಮಪ್ರದೇಶಗಳು ಹರಡಿಕೊಂಡಿರುತ್ತವೆ. ಈಗೆಲ್ಲ ನಾವು ಲೇಸರಕಿರಣ (ಒಂದೇ ದಿಕ್ಕಿನಲ್ಲಿ ತೀಕ್ಷ್ಣವಾದ ಪ್ರಕಾಶವನ್ನು ಉತ್ಪನ್ನಮಾಡುವ ಸಂಸಕ್ತ ದೂರವನ್ನು ಉತ್ಪನ್ನ ಮಾಡುವ ಸಾಧನ)ಗಳನ್ನು ನೋಡಿದ್ದೇವೆ. ಆ ಲೇಸರ ಕಿರಣಗಳು ಹೇಗೆ ದೂರದವರೆಗೆ ಹರಡುತ್ತವೆ ಹಾಗೆಂದು ಸ್ವಲ್ಪ ಕಲ್ಪನೆ ಮಾಡಬಹುದಾಗಿದೆ.

ಇವೆಲ್ಲ ಜೋತಿಷ್ಕ ವಿಮಾನಗಳ ಮೇಲೆ ಜ್ಯೋತಿಷಿ ದೇವಗಳ ನಗರಗಳಿವೆ ಅವು ಜಿನಮಂದಿರಗಳಿಂದ ಯುಕ್ತವಿವೆ. ನಾವು ಯಾವಾಗ ಅಕೃತ್ರಿಮ ಜಿನ ಚೈತ್ಯಾಲಯಗಳ ಪೂಜೆ ಮಾಡುತ್ತೇವೆ ಆಗ ಅಧೋಲೋಕದ ಏಳು ಕೋಟಿ ಎಪ್ಪತ್ತೆರಡು ಲಕ್ಷ ಚೈತ್ಯಾಲಯಗಳಿಗೆ, ಊರ್ಧ್ವಲೋಕದ-ವೈಮಾನಿಕರ ಎಂಭತ್ನಾಲ್ಕು ಲಕ್ಷ ತೊಂಭತ್ತೇಳು ಸಾವಿರದಾ ಇಪ್ಪತ್ಮೂರು ಚೈತ್ಯಾಲಯಗಳಿಗೆ ಮತ್ತು ಮಧ್ಯಲೋಕದ ನಾಲ್ಕುನೂರಾ ಐವತ್ತೆಂಟು ಚೈತ್ಯಾಲಯಗಳಿಗೆ ಅರ್ಘ್ಯ ಸಮರ್ಪಣೆ ಮಾಡುತ್ತೇವೆ. ಹಾಗಾದರೆ ಜ್ಯೋತಿಷಿಗಳು ಮತ್ತು ವ್ಯಂತರರುಗಳು ಇರುವಲ್ಲಿ ಯಾವ ಜಿನಮಂದಿರಗಳು ಇರುವುದಿಲ್ಲವೇನು ? ಇರುತ್ತವೆ ; ಅವಂತೂ ಅಸಂಖ್ಯಾತವಿವೆ, ನಮ್ಮ ಎಣಿಕೆಯಿಂದ ಹೊರಗೆ-ಮೀರಿದವಿವೆ. ಪ್ರತಿಯೊಂದು ಜ್ಯೋತಿಷ್ಕಬಿಂಬದಲ್ಲಿ ಜಿನಮಂದಿರವಿದೆ. ಭರತ ಚಕ್ರವರ್ತಿಯು ಸೂರ್ಯಬಿಂಬದಲ್ಲಿರುವ ಜಿನಬಿಂಬಗಳಿಗೆ ನಮಸ್ಕಾರ ಮಾಡುತ್ತಿದ್ದನೆಂಬುದನ್ನು ನಾವು-ತಾವು ಪ್ರಥಮಾನುಯೋಗದಲ್ಲಿ ಓದಿಲ್ಲವೇನು !

ಈ ಜ್ಯೋತಿಷ್ಕ ವಿಮಾನಗಳಲ್ಲಿ ಪ್ರತಿಯೊಂದರಲ್ಲಿ ಸಂಖ್ಯಾತ ಜ್ಯೋತಿಷಿ ದೇವಗಳಿರುತ್ತಾರೆ. ಆ

ಜ್ಯೋತಿಷಿಗಳು ದೇವಗಳಿದ್ದಾರೆ - ಭವನತ್ರಿಕವೆಂದು ಹೇಳುವುದರಲ್ಲಿ ಬರುವಂಥ ಒಂದು ಪ್ರಕಾರದ ದೇವಗಳಿದ್ದಾರೆ. ಆದರೆ ನಾವು ಜ್ಯೋತಿಷ ಹೇಳುವಂಥವರನ್ನು - ರಾಶಿ ಫಲವನ್ನು ತಿಳಿಸಿಕೊಡುವಂಥವರನ್ನು ಜ್ಯೋತಿಷಿಗಳೆಂದು ಮಾಡಿಬಿಟ್ಟಿದ್ದೇವೆ. ಅಂಥ ರಾಶಿ ಫಲ ಜ್ಯೋತಿಷವನ್ನು ತಿಳಿದುಕೊಂಡು ಏನು ಮಾಡುವುದಿದೆ ? ಯಾವುದು ಆಗುವುದಿದೆಯೋ ಅದಂತೂ ಎಂದೂ ಬದಲಾಗುವ ಸಾಧ್ಯತೆಯಿಲ್ಲ ಮತ್ತು ಯಾವುದು ಬದಲಾಗುವಂಥದ್ದಿದೆ ಅದು ಆಗುವಂಥದು ಎಂದರೆ ಉಳಿಯುವಂಥದ್ದಿಲ್ಲ. ಆದರೂ ನಾವು ಅದರ ಹಿಂದೆ ಧಾವಿಸುತ್ತ ನಮ್ಮ ವರ್ತಮಾನದ ಅಮೌಲ್ಯ ಸಮಯವನ್ನು ನಿರರ್ಥಕಗೊಳಿಸುತ್ತಿದ್ದೇವೆ- ಹಾಳು ಮಾಡುತ್ತಿದ್ದೇವೆ.

ಆ ಗ್ರಹ, ನಕ್ಷತ್ರಗಳು ನಮಗೆ ಏನನ್ನೂ ಕೊಡುವ ಸಾಧ್ಯತೆಯಿಲ್ಲ. ಅವುಗಳ ಕಾರಣದಿಂದ ನಮ್ಮ ಸಂಯೋಗಗಳು ಬದಲಾಗುವುದಿಲ್ಲ ಮತ್ತು ಸಂಯೋಗಗಳು ಯಾವ ರೀತಿಯಿಂದ ಬೇಕಾದರೂ ಬದಲಾಗುತ್ತಿದ್ದರೆ ಆಗಲಿ, ಅವುಗಳಿಂದ ನಮಗೆ ಯಾವ ಲಾಭ-ಹಾನಿಯಾಗುವುದಿದೆ ? ಸಂಯೋಗದ ಕಾರಣದಿಂದ ನಮ್ಮ ಯಾವ ಕಾರ್ಯವಾದರೂ ಕೆಟ್ಟು ಹೋಗುವ ಅಥವಾ ಸುಧಾರಣೆಯಾಗುವ ಸಾಧ್ಯತೆಯಿಲ್ಲ. ನಮಗಂತೂ ಸಂಯೋಗಗಳಿಂದ ನಮ್ಮ ಭಿನ್ನತೆಯನ್ನು ತಿಳಿಯುವುದಿದೆ. ಹಾಗಿದ್ದ ಮೇಲೆ ನಾವು ಮೊದಲು ಸಂಯೋಗಗಳ ಸುಧಾರಣೆ ಮಾಡಿ ಅದರ ನಂತರ ಅವುಗಳಿಂದ ಭಿನ್ನತೆಯನ್ನು ತಿಳಿಯುವುದಿದೆಯೇನು ? ಶರೀರದಿಂದ ನಾನು ಭಿನ್ನನಿದ್ದೇನೆಂಬುದನ್ನು ತಿಳಿಯುವ ಸಲುವಾಗಿ ಮೊದಲು ಪಾರ್ಲರಕ್ಕೆ ಹೋಗಿ ಶರೀರವನ್ನು ಸರಿಪಡಿಸುವ ಅಥವಾ ಸಿಂಗರಿಸುವ ಅವಶ್ಯಕತೆಯಿದೆಯೇನು ?

ಇವೆಲ್ಲ ಕಲ್ಪನೆಗಳು ಮಿಥ್ಯೆಯಿವೆ. ಮಿಥ್ಯಾತ್ವವು ಕೂಡ ಹೊಸ-ಹೊಸ ರೂಪುಧಾರಣ ಮಾಡಿ ಬರುತ್ತಲಿದೆ. ವಾಸ್ತುಶಾಸ್ತ್ರದ ಹೆಸರಿನ ಮೇಲೆ ಮನೆಯ ರಚನೆಯನ್ನು ಈ ಪ್ರಕಾರವಾಗಿ ಬದಲಿಸಿದರೆ ಅಥವಾ ಇಂಥ ರೀತಿಯಲ್ಲಿ ನಿರ್ಮಿಸಿದರೆ ನಾನು ಸುಖಿಯಾಗುವೆನು, ನನಗೆ ಧನದ ಪ್ರಾಪ್ತಿಯಾಗುವುದು ಅಥವಾ ನನ್ನ ಮೇಲೆ ಬಂದಿರುವ ಸಂಕಟವು ದೂರವಾಗಿ ಬಿಡುತ್ತದೆ - ಎಂಬಿತ್ಯಾದಿ ಮಾತುಗಳು ಭ್ರಾಂತಿಯಲ್ಲದೆ ಬೇರೇನಿದೆ ?

ಪ್ರತಿಯೊಂದು ವಸ್ತುವು ಸ್ವಯಂ ಪರಿಣಮನಶೀಲವಿದೆ. ಪುನಃ ಪುನಃ ಶಾಸ್ತ್ರಗಳಲ್ಲಿ ನಾವು ಓದುತ್ತೇವೆ ಅಲ್ಲವೇನು ! ನಿಮಿತ್ತಕಾರಣವು ಪರದ್ರವ್ಯದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಪ್ರತಿಯೊಂದು ದ್ರವ್ಯವು ಸ್ವಯಂ ಸಿದ್ಧವಿದೆ - ಸ್ವಯಂಭೂವಿದೆ ಮತ್ತು ಅದರ ಪರಿಣಮನವು ಸ್ವಯಂ ಅದರ ಆಧೀನವಿದೆ - ಸ್ವಯಂ ತನ್ನಿಂದ ಆಗುತ್ತದೆ ಹಾಗೂ ಆಗಲು ಯೋಗ್ಯವಾದುದೇ ಆಗುತ್ತದೆ. ಅದರದೇ ಆದ ಸ್ವ ಸಮಯದಲ್ಲಿ ಆಗುತ್ತದೆ. ಪ್ರತಿಯೊಂದು ದ್ರವ್ಯದ ಅನಾದಿಯಿಂದ ಹಿಡಿದು ಅನಂತ ಕಾಲದವರೆಗಿನ ಪ್ರತಿಯೊಂದು ಪರ್ಯಾಯವು ನಿಶ್ಚಿತವಿದೆ. ಒಂದು ವೇಳೆ ಮಹಾಭಾಗ್ಯದಿಂದ ಈ ನಿಶ್ಚಿತತೆಯ ನಿರ್ಣಯವಾಗಿ ಹೋದರೆ ಈ ಜೀವನು ಅವುಗಳ ಕುರಿತಾಗಿ ನಿಶ್ಚಿಂತನಾಗಿ ಎಂದರೆ ಸ್ವ ಅಥವಾ ಪರದ ಪರ್ಯಾಯಗಳ ಚಿಂತೆಯನ್ನು ಬಿಟ್ಟುಕೊಟ್ಟು ತನ್ನ ಸ್ವಸ್ವಭಾವವನ್ನು ತಿಳಿಯುತ್ತ ಉಳಿದನೆಂದರೆ ಇವನಿಗೆ ನಿಜವಾದ ಸುಖದ - ಅನಂತ ಸುಖದ ಪ್ರಾಪ್ತಿಯಾಗಿ ಹೋಗುವುದು ಆದರೆ ಈ ಜೀವನು ಅರ್ಥಾತ್ ನಾವು ಯಾವುದರಲ್ಲಿ ನಮ್ಮದೇನೂ ನಡೆಯುವುದಿಲ್ಲ ಮತ್ತು ಯಾವುದರಿಂದ ಯಾವುದೇ ಸುಖ ಅಥವಾ ದುಃಖವಾಗುವುದಿಲ್ಲ ಅಂಥ ಸಂಯೋಗಗಳಲ್ಲಿ ಸುಖ-ದುಃಖದ ಕಲ್ಪನೆ ಮಾಡುತ್ತ ಅವುಗಳನ್ನು ಹೊಂದಿಸುವ - ಸಂಗ್ರಹಿಸುವ ಅಥವಾ ದೂರ ಮಾಡುವುದರಲ್ಲಿ ನಮ್ಮ ಜೀವನವನ್ನೇ ಪಣಕ್ಕೆ ಹಚ್ಚಿದ್ದೇವೆ - ಕಳೆದು ಕೊಳ್ಳುತ್ತಿದ್ದೇವೆ.

ಹನ್ನೊಂದನೆಯ ಗುಣಸ್ಥಾನದಲ್ಲಿ ವರ್ತಿಸುವಂಥ ಮುನಿರಾಜರು ಯಾರೋ ಕೆಲವರು ಆಯುಕ್ಷಯವಾಗುವುದರಿಂದ ಮರಣಹೊಂದಿ ಮೂವತ್ತೂರು ಸಾಗರ ಆಯುವುಳ್ಳ ಸರ್ವಾರ್ಥಸಿದ್ಧಿಯಲ್ಲಿ ಉತ್ಪನ್ನರಾಗುತ್ತಾರೆ. ಒಂದು ಸಮಯದಲ್ಲಿ ಹನ್ನೊಂದನೆಯ ಗುಣಸ್ಥಾನದ ಪೂರ್ಣ ವೀತರಾಗತೆಯಿಂದ ಉರುಳಿ ವಿಗ್ರಹಗತಿಯಲ್ಲಿ ನಾಲ್ಕನೆಯ ಗುಣಸ್ಥಾನದಲ್ಲಿ ವರ್ತಿಸುವಂಥ ದೇವಗಳಾಗುತ್ತಾರೆ. ಹಾಗಾದರೆ ಅವರು ಯಾವಾಗ ಅಧಿಕ ಸುಖಿಯಾಗಿದ್ದರು ? ಮುನಿ ಅವಸ್ಥೆಯಲ್ಲಿಯೋ ಅಥವಾ ಸರ್ವಾರ್ಥಸಿದ್ಧಿಯಲ್ಲಿ ? ಅಲ್ಲಿಯಂತೂ ೩೩ ಸಾಗರಗಳವರೆಗೆ ರತ್ನಮಯ ಮಹಲು, ಕಲ್ಪವೃಕ್ಷಗಳಿಂದ ಸಮಸ್ತ ಭೋಗ ಪದಾರ್ಥಗಳು ಉಪಲಬ್ಧವಿರುತ್ತವೆ. ಇಲ್ಲಿ ಮುನಿರಾಜರು ಕಾನನದಲ್ಲಿ ವಾಸಿಸುತ್ತಿದ್ದರು.

ಇಲ್ಲಿಯಂತೂ ನಾವು ಸಂಯೋಗಗಳನ್ನು - ಭೋಗಗಳನ್ನು ಸುಖದ ಕಾರಣವೆಂದು ಮನ್ನಿಸಿದ್ದೇವೆ ಮತ್ತು ಅವು ಧನದಿಂದ ದೊರಕುತ್ತವೆಯೆಂಬುದು ನಮ್ಮ ಅನಿಸಿಕೆಯಿದೆ. ಆ ಧನರೂಪದ ಸಾಧನದ ಹಿಂದೆ ಇಡೀ ಜಗತ್ತು ಹುಚ್ಚರ ಹಾಗೆ ಧಾವಿಸುತ್ತಿದೆ, ಎಲ್ಲರೂ ಧಾವಿಸುತ್ತಿದ್ದಾರೆ ಆದುದರಿಂದ ನಾವು ಕೂಡ ಧಾವಿಸುತ್ತಿದ್ದೇವೆ.

ನಮ್ಮ ಸ್ನೇಹಿತೆಯೊಬ್ಬಳು ಡಾಕ್ಟರ ಇದ್ದಾಳೆ - ಜೈನಳಿದ್ದಾಳೆ. ಅವಳು ಇಂದಿಗೆ ಇಪ್ಪತ್ತೈದು ವರ್ಷಗಳ ಹಿಂದೆ ನನಗೆ ಹೇಳುತ್ತಾಳೆ 'ನೀನೊಬ್ಬಳು ಮೂರ್ಖಳಿರುವೆ, ಡಾಕ್ಟರ ವೃತ್ತಿಯನ್ನು ಬಿಟ್ಟು ಧರ್ಮದ ಬೆನ್ನು ಹತ್ತಿರುವೆ, ನೋಡು ನಾನು ಈಗ ಸಲಿಕೆಯಿಂದ ಧನವನ್ನು ಬಾಚುತ್ತಿದ್ದೇನೆ - ಗಳಿಸುತ್ತಿದ್ದೇನೆ.' ಆಗ ನಾನು ಉತ್ತರಿಸುತ್ತ 'ಅಹುದು, ನೀನು ಸಲಿಕೆಯಿಂದ ಧನವನ್ನು ಎಳೆಯುತ್ತಿರುವೆ, ಆದರೆ ತಿನ್ನುವುದಂತೂ ಸ್ಪೂನಿನಿಂದಲೇ ಅಲ್ಲವೆ? ಅರ್ಥಾತ್ ತೀರ ಅಲ್ಪವೇ ಅಲ್ಲವೇನು !- ಎಂದು ಕೇಳಿದ್ದೆನು. ಸಂಸಾರೀ ಜೀವದ ವಿಚಾರಸರಣಿಯೇ ವಿಚಿತ್ರವಾಗಿದೆ !

ನಮಗಂತೂ ಆಜೀವಿಕೆಯ ಸಲುವಾಗಿ ಪರ್ಯಾಪ್ತವಿರುವಷ್ಟು ಧನವನ್ನು ಗಳಿಸುತ್ತ ಹೆಚ್ಚು ಹೆಚ್ಚು ಸಮಯ ಶುದ್ಧಾತ್ಮನನ್ನು ತಿಳಿದುಕೊಳ್ಳುವುದರಲ್ಲಿ ತೊಡಗಿಸಬೇಕಾಗಿದೆ - ಈ ಮನುಷ್ಯ ಭವವನ್ನು ಸಾರ್ಥಕ ಮಾಡಿಕೊಳ್ಳುವುದಿದೆ. ಆದರೆ ನಾವು ನಮ್ಮ ಏಳು ತಲೆಮಾರಿನವರೆಗೆ ಬರುವಂಥ ಜೀವರುಗಳು ಕುಳಿತು ತಿನ್ನುವಷ್ಟು ಗಳಿಸಬೇಕೆಂಬ ಬಯಕೆಯನ್ನಿಟ್ಟುಕೊಂಡಿದ್ದೇವೆ. ಆದರೆ ಪುಣ್ಯ-ಪಾಪಗಳ ಚಕ್ರವು ತಿರುಗುತ್ತಿರುತ್ತದೆ, ರಾಟಳ ಗಡಿಗೆಗಳಂತೆ ತುಂಬುತ್ತ-ಬರಿದಾಗುತ್ತ ನಡೆದಿರುತ್ತದೆ. ಗಳಿಸಿದ ಧನವೂ ಹೊರಟು ಹೋಗುತ್ತದೆ ಅಥವಾ ಉಳಿದುಕೊಂಡರೂ ರೋಗದ ಸಮಯದಲ್ಲಿ, ಪುತ್ರ ವಿಯೋಗದ ಸಮಯದಲ್ಲಿ ಅಥವಾ ಅನ್ಯ ಸಂಕಟ ಸಮಯದಲ್ಲಿ ಅದು ಕೆಲಸಕ್ಕೆ ಬರುವುದಿಲ್ಲ.

ಇರಲಿ; ಮರುಳಾಟವು ಎಲ್ಲಿಯವರೆಗೆ ನಡೆಯುವುದಿದೆಯೋ ನಡೆಯಲಿ, ಈಗ ಇಲ್ಲಿ ನಮ್ಮದು ಜ್ಯೋತಿಷ್ಕ ಲೋಕದ ಚರ್ಚೆಯು ನಡೆಯುತ್ತಿದೆ. ಮೊದಲನೆಯ ಪೃಥ್ವಿಯಿಂದ ಏಳುನೂರಾ ತೊಂಭತ್ತು ಯೋಜನದ ಎತ್ತರದ ಮೇಲೆ ತಾರೆಯರಿದ್ದಾರೆ. ಅಲ್ಲಿಂದ ಹತ್ತು ಯೋಜನ ಮೇಲೆ ಸೂರ್ಯನಿದ್ದಾನೆ, ಅಲ್ಲಿಂದ ತೊಂಭತ್ತು ಯೋಜನ ಮೇಲೆ ಚಂದ್ರನಿದ್ದಾನೆ, ಅಲ್ಲಿಂದ ನಾಲ್ಕು ಯೋಜನ ಮೇಲೆ ನಕ್ಷತ್ರ ವಿಮಾನಗಳಿವೆ. ಅಲ್ಲಿಂದ ನಾಲ್ಕು ಯೋಜನ ಮೇಲೆ ಬುಧವೆಂಬ ಹೆಸರಿನ ಗ್ರಹವಿದೆ. ಅಲ್ಲಿಂದ ಮೂರು ಯೋಜನ ಮೇಲೆ ಶುಕ್ರನಿದ್ದಾನೆ, ಅಲ್ಲಿಂದ ಮೂರು ಯೋಜನ ಮೇಲೆ ಹೋದ ಮೇಲೆ ಗುರು (ಬೃಹಸ್ಪತಿ) ಇದ್ದಾನೆ. ಅಲ್ಲಿಂದ ಮೂರು ಯೋಜನ ಮೇಲೆ ಹೋದ ಮೇಲೆ ಮಂಗಳ (ಅಂಗಾರ) ನಿದ್ದಾನೆ ಮತ್ತು ಅಲ್ಲಿಂದ ಮೂರು ಯೋಜನ ಮೇಲೆ ಹೋದ ಮೇಲೆ ಶನಿಯಿದ್ದಾನೆ. ಅವನ ಹೆಸರು ಶನೈಶ್ಚರ ಅರ್ಥಾತ್ ಮಂದಗತಿಯಿಂದ ಚಲಿಸುವಂಥವನು.

ಇವರೆಲ್ಲರೂ ಇರುತ್ತಾರೆಯಂತೂ ಅಲ್ಲಿ, ಆದರೆ ಅವರ ಹೆಸರುಗಳಿಂದ ಎಂದರೆ ಶನಿ-ಮಂಗಲ ಮೊದಲಾದವರಿಂದ ನಾವು ಇಲ್ಲಿ ಹೆದರುತ್ತಿರುತ್ತೇವೆ.

ಈಗ ಇವರುಗಳ ವಿಸ್ತಾರವೆಷ್ಟಿರುತ್ತದೆ ಎಂಬುದನ್ನು ನೋಡೋಣ.

ಚಂದ್ರ ವಿಮಾನವು ಐವತ್ತಾರು ಆರವತ್ತೊಂದಾಂಶ ($\frac{೫೬}{೬೧}$) ಯೋಜನವುಳ್ಳದ್ದಿದೆ. ಸೂರ್ಯವಿಮಾನವು ನಲವತ್ತೆಂಟು ಆರವತ್ತೊಂದಾಂಶ ($\frac{೪೮}{೬೧}$) ಯೋಜನದ್ದಿದೆ. ಶುಕ್ರವು ಒಂದು ಹರದಾರಿಯದಿದೆ. ಗುರುವು ಒಂದು ಹರದಾರಿಗಿಂತ ಸ್ವಲ್ಪ ಕಡಿಮೆಯಿದೆ, ಬುಧ, ಮಂಗಲ ಮತ್ತು ಶನಿಯು ಅರ್ಧ ಹರದಾರಿಯುಳ್ಳವಿವೆ, ತಾರೆಯರ ವಿಮಾನಗಳು ಕೆಲವು ಚಿಕ್ಕ ಕೆಲವು ದೊಡ್ಡ ಆಕಾರವುಳ್ಳವಿವೆ - ಒಂದು ಹರಿದಾರಿಯ ನಾಲ್ಕನೆಯ ಒಂದು ಭಾಗದಿಂದ ಹಿಡಿದು ಒಂದು ಹರದಾರಿಯವರೆಗೆ ವಿಸ್ತಾರವುಳ್ಳವಿವೆ, ನಕ್ಷತ್ರಗಳು ಒಂದು ಹರದಾರಿಯುಳ್ಳವಿವೆ.

ಈ ತಾರೆ, ನಕ್ಷತ್ರಗಳು ತಮ್ಮ-ತಮ್ಮ ಪರಿಧಿಯಲ್ಲಿ ಗಮನ ಮಾಡುತ್ತಿರುತ್ತಾರೆ ಹಾಗೂ ಚಂದ್ರ, ಸೂರ್ಯ, ಗ್ರಹಗಳು ತಮ್ಮ-ತಮ್ಮ ಪರಿಧಿಯಲ್ಲಿ ಗಮನ ಮಾಡುತ್ತಾರೆ. ಅವರುಗಳ ತಮ್ಮ-ತಮ್ಮ ಭ್ರಮಣ ಕ್ಷೇತ್ರ (ಚಲಿಸುವ ಕ್ಷೇತ್ರ)ವಿರುತ್ತದೆ ಅವರ ಭ್ರಮಣವು ಬೇರೆ-ಬೇರೆ ಪರಿಧಿಯ ಮೇಲೆ ಆಗುತ್ತದೆ. ಉತ್ತರಾಯಣ, ದಕ್ಷಿಣಾಯಣವಾಗುವುದನ್ನು ನಾವು ನೋಡುತ್ತೇವೆಯಲ್ಲವೇನು ! ತಿಳಿಯಲಿಲ್ಲವೇನು ? - ನೋಡಿರಿ ಸೂರ್ಯನಂತೂ ಪೂರ್ವ ದಿಕ್ಕಿನಿಂದ ಉದಿಸುತ್ತಾನೆ ಆದರೆ ಕೆಲವೊಮ್ಮೆ ಪೂರ್ವದಲ್ಲಿಯೇ ದಕ್ಷಿಣದ ಕಡೆಗೆ ಕಂಡು ಬರುತ್ತಾನೆ ಕೆಲವೊಮ್ಮೆ ಉತ್ತರದ ಕಡೆಗೆ ಇರುತ್ತಾನೆ. ಆರು ತಿಂಗಳಿಗೊಮ್ಮೆ ದಕ್ಷಿಣಾಯಣದಿಂದ ಉತ್ತರಾಯಣದ ಕಡೆಗೆ ಹೋಗುತ್ತಾನೆ. ಚಂದ್ರ-ಸೂರ್ಯರ ಪರಿಭ್ರಮಣದ ಅಂಗಳಗಳೂ ಬೇರೆ-ಬೇರೆಯಾಗಿರುತ್ತವೆ.

ಜಂಬೂದ್ವೀಪದಲ್ಲಿ ಇಬ್ಬರು ಚಂದ್ರರು ಮತ್ತು ಇಬ್ಬರು ಸೂರ್ಯರಿದ್ದಾರೆ. ಜಂಬೂದ್ವೀಪದಲ್ಲಿ ಚಂದ್ರನು ಭ್ರಮಣ ಮಾಡುವಂಥ ಅಂಗಳಗಳು ಹದಿನೈದು ಇವೆ ಮತ್ತು ಸೂರ್ಯನ ಓಣಿಗಳು ಒಂದು ನೂರಾ ಎಂಭತ್ನಾಲ್ಕು ಇವೆ. ಚಂದ್ರನ ಭ್ರಮಣವು ಈ ಹದಿನೈದು ಓಣಿಗಳಲ್ಲಿ ಆಗುವುದರಿಂದ ಕೃಷ್ಣ ಪಕ್ಷ ಮತ್ತು ಶುಕ್ಲ ಪಕ್ಷದ ವಿವಿಧತೆಯಾಗುತ್ತದೆ.

ಈಗ ನಾವು ಈ ತಾರೆಯರ ಗಣನೆ ಅಥವಾ ಎಣಿಕೆಯ ಅಸಂಭವ ಕಾರ್ಯ ಮಾಡೋಣ. ಈ ಸೂರ್ಯ, ತಾರೆ, ಗ್ರಹ, ನಕ್ಷತ್ರಗಳು ಚಂದ್ರನ ಪರಿವಾರವಿದೆ. ನಾವು ಸೂರ್ಯನನ್ನು ಮುಖ್ಯಮಾಡಿ ಅವನ ಜೊತೆಯಲ್ಲಿ ಯಾವ ಗ್ರಹ, ನಕ್ಷತ್ರ , ತಾರೆಗಳಿವೆ ಅವುಗಳನ್ನು ಸೂರ್ಯ ಮಾಲೆಯೆಂದು ಹೇಳುತ್ತೇವೆ. ಆದರೆ ಇಲ್ಲಿ ಚಂದ್ರನು ಮುಖ್ಯನಿದ್ದಾನೆ ಮತ್ತು ಪ್ರತಿಯೊಬ್ಬ ಚಂದ್ರನ ಪರಿವಾರದಲ್ಲಿ ಏನೇನು ಇದೆಯೆಂಬುದನ್ನು ನೋಡೋಣ. ಒಬ್ಬನು ಸ್ವಯಂ ಚಂದ್ರನಿದ್ದಾನೆ. ಒಬ್ಬ ಚಂದ್ರನ ಜೊತೆಯಲ್ಲಿ ಒಬ್ಬ ಸೂರ್ಯನು ಎಂಭತ್ತೆಂಟು ಗ್ರಹಗಳು, ಇಪ್ಪತ್ತೆಂಟು ನಕ್ಷತ್ರಗಳು, ಅರವತ್ತಾರು ಸಾವಿರದಾ ಒಂಭೈನೂರಾ ಎಪ್ಪತ್ತೈದು ಕೋಟಾಕೋಟಿ ತಾರೆಯರು ಇರುತ್ತಾರೆ. ಎಲ್ಲರೂ ಸೇರಿ ಒಟ್ಟು ೧+೧+೮೮+೨೮+೬೬೯೭೫ ಕೋಟಾಕೋಟಿ ಅರ್ಥಾತ್

೬೬೯೭೫ ಕೋಟಾಕೋಟಿ +೧೧೮ ಇಷ್ಟು ಒಬ್ಬೊಬ್ಬ ಚಂದ್ರನ ಪರಿವಾರವಿದೆ. ಈಗ ನಾವು ಒಟ್ಟು ಚಂದ್ರರು ಎಷ್ಟಿದ್ದಾರೆಂಬುದರ ಎಣಿಕೆ ಮಾಡಿದರೆ ನಮಗೆ ಎಲ್ಲ ಜ್ಯೋತಿಷ್ಕ ವಿಮಾನಗಳ ಒಟ್ಟು ಸಂಖ್ಯೆಯ ಪರಿಚಯವಾಗಬಹುದಾಗಿದೆ.

ಜಂಬೂದ್ವೀಪದಲ್ಲಿ ಇಬ್ಬರು ಚಂದ್ರರು ಮತ್ತು ಇಬ್ಬರು ಸೂರ್ಯರಿದ್ದಾರೆ. ಒಂದೇ ಓಣಿಯಲ್ಲಿ ಇಬ್ಬರು ಚಂದ್ರರು ಮತ್ತು ಇಬ್ಬರು ಸೂರ್ಯರು ಭ್ರಮಣ ಮಾಡುತ್ತಾರೆ. ನಾವು ಈ ಹೊತ್ತು ಯಾವ ಸೂರ್ಯನನ್ನು ನೋಡುತ್ತಿದ್ದೇವೆ ಅವನನ್ನು ನಾವು ನಾಡಿದ್ದು ನೋಡುತ್ತೇವೆ. ನಾಳೆ ಬೇರೆ ಸೂರ್ಯನನ್ನು ನೋಡುತ್ತೇವೆ. ಲವಣ ಸಮುದ್ರದಲ್ಲಿ ನಾಲ್ವರು ಚಂದ್ರರು ಮತ್ತು ನಾಲ್ವರು ಸೂರ್ಯರಿದ್ದಾರೆ. ಧಾತಕೀ ಖಂಡದಲ್ಲಿ ಹನ್ನೆರಡು ಚಂದ್ರರು ಮತ್ತು ಹನ್ನೆರಡು ಸೂರ್ಯರಿದ್ದಾರೆ. ಕಾಲೋದಧಿ ಸಮುದ್ರದಲ್ಲಿ ನಲವತ್ತೆರಡು ಚಂದ್ರರು ಮತ್ತು ನಲವತ್ತೆರಡು ಸೂರ್ಯರಿದ್ದಾರೆ. ಪುಷ್ಕರಾರ್ಧದಲ್ಲಿ ಅರ್ಥಾತ್ ಮಾನುಷೋತ್ತರ ಪರ್ವತದವರೆಗಿನ ಅರ್ಧ ಪುಷ್ಕರ ದ್ವೀಪದಲ್ಲಿ ಎಪ್ಪತ್ತೆರಡು ಚಂದ್ರ ಮತ್ತು ಎಪ್ಪತ್ತೆರಡು ಸೂರ್ಯರಿದ್ದಾರೆ.

ಮಾನುಷೋತ್ತರ ಪರ್ವತದ ಹೊರಗೆ ಇವರುಗಳ ಸಂಖ್ಯೆಯನ್ನು ಹೇಗೆ ಕಂಡು ಹಿಡಿಯುವುದೆಂಬುದನ್ನು ನೋಡೋಣ. ಇಲ್ಲಿಂದ ಮುಂದೆ ಯಾವ ದ್ವೀಪ ಅಥವಾ ಸಮುದ್ರದ ವಿಸ್ತಾರವು ಎಷ್ಟು ಯೋಜನವಿದೆ ಅಷ್ಟು ಅಲ್ಲಿ ವಲಯಗಳಿರುತ್ತವೆ. ಹೇಗೆಂದರೆ ಹೊರಗಿನ ಅರ್ಧ ಪುಷ್ಕರ ದ್ವೀಪವು ಎಂಟು ಲಕ್ಷ ಯೋಜನದ್ದಿದೆ. ಎಂದ ಮೇಲೆ ಅದರಲ್ಲಿ ಎಂಟು ವಲಯಗಳಿರುತ್ತವೆ. ಮೊದಲಿನ ವಲಯವು ಮಾನುಷೋತ್ತರ ಪರ್ವತದಿಂದ ಅರ್ಧ ಲಕ್ಷ ಯೋಜನದ ಮೇಲಿದೆ ಎಂದರೆ ಮೊದಲಿನ ವಲಯವು ೫೦ ಸಾವಿರ ಯೋಜನದ ಮೇಲಿದೆ ಉಳಿದ ವಲಯಗಳು ಒಂದೊಂದು ಲಕ್ಷ ಯೋಜನದ ಅಂತರಾಳದಿಂದ ಇರುತ್ತವೆ.

ಮೊದಲಿನ ವಲಯದಲ್ಲಿ ೧೪೪ ಚಂದ್ರರು ಮತ್ತು ೧೪೪ ಸೂರ್ಯರಿದ್ದಾರೆ. ಎರಡನೆಯ ವಲಯದಲ್ಲಿ ೧೪೮ ಚಂದ್ರರು ಮತ್ತು ೧೪೮ ಸೂರ್ಯರಿದ್ದಾರೆ. ಮೂರನೆಯ ವಲಯದಲ್ಲಿ ೧೫೨-೧೫೨, ನಾಲ್ಕನೆಯ ವಲಯದಲ್ಲಿ ೧೫೬-೧೫೬ ಈ ರೀತಿ ಪ್ರತಿಯೊಂದು ವಲಯದಲ್ಲಿ ೪-೪ ರಂತೆ ಹೆಚ್ಚುತ್ತ ಹೋಗುತ್ತಾರೆ.

ಈ ಪ್ರಕಾರ ಇದರ ಮುಂದೆ ಪುಷ್ಕರವರ ಸಮುದ್ರವು ೩೨ ಲಕ್ಷ ಯೋಜನ ವಿಸ್ತಾರವುಳ್ಳದ್ದಿದೆ ಅದರಲ್ಲಿ ೩೨ ವಲಯಗಳಿವೆ. ಅದರ ಮೊದಲಿನ ವಲಯದಲ್ಲಿ ೨೮೮-೨೮೮ ಚಂದ್ರ-ಸೂರ್ಯರಿದ್ದಾರೆ. ಪ್ರತಿಯೊಂದು ವಲಯದಲ್ಲಿ ನಾಲ್ಕು ನಾಲ್ಕು ವೃದ್ಧಿಯಾಗುತ್ತ ೨೯೨, ೨೯೬, ೩೦೦, ೩೦೪, ೩೦೮, ೩೧೨ ಈ ಪ್ರಕಾರ ೩೨ ಬಾರಿ ೪-೪ ಸಂಖ್ಯೆಯಲ್ಲಿ ಹೆಚ್ಚಾಗುವರು. ಅದರ ನಂತರ ನಾಲ್ಕನೆಯ ದ್ವೀಪ ೬೪ ಲಕ್ಷ ಯೋಜನದ್ದಿದೆ ಅದರ ಮೊದಲಿನ ವಲಯದಲ್ಲಿ ೫೭೬-೫೭೬ ಚಂದ್ರ-ಸೂರ್ಯರಿದ್ದಾರೆ ಮತ್ತು ಅದರ ಪ್ರತಿ ವಲಯದಲ್ಲಿ ೪-೪ರ ವೃದ್ಧಿಯು ೬೩ ಬಾರಿ ಆಗುವುದು.

ಇದರ ನಂತರ ಎಂದರೆ ಮುಂದೆ ಇರುವಂಥ ಸಮುದ್ರವು ೧೨೮ ಲಕ್ಷ ಯೋಜನದ್ದಿದೆ. ಇಲ್ಲಿಯಂತೂ ಈಗ ೪ ದ್ವೀಪ ಮತ್ತು ನಾಲ್ಕು ಸಮುದ್ರಗಳಾದವು. ನಂದೀಶ್ವರ ದ್ವೀಪವು ಅದು ದ್ವೀಪಗಳಲ್ಲಿ ಎಂಟನೆಯದಿದೆ ಹಾಗಂತೂ ದ್ವೀಪ ಸಮುದ್ರಗಳಲ್ಲಿ ಅದರ ನಂಬರ-ಕ್ರಮವು ಹದಿನೈದನೆಯದಿದೆ. ಅಲ್ಲಿಯ ಸಂಖ್ಯೆಯನ್ನು ಕೂಡ ಕಂಡು ಹಿಡಿಯೋಣ. ಇಲ್ಲಿಯಂತೂ ನಾವು ಕೇವಲ ಚಂದ್ರರ ಸಂಖ್ಯೆಯನ್ನು ನೋಡುತ್ತಿದ್ದೇವೆ ಅವರುಗಳ ಸಮಸ್ತ ಪರಿವಾರದ ಸಂಖ್ಯೆಯನ್ನಂತೂ ನಂತರ ನೋಡುವುದಿದೆ - ಕಂಡು ಹಿಡಿಯುವುದಿದೆ.

ಗಾಬರಿಯಾಗಬಾರದು, ನಮ್ಮ ಹತ್ತಿರ ಕರಣಾನುಯೋಗದ ಸೂತ್ರಗಳಿವೆ, ದೊಡ್ಡ-ದೊಡ್ಡ ಗಣಿತಗಳನ್ನು ಸುಲಭವಾಗಿ ಮಾಡಬಹುದಾಗಿದೆ. ಮಾನುಷೋತ್ತರ ಪರ್ವತದ ನಂತರ ಪ್ರತಿಯೊಂದು ದ್ವೀಪ ಮತ್ತು ಸಮುದ್ರದಲ್ಲಿ ಯಾವ ಮೊದಲನೆಯ ವಲಯವಿದೆ ಅದರಲ್ಲಿ ಈ ಸಂಖ್ಯೆಯು ದ್ವಿಗುಣ-ದ್ವಿಗುಣವಾಗುತ್ತ ಹೋಗುತ್ತದೆ. ನಾವು ೧೪೪ ರಿಂದ ಆರಂಭ ಮಾಡಿದ್ದೆವು, ನಂತರ ೨೮೮, ಅದರ ನಂತರ ದ್ವಿಗುಣಿತವಾಗುತ್ತ ಹೋಗುವುದು ಮತ್ತು ಪ್ರತಿ ವಲಯದ ೪-೪ ಚಂದ್ರ-ಸೂರ್ಯರು ಮತ್ತೆ ಹೆಚ್ಚುತ್ತ ಹೋಗುವರು. ಹಾಗಾದರೆ ಇವರ ಸಂಖ್ಯೆಯನ್ನು ಹೇಗೆ ಕಂಡು ಹಿಡಿಯುವುದು ?

ಈಗ ಪುನರಾವಲೋಕ ಮಾಡಿದರೆ ಒಟ್ಟು ಎಷ್ಟು ದ್ವೀಪ -ಸಮುದ್ರಗಳಿವೆ ? - ಅಸಂಖ್ಯಾತ, ಕೇವಲ ಅಸಂಖ್ಯಾತವೆನ್ನುವುದರಿಂದ ಕಾರ್ಯವು ಸಾಗುವುದಿಲ್ಲ. ನಿಖರವಾಗಿ ಹೇಳಬೇಕಾಗುವುದು. ಅಹುದು, ೨೫ ಕೋಟಾಕೋಟಿ ಉದ್ಧಾರ ಪಲ್ಯದಷ್ಟು ದ್ವೀಪ-ಸಮುದ್ರಗಳಿವೆ. ೧೪೪ ರ ಎಣಿಕೆಯನ್ನು ನಾವು ಪುಷ್ಕರಾರ್ಧದಿಂದ ಪ್ರಾರಂಭ ಮಾಡಿದ್ದೆವು. ಆದುದರಿಂದ ಒಟ್ಟು ಸಂಖ್ಯೆಯೊಳಗಿಂದ ಎರಡೂವರೆ ದ್ವೀಪ ಹಾಗೂ ಎರಡು ಸಮುದ್ರಗಳನ್ನು ಕಳೆಯಲಾದರೆ (ಮಾಯನಸ ಮಾಡಿದರೆ) ಎಷ್ಟು ದ್ವೀಪ-ಸಮುದ್ರಗಳು ಉಳಿಯುತ್ತವೆ ಅವುಗಳಲ್ಲಿ ಮೊದಲಿನ ವಲಯದ ಚಂದ್ರ-ಸೂರ್ಯರನ್ನು ದ್ವಿಗುಣ-ದ್ವಿಗುಣ ಮಾಡಬೇಕಾಗುವುದು.

ಪುಷ್ಕರವರ ಸಮುದ್ರದಿಂದ ಹಿಡಿದು ಯಾವ ದ್ವೀಪ ಅಥವಾ ಸಮುದ್ರವು ಎಷ್ಟು ಲಕ್ಷ ಯೋಜನ ವಿಸ್ತಾರವುಳ್ಳದ್ದಿದೆ ಅದನ್ನು ಲಕ್ಷದಿಂದ ಭಾಗಿಸಿದರೆ ಅಲ್ಲಿಯ ವಲಯಗಳ ಪ್ರಮಾಣವು ಬರುತ್ತದೆ ಅದನ್ನು ೯ ರಿಂದ ಗುಣಿಸಿದಾಗ ಮೊದಲನೆಯ ವಲಯದಲ್ಲಿ ಸ್ಥಿತರಿರುವ ಚಂದ್ರ-ಸೂರ್ಯರ ಪ್ರಮಾಣವು ಬರುತ್ತದೆ. ಹೇಗೆಂದರೆ ಪುಷ್ಕರವರವು ಮೂರನೆಯ ಸಮುದ್ರವಿದೆ ಮತ್ತು ಅದು ೩೨ ಲಕ್ಷ ಯೋಜನದ್ದಿದೆ ಅದನ್ನು ಲಕ್ಷದಿಂದ ಭಾಗಿಸಿದರೆ ೩೨ ಬಂತು ಅದನ್ನು ಒಂಭತ್ತರಿಂದ ಗುಣಿಸಿದರೆ ೨೮೮ ಬಂತು, ಇದರ ಪ್ರಥಮ ವಲಯದಲ್ಲಿ ೨೮೮ - ೨೮೮ ಚಂದ್ರ-ಸೂರ್ಯರಿದ್ದಾರೆ. ವಾರುಣಿ ವರವು ನಾಲ್ಕನೆಯ ದ್ವೀಪವಿದೆ, ಅದು ೬೪ ಲಕ್ಷ ಯೋಜನ ವಿಸ್ತಾರವುಳ್ಳದ್ದಿದೆ. ಅದನ್ನು ಲಕ್ಷದಿಂದ ಭಾಗಿಸಿದರೆ ೬೪ ಬಂತು ಅದನ್ನು ಒಂಭತ್ತರಿಂದ ಗುಣಿಸಿದ ಮೇಲೆ ೫೭೬ ಆಯಿತು. ಅಷ್ಟಷ್ಟು ಅಲ್ಲಿ ಚಂದ್ರ-ಸೂರ್ಯರಿದ್ದಾರೆ.

ಸ್ವಯಂಭೂರಮಣ ಸಮುದ್ರದ ವಿಸ್ತಾರವು ಒಂದು ರಾಜುವಿನ ನಾಲ್ಕನೆಯ ಒಂದು ಭಾಗದಲ್ಲಿ ೭೫೦೦೦ ಯೋಜನ ಅಧಿಕದಷ್ಟಿದೆ. ಇದರ ಲೆಕ್ಕವನ್ನು ನಾವು ಮೊದಲು ನೋಡಿ ಬಂದಿದ್ದೇವೆ. ಒಂದು ರಾಜೂ ಅರ್ಥಾತ್ ಜಗತ್ ಶ್ರೇಣಿ ೭ ಏಕೆಂದರೆ ಜಗತ್ ಶ್ರೇಣಿಯ ಪ್ರಮಾಣವು ಏಳು ರಾಜುವಿದೆ. ಅದರ ನಾಲ್ಕನೆಯ ಭಾಗ ಅರ್ಥಾತ್ ಜಗತ್ ಶ್ರೇಣಿ ೨೮ ಅದರಲ್ಲಿ ೭೫೦೦೦ ಯೋಜನ ಕೂಡಿಸುವುದು, ಇಷ್ಟು ಲಕ್ಷ ಯೋಜನವಾಗುವುದು ಅದನ್ನು ಒಂದು ಲಕ್ಷದಿಂದ ಭಾಗಿಸುವುದು ನಂತರ ಅದನ್ನು ೯ ರಿಂದ ಗುಣಿಸುವುದು

$$\left[\frac{\text{ಜಗತ್ ಶ್ರೇಣಿ}}{\text{೨೮}} + \text{೭೫೦೦೦}\right] \times \frac{\text{೯}}{\text{೧೦೦೦೦೦}} = \text{ಇಷ್ಟು ಸ್ವಯಂಭೂ ರಮಣ ಸಮುದ್ರದ}$$

ಮೊದಲನೆಯ ವಲಯದಲ್ಲಿ ಚಂದ್ರ ಸೂರ್ಯರಿದ್ದಾರೆ.

ನಮ್ಮ ಹತ್ತಿರ ಎಂಥ ಗಣಿತ ಸೂತ್ರವಿದೆಯೆಂದರೆ ಅದರಿಂದ ಎಲ್ಲವುಗಳ ಪ್ರಥಮ ವಲಯಗಳಲ್ಲಿ

ಸ್ಥಿತವಿರುವ ಚಂದ್ರ-ಸೂರ್ಯರ ಸಂಖ್ಯೆಯು ದ್ವಿಗುಣ-ದ್ವಿಗುಣವಿದೆ. ಎಂದರೆ ಮೊದಲಿನ ದ್ವೀಪದ ಪ್ರಥಮ ವಲಯದ ಚಂದ್ರ-ಸೂರ್ಯರಿಂದ ಅದರ ನಂತರ ಬರುವ ಸಮುದ್ರದ ಪ್ರಥಮ ವಲಯದ ಚಂದ್ರ-ಸೂರ್ಯರ ಸಂಖ್ಯೆಯು ದ್ವಿಗುಣವಿದೆ ಅದನ್ನು ಕೂಡಿಸುವುದು ಮತ್ತು ಆ ಪ್ರಥಮ ವಲಯವನ್ನು ಬಿಟ್ಟು ಆ ದ್ವೀಪ ಅಥವಾ ಸಮುದ್ರದಲ್ಲಿ ಎಷ್ಟು ವಲಯಗಳಿವೆ ಅವು ಪ್ರತಿಯೊಂದರಲ್ಲಿ ಪ್ರತಿ ವಲಯದ ನಾಲ್ಕು ನಾಲ್ಕರ ವೃದ್ಧಿಯಾಗುತ್ತ ಹೋಗುತ್ತದೆ. ಸಮಾನ ವೃದ್ಧಿಯನ್ನು ಚಯವೆಂದು ಹೇಳುತ್ತಾರೆ ಮತ್ತು ಇವುಗಳ ಕೂಡಿಸುವಿಕೆಯ ವಿಧಾನವು ಕೂಡ ನಮ್ಮ ಹತ್ತಿರ ಉಪಲಬ್ಧವಿದೆ.

ತ್ರಿಲೋಕಸಾರ, ತಿಲೋಯಪಣ್ಣತ್ತಿ ಮೊದಲಾದ ಗ್ರಂಥಗಳಲ್ಲಿ ಇದನ್ನು ವಿಸ್ತಾರವಾಗಿ ತಿಳಿಸಿಕೊಡಲಾಗಿದೆ. ಇದರ ಆಧಾರದಿಂದ ಚಂದ್ರರ ಒಟ್ಟು ಸಂಖ್ಯೆಯು ಪ್ರಾಪ್ತವಾಗುತ್ತದೆ. ಇದರಲ್ಲಿ ಮನುಷ್ಯ ಲೋಕದ ೨+೪+೧೨+೪೨+೭೨=೧೩೨ ಚಂದ್ರರನ್ನು ಕೂಡಿಸಿ ಬಿಡುವುದಿದೆ. ಇಲ್ಲಿ ಎಲ್ಲ ಚಂದ್ರರ ಸಂಖ್ಯೆಯು 'ಚ' ಇದೆಯೆಂದು ಮನ್ನಿಸೋಣ. ಒಬ್ಬೊಬ್ಬ ಚಂದ್ರರ ಪರಿವಾರದಲ್ಲಿ ನಾವು ೧ ಚಂದ್ರ + ೧ ಸೂರ್ಯ + ೮೮ ಗ್ರಹ + ೨೮ ನಕ್ಷತ್ರ + ೬೬೯೭೫ ಕೋಟಾಕೋಟಿ ತಾರೆಯರನ್ನು ನೋಡಿದ್ದೆವು. ಈ ಪ್ರಕಾರ ಈ ಸಂಖ್ಯೆಯನ್ನು ಚಂದ್ರರ ಸಂಖ್ಯೆಯೊಂದಿಗೆ ಗುಣಿಸಿದರೆ ಸಮಸ್ತ ಜ್ಯೋತಿರ್ವಿಮಾನಗಳ ಸಂಖ್ಯೆಯು ಬಂದು ಬಿಡುತ್ತದೆ. ಚ X (೬೬೯೭೫ ಕೋಟಾಕೋಟಿ + ೧೧೮) ಇಲ್ಲಿ 'ಚ' ದ ಸಂಖ್ಯೆಯೇ ಅಸಂಖ್ಯಾತಗಳಲ್ಲಿದೆ.

ಇದರ ಪ್ರಮಾಣವು ಜಗತ್‌ಪ್ರತರ ೨೫೬ ಅಂಗುಲಗಳ ವರ್ಗವಿದೆ. ೨೫೬ರ ವರ್ಗವು ೬೫೫೩೬ ಇದ್ದು ಅದನ್ನು ನಾವು ಪಣ್ಣಿಠ್ಠಿ ಎಂದು ಹೇಳುತ್ತೇವೆ ಮತ್ತು ಅಂಗುಲದ ವರ್ಗವು ಪ್ರತರಾಂಗುಲವಿದೆ. ಅದನ್ನು ಬರೆಯಲಾದರೆ $\frac{\text{ಜಗತ್‌ಪ್ರತರ}}{\text{ಪ್ರತರಾಂಗುಲ X ಪಣ್ಣಿಠ್ಠಿ}}$ ಎಂಬುದಾಗಿದೆ. ಇಷ್ಟು ಜ್ಯೋತಿಷ್ಕ ವಿಮಾನಗಳಿವೆ. ಅವುಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದು ಚೈತ್ಯಾಲಯವಿದೆ. ಈ ಜ್ಯೋತಿಷಿಗಳ ಅಸಂಖ್ಯಾತ ಜಿನ ಚೈತ್ಯಾಲಯಗಳಿಗೆ ನಾವು ಇಲ್ಲಿಂದಲೇ ಭಾವಪೂರ್ವಕ ವಂದನೆ ಸಲ್ಲಿಸೋಣ.

ಒಂದೊಂದು ವಿಮಾನದಲ್ಲಿ ಸಂಖ್ಯಾತ ಜ್ಯೋತಿಷಿ ದೇವಗಳು ಇರುತ್ತಾರೆ. ಆದುದರಿಂದ ಮೇಲಿನ ಸಂಖ್ಯೆಯನ್ನು ಸಂಖ್ಯಾತದಿಂದ ಗುಣಿಸಿದ ಮೇಲೆ ನಮಗೆ ಜ್ಯೋತಿಷಿ ದೇವಗಳ ಸಂಖ್ಯೆಯು ಪ್ರಾಪ್ತವಾಗುತ್ತದೆ. ದೇವಗತಿಯಲ್ಲಿ ಸರ್ವಾಧಿಕ ಸಂಖ್ಯೆಯಂತೂ ಜ್ಯೋತಿಷಿ ದೇವಗಳದ್ದೇ ಇದೆ.

ಈ ಸಂಖ್ಯೆಗಳ ವಿಶಾಲತೆಯನ್ನು ತಿಳಿಯುವ ಸಲುವಾಗಿ ಅಸಂಖ್ಯಾತಗಳ ಬೇರೆ-ಬೇರೆ ಭೇದಗಳು - ಆವಲಿ, ಪಲ್ಯ, ಅಂಗುಲ, ಪ್ರತರಾಂಗುಲ, ಘನಾಂಗುಲ, ಜಗತ್‌ಶ್ರೇಣಿ, ಜಗತ್ಪ್ರತರ, ಜಗತ್‌ಘನ (ಲೋಕ)ಗಳನ್ನು ತಿಳಿಯಬೇಕಾಗುವುದು. ಸಮ್ಯಗ್ಜ್ಞಾನ ಚಂದ್ರಿಕೆಯೊಳಗೆ ಜೀವಕಾಂಡದಲ್ಲಿ ಗಣಿತದ ಯಾವ ಹದಿನಾಲ್ಕು ಧಾರೆಗಳಿವೆ ಅವುಗಳಲ್ಲಿ ಒಂದು ದ್ವಿರೂಪವರ್ಗಧಾರೆಯಿದೆ. ಅದರಲ್ಲಿ ಎರಡರ ವರ್ಗದಿಂದ ಪ್ರಾರಂಭ ಮಾಡಿ ವರ್ಗದವರ್ಗ, ಎರಡನೇ ಬಾರಿ ಅದರ ವರ್ಗ, ಮೂರನೇ ಬಾರಿ ವರ್ಗ ಮಾಡುತ್ತ ಹೋಗುವುದು, ಅಸಂಖ್ಯಾತ ವರ್ಗಸ್ಥಾನಗಳು ಹೋದಮೇಲೆ ಪಲ್ಯ ಸಂಖ್ಯೆಯು ಬರುತ್ತದೆ. ಅದರಿಂದಲೂ ಮುಂದೆ ಅಷ್ಟೇ ಅಸಂಖ್ಯಾತ ವರ್ಗಸ್ಥಾನಗಳು ಹೋದ ಮೇಲೆ ಅಂಗುಲವೆಂಬ ಹೆಸರಿನ ಅಸಂಖ್ಯಾತದ ಸಂಖ್ಯೆಯು ಬರುತ್ತದೆ.

ಪ್ರಶ್ನೆ :- ಈ ಆವಲಿ ಎಂದರೆ ಏನಿದೆ ?

ಉತ್ತರ :- ಆವಲಿಯಂತೂ ಜಘನ್ಯ ಯುಕ್ತಾಸಂಖ್ಯಾತ ಸಮಯಪ್ರಮಾಣವಿದೆ. ಎಲ್ಲಕ್ಕಿಂತ ಜಘನ್ಯ ಅಸಂಖ್ಯಾತದ ಹೆಸರು ಜಘನ್ಯ ಪರಿತಾಸಂಖ್ಯಾತವಿದೆ. ಈ ಸಂಖ್ಯೆಯನ್ನು ಇಷ್ಟೇ ಬಾರಿ ಬರೆದು ಒಂದಕ್ಕೆ ಇನ್ನೊಂದರಿಂದ ಗುಣಿಸಿದರೆ ಯಾವ ಪ್ರಮಾಣವು ಬರುತ್ತದೆ ಅದು ಜಘನ್ಯಯುಕ್ತ ಅಸಂಖ್ಯಾತವಿದೆ. ಇಷ್ಟು ಸಮಯಗಳು ಒಂದು ಆವಲಿಯಲ್ಲಿ ಇರುತ್ತವೆ ಮತ್ತು ಇಂಥ ಸಂಖ್ಯಾತ ಸಾವಿರ ಕೋಟಾಕೋಟಿ ಆವಲಿಗಳು ಒಂದು ಸಮಯದಲ್ಲಿ ಇರುತ್ತವೆ. ಸಮಯವು ಎಷ್ಟು ಸೂಕ್ಷ್ಮವಿದೆಯೆಂಬುದು ಗಮನಕ್ಕೆ ಬಂತೇನು ? ಹಾಗಾದರೆ ಒಂದು ಸಮಯದಲ್ಲಿ ಕೇವಲಿ ಭಗವಂತರು ವಿಶ್ವದ ಸಮಸ್ತ ದ್ರವ್ಯ ಗುಣಗಳನ್ನು, ಅವುಗಳ ಮೂರೂ ಕಾಲದ ಪರ್ಯಾಯಗಳನ್ನು ಯುಗಪತ್ ತಿಳಿಯುತ್ತಾರೆ. ಅಲ್ಲದೆ ಪ್ರತಿಯೊಂದರ ಭಿನ್ನತೆ-ವಿಶೇಷತೆಯನ್ನು ಕೂಡ ತಿಳಿಯುತ್ತಾರೆ - ಎಂಥ ಅದ್ಭುತ ಸ್ವಭಾವವು ಜ್ಞಾನದ್ದಿದೆ, ಅದು ನಮ್ಮದು-ತಮ್ಮದು ಎಲ್ಲರದೂ ಇದೆ. ಅದರ ವಿಶ್ವಾಸ-ಪ್ರತೀತಿ ಮಾಡಿದರೆ ಅದು ಪರ್ಯಾಯದಲ್ಲಿ ಪ್ರಕಟವಾಗಿಯೇ ಆಗುತ್ತದೆ.

ಪ್ರಶ್ನೆ :- ಜಘನ್ಯ ಪರಿತ ಅಸಂಖ್ಯಾತವನ್ನು ಹೇಗೆ ತಗೆಯುವುದು ? ಎಂದರೆ ಕಂಡು ಹಿಡಿಯುವುದು?

ಉತ್ತರ :- ಈ ವಿಷಯವು ಅತ್ಯಂತ ರೋಚಕವಿದೆ. ಆದರೆ ಗಣಿತದ ಅರುಚಿಯುಳ್ಳವರಿಗೆ ಅದನ್ನು ಅರಗಿಸಿಕೊಳ್ಳುವುದಾಗುವುದಿಲ್ಲ. ಆದುದರಿಂದ ಇಲ್ಲಿ ಅದರ ಚರ್ಚೆ ಮಾಡುತ್ತಿಲ್ಲ. ಜೀವಕಾಂಡದಲ್ಲಿ ವಿಸ್ತಾರದಿಂದ ತಿಳಿಸಿಕೊಡಲಾಗಿದೆ. ಅದನ್ನು ಓದಿದ ಮೇಲೆ ತಿಳಿದುಬಾರದಿದ್ದರೆ ಸಿ.ಡಿ. ಆಲಿಸುವುದು. ಕೇವಲ ಸಂಖ್ಯಾಮಾನದ್ದೇ ಒಂದು ಸಿ.ಡಿ. ಇದೆ ಅದನ್ನು ಆಲಿಸುವುದು.

ಎರಡೂವರೆ ದ್ವೀಪದ ಹೊರಗಿನ ಎಲ್ಲ ಚಂದ್ರ , ಸೂರ್ಯ, ತಾರೆಯರು ಸ್ಥಿರರೇ ಇದ್ದಾರೆ-ಧ್ರುವವಿದ್ದಾರೆ. ಎರಡೂವರೆ ದ್ವೀಪದಲ್ಲಿರುವ ಚಂದ್ರ , ಸೂರ್ಯ, ಗ್ರಹ, ನಕ್ಷತ್ರ ಹಾಗೂ ತಾರೆಯರು ತಮ್ಮ-ತಮ್ಮ ಭ್ರಮಣ ಕ್ಷೇತ್ರದಲ್ಲಿ ವಿಹರಿಸುತ್ತಾರೆ -ಸುತ್ತುತ್ತಿರುತ್ತಾರೆ, ಮೇರುವಿನ ಪ್ರದಕ್ಷಿಣೆ ಹಾಕುತ್ತಿರುತ್ತಾರೆ. ಮೇರುವಿನ ೧೦,೦೦೦ ಯೋಜನ ವ್ಯಾಸವನ್ನು ಬಿಟ್ಟು ಅದರ ಮುಂದೆ ೧೧೨೧ ಯೋಜನ ದೂರದ ಮೇಲೆ ಇವರೆಲ್ಲರು ಕಂಡು ಬರುತ್ತಾರೆ. ಇವರೊಳಗಿನ ಯಾವ ತಾರೆಯರಿದ್ದಾರೆ ಅವರು ಎಂದರೆ ಅದೆಷ್ಟೋ ತಾರೆಯರು ಭ್ರಮಣ ಮಾಡುತ್ತಾರೆ. ಅದೆಷ್ಟೋ ತಾರೆಯರು ಸ್ಥಿರರಿದ್ದಾರೆ, ಧ್ರುವವಿದ್ದಾರೆ. ಆ ಧ್ರುವ ತಾರೆಯರ ಸಂಖ್ಯೆಯು ಈ ಪ್ರಕಾರವಿದೆ - ಜಂಬೂದ್ವೀಪದಲ್ಲಿ ೩೬, ಲವಣ ಸಮುದ್ರದಲ್ಲಿ ೧೩೯, ಧಾತಕೀ ಖಂಡದಲ್ಲಿ ೧೦೧೦, ಕಾಲೋದಧಿ ಸಮುದ್ರದಲ್ಲಿ ೪೧೧೨೦, ಪುಷ್ಕರಾರ್ಧ ದ್ವೀಪದಲ್ಲಿ ೫೩೨೩೦ ಹೀಗೆ ಎರಡೂವರೆ ದ್ವೀಪದಲ್ಲಿ ಒಟ್ಟು ಧ್ರುವ ತಾರೆಯರು ೯೫೫೩೫ ಇದ್ದಾರೆ. ಧಾತಕೀಖಂಡ ಮತ್ತು ಪುಷ್ಕರಾರ್ಧದ ಪೂರ್ವ ಹಾಗೂ ಪಶ್ಚಿಮ ಭಾಗಗಳ ಜ್ಯೋತಿಷಿ ವಿಮಾನಗಳು ತಮ್ಮ-ತಮ್ಮ ಅರ್ಧ ಭಾಗದಲ್ಲಿ ಗಮನ ಮಾಡುತ್ತವೆ.

ಆಗಮದಲ್ಲಿಯಂತೂ ತುಂಬಾ ವಿಸ್ತಾರದಿಂದ ಅನೇಕ ಮಾತುಗಳನ್ನು ತಿಳಿಸಿಕೊಟ್ಟಿದ್ದಾರೆ. ಈ ಇಬ್ಬರು-ಇಬ್ಬರು ಚಂದ್ರ-ಸೂರ್ಯರ ಮಧ್ಯದ ಅಂತರಾಳ, ಹಗಲು ರಾತ್ರಿಗಳ ಲೆಕ್ಕ, ಸಂಪೂರ್ಣ ಖಗೋಳ ಶಾಸ್ತ್ರವನ್ನೇ ತಿಳಿಸಿಕೊಟ್ಟಿದ್ದಾರೆ. ಅಲ್ಲಿಂದ ಎಲ್ಲರೂ ಓದಿ ತಿಳಿಯಬೇಕು. ಇಲ್ಲಿಯಂತೂ ಕೇವಲ ನಮೂನೆಯನ್ನು ಪ್ರಸ್ತುತ ಪಡಿಸಲಾಗಿದೆ. ಆಗಮವೇ ಪ್ರಮಾಣವಿದೆ.

ಈ ಚಂದ್ರ ಮೊದಲಾದವರ ವಿಮಾನಗಳ ವಾಹಕ ದೇವಗಳು ಸಿಂಹ, ಆನೆ, ವೃಷಭ ರೂಪದ ಆಕಾರಗಳನ್ನು ಧಾರಣ ಮಾಡಿ ಈ ವಿಮಾನಗಳನ್ನು ಪೂರ್ವಾದಿ ದಿಕ್ಕುಗಳಲ್ಲಿ ತಗೆದುಕೊಂಡು ಹೋಗುತ್ತಾರೆ. ಚಂದ್ರ ಮತ್ತು ಸೂರ್ಯ ವಿಮಾನಗಳ ವಾಹನ ದೇವಗಳು ಪ್ರತಿಯೊಬ್ಬರಿಗೆ ೧೬೦೦೦ ಇದ್ದಾರೆ. ಗ್ರಹಗಳ ವಾಹನ ೮೦೦೦, ನಕ್ಷತ್ರಗಳ ವಾಹನ ೪೦೦೦ ಮತ್ತು ತಾರೆಗಳ ವಾಹನ ದೇವಗಳು ೨೦೦೦ ಇದ್ದಾರೆ.

ಪ್ರಶ್ನೆ :- ವಾಹನ ದೇವಗಳು ಈ ವಿಮಾನಗಳನ್ನು ಎಳೆಯುತ್ತಾರೆ, ಹಾಗಾದರೆ ಎಳೆಯದ ವಿನಹ ಅವರು ಗಮನ ಮಾಡುವ ಸಾಧ್ಯತೆಯಿಲ್ಲವೇನು ?

ಉತ್ತರ :- ಇದಂತೂ ಅಲ್ಲಿಯ ಇಂದ್ರರುಗಳ, ದೇವಗಳ ವಿಭೂತಿಯಿರುತ್ತದೆ - ಅವರ ವೈಭವವಿದೆ. ಹೇಗೆ ನಮ್ಮ ರಾಷ್ಟ್ರಪತಿ, ಪ್ರಧಾನಮಂತ್ರಿಗಳ ಜೊತೆ ಸಂಪೂರ್ಣ ಸಮೂಹವಿರುತ್ತದೆ ಹಾಗೆಂದು ತಿಳಿಯುವುದು.

ಈಗ ಅವರ ಆಯುವಿನ ಪ್ರಮಾಣವನ್ನು ನೋಡೋಣ.

ಚಂದ್ರನ ಆಯುವು - ೧ ಪಲ್ಯ + ೧ ಲಕ್ಷ ವರ್ಷ

ಸೂರ್ಯನ ಆಯುವು - ೧ ಪಲ್ಯ + ೧ ಸಾವಿರ ವರ್ಷ

ಬೃಹಸ್ಪತಿಯ ಆಯುವು - ೧ ಪಲ್ಯ ವರ್ಷ

ಬುಧ, ಮಂಗಳ, ಶನಿಯ ಆಯುವು - $\frac{೧}{೨}$ ಪಲ್ಯದ್ದು

ತಾರೆ ಮತ್ತು ನಕ್ಷತ್ರಗಳ ಉತ್ಕೃಷ್ಟ ಆಯುವು ಪಲ್ಯದ ನಾಲ್ಕನೆಯ ಒಂದು ಭಾಗ ಮತ್ತು ಜಘನ್ಯ ಆಯುವು ಪಲ್ಯದ ಎಂಟನೆಯ ಒಂದು ಭಾಗ ಪ್ರಮಾಣ. ಇದು ಅಲ್ಲಿಯ ದೇವಗಳ ಆಯುವೆಂದು ತಿಳಿಯುವುದು.

ದೇವಾಂಗನೆಯರ ಆಯುವು ತಮ್ಮ-ತಮ್ಮ ದೇವಗಳ ಆಯುವಿನ ಅರ್ಧಭಾಗ ಪ್ರಮಾಣವಿರುತ್ತದೆ. ಚಂದ್ರ ಮತ್ತು ಸೂರ್ಯ ಇಂದ್ರರಿಗೆ ನಾಲ್ಕು-ನಾಲ್ಕು ಪಟ್ಟದೇವಿಯರು ಇರುತ್ತಾರೆ. ಒಬ್ಬೊಬ್ಬ ಪಟ್ಟ ದೇವಿಯ ಪರಿವಾರವು ನಾಲ್ಕು-ನಾಲ್ಕು ಸಾವಿರ ದೇವಿಯರನ್ನು ಹೊಂದಿರುತ್ತದೆ ಮತ್ತು ಒಬ್ಬೊಬ್ಬ ಪಟ್ಟದೇವಿಯರು ನಾಲ್ಕು-ನಾಲ್ಕು ಸಾವಿರ ವಿಕ್ರಿಯೆ ಮಾಡುತ್ತಾರೆ ಇಲ್ಲಿ ಎಲ್ಲಕ್ಕಿಂತ ನಿಕೃಷ್ಟ ಹೀನ ಪುಣ್ಯವಂತ ದೇವಗಳಿಗೆ ಮೂವತ್ತೆರಡು ದೇವಾಂಗನೆಯರಿರುತ್ತಾರೆ.

ಜ್ಯೋತಿಷಿ, ವ್ಯಂತರ ಮತ್ತು ಭವನವಾಸಿ ಮೂವರನ್ನೂ ಸೇರಿಸಿ ಭವನತ್ರಿಕವೆಂದು ಹೇಳುತ್ತಾರೆ. ಅಲ್ಲಿ ಯಾರು ಉತ್ಪನ್ನರಾಗುತ್ತಾರೆ ಎಂಬುದನ್ನು ಹೇಳುತ್ತಾರೆ - ಜಿನಮತದಿಂದ ವಿಪರೀತ ಧರ್ಮದ ಆಚರಣೆ ಮಾಡುವಂಥವರು, ಯಾರು ನಿದಾನ ಮಾಡಿದ್ದಾರೆ ಅವರು ಹಾಗೂ ಅಗ್ನಿ, ಜಲ, ಗಿರಿಪಾತ ಮೊದಲಾದವುಗಳಿಂದ ಮರಣಹೊಂದಿರುವಂಥವರು, ಅಕಾಮ ನಿರ್ಜರೆ ಮಾಡುವಂಥವರು, ಪಂಚಾಗ್ನಿ ಮೊದಲಾದ ಮಿಥ್ಯಾ ತಪ ಮಾಡುವಂಥವರು, ಸದೋಷ ಚಾರಿತ್ರದ ಧಾರಕ ಜೀವಗಳು ಭವನತ್ರಿಕದಲ್ಲಿ ಜನಿಸುತ್ತಾರೆ. ಭೋಗಭೂಮಿಯ ಎಲ್ಲ ಮಿಥ್ಯಾದೃಷ್ಟಿಗಳು ಮತ್ತು ಸಾಸಾದನ ಗುಣಸ್ಥಾನದ ಜೀವಗಳು ಭವನತ್ರಿಕದಲ್ಲಿಯೇ ಜನಿಸುತ್ತಾರೆ.

ಹೆಚ್ಚಿನ ವಿಷಯವನ್ನು ಮುಂದೆ ಚರ್ಚಿಸಲಾಗುವುದು.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹದಿನೇಳನೆಯ ತೀರ್ಥಂಕರ

ಶ್ರೀ ವೀರಸೇನ ಭಗವಂತರಿಗೆ ಜಯವಾಗಲಿ.

೧೮. ಪಂಚಮೇರು

ಶ್ರೀಮದ್ ನೇಮಿಚಂದ್ರ ಆಚಾರ್ಯವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಮೂರು ಲೋಕಗಳ ಸ್ವರೂಪದ ಅವಲೋಕನೆ ಮಾಡುತ್ತಿದ್ದೇವೆ. ಮಧ್ಯಲೋಕದ ರಚನೆಯಲ್ಲಿ ಈಗ ಮೇರು ಪರ್ವತಗಳ ವರ್ಣನೆಯನ್ನು ನೋಡೋಣ. ಎರಡೂವರೆ ದ್ವೀಪಗಳ ರಚನೆಯಲ್ಲಿ ಮೇರು ಪರ್ವತಗಳು ಎಲ್ಲಿ ಕಂಡು ಬರುತ್ತವೆಯೆಂಬುದನ್ನು ನಾವು ನೋಡಿದ್ದೆವು. ಜಂಬೂದ್ವೀಪದ ಮಧ್ಯದಲ್ಲಿ ಒಂದು, ಪೂರ್ವ ಧಾತಕೀ ಖಂಡ, ಪಶ್ಚಿಮ ಧಾತಕಿ ಖಂಡದಲ್ಲಿ ಒಂದೊಂದು ಮತ್ತು ಪೂರ್ವ ಪುಷ್ಕರಾರ್ಧ, ಪಶ್ಚಿಮ ಪುಷ್ಕರಾರ್ಧದಲ್ಲಿ ಒಂದೊಂದು ಹೀಗೆ ಒಟ್ಟು ಐದು ಮೇರು ಪರ್ವತಗಳಿವೆ. ಅವುಗಳ ಹೆಸರು ಕ್ರಮದಿಂದ - ೧) ಸುದರ್ಶನ ಮೇರು, ೨) ವಿಜಯ ಮೇರು, ೩) ಅಚಲ ಮೇರು, ೪) ಮಂದರ ಮೇರು ಮತ್ತು ೫) ವಿದ್ಯುನ್ಮಾಲಿ ಮೇರು - ಎಂಬುದಾಗಿ ಇರುವುದು ನಮಗೆಲ್ಲ ತಿಳಿದಿರುವ ವಿಷಯವಿದೆ.

ಎಲ್ಲಕ್ಕಿಂತ ಮೊದಲು ನಾವು ಸುದರ್ಶನ ಮೇರುವಿನ ರಚನೆಯನ್ನು ನೋಡೋಣ. ಉಳಿದ ನಾಲ್ಕು ಮೇರುಗಳ ರಚನೆಯು ಸಮಾನವಿದೆ ಆದರೆ ಸುದರ್ಶನ ಮೇರುವಿನಿಂದ ಭಿನ್ನವಿರುವ ರಚನೆಯ ಚರ್ಚೆಯನ್ನು ನಂತರ ನೋಡಬಹುದಾಗಿದೆ.

ಜಂಬೂದ್ವೀಪದ ೫ನೇ ನಂಬರಿನ ಚಾರ್ಟ ನೋಡುವುದು. ಒಂದು ಲಕ್ಷ ಯೋಜನ ವ್ಯಾಸವುಳ್ಳ ಜಂಬೂದ್ವೀಪದ ಮಧ್ಯದಲ್ಲಿ ಮೇರುವಿನ ವ್ಯಾಸವು - ಸಮತಲ ಭೂಮಿಯ ಮೇಲೆ ಅದರ ಅಗಲವು ೧೦೦೦೦ ಯೋಜನವಿದೆ. ಅದರ ಪೂರ್ವ ಮತ್ತು ಪಶ್ಚಿಮದಲ್ಲಿ ೨೨೦೦೦-೨೨೦೦೦ ಯೋಜನವುಳ್ಳ ಭದ್ರಶಾಲವನಗಳಿವೆ. ಮೇರುವಿನ ದಕ್ಷಿಣ ಮತ್ತು ಉತ್ತರದಲ್ಲಿ ಈ ವನದ ಅಗಲವು ೨೫೦ ಯೋಜನವಿದ್ದು ಅದು ೨೨೦೦೦ ದ ೮೮ನೆಯ ಒಂದು ಭಾಗವಿದೆ. ಭದ್ರಶಾಲ ವನಗಳ ಪೂರ್ವ-ಪಶ್ಚಿಮದಲ್ಲಿ ವಿದೇಹ ಕ್ಷೇತ್ರಗಳಿವೆ. ಇವುಗಳ ರಚನೆಯನ್ನಂತೂ ನಾವು ನೋಡಿಯಾಗಿದೆ.

ಸುಮೇರು ಅರ್ಥಾತ್ ಸುದರ್ಶನ ಮೇರು ಪರ್ವತವು ಒಂದು ಲಕ್ಷ ಯೋಜನ ಪ್ರಮಾಣ ಎತ್ತರವಿದೆಯೆಂಬುದನ್ನು ನಾವು ಅನೇಕ ಬಾರಿ ಆಲಿಸಿದ್ದೇವೆ. ಇದರ ಎತ್ತರವು ೧ ಲಕ್ಷ ಮತ್ತು ೪೦ ಯೋಜನವಿದೆ. ೪೦ ಯೋಜನದ್ದು ಇದರ ಚೂಲಿಕೆಯಿದೆ ಮತ್ತು ೧೦೦೦ ಯೋಜನ ಪೃಥ್ವಿಯ ಒಳಗೆ ಇದರ ಮೂಲವಿದೆ (ತಳಹದಿಯಿದೆ) ಎಷ್ಟು ದಪ್ಪದಾದ ಚಿತ್ರಾ ಪೃಥ್ವಿಯಿದೆ ಅಷ್ಟೇ ಇದರ ಮೂಲವಿದೆ. ಭೂಮಿಯ ಮೇಲೆ ಇದರ ಎತ್ತರವು ೯೯೦೪೦ ಯೋಜನವಿದೆ.

ಭೂಮಿಯ ಮೇಲೆ ಇದರ ವ್ಯಾಸವು ೧೦೦೦೦ ಯೋಜನವಿದೆ ಮತ್ತು ೯೯೦೦೦ ಯೋಜನ ಮೇಲೆ ಹೋದ ಮೇಲೆ ಎಲ್ಲಿ ಪಾಂಡುಕವಿದೆಯೋ ಅಲ್ಲಿ ಇದರ ವ್ಯಾಸವು ೧೦೦೦ ಯೋಜನ ಉಳಿಯುತ್ತದೆ. ಆದರೆ ಈ ವ್ಯಾಸವು ಸಮಾನರೂಪದಿಂದ ಕಡಿಮೆಯಾಗುವುದಿಲ್ಲ. ಹಾಗಾದರೆ ಯಾವ ಪ್ರಕಾರ ಕಡಿಮೆಯಾಗುತ್ತದೆ. ಎಷ್ಟು ಎತ್ತರದ ಮೇಲೆ ಏನಿದೆಯೆಂಬುದನ್ನು ನೋಡೋಣ. ಅದರ ಸಲುವಾಗಿ ನಾವು ಸುಮೇರು ಪರ್ವತದ ೧೦ನೇ ನಂಬರಿನ ಚಾರ್ಟ ನೋಡಬೇಕಾಗುವುದು.

ಮೇರು ಪರ್ವತದ ಸುತ್ತಲೂ ಅರ್ಥಾತ್ ನಾಲ್ಕೂ ಕಡೆಗೆ ಭದ್ರಶಾಲವನವಿದೆ. ಇಲ್ಲಿ ಮೇರು ಪರ್ವತದ ಪೂರ್ವಾದಿ ದಿಕ್ಕುಗಳಲ್ಲಿ ನಾಲ್ಕು ಜಿನಮಂದಿರಗಳಿವೆ ಅವು ಅಕೃತ್ರಿಮವಿವೆ. ಎಲ್ಲ ಅಕೃತ್ರಿಮ ಚೈತ್ಯಾಲಯಗಳ ಸ್ವರೂಪವನ್ನು ನಾವು ನಂತರ ನೋಡುವುದಿದೆ. ಭೂಮಿ ತಳದಿಂದ ೫೦೦ ಯೋಜನ ಮೇಲೆ ಹೋದ ಮೇಲೆ ಕಟನಿ ಇರುತ್ತದೆ. ಕಟನಿಯ ಅರ್ಥವು ಇಲ್ಲಿ ಪರ್ವತವು ಎಲ್ಲ ಕಡೆಯಿಂದ ೫೦೦-೫೦೦ ಯೋಜನದಷ್ಟು ಅಗಲವು ಕಡಿಮೆಯಾಗಿ ಒಳಗೆ / \ ಹೋಗುತ್ತದೆ. ಅಲ್ಲಿ ೫೦೦ ಯೋಜನದ ಸಮತಲ ಭೂಮಿ (ಪ್ರದೇಶ)ಯುಂಟಾಗುತ್ತದೆ ಅಲ್ಲಿ ೫೦೦ ಯೋಜನ ಅಗಲಳತೆಯುಳ್ಳ ವನಗಳಿರುತ್ತವೆ. ಎಂದರೆ ಭೂಮಿಯಿಂದ ೫೦೦ ಯೋಜನ ಮೇಲೆ ಹೋದ ಮೇಲೆ ಈ ಯಾವ ಪ್ರಥಮ ಕಟನಿಯಿದೆ ಅಲ್ಲಿ ನಂದನವನವಿದೆ. ಅಲ್ಲಿಯೂ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಜಿನಮಂದಿರವಿದೆ.

ಅಲ್ಲಿಂದ ೬೨೫೦೦ ಯೋಜನ ಮೇಲೆ ಹೋದ ಮೇಲೆ ಎರಡನೆಯ ಕಟನಿಯಿದೆ (ಕೊರೆತವಿದೆ) ಅಲ್ಲಿ ಸೌಮನಸವನವಿದೆ, ಅದು ಕೂಡ ೫೦೦ ಯೋಜನ ಅಗಲವಿದೆ ಮತ್ತು ಅಲ್ಲಿಯೂ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಜಿನಮಂದಿರಗಳಿವೆ. ಅಲ್ಲಿಂದ ೩೬೦೦೦ ಯೋಜನ ಮೇಲೆ ಹೋದ ಮೇಲೆ ಯಾವ ಕಟನಿಯಿದೆ ಅಲ್ಲಿ ಪಾಂಡುಕವನವಿದೆ. ಇಲ್ಲಿ ಪರ್ವತದ ವ್ಯಾಸವು ೧೦೦೦ ಯೋಜನ ಉಳಿದು ಬಿಡುತ್ತದೆ ಆದರೆ ಮಧ್ಯದಲ್ಲಿ ಚೂಲಿಕೆಯ ವ್ಯಾಸವು ೧೨ ಯೋಜನವಿದೆ ಅರ್ಥಾತ್ ಮಧ್ಯಬಿಂದುವಿನಿಂದ ಒಂದು ಕಡೆಗೆ ಆರು ಯೋಜನ ಚೂಲಿಕೆಯನ್ನು ಬಿಟ್ಟು ಉಳಿದ ೪೯೪ ಯೋಜನದ್ದು ಇಲ್ಲಿಯ ಕಟನಿಯಿದೆ ಮತ್ತು ಅಷ್ಟೇ ಅಗಲವಾದ ಪಾಂಡುಕ ವನವಿದೆ. ಇಲ್ಲಿಯೂ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಜಿನ ಮಂದಿರವಿದೆ. ಈ ಪ್ರಕಾರ ಮೇರು ಪರ್ವತದ ಮೇಲೆ ಒಟ್ಟು ಹದಿನಾರು ಅಕೃತ್ರಿಮ ಚೈತ್ಯಾಲಯಗಳಿವೆ - ಭದ್ರಶಾಲವನದಲ್ಲಿ ನಾಲ್ಕು, ನಂದನ ವನದಲ್ಲಿ ನಾಲ್ಕು, ಸೌಮನಸ ವನದಲ್ಲಿ ನಾಲ್ಕು ಮತ್ತು ಪಾಂಡುಕ ವನದಲ್ಲಿ ನಾಲ್ಕು ಹೀಗೆ ಹದಿನಾರು ಜಿನಗೃಹಗಳಿವೆ.

ತಾವು ಚಾರ್ಟ ನಂ. ೧೦ ನ್ನು ಸ್ವಲ್ಪ ಸೂಕ್ಷ್ಮತೆಯಿಂದ ನೋಡುವುದು. ಭೂಮಿಯ ಒಳಗೆ ಮೇರು ಪರ್ವತದ ಮೂಲವನ್ನು ೧೦೦೦ ಯೋಜನವೆಂದು ಹೇಳಲಾಗಿದೆ. ಭೂಮಿಯ ಸಮತಲದ ಮೇಲೆ ಭದ್ರಶಾಲವನವಿದೆ, ಅಲ್ಲಿಂದ ೫೦೦ ಯೋಜನ ಮೇಲೆ ಇರುವಂಥ ಕಟನಿಯಲ್ಲಿ ನಂದನ ವನವಿದೆ. ಅಲ್ಲಿಂದ ೬೨೫೦೦ ಯೋಜನ ಮೇಲೆ ಹೋದಾಗ ಸೌಮನಸ ವನ ಸಂಬಂಧದ ಕಟನಿಯಿದೆ. ಆದರೆ ಇವುಗಳಲ್ಲಿನ ೧೧೦೦೦ ಯೋಜನದವರೆಗೆ ಮೇರು ಪರ್ವತದ ಅಗಲವು ಸಮಾನವಿದೆ ಮತ್ತು ಅದರ ನಂತರ ಉಳಿದ ೫೧೫೦೦ ಯೋಜನದವರೆಗೆ ಕ್ರಮದಿಂದ ಅದರ ಅಗಲವು ಕಡಿಮೆಯಾಗುತ್ತ ಹೋಗುತ್ತದೆ.

ಸೌಮನಸವನದಿಂದ ೩೬೦೦೦ ಯೋಜನ ಎತ್ತರದ ಮೇಲೆ ಪಾಂಡುಕ ವನವಿದೆ ಆದರೆ ಅಲ್ಲಿಯೂ ಸೌಮನಸ ವನದಿಂದ ೧೧೦೦೦ ಯೋಜನ ಎತ್ತರದವರೆಗೆ ಮೇರುವಿನ ಅಗಲವು ಸಮಾನವಿದೆ ಮತ್ತು ಅದರ ಮೇಲೆ ಉಳಿದ ೨೫೦೦೦ ಯೋಜನದವರೆಗೆ ಕ್ರಮದಿಂದ ಕಡಿಮೆಯಾಗುತ್ತ ಹೋಗಿದೆ. ಈ ಯಾವ ಚಿತ್ರಗಳನ್ನು ನಿರ್ಮಿಸಲಾಗಿದೆ ಅವುಗಳನ್ನು ಅದೇ ಅನುಪಾತದಲ್ಲಿ - ಪ್ರಮಾಣದಲ್ಲಿ ನಿರ್ಮಿಸಲಾಗಿದೆ.

ಪಾಂಡುಕ ವನದಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಜಿನಮಂದಿರಗಳಿವೆ ಮತ್ತು ವಿದಿಕ್ಕುಗಳಲ್ಲಿ ನಾಲ್ಕು ಶಿಲೆಗಳಿವೆ. ಅದರಲ್ಲಿ ಈಶಾನ ದಿಕ್ಕಿನಲ್ಲಿ ಪಾಂಡುಕ ಶಿಲೆಯಿದೆ ಅದರ ಹೆಸರನ್ನು ಬಹಳಷ್ಟು ಬಾರಿ ಕೇಳಿದ್ದೇವೆ

ಅಲ್ಲವೇನು ? - ಅಹುದು ಭರತ ಕ್ಷೇತ್ರದ ತೀರ್ಥಂಕರರ ಜನ್ಮಾಭಿಷೇಕವು ಇದರ ಮೇಲೆಯೇ ಆಗುತ್ತದೆ. ಆಗ್ನೇಯ ದಿಕ್ಕಿನಲ್ಲಿ ಪಾಂಡುಕಂಬಲಾ ಶಿಲೆಯಿದೆ, ನೈರುತ್ಯ ದಿಕ್ಕಿನಲ್ಲಿ ರಕ್ತಶಿಲೆಯಿದೆ ಮತ್ತು ವಾಯವ್ಯ ದಿಕ್ಕಿನಲ್ಲಿ ರಕ್ತ ಕಂಬಲಾ ಶಿಲೆಯಿದೆ. ಪಾಂಡುಕಂಬಲಾ ಶಿಲೆಯ ಮೇಲೆ ಪಶ್ಚಿಮ ವಿದೇಹ ಕ್ಷೇತ್ರದ ತೀರ್ಥಂಕರರ, ರಕ್ತಶಿಲೆಯ ಮೇಲೆ ಐರಾವತ ಕ್ಷೇತ್ರದ ತೀರ್ಥಂಕರರ ಮತ್ತು ರಕ್ತಕಂಬಲಾ ಶಿಲೆಯ ಮೇಲೆ ಪೂರ್ವ ವಿದೇಹ ಕ್ಷೇತ್ರದ ತೀರ್ಥಂಕರರ ಜನ್ಮಾಭಿಷೇಕವಾಗುತ್ತದೆ. ಇವೆಲ್ಲ ಶಿಲೆಗಳು ೧೦೦ ಯೋಜನ ಉದ್ದವಿದ್ದು ಅರ್ಧಚಂದ್ರಾಕಾರವಿವೆ, ಮಧ್ಯದಲ್ಲಿ ೫೦ ಯೋಜನ ಅಗಲವಿವೆ ಮತ್ತು ಎಂಟು ಯೋಜನ ದಪ್ಪವಿವೆ. ಚಾರ್ಟದಲ್ಲಿ ನೋಡಿದರೆ ತಿಳಿದು ಬರಬಹುದಾಗಿದೆ.

ಪ್ರತಿಯೊಂದು ಶಿಲೆಯ ಮೇಲೆ ಮೂರು-ಮೂರು ಸಿಂಹಾಸನಗಳಿರುತ್ತವೆ. ಮಧ್ಯದಲ್ಲಿರುವ ಸಿಂಹಾಸನವು ಜಿನೇಂದ್ರದೇವ (ಜಿನ ಬಾಲಕ)ರದಿದೆ - ಅದರ ಮೇಲೆ ಬಾಲಕ ತೀರ್ಥಂಕರನನ್ನು ವಿರಾಜಮಾನ ಮಾಡುತ್ತಾರೆ ಎರಡೂ ಮಗ್ಗಲಿಗೆ ಎರಡು ಭದ್ರಾಸನಗಳಿವೆ ಅವುಗಳ ಮೇಲೆ ಇಂದ್ರರು ವಿರಾಜಿಸುತ್ತಾರೆ. ಪಾಂಡುಕ ಶಿಲೆಯ ಮೇಲೆ ದಕ್ಷಿಣ ದಿಕ್ಕಿನ ಕಡೆಗೆ ಸೌಧರ್ಮ ಇಂದ್ರನ ಭದ್ರಾಸನವಿದೆ ಮತ್ತು ಉತ್ತರದ ಕಡೆಗೆ ಈಶಾನ ಇಂದ್ರನ ಭದ್ರಾಸನವಿದೆ. ಈ ಆಸನಗಳು ಪೂರ್ವ ದಿಕ್ಕಿನ ಸನ್ಮುಖವಿರುತ್ತವೆ.

ಜಿನ ಶಿಶುವಿನ ಜನ್ಮಾಭಿಷೇಕದ ಚಿತ್ರಗಳನ್ನು ನಾವೆಲ್ಲರು ನೋಡಿಯೇ ನೋಡಿದ್ದೇವೆ-ಅನೇಕ ಜಿನಮಂದಿರಗಳಲ್ಲಿ ಗೋಡೆಗಳ ಮೇಲೆ ಎಷ್ಟೊಂದು ಸುಂದರವಾದ ಬೋಧಪ್ರದ ಚಿತ್ರಗಳಿರುತ್ತವೆ. ದೇವಗಳು ಅಲ್ಲಿ ಬಂದು ಕ್ಷೀರ ಸಮುದ್ರದಿಂದ ತುಂಬಿ ತಂದಿರುವ ೧೦೦೮ ಕಲಶಗಳ ಜಲದಿಂದ ಅಭಿಷೇಕ ಮಾಡುತ್ತಾರೆ. ೮-೮ ಯೋಜನ ದೊಡ್ಡ ಕಲಶಗಳಿರುತ್ತವೆ. ಇಲ್ಲಿ ನಿರ್ಮಿಸಿರುವಂಥ ಜಿನಮಂದಿರಗಳಲ್ಲಿ ನಾವು ಕೂಡಯಾವಾಗ ಭಗವಂತರ ಮೂರ್ತಿಗಳನ್ನು ಸ್ಥಾಪನೆ ಮಾಡುತ್ತೇವೆ ಆಗ ಜನ್ಮಾಭಿಷೇಕದ ದೃಶ್ಯಗಳನ್ನು ನೋಡಿದ್ದೇವೆ. ಪ್ರಥಮಾನುಯೋಗದ ಅಥವಾ ಬೇರೆ ಗ್ರಂಥಗಳಲ್ಲಿಯೂ ಜನ್ಮಾಭಿಷೇಕದ ಕುರಿತಾಗಿರುವ ವರ್ಣನೆಯನ್ನು ಓದಿದ್ದೇವೆ. ತೀರ್ಥಂಕರ ಬಾಲಕನ ಜನ್ಮವಾಗುತ್ತಿದ್ದಂತೆಯೇ ಸ್ವರ್ಗದಿಂದ ಇಂದ್ರರು ಬರುತ್ತಾರೆ - ಐರಾವತ ಆನೆಯನ್ನು ತಗೆದುಕೊಂಡು ಬರುತ್ತಾರೆ, ಶಚಿ ಇಂದ್ರಾಣಿಯು ಮಾತೆಯ ಹತ್ತಿರ ಹೋಗಿ ಬಾಲಕ ತೀರ್ಥಂಕರನನ್ನು ಎತ್ತಿಕೊಂಡು ಬರುತ್ತಾಳೆ ಮತ್ತು ಅಲ್ಲಿ ಮಾಯಾಮಯ ಬಾಲಕನನ್ನು ಇರಿಸುತ್ತಾಳೆ. ಇಂದ್ರನು ತೀರ್ಥಂಕರ ಬಾಲಕನನ್ನು ಮೇರು ಪರ್ವತದ ಮೇಲೆ ತಗೆದುಕೊಂಡು ಹೋಗುತ್ತಾನೆ. ಅಲ್ಲಿ ಸಾವಿರಾರು ದೇವಗಳು ಆ ಬಾಲಕ ತೀರ್ಥಂಕರರಿಗೆ ಜನ್ಮಾಭಿಷೇಕ ಮಾಡುತ್ತಾರೆ.

ಇಷ್ಟೊಂದು ಕಲಶಗಳ ಜಲಧಾರೆಯಿಂದ ಅದೇ ದಿವಸ ಜನಿಸಿದ ಬಾಲಕನಿಗೆ ಯಾವ ಬಾಧೆಯಾಗುವುದಿಲ್ಲವೇನು ? - ಇಲ್ಲ. ಅವನಂತೂ ಅತುಲ ಬಲದ ಧಾರಕನಿರುತ್ತಾನೆ . ತದ್ಭವ ಮೋಕ್ಷಗಾಮಿ ಜೀವಗಳಿಗೆ ವಜ್ರವೃಷಭನಾರಾಚ ಸಂಹನನವಿರುತ್ತದೆ. ಉಪಸರ್ಗವು ಅವರಿಗೆ ಏನನ್ನೂ ಮಾಡುವ ಸಾಧ್ಯತೆಯಿಲ್ಲ ಆದಾಗ್ಯೂ ಮುನಿ ಅವಸ್ಥೆಯಲ್ಲಿ ಅವರ ಮೇಲೆ ಯಾವುದಾದರೂ ಉಪಸರ್ಗವಾಗುತ್ತಿದ್ದರೆ ಆ ಉಪಸರ್ಗವನ್ನು ದೂರ ಮಾಡುವ ಭಾವವು ಶ್ರಾವಕರಿಗೆ ಸಹಜವಾಗಿಯೇ ಬರುತ್ತದೆ. ಅವರುಗಳ ರಕ್ಷಣೆಯ ಭಾವವು ಬಾರದೇ ಹೋದರೆ ಅಂಥವರು ಶ್ರಾವಕರೇ ಅಲ್ಲವೆಂದು ಹೇಳಬೇಕಾಗುವುದು. ಪಾರ್ಶ್ವನಾಥ ಮುನಿರಾಜರ ಮೇಲೆ

ಯಾವಾಗ ಉಪಸರ್ಗವಾಗುತ್ತಿತ್ತು - ಅಗ್ನಿ, ಜಲ, ಪಾಷಾಣ, ವಿಷಜಂತುಗಳ ವೃಷ್ಟಿಯಾಗುತ್ತಿತ್ತು, ಆಗ ಧರಣೇಂದ್ರನಿಗೂ ಕೂಡ ಅವರ ರಕ್ಷಣೆಯ ಪರಿಣಾಮವು ಬಂತು ಅದರಿಂದ ಅವನು ಅವರ ಮೇಲೆ ಫಣಾ (ಹೆಡೆಯ) ಮಂಟಪದ ನಿರ್ಮಾಣ ಮಾಡಿದನು.

ಆದರೆ ಜನರು ಯೋಚಿಸುವುದೇನು ? ಯಾರು ಭಗವಂತರ ರಕ್ಷಣೆ ಮಾಡಿದರು ಅವರು ನಮ್ಮ ರಕ್ಷಣೆಯನ್ನೂ ಕೂಡ ಮಾಡುವರು. ಭಗವಂತರಂತೂ ವೀತರಾಗಿಯಿದ್ದಾರೆ; ಅವರು ಏನನ್ನೂ ಮಾಡಲಾರರು ಆದುದರಿಂದ ನಾವು ಇವರ ಪೂಜೆ ಮಾಡಿದರೆ ಇವರಿಗೆ ನಮ್ಮ ಮೇಲೆ ದಯೆಯು ಬಂದು ಬಿಡುವುದು ಮತ್ತು ಇವರು ನಮ್ಮ ಸಂಕಟವನ್ನೂ ನಾಶ ಮಾಡಬಹುದಾಗಿದೆ.

ನೋಡಿರಿ, ನಾವು ಎಷ್ಟೊಂದು ಪ್ರಥಮಾನುಯೋಗದ ಗ್ರಂಥಗಳನ್ನು ಓದಿದ್ದೇವೆ. ಅದರಲ್ಲಂತೂ ಅದೆಷ್ಟೋ ಕಥೆಗಳಲ್ಲಿ ಸ್ವರ್ಗದ ದೇವ-ದೇವಿಯರು ಬಂದು ಜ್ಞಾನಿಗಳ ಸಂಕಟವನ್ನು ದೂರ ಮಾಡಿದರೆಂಬುದನ್ನು ಓದಿದ್ದೇವೆ ಅಲ್ಲವೇನು ? ಆದರೆ ಯಾವೊಂದು ಕಥೆಯಲ್ಲಿಯೂ ಜ್ಞಾನಿಯು ಹೋಗಿ ಅವರ ಪೂಜೆ ಮಾಡಿದನು, ಅವರ ಪಾದಗಳಲ್ಲಿ ನಮಿಸಿದನೆಂದು ಓದಿಲ್ಲ - ಅಂಥ ಘಟನೆಯು ಆಗಮದಲ್ಲಿ ದೊರಕುವುದಿಲ್ಲ. ಅನ್ಯಮತಿಯರಲ್ಲಿ ದೇವಿಯರಿದ್ದಾರೆ - ಕುಲದೇವತೆಗಳಿದ್ದಾರೆ ಆದುದರಿಂದ ನಮ್ಮ ಮುಗ್ಧ ಜೀವ(ಜೈನ)ರು ತಮ್ಮ ದೇವಿಯರನ್ನೂ ನಿರ್ಮಿಸಿಟ್ಟರು ಮತ್ತು ಅವರ ಪೂಜೆ ಮಾಡತೊಡಗಿದರು. ನಮ್ಮ ಜೈನ ಕುಲದಲ್ಲಿ ಜನಿಸಿದ ಪ್ರತಿಯೊಬ್ಬ ಮನುಷ್ಯನು ಅಷ್ಟೇ ಏಕೆ ?- ಚಿಕ್ಕ ಮಕ್ಕಳು ಕೂಡ ಭಗವಂತರಂತೂ ವೀತರಾಗಿಯಿರುತ್ತಾರೆ - ಸರ್ವಜ್ಞರಿರುತ್ತಾರೆಂಬುದನ್ನು ತಿಳಿಯುತ್ತಾರೆ ಮತ್ತು ನಿಜವಾದ ದೇವ, ಶಾಸ್ತ್ರ ಹಾಗೂ ಗುರುವಿನ ಪೂಜೆಯನ್ನೇ ಮಾಡಬೇಕಾಗುತ್ತದೆ - ವಿನಯ ವಂದನೆಗಳನ್ನು ಸಲ್ಲಿಸುವುದಿರುತ್ತದೆ ಎಂಬುದನ್ನೂ ಚೆನ್ನಾಗಿ ತಿಳಿದಿರುತ್ತಾರೆ.

ಪ್ರಶ್ನೆ :- ಕ್ಷೀರ ಸಮುದ್ರದ ನೀರನ್ನು ಶೋಧಿಸದೇ ಬಳಸಬಹುದೇನು ?

ಉತ್ತರ :- ಜಲದಲ್ಲಿ ಕಂಡು ಬರುವ ತ್ರಸ-ಜೀವಗಳು-ಜಲಚರಗಳಂತೂ ಎರಡೂವರೆ ದ್ವೀಪದ ಎರಡು ಸಮುದ್ರಗಳಲ್ಲಿ ಮತ್ತು ಸ್ವಯಂಭೂರಮಣ ಸಮುದ್ರದಲ್ಲಿಯೇ ಇರುತ್ತವೆ. ಅನ್ಯ ಸಮುದ್ರಗಳಲ್ಲಿ ಇರುವುದಿಲ್ಲ. ಅಲ್ಲದೆ ಅವರಂತೂ ಪ್ರಾಸುಕ ವಿಧಿಪೂರ್ವಕವೇ ಕಾರ್ಯ ಮಾಡಬಹುದಾಗಿದೆ.

ಇನ್ನು ಈ ಶಿಲೆಗಳ ವರ್ಣವನ್ನು ನೋಡೋಣ.

ಪಾಂಡುಕ ಶಿಲೆಯು ಸ್ವರ್ಣಮಯವಿದೆ. ಪಾಂಡುಕಾಂಬಲಾವು ರಜತಮಯವಿದೆ, ರಕ್ತಶಿಲೆಯು ಕಾಯ್ದಕಾರ್ತಸ್ವರದ ಸಮಾನವಿದೆ ಮತ್ತು ರಕ್ತಕಂಬಲಾವು ಕೆಂಪು-ರಕ್ತವರ್ಣದ್ದಿದೆ.

ಪಾಂಡುಕವನದ ಮಧ್ಯದಲ್ಲಿ ಚೂಲಿಕೆ ಅರ್ಥಾತ್ ಶಿಖರವಿದೆ. ಇದು ೪೦ ಯೋಜನ ಎತ್ತರವಿದ್ದು ಕೆಳಗೆ ೧೨ ಯೋಜನ ವ್ಯಾಸ ಮತ್ತು ಮೇಲೆ ನಾಲ್ಕು ಯೋಜನ ವ್ಯಾಸವುಳ್ಳ ಈ ಚೂಲಿಕೆಯು ವೈಢೂರ್ಯಮಣಿ (ನೀಲಮಣಿ)ಯದಿದೆ. ಚೂಲಿಕೆಯ ನಾಲ್ಕೂ ಕಡೆಗೆ ೩೦-೩೦ ಹರದಾರಿ ವ್ಯಾಸವುಳ್ಳ ಪ್ರಾಸಾದಗಳಿವೆ. ಪೂರ್ವ ಮೊದಲಾದ ದಿಕ್ಕುಗಳಲ್ಲಿ ಲೋಹಿತಭವನ, ಅಂಜನಭವನ, ಹರಿದ್ರಭವನ ಮತ್ತು ಪಾಂಡುಕಭವನವೆಂಬ ಹೆಸರಿನ ಭವನಗಳು ಲೋಕಪಾಲರವಿವೆ. ಆ ಲೋಕಪಾಲರ ಹೆಸರು ಕ್ರಮದಿಂದ ಸೋಮ, ಯಮ, ವರುಣ

ಮತ್ತು ಕುಬೇರ ಎಂಬುದಾಗಿದೆ. ಇವರಲ್ಲಿ ಸೋಮ ಮತ್ತು ಯಮರ ಆಯುವು ಎರಡೂವರೆ ಪಲ್ಯವಿದೆ ಹಾಗೂ ವರುಣ ಮತ್ತು ಕುಬೇರರ ಆಯುವು ಸ್ವಲ್ಪ ಕಡಿಮೆ ಮೂರು ಪಲ್ಯವಿದೆ. ಸೋಮನ ವರ್ಣವು ಕೆಂಪು, ಯಮನ ವರ್ಣವು ಕಪ್ಪು, ವರುಣನ ವರ್ಣವು ಕಾಂಚನ ಮತ್ತು ಕುಬೇರನ ವರ್ಣವು ಶ್ವೇತವಿದೆ. ಇವರು ಅನೇಕ ಪ್ರಕಾರದ ಆಭೂಷಣಗಳಿಂದ ಯುಕ್ತರಿರುತ್ತಾರೆ. ಸ್ವರ್ಗಗಳಲ್ಲಿಯೂ ಇವರುಗಳ ನಿವಾಸ ಸ್ಥಾನಗಳಿವೆ ಮತ್ತು ಮೇರುವಿನ ಮೇಲೆಯೂ ಇವರ ಭವನಗಳಿವೆ. ಹೇಗೆ ಮುಂಬಯಿ ನಿವಾಸಿಗಳು ಮುಂಬಯಿಯಲ್ಲಿ ಇರುತ್ತಾರೆ ಮತ್ತು ದೇವಲಾಲಿ, ಸೋನಗಢದಲ್ಲಿಯೂ ಮನೆಗಳಿವೆ-ಕೋಣೆಗಳಿವೆ ಅಲ್ಲವೇನು ?

ಪ್ರತಿಯೊಬ್ಬ ಲೋಕಪಾಲನಿಗೆ ಮೂರೂವರೆ ಕೋಟಿ ಗಿರಿಕನ್ಯೆ ಅರ್ಥಾತ್ ವ್ಯಂತರ ದೇವಾಂಗನೆಯರಿರುತ್ತಾರೆ.

ಮೇರು ಪರ್ವತವು ಕೆಳಗಿನಿಂದ ಹಿಡಿದು ೬೧೦೦೦ ಯೋಜನದವರೆಗೆ ಸುವರ್ಣಮಯವಿದ್ದು ಅನೇಕ ಪ್ರಕಾರದ ವರ್ಣಮಯ ರತ್ನಗಳಿಂದ ಸುಶೋಭಿತವಿದೆ ಮತ್ತು ಅದರ ಮೇಲಿನ ಭಾಗವೆಲ್ಲವೂ ಕೇವಲ ಸುವರ್ಣಮಯವಿದೆ -ಸುವರ್ಣದ್ದೇ ಇದೆ. ಚಿನ್ನವೆಂಬ ಹೆಸರು ಕೇಳಿದ ಕೂಡಲೇ ಕಣ್ಣುಗಳಲ್ಲಿ ವಿಶೇಷ ಹೊಳಪು ಬಂದು ಬಿಡುತ್ತದೆ ಅಲ್ಲದೆ ಮೇರು ಪರ್ವತವು ಎಲ್ಲಿದೆಯೆಂಬುದರ ವಿಚಾರವು ಆರಂಭವಾಗುತ್ತದೆ ಅಲ್ಲವೇನು? ಜಿನಮಂದಿರಗಳ ವರ್ಣನೆಯನ್ನಂತೂ ತುಂಬ ವೀತರಾಗ ಭಾವದಿಂದ ಆಲಿಸುತ್ತಿರುತ್ತೇವೆ, ಇರಲಿ !

ಇಲ್ಲಿಯವರೆಗೆ ನಾವು ಸುದರ್ಶನ ಮೇರುವಿನ ವರ್ಣನೆಯನ್ನು ನೋಡಿದೆವು. ಉಳಿದ ನಾಲ್ಕು ಮೇರುಗಳು ಇದಕ್ಕಿಂತ ಕಡಿಮೆ ಎತ್ತರದವಿವೆ ಆದರೆ ನಾಲ್ಕೂ ಸಮಾನವಿವೆ. ಅವುಗಳ ಒಟ್ಟು ಎತ್ತರವು ೮೫೦೦೦ ಯೋಜನವಿದೆ. ೧೦೦೦ ಯೋಜನವಂತೂ ಭೂಮಿಯಲ್ಲಿ ಇವುಗಳ ಮೂಲವಿದೆ ಮತ್ತು ೮೪೦೦೦ ಯೋಜನ ಎತ್ತರವು ಭೂಮಿಯ ಮೇಲೆ ಇದೆ. ಇವುಗಳಲ್ಲಿ ಕೂಡ ಭದ್ರಶಾಲವನ, ನಂದನವನಗಳು ಅದೇ ಕ್ರಮದಿಂದ ಭೂಮಿಯ ಮೇಲೆ ಮತ್ತು ೫೦೦ ಯೋಜನ ಮೇಲೆ ಇವೆ. ಆದರೆ ನಂದನವನದಿಂದ ೫೫೫೦೦ ಯೋಜನ ಮೇಲೆ ಸೌಮನಸವನವಿದೆ, ಆದರೆ ಸುಮೇರು ಪರ್ವತದಲ್ಲಿ ಅದು ೬೫೫೦೦ ಯೋಜನ ಮೇಲೆ ಇದ್ದು ಅಲ್ಲಿಂದ ಪಾಂಡುಕ ವನವು ೨೮೦೦೦ ಯೋಜನ ಮೇಲಿದೆ ಆದರೆ ಸುಮೇರುವಿನಲ್ಲಿ ಅದು ೩೬೦೦೦ ಯೋಜನ ಮೇಲೆ ಇರುವುದನ್ನು ತಿಳಿದಿದ್ದೆವು. ಇವುಗಳಲ್ಲಿಯೂ ಪ್ರತಿಯೊಂದರಲ್ಲಿ ೧೬-೧೬ ಅಕೃತ್ರಿಮ ಜಿನಮಂದಿರಗಳಿವೆ.

ಈ ರೀತಿ ಐದೂ ಮೇರುಗಳಲ್ಲಿ ೧೬ X ೫ = ೮೦ ಜಿನಮಂದಿರಗಳಿವೆ. ಪಂಚ ಮೇರುವಿನ ಪೂಜೆ ಮಾಡುವ ಸಮಯದಲ್ಲಿ ಇನ್ನು ಮುಂದೆ ಇವುಗಳ ರಚನೆಯನ್ನು ಸ್ಮರಿಸಿಕೊಳ್ಳುತ್ತ ಭಾವಪೂರ್ವಕ ಅರ್ಘ್ಯ ಸಮರ್ಪಣೆ ಮಾಡಬೇಕು. ಪೂಜೆಯ ಜಯಮಾಲೆಯು ಹೀಗಿದೆ -

ಪ್ರಥಮ ಸುದರ್ಶನ ಸ್ವಾಮಿ, ವಿಜಯ ಅಚಲ ಮಂದರ ಕಹಾ ।
ವಿದ್ಯುನ್ಮಾಲೀ ನಾಮ, ಪಂಚಮೇರು ಜಗ ಮೇ ಪ್ರಗಟ ॥

ಪ್ರಥಮ ಸುದರ್ಶನ ಮೇರು ವಿರಾಜೈ, ಭದ್ರಶಾಲವನ ಭೂಪರ ಛಾಜೈ ।
ಚೈತ್ಯಾಲಯ ಚಾರೋ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಉಪರ ಪಂಚಶತಕ ಪರ ಸೋಹೈ, ನಂದನವನ ದೇಖತ ಮನ ಮೋಹೈ ।
ಚೈತ್ಯಾಲಯ ಚಾರೋ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಸಾಢೇ ಬಾಸಠ ಸಹಸ ಊಂಚಾಈ, ವನಸೌಮನಸ ಶೋಭೆ ಅಧಿಕಾಈ ।
ಚೈತ್ಯಾಲಯ ಚಾರೋ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಊಂಚಾ ಜೋಜನ ಸಹಸ ಛತ್ತೀಸಂ, ಪಾಂಡುಕವನ ಸೋಹೈ ಗಿರಿಸೀಸಂ ।
ಚೈತ್ಯಾಲಯ ಚಾರೋ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಚಾರೋ ಮೇರು ಸಮಾನ ಬಖಾನೈ, ಭೂಪರ ಭದ್ರಸಾಲ ಚಹು ಜಾನೈ ।
ಚೈತ್ಯಾಲಯ ಸೋಲಹ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಊಂಚೇ ಪಾಂಚ ಶತಕ ಪರ ಭಾಖೇ, ಚಾರೋ ನಂದನವನ ಅಭಿಲಾಖೇ ।
ಚೈತ್ಯಾಲಯ ಸೋಲಹ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಸಾಢೇ ಪಚಪನ ಸಹಸ ಉತಂಗಾ, ವನ ಸೋಮನಸ ಚಾರ ಬಹುರಂಗಾ ।
ಚೈತ್ಯಾಲಯ ಸೋಲಹ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಉಚ್ಚ ಅಟ್ಠಾಇಸ ಸಹಜ ಬತಾಯೇ, ಪಾಂಡುಕ ಚಾರೋ ವನ ಶುಭ ಗಾಯೇ ।
ಚೈತ್ಯಾಲಯ ಸೋಲಹ ಸುಖಕಾರೀ, ಮನವಚತನ ವಂದನಾ ಹಮಾರೀ ॥

ಸುರನರಚಾರಣ ವಂದನ ಆವೇ, ಸೋ ಶೋಭಾ ಹಮ ಕಿಹ ಮುಖ ಗಾವೈ ।
ಚೈತ್ಯಾಲಯ ಅಸ್ಸೀ ಸುಖಕಾರೀ, ಮನವಚತನ ವಂದನಾ ಹಮಾರೀ ॥

ದೋಹೆ

ಪಂಚಮೇರು ಕೀ ಆರತಿ, ಪಢೈ ಸುನೈ ಜೋ ಕೋಯ ।
'ಧ್ಯಾನತ' ಫಲ ಜಾನೈ ಪ್ರಭು, ತುರತ ಮಹಾಸುಖ ಹೋಯ ॥

ಇಲ್ಲಿಯಂತೂ ಕೂಡಲೇ ಮಹಾಸುಖವಾಗುವುದೆಂದು ಹೇಳಿದ್ದಾರೆ.

ಈ ಮೇರು ಪರ್ವತಗಳ, ವನಗಳ, ವನವೇದಿಕೆಗಳ, ತೋರಣಗಳ, ವಾಪಿ-ಕೂಪ ಮೊದಲಾದವುಗಳ ಬಹಳಷ್ಟು ಸುಂದರವಾದ ವರ್ಣನೆಯು ಶಾಸ್ತ್ರಗಳಲ್ಲಿ ಬರುತ್ತದೆ.

ಈಗ ಎರಡನೆಯದಾಗಿ ನಂದೀಶ್ವರ ದ್ವೀಪದ ವಿಷಯವಾಗಿ ಚರ್ಚೆ ಮಾಡೋಣ. ಇದರ ಹೆಸರನ್ನು ನಾವೆಲ್ಲರು ಬಹಳಷ್ಟು ಬಾರಿ ಕೇಳಿದ್ದೇವೆ, ಅಷ್ಟಾಹ್ನಿಕದಲ್ಲಿ ಪೂಜೆ-ವಿಧಾನಗಳನ್ನೂ ಮಾಡುತ್ತೇವೆ, ಅಲ್ಲವೇನು ? ಅಹುದು, ಈಗ ಅದರ ವರ್ಣನೆಯನ್ನು ನೋಡೋಣ - ಆನಂದಿಸೋಣ.

ಮಧ್ಯಲೋಕದಲ್ಲಿ ಅಸಂಖ್ಯ ದ್ವೀಪ ಮತ್ತು ಸಮುದ್ರಗಳಿರುವ ಮಾತನ್ನು ತಿಳಿದುಕೊಂಡಾಗಿದೆ.

ಜಂಬೂದ್ವೀಪದಿಂದ ಹಿಡಿದು ಇದು ಎಂಟನೇ ನಂಬರಿನ ದ್ವೀಪವಿದೆ. ಎಂದರೇನೆ ಏಳು ದ್ವೀಪಗಳು ಮತ್ತು ಏಳು ಸಮುದ್ರಗಳ ನಂತರ ಇದು ಹದಿನೈದನೆಯ ನಂಬರಿನ ಮೇಲೆ ಬರುತ್ತದೆ. ಮೊದಲನೆಯ ಜಂಬೂದ್ವೀಪವು ಒಂದು ಲಕ್ಷ ಯೋಜನ, ಎರಡನೆಯ ಲವಣ ಸಮುದ್ರವು ೨ ಲಕ್ಷ ಯೋಜನ, ಮೂರನೆಯದು ೪ ಲಕ್ಷ ಯೋಜನ, ನಾಲ್ಕನೆಯದು ೮ ಲಕ್ಷ ಯೋಜನ, ಐದನೆಯದು ೧೬ ಲಕ್ಷ ಯೋಜನ, ಆರನೆಯದು ೩೨ ಲಕ್ಷ ಯೋಜನ, ಏಳನೆಯದು ೬೪ ಲಕ್ಷ ಯೋಜನ, ಎಂಟನೆಯದು ೧೨೮ ಲಕ್ಷ ಯೋಜನ, ಒಂಭತ್ತನೆಯದು ೨೫೬ ಲಕ್ಷ ಯೋಜನ, ಹತ್ತನೆಯದು ೫೧೨ ಲಕ್ಷ ಯೋಜನ, ಹನ್ನೊಂದನೆಯದು ೧೦೨೪ ಲಕ್ಷ ಯೋಜನ, ಹನ್ನೆರಡನೆಯದು ೨೦೪೮ ಲಕ್ಷ ಯೋಜನ, ಹದಿಮೂರನೆಯದು ೪೦೯೬ ಲಕ್ಷ ಯೋಜನ, ಹದಿನಾಲ್ಕನೆಯದು ೮೧೯೨ ಲಕ್ಷ ಯೋಜನ ಮತ್ತು ಹದಿನೈದನೆಯದು ೧೬೩೮೪ ಲಕ್ಷ ಯೋಜನದ್ದಿದೆ. ಬೇರೆ ರೀತಿಯಿಂದ ಹೇಳಿದರೆ ಇದು ೧೬೩ ಕೋಟಿ ೮೪ ಲಕ್ಷ ಯೋಜನ ವಿಸ್ತಾರವುಳ್ಳದ್ದಿದೆ. ಈ ನಂದೀಶ್ವರ ದ್ವೀಪವು ಇಷ್ಟು ಅಗಲವಿದೆಯೆಂಬ ಈ ಪ್ರಮಾಣವು ಪೂಜೆಯಲ್ಲಿ ಬರುತ್ತದೆ, ಕೇಳಿದ್ದೇವೆ ಅಲ್ಲವೇನು ?

ಏಕ ಸೌ ತ್ರೇಸಠ ಕೋಡಿ ಜೋಜನ ಮಹಾ,
ಲಾಖ ಚೌರಾಸಿಯಾ ಏಕ ದಿಶ ಮೇ ಲಹಾ ।
ಆಠಮೋ ದ್ವೀಪ ನಂದೀಶ್ವರಂ ಭಾಸ್ವರಂ,
ಭೌನ ಬಾವನ್ನ ಪ್ರತಿಮಾ ನಮೋ ಸುಖಕರಂ ॥

ಭೌನದ ಅರ್ಥವು ಭವನ ಎಂದರೆ ಜಿನಮಂದಿರವಿದೆ. ಅಲ್ಲಿ ದ್ವೀಪದ ನಾಲ್ಕೂ ದಿಕ್ಕುಗಳಲ್ಲಿ ಹದಿಮೂರು-ಹದಿಮೂರು ಅಕೃತ್ರಿಮ ಜಿನಚೈತ್ಯಾಲಯಗಳಿವೆ. ನಾವು ಅಲ್ಲಿಗೆ ಹೋಗುವುದು ಸಾಧ್ಯವಿಲ್ಲ ಆದರೆ ಇಲ್ಲಿಂದಲೇ ತಿಳಿಯುವ ಸಾಧ್ಯತೆಯಿದೆ - ಪ್ರತಿಯೊಂದು ಜಿನಮಂದಿರದಲ್ಲಿ ಸ್ಥಿತವಿರುವ ೧೦೮-೧೦೮ ಜಿನಪ್ರತಿಮೆಗಳಿಗೆ ಇಲ್ಲಿಂದಲೇ ಭಾವ ನಮಸ್ಕಾರ ಮಾಡುವ ಸಾಧ್ಯತೆಯಿದೆ.

ಅಲ್ಲಿಯ ವಿಸ್ತಾರವಾದ ಚರ್ಚೆಯನ್ನು ಮುಂದೆ ಮಾಡಲಾಗುವುದು.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಹದಿನೆಂಟನೆಯ ತೀರ್ಥಂಕರರಾದ
ಮಹಾಭದ್ರ ಭಗವಂತರಿಗೆ ಜಯವಾಗಲಿ.

★★★★★

ನಿಂದೆ ಸ್ತುತಿರೂಪದ ವಚನದಿಂ ಪುದ್ಗಲ ಪರಿಣಮಿಸುವುದು ಬಹುತೆರದಿ ।
ಮಂದಜೀವವದ ಕೇಳಿದು 'ನನಗೆ ಹೇಳಿದ್ದೆ'ಂದು ರೋಷ-ತೋಷವ ಮಾಡುವನು ॥

೧೯. ನಂದೀಶ್ವರ ದ್ವೀಪ

ಶ್ರೀಮದ್ ನೇಮಿಚಂದ್ರ ಆಚಾರ್ಯವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಮೂರು ಲೋಕದ ಸ್ವರೂಪವನ್ನು ತಿಳಿದುಕೊಳ್ಳುವ ಯತ್ನ ಮಾಡುತ್ತಿದ್ದೇವೆ. ನಂದೀಶ್ವರ ದ್ವೀಪವು ಅದು ಎಂಟನೆಯ ದ್ವೀಪ ಮತ್ತು ದ್ವೀಪ-ಸಮುದ್ರಗಳಲ್ಲಿ ಅದರದು ಹದಿನೈದನೆಯ ನಂಬರು (ಕ್ರಮಾಂಕ) ಬರುತ್ತದೆ. ಇಷ್ಟು ಬಾರಿ ದ್ವಿಗುಣ-ದ್ವಿಗುಣ ಮಾಡುತ್ತ-ಮಾಡುತ್ತ ನಾವು ದಣಿದು ಹೋಗಿದ್ದೇವೆ. ಈಗ ಒಂದು ಚಿಕ್ಕ ಕರಣ ಸೂತ್ರದಿಂದ ಇದರ ವಿಸ್ತಾರದ ಪ್ರಮಾಣವನ್ನು ತಿಳಿದುಕೊಳ್ಳೋಣ.

ಒಂದು ಲಕ್ಷದಿಂದ ಪ್ರಾರಂಭವಾಗಿ ಎರಡನೆಯದು ಎರಡು ಲಕ್ಷ, ಮೂರನೆಯದು ನಾಲ್ಕು ಲಕ್ಷ, ನಾಲ್ಕನೆಯದು ಎಂಟು ಲಕ್ಷ, ಅರ್ಥಾತ್ ಎರಡನೆಯದರ ಸಲುವಾಗಿ ೨ ಪಟ್ಟು ಮಾಡಿತು ಮೂರನೆಯದರ ಸಲುವಾಗಿ ೨ X ೨ ಮಾಡಿತು, ನಾಲ್ಕನೆಯದರ ಸಲುವಾಗಿ ೨ X ೨ X ೨ ಮಾಡಲಾಯಿತೆಂದ ಮೇಲೆ ಹದಿನೈದನೆಯದರ ಸಲುವಾಗಿ ಎರಡು ಸಂಖ್ಯೆಯನ್ನು ಹದಿನಾಲ್ಕು ಬಾರಿ ಬರೆದು ಒಂದರಿಂದ ಒಂದನ್ನು ಗುಣಿಸುತ್ತ ಹೋಗಬೇಕಾಗುವುದು. ಕರಣಾನುಯೋಗದ ಭಾಷೆಯಲ್ಲಿ ಹೇಳಿದರೆ ಹದಿನಾಲ್ಕು ಯಾವುದರ ಅರ್ಧಚ್ಛೇದವಿದೆ ಅಂಥ ಸಂಖ್ಯೆಯು ೧೬೩೮೪ ಇದೆ, ಅದುವೇ ನಮ್ಮ ಪ್ರಮಾಣವಿದೆ.

ಯಾವುದನ್ನು ಅರ್ಧಚ್ಛೇದವೆಂದು ಹೇಳುವುದು ? ಆಧುನಿಕ ಗಣಿತದಲ್ಲಿ ಇದನ್ನು 'ಲಾಗ ಟೂ' ಎನ್ನುತ್ತಾರೆ. ಯಾವುದೋ ಒಂದು ಸಂಖ್ಯೆಯನ್ನು ಎರಡರಿಂದ ಎಷ್ಟು ಬಾರಿ ಭಾಗಿಸಿದರೆ ೮ ಬರುತ್ತದೆ, ಎರಡನೆಯ ಬಾರಿ ಭಾಗಿಸಿದಾಗ ೪ ಬರುತ್ತದೆ, ಮೂರನೆಯ ಬಾರಿ ಭಾಗಿಸಿದಾಗ ೨ ಬರುತ್ತದೆ, ನಾಲ್ಕನೆಯ ಬಾರಿ ಭಾಗಿಸಿದಾಗ ೧ ಬರುತ್ತದೆ ಎಂದರೆ ೧೬ ನ್ನು ೨ ಅಂಕಿ (ಸಂಖ್ಯೆ)ಯಿಂದ ನಾಲ್ಕು ಬಾರಿ ಭಾಗಿಸಿದ ಮೇಲೆ ೧ ಬರುತ್ತದೆ, ಬೇರೆ ಶಬ್ದದಿಂದ ಹೇಳಿದರೆ ೨ X ೨ X ೨ X ೨ = ೧೬ ಆದುದರಿಂದ ಹದಿನಾರರ ಅರ್ಧಚ್ಛೇದವು ನಾಲ್ಕು ಇದೆ. ಒಂದು ವೇಳೆ ನಾವು ೧೬ ರ ವರ್ಗ ಮಾಡಿದರೆ ಆ ರಾಶಿಯು ೨೫೬ ಆಗುತ್ತದೆ. ಮತ್ತು ಆ ರಾಶಿಯ ಅರ್ಧಚ್ಛೇದವು ನಾಲ್ಕರಿಂದ ದ್ವಿಗುಣ ಎಂದರೆ ಎಂಟು ಆಗುತ್ತದೆ. ಒಂದು ವೇಳೆ ನಾವು ೨೫೬ ರ ವರ್ಗ ೬೫೫೩೬ ನ್ನು ನೋಡಿದರೆ ಅದರ ಅರ್ಧಚ್ಛೇದವು ೧೬ ಬರುತ್ತದೆ. ನಮಗೆ ಇಲ್ಲಿ ೧೪ ಅರ್ಧಚ್ಛೇದವು ಬೇಕಾಗಿತ್ತು, ೧೬-೨ ಮಾಡಿದರೆ ೧೪ ಬರುತ್ತದೆ ಆದುದರಿಂದ ೨ ಯಾವುದರ ಅರ್ಧಚ್ಛೇದವಿದೆ ಅಂಥ ನಾಲ್ಕು ಸಂಖ್ಯೆಯಿಂದ ೬೫೫೩೬ರನ್ನು ಭಾಗಿಸಿದ ಮೇಲೆ ೬೫೫೩೬ ೪ = ೧೬೩೮೪ ಬರುತ್ತದೆ. ಇದಂತೂ ನಂದೀಶ್ವರ ದ್ವೀಪದ ಅಗಲವಿದೆ - ಒಂದು ದಿಕ್ಕಿನಲ್ಲಿ ವಿಸ್ತಾರವಿದೆ. ಮಧ್ಯಬಿಂದುವಿನಿಂದ ಅದು ಎಷ್ಟು ದೂರದಲ್ಲಿದೆ ಎಂಬುದರ ಅಳತೆಯು ಇದಲ್ಲ. ಅದನ್ನು ಕಂಡು ಹಿಡಿಯುವ ಸಲುವಾಗಿಯೂ ಕರಣ ಸೂತ್ರವಿದೆ, ಆದರೆ ಅದನ್ನು ಗೌಣ ಮಾಡಿ ನಾವು ಈಗ ಮುಂದೆ ಸಾಗೋಣ.

ಈ ಹದಿನೈದನೆಯ ನಂಬರಿನವರೆಗೆ ಯಾವ-ಯಾವ ದ್ವೀಪ ಸಮುದ್ರಗಳಿವೆ ಅವನ್ನು ನೋಡೋಣ. ಅವು ಕ್ರಮದಿಂದ ಈ ಪ್ರಕಾರವಿವೆ - ೧) ಜಂಬೂದ್ವೀಪ, ೨) ಲವಣ ಸಮುದ್ರ, ೩) ಧಾತಕೀ ಖಂಡದ್ವೀಪ, ೪) ಕಾಲೋದಧಿ ಸಮುದ್ರ, ೫) ಪುಷ್ಕರವರ ದ್ವೀಪ, ೬) ಪುಷ್ಕರವರ ಸಮುದ್ರ, ೭) ವಾರುಣೀವರ ದ್ವೀಪ,

೮) ವಾರುಣೀವರ ಸಮುದ್ರ, ೯) ಕ್ಷೀರವರ ದ್ವೀಪ, ೧೦) ಕ್ಷೀರವರ ಸಮುದ್ರ, ೧೧) ಘೃತವರ ದ್ವೀಪ, ೧೨)ಘೃತವರ ಸಮುದ್ರ, ೧೩) ಕ್ಷೌದ್ರವರ ದ್ವೀಪ, ೧೪) ಕ್ಷೌದ್ರವರ ಸಮುದ್ರ, ೧೫) ನಂದೀಶ್ವರ ದ್ವೀಪ.

ವರ್ಷದಲ್ಲಿ ಮೂರು ಬಾರಿ ಮೂರೂ ಅಷ್ಟಾಹ್ನಿಕಗಳಲ್ಲಿ ನಾವು ನಂದೀಶ್ವರ ದ್ವೀಪದ ಅಕೃತ್ರಿಮ ಜಿನ ಚೈತ್ಯಾಲಯಗಳ ಪೂಜೆ ಮಾಡುತ್ತೇವೆ. ಪೂಜೆಯಲ್ಲಿ ಬರುತ್ತದೆಯಲ್ಲವೇನು, 'ಕಾರ್ತಿಕ, ಫಾಲ್ಗುಣ, ಸಾಢ ಕೇ ಅಂತ ಆಠ ದಿನ ಮಾಹಿ' ಇದರ ಅರ್ಥವು ಕಾರ್ತಿಕ, ಫಾಲ್ಗುಣ ಮತ್ತು ಆಷಾಢದ ಶುಕ್ಲ ಪಕ್ಷದಲ್ಲಿ ಅಷ್ಟಮಿಯಿಂದ ಪೌರ್ಣಿಮೆಯವರೆಗಿನ ಎಂಟು ದಿವಸವೆಂಬುದಾಗಿದೆ. ಇದನ್ನೇ ತಿಂಗಳಿನ ಕೊನೆಯ ದಿನಗಳೆಂದು ಹೇಳಿದ್ದಾರೆ.

ಇಲ್ಲಿ ನಮ್ಮಗಳ ಮನಸ್ಸಿನಲ್ಲಿ ಪ್ರಶ್ನೆಯು ಮೂಡಿ ಬರುವುದು ಸ್ವಾಭಾವಿಕವಿದೆ, ನಾವಂತೂ ಅಮಾವಾಸ್ಯೆಯನ್ನು ತಿಂಗಳಿನ ಕೊನೆಯೆಂದು ಹೇಳುತ್ತೇವೆ. ಉತ್ತರ ಭಾರತದ ಹಿಂದೀ ಪ್ರಾಂತಿಯರು ಪೌರ್ಣಿಮೆಗೆ ಎಂದರೆ ಪೂರ್ಣಮಾಸಿಗೆ ತಿಂಗಳು ಸಮಾಪ್ತವಾಗುತ್ತದೆಯೆಂದು ಮನ್ನಿಸುತ್ತಾರೆ. ಅವರ ಹೊಸ ತಿಂಗಳು ಕೃಷ್ಣ ಪಕ್ಷದಿಂದ ಆರಂಭವಾಗುತ್ತದೆ. ದಕ್ಷಿಣದವರು ಕನ್ನಡ ಮರಾಠಿ ಪ್ರಾಂತದವರು ಅಮಾವಾಸ್ಯೆಗೆ ತಿಂಗಳು ಸಮಾಪ್ತವಾಗುತ್ತದೆಂದು ಮನ್ನಿಸುತ್ತಾರೆ ಅವರುಗಳ ಹೊಸ ತಿಂಗಳು ಶುಕ್ಲ ಪಕ್ಷದಿಂದ ಆರಂಭವಾಗುತ್ತದೆ. ಪ್ರತಿ ತಿಂಗಳಿನ ಶುಕ್ಲಪಕ್ಷವು ಕನ್ನಡ, ಮರಾಠಿ ಮತ್ತು ಗುಜರಾಥಿಯರ ದಿನದರ್ಶಿಕೆಯಲ್ಲಿ ಸಮಾನವೇ ಇರುತ್ತದೆ; ಹೇಗೆಂದರೆ ಚೈತ್ರ ಶುಕ್ಲ ಪ್ರತಿಪದೆಯಿಂದ ಚೈತ್ರ ಶುಕ್ಲ ಪೌರ್ಣಿಮೆಯವರೆಗೆ ಆದರೆ ಯಾವಾಗ ಇವರುಗಳ ದಿನದರ್ಶಿಕೆಯಲ್ಲಿ ಚೈತ್ರ ಕೃಷ್ಣ ೧ ರಿಂದ ಚೈತ್ರ ಕೃಷ್ಣ ೧೫ (ಅಮಾವಾಸ್ಯೆ) ಎಂದು ಬರೆದಿರುತ್ತಾರೆ ಆ ಸ್ಥಾನದೊಳಗೆ ಹಿಂದಿ ಪ್ರಾಂತದವರ ದಿನದರ್ಶಿಕೆಯಲ್ಲಿ ವೈಶಾಖ ಕೃಷ್ಣ ೧ ರಿಂದ ವೈಶಾಖ ಕೃಷ್ಣ ೧೫ ಬರೆದಿರುತ್ತಾರೆ. ಅದರ ನಂತರ ವೈಶಾಖ ಶುಕ್ಲ ೧ ರಿಂದ ೧೫ ದಿನಗಳ ಕುರಿತಾಗಿಯಂತೂ ಸಮಾನತೆಯಿರುತ್ತದೆ. ಯಾವಾಗ ಗುಜರಾಥಿ ಮೊದಲಾದವರೆಲ್ಲ ವೈಶಾಖ ಕೃಷ್ಣವೆನ್ನುತ್ತಾರೆ ಆಗ ಹಿಂದಿ ಪ್ರಾಂತದವರು ಜೇಷ್ಠ ಕೃಷ್ಣವೆನ್ನುತ್ತಾರೆ.

ದೀಪಾವಳಿಯಲ್ಲಿ ಮಹಾವೀರ ನಿರ್ವಾಣೋತ್ಸವದ ಸಲುವಾಗಿ ಹಿಂದಿ ಭಾಷೆಯವರು ಕಾರ್ತಿಕ ಕೃಷ್ಣ ಅಮಾವಾಸ್ಯೆಯೆಂದು ಹೇಳುತ್ತಾರೆ ಮತ್ತು ಕನ್ನಡ-ಮರಾಠಿ-ಗುಜರಾಥಿ ಭಾಷೆಯವರು ಆಶ್ವಿನ ಕೃಷ್ಣ ಅಮಾವಾಸ್ಯೆಯೆಂದು ಹೇಳುತ್ತಾರೆ. ಇನ್ನು ನಮ್ಮ ಬಹಳಷ್ಟು ಪೂಜೆಗಳನ್ನು ಹಿಂದಿ ಭಾಷೆಯ ಕವಿಗಳು ಬರೆದಿದ್ದಾರೆ. ಆದರೆ ನಾವು ಅದರ ಅನುಸಾರ ಯಾವಾಗ ನಮ್ಮ ದಿನದರ್ಶಿಕೆಯನ್ನು ನೋಡುತ್ತೇವೆ ಆಗ ಪೂಜೆಯಲ್ಲಿ ತೀರ್ಥಂಕರರುಗಳ ಕಲ್ಯಾಣಕ ತಿಥಿಗಳಲ್ಲಿ ವ್ಯತ್ಯಾಸವು ಗಮನಕ್ಕೆ ಬರುತ್ತದೆ. ಅವುಗಳ ಕಡೆಗೆ ಗಮನವನ್ನೇ ಹರಿಸದೇ ಪೂಜೆ ಮಾಡಿಕೊಂಡು ಹೋಗುವುದೂ ಆಗುತ್ತದೆ ಏಕೆಂದರೆ ಈಗ ಚೈತ್ರ, ವೈಶಾಖಾದಿ ತಿಂಗಳುಗಳ ಕಡೆಗೆ ನಮ್ಮದು ಲಕ್ಷ್ಯವಿಲ್ಲ ಎಂದರೆ ಜನೇವರಿ ಮೊದಲಾದ ತಿಂಗಳ ಗಣನೆಯು ವ್ಯವಹಾರದಲ್ಲಿದೆ.

ಈ ಅಷ್ಟಾಹ್ನಿಕ ಪರ್ವಗಳಲ್ಲಿ ಸೌಧರ್ಮ ಮೊದಲಾದ ಹನ್ನೆರಡು ಕಲ್ಪಗಳ ಇಂದ್ರರು, ಅನ್ಯ ಕಲ್ಪವಾಸೀ ದೇವಗಳು, ಜ್ಯೋತಿಷ, ವ್ಯಂತರ, ಭವನವಾಸೀ ದೇವಗಳು ನಂದೀಶ್ವರ ದ್ವೀಪಕ್ಕೆ ಹೋಗುತ್ತಾರೆ. ಅವರೆಲ್ಲರೂ ತಮ್ಮ-ತಮ್ಮ ವಾಹನಗಳಲ್ಲಿ ಆರೂಢರಾಗಿ ಹೋಗುತ್ತಾರೆ. ಅದನ್ನೆಲ್ಲ ನಾವು ನಂತರ ನೋಡೋಣ. ಅದಕ್ಕಿಂತ ಮೊದಲು ಪರ್ವತಗಳ ಮೇಲೆ ವಿರಾಜಮಾನವಿರುವ ಈ ಐವತ್ತೆರಡು ಜಿನಚೈತ್ಯಾಲಯಗಳು ಎಲ್ಲಿವೆಯೆಂಬುದನ್ನು ನೋಡೋಣ.

ನಂದೀಶ್ವರ ದ್ವೀಪದ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಹದಿಮೂರು-ಹದಿಮೂರು ಪರ್ವತಗಳಿವೆ ಮತ್ತು ಅವುಗಳ ಮೇಲೆ ಜಿನಮಂದಿರಗಳು ಸ್ಥಿತವಿವೆ. ಇದರ ಸಲುವಾಗಿ ತಾವು ೧೧ ನೇ ನಂಬರಿನ ಚಾರ್ಟ ನೋಡಬೇಕು.

ಚಾರ್ಟದಲ್ಲಿ ದೊಡ್ಡದಾದ ಹಳದಿ ವರ್ಣದ್ದು ನಂದೀಶ್ವರ ದ್ವೀಪವಿದೆ. ಅದರ ಅಭ್ಯಂತರ ಒಳಗೆ ಏಳು ದ್ವೀಪಗಳು ಮತ್ತು ಏಳು ಸಮುದ್ರಗಳಿವೆ. ಅಲ್ಲಿ ೧೬೩೮೪೦೦೦೦೦ ಯೋಜನ ಇದರ ಅಗಲವಿದೆ. ಪ್ರತಿಯೊಂದು ದಿಕ್ಕಿನಲ್ಲಿ ಯಾವ ಈ ರಚನೆಗಳಿವೆ ಅವಂತೂ ವಿಹಂಗಮ ದೃಶ್ಯವಿದೆ - ಮೇಲಿನಿಂದ ಹೇಗೆ ಕಂಡು ಬರುತ್ತದೆಯೆಂಬುದನ್ನು ತೋರಿಸಲಾಗಿದೆ. ಅದರಲ್ಲಿ ಮಧ್ಯದೊಳಗೆ ಕಪ್ಪು ವರ್ಣದ ದುಂಡಗಿನ ಆಕಾರದ್ದು ಕಂಡು ಬರುತ್ತಿರುವಂಥವು ಅಂಜನಗಿರಿ ಪರ್ವತಗಳಿವೆ. ಇವು ೮೪೦೦೦ ಯೋಜನ ಎತ್ತರವಿವೆ ಮತ್ತು ಇವುಗಳ ವ್ಯಾಸವು ಕೂಡ ೮೪೦೦೦ ಯೋಜನದ್ದಿದೆ. ಭೂಮಿಯ ಒಳಗೆ ೧೦೦೦ ಯೋಜನ ಇವುಗಳ ಮೂಲವಿದೆ. ಈ ಪರ್ವತಗಳು ಡೊಳ್ಳು ಎಂದರೆ ಭೇರಿಯ ಹಾಗೆ ದುಂಡಗಿನ ಆಕಾರದವಿವೆ ಅರ್ಥಾತ್ ಕೆಳಗೆ, ಮಧ್ಯದಲ್ಲಿ ಮತ್ತು ಮೇಲೆ ಸಮಾನ ಅಗಲವಾಗಿರುತ್ತವೆ. ಇವುಗಳ ಮೇಲೆ ಶಿಖರದಂಥ-ಗೋಪುರದಂಥ ರಚನೆಯಿರುವುದಿಲ್ಲ. ಅಂಜನದ ಹಾಗೆ ಕಪ್ಪು ವರ್ಣದವಿರುವುದರಿಂದ ಇವುಗಳ ಹೆಸರು ಅಂಜನಗಿರಿಯಿದೆ. ಪ್ರತಿಯೊಂದು ಅಂಜನಗಿರಿಯ ಮೇಲೆ ಒಂದೊಂದು ಅಕೃತ್ರಿಮ ಚೈತ್ಯಾಲಯವಿದೆ.

ಅಂಜನಗಿರಿಯ ನಾಲ್ಕೂ ಕಡೆಗೆ ಐವತ್ತು-ಐವತ್ತು ಸಾವಿರ ಯೋಜನದ ಅಂತರವನ್ನು ಬಿಟ್ಟು ವನಗಳಿವೆ ಅವುಗಳ ಅಗಲಳತೆಯು ಐವತ್ತು-ಐವತ್ತು ಸಾವಿರ ಯೋಜನದ್ದಿದೆ ಮತ್ತು ಉದ್ದಳತೆಯು ಒಂದೊಂದು ಲಕ್ಷ ಯೋಜನದ್ದಿದೆ. ಆ ವನಗಳ ಹೊರಭಾಗದಲ್ಲಿ ಅರ್ಥಾತ್ ಅಂಜನಗಿರಿಯಿಂದ ಒಂದು ಲಕ್ಷ ಯೋಜನದ ದೂರದ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಸರೋವರಗಳಿವೆ. ಅವು ಸಮತಲವಾಗಿದ್ದು ಒಂದೊಂದು ಲಕ್ಷ ಯೋಜನ ವಿಸ್ತಾರವುಳ್ಳವಿವೆ. ಈ ಸರೋವರಗಳನ್ನು ವಾಪಿ ಅಥವಾ ವಾಪಿಕೆಯೆಂದು ಹೇಳುತ್ತಾರೆ. ನಿರ್ಮಲ ಜಲದಿಂದ ತುಂಬಿಕೊಂಡಿರುವ ಈ ವಾಪಿಗಳ ಮಧ್ಯದಲ್ಲಿ ಒಂದೊಂದು ದಧಿಮುಖ ಪರ್ವತಗಳಿವೆ. ದಧಿಮುಖ ಪರ್ವತಗಳು ಕೂಡ ದುಂಡಗಿನ ಆಕಾರದವಿದ್ದು ೧೦೦೦೦ ಯೋಜನ ಎತ್ತರ ಮತ್ತು ೧೦೦೦೦ ಯೋಜನ ಅಗಲವಿವೆ, ಇವುಗಳ ಮೂಲವು ಕೂಡ ೧೦೦೦ ಯೋಜನದ್ದಿದೆ. ದಧಿಮುಖ ಪರ್ವತಗಳು ಶ್ವೇತವರ್ಣದವಿದೆ. ಇವುಗಳ ಪ್ರತಿಯೊಂದರ ಮೇಲೆಯೂ ಅಕೃತ್ರಿಮ ಚೈತ್ಯಾಲಯವಿದೆ.

ಪ್ರತಿಯೊಂದು ವಾಪಿಯು ಒಂದು ಲಕ್ಷ ಯೋಜನ ಉದ್ದ ಮತ್ತು ಅಗಲವಿದೆ ಮತ್ತು ಅದರ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದರಂತೆ ನಾಲ್ಕು ವನಗಳಿವೆ. ಅವುಗಳ ಉದ್ದಳತೆಯು ವಾಪಿಕೆಯ ಸಮಾನ ಒಂದು ಲಕ್ಷ ಯೋಜನದ್ದಿದೆ ಮತ್ತು ಅಗಲಳತೆಯು ಐವತ್ತು ಸಾವಿರ ಯೋಜನದ್ದಿದೆ. ಚಿತ್ರದಲ್ಲಿ ವಾಪಿಯನ್ನು ನೀಲಿ ವರ್ಣದಲ್ಲಿ ಮತ್ತು ವನವನ್ನು ಹಸಿರು ವರ್ಣದಲ್ಲಿ ತೋರಿಸಲಾಗಿದೆ. ಈ ವನಗಳ ಹೆಸರುಗಳನ್ನು ಚಾರ್ಟದಲ್ಲಿ ನೋಡುವುದು ಪೂರ್ವದಲ್ಲಿ ಅಶೋಕವನ, ದಕ್ಷಿಣದಲ್ಲಿ ಸಪ್ತಪರ್ಣವನ, ಪಶ್ಚಿಮದಲ್ಲಿ ಚಂಪಕವನ ಮತ್ತು ಉತ್ತರದಲ್ಲಿ ಆಮ್ರವನಗಳಿವೆ.

ಈಗ ತಾವು ಚಿತ್ರದಲ್ಲಿ ನಂದೀಶ್ವರ ದ್ವೀಪದ ಪೂರ್ವ ದಿಕ್ಕಿನ ರಚನೆಯನ್ನು ನೋಡಬೇಕು ಮಧ್ಯದಲ್ಲಿ ಒಂದು ಅಂಜನಗಿರಿ, ಅದರ ನಾಲ್ಕೂ ಕಡೆಗೆ ನಾಲ್ಕು ವಾಪಿಗಳು ಅವುಗಳ ಮಧ್ಯದಲ್ಲಿ ನಾಲ್ಕು ದಧಿಮುಖಗಳಿವೆ.

ಈಗ ಅಂಜನಗಿರಿಯ ಪೂರ್ವದಲ್ಲಿ ಯಾವ ವಾಪಿಯಿದೆ ಮತ್ತು ದಧಿಮುಖವಿದೆ ಅದರ ಈಶಾನ್ಯ ದಿಕ್ಕಿನಲ್ಲಿ ಮತ್ತು ಆಗ್ನೆಯ ದಿಕ್ಕಿನಲ್ಲಿ ಒಂದೊಂದು ರತಿಕರ ಪರ್ವತಗಳಿವೆ. ಚಾರ್ಟದಲ್ಲಿಯಂತೂ ತಮಗೆ ಒಂದು ಕೆಂಪು ಬಿಂದುವು ಕಂಡು ಬರುತ್ತಲಿದೆ. ಅಂಜನಗಿರಿಯ ದಕ್ಷಿಣ ದಿಕ್ಕಿನಲ್ಲಿ ಯಾವ ವಾಪಿ ಹಾಗೂ ದಧಿಮುಖವಿದೆ ಅದರ ಆಗ್ನೇಯದಲ್ಲಿ ಒಂದು ಮತ್ತು ನೈರುತ್ಯದಲ್ಲಿ ಒಂದು ರತಿಕರ ಪರ್ವತಗಳಿವೆ. ಅಂಜನಗಿರಿಯ ಪಶ್ಚಿಮದಲ್ಲಿ ಯಾವ ವಾಪಿ ಹಾಗೂ ದಧಿಮುಖವಿದೆ ಅದರ ನೈರುತ್ಯದಲ್ಲಿ ಒಂದು ಮತ್ತು ವಾಯವ್ಯದಲ್ಲಿ ಒಂದು ರತಿಕರ ಪರ್ವತಗಳಿವೆ. ಅಂಜನಗಿರಿಯ ಉತ್ತರದಲ್ಲಿ ಯಾವ ವಾಪಿ ಹಾಗೂ ದಧಿಮುಖವಿದೆ ಅದರ ವಾಯವ್ಯದಲ್ಲಿ ಒಂದು ಮತ್ತು ಈಶಾನ್ಯದಲ್ಲಿ ಒಂದು ರತಿಕರ ಪರ್ವತಗಳಿವೆ.

ಈ ಪ್ರಕಾರ ಪ್ರತಿಯೊಂದು ದಧಿಮುಖದ ಹೊರಭಾಗದ ವಿದಿಕ್ಕುಗಳಲ್ಲಿ ಎರಡು-ಎರಡು ರತಿಕರಗಳಿವೆ. ಹೀಗೆ ಒಂದು ಅಂಜನಗಿರಿಗೆ ಸಂಬಂಧಿಸಿದ ನಾಲ್ಕು ದಧಿಮುಖ ಮತ್ತು ಎಂಟು ರತಿಕರ ಎಲ್ಲವು ಸೇರಿ ಒಟ್ಟು ಹದಿಮೂರು ಪರ್ವತಗಳಾಗುತ್ತವೆ.

ರತಿಕರ ಪರ್ವತಗಳು ಕೆಂಪು ವರ್ಣದವಿವೆ. ಅವು ಕೂಡ ದುಂಡಗಿನ ಆಕಾರದವಿವೆ, ೧೦೦೦ ಯೋಜನ ಎತ್ತರ ಮತ್ತು ೧೦೦೦ ಯೋಜನ ಅಗಲಳತೆಯನ್ನು ಹೊಂದಿದ್ದು ಅವುಗಳ ಮೂಲವು ೨೫೦ ಯೋಜನದ್ದಿದೆ. ಕೆಲವು ಆಚಾರ್ಯರ ಹೇಳಿಕೆಯು ನಾಲ್ಕೂ ವಿದಿಕ್ಕುಗಳಲ್ಲಿ ನಾಲ್ಕು ರತಿಕರಗಳಿವೆ ಆದರೆ ಎರಡರ ಮೇಲೆ ಮಾತ್ರ ಚೈತ್ಯಾಲಯಗಳಿವೆ ಎಂಬುದಾಗಿದೆ. ನಾವಂತೂ ಕೇವಲ ಎಲ್ಲಿ ಅಕೃತ್ರಿಮ ಚೈತ್ಯಾಲಯಗಳಿವೆ ಅವೇ ಪರ್ವತಗಳ ಚರ್ಚೆ ಮಾಡುತ್ತಿದ್ದೇವೆ. ಆದುದರಿಂದ ನಂದೀಶ್ವರ ದ್ವೀಪದ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ಪ್ರತಿಯೊಂದು ದಿಕ್ಕಿನಲ್ಲಿ ಹದಿಮೂರು ಪರ್ವತಗಳು ಮತ್ತು ಅವುಗಳ ಮೇಲೆ ಹದಿಮೂರು ಅಕೃತ್ರಿಮ ಜಿನಚೈತ್ಯಾಲಯಗಳಿವೆ. ಎಲ್ಲ ಸೇರಿ ಒಟ್ಟು ಐವತ್ತೆರಡು ಜಿನ ಚೈತ್ಯಾಲಯಗಳಿವೆ.

ನಾವು ಅರ್ಘ್ಯ ಸಮರ್ಪಣೆ ಮಾಡುವಾಗ 'ಓಂ, ಹ್ರೀಂ, ಶ್ರೀ ನಂದೀಶ್ವರ ದ್ವೀಪೇ ಪೂರ್ವ ಪಶ್ಚಿಮ ದಕ್ಷಿಣೋತ್ತರೇ ದ್ವಿಪಂಚಾಶತ್ ಜಿನಾಲಯಸ್ಥ ಜಿನಪ್ರತಿಮಾಭ್ಯೋ ಅರ್ಘಂ ನಿರ್ವಪಾಮೀತಿ ಸ್ವಾಹಾ' ಎಂದು ಹೇಳುತ್ತೇವೆ ಅಲ್ಲವೇನು ? ಇಲ್ಲಿಯವರೆಗೆ ನಾವು ಕೇವಲ ಐವತ್ತೆರಡು ಜಿನಾಲಯಗಳನ್ನು ತಿಳಿದೆವು. ಒಂದೊಂದು ಜಿನಾಲಯದಲ್ಲಿ ೧೦೮-೧೦೮ ಜಿನಪ್ರತಿಮೆಗಳಿರುತ್ತವೆ. ಎಂದರೆ ಒಟ್ಟು ೫೨ X ೧೦೮ = ೫೬೧೬ ಜಿನಪ್ರತಿಮೆಗಳಿವೆ. ಇವೆಲ್ಲ ಪ್ರತಿಮೆಗಳು ರತ್ನಮಯವಿವೆ - ರತ್ನಜಡಿತವಲ್ಲ. ಯಾರೂ ಮಾಡಿರುವಂಥವುಗಳಲ್ಲ - ಶಾಶ್ವತವಿವೆ. ನಾವು - ತಾವೆಲ್ಲರು ಕೂಡ ಶಾಶ್ವತ ಜೀವವಿದ್ದೇವೆ - ಅಕೃತ್ರಿಮರಿದ್ದೇವೆ ಇದರದಂತೂ ನಮಗೆ ಮಹಿಮೆಯೇ ಬರುತ್ತಿಲ್ಲ ! ಅಲ್ಲವೇನು ?

ಅಷ್ಟಾಹ್ನಿಕ ಪರ್ವಗಳಲ್ಲಿ ಕಲ್ಪವಾಸೀ, ವ್ಯಂತರ, ಜ್ಯೋತಿಷಿ, ಭವನವಾಸಿ ಇಂದ್ರರು ಹಾಗೂ ಅನ್ಯದೇವಗಳು ತಮ್ಮ ಪರಿವಾರ ಸಹಿತವಾಗಿ ಬರುತ್ತಾರೆ. ಕಲ್ಪವಾಸಿಗಳ ಸೌಧರ್ಮ ಮೊದಲಾದ ಹನ್ನೆರಡು ಇಂದ್ರರು ತಮ್ಮ ತಮ್ಮ ವಾಹನಗಳ ಮೇಲೆ ಆರೂಢರಾಗಿ ಬರುತ್ತಾರೆ. ಅವರು ವಾಸ ಮಾಡುವ ಸ್ಥಾನಗಳಿಗೂ ವಿಮಾನಗಳೆಂದು ಹೇಳುತ್ತಾರೆ. ಇಲ್ಲಿ ಅವರ ವಾಹನಗಳು ಕ್ರಮದಿಂದ ಈ ಪ್ರಕಾರವಿವೆ - ಆನೆ, ಕುದುರೆ, ಸಿಂಹ, ಸಾರಸ ಪಕ್ಷಿ (ಬೆಳ್ಳಕ್ಕಿ), ಕೋಗಿಲೆ, ಹಂಸ, ಚಕ್ರವಾಕ, ಗರುಡ, ಮತ್ಸ, ಮಯೂರ, ಕಮಲ, ಪುಷ್ಪಕ ವಿಮಾನ. ಅಲ್ಲಿ ಯಾವುದೇ ತಿರ್ಯಂಚ ವಾಹನವಿರುವುದಿಲ್ಲ, ವಾಹನ ಜಾತಿಯ ದೇವಗಳೇ ವಿಕ್ರಿಯೆಯಿಂದ ಇವುಗಳ ರೂಪ

ಧಾರಣ ಮಾಡುತ್ತಾರೆ. ಈ ವಾಹನಗಳನ್ನು ಕೂಡ ವಿಮಾನವೆಂದು ಹೇಳುತ್ತಾರೆ. ಇವುಗಳ ಮೇಲೆ ಆರೂಢರಾಗಿ ಸೌಧರ್ಮಾದಿ ದೇವಗಳು ತಮ್ಮ ಪರಿವಾರ ಸಹಿತವಾಗಿ ಮತ್ತು ಕಲ್ಪವೃಕ್ಷಗಳಿಂದ ಪ್ರಾಪ್ತವಾಗುವಂಥ ದಿವ್ಯ ಫಲ-ಪುಷ್ಪ ಮೊದಲಾದ ಪೂಜೆಯ ದ್ರವ್ಯಗಳನ್ನು ತಗೆದುಕೊಂಡು ಬರುತ್ತಾರೆ. ಈ ಎಲ್ಲ ಇಂದ್ರಾದಿ ದೇವಗಳು ಪ್ರಶಸ್ತ ಆಭರಣಗಳನ್ನು ಪರಿಧಾರಣ ಮಾಡಿರುತ್ತಾರೆ, ಚಾಮರ, ಸೇನೆ ಮೊದಲಾದವುಗಳಿಂದ ಸಹಿತರಿರುತ್ತಾರೆ. ಧ್ವಜಗಳು ಹಾಗೂ ವಾದ್ಯಗಳ ಶಬ್ದ ಸಂಯುಕ್ತರಿರುತ್ತಾರೆ.

ನಂದೀಶ್ವರ ದ್ವೀಪದಲ್ಲಿ ಎಂಟು ದಿವಸಗಳವರೆಗೆ ಐಂದ್ರಧ್ವಜ ಎಂದರೆ ಇಂದ್ರಧ್ವಜ ಪೂಜೆ ಮಾಡುತ್ತಾರೆ. ಅಲ್ಲಿ ಹಗಲು-ರಾತ್ರಿಗಳ ಭೇದವಿರುವುದಿಲ್ಲ. ತಿರ್ಯಂಚಗಳ ಜಘನ್ಯ ಭೋಗಭೂಮಿಯಾಗಿರುವುದರಿಂದ ಅಲ್ಲಿಯೂ ಕೂಡ ಕಲ್ಪವೃಕ್ಷಗಳ ಪ್ರಕಾಶವೇ ಇರುತ್ತದೆ. ನಮ್ಮಲ್ಲಿಯ ಒಂದು ಹಗಲು-ರಾತ್ರಿಯಲ್ಲಿ ಎಂಟು ಪ್ರಹರಗಳಿರುತ್ತವೆ. ಇವರೆಲ್ಲ ದೇವಗಳು ಎಂಟು ದಿವಸಗಳವರೆಗೆ ಅಷ್ಟಮಿಯಿಂದ ಪೌರ್ಣಿಮೆಯವರೆಗೆ ನಿರಂತರ ಪೂಜೆ ಮಾಡುತ್ತಾರೆ. ಒಂದೊಂದು ದಿಕ್ಕಿನಲ್ಲಿ ಎರಡು ಪ್ರಹರದವರೆಗೆ ಪೂಜೆ ಮಾಡಿ ನಂತರ ಅನ್ಯ ದಿಕ್ಕಿನಲ್ಲಿ ಹೋಗಿ ಪೂಜೆ ಮಾಡುತ್ತಾರೆ. ಪೂರ್ವದವರು ದಕ್ಷಿಣಕ್ಕೆ ಹೋಗುತ್ತಾರೆ. ದಕ್ಷಿಣದವರು ಪಶ್ಚಿಮಕ್ಕೆ, ಪಶ್ಚಿಮದವರು ಉತ್ತರಕ್ಕೆ ಮತ್ತು ಉತ್ತರ ದಿಕ್ಕಿನವರು ಪೂರ್ವ ದಿಕ್ಕಿಗೆ ಹೋಗುತ್ತಾರೆ. ನಂತರ ಎರಡು ಪ್ರಹರವಾದ ಮೇಲೆ ಮುಂದಿನ ದಿಕ್ಕಿಗೆ ಹೋಗುತ್ತಾರೆ, ಹೀಗೆ ಪ್ರದಕ್ಷಿಣೆಯ ರೂಪದಿಂದ ಮಹೋತ್ಸವಯುಕ್ತ ಜಿನಪೂಜೆ ಮಾಡುತ್ತಾರೆ. ಪ್ರಾರಂಭದಲ್ಲಿ ಕಲ್ಪವಾಸಿಗಳು ಪೂರ್ವದಿಕ್ಕಿನಲ್ಲಿರುತ್ತಾರೆ. ದಕ್ಷಿಣದಲ್ಲಿ ಭವನವಾಸಿಗಳು, ಪಶ್ಚಿಮದಲ್ಲಿ ವ್ಯಂತರರು ಮತ್ತು ಉತ್ತರದಲ್ಲಿ ಜ್ಯೋತಿಷಿ ದೇವಗಳಿರುತ್ತಾರೆ. ಅವರುಗಳ ಇಂದ್ರರು ಕ್ರಮದಿಂದ ಸೌಧರ್ಮ ಈಶಾನ ಮೊದಲಾದವರು, ಚಮರೇಂದ್ರ ವಿರೋಚನ ಮೊದಲಾದವರು, ಕಿಂಪುರುಷ ಮೊದಲಾದವರು ಹಾಗೂ ಚಂದ್ರ ಮೊದಲಾದವರು ಇರುತ್ತಾರೆ. ಪ್ರದಕ್ಷಿಣೆ ಹಾಕುತ್ತ ನಿರಂತರ ಎಂಟು ದಿವಸಗಳವರೆಗೆ ದಿನಾಲು ಇಪ್ಪತ್ನಾಲ್ಕು ಗಂಟೆ ಪೂಜೆ ನಡೆಯುತ್ತದೆ. ಅಲ್ಲಿ ಹಗಲು-ರಾತ್ರಿಗಳ ಭೇದವಿರುವುದಿಲ್ಲ ಆದರೆ ನಮ್ಮಲ್ಲಿ ರಾತ್ರಿ ಪೂಜೆ ಮಾಡುವುದರ ನಿಷೇಧವಿದೆ. ರಾತ್ರಿಯಲ್ಲಿ ಸ್ವಾಧ್ಯಾಯ, ಧ್ಯಾನ, ಚಿಂತನೆ ಮಾಡಬಹುದಾಗಿದೆ.

ಪ್ರಶ್ನೆ :- ನಾವು ಫಲ-ಪುಷ್ಪಗಳ ಉಪಯೋಗ ಮಾಡುವುದಿಲ್ಲ ಮತ್ತು ಇಂದ್ರನು ಮಾಡಬಹುದಾಗಿದೆಯೇನು ?

ಉತ್ತರ :- ಇಂದ್ರನು ತರುವಂಥ ಫಲ-ಪುಷ್ಪಗಳು ಅವಂತೂ ಕಲ್ಪವೃಕ್ಷಗಳಿಂದ ಪ್ರಾಪ್ತವಾಗುವ ದಿವ್ಯ ಫಲ-ಪುಷ್ಪಗಳಿರುತ್ತವೆ-ರತ್ನಮಯವಿರುತ್ತವೆ, ಅಚಿತ್ತವಿರುತ್ತವೆ, ಸಚಿತ್ತವಿರುವುದಿಲ್ಲ. ನಾವು ಯಾವ ದ್ರವ್ಯಗಳನ್ನು ಬಳಸುತ್ತೇವೆ ಅವು ಪ್ರಾಸುಕ, ಯೋಗ್ಯ ಮತ್ತು ಹಿಂಸಾರಹಿತವಿರಬೇಕಾಗುತ್ತದೆ. ಕೆಲವು ತಪ್ಪು ರೂಢಿಗಳು ಬಂದು ಬಿಟ್ಟಿರುತ್ತವೆ ಮತ್ತು ನಡೆಯುತ್ತಿರುತ್ತವೆ ಆದರೆ ಕಲ್ಯಾಣದ ಅಪೇಕ್ಷೆಯಿರುವಂಥವರು ಸರಿ ಅಥವಾ ತಪ್ಪುಗಳ ನಿರ್ಣಯ ಮಾಡಿ ಸರಿಯಿರುವ ಮಾತುಗಳ ಅಂಗೀಕಾರ ಮಾಡಬಹುದಾಗಿದೆ.

ಪರ್ವತಗಳ ಮೇಲೆ ಯಾವ ಜಿನಾಲಯಗಳಿವೆ ಅವುಗಳಿಗೆ ಮೂರು ಮಣಿಮಯ ಕೋಟೆಗಳಿದ್ದು ಅವು ನಾಲ್ಕು ನಾಲ್ಕು ದ್ವಾರಗಳಿಂದ ಯುಕ್ತವಿವೆ. ಈ ದ್ವಾರಗಳಿಂದ ಹಾಯ್ದು ಒಳಗೆ ಹೋಗುವ ಯಾವ ಮಾರ್ಗಗಳಿವೆ - ಓಣಿಗಳಿವೆ ಅವನ್ನು ವೀಥಿಯೆಂದು ಹೇಳುತ್ತಾರೆ. ಒಂದೊಂದು ವೀಥಿಯಲ್ಲಿ ಒಂದೊಂದು ಮಾನಸ್ತಂಭ ಮತ್ತು ಒಂಭತ್ತು ಒಂಭತ್ತು ಸ್ತೂಪಗಳಿವೆ. ಮೂರನೇ ಮತ್ತು ಎರಡನೇ ಕೋಟೆಯ ಮಧ್ಯದಲ್ಲಿ ವನವಿದೆ, ಎರಡನೇ

ಮತ್ತು ಮೊದಲನೆಯ ಕೋಟೆಯ ಮಧ್ಯದೊಳಗೆ ಧ್ವಜಗಳು ಕಂಡು ಬರುತ್ತವೆ ಮತ್ತು ಮೂರನೆಯ ಕೋಟೆಯ ಒಳಗೆ ಚೈತ್ಯಭೂಮಿಯಿದ್ದು ಅದರ ಮಧ್ಯದಲ್ಲಿ ಚೈತ್ಯಾಲಯವಿದೆ.

ಇವೆಲ್ಲ ಅಕೃತ್ರಿಮ ಚೈತ್ಯಾಲಯಗಳ ಸ್ವರೂಪವನ್ನು ನಾವು ನಂತರ ನೋಡಬಹುದಾಗಿದೆ. ಈ ಎಲ್ಲ ಪರ್ವತಗಳು ಜಿನಾಲಯಗಳು ಅಥವಾ ಅನ್ಯ ಯಾವೆಲ್ಲ ರಚನೆಗಳಿವೆ ಅಲ್ಲಿ ಬೇರೆ-ಬೇರೆ ಜಾತಿಯ ವ್ಯಂತರರ ನಿವಾಸಗಳಿವೆ. ಈಗ ನಾವು ನಂದೀಶ್ವರ ಜಿನಾಲಯಗಳ ಪೂಜೆಯ ಜಯಮಾಲೆಯನ್ನು ನೋಡೋಣ. ಇದರಲ್ಲಿ ನಾಲ್ಕೂ ದಿಕ್ಕುಗಳ ನಾಲ್ಕು ಅಂಜನಗಿರಿ, ಪ್ರತಿಯೊಂದು ದಿಕ್ಕಿನ ನಾಲ್ಕು-ನಾಲ್ಕರಂತೆ ಹದಿನಾರು ದಧಿಮುಖಗಳು ಮತ್ತು ಪ್ರತಿಯೊಂದು ದಿಕ್ಕಿನಲ್ಲಿರುವ ಎಂಟು-ಎಂಟು ರತಿಕರ, ಹೀಗೆ ಮೂವತ್ತೆರಡು ರತಿಕರ ಮತ್ತು ಎಲ್ಲವು ಸೇರಿ ಐವತ್ತೆರಡು ಜಿನಮಂದಿರಗಳ ವರ್ಣನೆಯನ್ನು ಅತ್ಯಂತ ಭಾವಪೂರ್ಣವಾದ ಭಾಷೆಯಲ್ಲಿ ಮಾಡಲಾಗಿದೆ.

ಜಯಮಾಲೆ

ದೋಹೆ - **ಕಾರ್ತಿಕ ಫಾಗುನ ಸಾಢಕೇ, ಅಂತ ಆಠ ದಿನ ಮಾಹಿ ।**
ನಂದೀಶ್ವರ ಸುರ ಜಾತ ಹೈ, ಹಮ ಪೂಜೆ ಇಹ ಠಾಹೀ ॥೧॥

ಏಕಸೌ ತ್ರೇಸಠ ಕೋಡಿ ಜೋಜನ ಮಹಾ ।
ಲಾಖ ಚೌರಾಸಿಯಾ ಏಕ ದಿಶ ಮೇ ಲಹಾ ॥
ಆಠಮೋ ದ್ವೀಪ ನಂದೀಶ್ವರಂ ಭಾಸ್ವರಂ ।
ಭೌನ ಬಾವನ್ನ ಪ್ರತಿಮಾ ನಮೋ ಸುಖಕರಂ ॥ಪಲ್ಲವಿ॥೨॥

ಚಾರ ದಿಶಿ ಚಾರ ಅಂಜನಗಿರಿ ರಾಜಹೀ ।
ಸಹಸ ಚೌರಾಸಿಯಾ ಏಕ ದಿಶ ಛಾಜಹೀ ॥
ಢೋಲ ಸಮ ಗೋಲ ಊಪರ ತಲೇ ಸುಂದರಂ ॥ಭೌನ ॥೩॥

ಏಕ ಇಕ ಚಾರ ದಿಶಿ ಚಾರ ಶುಭ ಬಾವರೀ ।
ಏಕ ಇಕ ಲಾಖ ಜೋಜನ ಅಮಲ ಜಲಭರೀ ॥
ಚಹುದಿಶಿ ಚಾರ ವನ ಲಾಖ ಜೋಜನ ವರಂ ॥ಭೌನ॥೪॥

ಸೋಲ ವಾಪಿನ ಮಧಿ ಸೋಲ ಗಿರಿ ದಧಿಮುಖಂ ।
ಸಹಸ ದಶ ಮಹಾ ಜೋಜನ ಲಖತ ಹೀ ಸುಖಂ॥
ಬಾವರೀ ಕೋನ ದೋ ಮಾಹಿ ದೋ ರತಿಕರಂ ॥ಭೌನ॥೫॥

ಶೈಲ ಬತ್ತೀಸ ಇಕ ಸಹಸ ಜೋಜನ ಕಹೇ ।
ಚಾರ ಸೋಲೈ ಮಿಲೈ ಸರ್ವ ಬಾವನ ಲಹೇ ॥
ಏಕ ಇಕ ಸೀಸ ಪರ ಏಕ ಜಿನ ಮಂದಿರಂ ॥ಭೌನ ॥೬॥

ಬಿಂಬ ಅಠ ಏಕಸೌ ರತನಮಯೀ ಸೋಹ ಹೀ ।
ದೇವ ದೇವಿ ಸರ್ವ ನಯನ ಮನ ಮೋಹಹೀ ॥
ಪಾಂಚಸೌ ಧನುಷ ತನ ಪದ್ಮ ಆಸನ ಪರಂ ॥ಭೌನ॥೭॥

ಲಾಲ ನಖ ಮುಖ ನಯನ ಸ್ಯಾಮ ಅರು ಶ್ವೇತ ಹೈ ।
ಸ್ಯಾಮರಂಗ ಭೌಂಹ ಸಿರಕೇಶ ಛವಿ ದೇತ ಹೈ ॥
ವಚನ ಬೋಲತ ಮನೋ ಹಸತ ಕಾಲುಷ ಹರಂ ॥ಭೌನ॥೮॥

ಕೋಟಿ ಶಶಿ ಭಾನುದುತಿ ತೇಜ ಛಿಪ ಜಾತ ಹೈ ।
ಮಹಾ ವೈರಾಗ ಪರಿಣಾಮ ಠಹರಾತ ಹೈ ॥
ವಯನ ನಹೀ ಕಹೇ ಲಖಿಹೋತ ಸಮ್ಯಕ್ ಧರಂ ॥ಭೌನ॥೯॥

ಸೋರಠಾ - ನಂದೀಶ್ವರ ಜಿನಧಾಮ, ಪ್ರತಿಮಾ ಮಹಿಮಾ ಕೋ ಕಹೈ ।
'ಧ್ಯಾನತ' ಲೀನೋ ನಾಮ, ಯಹೀ ಭಗತಿ ಶಿವ ಸುಖ ಕರೈ ॥

ನೋಡಿರಿ, ಕೊನೆಯಲ್ಲಿ ಏನು ಹೇಳಿದ್ದಾರೆ - ಕೋಟ್ಯಂತರ ಭಾನು ಎಂದರೆ ಸೂರ್ಯರು ಮತ್ತು ಶಶಿ ಎಂದರೆ ಚಂದ್ರರ ಪ್ರಭೆಯು ಕೂಡ ಮಂದವಾಗಿ ಹೋಗುವಂಥ ದ್ಯುತಿಯು-ಕಾಂತಿಯು ಆ ಜಿನ ಪ್ರತಿಮೆಗಳದ್ದಿದೆ ಮತ್ತು ಅದು ಮಹಾವೈರಾಗ್ಯದ ಕಾರಣವಿದೆಯಂತೆ ! (ನಮ್ಮ ಕನ್ನಡದ ರಸಋಷಿ ರತ್ನಾಕರ ಕವಿಯು ಕೂಡ 'ಪರಮಪರಂಜ್ಯೋತಿ, ಕೋಟಿ ಚಂದ್ರಾದಿತ್ಯಕಿರಣಸುಜ್ಞಾನ ಪ್ರಕಾಶ' ಎಂದು ಹೇಳಿಲ್ಲವೇನು ? ಸಮಸ್ತ ಜ್ಞಾನಿಗಳ ಅಭಿಪ್ರಾಯವು - ನೋಡುವ ನೋಟವು ಒಂದು ಆಗಿರುತ್ತದೆ !) ಜಿನೇಂದ್ರ ಭಗವಂತರ ಶಾಂತ ಮುದ್ರೆಯನ್ನು ನೋಡುತ್ತಿರುವಂತೆಯೇ ನಮ್ಮ ಕಲುಷಿತ ಪರಿಣಾಮಗಳು ದೂರವಾಗಿ ಬಿಡುತ್ತವೆ. ಭಗವಂತರ ಪ್ರತಿಮೆಯನ್ನು ನೋಡಿ ನಾವು ಭಗವಂತರ ಸ್ವರೂಪದ ವಿಚಾರ ಮಾಡುತ್ತಿದ್ದರೆ ನಮಗೆ ನಮ್ಮ ಸ್ವಭಾವದ ಪರಿಚಯ ಮೂಡಿ ಬರುತ್ತದೆ. ಭಗವಂತರ ಅಂತರ್ಮುಖ ಮುದ್ರೆಯಂತೂ ನಮಗೆ ಮೂಕ ಸಂದೇಶ - ಮಾತನಾಡದೆಯೇ ಉಪದೇಶ ನೀಡುತ್ತದೆ. ಭಗವಂತರು ತಿಳಿಸಿಕೊಟ್ಟಿರುವ ಮಾರ್ಗ-ಉಪದೇಶವಂತೂ ನಮಗೆ ಜಿನಾಗಮದ ಮೂಲಕ ಪ್ರಾಪ್ತವಾಗುತ್ತದೆ, ಅದನ್ನು ಓದಿ ಭಗವಂತರ ಕುರಿತಾಗಿ ಅತಿಶಯ ಭಕ್ತಿಯ ಭಾವವು ಸಹಜವಾಗಿಯೇ ಬರುತ್ತದೆ ಮತ್ತು ಬಂದೇ ಬರುತ್ತದೆ.

ಜನರಂತೂ ಭಕ್ತಿಪೂಜೆ ಮಾಡಿ ಭಗವಂತರಿಗೆ ಹೇಳುತ್ತಾರೆ, ಆದರೆ ಭಗವಂತರದನ್ನು ಯಾರು ಕೇಳುತ್ತಾರೆ ? ಯಾರಿಗೆ ಬಿಡುವು ಇದೆ ? ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಜೀವಗಳಿಗೆ ವಚನ ಯೋಗವಿರುತ್ತದೆ - ಅವು ಮಾತನಾಡುತ್ತವೆ ಆದರೆ ಅವುಗಳಿಗೆ ಕರ್ಣೇಂದ್ರಿಯವಿಲ್ಲದಿರುವುದರಿಂದ ಅವು ಕೇಳುವುದಿಲ್ಲ. ಹಾಗೆಯೇ ನಾವು ಕೂಡ ಭಗವಂತರ ಎದುರಿಗೆ ಹೋಗಿ ಅವರ ಸ್ತುತಿ ಮೊದಲಾದುವನ್ನು ಹೇಳುತ್ತೇವೆ ಮತ್ತು ಭಗವಂತರು ಹೇಳಿರುವ ಉಪದೇಶವನ್ನು ಕೇಳದಿದ್ದರೆ ನಮ್ಮ ದಶೆಯು ಕೂಡ ಆ ವಿಕಲೇಂದ್ರಿಯಗಳಂಥದೇ ಆಗಲಿಲ್ಲವೇನು ?

ಈಗ ನಾವು ನಂದೀಶ್ವರ ದ್ವೀಪದ ಐವತ್ತೆರಡು ಜಿನಾಲಯಗಳಲ್ಲಿ ವಿರಾಜಮಾನವಿರುವ ೫೬೧೬ ಜಿನಪ್ರತಿಮೆಗಳಿಗೆ ಇಲ್ಲಿಂದಲೇ ಭಾವಪೂರ್ವಕ ನಮಿಸಿ ವಿರಮಿಸೋಣ.

ವಿದೇಹಕ್ಷೇತ್ರದಲ್ಲಿ ವಿರಾಜಮಾನರಿರುವ ಹತ್ತೊಂಭತ್ತನೆಯ ತೀರ್ಥಂಕರ
ಶ್ರೀ ದೇವಯಶ ಭಗವಂತರಿಗೆ ಜಯವಾಗಲಿ !

★★★★★

೨೦. ಅಕೃತ್ರಿಮ ಜಿನಚೈತ್ಯಾಲಯಗಳ ವರ್ಣನೆ

ಶ್ರೀಮದ್ ನೇಮಿಚಂದ್ರ ಆಚಾರ್ಯವಿರಚಿತ ತ್ರಿಲೋಕಸಾರ ಗ್ರಂಥದ ಆಧಾರದಿಂದ ನಾವು ಮೂರು ಲೋಕಗಳ ಸ್ವರೂಪವನ್ನು ನೋಡುತ್ತಿದ್ದೇವೆ. ಗ್ರಂಥದ ಪ್ರಾರಂಭದಲ್ಲಿ ಎರಡನೆಯ ಗಾಥೆಯಲ್ಲಿ ಆಚಾರ್ಯ ದೇವರು ಮೂರು ಲೋಕದ ಅಕೃತ್ರಿಮ ಜಿನ ಚೈತ್ಯಾಲಯಗಳಿಗೆ ನಮಸ್ಕಾರ ಮಾಡಿ ಗ್ರಂಥ ರಚನೆಯ ಆರಂಭ ಮಾಡಿದ್ದಾರೆ.

ಆ ಗಾಥೆಯು ಈ ಪ್ರಕಾರವಿದೆ -

ಭವಣವ್ವಿಂತರ ಜೋಇಸ ವಿಮಾಣಣರತಿರಿಯಲೋಯ ಜಿಣಭವಣೇ ।
ಸವ್ವಾಮರಿಂದಣರವಇ ಸಂಪೂಜಿಯ ವಂದಿಏ ವಂದೇ ॥೨॥

ನಾವುಗಳು ಕೂಡ ಇದುವರೆಗೆ ಅಕೃತ್ರಿಮ ಜಿನ ಚೈತ್ಯಾಲಯಗಳು ಎಲ್ಲಿ-ಎಲ್ಲಿ ಇರುತ್ತವೆಯೆಂಬುದನ್ನು ನೋಡಿಯಾಗಿದೆ. ಜ್ಯೋತಿಷಿಗಳ ಅಸಂಖ್ಯಾತ ಜ್ಯೋತಿಷ್ಕ ವಿಮಾನಗಳಲ್ಲಿ - ಪ್ರತಿಯೊಂದರಲ್ಲಿ ಒಂದೊಂದರಂತೆ ಅಸಂಖ್ಯಾತ ಜಿನಾಲಯಗಳಿವೆ. ವ್ಯಂತರರ ಭವನಗಳಲ್ಲಿ ಮತ್ತು ಆವಾಸಗಳಲ್ಲಿಯೂ ಅಸಂಖ್ಯಾತ ಜಿನಾಲಯಗಳಿವೆ. ಮೂರು ಲೋಕದ ಅನ್ಯ ಸಂಖ್ಯಾತ ಜಿನಾಲಯಗಳೊಳಗಿಂದ ಅಧೋಲೋಕದಲ್ಲಿ ಭವನವಾಸಿಗಳ ಏಳು ಕೋಟಿ ಎಪ್ಪತ್ತೆರಡು ಲಕ್ಷ ಭವನಗಳಲ್ಲಿ ಅಷ್ಟೇ ಸಂಖ್ಯೆಯ ಜಿನಾಲಯಗಳಿವೆ. ಊರ್ಧ್ವ ಲೋಕದಲ್ಲಿ ವೈಮಾನಿಕರ ಒಟ್ಟು ವಿಮಾನಗಳು ಎಂಭತ್ತಾ ನ್ಲುಕ್ಕ ಲಕ್ಷ ತೊಂಭತ್ತೇಳು ಸಾವಿರದಾ ಇಪ್ಪತ್ತೂರು ಇವೆ ಮತ್ತು ಅಲ್ಲಿ ಅಷ್ಟೇ ಸಂಖ್ಯೆಯ ಜಿನಾಲಯಗಳಿವೆ ಹಾಗೂ ಮಧ್ಯಲೋಕದಲ್ಲಿ ನಾಲ್ಕು ನೂರಾ ಐವತ್ತೆಂಟು ಜಿನಾಲಯಗಳಿವೆ.

ಮಧ್ಯಲೋಕದ ಜಿನಾಲಯಗಳನ್ನು ಮತ್ತೊಮ್ಮೆ ನೋಡೋಣ. ಅದಕ್ಕಿಂತ ಮೊದಲು ನಾವು ಮೂರು ಪರ್ವತಗಳ ಚರ್ಚೆ ಮಾಡೋಣ. ಮಾನುಷೋತ್ತರ ಪರ್ವತ, ಕುಂಡಲಗಿರಿ ಮತ್ತು ರುಚಕಗಿರಿ. ಪುಷ್ಕರವರ ದ್ವೀಪದ ಮಧ್ಯದಲ್ಲಿ ಎರಡೂವರೆ ದ್ವೀಪವನ್ನು ಸುತ್ತುವರೆದಿರುವಂಥ ವಲಯಾಕಾರದ (ಬಳೆಯ ಆಕಾರದ) ಮಾನುಷೋತ್ತರ ಪರ್ವತವಿದೆ. ಮನುಷ್ಯಕ್ಷೇತ್ರ ಎಂದರೆ ಒಳಗಿನ ಕಡೆಗೆ ಅದು ಗೋಡೆಯ ಸಮಾನ ನೀಳವಾಗಿ ಎತ್ತರವಿದೆ ಇದರ ಎತ್ತರವು ೧೭೨೧ ಯೋಜನವಿದೆ. ಅದರ ಮೂಲವು ಎತ್ತರದ ನಾಲ್ಕನೆಯ ಒಂದು ಭಾಗ ಪ್ರಮಾಣ ಅರ್ಥಾತ್ ೪೩೦ $\frac{೧}{೪}$ ಯೋಜನವಿದೆ. ಹೊರಗಿನ ಕಡೆಗೆ ಬಾಹ್ಯದಲ್ಲಿ ತಿರ್ಯಕ್ ಲೋಕದ ಕಡೆಗೆ ಅದು ಮೂಲದಿಂದ ಶಿಖರದವರೆಗೆ ಕ್ರಮದಿಂದ ಕಡಿಮೆಯಾಗುತ್ತದೆ. ಕೆಳಗೆ ಅಗಲವು ೧೦೨೨ ಯೋಜನ ಮತ್ತು ಶಿಖರದ ಮೇಲೆ ಅಗಲವು ೪೨೪ ಯೋಜನವಿದೆ. ಇದರ ವರ್ಣವು ಸುವರ್ಣದ ಸಮಾನವಿದೆ. ಈ ಪರ್ವತದಲ್ಲಿ ಗುಹೆಯರೂಪದ ಹದಿನಾಲ್ಕು ದ್ವಾರಗಳಿವೆ ಅವುಗಳೊಳಗಿಂದ ಹದಿನಾಲ್ಕು ಮಹಾನದಿಗಳು ಉದಿಸಿ ಹೊರಗೆ ಹೋಗುತ್ತವೆ. ಈ ಪರ್ವತದ ಶಿಖರದ ಮೇಲೆ ಪರ್ವತದ ಹಾಗೆಯೇ ವೇದಿಯಿದ್ದು ಅದು ೪೦೦೦ ಧನುಷ್ಯ ಎತ್ತರ ಮತ್ತು ೧ $\frac{೧}{೪}$ ಹರದಾರಿ ಅಗಲವಿದೆ.

ಈ ಪರ್ವತದ ಪರಿಧಿಯಲ್ಲಿ ನೈರುತ್ಯ ಮತ್ತು ವಾಯವ್ಯ ದಿಕ್ಕುಗಳನ್ನು ಬಿಟ್ಟು ಉಳಿದ ಆರು ದಿಕ್ಕುಗಳಲ್ಲಿ

ಪಂಕ್ತಿಯ ರೂಪದಿಂದ ಮೂರು-ಮೂರು ಕೂಟಗಳಿವೆ. ಆ ಕೂಟಗಳ ಅಭ್ಯಂತರ ಮನುಷ್ಯ ಲೋಕದ ಕಡೆಗೆ ನಾಲ್ಕು ದಿಕ್ಕುಗಳಲ್ಲಿ ಪ್ರತಿಯೊಂದರಲ್ಲಿ ಒಂದರಂತೆ ನಾಲ್ಕು ಅಕೃತ್ರಿಮ ಜಿನಾಲಯಗಳಿವೆ. ಆಗ್ನೇಯ ಮತ್ತು ಈಶಾನ್ಯ ದಿಕ್ಕುಗಳಿಗೆ ಸಂಬಂಧಿಸಿದ ಆರು ಕೂಟಗಳಲ್ಲಿ ಗರುಡಕುಮಾರ ದೇವಗಳು ವಾಸಮಾಡಿರುತ್ತಾರೆ. ಅನ್ಯ ದಿಕ್ಕುಗಳ ಹನ್ನೆರಡು ಕೂಟಗಳಲ್ಲಿ ಸುಪರ್ಣಕುಮಾರ ದೇವಗಳು ಮತ್ತು ದಿಕ್ಕುಮಾರಿ ದೇವಾಂಗನೆಯರು ವಾಸ ಮಾಡಿರುತ್ತಾರೆ.

ಕುಂಡಲಗಿರಿಯೆಂಬ ಹೆಸರಿನ ಪರ್ವತವು ಹನ್ನೊಂದನೆಯ ಕುಂಡಲವರ ದ್ವೀಪದಲ್ಲಿದೆ. ಇದು ಕೂಡ ವಲಯಾಕಾರವಿದೆ. ಮತ್ತು ಕುಂಡಲವರ ದ್ವೀಪದ ಮಧ್ಯದಲ್ಲಿ ಸ್ಥಿತವಿದೆ. ಇದರ ಅಗಲಳತೆಯು ಮಾನುಷೋತ್ತರ ಪರ್ವತಕ್ಕಿಂತ ಹತ್ತು ಪಟ್ಟು ಇದೆ. ಕೆಳಗೆ ಅಗಲವು ೧೦೨೨೦ ಯೋಜನ ಮತ್ತು ಶಿಖರದ ಮೇಲೆ ೪೨೪೦ ಯೋಜನವಿದೆ. ಇದರ ಎತ್ತರವು ೭೫೦೦೦ ಯೋಜನವಿದೆ. ಈ ಪರ್ವತವು ಸುವರ್ಣಮಯವಿದೆ. ಈ ಕುಂಡಲ ಪರ್ವತದ ಪರಿಧಿಯಲ್ಲಿ ಒಂದೊಂದು ದಿಕ್ಕಿನಲ್ಲಿ ನಾಲ್ಕು-ನಾಲ್ಕು ಕೂಟಗಳು ಪಂಕ್ತಿರೂಪವಿವೆ ಎಂದರೆ ಇವು ಹದಿನಾರು ಇವೆ. ಅವುಗಳ ಅಭ್ಯಂತರ ಭಾಗ-ಮನುಷ್ಯಲೋಕದ ಕಡೆಗೆ ನಾಲ್ಕು ದಿಕ್ಕುಗಳಲ್ಲಿ ಪ್ರಾಪ್ತವಾಗುವಂಥ ನಾಲ್ಕು ಜಿನೇಂದ್ರ ಕೂಟ ಎಂದರೆ ಸಿದ್ಧ ಕೂಟಗಳಿವೆ ಅವುಗಳಲ್ಲಿ ಅಕೃತ್ರಿಮ ಚೈತ್ಯಾಲಯಗಳಿವೆ.

ಹದಿಮೂರನೆಯ ರುಚಕವರ ದ್ವೀಪದಲ್ಲಿ ವಲಯಾಕಾರದ ರುಚಕಗಿರಿಯೆಂಬ ಹೆಸರಿನ ಪರ್ವತವಿದೆ. ಅದರ ಪರಿಧಿಯಲ್ಲಿ ಪ್ರತಿಯೊಂದು ದಿಕ್ಕಿಗೆ ಪಂಕ್ತಿರೂಪದಿಂದ ಎಂಟು-ಎಂಟು ಕೂಟಗಳಿವೆ. ಅವುಗಳ ಅಭ್ಯಂತರ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕೂಟಗಳಿವೆ. ಪುನಃ ಅದರ ಅಭ್ಯಂತರ - ಒಳಭಾಗದಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕೂಟಗಳಿವೆ ಅಲ್ಲದೆ ಮತ್ತೆ ಅವುಗಳ ಅಭ್ಯಂತರದಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕೂಟಗಳಿವೆ. ಎಲ್ಲಕ್ಕಿಂತ ಅಭ್ಯಂತರದ ನಾಲ್ಕು ಕೂಟಗಳು ಜಿನೇಂದ್ರ ಕೂಟಗಳಿವೆ ಅವು ಅಕೃತ್ರಿಮ ಚೈತ್ಯಾಲಯಯುಕ್ತವಿವೆ.

ಪೂರ್ವ ಮೊದಲಾದ ನಾಲ್ಕೂ ದಿಕ್ಕುಗಳಲ್ಲಿ ಯಾವ ಎಂಟು-ಎಂಟು ಕೂಟಗಳಿವೆ ಅಲ್ಲಿ ಪ್ರತಿಯೊಂದು ದಿಕ್ಕಿನಲ್ಲಿ ಎಂಟು-ಎಂಟು ದಿಕ್ಕುಮಾರಿ ದೇವಾಂಗನೆಯರು ವಾಸಮಾಡುತ್ತಾರೆ ಅವರು ಕ್ರಮದಿಂದ ಗಿಂಡಿ, ದರ್ಪಣ, ಮುಕ್ಕೊಡೆ ಮತ್ತು ಚಾಮರಗಳನ್ನು ಧಾರಣ ಮಾಡಿ ತೀರ್ಥಂಕರರ ಉತ್ಪತ್ತಿಯ ಸಮಯದಲ್ಲಿ ಮಾತೆಯ ಸೇವೆ ಮಾಡುತ್ತಾರೆ.

ಅದರ ಅಭ್ಯಂತರದ ನಾಲ್ಕು ಕೂಟಗಳಲ್ಲಿ ನಾಲ್ವರು ದೇವಿಯರಿರುತ್ತಾರೆ ಅವರು ತೀರ್ಥಂಕರರ ಜನ್ಮದ ಸಮಯದಲ್ಲಿ ದಿಶೆಗಳನ್ನು ಪ್ರಸನ್ನವಾಗಿರಿಸುತ್ತಾರೆ - ನಿರ್ಮಲಗೊಳಿಸುತ್ತಾರೆ. ಅದರ ಅಭ್ಯಂತರದ ನಾಲ್ಕು ಕೂಟಗಳಲ್ಲಿ ನಾಲ್ವರು ದೇವಿಯರು ಇರುತ್ತಾರೆ ಅವರು ತೀರ್ಥಂಕರರ ಜನ್ಮ ಸಮಯದಲ್ಲಿ ಜಾತಕರ್ಮ ಅರ್ಥಾತ್ ಪ್ರಸೂತಿ ಮಾಡಿಸುವಲ್ಲಿ ಕುಶಲರಿರುತ್ತಾರೆ.

ಈಗ ನಾವು ಮಧ್ಯಲೋಕದ ಅಕೃತ್ರಿಮ ಚೈತ್ಯಾಲಯಗಳನ್ನು ನೋಡೋಣ. ಮನುಷ್ಯ ಲೋಕದಲ್ಲಿ ಎರಡೂವರೆ ದ್ವೀಪಗಳಲ್ಲಿ ಐದು ಮೇರು ಪರ್ವತಗಳಿವೆ ಅವುಗಳ ಪ್ರತಿಯೊಂದರ ಮೇಲೆ ಭದ್ರಶಾಲವನದ ನಾಲ್ಕು, ನಂದನವನ, ಸೌಮನಸವನದ ನಾಲ್ಕು ನಾಲ್ಕು ಮತ್ತು ಪಾಂಡುಕವನದ ನಾಲ್ಕು ಹೀಗೆ ಹದಿನಾರು ಜಿನಾಲಯಗಳಿವೆ.

ಪ್ರತಿಯೊಂದು ಮೇರುವಿಗೆ ಸಂಬಂಧಿತವಾದ ಆರು ಕುಲಾಚಲ ಪರ್ವತಗಳಿವೆ, ಅವು ಪ್ರತಿಯೊಂದರ ಮೇಲೆ ಒಂದೊಂದು ಜಿನಾಲಯಗಳಿವೆ. ಕುಲಾಚಲ ಸ್ಮರಣೆಯಿದೆಯಲ್ಲವೆ, ಇವುಗಳ ಕಾರಣದಿಂದ ದ್ವೀಪದಲ್ಲಿ ಏಳು ಏಳು ಕ್ಷೇತ್ರಗಳಾಗುತ್ತವೆ.

ಪ್ರತಿಯೊಂದು ಮೇರುವಿಗೆ ಸಂಬಂಧಿಸಿದ ವಿದೇಹ ಕ್ಷೇತ್ರಗಳಲ್ಲಿ ನಾವು ವಕ್ಷಾರ ಪರ್ವತಗಳನ್ನು ನೋಡಿದ್ದೆವು ಇವು ನಾಲ್ಕು ವಕ್ಷಾರ ಮತ್ತು ಮೂರು ವಿಭಂಗಾ ನದಿಗಳ ಕಾರಣದಿಂದ ಪೂರ್ವ ವಿದೇಹದ ಉತ್ತರ ಮತ್ತು ದಕ್ಷಿಣ ಹಾಗೂ ಪಶ್ಚಿಮ ವಿದೇಹದ ಉತ್ತರ ಮತ್ತು ದಕ್ಷಿಣದಲ್ಲಿ ಎಂಟು ಎಂಟು ಕ್ಷೇತ್ರಗಳು ವಿಭಾಜಿಸಲ್ಪಡುತ್ತವೆ ಈ ರೀತಿ ಒಂದೊಂದು ಮೇರುವಿಗೆ ಸಂಬಂಧಿಸಿದಂತೆ ಹದಿನಾರು ವಕ್ಷಾರ ಪರ್ವತಗಳಿವೆ, ಅವುಗಳ ಮೇಲೆ ಪ್ರತಿಯೊಂದರ ಮೇಲೆ ಒಂದೊಂದು ಜಿನಾಲಯಗಳಿವೆ.

ಪ್ರತಿಯೊಂದು ವಿದೇಹ ಕ್ಷೇತ್ರದಲ್ಲಿ ಹಾಗೂ ಪ್ರತಿಯೊಂದು ಭರತ-ಐರಾವತದಲ್ಲಿ ನಾವು ಒಂದೊಂದು ವಿಜಯಾರ್ಧ ಪರ್ವತವನ್ನು ನೋಡಿದ್ದೆವು. ಈ ಪರ್ವತ ಹಾಗೂ ಎರಡು ನದಿಗಳ ಕಾರಣದಿಂದ ಪ್ರತಿಯೊಂದು ಕ್ಷೇತ್ರದ ಆರು-ಆರು ಖಂಡಗಳಾಗುತ್ತವೆ. ಈ ರೀತಿ ವಿದೇಹದ ಮೂವತ್ತೆರಡು, ಭರತದ ಒಂದು ಮತ್ತು ಐರಾವತದ ಒಂದು ಹೀಗೆ ಪ್ರತಿಯೊಂದು ಮೇರುವಿಗೆ ಸಂಬಂಧಿಸಿದ ಮೂವತ್ನಾಲ್ಕು ವಿಜಯಾರ್ಧಗಳಿವೆ. ಪ್ರತಿಯೊಂದರ ಮೇಲೆ ಒಂದೊಂದು ಜಿನಾಲಯವಿದೆ.

ಜಂಬೂದ್ವೀಪದಲ್ಲಿ ನಾವು ಒಂದು ಜಂಬೂವೃಕ್ಷ ಮತ್ತು ಒಂದು ಶಾಲ್ಮಲಿ ವೃಕ್ಷವನ್ನು ನೋಡಿದ್ದೆವು, ಪ್ರತಿಯೊಂದು ಮೇರುವಿಗೆ ಸಂಬಂಧಿಸಿದಂತೆ ಎರಡು-ಎರಡು ವೃಕ್ಷಗಳಿವೆ, ಅವು ಪ್ರತಿಯೊಂದರ ಮೇಲೆ ಒಂದೊಂದು ಜಿನಾಲಯವಿದೆ. ಪ್ರತಿಯೊಂದು ಮೇರುವಿನ ನಾಲ್ಕು ವಿದಿಕ್ಕುಗಳಲ್ಲಿ ನಾಲ್ಕು ಗಜದಂತಗಳಿವೆ, ಅವುಗಳ ಪ್ರತಿಯೊಂದರ ಒಂದು ಕೂಟದ ಮೇಲೆ ಒಂದು ಜಿನಾಲಯವಿದೆ, ಹೀಗೆ ಪ್ರತಿಯೊಂದು ಮೇರುವಿನ ನಾಲ್ಕು ಗಜದಂತಗಳ ಮೇಲೆ ನಾಲ್ಕು ಜಿನಾಲಯಗಳಿವೆ.

ಧಾತಕೀ ಖಂಡದಲ್ಲಿ ಉತ್ತರ ಹಾಗೂ ದಕ್ಷಿಣದಲ್ಲಿ ಎರಡು ಇಷ್ವಾಕಾರ ಪರ್ವತಗಳಿವೆ, ಪುಷ್ಕರಾರ್ಧದಲ್ಲಿಯೂ ಹೀಗೆಯೇ ಎರಡು ಇಷ್ವಾಕಾರಗಳಿವೆ. ಈ ನಾಲ್ಕು ಇಷ್ವಾಕಾರಗಳ ಮೇಲೆ ಪ್ರತಿಯೊಂದರ ಮೇಲೆ ಒಂದೊಂದರಂತೆ ನಾಲ್ಕು ಜಿನಾಲಯಗಳಿವೆ.

ಮಾನುಷೋತ್ತರ ಪರ್ವತದ ಮೇಲೆ ನಾಲ್ಕು ಜಿನಾಲಯಗಳಿವೆ. ನಂದೀಶ್ವರ ದ್ವೀಪದಲ್ಲಿ ಐವತ್ತೆರಡು ಜಿನಾಲಯಗಳಿವೆ, ಕುಂಡಲಗಿರಿಯ ಮೇಲೆ ನಾಲ್ಕು ಮತ್ತು ರುಚಕಗಿರಿಯ ಮೇಲೆ ನಾಲ್ಕು ಜಿನಾಲಯಗಳಿವೆ. ಹೀಗೆ ಮಧ್ಯಲೋಕದಲ್ಲಿ ಒಟ್ಟು ೪೫೮ ಜಿನಾಲಯಗಳಿವೆ.

ಅವುಗಳನ್ನು ಈ ಕೆಳಗಿನಂತೆ ಪುನಃ ನೋಡಬಹುದಾಗಿದೆ.

ಒಂದು ಮೇರುವಿಗೆ ಸಂಬಂಧಿಸಿದಂತೆ - ಮೇರುವಿನ ೧೬, ಗಜದಂತದ ೪, ಕುಲಾಚಲಗಳ ೬, ವಿಜಯಾರ್ಧದ ೩೪, ವಕ್ಷಾರದ ೧೬, ವೃಕ್ಷಗಳವು ೨ ಹೀಗೆ ಒಟ್ಟು ೭೮ ಆದವು. ಆದುದರಿಂದ ಪಂಚ ಮೇರುಗಳಿಗೆ ಸಂಬಂಧಿಸಿದಂತೆ ೭೮ X ೫ =೩೯೦ ಆದವು.

ಇಷ್ವಾಕಾರ ೪, ಮಾನುಷೋತ್ತರ ೪, ನಂದೀಶ್ವರ ೫೨, ಕುಂಡಲವನ ೪, ರುಚಿಕವರ ೪ ಹೀಗೆ ಒಟ್ಟು

೬೮ ಆದವು. ೩೯೦ + ೬೮ = ೪೫೮ ಮಧ್ಯಲೋಕದ ಅಕೃತ್ರಿಮ ಚೈತ್ಯಾಲಯಗಳಿವೆ.

ಈಗ ಈ ಅಕೃತ್ರಿಮ ಚೈತ್ಯಾಲಯಗಳ ಸ್ವರೂಪ ನೋಡೋಣ. ಉತ್ಕೃಷ್ಟ, ಮಧ್ಯಮ ಮತ್ತು ಜಘನ್ಯ ಹೀಗೆ ಇವುಗಳ ಆಕಾರಗಳು ಮೂರು ಪ್ರಕಾರದವಿವೆ.

ಉತ್ಕೃಷ್ಟ ಜಿನಾಲಯಗಳು ೧೦೦ ಯೋಜನ ಉದ್ದ, ೫೦ ಯೋಜನ ಅಗಲ, ೭೫ ಯೋಜನ ಎತ್ತರವಿರುತ್ತವೆ. ಭೂಮಿಯ ಒಳಗೆ ಮೂಲ (ತಳಪಾಯ)ವು ಅರ್ಧಯೋಜನದ್ದಿರುತ್ತದೆ. ಇವುಗಳ ಪೂರ್ವ ದಿಕ್ಕಿನ ದ್ವಾರಗಳ ಎತ್ತರವು ೧೬ ಯೋಜನ ಮತ್ತು ಅಗಲವು ಎಂಟು ಯೋಜನವಿರುತ್ತದೆ. ಎರಡೂ ಪಾರ್ಶ್ವಭಾಗಗಳಲ್ಲಿ ಯಾವ ಬಾಗಿಲುಗಳಿರುತ್ತವೆ ಅವು ೮ ಯೋಜನ ಎತ್ತರ ಮತ್ತು ೪ ಯೋಜನ ಅಗಲವಿರುತ್ತವೆ. ಹಿಂಭಾಗದಲ್ಲಿ ಯಾವ ಬಾಗಿಲು ಇರುವುದಿಲ್ಲ.

ಮಧ್ಯಮ ಜಿನಾಲಯಗಳು ಇವುಗಳ ಅರ್ಧ ಮತ್ತು ಜಘನ್ಯ ಜಿನಾಲಯಗಳು ಅವುಗಳಿಂದಲೂ ಅರ್ಧವಿರುತ್ತವೆ. ಅವುಗಳನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

	ಉತ್ಕೃಷ್ಟ ಜಿನಾಲಯ	ಮಧ್ಯಮ ಜಿನಾಲಯ	ಜಘನ್ಯ ಜಿನಾಲಯ
ಉದ್ದಳತೆ	೧೦೦ ಯೋಜನ	೫೦ ಯೋಜನ	೨೫ ಯೋಜನ
ಅಗಲಳತೆ	೫೦ ಯೋಜನ	೨೫ ಯೋಜನ	೧೨ $\frac{೧}{೨}$ ಯೋಜನ
ಎತ್ತರ	೭೫ ಯೋಜನ	೩೭ $\frac{೧}{೨}$ ಯೋಜನ	೧೮ $\frac{೩}{೪}$ ಯೋಜನ
ಮುಖ್ಯದ್ವಾರದ - ಎತ್ತರ	೧೬ ಯೋಜನ	೮ ಯೋಜನ	೪ ಯೋಜನ
ಅಗಲ	೮ ಯೋಜನ	೪ ಯೋಜನ	೨ ಯೋಜನ
ಗೌಣ(ಸಣ್ಣ) ದ್ವಾರದ - ಎತ್ತರ	೮ ಯೋಜನ	೪ ಯೋಜನ	೨ ಯೋಜನ
ಅಗಲ	೪ ಯೋಜನ	೨ ಯೋಜನ	೧ ಯೋಜನ

ಈಗ ಈ ಉತ್ಕೃಷ್ಟ, ಮಧ್ಯಮ, ಜಘನ್ಯ ಜಿನಾಲಯಗಳು ಎಲ್ಲಿವೆಯೆಂಬುದನ್ನು ನೋಡೋಣ -

ಉತ್ಕೃಷ್ಟ ಜಿನಾಲಯ :- ಭದ್ರಶಾಲವನ, ನಂದನವನ, ನಂದೀಶ್ವರ ದ್ವೀಪ ಮತ್ತು ವೈಮಾನಿಕ ದೇವಗಳ ವಿಮಾನಗಳಲ್ಲಿ ಸ್ಥಿತವಿರುವ ಜಿನಾಲಯಗಳು ಉತ್ಕೃಷ್ಟ ಆಕಾರದವು ಅರ್ಥಾತ್ ೧೦೦ ಯೋಜನದವಿವೆ.

ಮಧ್ಯಮ ಜಿನಾಲಯ - ಸೌಮನಸವನ, ರುಚಕವರ ದ್ವೀಪ, ಕುಂಡಲವರ ದ್ವೀಪ, ವಕ್ಷಾರ ಪರ್ವತ, ಇಷ್ವಾಕಾರ ಪರ್ವತ, ಮಾನುಷೋತ್ತರ ಪರ್ವತ, ಮತ್ತು ಕುಲಾಚಲಗಳ ಮೇಲೆ ಸ್ಥಿತವಿರುವ ಜಿನಾಲಯಗಳು ಮಧ್ಯಮ ಆಕಾರದವು ಅರ್ಥಾತ್ ೫೦ ಯೋಜನದವಿವೆ.

ಜಘನ್ಯ ಜಿನಾಲಯಗಳು - ಪಾಂಡುಕ ವನದಲ್ಲಿವೆ ಎಂದರೆ ಅವು ೨೫ ಯೋಜನದವಿವೆ.

ಮೇಲೆ ಹೇಳಲಾದ ಮೂರು ಪ್ರಕಾರದ ಜಿನಾಲಯಗಳಿಂದ ಭಿನ್ನ ಆಕಾರವುಳ್ಳ ಜಿನಾಲಯಗಳು

ವಿಜಯಾರ್ಧ ಪರ್ವತ, ಜಂಬೂ-ಶಾಲ್ಮಲೀ ವೃಕ್ಷಗಳ ಮೇಲೆ ಸ್ಥಿತವಿವೆ, ಅವು ಒಂದು ಹರದಾರಿ ವಿಸ್ತಾರವುಳ್ಳವಿವೆ.

ಭವನವಾಸಿ ಮತ್ತು ವ್ಯಂತರರ ಭವನಗಳಲ್ಲಿ ಸ್ಥಿತವಿರುವ ಜಿನಾಲಯಗಳ ಆಕಾರದ ವಿಶೇಷ ವರ್ಣನೆಯು ಶಾಸ್ತ್ರಗಳಲ್ಲಿ ಇಲ್ಲ. ಆದುದರಿಂದ ಹೇಗೆ ಜಿನೇಂದ್ರ ಭಗವಂತರು ನೋಡಿದ್ದಾರೆ ಹಾಗೆ ಅರ್ಥಾತ್ ಆ ಆಕಾರದವಿವೆಯೆಂದು ಮಾತ್ರ ನಾವು ಇಲ್ಲಿ ಹೇಳಬಹುದಾಗಿದೆ.

ಇವೆಲ್ಲ ಜಿನಾಲಯಗಳು ಪೂರ್ವಾಭಿಮುಖವಿರುತ್ತವೆ. ಈ ಜಿನಾಲಯಗಳನ್ನು ಜಿನೇಂದ್ರ ಪ್ರಾಸಾದವೆಂದು ಕೂಡ ಹೇಳುತ್ತಾರೆ. ಅವು ಶಂಖ-ಚಂದಿರ-ಕುಂದಪುಷ್ಪದ ಸಮಾನ ಧವಲವಿರುತ್ತವೆ ಮತ್ತು ರತ್ನಗಳ ಕಿರಣಗಳಿಂದ ಅಂಧಕಾರವನ್ನು ನಷ್ಟ ಮಾಡುತ್ತವೆ. ಇವು ತ್ರಿಭುವನತಿಲಕವೆಂಬ ಹೆಸರಿನಿಂದ ತಿಳಿಯಲ್ಪಡುತ್ತವೆ. ಈ ಜಿನಾಲಯಗಳ ದ್ವಾರದ ಪ್ರಮಾಣವಾಗಿರುವಂಥ ಕವಾಟಯುಗಲಗಳು ವಜ್ರಮಯವಾಗಿರುತ್ತವೆ ಅಲ್ಲದೆ ಮರಕತ ಮಣಿ, ಕರ್ಕೇತನಾದಿ ರತ್ನಗಳಿಂದ ಯುಕ್ತವಿವೆ. ಜಿನಾಲಯದಲ್ಲಿ ಪಂಚವರ್ಣ ರತ್ನಗಳಿಂದ ರಚಿಸಲಾದ ಸ್ತಂಭಗಳಿವೆ. ನಿರ್ಮಲ ಹಾಗೂ ಉತ್ತಮ ಸ್ಫಟಿಕ ರತ್ನಗಳಿಂದ ರಚಿಸಲ್ಪಟ್ಟ ಭಿತ್ತಿಗಳು ಅನೇಕ ಪ್ರಕಾರದ ವಿಸ್ಮಯಕಾರೀ ಚಿತ್ರಗಳಿಂದ ಯುಕ್ತವಿವೆ.

ಕಂಬಗಳ ಮಧ್ಯ ಭೂಮಿಯು ಪಂಚವರ್ಣದ ರತ್ನಗಳಿಂದ ನಿರ್ಮಿತವಾಗಿದ್ದು ಅವು ಶರೀರ, ಮನಸ್ಸು ಹಾಗೂ ನೇತ್ರಗಳಿಗೆ ಆಹ್ಲಾದದಾಯಕವಾಗಿವೆ ಅಲ್ಲದೆ ನಿರ್ಮಲವಿವೆ - ಧೂಳು ರಹಿತವಾಗಿವೆ. ಈ ಪ್ರಾಸಾದಗಳು ಮುತ್ತಿನ ಮಾಲೆಗಳಿಂದ ಹಾಗೂ ಚಾಮರಗಳಿಂದ ಯುಕ್ತವಾಗಿದ್ದು ಉತ್ತಮ ರತ್ನಗಳಿಂದ ವಿಭೂಷಿತವಿವೆ.

ಜಿನಮಂದಿರದಲ್ಲಿ ೧೦೮ ಗರ್ಭಗೃಹಗಳಿವೆ. ಜಿನಮಂದಿರದ ಮಧ್ಯದಲ್ಲಿ ರತ್ನಗಳ ಸ್ತಂಭಗಳಿಂದ ಕೂಡಿದ ೨ ಯೋಜನ ಅಗಲ, ೮ ಯೋಜನ ಉದ್ದ, ೪ ಯೋಜನ ಎತ್ತರ ದೇವಚ್ಛಂದ ಅರ್ಥಾತ್ ಮಂಟಪವಿದೆ. ಅದರಲ್ಲಿ ತೂಗುತ್ತಿರುವ ಪುಷ್ಪಮಾಲೆಗಳು ಅನೇಕ ವರ್ಣಮಯ ಮಣಿರತ್ನಗಳಿಂದ ನಿರ್ಮಿತವಿದೆ, ಅರವತ್ನಾಲ್ಕು ಕಮಲಮಾಲೆಗಳಿಂದ ಸುಶೋಭಿಸುವ ನಾನಾ ಪ್ರಕಾರದ ಚಾಮರ ಹಾಗೂ ಗಂಟೆಗಳಿಂದ ರಮಣೀಯವಿದೆ. ಗೋಶೀರ - ಮಲಯಚಂದನ - ಕೃಷ್ಣಾಗರು ಧೂಪದ ಗಂಧದಿಂದ ವಾಪ್ತವಾಗಿದೆ. ಕನ್ನಡಿ, ಗಿಂಡಿ, ಕಲಶ ಹಾಗೂ ಅನೇಕ ಪ್ರಕಾರದ ಧ್ವಜೆಪತಾಕೆಗಳಿಂದ ಶೋಭಿಸುತ್ತಿರುವ ರತ್ನದೀವಿಗೆಗಳಿಂದ ಯುಕ್ತವಿರುವ ದೇವಚ್ಛಂದವಿದೆ.

ಜಿನಮಂದಿರದ ಮಧ್ಯಭಾಗದಲ್ಲಿ ಪಾದಪೀಠಗಳಿಂದ ಸಹಿತವಿರುವ ಒಂದು ನೂರಾ ಎಂಟು ಸ್ಫಟಿಕಮಣಿಮಯ ಸಿಂಹಾಸನಗಳಿವೆ, ಅವುಗಳ ಮೇಲೆ ೫೦೦ ಧನುಷ್ಯ ಎತ್ತರವಾದ ಒಂದು ನೂರಾ ಎಂಟು ಅನಾದಿನಿಧನ ಜಿನಪ್ರತಿಮೆಗಳು ವಿರಾಜಮಾನವಿವೆ. ಇಂದ್ರನೀಲ ಮಣಿಮಯ ಕುಂತಳ ಮತ್ತು ಭೃಕುಟಿಗಳ ಅಗ್ರಭಾಗ, ಸ್ಫಟಿಕಮಣಿ ಇಂದ್ರನೀಲ ಮಣಿಗಳ ಧವಲ ಮತ್ತು ಕೃಷ್ಣ ನೇತ್ರಯುಗಲ, ವಜ್ರಮಯ ದಂತಪಂಕ್ತಿ, ಪಲ್ಲವ ಸದೃಶ ಅಧರೋಷ್ಠ, ವಜ್ರದಂತಿರುವ ಉಗುರುಗಳು, ಕಮಲದಂಥ ಕೆಂಪು ಬಣ್ಣದ ಹಸ್ತ ಪಾದಗಳು, ೧೦೦೮ ವ್ಯಂಜನ ಸಮೂಹ ಮತ್ತು ೩೨ ಶುಭಲಕ್ಷಣಗಳಿಂದ ಯುಕ್ತ, ಮುಕ್ಕೊಡೆ ಸಹಿತ, ಪಲ್ಯಂಕಾಸನದಲ್ಲಿರುವ ಸಮಚತುರಸ್ರ ಆಕಾರವುಳ್ಳ ಈ ಜಿನಪ್ರತಿಮೆಗಳು ನಿತ್ಯ ಜಯವಂತವಾಗಿರಲಿ. ಪ್ರತಿಯೊಂದು ಪ್ರತಿಮೆಯ ಹತ್ತಿರ ಕೈಯಲ್ಲಿ ಚಾಮರಗಳನ್ನು ಹಿಡಿದುಕೊಂಡಿರುವ ಮೂವತ್ತೆರಡು ದೇವ ಯುಗಲರ ಪ್ರತಿಮೆಗಳಿರುತ್ತವೆ. ಪ್ರತಿಯೊಂದು ಪ್ರತಿಮೆಯ ಹತ್ತಿರ ಗಂಟೆ ಮೊದಲಾದ ಉಪಕರಣಗಳು ಮತ್ತು ದಿವ್ಯ ಮಂಗಲ ದ್ರವ್ಯಗಳು ಸುಶೋಭಿತವಿವೆ.

ಈ ಮಂಗಲ ದ್ರವ್ಯಗಳು ಗಿಂಡಿ, ಕಲಶ, ಕನ್ನಡಿ, ಚಾಮರ, ಧ್ವಜ, ಬೀಸಣಿಕೆ, ಛತ್ರ, ಸುಪ್ರತಿಷ್ಠಿತ (ದೀಪಸ್ತಂಭ)ಗಳಿವೆ ಪ್ರತಿಯೊಂದು ಪ್ರತಿಮೆಯ ಹತ್ತಿರ ೧೦೮-೧೦೮ ಅಷ್ಟಮಂಗಲ ದ್ರವ್ಯಗಳಿರುತ್ತವೆ. ಯಕ್ಷರುಗಳ ಮೂರ್ತಿಗಳೂ ಅಲ್ಲಿ ಇರುತ್ತವೆ. ಶ್ರೀದೇವಿ, ಶ್ರುತದೇವಿ (ಸರಸ್ವತಿ ದೇವಿ), ಸರ್ವಾಹ್ನಯಕ್ಷ ಮತ್ತು ಸನತಕುಮಾರ ಯಕ್ಷ ಇವರ ನಾಲ್ವರ ಮೂರ್ತಿಗಳು ಜಿನೇಂದ್ರ ಭಗವಂತರ ಪಾರ್ಶ್ವಭಾಗಗಳಲ್ಲಿ ಇರುತ್ತವೆ.

ಜಿನಾಲಯಗಳ ಹೊರಗೆ ರತ್ನಮಯ ಕೋಟೆಗಳಿವೆ. ಅಲ್ಲಿ ದೊಡ್ಡ-ದೊಡ್ಡ ಧೂಪ ಘಟಗಳಿರುತ್ತವೆ, ಧ್ವಜಗಳಿರುತ್ತವೆ. (ಕನ್ನಡ 'ರತ್ನಕರಂಡ ಶ್ರಾವಕಾಚಾರ' ಗ್ರಂಥದಲ್ಲಿ ಪು. ೨೧೮ ರಿಂದ ಅಕೃತ್ರಿಮ ಜಿನಚೈತ್ಯಾಲಯಗಳ ವರ್ಣನೆಯನ್ನು ನೋಡುವುದು) ಇಂದ್ರಧ್ವಜ ವಿಧಾನದ ಪುಸ್ತಕಗಳಲ್ಲಿ ಇವುಗಳ ವಿಸ್ತಾರವಾದ ವರ್ಣನೆಯಿದೆ.

ಈ ಪ್ರಕಾರ ವ್ಯಂತರ ಹಾಗೂ ಜ್ಯೋತಿಷಿಗಳ ಅಸಂಖ್ಯಾತ ಅಕೃತ್ರಿಮ ಚೈತ್ಯಾಲಯಗಳನ್ನು ಬಿಟ್ಟು ಮೂರು ಲೋಕದ ಶೇಷ ಚೈತ್ಯಾಲಯಗಳು ಎಂಟು ಕೋಟಿ ಐವತ್ತಾರು ಲಕ್ಷ ತೊಂಭತ್ತೇಳು ಸಾವಿರದಾ ನಾಲ್ಕು ನೂರಾ ಎಂಭತ್ತೊಂದು ಇವೆ. ಪ್ರತಿಯೊಂದರಲ್ಲಿ ೧೦೮ ಪ್ರತಿಮೆಗಳಿವೆ. ಇವುಗಳಲ್ಲಿನ ಪ್ರತಿಮೆಗಳ ಒಟ್ಟು ಸಂಖ್ಯೆಯು ೯ ಅಬ್ಜ ೨೫ ಕೋಟಿ ೫೩ ಲಕ್ಷ ೨೭ ಸಾವಿರದಾ ೯೪೮ ಇದೆ.

ಇವೆಲ್ಲ ಜಿನಪ್ರತಿಮೆಗಳಿಗೆ ನಾವು ಇಲ್ಲಿಂದಲೇ ಭಾವಸಹಿತ ನಮನ ಮಾಡೋಣ.

(ಓಂ ಹ್ರೀಂ ಶ್ರೀ ತ್ರಿಲೋಕವರ್ತೀ ಅಕೃತ್ರಿಮ ಜಿನಚೈತ್ಯಾಲಯಸ್ಥ ಜಿನಬಿಂಬೇಭ್ಯೋ ನಮಃ ।)

ಇನ್ನು ಕೆಲವು ಪ್ರಶ್ನೆಗಳು ಬಂದಿವೆ. ಅವುಗಳಲ್ಲಿ ಒಂದು ಪ್ರಶ್ನೆಯು ಚಕ್ರವರ್ತಿಗಳಿಗೆ ಸಂಬಂಧಿಸಿದ್ದು - ಚಕ್ರವರ್ತಿಗಳು ಮೋಕ್ಷಕ್ಕೆ ಹೋಗುತ್ತಾರೆಯೋ ಅಥವಾ ಸ್ವರ್ಗ ಮತ್ತು ನರಕಗಳಿಗೂ ಹೋಗಬಹುದಾಗಿದೆ ? ಇದರ ಚರ್ಚೆಯಂತೂ ಮೊದಲು ಆಗಿತ್ತು. ಇರಲಿ, ಇವರುಗಳು ಮೂರು ಕಡೆಗೂ ಹೋಗುತ್ತಾರೆ. ನಮ್ಮಲ್ಲಿ ಈ ಅವಸರ್ಪಿಣಿಯ ಚತುರ್ಥ ಕಾಲದಲ್ಲಿ ಆಗಿರುವ ಹನ್ನೆರಡು ಚಕ್ರವರ್ತಿಗಳೊಳಗಿಂದ ಮೂರನೆಯ ಮಘವಾನ ಮತ್ತು ನಾಲ್ಕನೆಯ ಸನತ್‌ಕುಮಾರ ಚಕ್ರವರ್ತಿಗಳು ಸತ್ತು ಸ್ವರ್ಗದೊಳಗೆ ಹೋಗಿದ್ದಾರೆ; ಎಂಟನೆಯ ಸುಭೌಮ ಚಕ್ರವರ್ತಿ ಮತ್ತು ಹನ್ನೆರಡನೆಯ ಬ್ರಹ್ಮದತ್ತ ಚಕ್ರವರ್ತಿಯು ಸತ್ತು ಏಳನೆಯ ನರಕಕ್ಕೆ ಹೋಗಿದ್ದಾರೆ ಉಳಿದ ಎಂಟು ಚಕ್ರವರ್ತಿಗಳು ಮೋಕ್ಷಕ್ಕೆ ಹೋಗಿದ್ದಾರೆ. ಚಕ್ರವರ್ತಿ ಪದದಲ್ಲಿಯೇ ಮರಣ ಹೊಂದುವಂಥವರು ನಿಯಮದಿಂದ ಏಳನೆಯ ನರಕಕ್ಕೆ ಹೋಗುತ್ತಾರೆ.

ಇನ್ನೊಂದು **ಪ್ರಶ್ನೆ** - ಸಮುದ್ಘಾತವೆಂದರೇನು ? ಇದರಲ್ಲಿ ಯಾರ ಘಾತ ಮಾಡುವುದಿದೆ ?

ಉತ್ತರ - ಇದರಲ್ಲಿ ಯಾರದೂ ಘಾತವಾಗುವುದಿಲ್ಲ. ಮೂಲ ಶರೀರವನ್ನು ಬಿಡದೇ ಆತ್ಮ ಪ್ರದೇಶಗಳು ಶರೀರದಿಂದ ಹೊರಗೆ ಹರಡುವುದನ್ನು ಸಮುದ್ಘಾತವೆಂದು ಹೇಳುತ್ತಾರೆ. ಕೇವಲೀ ಸಮುದ್ಘಾತದ ಹೆಸರನ್ನು ಅನೇಕರು ಆಲಿಸಿರಬಹುದು. ಹದಿಮೂರನೆಯ ಗುಣಸ್ಥಾನದ ಕೊನೆಯಲ್ಲಿ ಆಯುಕರ್ಮ ಮತ್ತು ಉಳಿದ ಮೂರು ಅಘಾತಿ ಕರ್ಮಗಳ ಸ್ಥಿತಿಯನ್ನು ಸಮಾನಗೊಳಿಸುವ ಸಲುವಾಗಿ ಕೇವಲೀ ಸಮುದ್ಘಾತವಾಗುತ್ತದೆ. ಇದು ಸಹಜವಾಗಿಯೇ ಆಗುತ್ತದೆ, ವಿಚಾರ ಮಾಡಿ ತಿಳಿದುಕೊಂಡು ಮಾಡಬೇಕಾಗುವುದಿಲ್ಲ. ಅಲ್ಲಿ ಪುನಃ ಪುನಃ ಕರ್ಮಗಳ ಸ್ಥಿತಿಯು ಸಮಾನವಿದೆಯೋ ಅಥವಾ ಇಲ್ಲವೆಂಬುದನ್ನು ಇಣಿಕಿ ನೋಡಬೇಕಾಗುವುದಿಲ್ಲ.

ಪ್ರಶ್ನೆ :- ಕೇವಲಿಗಳನ್ನು ಹೊರತು ಪಡಿಸಿ ಬೇರೆ ಜೀವರುಗಳದ್ದೂ ಸಮುದ್ಘಾತವಾಗುತ್ತದೆಯೇನು?

ಉತ್ತರ :- ಅಹುದು, ಸಮುದ್ಘಾತವು - ೧) ವೇದನಾ ಸಮುದ್ಘಾತ, ೨) ಕಷಾಯ ಸಮುದ್ಘಾತ, ೩) ಮಾರಣಾಂತಿಕ ಸಮುದ್ಘಾತ, ೪) ವೈಕ್ರಿಯಿಕ ಸಮುದ್ಘಾತ, ೫) ತೇಜಸ್ ಸಮುದ್ಘಾತ, ೬) ಆಹಾರಕ ಸಮುದ್ಘಾತ ಮತ್ತು ೭) ಕೇವಲೀ ಸಮುದ್ಘಾತವೆಂದು ಏಳು ಪ್ರಕಾರದ್ದಿವೆ.

ವೇದನಾ ಸಮುದ್ಘಾತ-ತೀವ್ರ ವೇದನೆಯ ಸಮಯದಲ್ಲಿ ಆತ್ಮ ಪ್ರದೇಶಗಳು ಶರೀರದಿಂದ ಹೊರಗೆ ಕೂಡ ಹರಡಿಕೊಳ್ಳುತ್ತವೆ, ಮೂಲ ಶರೀರದಲ್ಲಿಯಂತೂ ಇದ್ದೇ ಇರುತ್ತವೆ. ಒಂದು ಪ್ರದೇಶದಿಂದ ಹಿಡಿದು ತನ್ನ ಅವಗಾಹನದ ಮೂರು ಪಟ್ಟದವರೆಗೆ ಹರಡಬಹುದಾಗಿದೆ. ಅದು ಕೂಡ ಕೇವಲ ಅಗಲಳತೆಯಲ್ಲಿ ಹರಡುತ್ತವೆ, ಉದ್ದದಲ್ಲಿ ಇಲ್ಲ. ಮೂರು ಪಟ್ಟಕ್ಕಿಂತ ಹೆಚ್ಚು ಹರಡುವುದಿಲ್ಲ. ಕೆಲವು ಸಮಯಗಳಲ್ಲಿ - ಅಂತರ್ಮುಹೂರ್ತದಲ್ಲಿ ಮರಳಿ ಮೂಲ ಶರೀರದೊಳಗೆ ಬಂದು ಬಿಡುತ್ತವೆ.

ಕಷಾಯ ಸಮುದ್ಘಾತ - ತೀವ್ರ ಕಷಾಯದ ಸಮಯದಲ್ಲಿ ಆತ್ಮಪ್ರದೇಶಗಳು ಶರೀರದ ಹೊರಗೆ ಹರಡಿಕೊಳ್ಳುತ್ತವೆ. ಇಲ್ಲಿಯೂ ವೇದನಾ ಸಮುದ್ಘಾತದ ಸಮಾನ ಆತ್ಮಪ್ರದೇಶಗಳು ಅಗಲಳತೆಯಲ್ಲಿ ಶರೀರದ ಅವಗಾಹನದಿಂದ ಮೂರರಷ್ಟು ಹರಡಿಕೊಳ್ಳುತ್ತವೆ ಅರ್ಥಾತ್ ೩ X ೩ = ೯ ಗುಣಿತದವರೆಗೆ ಆತ್ಮ ಪ್ರದೇಶಗಳ ಅವಗಾಹನವಾಗುವ ಸಾಧ್ಯತೆಯಿದೆ. ಅದರ ನಂತರ ಮೊದಲಿನಂತೆ ಮೂಲ ಶರೀರದಲ್ಲಿ ಬಂದು ಸೇರಿಕೊಳ್ಳುತ್ತವೆ.

ಮಾರಣಾಂತಿಕ ಸಮುದ್ಘಾತ - ಮರಣವಾಗುವ ಮುನ್ನ ಒಂದು ಅಂತರ್ಮುಹೂರ್ತ ಮೊದಲು ಜೀವದ ಆತ್ಮಪ್ರದೇಶಗಳು ಎಲ್ಲಿ ಜನ್ಮ ಪಡೆಯುವುದಿದೆ ಅಲ್ಲಿಯವರೆಗೆ ಹರಡಿಕೊಂಡಿರುತ್ತವೆ. ವಿಗ್ರಹಗತಿಯಲ್ಲಿ ಜೀವನು ಯಾವ ಪ್ರಕಾರ ಋಜುಗತಿಯಿಂದ ಎಂದರೆ ನೇರವಾಗಿ ಹೋಗುತ್ತಾನೆ ಅಥವಾ ತಿರುವು ತಗೆದುಕೊಂಡು ಹೋಗುತ್ತಾನೆ ಅದೇ ರೀತಿಯಲ್ಲಿ ಆತ್ಮಪ್ರದೇಶಗಳು ಹರಡಿಕೊಂಡಿರುತ್ತವೆ, ಒಂದೆರಡು ಜೀವಗಳದ್ದಲ್ಲ ಬಹುಸಂಖ್ಯೆಯ ಜೀವಗಳದ್ದು ಮಾರಣಾಂತಿಕ ಸಮುದ್ಘಾತವಾಗುತ್ತದೆ, ಏಕೇಂದ್ರಿಯಗಳದ್ದೂ ಆಗುತ್ತದೆ. ಪ್ರತಿ ಸಮಯ ಅನಂತ ಜೀವಗಳು ಸತ್ತು ಅನ್ಯತ್ರ ಗಮನ ಮಾಡುತ್ತವೆ ಮತ್ತು ಅದರ ಮೊದಲು ಅನಂತ ಜೀವಗಳದ್ದು ಮಾರಣಾಂತಿಕ ಸಮುದ್ಘಾತವು ಕೂಡ ಆಗುತ್ತಿರುತ್ತದೆ. ಸಂಪೂರ್ಣ ಲೋಕದಲ್ಲಿ ಜೀವಗಳ ಪ್ರದೇಶಗಳು ಮಾರಣಾಂತಿಕ ಸಮುದ್ಘಾತ ರೂಪದಿಂದ ಹರಡಿಕೊಂಡಿರದಂಥ ಯಾವೊಂದು ಪ್ರದೇಶವೂ ಬರಿದಾಗಿರುವುದಿಲ್ಲ ಮತ್ತು ಯಾವೊಂದು ಸಮಯವೂ ಇರುವುದಿಲ್ಲ.

ಮಾರಣಾಂತಿಕ ಸಮುದ್ಘಾತದ ನಂತರ ಜೀವದ ಪ್ರದೇಶಗಳು ಮರಳಿ ಮೂಲ ಶರೀರದಲ್ಲಿ ಬಂದು ಸೇರಿಕೊಳ್ಳುತ್ತವೆ, ನಂತರ ಮರಣವಾಗುತ್ತದೆಯೆಂದು ಮೊದಲು ನಾವು ಆಲಿಸಿದ್ದೆವು ಮತ್ತು ಎಲ್ಲಿಯೋ ಓದಿದ ಸ್ಮರಣೆಯೂ ಇದೆ. ಆದರೆ ಧವಲಾ ಗ್ರಂಥದ ಸ್ವಾಧ್ಯಾಯದಲ್ಲಿ ಬಂದಿರುವುದೇನೆಂದರೆ ಮರಣದ ಮೊದಲು ಅಂತರ್ಮುಹೂರ್ತ ಸಮಯದಲ್ಲಿ ಜೀವದ ಪ್ರದೇಶಗಳು ಅದೇ ರೀತಿಯಿಂದ ಹರಡಿಕೊಂಡೇ ಇರುತ್ತವೆ ಮತ್ತು ಯಾವಾಗ ಮರಣವಾಗುತ್ತದೆ ಆಗ ಉಳಿದ ಎಲ್ಲ ಪ್ರದೇಶಗಳು ಮೂಲ ಶರೀರವನ್ನು ಬಿಟ್ಟುಕೊಟ್ಟು ಅದೇ ವಿಗ್ರಹ ಗತಿಯ ಮಾರ್ಗದಿಂದ ಹೊರಟು ಹೋಗುತ್ತವೆ. ಯಾವ ರೀತಿ ನಾವು ಒಂದು ಚಿಕ್ಕದಾದ ಗುಂಡಿಯನ್ನು

ದಾಟುವುದಿದ್ದರೆ ಮೊದಲು ಒಂದು ಹೆಜ್ಜೆಯನ್ನು ಆಚೆಯ ಕಡೆಗೆ ಇರಿಸುತ್ತೇವೆ ಮತ್ತು ಅದರ ನಂತರ ಇನ್ನೊಂದು ಪಾದವನ್ನು ಈ ಕಡೆಯಿಂದ ಎತ್ತಿಕೊಳ್ಳುತ್ತೇವೆ, ಅದೇ ರೀತಿಯೆಂದು ತಿಳಿಸಿಕೊಟ್ಟಿದ್ದಾರೆ.

ಪ್ರಶ್ನೆ :- ಮಾರಣಾಂತಿಕ ಸಮುದ್ಘಾತವನ್ನು ಏಕೆ ಮಾಡಬೇಕಾಗುತ್ತದೆ ?

ಉತ್ತರ :- ಮುಂದಿನ ಗತಿಯ ಆಯುಬಂಧವಾಗಿ ಆ ಕರ್ಮವಂತೂ ಸತ್ತಾದಲ್ಲಿ ಬಿದ್ದಿರುತ್ತದೆ. ಎಲ್ಲಿ ಜನ್ಮವಾಗುವುದಿದೆ ಎಂಬುದರದೂ ನಿಶ್ಚಿತವಿದೆ. ಆದರೆ ಸಮುದ್ಘಾತದ ಕಾರ್ಯವು ಸಹಜ ನಿಮಿತ್ತನೈಮಿತ್ತಿಕ ರೂಪದಿಂದ ಆಗುತ್ತಿರುತ್ತದೆ. ಜೀವನು ತಾನು ಜನಿಸಬೇಕಾದ ಸ್ಥಾನವನ್ನು ನೋಡಿ ಬರುತ್ತಾನೆ ಅದರಿಂದ ಸಂತೋಷವಾಗಿ ಇಲ್ಲಿಂದ ಹೊರಟು ಹೋಗುತ್ತಾನೆ ಅಥವಾ ಮರಣದ ನಂತರ ಜೀವನು ಮುಂದಿನ ಸ್ಥಾನವು ದೊರಕದಿರುವುದರಿಂದ ಸುತ್ತುತ್ತಿರುತ್ತಾನೆ - ಎಂಬಿತ್ಯಾದಿ ಮಾತುಗಳು ಕೇವಲ ಭ್ರಾಂತಿಯುಕ್ತವಿವೆ. ಹೇಳಿಕೆ -ಕೇಳಿಕೆಯ ಮಾತುಗಳಿವೆ.

ವೈಕ್ರಿಯಿಕ ಸಮುದ್ಘಾತ-ದೇವಗತಿಯ ಜೀವಗಳು ವಿಕ್ರಿಯೆಯ ಮೂಲಕ ಅನ್ಯ ಶರೀರ ಮಾಡಿಕೊಂಡು ಅನ್ಯತ್ರ ಗಮನ ಮಾಡುತ್ತಾರೆ, ಮಧ್ಯ ಲೋಕದಲ್ಲಿ ಬರುತ್ತಾರೆ, ಅವರು ಮೂರನೆಯ ನರಕದವರೆಗೆ ಕೂಡ ಹೋಗುವ ಸಾಧ್ಯತೆಯಿದೆ, ಆದರೆ ಅವರ ಆತ್ಮಪ್ರದೇಶಗಳು ಮೂಲ ಶರೀರವನ್ನು ಬಿಡುವುದಿಲ್ಲ ಅರ್ಥಾತ್ ಹೊಸ ಶರೀರವು ಎಲ್ಲಿ ಹೋಗಿದೆ ಅಲ್ಲಿಯವರೆಗೆ ಆತ್ಮಪ್ರದೇಶಗಳು ಹರಡಿಕೊಂಡಿರುತ್ತವೆ. ಇದು ಕೂಡ ಒಂದು ಅಂತರ್ಮುಹೂರ್ತದವರೆಗೆ ಇರುತ್ತದೆ. ಚಕ್ರವರ್ತಿಗಳು ಕೂಡ ಔದಾರಿಕ ಶರೀರದ ಮೂಲಕ ವಿಕ್ರಿಯೆ ಮಾಡುವ ಸಾಧ್ಯತೆಯಿದೆ. ಬೇರೆ ಜೀವಗಳದ್ದು ಅಥವಾ ಋದ್ಧಿಧಾರಕರದೂ ವೈಕ್ರಿಯಿಕ ಸಮುದ್ಘಾತವಾಗುತ್ತದೆ. ವಿಷ್ಣುಕುಮಾರ ಮುನಿಯ ಕಥೆಯಂತೂ ಎಲ್ಲರಿಗೂ ಗೊತ್ತಿರುವಂಥದೇ ಇದೆ. ಇಷ್ಟೇ ಅಲ್ಲ, ವಾಯುಕಾಯಿಕ ಜೀವಗಳದೂ ವಿಕ್ರಿಯೆಯಾಗುತ್ತದೆ.

ತೇಜಸ್ ಸಮುದ್ಘಾತ - ಇದರಲ್ಲಿ ಶುಭ ತೇಜಸ್ ಮತ್ತು ಅಶುಭ ತೇಜಸ್ ಎಂಬ ಎರಡು ಭೇದಗಳಿವೆ. ಬರಗಾಲ, ಮಹಾಮಾರಿ ಮೊದಲಾದವುಗಳ ಪ್ರಕೋಪವಾದ ಮೇಲೆ ಜೀವಗಳ ಕುರಿತಾಗಿ ದಯೆ, ಅನುಕಂಪೆಯ ಪರಿಣಾಮಗಳ ಕಾರಣದಿಂದ ಮುನಿರಾಜರ ಬಲ ಭುಜದಿಂದ ನೀಲಿ ಬಣ್ಣದ ಶುಭ ತೇಜಸ್ ಶರೀರವು ಹೊರಡುತ್ತದೆ. ಅದರ ಜತೆಯಲ್ಲಿ ಆತ್ಮ ಪ್ರದೇಶಗಳೂ ಹರಡುತ್ತವೆ. ಅವು ೧೨ ಯೋಜನ X ೯ ಯೋಜನದವರೆಗೆ ಹರಡುವ ಸಾಧ್ಯತೆಯಿದೆ. ಅವು ರೋಗ, ಬರಗಾಲ ಮೊದಲಾದವುಗಳ ನಿವಾರಣೆ ಮಾಡಿ ಮರಳಿ ಬಂದು ಮೂಲ ಶರೀರದಲ್ಲಿ ಪ್ರವೇಶ ಮಾಡುತ್ತವೆ. ತೀವ್ರ ಕ್ರೋಧಾದಿಗಳ ಕಾರಣದಿಂದ ಅಶುಭ ತೇಜಸ್ ಕುಂಕುಮ ವರ್ಣದ್ದು ಬೆಕ್ಕಿನ ಆಕಾರಯುಕ್ತ ಶರೀರವು ಮುನಿರಾಜರ ಎಡಭುಜದಿಂದ ಹೊರಟು ೧೨ ಯೋಜನ X ೯ ಯೋಜನದವರೆಗೆ ವಿಸ್ತರಿಸಿ ಅಷ್ಟು ಕ್ಷೇತ್ರವನ್ನು ಸುಟ್ಟು ಮರಳಿ ಮೂಲ ಶರೀರದಲ್ಲಿ ಬರುತ್ತದೆ ಮತ್ತು ಮುನಿರಾಜರ ಶರೀರವು ಕೂಡ ಭಸ್ಮವಾಗಿ ಹೋಗುತ್ತದೆ.

ಈ ಶುಭ ತೇಜಸ್ ಸಮುದ್ಘಾತವಿರಲಿ ಅಥವಾ ಅಶುಭ ತೇಜಸ್ ಸಮುದ್ಘಾತವಿರಲಿ ಅದಂತೂ ಭಾವಲಿಂಗಿ ಸಂತರಿಗೇ ಆಗುತ್ತದೆ. ಮುನಿರಾಜರು ಯಾರನ್ನು ಸುಟ್ಟು ಹಾಕುವುದನ್ನಂತೂ ಬಯಸುವುದಿಲ್ಲ ಆದರೆ ಪರಿಣಾಮವು ಕೆಟ್ಟು ಹೋಗುವ ಸಲುವಾಗಿ ಸಮಯವಾದರೂ ಎಲ್ಲಿ ಬೇಕಾಗುತ್ತದೆ ? ದ್ವೀಪಾಯನ ಮುನಿಯ

ಕಥೆಯನ್ನು ಆಲಿಸಿಲ್ಲವೇನು ? - ದ್ವಾರಕಾ ಪುರಿಯ ಕುರಿತಾಗಿ ಉಂಟಾದ ಜಿಜ್ಞಾಸೆಯ ಉತ್ತರ ಸ್ವರೂಪವಾಗಿ, ಹನ್ನೆರಡು ವರ್ಷಗಳ ನಂತರ ಯಾದವ ಕುಮಾರರು ಮದ್ಯಪಾನ ಮಾಡಿ ದ್ವೀಪಾಯನ ಮುನಿಯ ಮೇಲೆ ಉಪಸರ್ಗ ಮಾಡುವರು ಮತ್ತು ಅದರ ಕಾರಣದಿಂದ ದ್ವಾರಕಾ ನಗರವು ಸುಟ್ಟು ಹೋಗುವುದೆಂದು ನೇಮಿನಾಥ ತೀರ್ಥಂಕರರ ವಾಣಿಯಲ್ಲಿ ಬಂದಿತ್ತು. ಅದನ್ನು ಕೇಳಿ ದ್ವೀಪಾಯನ ಮುನಿಯು ದ್ವಾರಕಾಪುರಿಯನ್ನು ಬಿಟ್ಟು ಹೋಗುತ್ತಾನೆ, ಇಡೀ ರಾಜ್ಯದೊಳಗಿಂದ ಮದ್ಯ ತಯಾರಿಸುವ ಸಾಮಗ್ರಿಗಳನ್ನು ಕಾಡು, ಬೆಟ್ಟ , ಕಂದಕಗಳಲ್ಲಿ ಎಸೆದು ಬಿಡಲಾಗುತ್ತದೆ ನಾವು ಎಲ್ಲ ನಿಮಿತ್ತಗಳನ್ನು ದೂರ ಮಾಡಿದ್ದೇವೆ. ಇನ್ನು ದ್ವಾರಿಕೆಯು ಹೇಗೆ ಸುಡುವುದು? ಎಂದು ಎಲ್ಲರೂ ಯೋಚಿಸುತ್ತಾರೆ.

ಅಧಿಕ ಮಾಸದ ಗಣನೆಯನ್ನು ಮರೆತು ದ್ವೀಪಾಯನನು ತಾನಂತೂ ಇಲ್ಲಿ ಇರಲೇ ಇಲ್ಲ, ಹೇಗಿದೆ ದ್ವಾರಿಕೆಯು ? ಎಂಬುದನ್ನು ನೋಡುವ ಸಲುವಾಗಿ ದ್ವಾರಕಾಪುರಿಗೆ ಮರಳುತ್ತಾನೆ. ಯಾದವ ಕುಮಾರ (ರಾಜಕುಮಾರ)ರು ವನಕ್ರೀಡೆಯಾಡಲು ಕಾನನದೊಳಗೆ ಹೋಗಿದ್ದರು. ಅವರು ಕಾನನದಲ್ಲಿ ದಾರಿಯನ್ನು ಮರೆತು ಅಲೆದಾಡುತ್ತಿದ್ದರು, ಬಳಲಿ-ಬಾಯಾರಿ ಅಲ್ಲಿಯ ಕೆರೆಯಲ್ಲಿಯ ನೀರು ಕುಡಿಯುತ್ತಾರೆ. ಅದರಲ್ಲಿ ಮದ್ಯದ ಸಾಮಗ್ರಿಗಳು ಬೆರೆತು ಮದ್ಯವು ಸಿದ್ಧವಾಗಿತ್ತು. ಅಮಲಿನಲ್ಲಿದ್ದ ಯಾದವ ಕುಮಾರರು ಮರಳಿ ಬರುವಾಗ ದ್ವೀಪಾಯನನನ್ನು ಕಂಡು ಅವನಿಗೆ ಕಲ್ಲು ಎಸೆಯಲು ಆರಂಭಿಸುತ್ತಾರೆ. ಮುನಿಯು ಕ್ರೋಧಿ ತನಾಗುತ್ತಾನೆ ಮತ್ತು ಅಶುಭ ತೇಜಸ್ ಶರೀರದಿಂದ ದ್ವಾರಿಕೆಯು ಸುಡುತ್ತದೆ. ಕೆಲವು ಶಾಸ್ತ್ರಗಳಲ್ಲಿ ಉಪಸರ್ಗದ ಸಮಯದಲ್ಲಿ ಕ್ರೋಧದಿಂದ ಸತ್ತ ದ್ವೀಪಾಯನನು ಅಗ್ನಿಕುಮಾರನಾಗಿ ಜನಿಸುತ್ತಾನೆ ಮತ್ತು ದ್ವಾರಿಕೆಯನ್ನು ಸುಡುತ್ತಾನೆಂದು ಬರುತ್ತದೆ.

ನಿಮಿತ್ತಗಳನ್ನು ತಗೆದು ಹಾಕುವ ಪೂರ್ಣ ಪ್ರಯತ್ನ ಮಾಡಿದರೂ ಆಗುವುದನ್ನು ತಪ್ಪಿಸಲಾಯಿತೇನು, ಅಥವಾ ನಿಮಿತ್ತವಾದರೂ ದೂರವಾಯಿತೇನು ? ನಿಮಿತ್ತಗಳನ್ನು ದೂರ ಮಾಡುವುದೂ ಸಾಧ್ಯವಿಲ್ಲ ಮತ್ತು ಒತ್ತಾಯಪೂರ್ವಕ ತಂದುಕೊಳ್ಳುವುದು ಅಥವಾ ಉಪಸ್ಥಿತ ಮಾಡುವುದೂ ಸಾಧ್ಯವಿಲ್ಲ. ಪ್ರತಿಯೊಂದು ಕಾರ್ಯವು ತನ್ನ ಸ್ವಸಮಯದಲ್ಲಿ ತನ್ನ ಉಪಾದಾನದಿಂದಲೇ ಸಂಭವಿಸುತ್ತದೆ ಮತ್ತು ಅದರ ನಿಮಿತ್ತವೂ ಕೂಡ ನಿಶ್ಚಿತವಿರುತ್ತದೆ. ನಿಮಿತ್ತದಿಂದಂತೂ ಕಾರ್ಯವಾಗುವುದಿಲ್ಲ, ಆದರೆ ಅದು ಕೂಡ ನಿಶ್ಚಿತವಿರುತ್ತದೆ ಅದನ್ನು ಯಾರೂ ಬದಲಿಸುವ ಸಾಧ್ಯತೆಯಿಲ್ಲ.ತಿಳಿಯುವ ಸ್ವಭಾವದ ಆತ್ಮರುಗಳು ತಿಳಿಯಬಹುದಾಗಿದೆ.

ಅಪಘಾತದಲ್ಲಿ ಯಾರದಾದರೂ ಮರಣವಾಗಿ ಹೋದರೆ ಜನರು 'ಅಯ್ಯೋ ! ಪಾಪ ಸತ್ತು ಹೋದನು ಮನೆಯಲ್ಲಿ ಇರುತ್ತಿದ್ದರೆ ಉಳಿಯುತ್ತಿದ್ದನು ! ಅಥವಾ ಯಾರಾದರೂ ರೋಗದಿಂದ ಸತ್ತು ಹೋದರೆ, ಆ ಡಾಕ್ಟರನ ಹತ್ತಿರ ಹೋಗಲೇಬಾರದಿತ್ತು, ಈ ಆಸ್ಪತ್ರೆಗೆ ಒಯ್ದಿದ್ದರೆ ಸರಿಯಾಗುತ್ತಿತ್ತು; ಅಮೇರಿಕಾಗೆ ತಗೆದುಕೊಂಡು ಹೋಗುವವರಿದ್ದರು ಹಿಂದಿನ ವಾರವೇ ಹೋಗಿದ್ದರೆ ಬದುಕಿ ಉಳಿಯುತ್ತಿದ್ದನು.' ಎಂದೆಲ್ಲ ಮಾತನಾಡುತ್ತಾರೆ. ಪ್ರತಿಯೊಂದು ಜೀವದ ಮರಣದ ಸಮಯ, ಸ್ಥಾನ, ನಿಮಿತ್ತ ಎಲ್ಲವೂ ನಿಶ್ಚಿತವಿದೆ. ಕೇವಲ ಮರಣವಷ್ಟೇ ಅಲ್ಲ; ಆದರೆ ಜನ್ಮದಿಂದ ಹಿಡಿದು ಮರಣದವರೆಗಿನ ಎಲ್ಲ ಘಟನೆಗಳು, ಎಲ್ಲ ಅವಸ್ಥೆಗಳು ನಿಶ್ಚಿತವಿವೆ. ಕೇವಲ ಜೀವದವಷ್ಟೇ ಅಲ್ಲ ಒಂದೊಂದು ಪರಮಾಣುವಿನ-ಪ್ರತಿಯೊಂದು ದ್ರವ್ಯದ ಪ್ರತಿಯೊಂದು ಪರ್ಯಾಯವು ಯಾವ ಸಮಯದಲ್ಲಿ, ಯಾವ ಕ್ಷೇತ್ರದಲ್ಲಿ, ಯಾವ ನಿಮಿತ್ತದಿಂದ, ಯಾವ ವಿಧಿಯಿಂದ ಹೇಗೆ ಆಗುವುದಿದೆಯೋ ಅದು ಹಾಗೆಯೇ ಆಗುತ್ತದೆ, ಅದರಲ್ಲಿ ಯಾವ ಬದಲಾವಣೆಯೂ ಆಗುವ ಸಾಧ್ಯತೆಯೇ ಇಲ್ಲ.

ಶ್ರೀ ಕಾರ್ತಿಕೇಯಾನುಪ್ರೇಕ್ಷೆ ಗ್ರಂಥದಲ್ಲಿ ಸ್ವಾಮೀ ಕಾರ್ತಿಕೇಯ ಮುನಿರಾಜರು ಹೇಳುತ್ತಾರೆ,-

ಜಂ ಜಸ್ಸ ಜಮ್ಹಿ ದೇಸೇ ಜೇಣ ವಿಹಾಣೇಣ ಜಮ್ಮಿ ಕಾಲಮ್ಹಿ ।
ಣಾದಂ ಜಿಣಿಂದ ಣಿಯದಾ ಜಮ್ಮಂ ವಾ ಅಹವ ಮರಣಂ ವಾ ॥೩೨೧॥

ತಂ ತಸ್ಸ ತಮ್ಹಿ ದೇಸೇ ತೇಣ ವಿಹಾಣೇಣ ತಮ್ಹಿ ಕಾಲಮ್ಹಿ ।
ಕೋ ಸಕ್ಕದಿ ವಾರೇದುಂ ಇಂದೋ ವಾ ತಹ ಜಿಣಿಂದೋ ವಾ ॥೩೨೨॥

ಏವಂ ಜೋ ನಿಚ್ಚಯದೋ ಜಾಣದಿ ದವ್ವಾಣಿ ಸವ್ವಪಜ್ಜಾಏ ।
ಸೋ ಸದ್ದಿಟ್ಠಿ ಸುದ್ಧೋ ಜೋ ಸಂಕದಿ ಸೋ ಹು ಕುದ್ದಿಠ್ಠಿ ॥೩೨೩॥

ಪ್ರತಿಯೊಂದು ದ್ರವ್ಯದ ಪ್ರತಿಯೊಂದು ಪರ್ಯಾಯವು ಯಾವ ಕ್ಷೇತ್ರದಲ್ಲಿ ಯಾವ ವಿಧಿಯಿಂದ ಯಾವ ಕಾಲದಲ್ಲಿ ಹೇಗೆ ಆಗುವುದಿದೆ ಅದು ಜಿನೇಂದ್ರ ಭಗವಂತರ ಜ್ಞಾನದಲ್ಲಿ ನಿಶ್ಚಿತ ರೂಪದಿಂದ ತಿಳಿದು ಬಂದಿದೆ. ಆದರೆ ಅದನ್ನು ಬದಲಿಸುವಲ್ಲಿ ಚಕ್ರವರ್ತಿ, ಇಂದ್ರ ಅಥವಾ ಸ್ವಯಂ ಜಿನೇಂದ್ರ ಭಗವಂತರು ಕೂಡ ಸಮರ್ಥರಿರುವುದಿಲ್ಲ. ಎಂಬುದನ್ನು ಯಾವ ಜೀವನು ನಿಶ್ಚಿತವಾಗಿ ತಿಳಿಯುತ್ತಾನೆ - ನಂಬುತ್ತಾನೆ ಅವನು ಸಮ್ಯಗ್ದೃಷ್ಟಿಯಿದ್ದಾನೆ ಮತ್ತು ಇದರಲ್ಲಿ ಸಂದೇಹ ಪಡುವಂಥವನು ಅವನು ಮಿಥ್ಯಾದೃಷ್ಟಿಯಿದ್ದಾನೆ.

ಆಹಾರಕ ಸಮುದ್ಘಾತ-ಆಹಾರಕ ಋದ್ಧಿಧಾರಕರಾದ ಮುನಿರಾಜರಿಗೆ ತತ್ತ್ವಗಳ ಕುರಿತಾಗಿ ಯಾವುದಾದರೂ ಪ್ರಶ್ನೆಯು ಉತ್ಪನ್ನವಾದರೆ ಅಥವಾ ಯಾವುದಾದರೂ ಸಮಾಧಾನ ಬಯಸುತ್ತಿದ್ದರೆ ಅಥವಾ ಅವರು ಜಿನಾಲಯಗಳ ವಂದನೆ ಮಾಡ ಬಯಸುತ್ತಿದ್ದರೆ ಅವರ ಮಸ್ತಕದಿಂದ ಒಂದು ಮೊಳದ, ಸಪ್ತಧಾತು ರಹಿತವಿರುವಂಥ ಬೆಳ್ಳಗಿನ ಪುತ್ಥಳಿಯು ಎಂದರೆ ಆಹಾರಕ ಶರೀರವು ನಿರ್ಮಾಣವಾಗುತ್ತದೆ. ಮೂಲ ಶರೀರವನ್ನು ಬಿಡದೇ ಆತ್ಮನ ಪ್ರದೇಶಗಳು ಆ ಶರೀರ ಸಹಿತ ತೀರ್ಥಂಕರರ ಸಮವಸರಣದವರೆಗೆ ಹೋಗುತ್ತವೆ ಅಥವಾ ಜಿನಾಲಯದವರೆಗೆ ಹೋಗುತ್ತವೆ ಮತ್ತು ಅಂತರ್ಮುಹೂರ್ತದಲ್ಲಿ ಮರಳಿ ಬಂದು ಮೂಲ ಶರೀರದಲ್ಲಿ ಪ್ರವೇಶ ಮಾಡುತ್ತವೆ. ಈ ಕಾರ್ಯವು ಆರನೆಯಗುಣಸ್ಥಾನದಲ್ಲಿಯೇ ಆಗುತ್ತದೆ ಆದುದರಿಂದ ಆರನೆಯ ಗುಣಸ್ಥಾನದ ಅಂತರ್ಮುಹೂರ್ತ ಕಾಲಕ್ಕಿಂತಲೂ ಇದರ ಕಾಲವು ಚಿಕ್ಕದಿರುತ್ತದೆ.

ಇಲ್ಲಿ ತತ್ತ್ವಗಳ ಸಂಬಂಧದಲ್ಲಿ ಪ್ರಶ್ನೆ ಅಥವಾ ಸಂದೇಹವೆಂದು ಹೇಳಲಾಗಿರುವುದು ಅದು ಸಪ್ತತತ್ತ್ವಗಳ ಕುರಿತಾಗಿ ಇರುವ ಸಾಧ್ಯತೆಯಿಲ್ಲ, ಕರಣಾನುಯೋಗದ ಯಾವುದಾದರೂ ವಿಷಯಕ್ಕೆ ಸಂಬಂಧಿಸಿದುದಾಗಿರಬಹುದು ಏಕೆಂದರೆ ಸಪ್ತತತ್ತ್ವಗಳ ಕುರಿತಾಗಿ ಸಂದೇಹವು ಬಂದು ಬಿಟ್ಟರೆ ಸಮ್ಯಕ್ತ್ವವು ಕೂಡ ಉಳಿಯುವ ಸಾಧ್ಯತೆಯಿಲ್ಲ.

ಕೇವಲೀ ಸಮುದ್ಘಾತ - ಎಂಟು ಸಮಯಗಳಲ್ಲಿ ಸಮುದ್ಘಾತವಾಗಿ ಆತ್ಮ ಪ್ರದೇಶಗಳು ಮರಳಿ ಮೂಲ ಶರೀರದಲ್ಲಿ ಪ್ರವೇಶ ಮಾಡುತ್ತವೆ, ಆ ಪ್ರತಿಯೊಂದು ಸಮಯದ ಸಮುದ್ಘಾತದ ಹೆಸರು ಕ್ರಮದಿಂದ ಈ ಪ್ರಕಾರವಿದೆ - ೧) ದಂಡ, ೨) ಕಪಾಟ, ೩) ಪ್ರತರ, ೪) ಲೋಕಪೂರಣ, ೫) ಪ್ರತರ, ೬) ಕಪಾಟ, ೭) ದಂಡ, ೮) ಮೂಲ ಶರೀರದಲ್ಲಿ ಪ್ರವೇಶ.

ಕೇವಲೀ ಭಗವಂತರ ಆತ್ಮಪ್ರದೇಶಗಳು ಪ್ರಥಮ ಸಮಯದಲ್ಲಿ ಲೋಕಾಕಾಶದ ಮೇಲಿನ ತುದಿಯಿಂದ ಕೆಳಗಿನವರೆಗೆ ಎರಡೂ ಕಡೆಗಿನ ವಾತವಲಯವನ್ನು ಬಿಟ್ಟು ದಂಡಾಕಾರವಾಗಿ ಹರಡುತ್ತವೆ. ಎಂದರೆ ಎತ್ತರದಲ್ಲಿ ಸ್ವಲ್ಪ ಕಡಿಮೆ ಹದಿನಾಲ್ಕು ರಾಜೂ ಮತ್ತು ಅಗಲದಲ್ಲಿ ಹನ್ನೆರಡು ಅಥವಾ ಮೂವತ್ತಾರು ಅಂಗುಲ ವ್ಯಾಸವುಳ್ಳವಾಗುತ್ತವೆ. ಕೇವಲೀ ಭಗವಂತರು ಒಂದು ವೇಳೆ ಪದ್ಮಾಸನಸ್ಥರಿದ್ದರೆ ಮೂವತ್ತಾರು ಅಂಗುಲ ಮತ್ತು ಖಡ್ಗಾಸನಸ್ಥರಿದ್ದರೆ ಹನ್ನೆರಡು ಅಂಗುಲ ಪ್ರಮಾಣ ಅಗಲವಾಗುತ್ತದೆ. ಕೆಳಗಿನ ೬೦೦೦೦ ಯೋಜನ ಮತ್ತು ಮೇಲಿನ ಎರಡು ಹರದಾರಿ, ೧ ಹರದಾರಿ, ೧೫೨೫ ಧನುಷ ವಾತವಲಯವನ್ನು ಬಿಟ್ಟು ಸ್ವಲ್ಪ ಕಡಿಮೆ ಹದಿನಾಲ್ಕು ರಾಜೂವೆಂದು ಹೇಳಿದೆ, ಇದನ್ನು ದಂಡ ಸಮುದ್ಘಾತವೆಂದು ಹೇಳುತ್ತಾರೆ.

ಎರಡನೇ ಸಮಯದಲ್ಲಿ ಆತ್ಮಪ್ರದೇಶಗಳು ಲೋಕಾಕಾಶದ ಕೊನೆಯವರೆಗೆ ಹರಡುತ್ತವೆ. ಇಲ್ಲಿಯೂ ಕೂಡ ಎರಡೂ ಮಗ್ಗುಲಿನ ವಾತವಲಯಗಳನ್ನು ಬಿಟ್ಟು ಹರಡುತ್ತವೆ. ಪೂರ್ವದ ಕಡೆಗೆ ಮುಖ ಮಾಡಿದ್ದರೆ ದಕ್ಷಿಣೋತ್ತರ ಮತ್ತು ಉತ್ತರದ ಕಡೆಗೆ ಮುಖ ಮಾಡಿದ್ದರೆ ಪೂರ್ವ-ಪಶ್ಚಿಮ ಹರಡುತ್ತವೆ. ಇದನ್ನು ಕಪಾಟ ಸಮುದ್ಘಾತವೆನ್ನುತ್ತಾರೆ.

ಮೂರನೇ ಸಮಯದಲ್ಲಿ ಹಿಂಭಾಗ - ಮುಂಭಾಗಗಳಲ್ಲಿಯೂ ವಾತವಲಯದವರೆಗೆ ಹರಡುತ್ತವೆ. ಎಂದರೆ ಲೋಕಾಕಾಶದ ನಾಲ್ಕೂ ಕಡೆಗೆ ಮತ್ತು ಮೇಲೆ - ಕೆಳಗೆ ವಾತವಲಯಗಳನ್ನು ಬಿಟ್ಟು ಲೋಕಾಕಾಶದಲ್ಲಿ ಸರ್ವತ್ರ - ಎಲ್ಲ ಕಡೆಗೆ ಆತ್ಮಪ್ರದೇಶಗಳು ಹರಡುತ್ತವೆ. ಇದನ್ನು ಪ್ರತರ ಸಮುದ್ಘಾತವೆಂದು ಹೇಳುತ್ತಾರೆ.

ಮತ್ತು ನಾಲ್ಕನೇ ಸಮಯದಲ್ಲಿ ಲೋಕಾಕಾಶದಲ್ಲೆಲ್ಲ ಅರ್ಥಾತ್ ವಾತವಲಯಗಳ ಕೊನೆಯವರೆಗೆ ಆತ್ಮಪ್ರದೇಶಗಳು ಹರಡಿಕೊಳ್ಳುತ್ತವೆ, ಇದನ್ನು ಲೋಕಪೂರಣ ಸಮುದ್ಘಾತವೆಂದು ಹೇಳುತ್ತಾರೆ. ಅದರ ನಂತರ ಪ್ರದೇಶಗಳು ಸಂಕ್ಷೇಪಿತವಾಗುತ್ತ ಪ್ರತರ, ಕಪಾಟ, ದಂಡ ಮತ್ತು ಎಂಟನೆಯ ಸಮಯದಲ್ಲಿ ಆತ್ಮಪ್ರದೇಶಗಳು ಮೂಲಶರೀರ ಪ್ರಮಾಣವಾಗುತ್ತವೆ.

ಕೇವಲೀ ಸಮುದ್ಘಾತದಲ್ಲಿ - ಆ ಎಂಟು ಸಮಯಗಳಲ್ಲಿ ವೇದನೀಯ, ನಾಮ, ಗೋತ್ರ ಕರ್ಮಗಳು - ಅಸಂಖ್ಯಾತ ಗುಣಿತ ನಿರ್ಜರೆಯಾಗಿ ಅವುಗಳ ಸ್ಥಿತಿಯೂ ಆಯು ಕರ್ಮದ ಸಮಾನವಾಗಿ ಬಿಡುತ್ತದೆ.

ಯಾವಾಗ ಯಾವುದೇ ಸಮುದ್ಘಾತವಾದರೂ ಹೊರ ಬರುವ ಆತ್ಮಪ್ರದೇಶಗಳ ಜೊತೆಗೆ ತೇಜಸ ಮತ್ತು ಕಾರ್ಮಾಣ ಶರೀರದ ಪರಮಾಣುಗಳು ಕೂಡ ಹರಡುತ್ತವೆ, ಇಲ್ಲದಿದ್ದರೆ ಹೊರಗೆ ಬಂದಿರುವ ಪ್ರದೇಶಗಳನ್ನು ಕರ್ಮರಹಿತವಾಗಿ ಮುಕ್ತವಾದವೆಂದು ಮನ್ನಿಸುವ ಪ್ರಸಂಗವು ಬರುತ್ತದೆ.

ಪ್ರಶ್ನೆ :- ಕಷಾಯ ಸಮುದ್ಘಾತದಲ್ಲಿ ಯಾರ ನಿಮಿತ್ತದಿಂದ ಕಷಾಯವಾಗಿರುತ್ತದೆ ಅವರನ್ನು ಸ್ಪರ್ಶಿಸಿ ಆತ್ಮಪ್ರದೇಶಗಳು ಮರಳಿ ಬರುತ್ತವೆಯಲ್ಲವೇನು ?

ಉತ್ತರ :- ಹಾಗೇನೂ ಇಲ್ಲ, ಕಷಾಯಗಳನ್ನಂತೂ ನಾವು ಮಾಡುತ್ತಲೇ ಇರುತ್ತೇವೆ. ಎದುರಿಗೆ ಯಾವ ವ್ಯಕ್ತಿಯು ಇಲ್ಲದಿದ್ದರೂ ಮತ್ತು ಯಾವ ಕಾರಣವಿಲ್ಲದಿದ್ದರೂ ಕಷಾಯಗಳು ಆಗುತ್ತಲೇ ಇರುತ್ತವೆ.

ಪ್ರಶ್ನೆ :- ಅಷ್ಟಾಹ್ನಿಕದಲ್ಲಿ ನಂದೀಶ್ವರ ಜಿನಾಲಯಗಳ ಪೂಜೆಯನ್ನೇಕೆ ಮಾಡುತ್ತಾರೆ ? ಬೇರೆ ಯಾವುದಾದರೂ ಪೂಜೆಯನ್ನೇಕೆ ಮಾಡುವುದಿಲ್ಲ ?

ಉತ್ತರ :- ಕರಣಾನುಯೋಗದಲ್ಲಿ ಏಕೆಯೆಂಬುದರ ಉತ್ತರವಿರುವುದಿಲ್ಲ. ಇದು ಅಹೇತುವಾದರೂಪ ಆಗಮವಿದೆ. ಯಾವುದು ಇರುತ್ತದೆ ಅದನ್ನು ತಿಳಿಸಿಕೊಡಲಾಗುತ್ತದೆ. ಸೂರ್ಯನು ಪೂರ್ವ ದಿಕ್ಕಿನಿಂದಲೇ ಏಕೆ ಉದಿಸುತ್ತಾನೆ ಎಂದು ಕೇಳಿದರೆ, ಗೊತ್ತಿಲ್ಲವೆಂದು ತಾವು ಹೇಳಬಹುದಾಗಿದೆ. ಆದರೆ ನಾನು ಹೇಳುವುದೇನೆಂದರೆ ಯಾವ ದಿಕ್ಕಿನಿಂದ ಸೂರ್ಯನು ಉದಿಸಿ ಬರುತ್ತಾನೆ ಅದನ್ನೇ ನಾವು ಪೂರ್ವದಿಕ್ಕು - ಎಂದು ಹೇಳುತ್ತೇವೆ.

ಜನರು ದಶಲಕ್ಷಣ ಪರ್ವದಲ್ಲಿಯೇ ಮಂದಿರಕ್ಕೆ ಹೋಗುವ ಕಾರಣವೇನು ? ದಿನಾಲೂ ಏಕೆ ಹೋಗುವುದಿಲ್ಲ ? ದಿನಾಲೂ ಹೋಗಬೇಕು, ಆದರೆ ಹೋಗುವುದಿಲ್ಲ, ಅದರಂತೆ ದಿನನಿತ್ಯವೂ ಸ್ವಾಧ್ಯಾಯ ಮಾಡಬೇಕು. ಅನೇಕ ಜನರು ಮಾಡುತ್ತಾರೆಂಬುದೂ ನಿಜ ಆದರೆ ಯಾವಾಗ ಪರ್ವವಿರುತ್ತದೆ ಆಗ ಬಹಳಷ್ಟು ಜನರು ಏಕತ್ರಿತರಾಗುತ್ತಾರೆ. ಅಂಥ ಸನ್ನಿವೇಶಗಳಲ್ಲಿ ವಿಶೇಷ ವ್ಯಾಖ್ಯಾನಾದಿಗಳ ಏರ್ಪಾಡು ಮಾಡುತ್ತಾರೆ. ಏಕೆಂದರೆ ಅದರಿಂದ ಪ್ರೇರಣೆ ಪಡೆದು ಯಾವುದಾದರೂ ಜೀವವು ನಿತ್ಯ ದೇವದರ್ಶನ-ಸ್ವಾಧ್ಯಾಯ ಮಾಡಲು ಆರಂಭಿಸಿದರೆ ಒಳ್ಳೆಯದಿದೆ.

ಪ್ರಶ್ನೆ :- ಮ್ಲೇಚ್ಛಖಂಡ ಮತ್ತು ಅನಾರ್ಯದೇಶದಲ್ಲಿ ಯಾವ ಅಂತರವಿದೆ ?

ಉತ್ತರ :- ಎರಡೂ ಒಂದೇ ಇದೆ. ನಾವು ಆರ್ಯಖಂಡ ಮತ್ತು ಅನಾರ್ಯಖಂಡ ಅರ್ಥಾತ್ ಮ್ಲೇಚ್ಛಖಂಡವೆಂದು ಹೇಳಿಯೇ ಹೇಳುತ್ತೇವೆ.

ಪ್ರಶ್ನೆ :- ಕೇವಲಿಗಳು ಎಷ್ಟು ಪ್ರಕಾರದವರಿರುತ್ತಾರೆ ?

ಉತ್ತರ :- ನಿಶ್ಚಯದಿಂದ ಕೇವಲಿಗಳು ಒಂದೇ ಪ್ರಕಾರದವರಿರುತ್ತಾರೆ. ಆದಾಗ್ಯೂ ಅರಹಂತರೂ ಕೇವಲಿಗಳಿದ್ದಾರೆ ಮತ್ತು ಸಿದ್ಧರೂ ಕೂಡ ಕೇವಲಿಗಳಿದ್ದಾರೆ. ಅರಹಂತರಲ್ಲಿಯೂ ಸಯೋಗ ಕೇವಲಿ ಮತ್ತು ಅಯೋಗ ಕೇವಲಿಗಳಿದ್ದಾರೆ. ಸಯೋಗ ಕೇವಲಿಗಳಲ್ಲಿ ಕೆಲವು ಭೇದಗಳು ಈ ಪ್ರಕಾರವಿವೆ - ತೀರ್ಥಂಕರ ಕೇವಲಿ, ಸಾಮಾನ್ಯ ಕೇವಲಿ. ಸಾಮಾನ್ಯ ಕೇವಲಿಗಳಲ್ಲಿ ಮೂಕಕೇವಲಿ, ಅಂತಃಕೃತಕೇವಲಿ, ದಿವ್ಯಧ್ವನಿ ಹೊರಡುವಂಥ ಕೇವಲಿಗಳು ಕೂಡ ಇರುತ್ತಾರೆ.

ಇವರೆಲ್ಲರ ಅನಂತ ಚತುಷ್ಟಯಾತ್ಮಕ ಸ್ವರೂಪವು ಒಂದೇ ತರದ್ದಿರುತ್ತದೆ.

ಪ್ರಶ್ನೆ :- ದೇವಗಳ ಮರಣವಾದ ಮೇಲೆ ಅವರ ಶರೀರದ್ದೇನಾಗುತ್ತದೆ ?

ಉತ್ತರ :- ಶರೀರವು ವಿಲೀನವಾಗಿ ಹೋಗುತ್ತದೆ. ಹೇಗೆಯೆಂಬುದನ್ನು ನಾವು ಭೋಗಭೂಮಿಯ ಚರ್ಚೆಯಲ್ಲಿ ಕೂಡ ನೋಡಿದ್ದೆವು - ಎಂದರೆ ಅಲ್ಲಿ ಮೋಡಗಳಂತೆ ಶರೀರವು ವಿಲೀನವಾಗಿ ಹೋಗುತ್ತದೆ.

ಪ್ರಶ್ನೆ :- ಸ್ವಾಧ್ಯಾಯದ ಸಲುವಾಗಿ ಅಕಾಲವೆಂದು ಹೇಳುತ್ತಾರೆ. ಧವಲಾ ಪುಸ್ತಕ ಭಾಗ-೯ ರಲ್ಲಿ ಹೀಗೆ ಬಂದಿದೆ.

ಉತ್ತರ :- ತಾವು ಸ್ವಯಂ ವಿದ್ವಾಂಸರಿದ್ದೀರಿ. ಮತ್ತು ಇದರ ಉತ್ತರವನ್ನು ಕೂಡ ತಿಳಿದಿರುವಿರಿ, ಆದರೆ ಜನರ ಇಂಥ ಪ್ರಶ್ನೆಗಳ ಪ್ರಸ್ತುತೀಕರಣ ಮಾಡಿದ್ದೀರಿ. ವ್ರತಿಗಳ ಸಲುವಾಗಿ ಯಾವ ತಪಸ್ಸನ್ನು ಹೇಳಿದ್ದಾರೆ, ಅದರಲ್ಲಿ ಸ್ವಾಧ್ಯಾಯವನ್ನೂ ಕೂಡ ತಪವೆಂದು ಹೇಳಿದ್ದಾರೆ ಮತ್ತು ಧ್ಯಾನ(ಸಾಮಾಯಿಕ)ವನ್ನು ಕೂಡ ತಪವೆಂದು ಹೇಳಿದ್ದಾರೆ. ಆದರೆ ಧ್ಯಾನವು ಸ್ವಾಧ್ಯಾಯಕ್ಕಿಂತ ಉತ್ಕೃಷ್ಟ ತಪವಿದೆ. ವ್ರತಿಗಳಿಗೆ ಸಾಮಾಯಿಕ ಮತ್ತು ಧ್ಯಾನವು ನಿಯಮಪೂರ್ವಕವಾಗಿ ಇರುತ್ತದೆ. ಯಾವುದು ಸಾಮಾಯಿಕ ಮತ್ತು ಧ್ಯಾನದ ಸಮಯ (ಕಾಲ)ವಿದೆ, ಆ ಕಾಲದಲ್ಲಿ ಅವನ್ನು ಬಿಟ್ಟು ಸ್ವಾಧ್ಯಾಯದಲ್ಲಿ ತೊಡಗಿಕೊಂಡಿರುವುದರ ಉಪದೇಶವಿಲ್ಲ. ಹೇಗೆ ನಿಯಮಸಾರದಲ್ಲಿ ಪ್ರತಿಕ್ರಮಣ, ಸಾಮಾಯಿಕ, ಆಲೋಚನಗಳ ಮೇಲೆ ಘಟಿಸಲಾಗಿದೆ ಹಾಗೆಂದು ತಿಳಿಯುವುದು. ಯಾರು ಅಶುಭದಲ್ಲಿ ತೊಡಗಿಕೊಂಡಿರುತ್ತಾರೆ ಅವರ ಸಲುವಾಗಿ ಪ್ರತಿಕ್ರಮಣ ಮಾಡುವುದು ಯೋಗ್ಯವಿದೆ ಆದರೆ ಪ್ರತಿಕ್ರಮಣ ಮಾಡುವಂಥ ಶುಭೋಪಯೋಗಿ ಮುನಿರಾಜರುಗಳ ಸಲುವಾಗಿ ಪ್ರತಿಕ್ರಮಣವನ್ನು ವಿಷಕುಂಭವೆಂದು ಹೇಳಿ ಬಿಟ್ಟುಕೊಡುವ ಉಪದೇಶ ನೀಡಿದ್ದಾರೆ. ಅದೇ ಪ್ರಕಾರ ಮುನಿಗಳ ಸಲುವಾಗಿ ಧ್ಯಾನವನ್ನು ಬಿಟ್ಟು ಸ್ವಾಧ್ಯಾಯ ಮಾಡುವುದು ಯೋಗ್ಯವಿಲ್ಲ, ಆದರೆ ಇದು ಸ್ವಾಧ್ಯಾಯದ ಸಲುವಾಗಿ ಅಕಾಲವಿದೆಯೆಂದು ಹೇಳಿ ದೂರದರ್ಶನದ ಎದುರಿಗೆ ಕುಳಿತುಕೊಳ್ಳುವುದು ಅರ್ಥಾತ್ ವಿಕಥೆಯಲ್ಲಿ ಉಳಿಯುವುದು ಎಲ್ಲಿಯವರೆಗೆ ಯೋಗ್ಯವಿದೆ - ಎಂಬುದರ ನಿರ್ಣಯವನ್ನು ನಾವು ಸ್ವಯಂ ಮಾಡಬೇಕು.

ಈ ಪ್ರಕಾರ ನಾವು ಇಪ್ಪತ್ತು ಗಂಟೆಗಳ ಚರ್ಚೆಯಲ್ಲಿ ಮೂರು ಲೋಕಗಳ ರಚನೆ, ಅಲ್ಲಿಯ ವಿಶೇಷತೆಗಳನ್ನು ನೋಡಿದೆವು, ಮೂರು ಲೋಕದ ಅಕೃತ್ರಿಮ ಚೈತ್ಯಾಲಯಗಳ ಯಾತ್ರೆ ಮಾಡಿದೆವು. ಆ ಎಲ್ಲ ಜಿನಬಿಂಬಗಳಿಗೆ, ವಿದೇಹ ಕ್ಷೇತ್ರದಲ್ಲಿ ವಿದ್ಯಮಾನರಿರುವ ಅರಹಂತರಿಗೆ, ಇಪ್ಪತ್ತು ತೀರ್ಥಂಕರರಿಗೆ ಹಾಗೂ ಮುನಿಗಣಕ್ಕೆ ನಮಸ್ಕಾರ ಮಾಡಿ ಚರ್ಚೆಗೆ ವಿರಾಮ ಪಡೆಯೋಣ. ಇದಂತೂ ನಾವು ನಮ್ಮ ಜ್ಞಾನದ ನೋಟವನ್ನಷ್ಟೇ ನೋಡಿದ್ದೇವೆ. ಪಂ. ಟೋಡರಮಲ್ಲರಂತೂ 'ಮೂಲೋಕ ಸ್ಥಿತಿಯನು ತಿಳಿದು ಸ್ವಯಂ ತಾನು ತಾನಾಗುವುದೇ ನಿಜವಾದ ನಮನವಿದೆ'ಯೆಂದು ಹೇಳಿದ್ದಾರೆ. ನಾವು ಕೂಡ ನಮ್ಮ ಅಕೃತ್ರಿಮ ಚೈತನ್ಯ ಬಿಂಬವನ್ನು ನಿರುಕಿಸುತ್ತ ಉಳಿಯೋಣವೆಂಬ ಮಂಗಲ ಭಾವನೆ ಭಾವಿಸುತ್ತ ವಿರಾಮ ಕೋರುತ್ತೇನೆ.

ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ವಿರಚಿತ 'ತ್ರಿಲೋಕಸಾರ' ಗ್ರಂಥದ ಆಧಾರದಿಂದ ಬರೆಯಲಾದ ಈ ಕೃತಿಯ ಕನ್ನಡ ಅನುವಾದವು ಸೋಮವಾರ ದಿನಾಂಕ ೫-೧೦-೨೦೨೦ ರಂದು ಆನಂದಮಯ ಶುಭಭಾವನೆಯೊಂದಿಗೆ ಪೂರ್ಣವಾಯಿತೆಂದು ತಿಳಿಯಪಡಿಸುತ್ತೇನೆ.

ವಿದೇಹ ಕ್ಷೇತ್ರದಲ್ಲಿ ವಿರಾಜಮಾನರಿರುವ ಇಪ್ಪತ್ತನೆಯ ತೀರ್ಥಂಕರ
ಶ್ರೀ ಅಜಿತವೀರ್ಯ ಭಗವಂತರಿಗೆ ಜಯವಾಗಲಿ

(ಓಂ ಹ್ರೀಂ ಶ್ರೀ ಸೀಮಂಧರಾದಿ ವಿದ್ಯಮಾನವಿಂಶತಿ ತೀರ್ಥಂಕರೇಭ್ಯೋ ನಮಃ ।)

★★★★★

೨೧. ತ್ರಿಲೋಕ ಭೂಷಣ ಸಂಗತಿ

ಮನಸಿಜ ಮರ್ದನ ಮನುಕುಲ ವರ್ಧನ । ಘನಕರ್ಮಾರಣ್ಯ ನಿರ್ದಹನ ।
ಮುನಿಜನ ಹೃದಯಾಬ್ಜ ಭಾಸ್ಕರ ಪುರುಜಿನ । ಅನುಪಮ ಸುಖವೀವುದೆಮಗೆ ॥೧॥

ಐದು ಮಿಥ್ಯಾಂಧಕಾರದಿ ಬಟ್ಟೆಗಾಣದೆ । ಐದು ಸಂಸಾರಾರಣ್ಯದೊಳು ।
ಐದಿ ಕಂಗೆಟ್ಟು ಬಂದೆನು ಜಿನ ಧರ್ಮಕ್ಕೆ । ಐದಿಸೆನ್ನನು ಮೋಕ್ಷಪುರಿಗೆ ॥೨॥

ಮೂರು ತೆರದ ಕರ್ಮಗಳ ಸುಟ್ಟು ಮುಕ್ತಿಗೆ । ಸಾರಿದ ಸಿದ್ಧರ ಪದಕೆ ।
ಭೂರಿಭಕ್ತಿಯೊಳು ವಂದಿಸಿ ನಾನು ಪೇಳುವೆ । ಮೂರು ಲೋಕದ ಚೈತ್ಯಾಲಯವ ॥೩॥

ಭವನದೊಳೇಳ್ಕೋಟಿ ಎಪ್ಪತ್ತೆರಡು ಲಕ್ಷ । ಭವಹರ ಜಿನ ನಿಲಯಗಳ ।
ಅದರೊಳಿರುವ ಜಿನ ಕೃತಿಗಳ ನಮಿಸಲು । ಭವ ಭಯ ನಿರ್ನಾಶವಹುದು ॥೪॥

ಮೇರು ಐದರೊಳೆಂಭತ್ತು ಗೃಹದೊಳಿಹ । ಮಾರ ವಿಜಯ ಜಿನ ಕೃತಿಯ ।
ಸಾರಿ ಸಾಷ್ಟಾಂಗ ವೆರಗಿ ನುತಿಸುವರ ಸಂ । ಸಾರದ ಭ್ರಮಣೆ ಕೆಡುವುದು ॥೫॥

ಕುಲಗಿರಿಗಳೊಳು ಮೂವತ್ತು ಸುರತ್ನದ । ನಿಲಯದೊಳಿಹ ಜಿನ ಕೃತಿಯ ।
ಅಲಸದೆ ಮೂರು ಕಾಲದೊಳು ವಂದಿಸುವರು । ನೆಲೆಯಹ ರಕ್ಷಯ ಸುಖಕೆ ॥೬॥

ವಿಜಯಾರ್ಧ ಗಿರಿಗಳೊಳಿಪ್ಪ ನೂರೆಪ್ಪತ್ತು । ವಜ್ರಹರ ಜಿನ ನಿಲಯಗಳ ।
ಭಜಿಸುವ ಭವ್ಯ ಸಮೂಹಕ್ಕೆ ತಪ್ಪದೆ । ಅಜರಾಮರ ಸುಖವಹುದು ॥೭॥

ವಕ್ಷಾರಾಚಲದೊಳಗಿಹ ಎಂಭತ್ತು ವಸತಿಯ । ಮೋಕ್ಷನಾಯಕನ ಕೃತಿಗಳ ।
ಈಕ್ಷಿಪ ನುತಿಯಿಪ ಭವ್ಯ ಸಮೂಹಕ್ಕೆ । ಅಕ್ಷಯ ಪದಪ್ರಾಪ್ತಿಯಹುದು ॥೮॥

ಇಷ್ವಾಕಾರಾದ್ರಿ ನಾಲ್ಕರ ಮೇಲೊಪ್ಪುವ । ಐಶ್ವರ್ಯ ನಿಲಯ ದೊಳಿರ್ಪ ।
ವಿಶ್ವದರ್ಶಿಯ ಪ್ರತಿಕೃತಿಗಳ ನಮಿಸಲು । ಶಾಶ್ವತ ಸುಖವನೈದುವರು ॥೯॥

ಜಂಬೂಶಾಲ್ಮಲಿ ವೃಕ್ಷಗಳ ಪತ್ತು ನಿಲಯದ । ಶಂಬರಾರಿಯ ಪ್ರತಿಮೆಗಳ ।
ಸಂಭ್ರಮದಿಂದ ವಂದಿಸುವರು ಮುಕ್ತಿಶ್ರೀ । ರಂಭೆಗೆ ರಮಣರಾಗುವರು ॥೧೦॥

ಮಾನುಷೋತ್ತರ ಪರ್ವತಾಗ್ರದೊಳಿಹ ನಾಲ್ಕು । ನಾನಾ ರತ್ನದ ಗೃಹದೊಳಗೆ ।
ಮೀನ ಪತಾಕ ವಿಜಯ ಜಿನ ಕೃತಿಗಳ । ಆನಂದದಿಂದ ವಂದಿಸುವೆ ॥೧೧॥

ನಂದೀಶ್ವರ ದ್ವೀಪದೊಳಗೈವತ್ತೆರಡು ಶ್ರೀ । ಮಂದಿರಂಗಳು ನೆಲಸಿಹವು ।
ಚಂದದ ಪರ್ವತಂಗಳ ನಾನು ಪೇಳುವೆ । ಒಂದು ಸಂಕ್ಷೇಪ ಮಾತ್ರದೊಳು ॥೧೨॥

ಅಂಜನ ಗಿರಿಗಳೊಳಿಹ ನಾಲ್ಕು ಗೃಹದ ನಿ । ರಂಜನ ಜಿನ ಕೃತಿಗಳನು ।
ಅಂಜಲಿಯನು ಮುಗಿದೆರಗುವವರ ಪಾಪ । ಭಂಜನವಹುದು ಶೀಘ್ರದೊಳು ॥೧೩॥

ದಧಿಮುಖ ಪರ್ವತಾಗ್ರದೊಳಿಪ್ಪ ಪದಿನಾರು । ಮದನಾರಿ ನಿಲಯ ಬಿಂಬಗಳ ।
ಮುದದಿಂದ ಮೂರು ಕಾಲದೊಳು ವಂದಿಸುವರು । ಸದ ಮಲ ಸುಖವ ನೈದುವರು ॥೧೪॥

ರತಿಕರ ಗಿರಿ ಮೂವತ್ತೆರಡರ ಮೇಲಿಹ । ಅತಿಶಯ ನಿಲಯ ಬಿಂಬಗಳ ।
ನುತಿಸುವ ಭವ್ಯ ಜನರು ಸ್ವರ್ಗ ಮೋಕ್ಷಕ್ಕೆ । ಪತಿಗಳಹರು ಮುದದಿಂದ ॥ ॥೧೫॥

ಕುಂಡಲ ಪರ್ವತದೊಳು ನಾಲ್ಕು ಗೃಹ ನಿತ್ಯ ।ಮಂಡಿತ ವವರೊಳಗಿರುವ ।
ಹಿಂಡು ಕರ್ಮವಗೆಲ್ದ ಜಿನ ರಾಜ ಕೃತಿಗಳ । ಕೊಂಡಾಡಿದರೆ ಪಾಪ ಹರವು ॥ ॥೧೬॥

ವರರುಚಕಾದ್ರಿಯೊಳಿಹ ನಾಲ್ಕು ನಿಲಯದ । ಅರಹಂತರ ಕೃತಿಗಳನು ।
ಸ್ಮರಿಸಿ ಮನದಿ ಭಾವಿಪ ಭವ್ಯ ಜನರಿಗೆ । ನಿರುಪಮ ಸುಖ ತಪ್ಪದಹುದು ॥ ॥೧೭॥

ಮಧ್ಯಮ ಲೋಕದ ನಾನೂರೈವತ್ತೆಂಟು । ಶುದ್ಧ ಹೃದಯದಿಂದ ನಮಿಸಿ ।
ಊರ್ಧ್ವ ಲೋಕದ ಜ್ಯೋತಿರ್ವ್ಯಂತರ ಲೋಕದೊ । ಳಿರ್ದ್ದ ಚೈತ್ಯಗಳ ವಂದಿಸುವೆ ॥೧೮॥

ವ್ಯಂತರ ಲೋಕದ ಸಂಖ್ಯಾತ ವಸತಿಯ । ದಂತಿ ವೈರಿಯ ಪೀಠಗಳಲಿ ।
ಕಂತು ವೈರಿಯ ಜಿನ ರಾಜನ ಕೃತಿಗಳ । ಸಂತೋಷದಿಂದ ವಂದಿಸುವೆ ॥ ॥೧೯॥

ಜ್ಯೋತಿರ್ಲೋಕದ ಸಂಖ್ಯಾತ ವಸತಿಯ । ವೀತರಾಗನ ಪ್ರತಿಕೃತಿಯ ।
ಪ್ರೀತಿಯಂ ಮೂರು ಕಾಲದೊಳು ವಂದಿಸುವವರ । ಪಾತಕ ಪರಿದೋಡುವುದು ॥೨೦॥

ಮೂವತ್ತೆರಡು ಲಕ್ಷ ಸೌಧರ್ಮ ಕಲ್ಪದ । ದೇವರ ದೇವ ನಾಲಯುವ ।
ದೇವೇಂದ್ರನುತಪಾದ ಜಿನ ರಾಜ ಕೃತಿಗಳ । ಭಾವ ಶುದ್ಧಿಯೊಳು ವಂದಿಸುವೆ ॥೨೧॥

ಈಶಾನ ಕಲ್ಪದಿಪ್ಪತ್ತೆಂಟು ಲಕ್ಷ ನಿ । ವಾಸದೊಳಿರ್ದು ರಾಜಿಸುವ ।
ಸಾಸಿರ ನಾಮದೊಡೆಯ ಜಿನ ಕೃತಿಗಳ । ಅಡಿಗಳಿಗೆರಗುವೆನು ॥೨೨॥

ಮೇಲೆ ಸಾನತ್ಕುಮಾರದೊಳು ದ್ವಾದಶಲಕ್ಷ । ಆಲಯದೊಳಗೆ ರಾಜಿಸುವ ।
ಕಾಲ ವಿಜಯ ಜಿನ ರಾಜನ ಕೃತಿಗಳ । ಕಾಲತ್ರಯದೊಳು ವಂದಿಸುವೆ ॥ ॥೨೩॥

ಎಸೆವ ಮಾಹೇಂದ್ರ ಕಲ್ಪದೊಳೆಂಟು ಲಕ್ಷ ರಂ । ಜಿಸುವ ಚೈತ್ಯಾಲಯದೊಳಗೆ ।
ಮಿನುಗುವ ಶ್ರೀ ಜಿನ ಬಿಂಬಗಳ ಪಾದ । ಬಿಸರುಹ ಗಳಿಗೆರಗುವೆನು ॥ ॥೨೪॥

ಬ್ರಹ್ಮ ಯುಗಲದೊಳು ನಾಲ್ಕು ಲಕ್ಕೆಯು ಪರ । ಬ್ರಹ್ಮ ನಾಲಯ ಗಳೊಳಿರ್ಪ ।
ಬ್ರಹ್ಮ ಮಾಹೇಶ್ವರಾಚ್ಯುತ ರಾಜ ಜಿನರಿಗೆ । ಸುಮನದಿಂದ ವಂದಿಸುವೆ ॥ ॥೨೫॥

ಲಾಂತವ ಕಾಪಿಷ್ಠದೈವತ್ತು ಸಾಸಿರ । ದಂತಿ ವೈರಿಯ ಪೀಠದೊಳಗೆ ।
ಕಂತು ವಿಜಯ ಜಿನ ರಾಜನ ಕೃತಿಗಳ । ಸಂತೋಷದಿಂದ ವಂದಿಸುವೆ ॥೨೬॥

ಮತ್ತೆ ನಲ್ವತ್ತು ಸಾಸಿರ ಶುಕ್ರ ಯುಗಲದ । ಚೈತ್ಯಾಲಯ ಗಳೊಳಿರ್ಪ ।
ಚಿತ್ತದ ವಿಜಯ ಸರ್ವಜ್ಞರ ಕೃತಿಗಳ । ಉತ್ತಮಾಂಗದೊಳು ವಂದಿಸುವೆ ॥೨೭॥

ಆರು ಸಾಸಿರ ಜಿನ ವಾಸಗಳುಂಟು ಶ । ತಾರ ಸಹಸ್ರಾರಗಳಲಿ ।
ಮಾರ ವಿಜಯ ಜಿನ ರಾಜನ ಕೃತಿಗಳ । ಮೂರು ಕಾಲದೊಳು ವಂದಿಸುವೆ ॥೨೮॥

ಆನತ ಪ್ರಾಣತ ಅರಣಚ್ಯುತ ನಾಲ್ಕು । ಸ್ಥಾನದೇಳ್ನೂರು ವಸತಿಯ ।
ಭೂನುತ ತೀರ್ಥನಾಥರ ಪ್ರತಿಕೃತಿಗಳ । ಆನಂದದಿಂದ ವಂದಿಸುವೆ ॥೨೯॥

ಅಧೋಗ್ರೈವೇಯಕ ಮೂರಕ ನೂರ ಹನ್ನೊಂದು । ಸದನ ಮುಂಟವರೊಳಗಿರುವ ।
ಮದನ ವಿಜಯ ಅರಹಂತರ ಕೃತಿಗಳ । ಮುದದಿಂದ ನಾನು ವಂದಿಸುವೆ ॥೩೦॥

ಮಧ್ಯಗ್ರೈವೇಯಕ ಮೂರಕ್ಕೆ ನೂರೇಳು । ಊರ್ಧ್ವ ಗ್ರೈವೇಯಕ ತ್ರಯಕೆ ।
ಇದ್ದವು ತೊಂಭತ್ತೊಂದವರೊಳು ಜಿನ । ಸಿದ್ಧಕೃತಿಗಳ ವಂದಿಸುವೆ ॥೩೧॥

ಅನುದಿಶೆಗಳೊಳು ಒಂಭತ್ತು ನಿಲಯರತ್ನ । ಕನಕಮಯಂಗಳೊಳಿಪ್ಪ ।
ಘನಘಾತಿಕರ್ಮ ದಹನ ಜಿನ ಕೃತಿಗಳ । ಅನವರತದೊಳು ವಂದಿಸುವೆ ॥೩೨॥

ಪಂಚಾಣುತ್ತರೆಯೊಳೊಂದೊಂದಕ್ಕೆ ಒಂದೊಂದು । ಪಂಚ ನಿಲಯದೊಳಗಿಪ್ಪ ।
ಪಂಚ ಕಲ್ಯಾಣ ನಾಯಕ ಜಿನ ಕೃತಿಗಳ । ಪಂಚ ಮುಷ್ಟಿಯೊಳು ವಂದಿಸುವೆ ॥೩೩॥

ಸುರುಚಿತ ಎಂಭತ್ತು ನಾಲ್ಕು ಲಕ್ಷದ ಮೇಲೆ । ನೆರೆ ತೊಂಭತ್ತೇಳು ಸಾಸಿರದ ।
ನಿರುತ ಇಪ್ಪತ್ತ ಮೂರಾಲಯ ದೊಳಗಿಹ । ಅರುಹ ಕೃತಿಗಳ ವಂದಿಸುವೆ ॥೩೪॥

ಮೂರು ಲೋಕದ ಚೈತ್ಯವೆಂಟುಕೋಟಿಯುಮೂವ । ತ್ತಾರು ಲಕ್ಷವು ಮುದದಿಂದ ।
ನೆರೆ ತೊಂಭತ್ತೇಳು ಸಾಸಿರ ದೊಂದಧಿಕ । ನಾನೂರೆಂಭತ್ತೊಂದಕೆರಗುವೆ ॥೩೫॥

ಮೂರು ಲೋಕದ ಜಿನ ಬಿಂಬಗಳೊಂಭೈ । ನೂರಿಪ್ಪತ್ತೈದು ಕೋಟೈವತ್ ।
ಮೂರು ಲಕ್ಕೆಯು ಮಿಪ್ಪತ್ತೇಳು ಸಾಸಿರದೊಂಭೈ । ನೂರ ನಲವತ್ತೆಂಟುನುನುತಿಪೆ ॥೩೬॥

ಅಭಿಷೇಕ ಪ್ರೇಕ್ಷಣ ಕ್ರೀಡನ ಸಂಗೀತ । ವಿಭವ ನಾಟಕ ಲೋಕ ನಾದ ।
ವಿಬುಧೇಂದ್ರ ನರ್ತನ ಮಂಟಪಂಗಳು ರತ್ನ । ಪ್ರಭೆಯಿಂದ ಬೆಳಗನಾಂತಿಹವು ॥೩೭॥

ಮೂರು ರತ್ನದ ಶಾಲೆ ಸ್ತೂಪ ಮಾನಸ್ತಂಭ । ಚಾರು ಗೋಪುರ ಪ್ರಾಸಾದ ।
ಭೂರಿ ವೈಭವ ಚೈತ್ಯ ವೃಕ್ಷಕೇತನಗಳು । ಓರಂತೆ ವನ ಚತುಷ್ಟಯವು ॥೩೮॥

ಭೇರಿ ಮೃದಂಗ ಕಹಳೆ ವೇಣು ವೀಣಾದಿ । ಭೋರೆಂದುಲಿವ ವಾದ್ಯ ನಿಕರ ।
ಮರಕತ ತೋರಣ ರತ್ನದ ತೋರಣ । ಸಾರ ಮಂಗಲ ಧೂಪ ಘಟಕವು ॥೩೯॥

ಅನುಪಮ ಗಂಧ ಕುಟಿಗಳ ಮಧ್ಯದೊಳಿರ್ಪ । ಧನು ಪಂಚ ಶತ ದುತ್ತುಂಗ ।
ದಿನಕರ ಕೋಟಿ ಪ್ರಕಾಶ ಕಾಂತಿಯನುಳ್ಳ। ಜಿನ ರಾಜ ಪ್ರತಿಬಿಂಬಗಳನ್ನು ॥೪೦॥

ಮಣಿಮಯದಿಂದ ಭೂಷಿತ ಅಕೃತ್ರಿಮ । ಜಿನರಾಜ ಬಿಂಬಗಳನು ।
ಮನಸು ವಚನಕಾಯ ತ್ರಿಕರಣ ಶುದ್ಧಿಯಿಂ । ದನವರತದೊಳು ವಂದಿಸುವೆ ॥೪೧॥

ಅಷ್ಟಮಹಾ ಪ್ರಾತಿಹಾರ್ಯ ಶೋಭಿತವಾಗಿ । ಶಿಷ್ಟ ಪಲ್ಯಂಕ ಯೋಗದಲಿ ।
ದೃಷ್ಟಿಸಿ ನೋಳ್ಪಾಗ ಬಸದಿಯೊಂದೊಂದಕ್ಕೆ। ಅಷ್ಟೋತ್ತರ ಶತಬಿಂಬಗಳಿಹವು ॥೪೨॥

ಮೂರು ಲೋಕದ ಮಸ್ತಕದೊಳು ಧವಲಚ್ಛತ್ರಾ । ಕಾರದ ಶಿಲೆಯ ಮೇಲಿರ್ಪ ।
ಸಾರ ಗುಣಗಳೆಂಟ ಧರಿಸಿದ ಸಿದ್ಧರ । ಭೂರಿ ಭಕ್ತಿಯೊಳು ವಂದಿಸುವೆ ॥೪೩॥

ಮತ್ತೆ ನೂರೆಪ್ಪತ್ತು ಧರ್ಮಕ್ಷೇತ್ರದೊಳುಳ್ಳ। ಚೈತ್ಯಾಲಯ ಬಿಂಬಗಳನು ।
ಚಿತ್ತದೋಳ್ಪರ್ತಿಪ ಸೂರಿದೇಶಕ ಸಾಧು । ಮೊತ್ತಕ್ಕೆ ನಾನು ವಂದಿಸುವೆ ॥೪೪॥

ಅನುಪಮ ಗರ್ಭಾವತರಣ ಜನ್ಮೋತ್ಸವ । ಜನನುತ ಪರಿನಿಷ್ಕ್ರಮಣ ।
ಅನಘ ಕೇವಲ ಬೋಧನಿರ್ವಾಣ ಕಲ್ಯಾಣಗಳ । ವಂದಿಪೆನನವರತ ॥ ॥೪೫॥

ಚವ್ವೀಸ ಜಿನರಿಗೆ ನಿರ್ವಾಣಕಡೆಯಾಗಿ । ಸರ್ವ ಮಂಗಳವೆತ್ತು ಮೆರೆವ ।
ಪರ್ವತ ರಾಜ ಕೈಲಾಸ ಚಂಪಾಪುರ । ಗೀರ್ವಾಣನುತ ಊರ್ಜಯಂತ ॥ ॥೪೬॥

ಸಮ್ಮೇದ ಪರ್ವತ ಪಾವಾಪುರವೆಂಬ । ಕರ್ಮಕ್ಷಯದ ಭೂಮಿಗಳನು ।
ಕರ್ಮವ ಜಯಿಸಬೇಕೆಂದಾನು ಮುದದಿಂದ । ಸರ್ವ ಕಾಲದೊಳು ವಂದಿಸುವೆ ॥೪೭॥

ಅರಹಂತ ಸಿದ್ಧರಾಚಾರ್ಯರುಪಾಧ್ಯಾಯ । ವರ ಸರ್ವ ಸಾಧು ಪಂಚಕವ ।
ಪರಮ ಶ್ರೀ ಜಿನಧರ್ಮ ಶ್ರುತ ಬಿಂಬಾಲಯಗಳ । ಪಿರಿದು ಭಕ್ತಿಯೊಳು ವಂದಿಸುವೆ ॥೪೮॥

ಈ ವ್ಯವಹಾರ ಭಾವನೆಯಿಂದ ಭವ್ಯರು । ದೇವೇಂದ್ರ ಪದವ ಪಡೆಯುವರು ।
ಭಾವಿಸಿ ತಮ್ಮ ನಿಜಾತ್ಮನ ನೋಡಲು । ತಾವೇ ನಿರಂಜನರಹರು ॥ ॥೪೯॥

ಇಂತೀ ತ್ರೈಲೋಕ್ಯ ಭೂಷಣವೆಂಬ ಚರಿತೆಯ । ಸಂತೋಷದಿಂದೋದುವರು ।
ಚಿಂತಿಸುವರು ಪೇಳುವರು ಕೇಳುವರು ನಿ । ರಂತರ ಸುಖವ ಪಡೆವರು ॥ ॥೫೦॥

★★★

ಪ್ರಸ್ತುತ ಗ್ರಂಥ ಪ್ರಕಾಶನದಲ್ಲಿ ಪ್ರಾಪ್ತ ದಾನರಾಶಿ

೧)	ಹೆಸರಿನ ಲೋಭದಿಂದ ಅಲಿಪ್ತ ಗುಪ್ತದಾನ -	೨೧,೦೦೦
೨)	ಹೆಸರಿನ ಲೋಭದಿಂದ ದೂರವಿರುವ ಸರಳಜೀವಿಯಿಂದ ಪ್ರಾಪ್ತದಾನ -	೧೦,೦೦೦
೩)	ಶ್ರೀ ಮಧುಕರ ಗುಂಡಪ್ಪಾ ಗುರ್ಲಹೊಸುರ, ಬೆಳಗಾವಿ.	೬,೭೦೦
೪)	ಶ್ರೀಮತಿ ಪದ್ಮಾ ಪ್ರಶಾಂತ ಸೂಜಿ, ಹುಬ್ಬಳ್ಳಿ.	೫,೫೫೫
೫)	ಚಿ. ಸೂರಜಕುಮಾರ ಸಂಜು ಬೋರಗಾಂವೆ, ಬೆಳಗಾವಿ.	೫,೦೦೧
೬)	ಶ್ರೀ ಶ್ರೇಣಿಕ ನಿರ್ಮಲಕುಮಾರ ದಿನಕರ, ಹುಬ್ಬಳ್ಳಿ.	೫,೦೦೦
೭)	ಶ್ರೀ ಅನೂಪ ಧನ್ಯಕುಮಾರ ಕಿವಡೆ, ಬೆಂಗಳೂರು.	೫,೦೦೦
೮)	ಸೌ. ರಂಜನ ಸೂರ್ಯಕಾಂತ ಶಹಾ, ಬೆಳಗಾವಿ.	೫,೦೦೦
೯)	ಸೌ. ಪದ್ಮಾವತಿ ಸುಕುಮಾರ ಪಾಟೀಲ, ಬೆಳಗಾವಿ.	೫,೦೦೦
೧೦)	ಸೌ. ಬಬಿತಾ ಬ್ರಹ್ಮಾನಂದ ನಿಲಜಗಿ, ಬೆಳಗಾವಿ.	೫,೦೦೦
೧೧)	ಸೌ. ಸುನೀತಾ ನಿರ್ಮಲಕುಮಾರ ದಿನಕರ, ಹುಬ್ಬಳ್ಳಿ.	೫,೦೦೦
೧೨)	ಸೌ. ಜಯಶ್ರೀ ಸುಮಂತ ಕೋಟಿ, ಹುಬ್ಬಳ್ಳಿ.	೫,೦೦೦
೧೩)	ಶ್ರೀಮತಿ ಮಾಲುತಾಯಿ ಮನೋಹರ ಪಾಟೀಲ, ಬೆಳಗಾವಿ.	೫,೦೦೦
೧೪)	ಶ್ರೀಮತಿ ರೇಖಾ ಕಾಳಪ್ಪಾ ಗೋಗಿ, ಬೆಂಗಳೂರು.	೫,೦೦೦
೧೫)	ಶ್ರೀಮತಿ ಸರಳಮ್ಮಾ ಇಜಾರಿ, ದಾವಣಗೆರೆ.	೫,೦೦೦
೧೬)	ಶ್ರೀಮತಿ ಭಾರತಿ ಭರತ ತುಕೋಳ, ಬೆಂಗಳೂರು.	೫,೦೦೦
೧೭)	ಸ್ವ. ಅಜಿತ ತವನಪ್ಪಾ ಸುಪ್ಪಣ್ಣವರ ಇವರ ಸ್ಮರಣಾರ್ಥ ಸುಪ್ಪಣ್ಣವರ ಪರಿವಾರ - ಮಜಗಾವಿ, ಬೆಳಗಾವಿ.	೫,೦೦೦
೧೮)	ಸ್ವ. ಪತ್ನಿ ಲಕ್ಷೀಬಾಯಿ ಇವರ ಸ್ಮರಣಾರ್ಥ ಅಣ್ಣಾಸಾಹೇಬ ಕಲ್ಲಪ್ಪಾ ಖೋತ, ಬೆಳಗಾವಿ.	೫,೦೦೦